THE BOOK WAS DRENCHED

TEXT PROBLEM WITHIN THE BOOK ONLY

UNIVERSAL LIBRARY
OU_200640
UNIVERSAL LIBRARY

KARNATAKA

Kavya Kalanidhi Series,

NO 9.

ABHINAVA DASAKUMÂRA CHARITÉ

BY

CHOUNDA RAJA.

Volume I (chapters I to VII inclusive.)

ಚೌಂಡರಾಜ ವಿರಚಿತ

ಅಭಿನವದಶಕುಮಾರಚರಿತೆ.

ಪ್ರಥಮಸಂಪುಟಂ (ಆಶ್ವಾಸ ೧—೭)

——:o:——

ಎಸ್. ಜಿ. ನರಸಿಂಹಾಚಾರ್

ಲೈಬ್ರೇರಿಯನ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರೇರಿ,

ಕನ್ನಡ ಟ್ರಾನ್ಸ್ಲೇಟರ್ ಗೌರ್ನಮೆಂಟ್ ಎಜ್ಯುಕೇಷನ್ ಆಫೀಸ್, ಮೈಸೂರು

ಮತ್ತು

ಮಂ. ಆ. ರಾಮಾನುಜೈಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್‌ಮಿಷನ್ ಹೈಸ್ಕೂಲ್ ಮೈಸೂರು

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರ್:

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

1902.

ಪೀಠಿಕೆ.

—:ಕವಿಚರಿತ್ರೆ:—

ಈ ಗ್ರಂಥಕರ್ತನಿಗೆ ಚೌಂಡರಾಜನೆಂದು ಹೆಸರು. ಈತನು ಭಾರದ್ವಾಜಗೋತ್ರದ ಮಧುಸೂದನನೆಂಬ ಬ್ರಾಹ್ಮಣನ ಮಗನು. ಈತನ ತಾಯಿ ಮಲ್ಲವ್ವೆ; ಪತ್ನಿ, ಲಕ್ಷ್ಮಿ. "ಸರಸಕವೀಶ್ವರ" ನೆಂಬವನು ಅಣ್ಣನೆಂದು ಹೇಳಿಕೊಳ್ಳುತ್ತಾನೆ. ಅಲ್ಲದೆ, ತಾನು "ಉದ್ದಂಡ ಮನೋಹರಪ್ರಚುರಶಿಷ್ಯಂ" ಎಂದು ಹೇಳುತ್ತಾನೆ. "ವಿಟ್ಠಲಪದಾಂಭೋಜಾತಭೃಂಗಂ" "ಹರಿಪಾದಶೋಣಪಂಕರುಹಮಧುವ್ರತಂ" ಎಂದು ಹೇಳಿಕೊಳ್ಳುವುದರಿಂದ, ಈತನು ವಿಷ್ಣುಭಕ್ತನೆಂದು ವ್ಯಕ್ತವಾಗುತ್ತದೆ. ಈತನು "ಪಂಡರೀರಾಯನಭಂಗವಿಟ್ಠಲಂ" ಎಂದು ತನ್ನ ಇಷ್ಟದೈವವನ್ನು ಸ್ತುತಿಸಿರುವುದರಿಂದ, ಬಹುಶಃ ಪಂಡರಾಪುರದವನೆಂದು ತೋರುತ್ತದೆ. ಈತನಿಗೆ "ಕವಿತಾವಿಲಾಸ," "ಕವಿರಾಜಶೇಖರ" ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

ಈತನು ಯಾವ ಕಾಲದಲ್ಲಿದ್ದನೋ ನಿಶ್ಚಯಿಸಿ ಹೇಳಲಾಗುವುದಿಲ್ಲ. ಈ ಕವಿಯನ್ನು ಇತರ ಕವಿಗಳು ಯಾರೂ ಸ್ತುತಿಸಿರುವಂತೆ ಕಾಣುವುದಿಲ್ಲ. ಈ ಗ್ರಂಥದಿಂದ ಉದ್ಧೃತವಾದ ಪದ್ಯಗಳೂ ಎಲ್ಲಿಯೂ ಉದಾಹೃತವಾಗಿಲ್ಲ. ಆದರೂ ಈ ಗ್ರಂಥವು ನಾಗವರ್ಮನ "ಕಾದಂಬರಿ" ಯನ್ನೂ, ನೇಮಿಚಂದ್ರನ ವಾಸವದತ್ತಾಚ್ಛಾಯಾನುರೂಪವಾದ "ಲೀಲಾವತಿ" ಯನ್ನೂ, ನೋಡಿ ಬರೆದಿರಬಹುದೆಂಬ ಊಹೆಗೆ ಅವಕಾಶವಿರುವುದರಿಂದಲೂ, ಈತನು ಕರ್ಣಾಟಕ ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಚಂದ್ರ, ರುದ್ರಭಟ್ಟ— ಇವರುಗಳನ್ನು ಸ್ತುತಿಸಿರುವುದರಿಂದಲೂ, ಇವರುಗಳಲ್ಲಿ ಆಧುನಿಕನಾದ ರುದ್ರಭಟ್ಟನಿಗಿಂತಲೂ ಈಚೆಯವನಾಗಿರಬೇಕು.

ಈತನ ಬಂಧವು ಪೂರ್ವಕವಿಗಳ ಬಂಧವನ್ನು ಬಹುಮಟ್ಟಿಗೆ ಹೋಲುವುದರಿಂದ, ಆಕವಿಗಳ ಕಾಲಕ್ಕೆ ಸಮೀಪದಲ್ಲಿ,— ಎಂದರೆ ೧೪ನೆಯ ಶತಮಾನದಲ್ಲಿ— ಇದ್ದಿರಬಹುದು.

ಈಗ್ರಂಥವು ದಂಡಿಕವಿಯ ಸಂಸ್ಕೃತಗದ್ಯರೂಪವಾದ "ದಶಕುಮಾರಚರಿತ್ರೆ"ಯ ಕರ್ಣಾಟಕ ಚಂಪೂರೂಪವಾದ ಅನುವಾದವು. ಇದು ಲಲಿತವಾಗಿಯೂ, ಕಥಾಕೌತುಕದಿಂದ ಹೃದಯಂಗಮವಾಗಿಯೂ ಇದೆ.

ಓದುವವರ ಸೌಕರ್ಯಕ್ಕಾಗಿ ಈ ಗ್ರಂಥವನ್ನು ಎರಡು ಸಂಪುಟವಾಗಿ ಭಾಗಿಸಿ ಮುದ್ರಿಸಿದ್ದೇವೆ. ಈ ಪ್ರಥಮ ಸಂಪುಟದಲ್ಲಿ ಸಂಸ್ಕೃತ ದಶಕುಮಾರಚರಿತ್ರೆಯ ಪೂರ್ವಪೀಠಿಕೆಯ ಕಥಾಭಾಗವು ಅಡಕವಾಗಿದೆ.

ಈ ಗ್ರಂಥವನ್ನು ಎರಡು ಹಸ್ತಲಿಖಿತ ಪುಸ್ತಕಗಳ ಆಧಾರದಿಂದ ಮುದ್ರಿಸಿದ್ದೇವೆ. ಇವೆರಡೂ ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಪುಸ್ತಕಗಳು. ಇವುಗಳಲ್ಲಿ ಒಂದು ಓಲೆಯ ಪುಸ್ತಕ; ಮತ್ತೊಂದು ಕಾಗದದ ಪುಸ್ತಕ. ಇದು ಬಹಳ ಅಶುದ್ಧವಾದುದು. ಆದುದರಿಂದ ಓಲೆಯ ಪುಸ್ತಕದ ಆಧಾರದಿಂದಲೇ ಈ ಗ್ರಂಥವು ಅಚ್ಚಾಯಿತೆಂದು ಹೇಳಬೇಕು.

ಈ ಪತ್ರಿಕೆಗಳನ್ನು ನಮಗೆ ದಯವಿಟ್ಟು ಕೊಟ್ಟ ಗೌರ್ನಮೆಂಟ್ ಓರಿಯಂಟಲ್ ಕ್ಯೂರೇಟರ್, ಮ॥ ರಾ॥ ಎ. ಮಹದೇವಶಾಸ್ತ್ರಿ, ಬಿ. ಎ. ಯವರ ಉಪಕಾರವು ಚಿರಸ್ಮರಣೀಯವಾಗಿದೆ.

ವಿಷಯ ವಿವರಣಂ.

		ಪುಟಾದಿಸಂಖ್ಯೆ.
ಪ್ರಥಮಾಶ್ವಾಸಂ,	ಪೀಠಿಕಾಪ್ರಕರಣಂ	೧
ದ್ವಿತೀಯಾಶ್ವಾಸಂ,	ಮಗಧೇಶ್ವರಮಾಳವರಾಜಯುದ್ಧವರ್ಣನಂ, ದಶಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ	೧೭
ತೃತೀಯಾಶ್ವಾಸಂ,	ಮಾತಂಗಕ ರಾಜವಾಹನ ಪಾತಾಳಲೋಕವಿಜಯಂ, ಮಾತಂಗಕನಿಷ್ಟಸಿದ್ಧಿವರ್ಣನಂ	೫೦
ಚತುರ್ಥಾಶ್ವಾಸಂ,	ಪುಷ್ಪೋದ್ಭವಕಥಾವೃತ್ತಾಂತಂ	೬೩
ಪಂಚಮಾಶ್ವಾಸಂ,	ಸೋಮದತ್ತಕಥಾವೃತ್ತಾಂತಂ	೯೩
ಷಷ್ಠಾಶ್ವಾಸಂ,	ಅವಂತೀಸೌಂದರೀದರ್ಶನವರ್ಣನಂ	೧೧೪
ಸಪ್ತಮಾಶ್ವಾಸಂ,	ಭುವನಕೋಶವಿಸ್ತಾರವೃತ್ತಾಂತಂ.	೧೪೭

———:o:———

ವಿಷಯವಿವರಣಂ.

— ದ್ವಿತೀಯ ಸಂಪುಟಂ —

		ಪುಟಾದಿಸಂಖ್ಯೆ.
ಅಷ್ಟಮಾಶ್ವಾಸಂ,	ಅಪಹಾರವರ್ಮಕಥಾವೃತ್ತಾಂತಂ	೧
* ನವಮಾಶ್ವಾಸಂ	ಅರ್ಥಪಾಲಕಥಾವೃತ್ತಾಂತಂ	೬೭
ದಶಮಾಶ್ವಾಸಂ,	ಉಪಹಾರವರ್ಮಕಥಾವೃತ್ತಾಂತಂ	೯೪
ಏಕಾದಶಾಶ್ವಾಸಂ,	ಪ್ರಮತಿಕಥಾವೃತ್ತಾಂತಂ	೧೨೨
ದ್ವಾದಶಾಶ್ವಾಸಂ,	ಮಿತ್ರಗುಪ್ತಕಥಾವೃತ್ತಾಂ	೧೪೩
ತ್ರಯೋದಶಾಶ್ವಾಸಂ,	ಮಂತ್ರಗುಪ್ತನಿರೋಷ್ಠಕಥಾವೃತ್ತಾಂತಂ	೧೮೩
ಚತುರ್ದಶಾಶ್ವಾಸಂ,	ವಿಸ್ರುತಕಥಾವೃತ್ತಾಂತಂ	೧೯೬

(ಅಸಂಪೂರ್ಣಂ)

---

* ಒಂದು ಪ್ರತಿಯಲ್ಲಿ ಉಪಹಾರವರ್ಮನ ಕಥೆಯನ್ನು ನವಮಾಶ್ವಾಸವಾಗಿಯೂ, ಅರ್ಥಪಾಲನ ಕಥೆಯನ್ನು ದಶಮಾಶ್ವಾಸವಾಗಿಯೂ ಕೊಟ್ಟಿದೆ.

ಅಭಿನವದಶಕುಮಾರಚರಿತೆ.

|| ಪ್ರಥಮಾಶ್ವಾಸಂ ||

ಶ್ರೀಯನುದಾರದಿಂದುರದೊಳೊಪ್ಪಿರೆ ತಾಳ್ದು ದಶಾವತಾರಸಂ |
ಧಾಯಕದಿಂ ವಿರೋಧಿಬಲಮಂ ತವೆ ಗೆಲ್ದು ಮರುನ್ನಿಕಾಯಮಂ ||
ಸ್ವಾಯತಸತ್ವದಿಂ ಪೊರೆದ ಲೋಕಜನಸ್ತುತಿವೆತ್ತ ಪಂಡರೀ |
ಕಾಯನನಘಂಗವಿಟ್ಠಲನಲಂಪಿನೊಳೀಗೆಮಗಿಷ್ಟಸಿದ್ಧಿಯಂ || ೧

ತರಳಕಟಾಕ್ಷಮಾತ್ರಗತಿಯಿಂ ದಿವಿಜಾಸುರಮರ್ತ್ಯಪನ್ನಗೋ |
ತ್ಕರಪರಿಖೇದಮಂ ಕಳೆದು ನಾಡೆ ಕೃತಾರ್ಥರೆನಲ್ಕೆ ಮಾಳ್ಪ ಭಾ ||
ಸುರಸಿತಪದ್ಮಹಸ್ತೆ ಕಮಲಾಸನೆ ನೀರಜನೇತ್ರೆ ದುಗ್ಧಸಾ |
ಗರಸುತೆ ಸಿದ್ಧಲಕ್ಷ್ಮಿ ನಮಗೀಗೆ ವಚೋವಿಭವಪ್ರಸಿದ್ಧಿಯಂ || ೨

ಪಂಚಮುಖಪ್ರಸಿದ್ಧಿವಡೆದುಂ ಗಜವಕ್ತ್ರಸುಖಾವಹಂ ವಿಷೋ |
ದಂಚಿತಕಂಠನಾಗಿಯುಮಣಂ ಖಗರಾಜವಿಲೋಚನಂ ಯುತ ||
ಸ್ವಂಚಿತತಾರಕಾರಿಪದಮಂ ತಳೆದುಂ ಮಿಗೆ ತಾರಕಾಪ್ರಿಯ |
ವ್ಯಂಜಿತಜೂಟನಾದ ಭವನೀಗೆಮಗುದ್ಧಮತಿಪ್ರಕಾಶಮಂ || ೩

ಸಿತಗಳನಂ ದಿಗಂಬರನನಸ್ಥಿವಿಭೂಷಣನಂ ಪಿಶಾಚನಂ |
ತತಿಕೃತಸಂಗನಂ ಧವಳದೇಹನನುಗ್ರನನೊಲ್ದು ತನ್ನ ಸಂ ||
ಗತಿಯೊಳತೀವಪೂಜ್ಯನನೆ ಮಾಡಿ ಜಗದ್ಗುರುವಾದ ದೇವಿ ಪಾ |
ರ್ವತಿ ದಯೆಗೆಯ್ಗೆ ನಮ್ಮೊಳನುರಾಗದಿನೊಪ್ಪುವ ವಾಗ್ವಿಳಾಸಮಂ || ೪

ಸೀಮಾತೀತಜಗನ್ನಿಕಾಯವಿಲಸನ್ನಿರ್ಮಾಣಕಂ ಮುಗ್ಯಾಜಾ
ಸ್ಥಾನಾದಿಪ್ರಚುರಾಗಮಪ್ರಥನವಕ್ತ್ರಂ ದೇವತಾವಂದಿತಂ ||
ಹೇಮಾಂಭೋಜಸುತಂ ಮರಾಳಸುರಥಂ ವಿಖ್ಯಾತವಾಣೀಮನಃ
ಪ್ರೇಮಂ ಪದ್ಮಜನೆಮ್ಮೊಳೀಗೆ ಮುದದಿಂ ವಾಕ್ಶ್ರೀಸಮುತ್ಪತ್ತಿಯಂ|| ೫

ಜಲರುಹಪತ್ರಸುಂದರವಿಲೋಚನೆ ಸುಧ್ಯೆ ಗಜಾಳಿಯಾನೆಕುಂ ।
ತಳೆ ಮಣಿದರ್ಪಣಾಧರಕಪೋಲೆ ಸುಧಾಕಳಶೋಪಮಾಂಗಮಂ ॥
ಜುಳಕುಚಯುಗ್ಮೆ ಶಂಖಲತಿಕಾಸಮಕಂಠಭುಜಪ್ರಸಿದ್ಧೆ ರು ।
ಗ್ಮಿಳಿತಮರಾಳವಾಹಿನಿ ಸರಸ್ವತಿ ಮಾಳ್ಕೆ ಮದಿಷ್ಟಸಿದ್ಧಿಯಂ ॥ ೬

ಕರುಣಂ ಕೈಮಿಕ್ಕು ಮಾಳ್ಕೆಮ್ಮಯ ಮತಿಗ ಮಹಾತೇಜಮಂ ದಿವ್ಯಗಂಗಾ
ಧರಪುತ್ರಂ ತುಂಗಗಂಡಸ್ಥಳಗಳಿತಮದಾಂಬುಪ್ರವಾಹಪ್ರಕಾಮೋ ॥
ದ್ಗಾರಗಂಧಾಯಾತಭೃಂಗಾವಳಿಮೃದುಮಧುರಧ್ಯಾನಸಂತೋಷಿತೋದ್ಯ ।
ತ್ಕರಿವಕ್ತ್ರಂ ಸಂತತಾರಾಧಕಜನಬಹುವಿಘ್ನೌಘನಾಶಂ ಗಣೇಶಂ ॥ ೭

ಮಣಿಮಕುಟಂ ತ್ರಿಶೂಲಡಮರೂದ್ಧತಖಡ್ಗಕಪಾಲಪಾಣಿ ಭೀ ।
ಷಣವದನಂ ಕರೋಟಿವನಮಾಲೆ ಭಯಂಕರಭಾಳಲೋಚನಂ ॥
ಫಣಿಕಟಕಂ ಕರಂ ತನಗೆ ರಂಜಿಪ ಭೈರವಮೂರ್ತಿ ದೇವತಾ ।
ಗಣಪತಿಸೇವ್ಯೆ ಚಂಡಿಕೆ ಮನೋಮುದಮಂ ನಮಗೀಗೆ ಸಂತತಂ ॥ ೮

ಬಿರುದಂ ಲೋಕವಿರುದ್ಧಮಂ ಕೃತಿಯೊಳಂತೇಕಾರಣಂ ಪೇಳ್ವ ಕೊ
ಳ್ವರೊ ಸಲ್ಲಕ್ಷಣಮಾಗಿ ಪೇಳ್ದ ಕೃತಿಯಂ ಕೇಳ್ದರ್ ಮನಂಗೊಂಡಿವ ॥
ಚ್ಚರಿಯಾಯ್ತೆಂಬರಗಲ್ಕೆ ಮಾಡುವರುದಾಸೀನರ್ [1]ರಸಾಸ್ತಂ[1] ರಸೇ ।
ತರಮೊಂದಂದಿವು ತಾವೆ ಪೇೞವೆ ವೃಥಾಸಂರಂಭಮೇಗೆಯ್ವುದೋ ॥ ೯

ಕುಕವಿಯ ಕಾವ್ಯಮಂ ಸುಕವಿ ಕೇಳ್ದು ಕರಂ ತಲೆದೂಗಿ ಮೆಚ್ಚಿ ಭಾ।
ವಕನೆನಿಸಿರ್ಪುದಲ್ಲದೆ ರಸಾಮೃತಮೊಸ್ವವ ಶಬ್ದವೃತ್ತಿ ಲೌ ॥
ಕಿಕಪರಮಾರ್ಥಮೆಂಬ ಕವಿತಾಗುಣಮಂ ಬೆದಕಲ್ಕೆ ರತ್ನಮು ।
ಕ್ತಿಕೆಯನೊಜಲ್ದು ಪಾಟ್ಗಱಿಯೊಳೀಕ್ಷಿಸುವಂಗೆಣೆಯಾಗದಿರ್ಕುಮೋ ॥ ೧೦

ಅವಗುಣಕೋಟಿಯಂ ಮಱೆದು ಸದ್ಗುಣಮೊಳ್ಳಿನಿತುಳ್ಳೊಡಂತದಂ ।
ಭುವನದೊಳ್ಳೈದೆ ಬಿಚ್ಚಳಿಸಿ ನಲ್ಮೆ ಮಿಗಲ್ ತಲೆದೂಗಿ ಮೆಚ್ಚಿ ಪೆ ॥
ಚುರ್ವ ನಿರಸೂಯರಂ ವಿಗತಮತ್ಸರರಂ ಸುಚರಿತ್ರರಂ ಬುಧ ।
ಪ್ರವರರನರ್ಚಿಪೆಂ ವಿಮಲವಾಕ್ಯಸುಮಾವಳಿಯಿಂದನಾವಗಂ ॥ ೧೧

---

1 ರಸೋಕ್ತಂ. ಕ. ಗ.

ಪೊಗೞ್ವೆಂ* ಲಕ್ಷಣಲಕ್ಷಿತಾದ್ಭುತವಚೋನಿಷ್ಯಂದನಂ ಪಂಪನಂ ।
ಜಗತೀಪ್ರೀತಿಕರಪ್ರಸಿದ್ಧಕವಿತಾಸಂಪನ್ನನಂ [1]ಪೊನ್ನನಂ[1] ॥
ಸುಗಮಾರ್ಥಸ್ಫುಟಶಬ್ದಸುಂದರಕಿರದ್ವಾಕ್ಸಾಂದ್ರನಂ ಚಂದ್ರನಂ ।
ಭಗವದ್ವಿಷ್ಣುಕಥಾವತಾರರಚಿತಶ್ರೀಭದ್ರನಂ ರುದ್ರನಂ ॥ ೧೨

ದ್ವಿಜವಂಶಾಂಬುಧಿಪೂರ್ಣಚಂದ್ರನಸಮುಖ್ಯಾತಂ ಭರದ್ವಾಜಗೋ ।
ತ್ರಜನುದ್ದಂಡಮನೋಹರಪ್ರಚುರಶಿಷ್ಯಂ ದಾನಕಲ್ಪದ್ರುಮಂ ॥
ತ್ರಿಜಗನ್ಮಂಗಳಮೂರ್ತಿ ವಿಟ್ಠಲಪದಾಂಭೋಜಾತಭೃಂಗಂ ಗುಣ ।
ವ್ರಜಯುಕ್ತಂ ಕವಿತಾವಿಳಾಸನೆ[2]ನಿಪಂ[2] ಚೌಂಡಂ ದಯಾಮಂಡನಂ ॥ ೧೩

ವರಮಧುಸೂದನಂ ಜನಕನೊಪ್ಪುವ ಮಲ್ಲವೆ ಮಾತೆಯಗ್ರಜಂ ।
ಸರಸಕವೀಶ್ವರಂ ತನಗೆ ವಲ್ಲಭೆ ಲಕ್ಷ್ಮಿಯೆನಿಪ್ಪ ಪೆಂಪು ಬಿ ॥
ತ್ತರಿಸುಪ್ರೌಢಗ್ಗಳಂ ನಿಜಮೆನಲ್ ಮುಜವಂ ಪರಿಪಾವಶೋಣಪಂ ।
ಕರುಹಮಧುವ್ರತಂ ಸುಕವಿ ಚೌಂಡರಸಂ ಕವಿರಾಜಶೇಖರಂ ॥ ೧೪

ದೊರಕಿದ ಶಬ್ದದಿಂ ನೆಗೞ್ದ* ಕಾವ್ಯಮನೆನ್ನಱಿವಂತು ಪೇೞ್ದೆನಾ ।
ದರಿಸಿ ಸಮಂತು ತಿರ್ದುಗೆ ಬುಧರ್ ನವನರ್ಥಕಿ ಗೇಹಮಾತ್ರಮಂ ॥
ನಿರವಿಸಲಂತದರ್ಕೆ ಪರಿಶೋಭೆಯುಮಗ್ಗಳಮಪ್ಪಿನಂ ನಿರಂ ।
ತರಮೆಸಗಲ್ಕೆ ಕರ್ತೃ ಪರಿಭಾವಿಸೆ ಕೇಳ್ಯಜಮಾನನಲ್ಲವೇ ॥ ೧೫

ಸಕಲಾಂತರ್ಯಾಮಿ ಜೀವಪ್ರಕರವಿವಿಧಚೈತನ್ಯರೂಪಂ ಜಗದ್ವ್ಯಾ ।
ಪಕಭಾವಂ ವಿಷ್ಣುವೆಂದಾಗಮತತಿ ಸತತಂ ಸಾರ್ವ ಸಂಬಂಧದಿಂ ಕಾ ॥
ತುಕದಿಂದಾವಾವುದಂ ಬಣ್ಣಿಸಿದೊಡಮು ಹರಿಸ್ತೋತ್ರಮೆಂದೀಗಳೀಚಿ ।
ತ್ರಕಥಾವಿಸ್ತಾರಮಂ ಬಣ್ಣಿಸಲೊಡರಿಸಿದೆಂ ಸತ್ಕವಿಶ್ರೇಣಿ ಮೆಚ್ಚಲ್ ॥ ೧೬

ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತಚಾರಿತ್ರಮಂ ।
ಪದೆಪಿಂ ಸಂಸ್ಕೃತಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಸ ॥
ಮ್ಮದಮಪ್ಪಂತವನಾಂ ಪ್ರಸಿದ್ಧಿಯುವತಾರಾಕಾರಮಂ ತಾಳ್ದಿ ಸ ।
ದ್ವಿದಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇೞ್ವೆಂ ಸುಕರ್ಣಾಟದಿಂ ॥

1. ರನ್ನನಂ. ಕ. 2. ವೞಂ. ಗ.

ಅದೆಂತೆನೆ:—

ವನಮಾಲಾಪರಿಶೋಭೆಯಿಂದನಿಮಿಷೋದ್ವೃತ್ತಿಪ್ರೀತಿಯಿಂ ಶಂಖಚ |
ಕ್ರನವೀನೋಜ್ಜ್ವಲದಿಂದನಂತಮಹಿಮಾಧಾರತ್ವದಿಂ ಶ್ರೀನಿವೇ ||
ಶನದಿಂ ಗೋತ್ರಸುಖಾಧಿವಾಸದೊದವಿಂ ಮುಕ್ತಾದಿಜನ್ಮಪ್ರಕೀ |
ರ್ಣನದಿಂ ವಾರಿಧಿ ವಾರಿಜಾಕ್ಷನವೊಲೇಂ ಚೆಲ್ವಾಯ್ತೊ ಭೂಭಾಗದೊಳ್ ||

ಆವಾರ್ಧಿಮೇಖಲೆಯಾದ ಭೂಮಧ್ಯದಲ್ಲಿ

ವಿವಿಧೋದ್ವೃತ್ತಸುರಗಂಗೆ ಪೂರ್ಣಸಲಿಲಂ ಚಂದ್ರಾರ್ಕಬಿಂಬಂ ತಳಿರ್ |
ನವತಾರಾನಿಕರಂ ಸಿತಾಕ್ಷತಚಯಂ ಸಪ್ತಾಬ್ಧಿ ಸುತ್ತಿರ್ಪ ಸೂ ||
ತ್ರವಿಶೇಷಂ ತನಗಾಗೆ ಲೋಕಜನನಪ್ರಾರಂಭದೊಳ್ ಪದ್ಮಸಂ |
ಭವನೊಲ್ದಿರ್ಚಿಪ ಹೇಮಕುಂಭಮೆನಿಸಲ್ ಸಾಲ್ದತ್ತು ಹೇಮಾಚಲಂ ||

ಆಮೇರುಗಿರಿಯ ದಕ್ಷಿಣದಿಗ್ಭಾಗದೊಳ್

ಕ್ಷೋಣಿಗೆ ವಿಶೇಷಪುಣ್ಯ |
ಶ್ರೇಣಿಯೆನಲ್ ಗ್ರಾಮನಗರಖರ್ವಡಖೇಟ ||
ದ್ರೋಣಾಮುಖಂಗಳಿಂದ |
ಕ್ಷೇಣಮೆನಲ್ ಮೆಱೆವುದಲ್ತೆ ಜಂಬೂದ್ವೀಪಂ || ೨೦

ಆಜಂಬೂದ್ವೀಪದಲ್ಲಿ,

ಸಕಲಾವನಿಗಿದೆ ಮಣಿಮಯ |
ಮುಕುರಮೆನಲ್ ಸಾನುರಾಗದಿಂ ಸುಕ್ಷೇತ್ರ ||
ಪ್ರಕರತೆಯಿಂದೆಸೆದಿರ್ಕುಂ |
ಸುಕವಿಸ್ತುತಮಗಧದೇಶಮಬ್ಧಿನಿವಾಸಂ || ೨೧

ಸತತಂ ಮಾಂಗಲ್ಯದಿಂದಚ್ಯುತಸುಖಭರದಿಂ ಸಂತತಂ ಪದ್ಮಪೀಠಾ |
ಸ್ಥಿತದಿಂ ಸೌಂದರ್ಯದಿಂ ಕೋಮಲಮೃದುತರದಿಂ ವಾರ್ಧಿಸಂಭೂತಸೀಮಾ
ಯುತದಿಂ ಸದ್ವೃಕ್ಷದಿವ್ಯಾಮೃತರಸಸಹಜಾತತ್ವದಿಂ ಕಾಮಜನ್ಮ |
ಸ್ಥಿತಿಯಿಂ ಚೆಲ್ವಾದ ದೇಶಂ ಪರಿಕಿಪೊಡೆ ಮಹಾಲಕ್ಷ್ಮಿಯಂತೊಪ್ಪಿ
ತೋರ್ಕುಂ || ೨೨

ಮತ್ತಮದುವೃತ್ತಭಂಗಂ ಕವಿತೆಯೊಳ್, ಕಾಯ್ದುರಿಸೆಂಬುದು ವೃಕ್ಷದೊಳ್, ಪೀಡೆಯೆಂಬುದು ಕುಕ್ಷಿಯೊಳ್, ಬಯ್ವುದು ನಿಕ್ಷೇಪಭಾಷೆಯೊಳ್, ಕಟ್ಟೆಂಬುದು ರಸಶೇಷದೊಳ್, ರಾಗದ್ವೇಷಂ ವಿರಹಿಗಳೊಳ್, ಖಲಪ್ರವರ್ತನಂ ತಿಲ್ಲಿಗರೊಳ್, ತಮಸ್ಸಂಕುಳಂ ಬಹುಳಪಕ್ಷದೊಳ್, ಮಿತ್ರದ್ವೇಷಂ ಗೂಗೆಗಳೊಳ್, ವಿಶ್ವಾಸಭಂಗಂ ವಿಟಿಗಳೊಳ್, ನಿಂದಿಸುವುದು ಯುದ್ಧದೊಳ್, ಭೋಗಭಂಗಂ ಹಾವಡಿಗರೊಳ್, ಹಿರಣ್ಯಾಕ್ಷವಧಂ ವರಾಹಾವತಾರದೊಳ್, ಆಕ್ಷೇಪಮಲಂಕಾರದೊಳ್, ಅರ್ಥವಾದಂ ಸ್ತೋತ್ರದೊಳಲ್ಲದೆ ತನ್ನೊಳಿಲ್ಲೆನಿಸಿರ್ಪುದು. ಅಂತುಮಲ್ಲದೆಯುಂ

ರತಿಲೀಲಾಭವನಂ ವನಂ ಸತತಸೌಖ್ಯೋಜ್ಜೀವನಂ ಜೀವನಂ ।
ಶ್ರುತಿಚಿನ್ತಾಮತಿಭಾಜನಂ ಜನಮನಂಗಾಸ್ತ್ರಕುಲಂ ಸ್ತ್ರೀಕುಲಂ ॥
ನುತಸಸ್ಯಾದಿಸಮುದ್ಗತಂ ಧರಣಿ ಲಕ್ಷ್ಮೀಬಂಧುರಂ ಬಂಧುರಂ ।
ಜಿತರಾಜನ್ಯಕಮೆಂದೊಡಾವಿಷಯದೊಳ್ಪಂ ಬಣ್ಣಿಸಲ್ ಬರ್ಕುಮೇ ॥ ೧೩

ಅಂತಾಮಗಧದೇಶಕ್ಕೆ ಭೂಷಣಮೆನಿಸಿ,

ನಯನಾನಂದಕರಂ ಸುಖ ।
ಚಯಸಹಿತಂ ನಿಖಿಲದೇವತಾಯತನಸುಖ ॥
ಪ್ರಯುತಂ ಸಜ್ಜನಚಿತ್ತ ।
ಪ್ರಿಯಮೆನಲೆಸೆದಿರ್ಪುದಧಿಕಮೆನೆ ಕುಸುಮಪುರಂ ॥ ೧೪

ಪ್ರಕಟಂಬೆತ್ತಿರ್ಪ ಪೊಂಗೋಂಟೆಯ ತೆನೆಯೆಸಳ್ಗಳ್ ಕೇಸರಂ ಸೌಧಶಾಲಾ
ನಿಕರಂ ರಾಜಾಲಯಂ ಕರ್ಣಿಕೆ ವಿವಿಧಪುರಂಧ್ರೀಲಸತ್ಸೌಕುಮಾರ್ಯಂ ॥
ಮಕರಂದಂ ಮಂದಿವೃಂದಂ ಮಧುಕರಪಟಲಂ ತಾನೆನಲ್ಕೊಪ್ಪುಗುಂ ಸಾ ।
ರ್ಥಕನಾಮಂ ರಂಜಿಸಲ್ ತತ್ಕುಸುಮಪುರಿ ಜಗತ್ಖ್ಯಾತಿಯಿಂದಂ ನಿತಾಂತಂ

ತಳಿರ ತೊಡಂಬೆಯುಂ ತಳೆದ ಮಾಮರನಾಸುರನಳ್ಗೊಂಬಿನೊಳ್ ।
ಕಳರವದಿಂ ಕುಕಿಲ್ವ ಮಱಿಗೋಗಿಲೆ ಪೂಗುಡಿಬಾರದಿಂ ಪ್ರೇರ ॥
ಳ್ವೆಳಲತೆಯಾಲತಾವಳಿಯಿಡುಂಕುಳಿಯೊಳಾವಗಮಾಡಿ ಪಾಡುತಿ ।
ಪಳಿಗಳ ಪಿಂಡು ರಂಜಿಸುವಿನಂ ಮೆಱೆಗುಂ ಪುರದಾಬಹಿರ್ವನಂ ॥ ೧೬

ಅವಲ್ಲದೆಯುಂ,

ದೆಸೆಗೆ ಕವಿಲ್ತು ಗಂಟಲಿದು ನುಣ್ಣಿಸಿಱಿಂ ಪೊರೆಯೇಱಿ ಕೊಬ್ಬಿರ್ದಯು ।
ಬ್ಬಿಸಿ ಪೊಡೆದುಂಬಿ ಪೊಲ್ದೆನೆಗಳುರ್ಬೆ ಕರಂ ತಲೆವಾಗಿ ಬಿಣ್ಪಿನಿಂ ॥
ದೆಸೆವುವು ನೀಳ್ದ ತಮ್ಮ ಮುಖದೊಪ್ಪಮನೊಪ್ಪಿರೆ ನೀರ್ಗಳೊಳ್ ನಿರೀ ।
ಕ್ಷಿಸುವವೊಲಾವಗಂ ಕಣಿಶಸಂತತಿಗಳ್ ಕಳಮಪ್ರದೇಶದೊಳ್ ॥ ೨೭

ಕುಂದದ ಚಂದ್ರಲೇಖೆ ನಸುಗಂದದೆ ರಂಜಿಸೆ ಪುಷ್ಪಮಾಲಿಕಂ ।
ದೊಂದದ ಸೋಮಶಾಖೆ ತವಿಲಾಗದ ಕೆಂಗೊನೆವಾಳೆ ಸರ್ವಸಾ ॥
ಧ್ಯಂ ದಲೆನಿಪ್ಪ ಕೇಸರಿ ನಿರಂತರವೊಪ್ಪುವ ದಮ್ಮಗುತ್ತಿಯಿಂ ॥
ಬಂದದನೇಕನಾಮದೆಸೆಗುಂ ಮೃದುಬಂಧುರಗಂಧಶಾಲಿಗಳ್ ॥ ೨೮

ಸೆಳೆನಡು ಬಳ್ಕೆ ತೋಳ್ಗಳಿಮದಲ ನುಣ್ಬೊಗರೊಪ್ಪೆ ಘನಸ್ತನಂಗಳ ।
ನ್ವಳಸೆ ನಿಮಿರ್ದ್ದ ವೇಣಿ ಕದಪಂ ಪುಗೆ ಮುಂದೆಡವಜ್ಜೆ ಮಿಾಱೆ ಕೈ ॥
ಗಳ ಬಳೆ ಮೆಲ್ಪಿನಿಂದುಲಿಯೆ ಸಂಭ್ರಮದಿಂ ನಸುಬಾಗಿ ಬೀಸುಗ ।
ಲ್ಗಳನಿಡುತಿರ್ಪ ಪಾಮರಿಯರೊಪ್ಪುವರಾ ಕಳಮಪ್ರದೇಶದೊಳ್ ॥ ೨೯

ಕಡುಚೆಲ್ವಿಂ ಮೆಱೆದಿರ್ಪ ಶಾಲಿವನಮಂ ಪಾಯಲ್ಕೆ ಕೀರಂ ಮೃಗಂ ।
ಗಡಣಂಗೊಂಡು ಬರಲ್ಕೆ ಸೋವ ಬಗೆಯಿಂ ಮಾಣ್ದಿರ್ಪರೇಕೆಂದೆನಲ್ ॥
ನುಡಿಯಂ ನೋಟಮನೆಮ್ಮಳೊಲ್ದು ಪಡೆಪಿಂ ಮಂ ಕಲ್ತಲಂಪಿಂಗೆ ಬಂ ॥
ದೊಡೆ ಬಿರ್ದೂಟಮಿದೆಂಬ ನೇಹದೊಲವಿಂ ತತ್ಪಾಮರೀಸಂಕುಳಂ ॥ ೩೦

ಜಡಿದು ಗಿಳಿಸೋವ ಪರಯುವ ।
ಮುಡದಿಯರ ಶರೀರವರ್ಣರೂಪಂ ಗಂಧಂ ॥
ನಡುವಿನ ಸಣ್ಣಂ ತಮ್ಮೊಳ ।
ಮೆಡೆಗೊಂಡವೊಲಿರ್ಪ ನೆಲ್ಗಳೇನೊಪ್ಪಿದುವೋ ॥ ೩೧

ಅಲ್ಲಿಂ ಬೞಿಯಂ,

ಇದಪೂರ್ವಂ ಪುರರಿಪ್ರುವೆಂ ।
ಬುದನೀಶನೊಳೀಯಿಂದಧಿಕಸಂಪದವಂ ಮಾ ॥
ಪ್ಪಿದೆನುತ್ತೆ ಗಂಗೆ ಪುರವಂ ।
ಪ್ರದಕ್ಷಿಣಂಗೆಯ್ಯುತಿರ್ಪಳೆನಲಗೞೆಸೆಗುಂ ॥ ೩೨

ಪುರದೊಳ್ ಭೋಗಿಗಳನಿತುಂ ।
ನೆರೆವಿರ್ದಪರಾನವಗೆ ರಕ್ಷಕನಪ್ಪಂ ॥
ತೆರಳದೆನುತ್ತುಂ ಶೇಷಂ ।
ಪರಿವೇಷ್ಟಿಸಿದಂತೆ ರಂಜಿಕುಂ ಪ್ರಾಕಾರಂ ॥ ೩೩

ಗಗನೇಚರಿಯರ್ ಶ್ರಮವುಂ ।
ಮಿಗೆ ನೂಂಕಲ್ ನಿಲ್ವುದರ್ಕೆ ವೆಮ್ಮೆಪ್ಪುಯು ತಾ ॥
ಪುಗೆಳೆಂದು ಕುಱುಪ್ರಗೊಂಡಾ ।
ಬಗೆಗಿಟ್ಟಂತೆಸೆವುವಿದಱ ಕೋಂಟೆಯು ತೆನೆಗಳ್ ॥ ೩೪

ಪಗೆಗಳ ಶೃಂಗಲವುಂ ಡೊಣೆ ।
ಗೆಗೆತ್ತಿತತ್ಪುರವರೇಶನಾನಂದಲತಾ ॥
ಳಿಗೆಗಳ ಪಚರ್ಪುದೆಂತುಂ ।
ಬಗೆಗೆನಿತುಂ ಬಿಂಕದಿಂದೆ ನಿಡುಪೆಂಕಣಿಗಳ್ ॥ (?) ೩೫

ಅಂತೆಸೆವ ಪುರದೊಳ್

ಬಿಟ್ಟವನೇಱ ನೀರೊಳಗೆ ಪೊಕ್ಕು ತೃಣಂಬಿಡಿದೆಂಜಲಾಗಿ ನಾ ।
ಣ್ಗೆಟ್ಟನಿತಲ್ಲದೀಪ್ರಚತುಷ್ಪಥಮಧ್ಯದ ರತ್ನಶಾಲೆಯೊಳ್ ।
ಕಟ್ಟಿಯುದೇಕೆ ತೂಗುವರೊ ಮಾಣಿಕವಂ ಪೊಸಮುತ್ತನೊಳ್ಪ ನೇ ।
ರ್ಪಟ್ಟಿರುನೀಲಮುಂ ತೊಳಪ ಪಚ್ಚೆಗಳಂ ಮಣಿಗಾಱರಾವಗಂ ॥ ೩೬

ಅಂತು ನಿಂದೆಯುನಾಂತು ಸ್ತುತಿವೆತ್ತ ಮಣಿಗಾಱರ ಪಸರದಿಂ ಮುಂದೆ

ಸಲ್ಲಲಿತರಾಜಹಂಸ ।
ಗಲ್ಲದೆ ಸುತ್ತಲ್ಕ ಮರಿವೆನಿಪ್ಪಂಬರಮುಂ ॥
ನಿಲ್ಲೆಂದು ನಿಲಿಸಿ ಪುರದವ ।
ರೆಲ್ಲರ್ ಕೊಳಲೆಸೆವುವಂಬರಂಗಳ ಪಸರಂ ॥ ೩೭

ಅತಿಶಯಮೆನಲುತ್ಪತ್ತಿ ।
ಸ್ಥಿತಿಲಯಮುಂ ತೋಱೆವೀಗಳೆಂಬಂತೆ ಜನ ॥
ಪ್ರತಿಬಿಂಬಮನಾಂತದಧಿಕ ।
ದ್ಯುತಿಯಿಂದೊಪ್ಪಿದುದು ಕಂಚಗಾಱರ ಪಸರಂ ॥ ೩೮

ಬಿದಿಯುತ್ಪತ್ತಿಯ ಬೀಜಮುಂ ಹರಿ ಜಗತ್ಸಂಪಾಲನಾರಕ್ತನುಂ ।
ಮದನಾರತಿ ದಿಗಂಬರತ್ವಮುಮಾಯಲ್ ಸವ್ಯಸ್ತ್ರಮುಂ ಭಾಸ್ಕರಂ ‖
ಮೃದುಶೈತ್ಯೌಷಧಿಯುಂ ಶಶಾಂಕನೊಲವಿಂದಂ ರಾಜಯಕ್ಷ್ಮಕ್ಕೆ ಪೊ ।
ಱಿವ ಮರ್ದಂ ಪದೆವೃಜ್ಞಗಂವಳೆವರಂತಾಸೆಟ್ಟಿಗುತ್ತರ್ಕಳೊಳ್ ‖ ೩೯

ಅಲ್ಲಿಂ ಮುಂದೆ

ಪೂಗೊಳಲೆಂದು ಬಂದ ವಿಟಸಂತತಿಯುಳ್ಳೈ*ದೆರ್ ಡಿಳ್ಳನಪ್ಪಿನಂ ।
ಪೂಗಣೆಯುರ್ಕೆ ಮೂರ್ಛೆಗೊಳಗಾಗಲೊಡಂ ಕಡುಪಿಂ ಸಹಾಯಿಗಳ್ ‖
ಪೂಗೊಳದತ್ತಲುಯ್ದು ಮದನಾಗ್ನಿಯನಾಱಿಸುವಂತು ಮಾಡಿದಾ ।
ಪೂಗಳನೊಪ್ಪೆ ಕಟ್ಟಿ ಪೊಸಮಾಲೆಯನೆತ್ತುವ ಮಾಲಗಾರ್ತಿಯರ್ ‖ ೪೦

ತರತರದಿಂದೆ ಬಾಹುಲತೆ ಪುಷ್ಪಿತಪಾದಪೊ ಕಾಮಮಾರ್ಗಣಂ ।
ತರುಣಿಯರಿಂದೆ ಕಟ್ಟುವಡೆದಿರ್ದುವೊ ಮೋಹನ ನಂಸುಯ್ಗೆ ಸೋಲ್ತು ಬಂ
ದುರುತರಭೃಂಗಮಾಲಿಕೆಯೊ ಪೇೞಿದೆನೆ ದಿವ್ಯಸುಗಂಧದಿಂ ಮನೋ ।
ಹರಮೆನಿಸಿರ್ಪ ಪೊಚ್ಚಪೊಸಮಾಲೆಯನೆತ್ತುವರತ್ತ ಬಾಲೆಯರ್ ‖ ೪೧

ಸಾರಸುಗಂಧದಿಂ ಬೆಸೆವ ಪೂವಿನ ಮಾಲೆಯನೀವೆನಿತ್ತ ಬಾ ।
ಬಾರೆಲೆ ಧೂರ್ತರೆಯೆಂಬವರ ತೋಳ್ ಮೊದಲ್ಗಳನುನ್ನತಸ್ತನಾ ‖
ಕಾರಮನೆಯ್ದೆ ಕಂಡು ನಡೆಗೆಟ್ಟಿರೆ ದೂರದೊಳಿರ್ಪರೇಕೆನಲ್ !
ದೂರಿತರಲ್ತೆ ಪುಷ್ಪವತಿಯರ್ ಪರಿಭಾವಿಸೆ ನೀತಿನಂತರೊಳ್ ‖ ೪೨

ಎಂಬ ವಿಟರ ಚತುರೋಕ್ತಿ ಪರಿವೃತಮಾದ ಮಾಲೆಗಾಱವಸರದಿಂ ಮುಂದೆ

ರತಿರೂಪಾಂಜಧ್ವಜಂ ಮನ್ಮಥನಿಚಿತಪತಾಕಾಳಿ ಸೌಭಾಗ್ಯಘಂಟಾ ।
ಯುತಬದ್ಧದ್ವಾರಮಂಗೋದ್ಭವಚರಿತಕಥಾಲೇಖ್ಯಸದ್ಭಿತ್ತಿ ಪಾರಾ ‖
ವತಕೀರಶ್ರೇಣಿವಿಭ್ರಾಜಿತಮಣಿಮಯಕೂಟಂ...ವಿಟಾ ।
ನ್ವಿತಶೋಭಾವೇದಿಕಾವಿಸ್ಮಯಮೆನಿಸುವುವಲ್ಲಲ್ಲಿ ವೇಶ್ಯಾಲಯಂಗಳ್ ‖ ೪೩

ಹದಿಱಿನ ಗೊಟ್ಟಿ ಪಂಗಿಸುವ ನಾಣ್ಣುಡಿ ಱಚ್ಚೆಯ ಮಾತು ಕೇಳ್ಲನೋ ।
ಡವ ಬೆಲೆ ಟಕ್ಕಿನೊಲ್ಮೆ ಹೆರೆಹಚ್ಚದ ಮೋಹನಮಸತ್ಯದಾಣೆ ನಿ ‖
ಲ್ಲವ ಪುಸಿತೋಱಯಲ್ಲದುಪತಾಪನಮೆನಿಪ್ಪ ಸಮಸ್ತವೈಶಿಕಂ ।
ಸುದತಿಯರಾದವೊಲ್ ಸುಱಿವದಾಪುರದೊಳ್ ಗಣಿಕಾಕದಂಬಕಂ ‖ ೪೪

ಆವೇಶ್ಯಾವಾಟಕ್ಕೆ ಸಮೀಪವಾಗಿ

ಸತತಂ ಸಂಗೀತಚಿತ್ರಂ ಸಕಲವಿವಿಧವಾದ್ಯೋತ್ಸವಂ ನೃತ್ಯವಿಭ್ರಾ ।
ಜಿತಮುದ್ಯದ್ಧೂಪಧೂಮಕ್ಷುಭಿತಮಖಿಲಪೌರಾಣಮಂತ್ರಾನುವಾದಂ ॥
ಚಿತರಮ್ಯಾಷ್ಟಾಷ್ಟಪದಂ ಮಂಜುಳಮಣಿಕಳಶಂ ಪೊನ್ನವೆತ್ತಿರ್ಪ ದೇವಾ ।
ಯತನಂ ಕಣ್ಗೊಪ್ಪುಗುಂ ತತ್ಪುರವರದೊಳನೂನಪ್ರಸಾದಂಗಳಿಂದಂ ॥೨೫॥

ಅನಂತರಂ

ವಿಮಲಪ್ರಾಸಾದಭಿತ್ತಿಪ್ರಕಟಘನಸುಧಾಕಾಂತಿಗಳ್ ಚಂದ್ರಿಕಾವಿ ।
ಭ್ರಮಮಂಬಂತೊಪ್ಪೆ ನಾನಾಮಣಿಮಯಕಳಶಶ್ರೇಣಿಗಳ್ ತಾರಕಾಚಿ ॥
ತ್ರಮನೆತ್ತಂ ಬೀಱೆ ಭಾಸ್ವತ್ಕ್ರಮುಕವನನೀಲವಿಂ ಪೆರ್ಚೆ ಸುತ್ತಾವಗಂ ಸಂ
ಭ್ರಮದಿಂಚೆಲ್ವಾದರಾಜಾಲಯಮಭಿನವಪೂರ್ವಾದ್ರಿಯಂತೊಪ್ಪಿತೋರ್ಕುಂ

ಅಂತು ಪೊಗಳ್ಕೆಗಳುಂಬವಾಗಿರೆ,

ತತ್ಪುರಪತಿ ನೃಪಮೌಳಿ ।
ಸತ್ಪಾದಪಯೋಜನಖಿಳಜನತಾನಿಜಸಂ ॥
ಪತ್ಪೂರಕನಭಿಜನಹಿತ ।
ಸತ್ಪದನುಱೆ ರಾಜಹಂಸನೆಂಬ ನರೇಂದ್ರಂ ॥ ೨೬

ಆತಂಗೆ ಸಚಿವರಾದರ್ ।
ನೀತಿವಿದರ್ ಸದ್ಗುಣಪ್ರಸಿದ್ಧರ್ ವಿಶ್ವ ॥
ಖ್ಯಾತರೆನಿಪೇಳ್ವರುಂ ಧಾ ।
ತ್ರೀತಿಲಕರ್ ಬುದ್ಧಿವಿದರತೀವಸಮರ್ಥರ್ ॥

ಅವರಾರೆಂದೊಡೆ—ರತ್ನೋದ್ಭವ, ಪ್ರೇಮದತ್ತ, ಕಾಮಪಾಲ, ಸುಮಿತ್ರ, ಸುಮತಿ, ಸುಶ್ರುತ, ಸತ್ಯವರ್ಮನೆಂಬೇಳ್ವರ್. ಅವರೊಳ್ ರತ್ನೋದ್ಭವಂ ವ್ಯವಹಾರಕ್ಕೆ; ಪ್ರೇಮದತ್ತಂ ತೀರ್ಥಯಾತ್ರೆಗೆ, ಕಾಮಪಾಲಂ ದೇಶಾಂತರಕ್ಕೆ ಪೋಗೆ, ಮಿಕ್ಕ ನಾಲ್ವರ್ ಪ್ರಧಾನರುಂ ತಾನುಂ

ಈನೃಪಂ ತನ್ನ ಭುಜಪ್ರತಾಪದಿನಮಾತ್ಯಶ್ರೇಷ್ಠರಿಂ ರಾಜ್ಯವ ।
ರ್ಧನರಿಂ ಮಿತ್ರರಿನೊಪ್ಪುವಾಪ್ತಬಲದಿಂ ಭಂಡಾರದಿಂ ದುರ್ಗದಿಂ ।

ಘನಸಪ್ತಾಂಗವಿಳಾಸಮಂ ಪಡೆದುಮಂತೇಕಾಂಗವೀರಂ ದಲೆಂ ।
ಬಿನ[1]ವೊಪ್ಪಂಬಡೆವಂ[1] ನೃಪಾಲತಿಲಕಂ ಭೂಪಾಲವಿದ್ಯಾಧರಂ ॥ ೪೯

ಆತನ ಸತಿ ಗುಣವತಿ ಧೈ ।
ರ್ಯಾತಿವಿಳಾಸವರಿಮೊ(?)ಸೆವ ರತಿ ವರಹಂಸ ॥
ವ್ರಾತಗತಿ ಲೋಕನುತವಿ ।
ಖ್ಯಾತೆಯೆ ವಸುಮತಿಯೆನಿಪ್ಪ ವನಿತಾರತ್ನಂ ॥ ೫೦

ಆಕಾಂತೆ ಒಂದು ದಿನಂ ನಿಜಕಾಂತಸಹಿತಂ

ಎಳಮಾವಿಂ ಕೌಂಗಿನಿಂ ಸತ್ಕದಳಿಯಿನರನೇಱಿಲ್ಗಳಿಂ ದಾಡಿಮಾಸಂ ।
ಕುಳದಿಂ ಚೆಂದೆಂಗಿನಿಂ ಸಂಪಗೆಯಿನಸುಕೆಯಿಂ ಬಕ್ಕೆಯಿಂ ಮಾತುಳುಂಗಂ ।
ಗಳನುದ್ಯದ್ದ್ರಾಕ್ಷೆಯಿಂ ಪೂದುಱುಗಲ ಲತೆಯಿಂ ಕೋಕಿಲಧ್ವಾನದಿಂ ಕಂ ।
ಗೊಳಿಪೊಂದುದ್ಯಾನಮಂ ಭೋಂಕನೆ ಮ ನದೊಲವಿಂ ಕಾಂತೆ ಪೊಕ್ಕಳ್ ನಿ
ತಾಂತಂ ॥ ೫೧

ಅಲ್ಲಿ

ಮೃದುತರಮಾರ್ಗದಿಂ ಜಗಮನಂಡಲೆವುದ್ಧತಸತ್ತ್ವವೃತ್ತಿಯಿಂ ।
ಮದನಶಿಲೀಮುಖಂಗಳೆನಿಸಿರ್ದುಮೊಱಲ್ದ ಶಿಲೀಮುಖಪ್ರಘಾ ॥
ತದ ಕಡುಪಿಂಗೆ ಸಿಲ್ಕುವುದಿದಾವ ವಿಳಾಸಮೆನುತ್ತೆ ತುಂಬಿಗ ।
ಳ್ಕದ ನಱುಗಂಪು ಪೊಂಪುಳಿಸೆ ಪೆಂಪೆಸೆದಿರ್ದುದು ಚಂಪಕವ್ರಜಂ ॥ ೫೨

ನಿರವಧಿಯಿಂ ಕುಳಿರ್ವುದಕಮಂ ನಡುನೆತ್ತಿಯೊಳಾಂತು ತನ್ನ ಕ ।
ಣ್ಣುರಿಗುಪಶಾಂತಿಯಂ ಪಡೆದನಿಲ್ಲಭವಂ ಬಿಸಿಲೊಳ್ ಪೊದಱ್ದ ಬಿ ।
ತ್ತರಿಪೆಳನೀರ್ಗಳಂ ತಳೆದು ಶೈತ್ಯಮನೆಲ್ಲರೊಳೀವ ಪೆರ್ಮೆಗಾ ।
ದೊರೆಯೆಮಗೆಂಬವೋಲ್ ವನದೊಳಗ್ಗದ ತೆಂಗಿನ ಸಾಲ್ಗಳೊಪ್ಪುಗುಂ ॥

ಅಂತೆಸೆವ ಉಪವನದ ಮಧ್ಯದಲ್ಲಿ

ಇದೆ ಮೀಂಗಳ್ ಮೀಂಗಳುದ್ಯದ್ಭ್ರಮರವನೊಳಕೊಂಡಬ್ಜಮಬ್ಜಂ ವಳಕ್ಷ
ಚ್ಛದಹಂಸಂ ಹಂಸಮತ್ಯದ್ಭುತಲಲಿತಲಸತ್ಪುಷ್ಕರಂ ಪುಷ್ಕರಂ ಬೇ ॥
ಗದಿನೈಳಾಭಾಗಕ್ಕೆ ನೈರ್ಮಲ್ಯಮನೆಸಗೆ ಶರತ್ಕಾಲದಾಕಾಶಮೋಲ್ತಿಂ ।
ದುದೆನಲ್ ಚೆಲ್ವಾದ ಪದ್ಮಾಕರಮನೊಲವಿನಿಂ ಕಂಡು ಕೊಂಡಾಡುತಿರ್ದಳ್ ॥

---

1. ವೋಘುಂಬಗೆವಂ, ಕ, ಗ.

ಶತಪತ್ರನೇತ್ರಹಸ್ತ ।
ಸ್ಥಿತಿಯಂತಿರೆ ಚಕ್ರಸಂಯುತಂ ಮಾಸದವೋಲ್ ॥
ಸಿತಪಕ್ಷಬಹುಳಪಕ್ಷಾ ।
ಗತಿಯಿಂ ರಂಜಿಸುವುದಖಂಡಮಂಬುಜಷಂಡಂ ॥ ೫೫

ಅಂತೆಸೆವ ಪುಂಡರೀಕಷಂಡಮಂ ವಸುಮತೀದೇವಿಯೆವೆಯಿಕ್ಕದೆ ನೋಳ್ಪನಮಲ್ಲಿ

ತಿಳಿಗೊಳದಿಂಬಿನಿಂ ಮಱಿಯನಿಟ್ಟು ಸರೋಜದ ಬೀಜರಾಜಿಯಂ ।
ಘಳಿಲನೆ ತಂದು ಚಂಚುಪುಟದೊಳ್ ನಿಜಚಂಚುವನಿಟ್ಟು ಕೊಟ್ಟು ಕೋ ।
ಮಳಸಿತಪಕ್ಷಮಂ ಪೊದಿಸಿ ಲಾಲಿಪ ಹಂಸೆಯ ಪುತ್ರಮೋಹಮಂ ।
ಲಳನೆ ಸಮಂತು ಕಂಡು ಮಿಗೆ ಚಿಂತಿಸಿದಳ್ ಸುಕುಮಾರಲಾಭಮಂ ॥ ೫೬

ಚಿಲಿಪಿಲಿಗುಟ್ಟು ನುಣ್ದೊಪಳ್ಗಳಿಂ* ಕಿವಿಗಿಂಪನೊಡರ್ಚೆ ಗೆಜ್ಜೆಗಳ್ ।
ಘಲಿಕೆನಿಪಂತಿರೆಯ್ದಿ ಬಿಗಿಯಪ್ಪಿ ಕುಚಂಗಳನುಂಡು ಸೋಂಕಿಲೊಳ್ ॥
ಮಲಗಿ ಮನಕ್ಕೆ ಸನ್ಮದವನೀವ ಕುಮಾರಕನಂ ಮದೀಯಸ ।
ತ್ಕುಲಗೃಹದೀಪನಂ ಪಡೆವ ಸೈಪಿನ ಸುಗ್ಗಿಯದೆಂದು ಸಾರ್ಗುವೋ ॥ ೫೭

ಪಕ್ಷಿ ಮೊದಲಾಗಿ ಭವದುಃ ।
ಖಕ್ಷಯಕಾರಣಮಿದೆಂದು ತನ್ನಯ ಶಿಸುವಂ ॥
ರಕ್ಷಿಸುತಿರ್ದಪುದದಱಿನ ।
ಶಿಕ್ಷೀಣಮದಾಯ್ತು ಭಾವಿಸಲ್ ಮಜ್ಜನ್ಮಂ ॥ ೫೮

ಎಂದು ಮತ್ತಂ,

ಇಷ್ಟಸುಖಕಾಮಭೋಗಮು ।
ನಿಷ್ಫಂ ಸುತರಿಲ್ಲವರ್ಗೆನುತ್ತತಿಚಿಂತಾ ॥
ದಷ್ಟಾಂಗಿ ಸುಯ್ದು ಹಾ!ಹಾ! ।
ಕಷ್ಟ ವಿಧಾತ್ರಾ!ಯೆನುತ್ತೆ ಮೂರ್ಛೆಗೆ ಸಂದಳ್ ॥ (೫೯

ಅಂತು ಮೂರ್ಛೆವೋದರಸಿಯನರಸನೆಂತಾನುಮೆಚ್ಚಱಿಸಿ ನಿಜನಿವಾಸವಂ ಪುಗಿಸೆ ತನ್ನ ಮನದನ್ನಳಪ್ಪ ಕಮಳನಿಯೆಂಬ ತಾಂಬೂಲಕರಂಕವಾಹಿನಿ ತತ್ಕಾಂತೆಯುಂ ಸಂತೈಸುತ್ತುಮಿರೆಯಿರೆ

ತರುಣಿಯ ಮಾಸಿದಂಗಲತೆ ಸೂಸಿದ ಕುಂತಳಮೊಯ್ಯನೊಯ್ಯನೋ ।
ಸರಿಸುವ ಭಂಗಿ ಕೈಯ ಸೆಳೆ ಬಾಡಿದ ಪೂಮುಡಿ ಶೂನ್ಯಹಾರಮು ॥
ಚ್ಚರಿಯೆನಿಪಂಗದಾಸೊಪಡು ಜಾಡ್ಯದ ಮೆಯ್ ಕಡುಂಬಿಜ್ಜಿ ಕಜ್ಜಳಂ ।
ಪರೆದಲರ್*ಗಣ್ಗಳಂಬಿಸಿತು ಪೇೞಿವೆ ಮಾಣಿಕವಾಂತ ಭಾವಮಂ ॥ ೬೦

ಅಂತು ವಸುಮತೀದೇವಿ ಪುಷ್ಪವತಿಯಾಗಿ ಚತುರ್ಥಸ್ನಾನಾನಂತರಂ

ಇಂದುಕಳಾಧಿದೇವತೆ ಮನೋಹರನಿರ್ಮಲಪೂರ್ಣಚಂದ್ರಿಕಾ ।
ಚಂದನದಣ್ಪನುತ್ಪನತಾರಕಸಂಕುಳಪುಷ್ಪಮಾಲಿಕಾ ॥
ವೃಂದಮನಬ್ಧಿಫೇನಧನಳಾಂಬರಮಂ ಮನವೊಲ್ದು ತಾಳ್ದಳಂ ।
ಬಂದವೊಲಲ್ಕೆ ಬೆಳ್ವಸದನಂ ಮೆಱೆದಿರ್ದಮ ತಲ್ಲತಾಂಗಿಯಾ ॥ ೬೧

ಅಂತು ಬೆಳ್ವಸದನಂಗೊಂಡು ನಯನಕಾಂತಿಕೌಮುದಿಯಿಂ ಪ್ರಿಯನಯನಕುಮುದಮಂ ವಿಕಾಸಮನೆಯ್ದಿಸುತ್ತುಂ, ದಂತರುಚಿದರ್ಪಣದಿಂ ಕಾಂತನ ಕಮನೀಯತೆಯುಂ ಕವಲ್ವರಿಸುತ್ತುಂ, ತನುಪ್ರಭೆಯಿಂ ಮನೋವಲ್ಲಭನ ಮುದಮನೊದವಿಸುತ್ತುಂ, ಮಂಗಳಪ್ರಚ್ಛದಾಚ್ಛಾದಿತ ಸಕಲಧೂಪಧೂಮಗಂಧಾಧಿವಾಸಿತಮಪ್ಪ ನಿಜವಲ್ಲಭನ ಶಯ್ಯಾತಳಕ್ಕೊಯ್ಯನೆ ಬರ್ಪುದುಂ

ಇಂದಿನ ನಡೆಯೆಂದಿನ ನುಡಿ ।
ಯೆಂದಿನ ನಿಜಮುಖವಿಕಾಸಮೆಂದಿನ ನಗೆಗ ॥
ಣ್ಣೆಂದಿನ ಮನದನುರಾಗಮಿ ।
ದೆಂದಿನ ಪರಿಯೆತ್ತೆನುತ್ತೆ ನೃಪನೀಕ್ಷಿಸಿದಂ ॥ ೬೨

ಅಂತರಸು ಕಾಂತೆಯ ಮುಖಾರವಿಂದಮಂ ನೋಡಿ ಹರ್ಷವಾರ್ಧಿಪರಿಕಾಲ್ಮಸಗೆ

ಮಿಸುನಿಯ ಕಡಗದ ಕೀಲಂ ।
ಪಸಿಸಂಗೆಯ್ವಂತೆ ಪೊರೆದಲಕ್ತಕರಾಗಂ ॥
ಪಸರಿಸುವ ಹಸ್ತಮಂ ಪಿಡಿ ।
ದು ಸಮೀಪಕ್ಕೊಲ್ದು ಕರೆದನಬಲೆಯನರಸಂ ॥ ೬೩

ಅಂತು ಕರೆದು ಪರ್ಯಂಕದೊಳ್ ಕುಳ್ಳಿರಿಸಿ

ಸೊಗಸಿನ ಲಲ್ಲೆ ಕೋಮಲಕಚಗ್ರಹಣಂ ಪುಳಕಂಗಳುಣ್ಮುವ ।
ಪ್ಪುಗೆ ಮೃದುಚುಂಬನಂ ಸರಸತುಂಗರದಚ್ಛದಪೀಡನಂ ರುಚಿ ॥
ದ್ವಿಗುಣಿತಕಾಮಕೇಳಿಯೆನಿಪಿಂತಿವು ಚಿತ್ತಸುಖಾನುರಾಗಮಂ ।
ಬಗೆಗೊಳಿಸಲ್ಕೆ ಕೂಡುತತಿಸೌಖ್ಯಸುಧಾಂಬುಧಿಯೊಳ್ ಮುಳುಂಗಿದರ್ ॥ ೬೪

ಅಂತು ಸುಸಿಲೆಸಕದಿಂ ವಸುಮತೀವಲ್ಲಭೆಯುಂ ವಸುಧಾಧಿಪತಿಯುಂ ಬಳಲ್ದು

ವಿಳಸದಮರಾಪಗಾಪ ।
ತ್ಪುಳಿನಸ್ಥಳದಲ್ಲಿ ಹಂಸಿಹಂಸರ್ ನಿದ್ರಾ ॥
ವಿಳರಾಗಿರ್ಪಂತೆಸೆದರ್ ।
ಸುಳಿತಮೃದುತಳ್ಪದಲ್ಲಿ ತದ್ದಂಪತಿಗಳ್ ॥ ೬೫

ಅಂತು ನಿದ್ರಾಸಕ್ತರಾಗಿರ್ಪಾಗಳ್ ಬೆಳಗಪ್ಪ ಜಾವದೊಳ್ ವಸುಮತೀದೇವಿ

ಸುರಕರಿಯುಮಿಂದುವಂ ಕೇ ।
ಸರಿಯುಂ ದುಗ್ಧಾಬ್ಧಿಯುಂ ದಿವಾಕರನಂ ಬಂ ॥
ಧುರಪುಷ್ಪಮಾಲೆಯುಂ ವಾ ।
ರಿರುಹಾನನೆ ಕನಸಿನೊಳ್ ಮನಂ ಮಿಗೆ ಕಂಡಳ್ ॥ ೬೬

ಅಂತು ಸುಸ್ವಪ್ನಮಂ ಕಂಡು ಸುಖನಿದ್ರೆದಿಳಿದು ಕುಳ್ಳಿರ್ದರಸಂಗೆ ತದ್ವಿಶೇಷಮಂ ಪೇಳಲರಸಂ ಬೆಳಗಾಗಲೊಡಂ ಪುರೋಹಿತರಂ ಕರೆಯಿಸಿ ತದ್ವೃತ್ತಾಂತಮಂ ಪೇಳಲೊಡಂ

ಕರಿಯಿಂ ಶಶಿಯಿಂ ಹರಿಯಿಂ ।
ಶರನಿಧಿಯಿಂ ರವಿಯಿನೆಸೆವ ಪುಷ್ಪದಿನಧಿಕಂ ॥
ಕರುಣಿ ಪರಾಕ್ರಮಿ ಪ್ರಾಜ್ಞಂ ।
ಸ್ಥಿರತೇಜಂ ನೃಪತಿ ಪುಟ್ಟುಗುಂ ಸುಕುಮಾರಂ ॥ ೬೭

ಎಂದು ಸ್ವಪ್ನಫಲಮಂ ಪೇಳ್ದು ಪುರೋಹಿತಂಗೆ ಕರ್ಪೂರತಾಂಬೂಲಾದಿದಾನಸನ್ಮಾನದಿಂ ಕಳಿಪಿ ಬಳಿಕಾದಿನಂ ಮೊದಲಾಗಿ ವಸುಮತೀದೇವಿ ನಾನಾವ್ರತನಿಯಮದಿಂದಿರ್ಪನ್ನಂ ಪಲವು ದಿನಂ ಕಳೆಯೆ

ನಡೆಯೊಳಡಿಯಿಟ್ಟು ಪೆಂಪಿನ ।
ನಡುವಿನೊಳೆಸೆಗೆಯ್ದು ನುಡಿಯೊಳೆಸೆಸುವಲರ್ಗೆ* ॥
ಣ್ಗಡೆವಿಡಿದು ನೆಲಸಿ ಚೆಲ್ವಂ ।
ಪಡೆದೆಸೆವತ್ತಲಸನ್ವೃತ್ತಿ ತತ್ಕ್ಷ್ಮೇಮಹಿಳೆಯಾ ॥ ೧೮

ಅನಂ ಕಮಳಿನಿ ಕಂಡಿಳಾಪತಿಯು ಸಮಯಂಬಡೆದೇಕಾಂತಕ್ಕೆ ಬಂದು

ವನಿತೆಯ ಗರ್ಭಚಿಹ್ನಮತಿಕೌತುಕಮೆಂತೆನೆ ರತ್ನನೂಪುರ ।
ಧ್ವನಿಗಲಸಿತ್ತು ಮಂದಗತಿಯೊಳ್ನಡು ಕಾಂಚಿಗೆ ತಿಣ್ಣಮಾದುದಾ ॥
ನನರುಚಿ ಚಂದ್ರನೆಂಬುಪಮೆಗೊಪ್ಪಿದುದುಚ್ಚಕುಚಾಗ್ರಮಕ್ಕೆ ಕ ।
ರ್ಪನುನಯಮಾಗುದಂಗಲತೆ ಕಾಂತಿಯನಾಂತುದಿಳಾಧಿನಾಯಕಾ ॥ ೧೯

ಎಂದು ನಿರ್ಭರಗರ್ಭವಾರ್ತೆಯಂ ಪೇೞ್ದು ಸೀಮಂತಸಮಯಮೆಂಬುದುಮರಸನವಳ್ಗೆ ಪಸಾಯನಂಗೊಟ್ಟು ಪರಮಾನಂದಮಂ ತಳೆದು,

॥ ಮನೋಜ್ಞ ॥

ಮಹೀತಳಾಧೀಶ್ವರಂ ನಿಜಮನೋರಮಾಗರ್ಭದಿಂ ।
ಮಹೋತ್ಸವಾನಂದಮಂ ತಳೆದು ಗರ್ಭಸೀಮಂತದಿಂ ॥
ಸುಹೃದ್ವಿಧಾನಪ್ರಿಯಾಸ್ಪದಮಿದಕ್ಕನುತ್ತತ್ಕ್ಷಣಂ ।
ಪ್ರಹಾರವರ್ಮಾಖ್ಯನಂ ಕರೆಯಲಟ್ಟಿದಂ ಭೂಭುಜಂ ॥ ೨೦

ಅಂತು ತನಗೆ ಪ್ರಾಣಮಿತ್ರನಪ್ಪ ಮಿಥಿಲಾಪತಿ ಪ್ರಹಾರವರ್ಮನಂ ನಿಜಕಾಂತೆ ಪ್ರಿಯಂವದೆ ಸಹಿತಂ ಬರ್ಪುದೆಂದು ಕರೆಯೆ ಕಳಪಿ

ಸಕಲಸುವಸ್ತ್ರಮಂ ಸಕಲನಿರ್ಮಲಸನ್ನುತರತ್ನಕೋಟಿಯಂ ।
ಸಕಲಸುವಸ್ತುಮಂ ತಳೆದು ತನ್ನ ಮನೋರಮೆಯುಂ ಸುತರ್ಕಳುಂ ॥
ಪ್ರಕಟಿತಸೇನೆಯುಂ ಬೆರಸು ಬಂದನನೇಕವಿಭೂತಿಯಿಂದೆ ಕೌ ।
ತುಕಮೆನಿಸಲ್ ನೆಗರ್ದಿ ಮಿಥಿಲಾಪತಿ ಪುಷ್ಪಪುರಕ್ಕೆ ರಾಗದಿಂ ॥ ೨೧

ಅಂತು ಬಂದ ಪ್ರಹಾರವರ್ಮನಂ ರಾಜಹಂಸಂ ಪುರಪ್ರವೇಶಂಮಾಡಿಸಿ ವಸುಮತೀದೇವಿಯ ಸೀಮಂತಸಂಭ್ರಮದಿನಿರಲೊಡಂ

ಪದಸಂಘಟ್ಟನೆಯಿಂ ಶಿಲೋಚ್ಚಯಕುಲಂ ನುರ್ಗಾಗೆ ಸೇನಾಸುಭ್ರಾ ।
ರದಿನುರ್ವೀತಳಮುಳ್ಗೆ ದುರ್ದಮಧನುರ್ಜ್ಯಾರಾವದಿಂ ಸಿಂಧುಗಳ್ ॥

ಕದಡಲ್ ತುಂಗಪತಾಕೆಯಿಂ ಗಗನಮಾದಂ ತೀವೆ ಮೇಲೆತ್ತಿ ಮು ।
ತ್ತಿದನೊತ್ತಂಬದೆ ರಾಜಹಂಸಪುರಮಂ ಶ್ರೀಮಾಳವಕ್ಷೋಣಿಪಂ ॥ ೨೨

ಅಂತು ಪೂರ್ವವಿರೋಧಿ ಮಾಳವದೇಶಾಧೀಶ್ವರನಪ್ಪ ಮಾನಸಾರಂ ಕುಸುಮಪುರಮಂ ಮುತ್ತಿ

ಕವಿ ಕವಿ ನೂಂಕು ನೂಂಕಗಟಿ ಲಂಘಿಸಿ ಕೋಂಟೆಯನೇಱಿಯಾಳ್ಗಳಂ
ತಿವಿ ತಿವಿಯೆಂದು ಲಗ್ಗೆವಱಿಯಂ ಪೊಡೆವಬ್ಬರಮುರ್ವಿಯುರ್ವಿಯಂ ॥
ಕಿವಿಗಿಡಿಸುತ್ತಿರಲ್ ದನಿಯಿದೇನೆನುತುಂ ಕಲಿ ರಾಜಹಂಸನ ।
ಶ್ವವನೊಸೆದೇಱಿಯೆಕ್ಕತುಳದಿಂ ಪೊಱಮಟ್ಟರಿಯೊಳ್ ಪೊಣರ್ಚಿದಂ ॥ ೨೩

ಆವ್ಯತಿಕರದೊಳ್ ತನ್ನಾಪ್ತಬಲವೆಲ್ಲಮುಂ ಪೊಱಮಟ್ಟುಸುವುದುಂ ಮೀಱಿದ ಮುಕ್ತ ಕರಮುಕ್ತ ಯಂತ್ರಮುಕ್ತ ಮುಕ್ತಾಮುಕ್ತವೆಂಬ ಶಸ್ತ್ರಾಸ್ತ್ರಪ್ರಯೋಗದಿಂ, ಕೇಶಾಕೇಶಿ ನಖಾನಖಿ ದಂತಾದಂತಿ ಕಚಾಕಚಿ ಮುಷ್ಟಾಮುಷ್ಟಿಯೆಂಬ ಸಂಕುಳಯುದ್ಧದಿಂ, ನಿರ್ವಿಚಾರಜೀವಿತರಾಗಿ ಕಾದುವಾಗಳ್ ಮಾಗಧೇಶ್ವರಂ ಮಾನಸಾರನನಭಿಮಾನಹೀನನಪ್ಪಂತು ವಿರಥನಂ ಮಾಡಿ ಮುಂದುಗಾಣದೆ ಬೆಂಗೊಟ್ಟೋಡುವಂತೆ ಭಂಗಂಬಡಿಸಿ ಪಡೆಯೆಲ್ಲಮಂ ಪುಡಿಗುಟ್ಟಿ ಮುಂದುಗೆಡಿಸಿ ಬಂದ ಬಟ್ಟೆಯಂ ಪತ್ತಿಸಲವಂ ಕೈ ಮಱಿದ ಕರಿಯಂತೆ ಸತ್ವಂಗುಂದಿ ಪೋಗುತುಂ

ಬಲಮೆಲ್ಲಂ ಕಡಿಖಂಡಮಾಯ್ತಪಜಯಂ ಮೈವೆರ್ಚಿರಲ್ ದುರ್ಯಶಂ ।
ತಲೆದೋಱಿತ್ತಭಿಮಾನಮೊರ್ಗುಡಿಸಿತಿನ್ನೇನೆಂದು ಮದ್ರಾಜ್ಯದೊಳ್ ॥
ನೆಲಸಿರ್ಪೆಂ ಸುಡು ಜೀವದಾಸೆಯನೆನುತ್ತುಂ ಮಾನಸಾರಂ ವನ ।
ಸ್ಥಲಮಂ ಪೊಕ್ಕತಿರೋಷದಿಂದೆ ಸತತಂ ತಾಳ್ದಂ ತಪೋನಿಷ್ಠೆಯಂ ॥ ೨೪

ದುರ್ಗಮವೈರಿಜಯಕ್ಕಿದು ।
ಮಾರ್ಗಂ ನಿಜಮೆಂದು ಮಾನಸಾರನೃಪಾಲಂ ॥
ದುರ್ಗೆಯನುಪಾಸ್ತಿಗೆಯ್ಯು ।
ತ್ತುಗ್ರಮಗೋಚರಮೆನಿಪ್ಪರಣ್ಯದೊಳಿರ್ದಂ ॥ ೨೫

ಅಂತು ಮಾನಸಾರಂ ಕಾನನಮಂ ಪೊಕ್ಕಂ. ಇತ್ತಲಾರಾಜಹಂಸಂ ನಿಧಿ

ಪೌರುಷಂ ನೀತಿಯುಂ ಪಿರಿದಂತೆ ಮುನ್ನಮೆ ಉನ್ನತಪ್ರಭಾವದಿಂ ಸನ್ನುತಿ ಪಡೆದಿರ್ದಂಗೆ ಜಯಪ್ರಮೋದಂ ಸಮನಿಸುವುದುಂ

ಸುರಕರಿ ಬಂದು ಪಟಿರ್ದ ಸರೋವರಮುಂ ಮದನಮುಕಿರ್ ಪೊಕ್ಕು ಪು |
ಷ್ಕರದಿನೊಡಲ್ದು ಪುಷ್ಕರಮನೀಂಟಿ ಸರೋಜಮನೆತ್ತಿ ಕಿೞ್ತು ನಿ |
ರ್ಭರನಿಜಲೀಲೆಯುಂ ಮೊಱೆನಪ್ಪೋಲ್ ಪ್ರತಿಪಕ್ಷಬಲಾಬ್ಧಿಯುಂ ನೆಲಂ |
ಬಿರಿಯೆ ಕಲಂಕಿ ಸತ್ವದೊದವಂ ತಳೆದಂ ಕಲಿ ಮಾಗಧೇಶ್ವರಂ ‖ ೨೬

ತನ್ನ ಸಿರಿಂಗೆ ತನ್ನ ವಿಭವಕ್ಕೆ ನೆಗೞ್ತೆಯ ತನ್ನ ಚೆನ್ನ ಸಂ |
ಪನ್ನತೆಗಂತು ತನ್ನ ಕುಲದಾಯತಿಗೊಪ್ಪುವ ಮಾೞ್ಕೆಯಿಂ ಕಳಾ ‖
ಸನ್ನತಮಾಪ್ತಬಂಧುಜನಮಚ್ಚರಿಯೆಂಗೆನಲುತ್ಸವಂ ಮಿಗಲ್ |
ತನ್ನಯ ಚಿತ್ತವಲ್ಲಭೆಗೆ ಗೆಂಟೆಗೆಗಟ್ಟಿದನುರ್ವರಾಧಿಪಂ ‖ ೨೭

ಅಂತು ರಮಣೀಯಮಪ್ಪಂತು ನಿಜರಮಣಿಗೆ ಸೀಮಂತಮನೆಸಗಿ

ಸಕಲದಿಗಂತರಕ್ಕಖಿಳಗೂಢಚರರ್ಕಳನಟ್ಟಿ ಶಾತ್ರವ |
ಪ್ರಕರ[1]ದ ಸದ್ವ[1]ಲಾಬಲತೆಯುಂ ತಿಳಿಯುತ್ತನುರಾಗಲಕ್ಷ್ಮಿಯುಂ ‖
ಸುಕರಮೆನಲ್ ಮುಖಾಂಬುಜದೊಳಾಂತು ನೆಗೞ್ದ ನಿಜಾತ್ಮಮಿತ್ರನಂ |
ತಿಕದೊಳಿರಲ್ ಸುಖಂಬಡೆದು ರಂಜಿಸುತಿರ್ದನಭಂಗವಿಕ್ರಮಂ ‖ ೨೮

‖ ಗದ್ಯಂ ‖

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪೀಠಿಕಾ ಪ್ರಕರಣಂ

ಪ್ರಥಮಾಶ್ವಾಸಂ.

---

1. ದಮರ್ಬ. ಕ. ಗ.

॥ದ್ವಿತೀಯಾಶ್ವಾಸಂ॥

ಶ್ರೀವಸುಮತೀವರಂ ಸಕ ।
ಲಾವನಿಯಂ ಪಾಲಿಸುತ್ತ ನೂನವಿಲಾಸಂ ॥
ಭೂವಿನುತಿವೆತ್ತನರ್ಥಿಜ ।
ನಾವಾಸಂ ಪದೆದಘಂಗವಿಟ್ಟೆಲಭೃತ್ಯಂ ॥ ೧

ಅದಲ್ಲದೆಯುಂ

ಪೌರವಿಲಾಸಿನೀನಯನಕಾಂತಿ ಕವಲ್ವರಿದೊಪ್ಪುತಿರ್ಪ ಶೃಂ ।
ಗಾರರಸಪ್ರವಾಹದೊಳನಂತನೃಪಾಲಕಸತ್ಕಿರೀಟನೀ ॥
ರೇರುಹಜಾಳದೊಳ್ ವಿವಿಧಸತ್ತ್ವವಿಸಂಕುಲಮಧ್ಯದೊಳ್ ಮಹೋ ।
ದಾರದೆ ರಾಜಹಂಸನೃಪನೇನೆಸೆದಿರ್ದನೊ ಸತ್ಸಭಾಗ್ರದೊಳ್ ॥ ೨

ಅಂತು ಮನೋನುರಾಗದಿಂ ವ್ಯೈಮೆನಡೆದು ಸಕಲರಾಜಪುತ್ರನೇತ್ರಪುತ್ರಿಕೆಗಳಂ ಕೃತಾರ್ಥಂ ಮಾಡುತ್ತುಂ ಸುಖಸಂಕಥಾವಿನೋದದಿಂ ಸಭಾಭವನದೊಳ್ ಸಿಂಹಾಸನಾಸೀನನಾಗಿ ಕುಳ್ಳಿರ್ದುಮಾಸಮಯದೊಳೊರ್ವ ದೌವಾರಿಕಂ ಬಂದು ನಿಟಿಲತಟಘಟಿತಹಸ್ತಸಂಪುಟನಾಗಿ

ಪೊಸಜಡೆ ಮಿಂಚುವೊಲ್ ಕುಣಿವ ಕುಂಡಲಮಿಟ್ಟ ವಿಭೂತಿ ಸೆಳ್ಳುಗುರ್ ।
ಕುಸಿದೊಡಲಾಂತ ಲಾಕುಳಕಮಂಡಲುವುಟ್ಟಮಲಾಂಬರಂ ಶ್ರಮ ॥
ಪ್ರಸವಮುಖಂ ಮನೋಹರವಿಲಾಸಮನಾಂತಿರೆ ಚೆಲ್ವ ಮುಗ್ಧತಾ ।
ಪಸನತಿಸಂಭ್ರಮಂಬೆರಸು ಬಾಗಿಲೊಳಿರ್ದಪನುರ್ವರಾಧಿಪಾ ॥ ೩

ಎಂದು ದೌವಾರಿಕಂ ಬಿನ್ನಪಂಗೆಯ್ಯಲರಸನಾತನಂ ಬರಿಸೆಂಬುದುಂ

ಮೆಲ್ಲನಱಿಯಿಡುತೆ ತನ್ನಂ ।
ಬಲ್ಲವರಱಿದಪ್ಪರೆಂದು ಶಂಕಿಸ-ತೆ ಮುಗಂ ॥
ಪಲ್ಲವಿಸೆ ನಡೆದು ಬರೆ ಭೂ ।
ವಲ್ಲಭನಾಕ್ಷಣದೊಳಱಿದನಾತನ ಕುಱುಪಂ ॥ ೪

ಅಂತಱಿದುಮಱಿಯದಂತೆ

ನಸುನಗುತೆ ಕೈಗಳಂ ಮುಗಿ ।
ದೊಸೆದಿಲ್ಲಿಗೆ ಬನ್ನಿಮೆಂದು ಕುಳ್ಳಿರಿಸಿ ಸಭಾ ॥
ವಸಥದೊಳೊಳ್ನುಡಿಯಿಂ ಮ ।
ನ್ನಿಸಿದಂ ಕುಟಿಲೋಪಚಾರದಿಂ ಭೂಪಾಲಂ ॥ ೫

ಅಂತು ಕಿಱಿದು ಬೇಗಮಿರ್ದು ರಾಜಲೋಕಮಂ ಬೀೞ್ಕೊಟ್ಟು ಓಲಗದಿಂದೆೞ್ದೇಕಾಂತಕ್ಕೆ ಕುಟಿಲತಾಪಸನಂ ಕರೆದಿದೇಂ ಚಟುಲಚರಣಾ! ಈಪರಿಯೊಳ್ ಬರ್ಪುದರ್ಕೆ ಕಾರಣಮೇನೆಂದು ಕೇಳ್ಪುದುಮವನಿಂತೆಂದಂ:—

ಅವನಿಪ ಬಿನ್ನಪಂ ನಿಜವಿರೋಧಿನೃಪಾಲಕರಾಜ್ಯದೊಳ್ ವಿಶೇ ।
ಷವನಱಿದಾಗಳಾಗಳಱಿದರ್ಥಮನೊಪ್ಪಿಸಲೆನ್ನನಟ್ಟಲಾಂ ॥
ವಿವಿಧವಿಳಾಸದಿಂ ಬೆಸೆವ ಮಾಳವದೇಶಮನೆಯ್ದಲಲ್ಲಿ ಮಾ ।
ಳವನೃಪನೊಂದು ಕಾರ್ಯಮನೊಡರ್ಚಿದೊಡಾನಱಿದಿಲ್ಲಿಗೆಯ್ದಿದೆಂ ॥ ೬

ಅದಾವುದೆನೆ:—

ನಿನ್ನೊಡನಂದು ಕಾದಿ ಮುಱಿದೋಡಿದ ಬನ್ನದ ಬೇಗೆಯಿಂದವಂ ।
ತನ್ನ ಪುರಕ್ಕೆ ಪೋಗದೆ ಮಹಾವನಮಂ ತನೆ ಪೊಕ್ಕು ದುರ್ಗಯಂ ॥
ಕೆನ್ನಮುಪಾಸ್ತಿಗೆಯ್ದು ಪಡೆದಂ ಗದೆಯಂ ಪದೆಪಿಂ ರಿಪುಕ್ಷಯಾ ।
ರ್ಥನ್ನಿಜಸೇನೆಯುಂ ನೆರಪಿ ಬಂದಪನಿಲ್ಲಿಗಿಳಾಧಿನಾಯಕಾ ॥ ೭

ಎಂದೀವಿಶೇಷಮಂ ಪೇೞ್ದೆಂದೀವೇಷದಿಂ ಬಂದೆನೆಂಬುದುಮಾತನಂ ಪ್ರೀತಿಯಿಂ ಮನ್ನಿಸಿಯರಸಂ ಮಗುೞ್ದಿಂತೆಂದಂ:—

ಅಕ್ಕಟ! ಮಾಳವಂ ಮಗುೞ್ದು ಚೇಷ್ಟಿಸಿ ಬರ್ಪೊಡೆ ಕೊಂದು ಬಾರದಿಂ
ತುಕ್ಕೆಮದಿಂದೆ ನಿಂ ಬರಲಿದೇಕಮರುಂ ಮುಳಿದಿಲ್ಲಿಗೆಯ್ತರಲ್ ॥
ಸೊಕ್ಕಿದಿಭಂ ಮೃಗಾಧಿಪತಿಯಿರ್ಕೆಗೆ ಬಂದವೊಲಾಂತು ಸೀೞ್ದು ಪೋ ।
ಬ್ದಿಕ್ಕದೆ ಮಾಣ್ಬನೇ ಎನುತೆ ಗರ್ಜಿಸಿದಂ ಮಗಧಕ್ಷಿತೀಶ್ವರಂ ॥ ೮

ಅಂತು ಕೋಪಮಂ ತಳೆದಾತನಂ ಕಳುಪಿಯನಂತರಂ ತನ್ನ ನಾಲ್ವರ್ ಸಚಿವರಂ ಕರೆಯಿಸಿ ತದ್ವೃತ್ತಾಂತಮಂ ಪೇೞ್ದಿದರ್ಕೇನಂ ಮಾಳ್ಪೆಮೆಂದು ಸುಮಿತ್ರನ ಮೊಗಮಂ ನೋಡಲಾತನಿಂತೆಂದಂ:—

ಹಿಂದಣ ಸೋಲವೊಂದು ವನವಾಸದ ಸೇದೆಯದೊಂದು ಪೆಂಡಿರಂ |
ನಂದನರಿಂದಗಲ್ದಿಲದೊಂದು ಮನೋಗತವೈರವೊಂದಿದೊಂ ||
ದೊಂದತಿದುಃಖಕಾರಣಮಿವೆಲ್ಲವಱಿಂ ಕಡುನೊಂದು ದೈವದಿಂ |
ದೊಂದು ಗದಾಯುಧಂಬಡೆದಸಿಂ ತಪೆದಿರ್ದನೆ ಮಾಗಧೇಶ್ವರಂ || ೯

ಎಂದ ಮಾತಂಕೇಳ್ವಾತಂಗಾತಂ ಮಿಗಿಲಾದಬಲುಮುಬ್ಬೆಗಮುಂ ಪುಟ್ಟೆ ಪುದೆಂದು ನಸುನಗುತ್ತುಂ ಸುಮತಿಯ ಮುಖಮಂ ನೋಡಲಾತನಿ ತೆಂದಂ:—

ನುತಸಾಮಭೇದದಾನೋ |
ದ್ಧತದಂಡಮೆನಿಪ್ಪನಾಲ್ಕುಮತದೊಳ್ ಕಾಲೋ ||
ಚಿತಮಪ್ಪುದಂತದಂ ನಿ |
ಶ್ಚಿತಮಪ್ಪಂತೆಸಗು ದೇವ ನೀನಱಿಯದುದೇ || ೧೦

ಎಂದ ಮಾತಂ ಮನದೆಗೊಂಡು ಸತ್ಯಧರ್ಮನ ಮೊಗಮಂ ನೋಡಲಾತನಿಂತೆಂದಂ:—

ಅಪಜಯಮಕ್ಕೆ ಮೇಣ್ವಿಜಯಮಕ್ಕೆ ವಿರೋಧಿನೃಪಾಲರೆತ್ತಿ ಬಂ |
ದಪರೆನೆ ಕೇಳ್ದು ತನ್ನ ಪುರಮಂ ಪೊಱಮಟ್ಟದಟಿಂ ನಿಜಾರಿಭೂ ||
ಮಿಪರೆರ್ದೆಯಳ್ಕೆ ತಳ್ತುಱಿದನೇಕಯುಗಂ ಹರಹಾಚಂದ್ರಮಾ |
ತಪಸಮಕೀರ್ತಿಯಂ ಪಡೆದು ಬಾಳ್ವುದೆ ದಲ್ ನೃಪನೀತಿ ಭೂಪತೀ || ೧೧

ಆಮಾತಂ ಕೇಳ್ದರಸಂ ಸಂತಸಂಬಟ್ಟು ಸುಶ್ರುತನ ಮುಖಮಂ ನೋಡಲಾತನಿಂತೆಂದಂ:—

ಎನಿತು ರಿಪುವಿಜಯಮಾಗಿ |
ರ್ದ ನರೇಂದ್ರಂ ದುರ್ಗವರ್ಗಮಂ ಪಾಲಿಪುದೇ ||
ಕೆನೆ ಸಿಂಹಂ ಗಜವಿದಳನ |
ನೆನಿಸಿರ್ದುಂ ಬಹಳಗುಹೆಯನಾಶ್ರಯಿಸುವವೋಲ್ || ೧೨

ಎಂದು ಪೇೞ್ದವರ ಮಾತೆಲ್ಲಮಂ ಕೇಳ್ದು ಅವರವರಿಚ್ಛೆಯುಂ ಮಾಳ್ಪೆನೆಂದು ರತ್ನಶಿಖರಿಯೆಂಬ ದುರ್ಗಕ್ಕೆ ಸ್ತ್ರೀಸಮೂಹಮಂ ಕಳಪಿ ತಾಂ ಶುಭದಿನಶುಭಮುಹೂರ್ತದಿಂ ಪೊಱಮಟ್ಟು,

ದೆಸೆ ಬೆಸಲಾದುದೋ ಧರಣಿಯೊಂದುದೊ ಪನ್ನಗವಲ್ಲಭಂಗೆ ಲೆ ।
ಕ್ಕಿಸಲರಿದೆಂಬಿನಂ ಮನಗಜಾಳಿ ಹಯಾಳಿ ರಥಂ ಪದಾತಿ ಘೂ ॥
ರ್ಣಿಸೆ ಪಗೆಯುಂ ಪಡಲ್ವಡಿಸಲೆಂದು ಮಹಾದ್ಭುತದೇಳ್ಗೆಯಿಂ ನೆಲಂ ।
ಕುಸಿಯೆ ಚತುರ್ಬಲಂ ಬೆರಸು ತನ್ನಯ ರಾಜ್ಯದ ಸೀಮೆಗೆಯ್ದಿದಂ ॥೧೩

ಅಂತು ರಾಜಹಂಸನಿದಿರಾಗಿ ಬಿಟ್ಟಿರ್ದಂ ಮಾನಸಾರಂ ಕೇಳ್ದು

ಪೂರ್ವವಿರೋಧದಿಂ ನಿಜಪರಾಕ್ರಮದಿಂ ಪರರಾಜ್ಯಕಾಂಕ್ಷೆಯಿಂ ।
ಬೋರ್ವಲಮುರ್ಕಿನಿಂ ವಿಭವಮತ್ಸರದಿಂ ಜಸದೇಳ್ಗೆಯಿಂ ಗದಾ ॥
ಗರ್ವದೊಳುರ್ಬಿ ದಿಗ್ವಿತತಿ ಕಂಪಿಸೆ ಮಾಳವಭೂಮಿಪಾಲಕಂ ।
ಸರ್ವಬಲಾನ್ವಿತಂ ನಡೆದು ಮಾಗಧನೊಳ್ ಮುಳಿದೊಡ್ಡನೊಡ್ಡಿದಂ ॥ ೧೪

ಅಂತುಭಯಬಲಂ ಪ್ರಭೂತಪ್ರಭವದಿಂದಭಿಮುಖಮಪ್ಪುದುಂ

ಕರಿಗೆ ಕರಿ ತುರಗದೊಳಗೆ ।
ತುರಂಗತತಿ ತೇರ್ಗೆ ತೇರ್ ಪದಾತಿಗೆ ಸುಭಟೋ ॥
ತ್ಕರಮಣಿಯನೊಡ್ಡಿ ಕಾದ ।
ಲ್ಕುರವಣಿಸಿತ್ತಮಗೆ ತಮಗೆನುತ್ತುಭಯಬಲಂ ॥ ೧೫

ಅಂತುರವಣಿಪುದಂ ಕಂಡು

ಬಾನ್ರಲಿಯ ಕಾಲ ತೊಡರ ಮ ।
ಹಾವೀರರ್ ಚೂಣಿಬವರನುಂ ಕೆಣಕಲ್ ಕೋ ॥
ಪಾವಿಷ್ಟರಾಗಿಯುಗ್ಗಡ ।
ರಾವೃತರುರವಣಿಸಿ ಕುದುರೆಯಂ ಪೊಳೆಯಿಸಿದರ್ ॥ ೧೬

ಗಱಿಸನ್ನೆಯಿಂದೆ ಕರೆಕರೆ ।
ದುಱಿವಾಳ್ಗಳನುಭಯಬಲದ ಬಿರುಪರ್ ಬಿಲ್ಲುಂ ॥
ಬೆಱಗಾಗಿ ನೋಡೆ ಕಣ್ಗಳ ।
ಬಱನಂ ಕಳೆದೆಚ್ಚು ಮೆಚ್ಚಿಪರ್ ಬಿಲ್ಲಾಳ್ಗಳ್ ॥ ೧೭

? ಕಿಱುಪ್ರವ ಕಿವಿ ಕಡುವೊಗರಂ ।
ಪೆಱುವ ಮೊಗಂ ಸುಭರ್ಡದರ್ ವಾಳಾಗ್ರಂ ಮುಂ ॥

ದುಱುಱುವಾಗ್ಯುದ್ಧ ತವಕವೊಪ್ಪುವ ।
ಕುಱುಂಪಿನ ಕುದುರೆಗಳನಾಡುರ್ ಬಿಟ್ಟರ್ ಸುಭಟರ್ ॥ ೧೮

ಪೃಷ್ಠರರಂಧ್ರದ ಘೋತ್ಕೃತಿ ।
ಪೃಷ್ಠರಭಾಗಕ್ಕೆ ಪೆಱಿ ಸದ್ಭಟತತಿಯುಂ ॥
ನಿಷ್ಠುರಣಾನಂತಪತಿಯಿಂ ।
ನಿಷ್ಕಂಟಕವಾಗಿ ಮಾಡಿವತ್ತಿ ಭಯುಗಾಧಂ ॥ ೧೯

ರಣವಾರ್ಧಿಯೊಳರಿಯ ಶಿರೋ ।
ಮಣಿಯುಂ ತವೆ ಮಾಱುಗೊಳ್ವ ಪೆರ್ಬಡಗಂಬಂ ॥
ತಣಿಯೊಡ್ಡಿದಾಳ್ಗಳಿಲ್ಲಂ ।
ಪೆಣನೊಡ್ಡಾಗಲ್ಕೆ ಪರಿದುವಗ್ಗದ ತೇರ್ಗಳ್ ॥ ೨೦

ಕಲಿಗಳನನುರಿಯುರೊಡನಿರೆ ।
ಕಳಂಪ್ರವ ತೆಱದಿಂದೆ ಕೊಂತದಿಂ ಕೋಲನು ನಭ ॥
ಸ್ಸ್ಥಳಕೆತ್ತಿ ತಮ್ಮ ಬಾಹಾ ।
ಬಳವುಂ ರಣದಲ್ಲಿ ಕೊಂತಕಾಱರ್ ಮೆಱೆದರ್ ॥ ೨೧

ಝಳಪಿಸಿ ಪೊಯ್ವ ಖಡ್ಗಲತೆ ಮಿಂಚು ಭಟರ್ಕಳ ಬೊಬ್ಬೆಯುಬ್ಬರಂ ।
ಮೊಳಗು ಪ್ರನಷ್ಟಮಸಂಗಿ ಸುರಿತರ್ಪರುಣಾಂಬು ಸುವೃಷ್ಟಿ ಬಲ್ಪುವೆ ॥
ಬೆಳಸಿನೆ ಸಂಗರಾಂಗಣದೊಳಾಂತರ ಪಂದಲೆರಾಶಿಯುಂ ಮರು ।
ಳ್ಗಳ ಬಳಗಕ್ಕೆ ಬೀಱುತೆ ಪೆಱೆಂಚಿದರಿಪ್ರಬಲಮರ್ಭರಾಧಿಪರ್ ॥ ೨೨

ಅಂತು ಮಾಳವಮಾಗಧರ್ ಪೊಣ್ದುಱಿದಾಳ ಕಾಳೆಗವುಂ ನಿಲಿಸಿ

ಮಾಳವನರಥವನುರ್ವೀ ।
ಪಾಲಂ ಮಗಧೇಶ್ವರಂ ನಿಜಾಸ್ತ್ರಾಳಿಗಳಿಂ ॥
ಕೀಲಿಸುತೆ ಮುಟ್ಟೆವಂದರ್ ।
ಕಾಲಂ ಕಡುಮುಳಿದು ಬರ್ಪ ತೆಱದಿಂದಾಗಳ್ ॥ ೨೩

ಅಂತು ಬರ್ಪುದಂ ಕಂಡು ಮಾಳವಂ ತನಗೆ ಸೋಲಂ ಬರ್ಪುದೆಂದಾಳ
ಮುಖಮುಂ ನೋಡಿ ಘೋಳೆಂದು ಕವಿಯೆ ಮಾಗಧನಾಳ್ ಕಂಡು

ಮಾಳವನೆಂಬವನಲೆ ನ ।
ಮ್ಮಾಳವನೆಂದಾರ್ದು ಸುಭಟರೆಚ್ಚರ್ ಘಟೆಯಂ ॥
ಗಾಳ ವಂಸಗಲ್ಕೆ ಮಗಧನ ।
ಧಾಳಿ ಮಹಾಮೇಘದಂತೆ ಪರೆದತ್ತಾಗಳ್ ॥ ೭೪

ಅಂತು ತೆರಳ್ದುದಂ ಕಂಡು ಮತ್ತಂ

ಪಿಂದಣ ಸೋಲಮಂ ಮಱೆದು ಲಜ್ಜೆಯನೊಲ್ಲದೆ ಮತ್ತೆ ಬಂದನೇ ।
ಪಂದೆಗಳೋಜನೆಂದು ಮಿಡುಕುಳ್ಳದಟರ್ ಕಡುಕೆಯ್ದು ಬಾಣದಿಂ ॥
ಸ್ಯಂದನಮಂ ತುರುಂಗಚಯಮಂ ನಿಜದೇಹಮನೆಚ್ಚೊಡಾನೃಪಂ ।
ನೊಂದು ರಥಾಗ್ರದಿಂ ನೆಗೆದು ದಿವ್ಯಗದಾಯುಧಮಂ ತುಡುಂಕಿದಂ ॥ ೭೫

ಅಂತು ದೇವತೆ ಕೊಟ್ಟ ಗದಾದಂಡಮನುಚಿರ್ದವರಿಯಂ ಸಿಮಿಚಿರ್ಪ ಪ್ರಳಯಂ ತಳ್ಳೈಸಿ ಗೊಂಡೆಯುಮಂ ದಂಡೆಗೊಳಿಸಿ ಚಾರಣಾಕೃತಿಯಿಂ ಪಿಡಿದಾಗಳ್

ಕುಡುಮಿಂಚಂ ಸೂಸುತುಂ ಬಲ್ಸಿಡಿಲ ಬಳಗಮಂ ಕಾರುತುಂ ಕೆಂಡಮಂ ಸೂಲಿಡುತುಂ ಸಂಹಾರಕಾಲಾಗ್ನಿಯನುಗುಳುತುಮೆಂಟುಂ ದಿಶಾಭಿತ್ತಿಯಂ ಘೀಳಿಡಿಸುತ್ತುಂ ಕೋಟಿಸೂರ್ಯದ್ಯುತಿಯನೊಡೆಯುತುಂ ಭೈರವಾಟೋಪಮಂ ಕೇಳ್ಬಿಡಿಸುತ್ತುಂ ರೌದ್ರಮಾದತ್ತಧಿಕತರಗದಾದಂಡಮುದ್ಯತ್ಪ್ರಚಂಡಂ ॥

ಅಂತಿರ್ದ ಗದಾದಂಡಮಂ ಬೀಸಿ

ಕುದಿದುರ್ಕಲ್ವೇಡ ಮುನ್ನೆಮ್ಮನುಮಱಿಯದುದಾಸೀನದಿಂ ಕಾದಿಯಾಂ ಸೋಲ್ತುದು ಮೋಘಂ ಪೋಗು ಪೋಗೆಂದೆನುತೆ ಗಜಘಟೆ ಬೊಬ್ಬಿಟ್ಟು ಧೀಂಕಿಟ್ಟು ದುಷ್ಟಂ ॥ ಗದೆಯಂ ಬೀಸಿಟ್ಟೊಡಾಮಾಗಧನೃಪನ ರಥಂ ನುಗ್ಗೆ ಜಾತ್ಯಶ್ವಜಾಳಂ । ಮದಮಾತಂಗವ್ರಜಂ ಬೆಟ್ಟುಱೆ ಮಱೆದೊಱಗಲ್ ಬಿಟ್ಟು ಪತ್ತಿಪ್ರತಾನಂ ॥ ೭೭

ಅಂತು ಚಾತುರ್ಬಲಮಂ ವಿಲಯಾಗ್ನಿ ಪರ್ವಿದಂತೆ ಸರ್ವಸಂಹಾರಂಮಾಡಲರಸಂ ಶಿರೋಭಾಗದೊಳ್ ಗಾಯಂಬಡೆದು ಮೂರ್ಛೆವೋಗೆ

ರಥದೊಳೊಱಗಿದರ್ನರಸಂ ।
ಮಿಥಿಳಾಪತಿ ಸಿಲ್ಕಿದಂ ಪ್ರಧಾನರ್ ನಾಲ್ವರ್ ॥
ಪ್ರಥನದ ಬೆಸೆಯಿಂದುೞಿದರ್ ।
ಶಿಥಿಲವೆನಲ್ ಸೇನೆ ಪರಿದುದೆಣ್ದೆಸೆಗಾಗಳ್ ॥ ೨೮

ಕಿಸಲಯರಾಜಿಯುಂ ತಳೆದ ಕಲ್ಪಕುಜಂ ನವಸಾಂಧ್ಯರಾಗದಿಂ ।
ಮಿಸುಪ್ಪುದಯಾಚಲಂ ವಿವಿಧವಿದ್ರುಮವಲ್ಲರಿಯಿಂ ಕರಂ ಮಿರಾ ॥
ಜಿಸುವ ಮಹಾರ್ಣವಂ ಮೊಱೆವವೊಲ್ ಮೊಱೆದತ್ತು ಗದಾಭಿಘಾತದಿಂ ।
ಬಸವೞಿದಿರ್ದ ಭೂಪತಿಯನಾಂತ ರಥಂ ರಣಮಧ್ಯಭೂಮಿಯೊಳ್ ॥ ೨೯

ಪಟುಭಟರೞ್ಗದರರಸಂ ।
ನಿಟಿಲದ ಗಾಯಕ್ಕೆ ತೇಂಕಿ ಮೈಮಱೆದಂ ದು ॥
ರ್ಘಟಮುೞಿವುದೆಂಬವೊಲ್ ಸಂ ।
ಕಟದಿಂ ರತ್ಯಾಚಲಕ್ಕೆ ಸರಿದರ್ ಸಚಿವರ ॥ ೩೦

ಇತ್ತಲ್

ಇಂದು ತಪಃಫಲಂ ಸಫಲಮಾದುದು ಮದ್ಗದೆಯಿಂ ವಿರೋಧಿ ತೀ ।
ರ್ದಂ ದೞಿವೊಯ್ದು ಮುಗ್ಗಿತು ಜಯಂ ನಮಗಾಯ್ತೆನುತುಬ್ಬಿ ಗರ್ಬದಿಂ ॥
ದುಂದುಭಿಶಂಖಕಾಹಳೆಯ ಗಾವರದಿಂ ನಿಜಪತ್ತನಕ್ಕೆ ಸಾ ।
ನಂದದಿನೆಯ್ದಿದಂ ಪುರಜನಂಗಳಿದಿರ್ವರೆ ಮಾಳವೇಶ್ವರಂ ॥ ೩೧

ಅಂತು ಮಾಳವೇಶ್ವರಂ ತನ್ನ ಪತ್ತನಮಂ ಪೊಕ್ಕು

ಅನುವರದೊಳ್ ಸಿಲ್ಕಿದನಂ ।
ಜನಪತಿಗಳ್ ಭಂಗವಡಿಸಲಾಗದೆನುತ್ತುಂ ॥
ಘನತರನೀತಿವಿದಂ ಭೋಂ ।
ಕನೆ ಬಿಟ್ಟಂ ಬೇೞ್ಪುದಿತ್ತು ಮಿಥಿಳೇಶ್ವರನಂ ॥ ೩೨

ಅಂತಾಮಾಳವೇಶ್ವರಂ ತನಗೆ ಸಿಲ್ಕಿದ ಪ್ರಹಾರವರ್ಮನಂ ಬಿಟ್ಟು ಕಳುಪಿ ಜಯಪ್ರಮೋದದಿಂದಿರಲಿತ್ತಲ್

ಮಾಗಧನ ಸಚಿವರಿತ್ತಲ್ ।
ಬೇಗದೆ ರತ್ನಾಚಲಕ್ಕೆ ಪೋಗಿ ನೃಪಂ ದೇ ॥
ವಾಗಾರಮನೆಯ್ದಿದನೆಂ ।
ದಾಗಳ್ ವಸುಮತಿಗೆ ಪೇೞ್ದರುಬ್ಬೆಗದಿಂದಂ ॥ ೩೩

ಅಂತು ಪೃಥಿವೀಪತಿ ಮಡಿದನೆಂದು ವಸುಮತಿಗೆ ಪೇೞ್ವುದುಂ ವಸುಮತಿ ಸುಮತಿಯುಸ್ಸಿರ್ದುದೞಿಂದಾಸಚಿವರ್ಗಿಂತೆಂದಳ್:—

ಭಂಡಣದೊಳ್ ಜಯಾಪಜಯಮೆಂಬುದು ಸಿದ್ಧಮದೊಂದು ಕಂಬೆ ಪೇೞ್
ಗಂಡಗುಣಂಗಳುಳ್ಳವರ್ಗ ದಂತಿರಲೊಪ್ಪುವ ಕೆಯ್ದುಲಾದೊಡೊ ॥
ಳ್ಗೊಂಡುಱೆ ಪುಯ್ಯಲಾದೊಡೆ ಪಲಾಯನಸಂಡಿತರಾದ ಗಾದೆಯುಂ ।
ಕಂಡಪೆವೀಗಳೆಂದಬಲೆ ಕೋಪಿಸಿದಳ್ ಸಚಿವಪ್ರಧಾನರಂ ॥ ೩೪

ಎಂದು ಮತ್ತಮವಂತಿರಲರಸನೊಡನೆ ಪೋಗಲ್ವೇೞ್ಕೆನಗಿಂಧನಸಂದೋಹಮಂ ಸಮಕಟ್ಟಿಮೆಂಬುದುಂ, ಸಚಿವರ್ ಸನ್ಮಾನಿಸಿ ದೇವಿಯರ ಗರ್ಭದ ಭರ್ಕಂ ನಿರ್ಭರರಾಜ್ಯವನಾಳ್ವನೆಂದಾಗಾಮಿಕಾರ್ಯಮಂ ಪೇೞ್ದು ನಿಲಿಸಿ ಬೊಡಂ ನಿಲ್ಲದೆ ಜೀವದಾಸೆಯನೊಲ್ಲೆನೆಂಬುದುಮವರ್ ಚರಣಕಮಲದೊಳ್ ಶಿರೋಭಾಗಮಂ ಸಾರ್ಚುವುದುಮಾಕೆ ತನ್ನೊಳಿಂತೆಂದಳ್:—

ಏಕೆ ದುರಾತ್ಮರ ಮಾತಂ ।
ನೂಕುವೆನಾಂ ಕಂಡ ಬುದ್ಧಿಯುಂ ಕಾರ್ಬ್ಯಂ ನಿ ॥
ವ್ಯಾಕುಲದಿನಿಂದಿನಿರುಳೆಂ ।
ದಾಕಾಂತೆಯುನಾತ್ಮವಚನಮಂ ಮನ್ನಿಸಿದಳ್ ॥ ೩೫

ಅಂತು ಮನ್ನಿಸಿ ನೀಂ ಪೇೞ್ದುದಂ ಮಾಳ್ಪೆನೆಂದವರನತ್ತ ಕಳುಪಿದಳ್. ಇತ್ತಲ್

ಮಡುಗಟ್ಟ ಸುರಿವ ನೆತ್ತರ ।
ಕಡಲೊಳ್ ತೇಂಕಾಡುತಿರ್ಪ ರಥದೊಳ್ ಗಾಯಂ ॥
ಬಡೆದೆನಸು ಬೞಲುತಿರ್ದಂ ।
ಪಡುನೇಸಲು ತೆಱದೆ ರಾಜಹಂಸನರೇಂದ್ರಂ ॥ ೩೬

ಅಂತಿರ್ದರಸನ ವರೂಥನುಂ ತುರಗಂಗಳ್ ತರುಗಳಿಂ ದುರಂತರಮಪ್ಪರಣ್ಯಮಾರ್ಗದೊಳ್ ತಮ್ಮಿಚ್ಛೆಯಿಂ ಕೊಂಡೋಡಿ ಪೋಗೆ ಮುಂದೆ

ಭೂಮಿಗೆ ಶರನಿಧಿ [1]ಸೆಜ್ಜೆಗಂ[1] ।
ಬಾನಾತಂತಿರ್ಕೆ ಪೆರ್ಚಿದೀವಟವೃಕ್ಷಂ ॥
ಸೀಮಾಸ್ಥಾನಮಿದೆನಲಟ ।
ವೀಮಧ್ಯದೊಳಿರ್ದುದಭ್ರಮಂ ಚುಂಬಿಸುತುಂ ॥ ೩೭

ರವಿರಥಮುಪರಾಚಲಮಂ ।
ದಿವಸಾಂತ್ಯದೊಳೋಡಿ ಸಾರ್ದವೋಲ್ ವಟಕುಜದೊ ॥
ಪ್ಪುವ ಬೀಟಿಲೊಗ್ಗಿನೊಳ್ ನೃಪ ।
ನ ವರೂಥಂ ಸಿಲ್ಕಿ ಪೋಗದಿರ್ದತ್ತಾಗಳ್ ॥ ೩೮

ಅಂತು ಸಿಲ್ಕಿದ ಸಮಯದೊಳ್

ಕಡೆವಗಲೊಳ್ ನಿಜಾಂಗಮತಿರಕ್ತದೊಳೊಪ್ಪಿರೆ ಬಲ್ಪುಗೆಟ್ಟು ತೇರ್ ।
ಪೊಡೆಗೆಡೆಯಲ್ ತುರಂಗತತಿ ಮುಗ್ಗೆ ಸರೋಜಮುಖಂ ನಿರೋಧಮಂ ॥
ಪಡೆದಿರೆ ಮಂಡಲಾಗ್ರಕರದುಗ್ರತೆ ಕುಂದಿರೆ ರಾಜಹಂಸನಂ ।
ಗೆಡೆಗೊಳಲಾರ್ಪನೆಂಬ ಬಗೆಯಿಂದಿನನೆಯ್ದಿದನಸ್ತಶೈಲಮಂ ॥ ೩೯

ಅಂತಿನನಸ್ತಮಾಗಲೊಡಂ

ಏಕಲೆ ದೇವ ನಿನ್ನೊಳೆಡಗಣ್ ಬಲಗಣ್ ಸರಿಯೆನ್ನದಿಂತು ದೋ ।
ಷಾಕರನಂ ಸಮಂತು ತಱಗೇಱಿಸಿ ಕೊಂಡು ಮದೀಯಕಾಂತನಂ ॥
ಪ್ರಾಕೃತನಂತಿರಸ್ತಗಿರಿಗೆಯ್ದಿಪೆನೆಂದಭವಂಗೆ ವಾಸರ ।
ಶ್ರೀ ಕರಕಂಜಮಂ ಮುಗಿವವೋಲ್ ಮುಗಿದಿರ್ದುವು ಪದ್ಮಸಂಕುಳಂ ॥ ೪೦

ಕುಜಮೆಲ್ಲಂ ಬಗೆಯಲ್ ತಮಾಲಮಗಮೆಲ್ಲಂ ನೀಲಶೈಲಂ ನದೀ ।
ವ್ರಜಮೆಲ್ಲಂ ಯಮುನಾಜಲಂ ಕಮಲಮೆಲ್ಲಂ ಕೋಮಲೇಂದೀವರಂ ॥
ಪ್ರಜೆಯೆಲ್ಲರ್ ಪುರುಷೋತ್ತಮರ್ ದೆಸೆಗಳೆಲ್ಲಂ ಕೃಷ್ಣವತ್ಮಾರ್ಶೆಯಿಂ ।
ದು ಜಗಂ ಬಣ್ಣಿಸಲುರ್ವಿ ಮುಮ್ಮಿರ್ ಪದೆಪಿಂ ಪರ್ವಿತ್ತು ಸರ್ವೋರ್ವಿಯಂ

1. ಸವಿಯೆಂ. ಕ, ಗ.

ಬಗಿದು ಪುಗಲರಿದು ನೋಡ ।
ಲ್ಬಗೆಯಲ್ ಕಣ್ ಸಲ್ಲದೊಯ್ಯನಡಿಯಿಡೆ ಚಿತ್ತ ॥
ಕ್ಕೊಗೆಗುಮತಿಭೀತಿಯೆನಲು ।
ವಿಗೆ ದಟ್ಟೈಸಿರ್ದುದಂಧಕಾರಾಕಾರಂ ॥ ೪೦

ಭುವನಕ್ಕೆ ಲೋಚನೇಂದ್ರಿಯ ।
ವಿವಿಧವ್ಯಾಪಾರಮಿನ್ನದೇಕೆನಲಾಕಾ ॥
ಶವನವಸಿಯುನೆಣ್ದೆಸೆಯುಂ ।
ಕವಿದೆಸೆದತ್ತಂಧಕಾರಮುದ್ಭುತಘೋರಂ ॥ ೪೧

ನೋಡುವೊಡಂಜನಗಿರಿಯಾ ।
ಸಾಡುವೊಡದು ಲವಣವಾರ್ಧಿ ಸಕಲಜನಂ ಕೂಂ ॥
ಡಾಡುವೊಡೆ ರವಿಶಶಾಂಕರ ।
ನೋಡಿಸಿ ಪೆಸರ್ವಡೆದ ತಿಮಿರಮೇನೊಪ್ಪಿದುದೋ ॥ ೪೪

ಸೋಂಕಿಂ ಸ್ಥಾವರಮುಂ ಪೂ ।
ತಂ ಕೇಳ್ವುದಱಿಂದೆ ಜಂಗಮಂಗಳನಱಿವರ್ ॥
ತಾಂ ಕಾಣ್ಗೆಗರಿದೆನಲ್ ಬಗೆ ।
ಗೇಂ ಕಡುನಂದೈಸಿ ನಿಂದುದೋ ಘನತಿಮಿರಂ ॥ ೪೪

ಅಂತು ದುಸ್ತರಮಪ್ಪ ಕತ್ತಲೆ ಪರ್ಬಿರಲಿತ್ತಲ್ ವಸುಮತೀದೇವಿ ಮರಣಾರ್ಥಮರವನೆಯಂ ಪೊಱಮಟ್ಟು

ವನದೇವತೆ ವನದೊಪ್ಪಮ ।
ನನುನಯದಿಂ ನೋಳ್ಪೆನೆಂದು ಬಂದಳೊ ಪೇಳೆಂ ॥
ದೆನೆ ರಾತ್ರಿಯೊಳೊರ್ಬಳೆ ಕಾಂ ।
ತನ ಸಹಗಮನಕ್ಕೆ ಠಾವನಱಸುತೆ ಬಂದಳ್ ॥ ೪೫

ಅಂತಱಸುತ್ತುಂ ಗಹನಗಹ್ವರದೊಳ್ ವಿಹ್ವಲೆಯಾಗಿ ಬರುತ್ತುಂ

ದೆಸೆಯೆಂಟುಂ ಪಿರ್ಗ್ಗಸುತ್ತಗ್ಗಳಮೆನೆ ಪರೆದಿರ್ಪಳ್ಳಿಗೊಂಬೇಟ್ಟಿಯಿಂದಾ ।
ಗಸಮಂ ಪೊತ್ತಿರ್ಪ ಮೇಲ್ಗೊಂಬಿನಶಶಿಕಿರಣಂ ಬಾರಿಸಲ್ ಬಾರದೆಂಬಂ ॥
ತೆಸೆವ ಚ್ಛಾಯಾವಿಲಾಸಂ ತುಱುಗಿದ ತನಿವಣ್ ಸೈತು ಪಾತಾಳಮಂ ಭೇ ।

ದಿಸೆ ಕಾಲೂಱಿಪರ್ ಬೇಗೆರ್ಗಳ್ ನಟಿಸುವ ವಟಭೂಜಾತವಂ ಕಾಂತೆ
ಸಾರ್ದಳ್ ॥ ೪೬

ಅಂತು ಸಾರ್ದಿದೆನ್ನ ಬಗೆಗೆ ತಕ್ಕ ಠಾವೆಂದು ವಟವಿಟಪಿಯ ಕೆಲದ ಕಿ
ಱುಗೊಂಬಿನೊಳ್ ಸೆಜಗಂ ಕಟ್ಟಿಯುಱುಲಿನಿಕ್ಕಿಕೊಳಲುಜ್ಜುಗಿಸುತ್ತುಮಿರಲಿ
ತ್ತಲರಸಂ

ತಂಗಾಳಿ ಬೀಸಲಾಕ್ಷಣ ।
ಮುಂಗದೊಳಸು ಪಸರಿಸಲ್ಕೆ ನೃಪನೆಚ್ಚತ್ತಾ ॥
ವಂಗೆ ಪ್ರಗಲರಿದೆನಿಪ್ಪ ವ ।
ನಾಂಗಣದತ್ತೇಕೆ ಬಂದೆನೆಂಬವಸರದೊಳ್ ॥ ೪೭

ಆಂ ತನುವಂ ನಿವೇದಿಪೆನೆಲೇ ವನದೇವತೆಯೆನ್ನ ಜನ್ಮಜ ।
ನ್ಮಾಂತರದಲ್ಲಿ ಕೀರ್ತನಗೆ ನಚ್ಚಿನ ಮೆಚ್ಚಿನ ಮಾಗಧೇಶ್ವರಂ ॥
ಕಾಂತನೆಅಪ್ಪನಕ್ಕನುತೆ ಗೋಣ್ಗುಱಿಲಿಕ್ಕಿ ಕೊಳುತ್ತುಮಿರ್ಪ ತ ।
ತ್ಕಾಂತೆಯ ಮಾತುಗೇಳಲಿನಿಸಾದುದು ಭೂಪತಿಗಾವನಾಂತದೊಳ್ ॥ ೪೮

ಅದಂ ಕೇಳ್ದು

ಈರಾತ್ರಿಯೊಳಂಜದೆ ಕಾಂ ।
ತಾರಕ್ಕೆಯ್ತಂದಳಾವಳೆಂಬರಸನ ಗಂ ॥
ಭೀರರವಮುಂಕ್ಮೆ ವಸುಮತಿ ।
ನಾರಿಯುದಂ ಕೇಳ್ದು ನೋಡಿದಳ್ ನಾಲ್ದೆಸೆಯುಂ ॥ ೪೯

ಅಂತು ಪೂರ್ವಪರಿಚಯಮಪ್ಪ ಗಂಭೀರಧ್ವನಿಯಂ ವಸುಮತಿ ಕೇಳ್ದಾ
ದೆಸೆಯುಂ ನೋಡಿ

ಈರವಮೆನ್ನರಸನ ಗಂ ।
ಭೀರಧ್ವನಿಯಂತೆ ತೋರ್ಪುದಲ್ಲದೊಡೇಂ ಘೋ ॥
ರಾರಣ್ಯದೊಳಗೆ[1]... ।
...[1]ಧ್ವನಿಯಾದೊಡಂ ಪರೀಕ್ಷಿಪೆನೆಂದಳ್ ॥ ೫೦

1. ದಿಪ್ಪ ಶರೀರೊರುಧ್ವನಿ. ಕ ; ಯಾನೆಸದಿರ್ಪಾರಧ್ವನಿ. ಗ.

ಪತಿಚಿಬದಿಂದೀತಾಣದೊ ।
ಳೀತನುವಂ ಬಿಡುವೆನೆಂಜಲೇಕೆನಗಂತಾ ॥
[1]ಭೂತ[1]ಪ್ರೇತಂಗಳೆನು ।
ತ್ತಾ ತರುಣಿ ತದೀಯುರವದ ದೆಸೆಗೈತಂದಳ್ ॥ ೫೧

ಅಂತು ಬಂದು ನೋಳ್ಪನಂ
ನೀರ್ಗೆಳಸಿ ತೇಂಕುವಶ್ವಂ ।
ಬೇರ್ಗಳ್ ಪರಿದಿರ್ಪ ಬೀೞಲೊಳ್ ಸಿಲ್ಕಿದ ಬ ॥
ಳ್ದೇರ್ಗದೆಯ ಘಾತಿಯಿಂ ನಸು ।
ಸುರ್ಗಿದ ತನುವೆಸೆವ ನೃಪನನವಳೀಕ್ಷಿಸಿದಳ್ ॥ ೫೨

ಅಂತು ಮಸುಳ್ದು ಮೂರ್ಛೆಯನೆಯ್ದಿದ ನೃಪನ ವರೂಥಮನಾಕೆಯು
ಯ್ದಲೊಡಂ,

ತಲೆದೋಱಿ ಪುಳಕವೆಲರ್ಗ ।
ಳ್ಗಳೊಳಾನಂದಾಶ್ರು ಪೊಣ್ಮೆ ದಟ್ಟೈಸಿದ ಕ ॥
ಱ ಲೆಯಾದೊಡವೇಂ ಚಿತ್ರೋ ।
ಜ್ಜ್ವಳವೋ ಹರಸಾತಿರೇಕಮುಱಿಪಿತ್ತಾಗಳ್ ॥ ೫೩

ಅಂತು ಶಂಕಿಸುವುದುಂಟಾದೊಡಂ ಸಾತ್ವಿಕಭಾವಂ ಶಂಕಿಸದೆ ಮುಂಚು
ವರಿದು ಪತಿಯೆಂಬುದನಱಿಪುತ್ತಿರೆ ಬಂದು ಕೋಮಳಕರದಿಂ ಭೂಮಿಪನ
ಸಕಲಾವಯವಂಗಳನಂಟ ನೋಡಿ,

ಎನ್ನಂತೆ ಧನ್ಯಳಾವಳ ।
ಳೆನ್ನಧಿಪತಿ ತಪ್ಪದೆನ್ನ ನೋಂಪಿಯ ಫಲಮೇ ॥
ಸನ್ನಿದವಾಯ್ತೆನುತಂಗನೆ ।
ತನ್ನರಸನನೊಲ್ದು ಕಂಡು ಹರ್ಷವನಾಂತಳ್ ॥ ೫೪

ಅಂತು ಹರ್ಷವಾರ್ಧಿಯೊಳ್ ಮುೞುಂಗಿ ಇಲ್ಲಿದೋರ್ಡೇನಿರ್ಪುದು, ಆ
ರಸನಂ ನಮ್ಮಪುರಕ್ಕೆ ಕೊಂಡು ಪೋಪಂತೆ ಮಾಡಲ್ವೇೞ್ಪುದೆಂದು

1. ಯಾತ. ಕ.

ಅಡಿಗೆಱವರ್ ಬೆರ್ಚುತ್ತುಂ ಕ |
ಣ್ಗಿಡಿವೆಳಗಿಂ ಮರ್ಬನೋಡಿಸುತ್ತುಂ ಮನದೊಳ್ ||
ಗುಡಿಗಟ್ಟುತ್ತಿರುಳೊರ್ಬಳೆ |
ನಡೆತಂದಳ್ ಕಾಂತೆ ರತ್ನಶೈಲಕ್ಕಾಗಳ್ || ೫೫

ಶೋಕಾವೇಶಂ ಹರ್ಷೋ |
ದ್ರೇಕಂ ಭಯರಸಮನೊತ್ತಲಪ್ಪುದಱಿಂ ಪು ||
ತ್ರಾಕಾನನನಂ ಕಳೆದವ |
ಳೇಕಾಕಿನಿಯಾಗಿ ರತ್ನಗಿರಿಗೆಯ್ತಂದಳ್ || ೫೬

ಅಂತು ಬಂದು ರತ್ನಗಿರಿಯಂ ಪೊಕ್ಕೆಲ್ಲರಂ ಕರೆಯಿಸಿ

ಇಂದುಕಳೆಯಾಂತರಣ್ಯದೊ |
ಳೊಂದಾಲದ ಮರದ ಬೀೞಲೊಗ್ಗಿನೊಳರಸಂ ||
ಸ್ಯಂದನಯುತನಲ್ಲಿರ್ದಪ |
ನೆಂದೆಲ್ಲರ್ಗು*ಸಿರ್ದಳಬಲೆ ಸಂಭ್ರಮದಿಂದಂ || ೫೭

ಅಂತುಸಿರ್ದುದುಂ ಸಚಿವರ್ ಸಂತಸಂಬಟ್ಟು ಪುರಜನಪರಿಜನಂಬೆರಸು,

ಜ್ಯೋತಿರ್ಮಯಮಾಯ್ತನಲವ |
ನೀತಳವೆಂಬಂತೆ ಮೆಱೆಯೆ ಕರದೀಪಮಸಂ ||
ಖ್ಯಾತಂ ಜನವೈತಂದ |
ತ್ತಾತರುವಿನೊಳಿರ್ದ ನೃಪನನಿದಿ*ರ್ಗೊಳ್ಳಲೊಲವಿಂ || ೫೮

ಅಂತು ಪೊಱಮಟ್ಟು

ಶ್ರುತಿನಿಕರದಂತೆ ಶಾಖಾ |
ನ್ವಿತದಿಂ ಸೇನಾಗ್ರದಂತೆ ನಾನಾಪತ್ರೋ |
ನ್ನತಿಯಿಂ ನರರಂತೆ ಪಯ |
ಸ್ಸ್ಥಿತಿಯಿಂ ಮೆಱೆದಿರ್ಪ ವಟಕುಜಕ್ಕೆಯ್ತಂದರ್ || ೫೯

ಬೆಂಬದಡವಿಯೊಳಳಲ್ಗತಿ ।
ಸಂಜೆಮುಗಿಲ್ದುಱುಗಲಂತೆ ರುಧಿರಾರುಣದಿಂ ॥
ರಂಜಿಸುತಿರ್ಪನನೆಯ್ದಿ ।
ತ್ತಂಜಲಿಹಸ್ತಂಗಳಿಂದಮಭಿಜನಮನಿತುಂ ॥ ೬೦

ಅಂತು ಸಚಿವರ್ ಬೆರಸು ಸರ್ವಜನಂ ಬಂದು,

ಗದ್ಗದಕಂಠಂ ನವರೋ ।
ಮೋದ್ಗಮಂತನು ಬಾಷ್ಪಲುಳಿತಲೋಚನನನಿತಂ ॥
ತರ್ಗತಚಿಂತಂ ರಂಜಿಸೆ ।
ಸದ್ಗುಣಿಯೆನಿಸರಸನಂ ನಮಸ್ಕರಿಸಿದರ್ಕರ ॥ ೬೧

ಅಂತು ನಮಸ್ಕರಿಸಿ ರಾಜಹಂಸರಾಜನಂ ಪರಿವೇಷ್ಟಿಸಿದ ತರಳತಾರಾನಿಕಾಯದಂತೆ ಪುರಜನಂ ಪರಿಜನಂ ಬಂದಾಲದ ಬೀೞಲೊಳ್ ಸಿಕ್ಕಿದ ಗಾಲಿಯಂ ತೆಗೆದರಸನಂ ರತ್ನಾಚಲಕ್ಕೆ ಕೊಂಡು ಬಂದು ಸಕಲೌಷಧಿಗಳಿಂ ಶಸ್ತ್ರವಣಮಂ ಮಾಣಿಸಲ್ ಬೞಿಕಂ

ಅಪಜಯದ ಚಿಂತೆ ಚಿತ್ತ ।
ಕ್ಕುಪತಾಪಮನೆಸಗೆ ಪೋಗಿ ಗುರುಸನ್ನಿಧಿಯೊಳ್ ॥
ತಪಮಂ ಚರಿಸುವೆನೆಂದಾ ।
ನೃಪನೆಯ್ದಿದನೊರ್ಮೆ ವಾಮದೇವರ ಗಿರಿಯಂ ॥ ೬೨

ಅಂತು ರಾಜಹಂಸಂ ತನ್ನ ಕುಲಗುರುವಪ್ಪ ವಾಮದೇವರಿರ್ಪ ಶಾಂತಾಚಲಕ್ಕೆ ಬಂದು ತದಾಶ್ರಮಮಂ ಪೊಕ್ಕು

ನಸುಮುಗಿದಕ್ಷಿ ನಾಸಿಕದೊಳೊಂದಿರೆ ನಿಶ್ಚಲಚಿತ್ತವೃತ್ತಿ ನೀ ।
ಳ್ದಸಿತಜಟಾಳಿ ನುರ್ಗಿದ ಬಹಿರ್ವಿಷಯಸ್ಥಿತಿ ನೂತ್ನಮೂರ್ತಿ ನೇ ॥
ರ್ಪಸೆದಿರೆ ನೈಷ್ಠಿಕವ್ರತಮನೋವಿ ಜನೌಘದ ಕಣ್ಗನಂಗಜಾ ।
ಪಸನ ಪ್ರೊಲಿದ ತನ್ಮುನಿಗೆ ವಂದಿಸಿದಂ ಮಗಧಕ್ಷಿತೀಶ್ವರಂ ॥ ೬೩

ಅಂತು ವಂದಿಸಿ ಕೈಗಳಂ ಮುಗಿದು ನಿಂದಿರ್ಪುದುಂ ವಾಮದೇವರ್ ಕಾರುಣ್ಯಕಟಾಕ್ಷದಿಂ ನಿರೀಕ್ಷಿಸಿ ಪರಸಿಯರಸಂ ಬಂದ ಕಾರ್ಯಮೇನೆಂದು ಬೆಸ

ಗೊಳ್ವುದುಮಾತಂ ತನಗಾದಪಜಯವೃತ್ತಾಂತಮಂ ಪೇೞ್ದು ತಪಕ್ಕುಪದೇಶಂಗುಡಿಮೆಂಬುದುಮಾಮುನಿ ತನ್ನೊಳಿಂತೆಂದಂ:—

ಪೂಜಾಭಂಗಂ ತಪಸಿಗೆ ।
ತೇಜೋಭಂಗಂ ಬುಧರ್ಗೆ ಸಂಗರಭಂಗಂ ॥
ರಾಜರ್ಗೆ ಮರಣದಿಂ ಮಿಗಿ ।
ಲೀಜನ್ಮದೊಳೆಂದು ಮುನಿ ಮಗುೞ್ದಿಂತೆಂದಂ:— ॥ ೬೪

ಎಲೆಯರಸ ತಪದಿಂ ಕ್ಷಪಿಸಿ ರಿಪುವಂ ಸಾಧಿಸುವುಪದೇಶಮುಪದೇಶದಂ; ಅದಂ ಬಿಟ್ಟು

ಎಲ್ಲಾ ತಪದಿಂದಧಿಕಂ ।
ಬಲ್ಲರ್ಗೆ ಗೃಹಸ್ಥಮಾರ್ಗಮಂತದಱಿಂದೆಲೆ ಭೂ ॥
ವಲ್ಲಭ ನಿನ್ನಯ ಪುರದೊಳ್ ।
ಸಲ್ಲೀಲೆಯೊಳಿರ್ಪುದೆಂದು ಮುನಿಪತಿ ಪೇೞ್ದಂ ॥ ೬೫

ಎಂದು ಪೇೞ್ವುದುಂ ದುಮ್ಮಾನಂ ತೀರ್ದೊಡೆನಗೆ ರಿಪುಜಯೋಪಾಯಮಾವುದೆಂದರಸಂ ವಾಮದೇವರಂ ಬೆಸಗೊಳೆ

ಸುಮತಿ ವಸುಮತಿಯ ಗರ್ಭದ ।
ಕುಮಾರಕಂ ಸಕಲವೈರಿಯುಂ ತನ್ನ ವರಾ ॥
ಕ್ರಮದಿಂದೆ ಗೆಲ್ದು ಮತ್ತಂ ।
ಸಮಸ್ತದೇಶಕ್ಕೆ ಮುಖ್ಯನಪ್ಪನಮೋಘಂ ॥ ೬೬

ಎಂದಾಗಾಮಿಕಾರ್ಯಮಂ ಪೇೞ್ದು ಮುನಿಪಂ ಜನಪನಂ ಬೀೞ್ಕೊಟ್ಟೊಡೆ ಆತಂ ಮುನಿವಾಕ್ಯಂ ತಪ್ಪದೆಂದು ಪ್ರೀತಿಯಿಂ ತನ್ನ ರತ್ನಾಚಲದೊಳಿರ್ದ ಜನಲೋಕಮಂ ಪುಷ್ಪಪುರಕ್ಕೆ ತಂದು ಪ್ರಹಾರವರ್ಮನಂ ಮನ್ನಿಸಿ ನಿಜರಾಜ್ಯಕ್ಕೆ ಕಳುಪಿ ಸುಖಸಂಕಥಾವಿನೋದದಿಂದಿರಲ್, ಇತ್ತ

ಚಾದಗೆ ಕಾಮರ್ಗಿಲ್ವನಿಯನುಜ್ಜ್ವಲವರ್ಣಚಕೋರನೊಲ್ದು ಚಂ ।
ದ್ರೋದಯಮಂ ರಥಾಂಗಮನಿಶಂ ಪಗಲಂ ಪಿಕರಾಜಿ ಚೈತ್ರಮಾ ॥

ಸಾದಿಯನೆಯ್ದೆ ಪೂರ್ವ ತೆಱದಿಂ ನಿಜಕಾಂತೆ ಸುಖಪ್ರಸೂತೆಯು ।
ಪ್ಪಾದಿನನಂ ಕರಂ ಪಡೆದು ಪಾರ್ದೆಸೆದಂ ನೃಪರೂಪಮನ್ಮಥಂ ॥ † ೬೭

ಅಂತಿರ್ಪುದುಂ ವಸುಮತಿ ದೇವಿಗೆ ನವಮಾಸಂ ತುಂಬಿ

ಇಂದುವರಾಸುಧಾಂಬುನಿಧಿ ತಣ್ಗದಿರಂ ಶಶಿಲೇಖೆ ಚೈತ್ರನಂ ।
ನಂದನಲಕ್ಷ್ಮಿ ಕಾಮಶರಮಂ ಲತೆ ಪೂರ್ಣಸರಂ ಮರಾಳನಂ ॥
ಮಂದಸಮೀರನಂ ಮಳಯಮೇಖಲೆ ಪೆತ್ತವೊಲಾಕೆ ಪೆತ್ತಳಾ ।
ನಂದನನಂ ಕುಮಾರಹರಿಚಂದನನಂ ಸುಚರಿತ್ರವೃಂದನಂ ॥ ೬೮

ಜನಮಿತ್ರಂ ಪ್ರಾವರ್ರಾಜಂ ಭುಜಶಿಖರಲಸತ್ಸಾರ್ವಭೌಮಂ ಜಗನ್ಮೋ
ಹನಸೌಮ್ಯಂ ಲೋಕಜೀವಂ ಕವಿಕುಲವಿಭವಂ ರಾಜಹಂಸಾತ್ಮಜಂ ನ ॥
ಮ್ಮನಿಬಗೀರ್ತಂ ಪ್ರಿಯಂ ಮತ್ಸಮನೆನುತೆ ಸಮಸ್ತಗ್ರಹಂ ತತ್ಕುಮಾರಂ।
ಗೆ ನಿತಾಂತಂ ಪ್ರೀತಿಯುಂ ಸ್ಫೈತಿಸಗುವೆವೆನಲಿನ್ನಾತನಿಂ ಖ್ಯಾತನಾವೊಂ॥೬೯

ಅಂತು ಸಮಸ್ತಗ್ರಹಾನುಗ್ರಹವಿಗ್ರಹಂ ಪುಟ್ಟಿರ್ಪುದುಂ ಪುರೋಹಿತರ್ ಬಂದು

ಅರಸಾ ನಿನ್ನಮನೋರಥ ।
ಮರಿಗಳ ಹೃಚ್ಛಲ್ಯಮಭಿಜನಂಗಳಭೀಷ್ಟಂ ॥
ಗುರುಜನದ ಕಾವ್ಯಫಲಮುಂ ।
ಕುರಿಸಂದದಿನುದಯನಾದನಾತ್ಮತನೂಜಂ ॥ ೭೦

---

† ಈ ಕಡೆ ''ಗ'' ಪುಸ್ತಕದಲ್ಲಿ ಮಾತ್ರ — ಇದು ನಿಖಿಲಬುಧಜನಮನೋವನಜವನ ......ಅಭಿನವದಶಕುಮಾರಚರಿತೆಯೊಳ್ ಮಗಧೇಶ್ವರಮಾಳವರಾಜ ಯುದ್ಧಪ್ರಕರಣಂ ದ್ವಿತೀಯಾಶ್ವಾಸಂ ಸಮಾಪ್ತಂ.

॥ ತೃತೀಯಾಶ್ವಾಸಂ ॥

ಶ್ರೀಧರಣೀಮುಖತಿಲಕಂ ।
ಸೌಧಾಗ್ರದಕಳಶಮೆನಲ್ವಸುಮತಿಯುದರದೊ ॥
ಳಾದಯುವಾಂಧಿಯುರಿನೃಪ ।
ಸೂದನಜನಿಸಿವನಭಂಗವಿಕ್ರಲಭೃತ್ಯಂ ॥

ಮೇಲಣ ಕಂದಪದ್ಯವು ಈ ಗ್ರಂಥಕರ್ತನದಲ್ಲವೆಂದು ತೋರಿ ಬರುವುದರಿಂದಲೂ, ಸಂಸ್ಕೃತ ದಶಕುಮಾರಚರಿತೆಯಲ್ಲಿ ಇಲ್ಲಿ ಅಧ್ಯಾಯವಿಭಾಗವಿಲ್ಲದರಿಂದಲೂ, ಈ ಭಾಗವನ್ನು ಕೆಳಗೆ ಕೊಟ್ಟಿದೆ.

ಎಂದು ಪುರೋಹಿತರ್ ಪೇೞ್ದುದುಂ

ಗುಡಿಯುಂ ಕಟ್ಟಿರೊ ಭೇರಿಯುಂ ಪೊಯಿಸಿರೋ ಕಾರಾಗೃಹಾಂತಸ್ಥರಂ ।
ಬಿಡಿರೋ[1] [ಮೌಹೂರ್ತಗಣಕಾಳಿಯುಂ] ಕರೆಯಿರೋ ಬೇೞ್ಪಿಗರ್ ಬೇೞ್ಪೆಷ್ಟ್ಯಮಂ ॥
ಕುಡಿರೋ ಕುಂಕುಮಗಂಧದೋಕುಳಿಗಳಂ ಪೊಯ್ವೊಯ್ಯನುತ್ತುತ್ಸವಂ ।
ಬೞೆಯುತ್ತಾಕ್ಷಣಮೆಯ್ದಿದಂ ನೃಪವರಂ ತತ್ಸೂತಿಕಾಗೇಹಮಂ ॥ ೭೦

ಬಾಗಿಲೊಳೆಲ್ಲರಂ ನಿಲಿಸಿ ಬಂದು ನಿಜಾನ್ವಯರತ್ನನಂ ಮಹಾ ।
ಭಾಗನನಾತ್ಮಸಂಭವನನೊಪ್ಪಿರೆ ಕಂಡನುರಾಗದಿಂ ಸುಧಾ ॥
ಸಾಗರದೊಳ್ ಮುಳುಂಗಿ ಪೊಸತೆಂದು ವಿಳಾಸಿನಿಯರ್ ಪಸಾಯಮಂ ।
ಬೇಗಬೊಳೀೞ್ದುಕೊಳ್ವುಡವರ್ಗೆ*ಂನಗುತೊಪ್ಪಿದನೋ ನೃಪಾಲಕಂ ॥ ೭೧

ಅಂತು ಸಂತೋಷಂ ಮುಖದೊಳ್ ತುಳುಂಕಲರಸಂ ತತ್ಕಾಲೋಚಿತ ಕರ್ಮಮಂ ಕೂರ್ಮೆಯಿನೆಸಗಿ ಸಕಲದಾನದಿಂ ಸರ್ವರಂ ಸನ್ಮಾನಂಗೆಯ್ದು ದ್ವಾದಶದಿನದೊಳ್ ರಾಜವಾಹನನೆಂದು ನಾಮಕರಣಮಂ ಮಾಡಲ್ ಬೞಿಯಂ

ಎಳವೆೞೆ ದಿವಸಕ್ರಮದಿಂ ।
ಬಳೆವಂತಿರೆ ಮಾತೃಪಿತರ ಹೃದಯಾಂತರದೊಳ್ ॥
ಬಳೆಯುತ್ತಿರೆ ಸಂತೋಷಂ ।
ಬಳೆಯುತ್ತಿರ್ದಂ ನೃಪಾತ್ಮಜಂ ಚೆಲ್ವೆಸೆಯಲ್ ॥ ೭೨

ಬೆಂಡೋಲೆ ಮುಱುಹು ಮಾಗಾಯ್ ।
ಪೆಂಡೆಯುಮರಳೆಲೆಯೆಸಲ್ವ ಕಿಱುಪುಲಿಯುಗುರ್ಗಳ್* ॥
ಗೊಂಡೆಯುದುಡಿದಾರಂ ಭೂ ।
ಮಂಡಲಪತಿಯಾತ್ಮಜಂಗೆ ರಂಜಿಸುತಿರ್ಕುಂ ॥ ೭೩

॥ ಉತ್ಸಾಹವೃತ್ತ ॥

ಚೆಂದದಿಂದೆ ಚೆನ್ನ ಪೊನ್ನ ಗೆಜ್ಜೆಗಟ್ಟಿ ರಂಜಿಪೊಂ ।
ದೊಂದು ಕಾಲನಾಡಿಸೈ ಕುಮಾರ ಎಂದು ಕಾಂತೆಯರ್ ॥

1. ಮುಹೂರ್ತಿಕರ್. ಕ, ಗ.

ಮುಂದೆ ನಿಂದು ತಪ್ಪಳಿಕ್ಕಿಯಾಡಿಸಲ್ ವಿಲಾಸದಿಂ ।
ಮಂದಹಾಸಮಂ ನೆಕ್ಕಿ ಪೊಣ್ಮಲಾಡಿದಂ ಕುಮಾರಕಂ ॥ ೭೪

ಅಂತೊಪ್ಪುವ ಕುಮಾರನ ಬಾಲಲೀಲೆಯಿಂದರಸಂ ಸುಖಂಬಡೆಯುತಿರ್ಪುದುಂ

ಪತಿಹಿತವರೆನಿಪ ಸಚಿವರ ।
ಸತಿಯರ್ ನಾಲ್ವರ್ ಮಹೋತ್ಸವಂ ಮಿಗೆ ದೈವ ॥
ಸ್ಥಿತಿಯಿಂ ಪುತ್ರರನೆರಡೆರ ।
ಡು ತಿಂಗಳಿಂ ಹಿಂಚೆ ಪಡೆದರನುನಯಮೆಸೆಯಲ್ ॥ ೭೫

ಅಂತು ನಾಲ್ವರ್ ಸಚಿವರ್ ತಂತಮ್ಮ ಪುತ್ರರ್ಗೆ ಜಾತಕರ್ಮಮುಂ ಮಾಡಿ ದ್ವಾದಶದಿನದೊಳ್ ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ವಿಶ್ರುತನೆಂದು ನಾಮಕರಣಮುಂ ಮಾಡಿ,

ಹಿಂದಣಪರಾಧಮದು ತ ।
ಮ್ಮಿಂದಂ ಪರಿಹರಿಸಲೆಂದು ಮಗಧೇಶಂಗಾ ॥
ನಂದದಿನಿತ್ತರ್ ತಮ್ಮಯ ।
ನಂದನರಂ ನಾಲ್ವರಂ ಮನಂ ಮಿಗೆ ಸಚಿವರ್ ॥ ೭೬

ಅಂತಿತ್ತ ಕುಮಾರರ್ವೆರಸು ಕುಸುಮಾಸ್ತ್ರಂ ಕುಸುಮಬಾಣಂಗಳಂ ಪೊರೆವಂತೆ ಪೊರೆಯುತಿರ್ದು

ಧನಿಕಂ ಸೌಜನ್ಯಮುಂ ಯೌವನಸುಭಗೆಲಸನ್ಮೂರ್ತಿ ಸದ್ವಿದ್ಯೆಯುಂ ಭೋಗಿ ನಿತಾಂತಾರೋಗ್ಯಮುಂ ಭೂತಳಪತಿ ವಿವಿಧೌದಾರ್ಯಮುಂ ತ್ಯಾಗಿ ಸತ್ಪಾತ್ರನಿಧಾನಪ್ರಾಪ್ತಿಯುಂ ತಾಮೆಸೆವತಿಶಯದಿಂ ಪೆತ್ತವೋಲ್ ಪೆತ್ತನಾನಂ ।
ದನಿವಾಸೋಲ್ಲಾಸದಿಂ ನಂದನರನಧಿಕರಂ ರಾಜಹಂಸಕ್ಷಿತೀಶಂ ॥ ೭೭

ಅಂತಾನಂದಸಂದೋಹಂ ಸಂಪೂರ್ಣಮಾಗಿರ್ಪನಮಿತ್ತಕ್ ವಾಮದೇವರ ಶಿಷ್ಯಂ ವಿದ್ಯಾನಿಧಿಯೆಂಬನೊಂದು ದಿವಸಂ,

ನಿರ್ಭೇದ್ಯಚಿತ್ತನಿಂದ್ರಹ ।
ವಿಭಾಗಪ್ರದನಶೇಷವಾಙ್ಮನಿಶಿಷ್ಯಂ ॥

ದರ್ಭೇಂಧನಕ್ಕೆ ಪೋಗು ।
ತ್ತರ್ಭಕನಂ ತಳೆದ ವೃದ್ಧಸತಿಯಂ ಕಂಡಂ ॥ ೩೮

ಎಲೆ ವೃದ್ಧೆ ಘೋರಕಾನನ ।
ದೊಳೊರ್ಬಳೆಂ ತೊಳಲುತಿರ್ಪೆ ನೀನಾರ್ಗೆ ಕರ ॥
ಸ್ಥಳದ ಶಿಶುವಾವನೆಂದೊಡೆ ।
ತಳವೆಳಗಾಗುತ್ತೆ ಪೇೞಲುದ್ಯತೆಯಾದಳ್ ॥ ೩೯

ಅದೆಂತೆಂದೊಡೆ—

ರಿಪುರಾಜವ್ರಾತನಾನಾಮಣಿಮುಕುಟರುಚಿಭ್ರಾಜಿತಾಂಘ್ರಿದ್ವಯಂ ದಿ ।
ಗ್ದ್ವಿಪಸತ್ವಂ ಮೇರುಶೈಲೋಪಮಭುಜಶಿಖರಂ ಗೋತ್ರಭೃತ್ಸಾಮ್ಯಕಲ್ಯಾ
ಣಪರಂ ಸರ್ವಾವನೀಮಂಡಲಪತಿ ಸಮರಾರಂಭಕಾಮಾರಿ ಸತ್ಪು ।
ಷ್ಪಪುರೇಶಂ ರಾಜಹಂಸಂ ಮಗಧವಿಷಯಕಾಂತಾಮನೋಜೇವಿಶೇಶಂ ॥

ಆತಂಗೆಸೆವಂ ಸಚಿವಂ ।
ನೀತಿವಿದಂ ದೀರ್ಘದರ್ಶಿ ರತ್ನೋದ್ಭವನೆಂ ॥
ಬಾತಂ ವ್ಯವಹಾರಪರ ।
ಪ್ರೀತಿಯಿನಂಭೋಧಿಪರಿಸರಕ್ಕೈತಂದಂ ॥ ೪೧

ಅಂತು ಸಮುದ್ರಮಧ್ಯದ ಸುವರ್ಣದ್ವೀಪಮನೆಯ್ದಿ ರತ್ನದತ್ತನೆಂಬ ವ್ಯವಹಾರಿಯ ಸಖ್ಯಂಮಾಡಿರ್ಪುದುಮಾತಂ ರತ್ನೋದ್ಭವನ ಸೌಜನ್ಯಸನ್ಮಾರ್ಗಕ್ಕೆ ಸಂತಸಂಬಟ್ಟು ತನ್ನ ಮಗಳ್ ಹೇಮಪ್ರಭೆಯಂ ಕರೆಸಿ,

ಶುಭದಿನಮುಹೂರ್ತದೊಳ್ ನಿಜ ।
ವಿಭವಂ ಕೈಗಣ್ಮೆ ಸಚಿವರತ್ನೋದ್ಭವನೆಂ ॥
ಬಭಿನವಮೂರ್ತಿಗೆ ಹೇಮ ।
ಪ್ರಭೆಯಂ ಗುಣಿ ರತ್ನದತ್ತನಿತ್ತನಲಂಪಿಂ ॥ ೪೨

ಅಂತು ರತ್ನದತ್ತಂ ತನ್ನ ಮಗಳಂ ಕುಡುವುದುಮಾತನಲ್ಲಿ ಕಿಱಿದುದಿನ ಮಿರ್ಪುದುಂ ಹೇಮಪ್ರಭೆಯುಂತರ್ವತ್ನಿಯಾಗೆ ರತ್ನೋದ್ಭವಂ ರತ್ನದತ್ತಂಗಿಂತೆಂದಂ:—

ಪಿರಿದು ದಿನಮಾಯ್ತು ಬಂದಿ ।
ಮ್ಮರಸನ ಸಾರಣ್ಗೆ ಪೋಗವೇೞ್ಪುದುವದಱಿಂ ॥
ದಿರದೆನ್ನಂ ಕಳಿಪುವುದೆಂ ।
ದುರುಮುದದಿಂ ಪೇೞ್ದಿನತ್ತ ಮುನಿಕುಲತಿಲಕಾ ॥ ೮೩

ಅಂತು ಪೇೞ್ವುದುಂ ರತ್ನದತ್ತಂ ರತ್ನೋದ್ಭವಂಗೆ ರತ್ನಖಚಿತಾಭರಣ ದಿವ್ಯವಸ್ತ್ರಮುಂ ಕೊಟ್ಟು ಹೇಮಪ್ರಭೆಯು ಗರ್ಭದರ್ಭಕಂಗೆನ್ನಂ ದಾದಿಯಾಗಿ ಕಳುಪಲಿಂತು ಮೂವರುಂ ಬಂದು ಬಹಿತ್ರಮನೇಱಿ ಬರುತಿರ್ಪನ್ನೆಗಂ ಸಮುದ್ರಮಧ್ಯದಲ್ಲಿ

ಪಡಗೊಡೆಯೆ ಪಲಗೆಯೊಂದಂ ।
ಪಿಡಿದಬಲೆಯುನೆನ್ನ ಕಾಂಕೆಯೊಳ್ ತಳ್ಕಿಸಿ ಕೊಂ ॥
ಡೆಡೆವಿಡದೆ ಪುಣ್ಯದಿಂದಂ ।
ತಡಿಗೆಯ್ದಿದೆನೆಯ್ದೆ ಕುಳ್ಳಿರಿಪಾರ್ಕ್ಷಣದೊಳ್ ॥ ೮೪

ಆಹೇಮಪ್ರಭೆ ಗರ್ಭಘಾತದಿಂ ಪ್ರಸವವೇದನೆ ಮಸಂಗಿ ಮಗನಂ ಪಡೆಯಲಾಕೆಯುನೊಂದು ತಮಾಲಗುಲ್ಮದೊಳಿರಿಸಿಯಾಕೂಸಿನ ಮೆಯ್ಯಮಾಸಂ ತೊಳೆಯೆ ಬಿಸುನೀರ್ಗುಪಾಯಮಂ ನೆನೆಯಲಿಲ್ಲಿಗೆ ಬಂದೆನೆಂದಾವೃದ್ಧೆ ಪೇೞ್ವ ಸಮಯದೊಳ್

ಕಟತಟದೊಳೊ*ಸರ್ವ ಮದದಿಂ ।
ವಿಟಪಿಗಳಂ ಕಿೞ್ತು ಬಿಸುಡುತುಂ ತನ್ಮದದು ॥
ತ್ಕಟದಿಂದೊಂದಿಭಮೆಯ್ತರ ।
ಲಟವಿಯೊಳಾಶಿಶುವನುೞಿದು ಪೋದಳ್ ಭಯದಿಂ ॥ ೮೫

ಅಂತಾವೃದ್ಧೆ ಹೇಮಪ್ರಭೆಯಿರ್ದಲ್ಲಿಗೆ ಪೋಗಿಯಲ್ಲಿಂದಾಕೆಸಹಿತಂ ಬೆದಱುತೋಡಿ ಪೋದಳ್. ಇತ್ತಲಾನೆ ಅರ್ಭಕನಂ ಪಿಡಿದಡಸುವೆನೆಂದನುಮಾನಿಸುವಾಗಳ್,

ವಾರಣಮನೊಂದು ರಿಪುಕಂ ।
ಠೀರವನಾರ್ದೆೞ್ದು ಪೊಯ್ದು ಕುಂಭಸ್ಥಳಮಂ ॥

ಕೂರುಗುರ್ಗ*ಳಿಂದಮಂಕಿಸಿ ।
ದಾರಿಸಲಾಶಿಶುವನುೞಿದು ಬಿಟ್ಟಿತ್ತು ಗಜಂ ॥ ೮೬

ಅಂತಾಗಜಂ ಬೀೞುತುಂ ಪಿಡಿದಿರ್ದ ಪೋತಕನಂ ಭೀತಿಯಿಂ ಮೇಗಣ್ಗೆ ಈಡಾಡಲಾಶಿಶುವೊಂದು ಮರನ ಕವಲ್ಗೊಂಬಿನೊಳ್ ಸಿಲ್ಕಲಲ್ಲಿ

ಪುಬಿರ್ಕ್ಕಿ ಪಲ್ಗಳಂ ಕಿಱಿ ।
ದಿಬರ್ದಿಯುಂ ತುಱುಸಿ ಕಣ್ಣನರೆಮುಚ್ಚಿ ಬಿಸಿಲ್ ॥
ಪಱಿರೆ ಕಾಯುತ್ತಿರ್ದುದು ।
ಕೊರ್ಬಿದ ವೃಕ್ಷಾಗ್ರದಲ್ಲಿ ಮರ್ಕಟರಾಜಂ ॥ ೮೭

ಅಂತಾಕೋಡಗಂ ಪಣ್ಣೆಂದೆತ್ತು ತಂತಾಶಿಶುವಂ ತೆಗೆದು ವಾಸಿಸಿ ನೋಡಿ ಪಣ್ಣಲ್ಲದುದನಱಿದಲ್ಲಿಯೆ ಇರಿಸಿ ಕಾಪೇಯಗತಿಯಿಂದತ್ತಲ್ ಪೋದುದು. ಇತ್ತಲ್ ಮುನಿಶಿಷ್ಯಂ ನಿಂದಿವೆಲ್ಲಮನಲ್ಲಿಯೆ ಗುಲ್ಮದ ಮಱೆಯೊಳ್ ನೋಡುತಿರ್ದು ಸಿಂಹಂ ಪೋದುವನಱಿತು ಮರದ ಮೇಲಣ ಶಿಶುವಂ ತೆಗೆದು ವಾಮದೇವರ ಸಮೀಪಕ್ಕೆ ತರಲವರಿದೆಲ್ಲಿಯ ಶಿಶುವೆಂಬುದುಂ ತತ್ಪ್ರಪಂಚಮಂ ಪೇೞಲಾಮುನಿಯಾಬಾಲಕನಂ ನೀಂ ನಮ್ಮರಸಂಗೆ ಕೊಟ್ಟು ಬಾಯೆಂಬುದುಮಾತಂ ಪೂರ್ವವಿಶೇಷಮಂ ಪೇೞ್ದರಸಂಗೆ ಕುಮಾರನಂ ಕೊಟ್ಟೊಡಾತಂ ಪ್ರೀತಿವಟ್ಟು ಪುಷ್ಪೋದ್ಭವನೆಂದು ಪೆಸರನಿಟ್ಟು ವಸುಮತೀದೇವಿಯ ಕೆಯ್ಯೊಳ್ ಕುಡೆ,

ಭೂದೇವತೆ ಷಡೃತುಗಳ ।
ನಾದರದಿಂ ಸಲಪುವಂತೆ ವಸುಮತಿ ಚಿತ್ತಾ ॥
ಮೋದದಿನಱುವರ್ ಕುವರರ ।
ನೋದಿಸುತುಂ ಸಲಪುತಿರ್ದಳತಿಕೌತುಕದಿಂ ॥

ಅಂತಿರ್ದ ವಸುಮತೀದೇವಿಯೊಂದು ದಿವಸಂ,

ಸರಸಿಜಲೋಚನಂ ಶಶಿಮುಖಂ ಹರಿಮಧ್ಯಮಿಭೇಂದ್ರಯಾನಮು ।
ದ್ಧುರಕುಚಕೋಕಮಾತ್ತತಿಮಿರದ್ಯುತಿವೇಣಿ ಮದಾಳಿಕುಂತಳಂ ॥
ಸುರುಚಿರಚಂಪಕಾಭತನುವೊಂದೆಡೆಯೊಳ್ ನೆಲಸಿರ್ಪುದಿಂತಿದ ।
ಚಿತ್ತರಿಯೆನಲೆಯ್ದಿದಳ್ ವಸುಮತೀವಧು ಕಾಂತಸಭಾಂತರಾಳಮಂ ॥ ೮೯

ಅದಲ್ಲದೆಯುಂ

ನಳನಳಿಪ ಕಲ್ಪಲತೆ ಸ ।
ತ್ಫಳವುಂ ತಳೆದಿರ್ಪ ತೆಱದಿನೊಪ್ಪುವ ನನಕೋಽ ॥
ಮಳಬಾಳಕನೊರ್ಬನನತಿ ।
ವಿಳಾಸದಿಂದೆತ್ತಿಕೊಂಡು ನಗುತೆಯ್ತಂದಳ್ ॥ ೯೦

ಅಂತಾಕಾಂತೆ ಬಂದು ಕಾಂತನಂಕಮಲನಂಕರಸಿರ್ಪುದುಮರಸನೀಪೊಸ ಕುಮಾರಕನೆತ್ತಣವನೆಂದು ಬೆಸಗೊಳ್ವುದುಂ,

ನಸುನಗೆ ಮಿನುಂಗೆ ಮೊಗದೊಳ್ ।
ಪಸರಿಸೆ ನಿಜದಂತಕಾಂತಿ ನೃಪವರಸಭೆಯೊಳ್ ॥
ವಸುಧಾಧಿಪಂಗೆ ನಲವಿಂ ।
ದುಸಿರ್ದಳ್ ವಸುಮತಿ ಕುಮಾರಲಾಭದ ಹದನಂ ॥ ೯೧

ಅದೆಂತೆನೆ—

ತರಳತರತಾರಹಾರದ ।
ಕಿರಣಂ ಧವಳಿಸೆ ದಿಗಂತಮಂ ಯೌವನನಿ ॥
ಭರದೆಸೆವ ಕಾಂತೆಯೆನಗಿಂ ।
ದಿರುಳೊಲವಿಂ ಕನಸಿನಿಂದೆ ತೋಱಿದಳೊರ್ವಳ್ ॥ ೯೨

ಅದಲ್ಲದೆಯುಂ ಪಾರಿಜಾತಪ್ರಸೂನಾವತಂಸೆಯುಂ, ಪಳಕುವೆಸೆದ ಪಾದುಕೆಯುಂ, ನಿಸ್ತುಲಸ್ಥೂಲಮುಕ್ತಾಹಾರೆಯುಂ, ಕುಂಡಲಮಂಡಿತಗಂಡಸ್ಥಳೆಯುಂ, ಚಾರುಚಂದನಚರ್ಚಿತೆಯುಂ, ನನ್ಯದಿವ್ಯಶರೀರೆಯುಮೆನಿಪ ವನಿತೆ ಕನಸಿನೊಳ್ ಬರಲಾನದಂ ನೆನಸೆಂದು ಬಗೆದು ನೀನಾವಳಲ್ಲಿಗೇಕಾರಣಂ ಬಂದೆಯೆಂದೊಡೆ—

ದೇವಿಯರೇ ಚಿತ್ತವಿಸಿಂ ।
ಭಾವಿಸೆ ಗಂಧರ್ವಲೋಕಸಂಭವೆಯಾಂ ರ ॥
ತ್ನಾವಳಿಯೆಂಬೆನ್ನ ಪೆಸರ್ ।
ಭಾವಿಸಲಾಂ ಬಂದ ಕಾರ್ಯಮಂ ಬಿನ್ನವಿಪೆಂ ॥ ೯೩

ಎಂದಿಂತೆಂದಳ್ —

ನಿನ್ನಧಿನಾಥನ ಸಚಿವಂ ।
ಸನ್ನುತನುತಿ ಕಾಮಪಾಲನೆಂಬಾತಂ ಕೇ ॥
ಳೆನ್ನಯ ಕೆಯ್ಯೊಳ್ ಕೊಟ್ಟಂ ।
ಚೆನ್ನಿಸವೀಸುತನನೆಂದು ತೋಱಿದಳವನಂ ॥ ೯೪

ಅಂತು ತೋಱಿ ಮತ್ತಮಿಂತೆಂದಳ್ —

ಆಕಾಮಪಾಲನೆಮ್ಮಡ ।
ನೀಕುವರನನುಯ್ದು ರಾಜಹಂಸನ ನಿಜಕಾಂ ॥
ತಾಕರದೊಳೀವುದೆಂದಂ ।
ಸಾಕಿವನಂ ದೇವಿ ಕೊಳ್ಳೆನುತ್ತುಂ ಕೊಟ್ಟಳ್ ॥ ೯೫

ಅಂತು ಕುಮಾರನನೆನ್ನ ಮಗ್ಗುಲೊಳಿರಿಸಿ ಪೋದಳ್. ಅನ್ನೆಗಂ

ಆರೊಡನೆ ಮಾತನಾಡಿದೆ ।
ನಾರಿಲ್ಲಿಗೆ ಬಂದರೆಂದು ನಿದ್ರೆಯಿನೆೞ್ಚು ॥
ತ್ತಾರಂ ಕಾಣದೆ ಮಗ್ಗುಲೊ ।
ಳೋರಂತೆಸೆದಿರ್ದ ನವ್ಯಸುತನಂ ಕಂಡೆಂ ॥ ೯೬

ಎಂದರಸಂಗರಸಿ ಪೇೞ್ವುದುಮರಸಂ ಸಂತುಷ್ಟನಾಗಿ ಕಾಮಪಾಲನೇ ನಾದನೋ ಎಂದು ಚಿಂತಿಸಿ ಕುಮಾರಂಗರ್ಥಪಾಲನೆಂದು ಪೆಸರಿಟ್ಟು ಸಪ್ತಸ್ವರಂಗಳಂ ಪರಿಪಾಲಿಸುವ ಭರತಜ್ಞನಂತೆ ಧರಣೀಶಂ ಪರಿತೋಷದಿಂದಿರಲ್ ಕಿಱಿದು ದಿನದಿಂ ಮೇಲೆ,

ಮತ್ತೊಂದು ದಿನಂ ಮುನಿಶಿ ।
ಷ್ಯೋತ್ತಮನರ್ಚನೆಗೆ ಪತ್ರಪುಷ್ಪಮನುಯ್ಯಲ್ ॥
ವೊತ್ತದರಣ್ಯಕ್ಕೆಯ್ತಂ ।
ದೆತ್ತಿಸಿ ಕೊಂಡಿರ್ದದೊಂದು ಶಿಶುವಂ ಕಂಡಂ ॥ ೯೭

ಅಂತೊರ್ಬಳೆತ್ತಿ ಕೊಂಡಿರ್ದ ಶಿಶುವಂ ವಾಮದೇವರ ಶಿಷ್ಯಂ ಕಂಡು

ಎಲ್ಲಿಯುವನೀಕುಮಾರಕ ।
ನೆಲ್ಲಿಯುವಳ್ ನೀನರಣ್ಯಮಧ್ಯದೊಳಿರ್ಪೆ ॥
ಕೆಲ್ಲಿಗೆ ಪೋದಪೆಯೆಂದು ಮ ।
ಹೋಲ್ಲಾಸದೊಳೆನಗೆ ಪೇಬ್ವುದೆಂದನಲಂಪಿಂ ॥ ೯೮

ಅಂತು ಕೇಳ್ವುದುಮವಳಿಂತೆಂದಳ್:—

ಮಗಧಧರಣೀಶ್ವರಂಗಾ ।
ವಗಮಾದಂ ಪ್ರೇಮದತ್ತನೆನಿಸುವ ಸಚಿವಂ ॥
ಜಗಮಱಿಯೆ ತೀರ್ಥಯಾತ್ರೆಯು ।
ಬಗೆಯಿಂದೊಂದಗ್ರಹಾರವಂ ಸಾರ್ದಿರ್ದಂ ॥ ೯೯

ಅಂತಾಪ್ರೇಮದತ್ತಂ ತೀರ್ಥಯಾತ್ರೆಗೆ ಪೋಗುತ್ತುಂ ಧರ್ಮಪುರಮೆಂಬ ಅಗ್ರಹಾರಮಂ ಸಾರ್ದು ಯಜ್ಞಶರ್ಮನೆಂಬ ದ್ವಿಜೋತ್ತಮನ ಸಖ್ಯಂಮಾಡಿಕೊಳಲಾತಂ ಕೆಲವು ದಿನಸಪಿಂ ಮೇಲೆ ತನ್ನಮಗಳ್ ಕಾಳಿಯೆಂಬಳಂ ಕುಡಲವಳ್ಗೆ ಪ್ರತ್ಯುತ್ಪತ್ತಿಯಿಲ್ಲದಿರಲವಳಂ ಕಿಱಿಯಳಪ್ಪ ಕಾಳಿಂದಿಯುಂ ಮಗುಳ್ದು ಪ್ರೇಮದತ್ತಂಗೆ ವಿವಾಹಂಮಾಡಲವಳ್ಗೆ ಸುಕೃತಫಲದಿಂ ಸುತನಪ್ಪುದುಂ ಬಱಿಕ್ಕೆ ಪ್ರೇಮದತ್ತಂ ಯಜ್ಞಶರ್ಮನಿಂ ಕಳುಹಿಸಿಕೊಂಡು ಪೂರ್ವಸಂಕಲ್ಪಿತಮಪ್ಪ ತೀರ್ಥಕ್ಕೆ ಕಾಳಿ ಕಾಳಿಂದಿನಿ ತತ್ಕುಮಾರನಾತಂಗೆ ದಾದಿಯುಪ್ಪ ನಾನಿಂತೆಲ್ಲರುಂ ಸರಯೂನದಿಗೆ ಪೋಗಿ ಸ್ನಾನಕ್ಕನುಗೈವ ಸಮಯದೊಳ್,

ತನಗೆ ತನೂಭವರಿಲ್ಲಂ ।
ಬನುಶಯದಿಂ ಮಗನನೆತ್ತಿ ಕೊಂಡಿರ್ದನ್ನಂ ॥
ಮುನಿದು ನದಿಯೊಳಗೆ ನೂಂಕಿದ ।
ಳನವರತಂ ಪರರ ಲೇಸನಾಂತಪರೊಳರೇ ॥ ೧೦೦

ಅಂತವಳ್ ಮಗನನೆನ್ನಂ ನದಿಯೊಳ್ ನೂಂಕಲಾನುಮಿವನುಂ ಮಡುವಿನೊಳ್ ಬಿಟ್ಟೊಡಾನೀಶಿಶುವಂ ಬಿಡದಿರ್ಪಅವಸ್ಥೆಯೊಳೊಂದು ಬೇರ್ಪಱಿದು ಬಿಬ್ದ ಮಱ್ದಯ ಮರಂ ತೆಪ್ಪದಂತೆ ಬರ್ಪುದುಂ ಕಂಡದಂ ಪಿಡಿವನ್ನೆಗಂ

ಪೋಂಜಿಲೊಳಗಿರ್ದ ದುಷ್ಟ ।
ವ್ಯಾಳಂ ಮುಳಿದೆನ್ನ ಕೈಯನಾಂತಲ್ ಮತ್ತೀ ॥
ಬಾಳಕನ ಪುಣ್ಯದಿಂ ತ ।
ತ್ಕಾಳಮನಾಂ ಸಾರ್ದೆ ನಿನ್ನ ಸೈರಿಸಲಾರೆಂ ॥ ೧೦೧

ಇನಿತು ಪೊಳ್ತು ಮುದಕದೊಳಿರ್ದ ಕಾರಣಂ ವಿಷವೇಱದಿರ್ದುದು. ಈಗಳಸು ನೆತ್ತಿಗೇಱುವ ಪ್ರದೀಕುಮಾರನಂ ರಕ್ಷಿಸುವುದೆಂದು ಮುನಿಕುಮಾರನ ಕಯ್ಯೊಳ್ ಕುಡಲಾತನೀಸಿಕೊಂಡು ನಿನಗೆ ವಿಷಾಪಹಾರಮಪ್ಪೌಷಧಿಯುಂ ತಂದೀವೆನೆಂದಾತಂ ಪೋಗಲ್ ವಿಷಮೂರ್ಛೆಯಿಂ ಸಮವರ್ತಿನಿಳಯಮನೆಯ್ದಲಾಮುನಿಶಿಷ್ಯಂ ಕುಮಾರನಂ ತಂದು ವಾಮದೇವರ್ಗೆ ತೋಱಿ ತದ್ವೃತ್ತಾಂತಮಂ ಪೇೞ್ದೊಡವರೀತನಂ ಭೂತಳೇಶ್ವರಂಗೆ ಕೊಟ್ಟು ಬಾಯೆಂದು ಕಳುಪಿದೊಡಾತಂ ರಾಜಹಂಸಂಗೆ ಕೊಟ್ಟು ಕುಮಾರಾಗಮ ಸಂಬಂಧಮಂ ಪೇೞ್ದೊಡರಸಂ ಪರಿತೋಷಚಿತ್ತನಾಗಿ ಈಕುಮಾರಂ ಪ್ರೇಮದತ್ತನ ಮಗನಪ್ಪುದಱಿಂ ಸೋಮದತ್ತನೆಂದು ಪೆಸರನಿಟ್ಟು ಅಷ್ಟದಿಕ್ಪಾಲಕರಿಂ ಪರಿವೇಷ್ಟಿಸಿರ್ದ ಭೂಮಿಯಂತೆ ಭೂಮೀಶ್ವರಂ ಸುಖದೊಳಿರ್ಪನವೊಂದು ದಿನಂ

ಮೆಟ್ಟಿದ ಕೆರ್ಪು ಪೆರ್ಬಿದಿರ ಬಿಲ್ ಸುಲಿಸಲ್ ಕುಣಿಮೀಸೆ ಕಾಗಿನೊ ।
ಳ್ಪಟ್ಟೆಯು ಕುಪ್ಪಸಂ ತಲೆಯ ಸುತ್ತಿನ ನೇಣ್ ಪಿಱಗೆಯ್ದೆ ಬರ್ಪ ನಾಯ್ ॥
ಕಟ್ಟಿದ ಕಳ್ಳಿ ಕೆಂಗಣಿಯ ಕೋಲ್ ಬೆರಸೆಯ್ದಿದನೊರ್ಬ ಬೇಂಟೆಯೊಳ್ ।
ದಿಟ್ಟಗೆ ಚೆಲ್ವನಾಗಿ ನೃಪನೋಲಗಮಂ ಮೃಗಯಾನಿವೇದಕಂ ॥ ೧೦೨

ಅಂತೊರ್ವ ಬೇಂಟೆಗಾಱಂ ಬಂದು ರಾಜಹಂಸಂಗೆ ಪೊಡೆಮಟ್ಟು ಇಂತೆಂದಂ:—

ವ್ಯಾಧನಿವನೆನ್ನದಿರ ಭುವ ।
ನಾಧಿಪ ಮೃಗಸಮಿತಿ ಪೆರ್ಚಿ ಖಮಸ್ಯಾಶ್ರಮಮಂ ॥
ಬಾಧಿಸುತಿರ್ದಪುದತಿನಿ ।
ಬಾರ್ಧೆಯೆನಲ್ ಮಾಪ್ಪುದಲ್ತೆ ಬೇಂಟೆಗೆ ಕಾಲಂ ॥ ೧೦೩

ಪಳ್ಳದ ನೀರ್ ಪರಿಗುಂದಿದು ।
ದೆಲ್ಲಾ ಬೆಳಸುಡುಗಿವತ್ತು ದಾವಾಗ್ನಿಯು ಬ ॥
ಲ್ಪಲ್ಲಿ ತೋಱಿದುದು ಭೂ ।
ವಲ್ಲಭ ನಡೆ ಬೇಂಟೆಯಾಡಲೆಂತಿದು ಸಮಯಂ ॥ ೧೦೪

ಗಿರಿಗಳ ಪಕ್ಷಮಂ ಕಡಿದು ಗೋತ್ರವಿರೋಧಿಯೆನಿಪ್ಪ ನಾಮಮಂ ।
ಧರಿಸಿದ ದೇವವಲ್ಲಭನ ಪತ್ರನಕೀಗಳ್ ದಾಟಿಯಿಟ್ಟು ಸು ॥
ಟ್ಟುರಿಪ್ಪವೆನೆಂದು ಪರ್ವತವರಂ ಕರದೀಪಸಹಸ್ರಸಂಖ್ಯೆಯಿಂ ।
ದಿರುಳೆಡೆಗಾಳೆಗಕ್ಕೆ ನಡೆವಂತೆವೊಲಿರ್ದುದು ದಾವಪಾವಕಂ ॥ ೧೦೫

ಎಂದು ಬಿನ್ನವಿಸಿದ ಬೇಂಟೆಕಾಱನನರಸಂ ಮನ್ನಿಸಿ ಕ್ರೂರಮೃಗಂಗಳ ಬಾಧೆಯುಂ ಪರಿಹರಿಸಿದೊಡೆ ದೋಷಮೇನುಂ ಬಪ್ಪುದಿಲ್ಲೆಂದು ಭಾವಿಸಿ ಯಾಗಳ್ ಪುಱಮಟ್ಟು ಕಾಪ್ರಗಾಡ ಬೇಡವಡೆಯುಂ ಕರಸೆ,

ಸಿಂಗದ ಕೇಸರಂ ಪುಲಿಯುಗುರ್ ಚಮರೀಮೃಗವಾಳಜಂ ಮದೇ ।
ಭಂಗಳ ಮುತ್ತು ಪೀಲಿವ್ರೋಱೆ ಹೊತಿಯ ಬೆಕ್ಕಳುಮಂದಿನುಳ್ ವರಾ ॥
ಹಂಗಳ ದಾಡೆ ಕತ್ತುರಿಯ [1]ಹುಲ್ಲೆ[1]ಗಳೊಪೊರ್ದಲಾದ ವನ್ಯಸಾ ।
ರಂಗಳ ಭಾರದಿಂ ನಡೆದು ಬಂದನದೊರ್ವ ಪುಳಿಂದನಾಯಕಂ ॥ ೧೦೬

ಅಂತು ಬಂದು ಕಂಡ ಪುಳಿಂದನಾಯಕನಂ ಮನ್ನಿಸುವುದುಮವಂ ತಾಂ ಪಾಸದೊಳಿರ್ದ ಜಾಯಿಲನಂ ತೋಱಿಸಿ,

ರಾಹುವಿನಂತೆ ಋಕ್ಷಪತಿವೈರಿ ನಿಶೀಥಿನಿಯಂತೆ ಪುಂಡರೀ ।
ಕಾಹಿತಕಾರಿ ದುಷ್ಟಶಿಶುಪಾಲಕನಂತಿರೆ ಕೃಷ್ಣಸಾರತೇ ॥
ಜೋಹರಕಾರಣಂ ಕುರುಕುಲಾಧಿಪನಂತೆ ವೃಕೋದರಾರಿ ಕೇಳ್ ।
ಸಾಹಸಮಲ್ಲನೆನ್ನಗಟಿನಂಕದ ಜಾಯಿಲನುರ್ವರಾಧಿಪಾ ॥ ೧೦೭

ಎಂದು ಬಿನ್ನವಿಸಿದನಂ ಮನ್ನಿಸೆಯುನಂತರಂ

ತೊಗರಂ ಪಿಂಡುಗಲಂಕಿ ಸಾಳುವನ ಸಂಗಂ ಜಾಯಿಲಂ ಸೂಜಿವಾ ।
ಲಿಗನುದ್ದಂಡನೊಱಂಟನಂಟಿಬಟಿಲಂ ಜಾಗಂ ಜವಂ ರಕ್ಕಸಂ ॥

1. ಹುಂತಿ. ಕ॥

ಪೊಗೆಗೆಣ್ಣಂ ಕಲಿ ಬಂದಿಕಾರ್ಜನಪಟಂ ವೇಗಾಯ್ಯನೆಂದೆಂಬ ಕಂ ।
ನ್ನಿಗಳಂ ಪಾಸದೊಳಿಟ್ಟು ಕಾಡೊಡೆಯರಂದೆಯ್ದುತ್ತು ಕಾಂತಾರಮಂ ॥೧೦೮

ಹಂದಿಗೆ ಸಾಳುವಂ ಮರೆಗೆ ಜ ಯಿಲನೇಣಕುಲಕ್ಕೆ ಚಂಚುವಾ ।
ಲಂ ದಣಿದಿವರ್ ಕೊಂಡಗುಜಿಗೀತೊಗರಂ ರುರುಸಂಕುಳಕ್ಕೆ ಜಾ ॥
ಗಂ ದಿಟವುಲ್ಲು ಮೂರಿಯುಲೆ ಭೂಪತಿ ನೋಳ್ಪೆ ಪ್ರಡೆ ತೋರ್ಪೆ ನಿಂತು ನೋ ।
ಡೆಂದತಿಭೂಷೆಯುಂ ನುಡಿಯುತಿರ್ದನದೊರ್ಬ ಪುಳಿಂದನಾಯಕಂ ॥ ೧೦೯

ಅಂತು ಪಸಾಯಂಗೊಟ್ಟು ನಡೆಪನ್ನೆಗಂ

ಇದೆ ಮರೆ ಹಿಕ್ಕೆಯಿಕ್ಕಿದೆಡೆ ಪುಲ್ಲೆಯ ಬಾಯ ಕಚುಂಕೆ ನೊಸಿದ ।
ತ್ತಿದೆ ಕೆಸಱೊಳ್ ಪ್ರರಳು ನಡೆಗೊಂಡುದು ಹಂದಿಯ ಹಿಂಡು ಮುಂದೆ ನೋ
ಡದೆ ಪೊಲಸಟ್ಟು ನಾತರ್ಪುದು ಪೆರ್ಬುಲಿಯಿರ್ದಪ್ರಸಕ್ತನುತ್ತೆ ಪೆ ।
ರ್ಚಿದ ವನದಲ್ಲಿ ಪಜ್ಜೆಗಳಿಯಿಂ ನಡೆಗೊಂಡುದು ಭಿಲ್ಲಸಂಕುಳಂ ॥ ೧೧೦

ಆಸಮಯದೊಳ್

ಮುರಿದ ಕೊರಲ್ ನಿಮಿರ್ದ ಕಿವಿ ಕೆತ್ತುವ ಮೆಯ್ ಕಡೆವಾಯ ಪುಲ್ಲೆಸಲ್ ।
ತರಳವಿಲೋಚನಂ ನೊಸಡನಾಲಿಸಿ ಬೆಚ್ಚಿ ಬಿಗುರ್ತು ವೇಗದಿಂ ॥
ಸರಳಿಸಿ ಪತ್ತೆ ನಿಂದುಪೆ ಗಂ ನನೆನೋಟ್ಟಿತಿಭೀತಿ ಕವ್ಮೊಳ್ಳ ।
ಜ್ಜರಿವರೆದಿರ್ಪ ಪುಲ್ಲೆಗಳನೀಕ್ಷಿಸಿದಂ ಭುವನಾಧಿನಾಯಕಂ ॥ ೧೧೧

ಅದಲ್ಲದೆಯುಂ

ಚರಿಸದೆ ಮೇಪುಗೊಳ್ಳದಿನಿಸಿಕ್ಕೆಯನೆಲ್ಲದೆ ನಿದ್ದೆಯಿಲ್ಲದೊ ।
ಳ್ಮರನ ನೆಟಿಲ್ಗೆ ಬಾರದೆ ಮೃಗಾಳಿಗೆ ಸೇರದೆ ನೀರ್ಗೆ ಪೋದು ।
ದ್ದುರಮದನಾಗ್ನಿಗಳ್ಕಿ ತನುತಾಪದ ಬೇಗೆಗೆ ಬಳ್ಕಿ ವಲ್ಲಭಾ ।
ವಿರಹದೊಳಿರ್ದೊಂದು ಹರಿಣಂ ಬರೆಗೊತ್ತಿದ ಚಿತ್ರಮೆಂಬಿನಂ ॥ ೧೧೨

ಪುಲ್ಲೆಯ ಹಿಂಡನೊಂದು ಪುಲಿ ಗೆಂಟಱೊಳೊಯ್ಯನೆ ಕಂಡು ಪಜ್ಜೆಯಂ।
ಮೆಲ್ಲನೆ ಮೆಟ್ಟಿ ಪುಲ್ಲೊಳ್ ಹುಮುಂಗಿ ಹಮುಂಗಿಸುದರ್ಕೆ ಲಂಘಿಸಲ್ ।
ತಲ್ಲಳದಿಂ ಕುನುಂಗಿ ನಡು ನೀಂಟಿಸಿ ನೀಳ್ದ ಕೊರಲ್ಗೆ ಪಾಯ್ದು ತ ।
ಳ್ಳಿಲ್ಲದೆ ನೆತ್ತರಂ ಪದೆದು ಪೀರ್ದುದು ದಿಕ್ಕೆಮದಿಕ್ಕೆದಾಣದೊಳ್ ॥ ೧೧೩

ಅದಂ ಕಂಡು

ಮೞೆಗೞನೊತ್ತುಗೞ್ ಮರನನೇಱಿ ಕೆಲಂಬಿಡದಿತ್ತ ಜಾಱು ಬಂ ।
ದೊಳಪುಗದಿರ ಬಿಡೋ ಪಿಡಿದ ನಾಯ್ಗಳನಟ್ಟುಱಿಯಿತ್ತಲಿತ್ತ ಪೋ ॥
ಯ್ತಲೆಲೆಲೆ ತೋಹಕಟ್ಟು ಕಡೆಪೋ ಬಲೆಗಾನಿರೆ ಸೋಹೆಸಿಪ್ಪ ತ ।
ತ್ಕುಳಕುಳವಮ್ಮಿ ಬೇಡವಡೆ ಬೊಬ್ಬಿಱಿದಾಡಿಪುದಂದು ಬೇಂಟೆಯಂ ॥ ೧೧೪

ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣಿ ತೊವಲ್ವಲೆ ಸಿಕ್ಕುದಕ್ಕು ಪೆ ।
ಣ್ದೊಱಲುವಲೆ ಸಂದ ಹಾಸುವಲೆ ನೀರ್ವಲೆ ಮೋಲ್ವಲೆ ಸೊರ್ಕುಮುದ್ದು ಪೆ ॥
ರ್ಚಲೆ ಬಿಡುವಾರುಗೋಡುವಲೆಯೆಂಬಿನಿತಂ ಪುಱಿಗಟ್ಟಿ ಕಾನನ ।
ಸ್ಥಲದೊಳಗಲ್ದು ತೋಹುವಿಡಿದೊಡ್ಡಿ ಪರೆಯ್ದು ಪುಳಿಂದನಾಯಕರ್ ॥ ೧೧೫

ಆಸಮಯದೊಳ್

ಮುಸ್ತಾಕಂದಮನೆತ್ತಿ ಬೇರ್ಗಳನಿತಂ ತಿಂದುಗ್ರದಾಹಂ ಮಿಗಲ್ ।
ವ್ಯಸ್ತಾಂಬುಪ್ಲವವಾದ ಪೆರ್ಗಱೆಗಳೊಳ್ ಪಾಯ್ದಲ್ಲಿ ವಂ ನಾಯ್ಗಳಂ ॥
ಹಸ್ತಾಲಂಬಿತವಾದುವಂ ಬಿಡುಬಿಡೆಂದಾದಿರ್ದರ್ ಬೇಡರ್ಕಳಂ ।
ಹಸ್ತಿವ್ಯಾಜದೊಳೊಕ್ಕಲಿಕ್ಕಿ ಕೆಡಪಿತ್ತಂದೊಂದೆ ನಿಂದೆಕ್ಕಲಂ ॥ ೧೧೬

ಅದಂ ಕಂಡು,

ಜವದಿಂ ಬೆಂಗೊಟ್ಟು ಪೋಪೆಕ್ಕಲನನಡವಿಯೊಳ್ ಕಂಡು ತದ್ರಾಜಹಂಸಂ।
ಕವಲಂಬಿಂದೆಚ್ಚೊಡಂತುರ್ಬಿನ ನಡುಪೆಣೆಯೊಳ್ ಮೂಡೆ ನಾಲ್ಕಾಡೆಯಾ
ದಂ । ತೆವ್ರೊಲಾಬೇಡರ್ಕಳಂ ಸೀಟ್ಳ್ದಿಗಿಬಗಿಯೆ ನೃಪಂ ಕೊಂದಪಂ
ಪಂದಿಯುತ್ತಂ । ದು ವನಂ ಘೋಳೆಂಬಿನಂ ಬೊಬ್ಬಿಱಿದು ಕೆಡಪ್ರತಿದರ್ತು
ಭಿಲ್ಲಪ್ರತಾನಂ ॥ ೧೧೭

ಅದಲ್ಲದೆಯುಂ

ಮೞೆಯಿಂದಂ ಪೊಱಮಟ್ಟು ಮೆಯ್ಮುಱಿದು ಕೆಂಗಣ್ಣಿಕ್ಕಿ ಕಂಡಾಳ್ಗಳಂ ।
ನೆಲನಂ ಗರ್ಜಿಸಿ ಪೊಯ್ದು ಬಾಯ್ದೆಱೆದು ಪುರ್ಬಿಕ್ಕುತ್ತೆ ವಾಲಾಗ್ರಮಂ ॥
ಮುಳಿಸಿಂ ದಾಡೆಗಳಂದೆ ಕರ್ಚಿ ಸೆಳೆಯುತ್ತುತ್ಕ್ರೋಪದಿಂ ಪಾಯ್ವ ಪೆ ।
ರ್ಬುಲಿಯಂ ದಂಡೆಯೊಳಾಂತು ನೂಂಕಿ ತಿವಿದಂ ವಿಕ್ರಾಂತಕಂಠೀರವಂ ॥

ವೃತ್ತಂ

ಕತ್ತಲಿಸಿರ್ದ ಪೇರಡವಿಯೊಳ್ ಸಲೆ ಕೋೞ್ಮಿಗವೆೞ್ಮಿಗಂಗಳಂ
ಪಿತ್ತುವಿನಂದದಿಂ ತವಿಸಿ ಪನ್ನಗಲೋಕದ ಜೀವರಾಶಿಗಳ್ ॥
ಪೊತ್ತುವ ಮಾಱ್ಕೆಯಿಂ ತಿದಿಗಳಂ ಪೊಗೆದಪ್ಪರೊ ಭಿಲ್ಲರೆಂಬಿನಂ ।
ಪುತ್ತನಗುಬ್ಬಿ ಪೆರ್ಗರಡಿಗಳ್ ಮೊಗವಿಟ್ಟಸೆಗುಂ ವನಾಂತದೊಳ್ ॥ ೧೧೯

ಅಂತನೇಕವಿಧದಿಂದಿರ್ಪ ಮೃಗಂಗಳನರಸಂ ಬೇಂಟೆಯಾಡೆ

ಹರಿ ಕರಿ ಹಂದಿ ಬೆಳ್ಗುರಲೆ ಪೆರ್ಬುಲಿ ಹುಲ್ಲೆ ಲುಲಾಯಸಂಕುಳಂ ।
ಮರೆ ಮೃಕರಾಜಿ ಗಂಡಮೃಗ ಶಾಲ್ಮಲಿಸಂತತಿ ಕೊಂಕ ಪೆರ್ಮೊಲಂ ॥
ಕರಡಿ ರುರುಪ್ರತಾನಮುಡು ಬೆಳ್ಗಲಿ ಪೆರ್ವರಿಯುಂಗಿ ಪೆರಣಿಲ್ ।
ಮರದಣಿಲೆಂಬಿವಂ ಕೆಡಪಿಯೋಂ ತಿರುಗಿತ್ತೊ ಕಿರಾತಸಂಕುಳಂ ॥ ೧೨೦

ಅಂತುಕಿರಾತವಶೆಸಹಿತಂ ಬೇಂಟೆಯಾಡಿಯರಸಂ ತಿರುಗುವಾಗಳ್ ಮುಂಬೆ,

ಬೇಂಟೆಗು ನಾಯ್ಗಳಂ ಪೊಱೆವ ಪೆರ್ಬಲೆಯುಂ ಸಮಕಟ್ಟುತಿರ್ಪ ಬ ।
ಲ್ಪಂಟಿಗೆಗೋಲ್ಗಳಂ ಬಸಿವ ದೀಹವನೋಲ್ಪವ ನೇರ್ಪುವೆತ್ತ ಕೈ ॥
ದೊಂಟಿಯನೊಪ್ಪಿ ಕಟ್ಟುವ ಶರಂ ಪದನಾಗಿರೆ ಬಿಲ್ಲ ನಾರಿಯುಂ ।
ತಾಂಟಿಸಿ ನೋಱ್ಪಿ ಬೇವಸದೊಳಿರ್ದುದು ಪಳ್ಳಿಯ ಭಿಲ್ಲಸಂಕುಳಂ ॥ ೧೨೧

ಅಂತಿರ್ಪುದೊಂದು ಭಿಲ್ಲಪಳ್ಳಿಯುಂ ಕಂಡರಸಂ ನಿಲ್ವುದುಮಲ್ಲಿಯಪುಳಿಂದರ್

ಕತ್ತುರಿಯು ನಾಭಿಯುಂ ಪೊಸ ।
ಮುತ್ತುಗಳುಂ ಮತ್ತಹಸ್ತಿದಂತವನೊಲವಿಂ ॥
ದಿತ್ತರ್ ಕಣಿಗಳನರಸಂ ।
ಚಿತ್ತವಿಸೆಂದೆನುತೆ ಶಬರನಾಯಕರಾಗಳ್ ॥ ೧೨೨

ಅಂತು ಬಂದು ಕಂಡ ಬೇಡಪಡೆಯೊಳ್,

ಮುಗಿಲ ಮಱೆಯುಬ್ಬುಮಿತ್ರಂ ।
ಪಗಲ ಸುಧಾಸೂತಿ ಮುಸುಳಿಸಿಪ್ಪಂತವರೊಳ್ ॥
ಸೊಗಸುವ ಶರೀರಕಾಂತಿಯೊ ।
ಳೊಗೆದಿರ್ದಂ ನವಕುಮಾರಕಂ ನೃಪನಿದಿರೊಳ್ ॥ ೧೨೩

ಅಂತಿರ್ಪ ಕುಮಾರನಂ ಕಂಡು—ಇವನೆಲ್ಲಿಯವನೆತ್ತಣಿಂ ಬಂದನೀತಂ ನಿಮ್ಮ ಕುಲದೊಳ್ ಪುಟ್ಟಲ್ ತಕ್ಕಾತನಪ್ಪಂದರಸಂ ಬೆಸಗೊಳಲಲ್ಲಿಯೊರ್ಬಂ

ಜನಪಂ ಪ್ರಹಾರವರ್ಮಂ ।
ವನದೊಳ್ ಮುಂಗೆಟ್ಟು ಪೋಪ ಪದದೊಳ್ ಕಮಲಾ ॥
ನನೆಯೊರ್ಬಳ ಕೈಯೊಳ್ ಬ ।
ಳ್ಪಿನೊಳೀತನನಿಟ್ಟು ಕೊಂಡೆವವನಿಪತಿಲಕಾ ॥ ೧೨೪

ಎಂದು ಮತ್ತಮಿಂತೆಂದಂ:—

ಈತಂ ದೇವರ್ಗೆಯೆ ತ ।
ಕ್ಕಾತಂ ಚಿತ್ತವಿಸ್ರದೆಂದು ತದ್ಬಾಲಕನಂ ॥
ಪ್ರೀತಿಯೊಳಿತ್ತಂ ಕೂರ್ತು ಕಿ ।
ರಾತವರಂ ನೃಪವರಂಗೆ ಮನಮುತ್ಸವದಿಂ ॥ ೧೨೫

ಅಂತು ಕುಡುವುದುಂ ಕಿರಾತಂಗೆ ಅರಸಂ ಬೇಳ್ಪುದಂ ಕೊಟ್ಟು ಕುಮಾರನನೊಡಗೊಂಡು ಪುರಪ್ರವೇಶಮಂ ಮಾಡಿ ಬೇಡವಡೆಯುಂ ಕಳುಪಿ ಆಸ್ಥಾನಮಂಟಪಕ್ಕೆ ಬಂದು ಸುಮತಿಯುಮಂ ಕರೆಸಿ ಕುಮಾರಂ ಬಂದ ವೃತ್ತಾಂತಮಂ ಪೇಳ್ದಾತನನಪಹಾರವರ್ಮನೆಂದು ಪೆಸರನಿಟ್ಟು ನವನಿಧಿಗಳಂ ಪಡೆದ ದಿನಸ್ಥಿತಿಯಿಂತವನೀಶಂ ಸುಖದೊಳಿರ್ಪುದುಂ ಮತ್ತೊಂದು ದಿನಂ

ಆವಾಮದೇವಶಿಷ್ಯಂ ।
ನೀವಾರಮನುಯ್ಯೆ ಬಗೆಯಿನೊಂದು ವನಸ್ಥೇ ॥
ಮಾನಸಿಗೆ ಬಂದು ಕಂಡಂ ।
ಕೋವಿದನತಿಮುಖಿಯಪ್ಪ ವೃದ್ಧಾಂಗನೆಯುಂ ॥ ೧೨೬

ಬಾಗಿದ ಬೆನ್ನೆಳಿಪ್ಪ ಕಿವಿ ಬತ್ತಿದ ಗಲ್ಲಮುದಿರ್ದ ಪಲ್ ಕರಂ ।
ತೂಗುವ ಮಂಡೆ ನೀಸುರ್ಚಿದ ಕಣ್ಮಲರೆಯ್ದೆ ತೆರಳ್ದ ತೋಳ್ಗಳಿಂ ॥
ಬಾಗಿರೆ ಮುಪ್ಪು ಮೊಯ್ಪಡೆದು ಬಿಂಜದೊಳಂಜದೆ ನಿಮಿದೆಂಬಿನಂ ।
ಬೇಗೆಯು ಬೆಂಕೆಗೆಯ್ಕಿ ಕುಳಿರ್ಗಳ್ಗದೊಳಿರ್ದ ಮುದುಂಕಿಯೊಪ್ಪಿದಳ್ ॥ ೧೨೭

ಅಂತಿರ್ದ ವೃದ್ಧೆಯುಂ ಮುನಿಶಿಷ್ಯಂ ಕಂಡು

ಎಲೆ ವೃದ್ಧೆ ವನದೊಳೇಕಿಂ ।
ತಳುತೊರ್ಬಳೆ ಕುಳ್ಳಿರಿಪೆಯೆಂದೊಡೆ ಮತ್ತಂ ॥
ಬಳಲುತ್ತೆ ಸುಯ್ದು ಮನಮಂ ।
ನಿಲಿಸಿ ಬಟಾಕ್ಷಿ ಸಿರ್ದುದಕೆ ಬಗೆಯಂ ತಳೆದಳ್ ॥ ೧೨೮

ಅದೆಂತೆಂದೊಡೆ:—

ಸಕಲಧರಾಧಿನಾಥನವರತ್ನಕಿರೀಟವಿರಾಜಿತಾಂಘ್ರಿಪಾ ।
ದುಕನತಿಮಿತ್ರರಾಜರಮಣೀಯಫಲಪ್ರದಮರ್ತ್ಯಪಾರಿಜಾ ॥
ತಕನಭಿಯಾತಿಭೂಪಗಜವಾಜಿರಥಾಪ್ತಪದಾತಿವರ್ಗಭಂ ।
ಜಕನೆನಲೊಪ್ಪುವಂ ಮಗಧವಲ್ಲಭನುಗ್ರವಿರೋಧಿದುರ್ಲಭಂ ॥ ೧೨೯

ಅಂತಾಮಗಧವಲ್ಲಭನಪ್ಪ ರಾಜಹಂಸಂ ತನ್ನರ್ಧಾಂಗಿಯಪ್ಪ ವಸುಮತಿಯುಂ ಸೀಮಂತಕ್ಕೆಮ್ಮರಸನಪ್ಪ ಪ್ರಹಾರವರ್ಮನಂ ತನಗತಿಮಿತ್ರನಪ್ಪ ದಱಿಂ ಕರಸಲಾತಂ ತನ್ನರಸಿಯಪ್ಪ ಪ್ರಿಯಂವರೆಯುಮಿವರ್ ಕುಮಾರರ್ ಸಹಿತ ಸಕಲಬಲಮುಂ ಕೂಡಿಕೊಂಡು ಪುಷ್ಪಪುರಕ್ಕೆ ಬರ್ಪುದುಂ,

ಅರಿಮಾಳವೇಶ್ವರಂ ನಿಜ ।
ವಿರೋಧದಿಂ ಬಂದು ಮುತ್ತೆ ಮಗಧೋರ್ವೀಶಂ ॥
ಧುರದೊಳ್ ಮೆಯ್ಮಱಿದಂ ನ ।
ಮ್ಮರಸಂ ಸಿಕ್ಕಲ್ಕೆ ಬಿಟ್ಟು ಕಳುಪಿದನಾತಂ ॥ ೧೩೦

ಅಂತು ಬಿಟ್ಟು ಕಳುಪಲೆಮ್ಮರಸಂ ಕುಟುಂಬಸಹಿತಂ ತನ್ನ ಮಿಥಿಲಾಪುರಕ್ಕೆ ಪೋಗುತಿರ್ದಾಗಳೊಬ್ಬ ದೂತನಿದಿರ್ವಂದು

ಮುರುಳಂ ಪ್ರಹಾರವರ್ಮಂ ।
ಪರನೃಪತಿಯ ಕೆಯ್ಗೆ ಸಿಕ್ಕಿದಂ ರಾಜ್ಯಕ್ಕಾ ॥
ನರಸೆಂದು ವಿಕಟವರ್ಮಂ ।
ಬರವಸದಿಂ ಪಟ್ಟಬದ್ಧನಾದನಿಳೇಶಾ ॥ ೧೩೧

ಅಂತು ನಿನ್ನ ದಾಯಾದ್ಯನಪ್ಪ ವಿಕಟವರ್ಮಂ ಪಟ್ಟಮಂ ಕಟ್ಟಿಕೊಂಡುದಲ್ಲದೆಯುಂ ನೀಂ ಬರ್ಪುದಂ ಕೇಳ್ದು ಬಲಮಂ ಕೂಡಿಕೊಂಡು ಕೊಲಲ್ ಬರುತ್ತಿರ್ಪನೆಂದು ಬಂದ ದೂತಂ ಪೇಳಲರಸಂ ರಾಜಮಾರ್ಗಂಬಿಟ್ಟು ಅರಣ್ಯಮಾರ್ಗದೊಳ್ ಪೋಗುತ್ತಿರ್ಪಾಗಳ್

ಕ್ರೂರವ್ಯಾಘ್ರವನೇಭಕೇಸರಿಮಹಾಕೋಳಾಹಳಾಂದೋಳಘೋ |
ರಾರಣ್ಯಾಂತದೊಳದ್ಧಭೇದದೊದವಿಂ ಬರ್ಪನ್ನೆಗಂ ಕಾರ್ಮುಕ ||
ಜ್ಯಾರಾವಂ ಮಿಗೆ ಬಾಣಮಂ ಸುರಿಯುತುಂ ವ್ಯಾಧರ್ಕಳೆಯ್ತಂದು ಸಂ |
ಹಾರಂಮಾಡಿದರೆಮ್ಮ ಭೂಪಬಲಮುಂ ಬೆಂಬತ್ತಿ ಬೆಂಬೀಳ್ವಿನಂ || ೧೩೨

ಅಂತು ಬೆಂಬತ್ತೆ

ಭಿಲ್ಲರ್ಗಳ್ಕಿದ ಮೃಗಮುಡು |
ವಲ್ಲಭನಂ ಸಾರ್ದೆಡಲ್ಲಿ ಹಾವಿನ ಭಯದಿಂ ||
ತಲ್ಲಣಿಸುವಂತಿರಾಯ್ತೆನ |
ಗಿಲ್ಲಿ ವಿಪತ್ತೆಂದು ನೃಪತಿ ದುಃಖಿತನಾದಂ || ೧೩೩

ಅಂತು ದುಃಖಿತನಪ್ಪಂತು ಕಿರಾತವತೆ ಪ್ರಹಾರವರ್ಮನ ಬಲಮಂ ನಿರ್ಮೂಲಮಂ ಮಾಳ್ಪಾಗಳಾನಂಬೆಯೆನ್ನ ಕೈಯ್ಯೊಳಿರ್ದ ಕುಮಾರಸಹಿತಮೋಡಿ ಬಂದಿಲ್ಲಿರ್ಪುದುಂ,

ಆರ್ದೊಂದು ಘೋರವಕ್ತ್ರಂ |
ಶಾರ್ದೂಲಂ ಮೇಲೆವಾಯಲಾನಂಜಿ ಕರಂ ||
ಸಾರ್ದು ವನದಿಂ ಕರಾಗ್ರದೊ |
ಳಿರ್ದ ಕುಮಾರನನರಣ್ಯದೊಳ್ ಬಿಸುಡಲೊಡಂ || ೧೩೪

ಅಂತಾಶಿಶು ಸಮೀಪದೊಳಿರ್ದ ಕಪಿಲಾಸವದೊಳ್ ಪುಗುವುದುಮಲ್ಲಿಗಾ ಪುಲಿ ಪಾಯಲೊಡಂ

ಮುನ್ನಂ ಶರಯಂತ್ರಮುನ |
ತ್ಯುನ್ನತಿಯಿಂ ಶಬರರೊಲ್ದು ಕಪಿಲಾಸವದೊಳ್ ||
ಚೆನ್ನೆಸೆಯೆ ಮಾಡಿರಲ್ ಯಂ |
ತ್ರಂ ನೆಳ್ಕನೆ ಪುಲಿಯ ಗೋಣನುಡಿಯಿತ್ತಾಗಳ್ || ೧೩೫

ಅದಂ ಮುಱೆಯೊಳ್ ನೋಡುತ್ತಿರ್ದ ಶಬರರ್ ಬಂದು ಪುಲಿ. ಕೆಡೆದುದಂ ಕಂಡು ಕುಮಾರನಂ ಕೊಂಡು ಪೋದರೆಂದು ವೃದ್ಧೆ ಪೇೞಲ್ ಮುನಿಶಿಷ್ಯಂ ಕೇಳ್ದಾಶ್ಚರ್ಯಂಬಟ್ಟಾಬೇಡರ ಪೋದ ದಾರಿಯಂ ತೋಱುವೆನಲಲ್ಲಿಯೆ ಪೋದರೆಂದು ವೃದ್ಧೆ ಪೇೞಲಾಮಾರ್ಗದೊಳಾಂ ಪೋಗಿ ನೋೞ್ಪೆನೆಂದು ಮುನಿಶಿಷ್ಯಂ ಪೋಗಿ ನೋಡಿ

ಎಲ್ಲಿಂದ ಬಂದೆಯೆಂಬರೊ !
ಕೊಲ್ಲಿವನಂ ಬೇಹುಕಾಱನೆಂಬರೊ ಪಾರ್ವಂ ॥
ಮೆಲ್ಲಿದನೆಂಬರೊ ಧರೆಯೊಳ್ ।
ಭಿಲ್ಲರ್ ಕಡುಮೂರ್ಖರೆಂದು ಚಿಂತಿಸುತಿರ್ದಂ ॥ ೧೩೬

ಅಂತು ಚಿಂತಿಸುತ್ತುಂ ನಡೆಯೆ ಮುಂದೆ

ಅಡವಿಯೊಳಾರ್ದು ಬೇಡನಡೆ ಬೇಂಟೆಯನಾಡಿ ಶರಪ್ರಘಾತದಿಂ ।
ಕೆಡೆಪಿದ ಬೆಳ್ಮಿಗಂಗಳ ಕಳೇವರಮಂ ಪೊಸಕಿಚ್ಚಿನಿಂದಮಂ ॥
ಸುಡು ಕಡಿ ಬಿಚ್ಚು ಬಲ್ಪಿಡಿಪು ಕೊಯ್ ಕೊಱೆ ತನ್ನವರ್ಗೆ*ಯೆನಿಪ್ಪ ನಾ।
ಣ್ನುಡಿಗಳನಾಲಿಸುತ್ತುಮಿರದೆಯ್ದಿದನಾಮುನಿ ಭಿಲ್ಲಸಂಘಮಂ ॥ ೧೩೭

ಅಂತೆಯ್ದುವನ್ನೆಗಮಾಬೇಡವಡೆಯೊಳ್ ಕೆಲಂಬರ್

ಚಿಕ್ಕನನಂ ಬೇಂಟೆಗೆ ಬಲಿ ।
ಯಿಕ್ಕುವಮೋ ಗುಱಿಯನೊಡ್ಡಿ ಕೆಡೆಪುವಮೋ ಮೇ ॥
ಲಕ್ಕೆ ಬಿಸುಟಸಿಯನಾನ್ಟುಮೊ ।
ಚಿಕ್ಕನೆ ಯೆರಡಾಗಿ ಸೀಳ್ವೆಮೋ ಎನುತಿರ್ದರ್ ॥ ೧೩೮

ಅದೆಂತೆಂಬುದಂ ಕೇಳ್ದಲ್ಲಿಗೊಂದುಪಾಯಮಂ ಕಾಣಲ್ವೇೞ್ಕುಮೆಂದು ಪರಪ್ರಾಣಾರ್ಥಂ ಪುಸಿದೊಡೆ ದೋಷಮಿಲ್ಲೆಂದು

ಎಲೆ ಮಗನೆ ಪಡೆದೊಡಲ್ಗದ ।
ವಟಿಲಂ ಪುಟ್ಟಿಸುತುಮೆಲ್ಲಿಗೆಯ್ದಿದೆಯೋ ಎಂ ॥

ದಱಿಂತೆ ಪಡೆದಂತೆ ದುಃಖದೊ |
ಳಳವಡಿಸಿದನೊಂದು ನಟನೆಯಿಂ ಮುನಿಶಿಷ್ಯಂ ॥ ೧೩೯

ಅಂತಱಿಲುತ್ತೆ ಬರುತ್ತಿರ್ದವಂ ಕಂಡು ಕಿರಾತಪಡೆ ಈಕುಮಾರಕನೀತನ ಮಗನಾಗದೆ ಮಾಣನೆಂದಲ್ಲಿ ಕೆಲಬರ್ ಕರುಣಿಸಿ ಕಣ್ಬನಿಯುಂ ತೊಡೆದು ಕುಮಾರನಂ ಕುಡಲಾಮುನಿಕುಮಾರಂ ಕೊಂಡು ಬಂದು ವೃದ್ಧೆಯಿರ್ದ ತಾಣದೊಳವಳಂ ನೋಡಿ ಕಾಣದೆ ವಾಮದೇವರ ಸಮೀಪಕ್ಕೆ ಕೊಂಡು ಬಂದು ತಚ್ಚಿತ್ರಮಂ ಪೇಳ್ದೊಡೆಯಾತಂ ರಾಜಹಂಸನ ಮಿತ್ರಪುತ್ರನೀತನನಾತಂಗೆ ಕೊಟ್ಟುಬಾಯೆಂದು ಕಳುಪಲಾತಂ ಬಂದು ಮಾಗಧಂಗೆ ಕೊಟ್ಟು ತದಾಶ್ಚರ್ಯಮಂ ಪೇಳ್ದೊಡರಸಂ ಸಂತಸಂಬಟ್ಟು ಪ್ರಹಾರವರ್ಮನ ದೆಸೆಗೆ ಸುಯ್ದು ಕುಮಾರಂಗುಪಹಾರವರ್ಮನೆಂದು ಪೆಸರಿಟ್ಟು ವಸುಮತಿಯ ಕೈಯೊಳ್ ಕೊಟ್ಟು ದಶದಿಙ್ಮಂಡಲದಿಂ ಪ್ರಸಿದ್ಧಿವಡೆದಿರ್ಪಂತೆ ದಶಕುಮಾರರಂ ಪಡೆಯೆ

ಖಗಭೂಷರ್ ಸಲೆ ದಕ್ಷಯಾಗದೊದವಿಂ ಭಂಗಕ್ಕೆ ಪಕ್ಕಾಗಲಿಂ |
ಬೊಗೆದಿರ್ದರ್ ದಶಸೂರ್ಯರೆಂಬ ತೆಱದಿಂ ಪದ್ಮಾನುರಾಗಪ್ರಭೂ ॥
ತಗುಣಂ ವಿಶ್ರುತದೇಹದೀಪ್ತಿ ಪರರಾಜದ್ವೇಷಮೊಪ್ಪಲ್ ಪ್ರತಾ |
ಪಿಗಳೇಂ ಪೆಂಪೆಸೆದಿರ್ದರೋ ದಶಕುಮಾರರ್ ಕೌತುಕಪ್ರೇಮದಿಂ ॥ ೧೪೦

ಅಂತು ದಶಕುಮಾರರ್ ರಾಜವಾಹನ, ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ಸುಶ್ರುತ, ಪ್ರಷ್ಪೋದ್ಭವ, ಅರ್ಥಪಾಲ, ಸೋಮದತ್ತ, ಪ್ರಹಾರವರ್ಮ, ಉಪಹಾರವರ್ಮರ್. ಅಂತಿರ್ದ ದಶಕುಮಾರರಂ ಭೃಂಗಿ ಭೇತಾಳ ವೈತಾಳಿ ಮರುಜರಿಯೆಂಬ ಶಸ್ತ್ರವಿದ್ಯೆಯೊಳಂ ಸಮಪಾದ ವೈಷವ ಮಂಡಲಾಲೀಢ ಪ್ರತ್ಯಾಲೀಢ ಮೆಂಬ ಧನುರ್ವಿದ್ಯೆಯೊಳಂ, ಚತುರಶೀತಿಪದವಿಧಾನವಾದ ಗಜಶಿಕ್ಷೆಯೊಳಂ, ಪಂಚಧಾರಾಸಂಚಿತಮಾದಶ್ವಾರೋಹಣದೊಳಂ, ಸ್ವರ್ಣನಾಭ ಚಿತ್ರಕವಾತ್ಸ್ಯಾಯನವಿರಚಿತಕಾಮಶಾಸ್ತ್ರದೊಳಂ, ಶಬ್ದಾರ್ಥಾಲಂಕಾರವ್ಯಾಕರಣಚ್ಛಂದೋವಿಲಾಸಮೆಸೆವ ಶಬ್ದಶಾಸ್ತ್ರದೊಳಂ, ಮತ್ತಮನೇಕನೀತಿಶಾಸ್ತ್ರದೊಳಂ, ಪ್ರವೀಣರಪ್ಪಂತು ಮಾಡಿ ರಾಜಹಂಸಂ ಸುಖದೊಳಿರ್ದಂ. ಅದೆಂತೆನೆ—

ಸುಲಲಿತಮಪ್ಪಿನಂ ದಶಕುಮಾರಕರೊಪ್ಪುವ ಬಾಲಲೀಲೆಯುಂ ।
ನಲವಿನೊಳಾವಗಂ ಪದೆದು ಭಾವಿಸಿ ತನ್ನಯ ಚಿತ್ತದುತ್ಸವಂ ॥
ಫಲಭರವಾಗಿ ಚೆಲ್ವೆಸೆಯುಲಿಂದ್ರಿಯುಪಕ್ಷಕುಲಂ ನಿರಂತರಂ ।
ಚಲಿಸದೆ ರಂಜಿಸಿದನಿಳೆಯೊಳ್ ನಿಜವಾಗಲಭಂಗವಿಕ್ರಮಂ ॥ ೧೪೧

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಗಧೇಶ್ವರ ಮಾಳವರಾಜ ಯುದ್ಧವರ್ಣನಂ,
ದಶಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ,
ದ್ವಿತೀಯಾಶ್ವಾಸಂ.

॥ ತೃತೀಯಾಶ್ವಾಸಂ ॥

ಶ್ರೀಮನ್ಮಗಧಮಹೀರತಿ ।
ಕಾಮಂ ರಿಪುರಾಜಮೌಳಿಮಾಣಿಕ್ಯರುಚಿ ॥
ಸ್ತೋಮಾಂಘ್ರಿದ್ವಿತಯಂ ನಿ ।
ಸ್ಸೀಮದಿನೊಪ್ಪಿದನಭಂಗವಿಟ್ಠಲಭೃತ್ಯಂ ॥ ೧

ಅದಲ್ಲದೆಯುಂ

ಸುತಸೇವಾಯಾತವೀರಾದ್ಭುತರಸಜಲದೊಳ್ ಚಾಮರಗ್ರಾಹಿಣೀಹ ।
ಸ್ತತರಂಗಶ್ರೇಣಿಯೊಳ್ ಪಾಠಕಜಯಜಯಕೋಳಾಹಳಧ್ವಾನದೊಳ್ ಸ ॥
ಸ್ನತನಾನಾಭೂಪಮೌಳಿವ್ರಜಸರಸಿಜದೊಳ್ ಬಂಧುಸಂದೋಹಗಂಭೀ ।
ರತೆಯೊಳ್ ಸೌಭಾಗ್ಯಶೋಭಾಪುಳಿನದೊಳೆಸೆದಂ ರಾಗದಿಂ ರಾಜಹಂಸಂ ॥ ೨

ಅಂತು ಸಕಲರಾಜಲೋಕಂಬೆರಸೊಡ್ಡೋಲಗಂಗೊಟ್ಟಿರ್ದು

ಸಮುಚಿತಯೌವನೇಭಮದಲೇಖೆಯೊ ಯೌವನಪುಷ್ಪಭೃಂಗಕಾ ।
ಳಿಮವೊ ವಿಲಾಸಯೌವನಸುಧಾಕರಲಕ್ಷ್ಮಿಯೊ ಪೇೞೆನಲ್ ಕರಂ ॥
ವಿಮಳಮುಖಾಬ್ಜದೊಳ್ ಪೊಳೆವ ತುಪ್ಪುೞಿ ನಾಸೆಯೊಳೊಪ್ಪುತಿರ್ಪ ವಿ ।
ಕ್ರಮಯುತನಂ ನಿಜಾತ್ಮಸುತನಂ ಪದೆದೀಕ್ಷಿಸಿದಂ ನೃಪಾಲಕಂ ॥ ೩

ಅಂತರಸಂ ಕುಮಾರನಂ ನೋಡಿ ಯುವರಾಜಪಟ್ಟಕ್ಕೆ ಕಾಲಮಾದುದೆಂದು ಮನದೊಳ್ ಭಾವಿಸಿ ಮಂತ್ರಿಗಳ್ವೆರಸು ಶುಭದಿನಶುಭಮುಹೂರ್ತದೊಳ್

ಕಂದರ್ಪಂಗದಟೇೞೆ ಮಂದಪವನಂ ಸಂತೋಷಮಂ ಪೇೞೆ ಮಾ ।
ಕಂದಂ ಪೊಂಗುಡಿದೋಱೆ ಸಂತತವಸಂತಂ ಸೌಖ್ಯಮಂ ಬೀಱೆ ಸಾ ॥
ನಂದಂ ಮಂತ್ರಿಗಳಪ್ಪುದಾಯ್ತೆನೆ ಕುಮಾರಂಗಾರ್ಪಿನಿಂ ತನ್ನ ಪೆಂ ।
ಪಿಂದಾರ್ಯರ್ಗಂ ಯುವರಾಜಪಟ್ಟಮನಲಂಪಿಂ ಕಟ್ಟಿದಂ ಭೂಭುಜಂ ॥ ೪

ಅಂತು ರಾಜಹಂಸಂ ರಾಜವಾಹನಂಗೆ ಯುವರಾಜಪಟ್ಟಮಂ ಕಟ್ಟಿ ದಶಕುಮಾರರಂ ದಿಗ್ವಿಜಯಕ್ಕೆ ಕಳಿಪಲೆಂದು

ದಿಗಿಭಂ ಘೀಂಕರಿಸಿತೆ ನಾಗಲೋಕದಹಿಗಳ್ ಬೆಂಡೇಱೆ ಭೂಭಾಗದೊಳ್ ।
ಭಗಣಂ ಬೀೞೆ ಮರುತ್ತರಂಗಿಣಿ ಮಱಿಲ್ ತೋಱಲ್ ತುಱುಂಕಾಡೆ ಗೋ ॥
ತ್ರಗಿರಿವ್ರಾತಮಳಂಕೆಗೆಟ್ಟು ನಡುಗಲ್ ಶ್ರೀರಾಜಹಂಸಾಜ್ಞೆಯಿಂ ।
ದೊಗೆದತ್ತಂದು ಸುವರ್ಣಕೋಣಪತಿಯಿಂ ಪ್ರಸ್ಥಾನಭೇರೀರವಂ ॥ ೫

ಅಂತು ಪ್ರಯಾಣಭೇರಿಯುಂ ಪೊಯಿಸಿ,

ಗುಡಿ ಗೂಡಾರಂ ಪಟಂ ಕೊಟ್ಟಗೆ ಪೆಗಲ್ವೆಱೆ ಪೆರ್ಬಂಡಿಗಳ್ ಪೆಂಪ್ರವೆತ್ತಂ
ಗಡಿ ನಾನಾವಸ್ತ್ರರತ್ನಾಭರಣವಿತತಿ ವೈದ್ಯರ್ ಪೊಲಂ ಬಲ್ಲವರ್ಗಳ್ ॥
ಬಿಡುದಾಣಕ್ಕಾಪ್ತವರ್ಗಂ ಸಹಿತಮನಿಪನುಂ ಸೇನೆಯುಂ ಕೊಟ್ಟು ತೇಜಂ ।
ಬಡೆಯಲ್ ತತ್ಪುತ್ರರಂ ದಿಗ್ವಿಜಯಮನೆಸಗಲ್ ಕೂರ್ತು ಬೀಳ್ಕೊಟ್ಟನಾಗಳ್

ಮತ್ತಂ

ಕರಿತುರಗರಥಪದಾತಿಯು ।
ನರಸಂ ನಲವಿಂ ಕುಮಾರಕರ್ಗಿತ್ತು ದಿಶಾಂ ॥
ತರವಂ ಜಯಿಸಿಮೆನುತ್ತಾ ।
ದರದಿಂ ಬೀಳ್ಕೊಟ್ಟನಾರ್ಪಿನಿಂ ಶುಭದಿನದೊಳ್ ॥ ೭

ಅಂತು ಬೀಳ್ಕೊಡಲ್ ದಶಕುಮಾರರನೇಕಸೇನಾಸಮನ್ವಿತರ್ ಶುಭಶಕುನದಿಂ ಪೊಱಮಟ್ಟು ಬರ್ಪಾಗಳ್

ಇದು ದಲ್ ದಿಗ್ವಿಜಯಕ್ಕುಪಕ್ರಮಮೆನಲ್ ಸೇನಾಪದೋದ್ಧೂತಧೂ ।
ಳಿ ದಿಸಾಧೀಶ್ವರರಾಜಮಂಡಲಮನಾರ್ಪಿಂ ಮುತ್ತಿ ಬೆಂಕೊಂಡು ನೀ ॥
ರದಮಾರ್ಗಕ್ಕಿರದೆತ್ತಿ ಧೂಳಿಮಯಮಾಗಲ್ ಮಾಡಿ ಬಲ್ಪಿಂ ವಿಯ ।
ನ್ನದಿಯುಂ ಪೊರ್ದುಱೆ ಸತ್ಯಲೋಕದೊಡವಂ ಮಾಱುತ್ತ ಗುರ್ಬಿಪ್ಪಿನಂ ॥

ಸುರಪತಿ ಬೆಚ್ಚಲಗ್ನಿ ಸೆಡೆಯಲ್ ಯಮನುಳ್ಕಿರಲುಗ್ರರಾಕ್ಷಸಂ ।
ದೊರೆಗಿಡಲಬ್ಧಿಪಂ ಬೆದಱಲೇಣಧರಂ ನಡೆಗುಂದಲೆಯ್ದೆ ಕಿ ॥
ನ್ನರಪತಿ ಬಳ್ಕಲೀಶನತಿಭೀತಿಯೊಳೊಂದಿರೆ ದಿಗ್ಗಜಕ್ಕೆ ಭೀ ।
ಕರಮೆನೆ ರಾಜವಾಹನನೃಪಂ ನಡೆಗೊಂಡೆಡೆಯೊಳ್ ನಿರಂತರಂ ॥ ೯

ಪಟುಭಟಪದೋದ್ಧತಧೂಳೀ |
ಪಟಳಂ ಕವಿದಂಧಕಾರಮಂ ಪ್ರಟ್ಟಿಸೆ ವಿ ||
ಸ್ಫುಟಮಕುಟರತ್ನರುಚಿಯಿಂ |
ಕಟಕಂ ನಡೆಗೊಂಡುದಖಿಳಧಾತ್ರೀಪತಿಯಾ || ೧೦

ಅಂತು ನಡೆಗೊಂಡು ತನ್ನ ರಾಜ್ಯಮಂ ಕಳೆದು ಹೇಮಕೂಟದ ತಳ್ಪಲ ಮಧ್ಯಸ್ಥಾನದೊಳ್ ಬೀಡಂಬಿಟ್ಟೊಡ್ಡೋಲಗಂಗೊಟ್ಟು ಕುಳ್ಳಿರ್ದಾಗಳ್

ನೊಸಲೊಳಗಿಟ್ಟ ಚೆಲ್ವ ತಿಲಕಂ ಪಿಡಿದಗ್ಗದ ಸೇಡುಗೋಲ್ ವಿಲಂ |
ಬಿಸು ವುಪವೀತಮೊಪ್ಪಿ ಬಿಱುಗಾಯದ ಪೋರ್ಗೆಯ ಪಿಲ್ವ ಧೋತ್ರಮೋ ||
ಱಿಸಿದೆಡಗೈಯ ಬಿಲ್ ಬೆರಳ ದರ್ಭೆ ಮಹಾದ್ಭುತನಂ ಮನಕ್ಕೆ ಸೂ |
ಚಿಸಲತಿಸಂಭ್ರಮಂ ಬೆರಸು ಬಂದನದೊರ್ವ ಸಮಂ ದ್ವಿಜಾಧಮಂ || ೧೧

ಅಂತೊರ್ಬ ಬ್ರಾಹ್ಮಣಂ ಬಂದು ಮಂತ್ರವಿಲ್ಲದಕ್ಷತೆಯಂ ಕೊಟ್ಟೊಡೆ—ಇದೇನ್ಕೆ ವಿಪರೀತವೇಷಮೆಂದಾತನಂ ರಾಜವಾಹನಂ ಕೇಳ್ವುದುಮಾತನಿಂತೆಂದಂ:—

ಅಜುನೀರ್ವಳ್ಕಂ ನೆಱಿಲ್ಗಂದಿದ ತರುನಿಚಯಮಂ ಧೂಳಿಡದುರ್ಬಿ ನಿಚ್ಚಂ |
ಪಱಿಗೆಟ್ಟಿಪರ್ಸೆ ನಿಶ್ಶ್ರೇಷ್ಟ್ಯೆಯ ತನುವನಿಶಂ ಬೋಧನಾಧ್ಯಾನವೇನುಂ ||
ಮಱೆದುಂ ಮಾಡಲ್ಕನಂ ಬಾರದ ಬಗೆ ಮಿಗೆ ಸರ್ವೋರ್ವಿಯೊಳ್ ಕೂಡೆ
ನೋಡಲ್ | ಬಟುನಾಗಲ್ ಪಾರ್ವರಾಗಲ್ ಕಲಬರೊಲೆದರಣ್ಯಕ್ಕೆ ಪಕ್ಕಾಗಿ
ಬಂದರ್ || ೧೨

ಅಂತು ಬಟುನಱಿಯಟ್ಟೆ ಕಂದಮೂಲಫಲಂಗಳಂ ಮೆಲ್ದು ಜೀವಿಪೆವೆಂದು ಕೆಲಂಬರ್ ಬ್ರಾಹ್ಮಣರೊಡಗೂಡಿ ಶಿಶುವಾಗಿರ್ದೆನ್ನನೆತ್ತಿ ಕೊಂಡೆಮ್ಮ ತಾಯ್ತಂದೆಗಳರಣ್ಯಕ್ಕೆ ಬಂದು

ಮಾತಂಗವೈರಿಸತ್ವಂ |
ಮಾತಂಗಕನೆಂಬನಿರ್ಪನಾವನದೊಳ್ ಮ ||
ತ್ತಾತನ ಪೆಸರಿಟ್ಟುಂ ಮ |
ತ್ತಾತಂ ಪೊರೆದೆನ್ನನೊಲ್ದು ನರಪತಿತನಯಾ || ೧೩

ಅಂತು ಪೆಸರಿಡಲಾವಮಾತಂಗಕನೆಮ್ಮೆಲ್ಲರ್ಗೆ ಜೀವನೋಪಾಯಮುಮಂ ಮಾಡುತ್ತಿರ್ಪನ್ನಂ ಕೆಲವುದಿನದಿಂ ಮೇಲೆ

ಜನಕಂ ಮಾತೆ ಸಹೋದರರ್ ಕುಲಜರಾಪ್ತರ್ ಬಂಧುಗಳ್ ಸಂತತಂ ।
ವನವಾಸವ್ಯಥೆಯಿಂದವರ್ ಮಡಿದರಾನೀಬೇಡರೊಳ್ ಕೂಡಿ ಕಾ ॥
ನನದೊಳ್ ಬೇಂಟೆಯನಾಡಿ ಕಳ್ದುಱಿವು ದ ಷ್ಕರ್ಮಕ್ಕೆ ಪಕ್ಕಾದ ಜೇ ।
ವನದಿಂದಿರ್ದಪೆನುರ್ವರಾಧಿಪತಿ ಕೇಳ್ ಸಂಸರ್ಗಮೇಂಗೆಯ್ಯದೋ ॥ ೧೪

ಎಂದಾದ್ವಿಜಾಧಮಂ ಪೇೞ್ದೊಡೆ ಮತ್ತಮರಸನನಿತುಂ ಗಾಯದ ಕಲೆಗೆ ಕಾರಣಮೇನೆಂದು ಕೇಳಲಾತನಿಂತೆಂದಂ:—

ನೆರೆದಿರ್ದ ಪುರನನಿಱಿಯಲ್ ।
ಕಿರಾತತತಿ ಪೋಪ ಪದದೊಳಿದಿರೊಳ್ ಪಾರ್ವಂ ॥
ಬರುತಿರ್ದನೊರ್ಬನಾತನ ।
ನರವರಿಸದೆ ಕೊಲ್ವೆವೆಂದು ಮುತ್ತಿದ ಪದದೊಳ್ ॥ ೧೫

ಗೋವಿಂಗಂ ಪಾರ್ವಂಗಂ ।
ಸಾವಡಸಲ್ ತನ್ನ ಜೀವದಾಸೆಯನುೞಿದೊ ॥
ಲ್ದಾವಂ ಕಾದಪನಾತಂ ।
ಕೈವಲ್ಯಾಂಗನೆಯ ಕಾಂತನಪ್ಪನಮೋಘಂ ॥ ೧೬

ಎಂಬುದಂ ಕೇಳ್ದುಱಿವೆನಪ್ಪುದಱಿಂದಾತನಂ ಕೊಲಲೀಸದೆ ಮೇಲೆ ಬಿದ್ದೊರ್ಡಾತನಂ ಬಿಟ್ಟೆನ್ನನಿಱಿಯಲಾಂ ಗತಜೀವಿತನಾಗೆ

ಸಲೆ ಕಾಯ್ದುರ್ಕಿನ ದಾರೆಯುಂ ಬಿಡು ನವದ್ವಾರಂಗಳೊಳ್ ಕಾಯ್ದ ಕಾ ।
ವಲಿಯೊಳ್ ಕುಳ್ಳಿರಿಸೊಯ್ದು ಬಾಲವುಱುವ್ರಂ ಕೀವಾಗಿ ತೀವಿರ್ದ ಸೀಂ ॥
ಬುಱುವಂ ಬಾಯ್ಗೆಱೆ ನೂಂಕು ಪಾಕುಳದೊಳೇಱಲ್ದೇಱು ಶಸ್ತ್ರ
ಸ್ತ್ರದು । ಯ್ಯಲೆಯುಂ ಕೊಯ್ ಕೊಱೆಯೆಂಬ ಕಾಲಯುವನಂ ಕಂಡೆಂ
ಧರಾಧೀಶ್ವರಾ ॥ ೧೭

ಪಂಚಮಹಾಪಾತಕಿಯುಂ ।
ವಂಚಕನಂ ನುಡಿದು ಪ್ರಸವನಂ ಸಂಗರದೊಳ್ ॥

ಪೆಂಚುವನಂ ಪುಱಿಗೊಂಡದ ।
ಸಂಚದೊಳಿಕ್ಕುವ ಕಾಲವೋಱಿದ ತೆಱದಿಂ ॥ ೧೮

ಎಂಬ ಘೋರಮುಖನಪ್ಪ ಕಾಲನ ಸಮೀಪಕ್ಕಾಂ ಪೋಗಲಾತನೆನ್ನಂ ನೋಡಿ —

ಈತಂ ಬ್ರಾಹ್ಮಣನಂ ಕಾ ।
ದಾತಂ ಕೃತಕೃತ್ಯನೀತನಂ ತಂದವರಾರ್ ॥
ಭೂತಳಕೆ ಪೋಗೆನುತ್ತುಂ ।
ಪ್ರೇತೇಶಂ ಮಗು*ಳ್ದು ಕಳುಪಿದಂ ಪದೆದೆನ್ನಂ ॥ ೧೯

ಅಂತಾಯುಮನೆನ್ನಂ ಕಳುಪಲಾಂ ಬರ್ಪಾಗಳ್ ಮುಂದೆ ನಾಂ ಕಾದ ಬ್ರಾಹ್ಮಣನೆನ್ನ ಕಳೇವರಮಂ ಸಂಸ್ಕರಿಸಲೆಂದಿರ್ಪಾಗಳ್

ಗಣನೆಗರಿದೆನಿಪ ದುಷ್ಕೃತ ।
ಗಣಮಂ ಪರಿಪರಿಸುವಿಷ್ಟದೈವಕ್ಕೆ ಸಲ ॥
ಕ್ಷಣಭಜನೆಯೆಸೆಯೆ ದಂಡ ।
ಪ್ರಣುತಂ ತಾನಾದನೇೞ್ವ ತೆಱದಿಂದೆೞ್ದಂ ॥ ೨೦

ಅಂತಾನೆೞ್ದುದಂ ಕಂಡಾಬ್ರಾಹ್ಮಣಂ ತನಗೆ ಪ್ರಾಣಮಿರ್ಮಡಿಸಿದಂತೆ ಸಂತಸಂಬಟ್ಟಾತನೆನ್ನಂ ಮನೆಗೆ ಕೊಂಡೊಯ್ದು ಶಸ್ತ್ರಹತಿವ್ರಣಮಂ ಮಾಣಿಸಿ ಬೞಿಕ್ಕೆ ನಾಂ ಪೋದಪೆನೆನೆ ಮತ್ತಂ ಕಿಱಿದು ದಿನಮಿರಿಸಿಯಾತನಿಂ ಮಂತ್ರೋಪದೇಶಮಂ ಕೈಕೊಂಡು ಆತನಂ ಕಳುಪಿ ಬೞಿಕ್ಕೆನಗೆ ವೈರಾಗ್ಯಂ ಪುಟ್ಟಲೀಹೇಮಕೂಟಪ್ರದೇಶಕ್ಕೆ ತಪಂಬಡಲ್ ಬಂದಿರ್ದಪೆಂ. ಇನ್ನೇಕಾಂತದೊಳೊಂದು ಕಾರ್ಯಮಂ ಪೇೞ್ದಪೆನೆನಲರಸಂ ವಿಸ್ಮಯಂಬಟ್ಟು ಏಕಾಂತಮಂ ಬೞಿಕ ಪೇೞೆಂದಾತನಂ ಕಳುಪೆ

ದಿನಯಾತ್ರಾನಿಗಮಕ್ರಮಕ್ಕೆ ವಿಷಮಂ ಸಪ್ತಾಶ್ವಮಿನ್ನೊಂದು ವಾ ।
ಹನಮಂ ತಂದು ಸಮಂ ತುರಂಗಮೆನಿಪಂತಾಂ ಮಾೞ್ಪೆನೆಂಬೊಂದು ಭಾ ॥
ಮನೆಯಿಂದುತ್ಸವರಾಗಮಂ ತಳೆದು ಸೂರ್ಯಂ ಪಶ್ಚಿಮಾಂಭೋಧಿಯಂ ।
ಮನವೊಲ್ದೆಯ್ದಿದನೆಂದು ಬಣ್ಣಿಸೆ ಜಗಂ ಚೆಲ್ವಾಯ್ತು ಸಂಧ್ಯಾಗಮಂ ॥ ೨೧

ಮುಣುಂಗಿ ವಾರ್ಧಿಯೊಳೊಪ್ಪುವ ।
ಬಾಡಬಶಿಖಿ ಪಶ್ಚಿಮಾಬ್ಧಿಯೌರ್ವಾನಳನಂ ॥
ನೋಡಲ್ ಬರ್ಪಂತಿರ್ದುದು ।
ನೀಡುಂ ಕೆಂಪಡರ್ದ* ಸಂಜೆಯೊಳ್ ರವಿಬಿಂಬಂ ॥ ೧೨

ಅಂತು ಸಂಧ್ಯಾಕಾಲದೊಳೋಲಗಮಂ ವಿಸರ್ಜಿಸಿ ಸಂಧ್ಯಾವಂದನಾದಿ ಕ್ರಿಯೆಗಳಂ ಮಾಡಿ ಕುಳ್ಳಿರ್ದು ದೌವಾರಿಕನಂ ನೋಡಿ ಏಕಾಂತಮಂ ಪೇಳ್ವೆನೆಂದ ಬ್ರಾಹ್ಮಣನಂ ಕರೆಯೆನಲವನಾತನಂ ಕರೆವುದುಂ

ಮೆಯ್ಯ ಕೃತಪ್ರಣ್ಯಾಮೆನುತೆನು ।
ತೊಯ್ಯನೆ ಪದವಿ ಡುತೆ ಬಂದು ನೃಪತಿಗೆ ನಲವಿಂ ।
ಕೈಯೆತ್ತಿ ಪರಸಿ ನಿನಗಂ ।
ಗೆಯ್ಯಲ್ವೇಳ್ಕೆಂದೊಡರಸ ಚಿತ್ತಮಿಸೆಂಮ ॥ ೧೩

ಅಂತರಸಂಗಾಬ್ರಾಹ್ಮಣನಿಂತೆಂದಂ:—

ಸಕಲಾಭರಣಾನ್ವಿತೆ ಕ ।
ನ್ನಿಕೆಯೊರ್ಬಳ್ ನನ್ನ ಬಳಿಗೆ ಬಂದೆನಗೀಮಾ ॥
ಣಿಕವಂ ಕೊಟ್ಟೆನ್ನಿದಿರೊಳ್ ।
ಮಕುಳಿತಕರಕಮಳೆಯಾಗಿ ಮತ್ತಿಂತೆಂದಳ್ ॥ ೧೪

ನಾಳೆ ಮಗಧೇಶನಣುಗನ ।
ಪಾಳೆಯಮಿಾತಾವನೆಯ್ದಿ ಬಿಡುಗುಂ ತದ್ಭೂ ॥
ಪಾಳಂ ಸತ್ಕ್ರಮದಿಂ ಪಾ ।
ತಾಳಕ್ಕೆಯ್ತಂದು ನಿನಗೆ ರಾಜ್ಯಮನೀವಂ ॥ ೧೫

ಅದಲ್ಲದೆಯುಂ,

ನಿನ್ನ ಶರೀರಂ ವಂಶಂ ।
ಚೆನ್ನಾದಪ್ರುದೆನಗೆ ನೀನೆ ಪತಿಯಾದಪೆ ಮ ॥
ತ್ತನ್ನಗಲೋಕಂ ನಿನಗ ।
ಕ್ಕುಂ ನೆಟ್ಟನೆ ನಂಬು ಮದ್ವಚೋವೃತ್ತಕಮಂ ॥ ೧೬

ಎಂದಾಕನ್ಯಕೆ ಪೇೞ್ದೊಡೆನ್ನ ಶರೀರಂ ವಂಶಂ ಪೊಸತಪ್ಪಪಾಯಂ ನಾಗಲೋಕದ ರಾಜ್ಯಮಪ್ಪ ಕ್ರಮಂ ನಿನಗಮೆನಗಂ ಸಂಗಮಮಪ್ಪನುಮೇತೆಱದಿಂದಪ್ಪುದೆಂದಾಂ ಕೇಳಲ್ ಮಗುೞ್ದಿಂತೆಂದಳ್—

ಈಗುಹೆಯೊಳ್ ಮಹಾಗ್ನಿತ್ರಿ*ತಯಂ ನೆಲಸಿರ್ದಪ್ಪುದಲ್ಲಿ ಮಂತ್ರನಾ ।
ನಾಗಮುಮಿರ್ಪ ಪ್ರಸ್ತಕಮುಮುಂಟದಱಾದಿಯ ಮಂತ್ರಜಾಪ್ಯದಿಂ ॥
ಬೇಗದೊಳಗ್ನಿಯಂ ಪುಗು ಮಗುೞ್ದು ತದುರ್ವಿಪನೊಂದು ಮಂತ್ರಸಂ ।
ಯೋಗದೊಳೆತ್ತುವಂ ನಿಜಶರೀರಮನಿಂತಿದಮೋಘವಾಚಕಂ ॥ ೨೭

ಅಂತು ನಿನ್ನ ಶರೀರಂ ಪೊಸತಾಗೆ ತತ್ಕುಮಾರಂ ತನ್ಮಾರ್ಗದೊಳೆ ನಿನಗೀವನೆಂದವಳ್ ಪೇೞ್ದೊಡಿವಂ ನೀನಱಿದಂದಮೆಂತೆಂದೊಡೆ ಅವಳ್ ಮಗುೞ್ದಿಂತೆಂದಳ್—

ಇನಿತಂ ಮದೀಯಪಿತನೊ ।
ಲ್ದೆನಗಱಿಪಿ ತಪಕ್ಕೆ ಪೋದನಾನೀಹದನಂ ॥
ನಿನಗಱಿಪಿದೆನೆಂದು ತವಂ ।
ಗನೆ ಪೋದಳ್ ಬೞಿಕ ನಾಗಲೋಕಕ್ಕರಸಾ ॥ ೨೮

ಅಂತವಳ್ ಪೋದಳ್. ಅವಳ್ ಪೇೞ್ದ ತೆಱದಿಂ ಬೇವರ್ ಬಿಜಯಂಗೆಯ್ದಿರ್. ಮೇಲಪ್ಪ ಕಾರ್ಯಮಂ ನೀವೆ ಬಲ್ಲಿರೆಂದು ಬ್ರಾಹ್ಮಣಂ ಪೇೞ್ದೊಡರಸನದಂ ಮನದೆಗೊಂಡು

ಎನ್ನಿಂ ಸಜ್ಜನ್ಮಮೆನ್ನಿಂ ಮದನಸಮಶರೀರಂ ಲಸತ್ಪ್ರಾಯಮೆನ್ನಿಂ ।
ದೆನ್ನಿಂದುದ್ವಾಹಮೆನ್ನಿಂ ಭುಜಗಭುವನನಾಥತ್ವಮಾಯ್ತೆಂಬ ಪೋಲ್ ಮಾ
ಳ್ಪೆನ್ನಿಸ್ಸಂದೇಹಮೀತಂಗಿನಿತು ಘನಯಶೋಲಾಭಮುತ್ತೀರ್ಣಧರ್ಮಂ ।
ತನ್ನಿಂ ತಾನೆತ್ತಿರಲ್ ನೂಂಕುವರೊಳರೆ ಎನುತ್ತು ಬಿರ್ದಂ ರಾಜಪುತ್ರಂ ॥

ಅದಲ್ಲದೆಯುಂ,

ಮಾನವಜನ್ಮದೊಳ್ ಜನಿಸಿ ನಿತ್ಯಮನಿಂದ್ಯಪರೋಪಕಾರಮಂ ।
ದಾನಮನರ್ಥಪಾಲನೆಯುಮಂ ಮಿಗಲ್ ಮಿಗೆ ಮಾಡದಿರ್ಪವಂ ॥
ಮಾನವನಲ್ತವಂ ತೊವಲ ಬೊಂಬೆ ತೆರಳ್ದದ ಲೆಪ್ಪದಣ್ಕೆ ಮ ।
ಸ್ಸ್ಥಾನದ ಹುಲ್ಲ ಹಾಹೆ ಪಗೋಡೆಯ ಚಿತ್ರಮೆನಲ್ಕೆ ಸಾಲದೇ ॥ ೩೦

ತರುಲತೆಗಳಖಿಲಪ್ರಷ್ಪಂ ।
ಪರೋಪಕಾರಕ್ಕೆ ಸಲ್ವುದಂ ಕಂಡು ನರರ್ ॥
ಪರಹಿತಮನೆಸಗದಿರ್ದೊಡೆ ।
ಮರದಿಂದತಿಕಷ್ಟರಲ್ತೆ ಧರಣೀತಳದೊಳ್ ॥ ೩೧

ಪಾತಾಳಲೋಕವಿಜಯಂ ।
ಮಾತಂಗಕನಿಷ್ಟಸಿದ್ಧಿಯಾಯೆರಡುಂ ಮ ॥
ತ್ಪ್ರೀತಿಸಕಲಾವನೀಪ ।
ಖ್ಯಾತಿಯೆನುತ್ತಮನಿಪಾಲತನಯಂ ನಲಿವಂ ॥ ೩೨

ಅನ್ನೆಗಂ

ಪದೆಪಿಂದಂಬರಲಕ್ಷ್ಮಿ ತ್ರಯೆಚ್ಚಿ ಕೊಳಲೆಂದಾತ್ಸುಕ್ಯದಿಂ ಕಪ್ಪಳಂ ।
ಪುದಿದೊಪ್ಪಿರ್ದ್ ಕರಂಡಮಂ ತೆಗೆದು ತನ್ನುತ್ಸಾಹದಿಂ ಮುಚ್ಚಳಂ ॥
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿಟ್ಟಂಜನಂ ।
ಕೆದಱಿತ್ತೆಂಬನಮುಬ್ಬಿ ಮಬ್ಬು ಪರಿವತ್ತೆತ್ತಂ ದಿಶಾಭಿತ್ತಿಯೊಳ್ ॥ ೩೩

ಅಂತು ಪರ್ಬಿದ ಕತ್ತಲೆಯೊಳ್

ಸೋದರರಂ ಪಂಚಿಸಿ ಸ ।
ತ್ಸೋದಯದಿಂ ನಿರ್ವಿಕಾರದಿಂ ಪರಚಿತ್ತಾ ॥
ಹ್ಲಾದಮನೆಸಗಲ್ ನೃಪಸುತ ।
ನಾದರದಿಂದಾಯುಧಾನ್ವಿತಂ ಪೊಱಮಟ್ಟಂ ॥ ೩೪

ಅಂತು ಪೊಱಮಟ್ಟಾಬ್ರಾಹ್ಮಣಂ ಪೇೞ್ದ ಮಹಾಗುಹಾದ್ವಾರಕ್ಕೆ ಬಂದು

ಧಾತ್ರೀತಳಪತಿ ಕಡುಪಿಂ ।
ರಾತ್ರಿಯೊಳಾಬ್ರಾಹ್ಮಣಾನ್ವಿತಂ ಗುಹೆಯಂ ಪೊ ॥
ಕ್ಕಾತ್ರೇತಾಗ್ನಿಯ ಕುಂಡದ ।
ಮತ್ರಂಗಳ್ಗುಱಿಗಿ ಪುಸ್ತಕಮನೀಕ್ಷಿಸಿದಂ ॥ ೩೫

ಅಂತು ಗುಹೆಯೊಳಿರ್ದಗ್ನಿಯುಂ ಕೆಲದ ಪುಸ್ತಕಮುಂ ಕಂಡು ಮಾತಂಗಕನಂ ನೋಡಿ ನೀಂ ಕನ್ಯಾಸೂಚಿತಮಪ್ಪ ಕಾರ್ಯಮನುದ್ಯೋಗಿಸೆನೆ

ಮನಸಿಜನ ರೂಪು ನಿಜಯುತೆ ।
ವನದೇಳ್ಗೆ ವಿವಾಹಸಿದ್ಧಿ ರಾಜ್ಯದ ಲಾಭಂ ॥
ತನಗಪ್ಪುದೆಂಬ ಹರ್ಷದೊ ।
ಳನುಮಾನಿಸದಗ್ನಿಯಲ್ಲಿ ಭೋಂಕನೆ ಬಿಳ್ದಂ ॥ ೩೬

ಮಾತಂಗಕದ್ವಿಜಂ ಕ ।
ನ್ಯಾತತ್ವಮೆನಿಪ್ಪ ಮಂತ್ರದಿಂದುರಿಯುಂ ನಿ ॥
ರ್ಭೀತಿಯೆನಿಪ್ಪಳ್ ಕಿರ್ಚಿಂ ।
ದಾತನು ಭಸ್ಮಾವಶೇಷನಾದತ್ತಾಗಳ್ ॥ ೩೭

ಅದನರಸಂ ಕಂಡು ವಿಸ್ಮಯಸ್ವಾಂತನಾಗಿ ತತ್ಪುಸ್ತಕದೊಳಿರ್ದ ಮಂತ್ರಮುಂ ನೋಡಿ

ಮೃತಸಂಜೀವನಮಂತ್ರದಿಂ ನೃಪಸುತಂ ದಿವ್ಯಾಂಬುವಂ ಮಂತ್ರಿಸು ।
ತ್ತತಿಶೀಘ್ರಂ ಮಿಗಲಗ್ನಿಯೊಳ್ ತಳಿಯೆ ನಿದ್ರಾಸಕ್ತನಾಗಿರ್ದವಂ ॥
ಮತಿವೆತ್ತೇಳ್ವವೊಲಂಗಸೌಷ್ಟವವಿಲಾಸಂ ಯೌವನಂ ನಿಮಿರ್ದಲಾ ।
ಕೃತಿಯೊಪ್ಪುತ್ತಿರಲಗ್ನಿಕುಂಡದೊಳಗಿಂದೆದ್ದಂ ನಗುತ್ತಾ ದ್ವಿಜಂ ॥ ೩೮

ಅಂತೆದ್ದು ಬಂದ ಮಾತಂಗಕದ್ವಿಜನನರಸಂ ತಳ್ಕೈಸಿ ಕೊಂಡು ಸಂತೈಸಿ ಪಾತಾಳಭುವನಮಾರ್ಗಮುಂ ನೋಡಿ

ಪ್ರತಿಪಕ್ಷಪ್ರಚುರಾವನೀಶವಿಲಸಚ್ಚಾತುರ್ಬಲಪ್ರಾಣಮಾ ।
ರುತಪೀತಾಹಿ ವಿರೋಧಿಭೂಪತಿಮನೋವೇಶ್ಯಾಭುಜಂಗಂ ರಿಪು ॥
ಕ್ಷಿತಿನಾಥಾನ್ವಯಚಂದ್ರರಾಹು ಸುಖಸಂಪದ್ಯೋಗಿ ಪಾತಾಳಮಂ ।
ನುತಮಾತಂಗಕಕಂಧರಸ್ಥಿತಕರಂ ಪೊಕ್ಕಂ ಮಹೀಪಾಲಕಂ ॥ ೩೯

ಅಂತರಸಂ ಮಾತಂಗಕಸಹಿತಂ ಪಾತಾಳಭುವನಮಂ ಪೊಕ್ಕು ತನ್ನಾಗಕನ್ಯಾಭವನಮನೆಯ್ದಿ

ಮಕರಪತಾಕನಾರ್ಪು ವನಿತಾಕೃತಿವೆತ್ತುದೊ ಪೂರ್ಣಚಂದ್ರಚಂ ।
ದ್ರಿಕೆ ಸತಿರೂಪನಾಂತುದೊ ವಸಂತವಿಲಾಸಮಗಣ್ಯಪುಣ್ಯಕ ॥
ನ್ಯಕೆಯೆನಿಸಿರ್ದುದೋ ಸಕಲಮೋಹನವಿದ್ಯೆ ಭುಜಂಗರಾಜಬಾ ।
ಲಕಿವೆಸರಿಂ ನೆಗೞ್ದಿದೆನೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ ॥ ೪೦

ಪಾಱುವ ತುಂಬಿಯುಂ ಕಳಿನ ಪ್ರಾಗಣೆಯುಂ ಮುಗಿವಬ್ಜಮುಂ ತಮಂ ।
ದೋಱಲಗಲ್ವ ಚಕ್ರಯುಗಮುಂ ನಸುಬಾಡುವ ಕಲ್ಪವಲ್ಲಿಯುಂ ॥
ನೀಱೆಯ ಕುಂತಳಕ್ಕೆ ನಯನಕ್ಕೆ ಮುಖಕ್ಕೆ ಕುಚಕ್ಕೆ ತೋಳ್ಗೆ ಕೈ ।
ಮೀಱು ಸಮಾನಮೆಂದೊಡುಪಮಾಪರಿಹೀನಮದಾಗದಿರ್ಪುದೇ ॥ ೪೧

ಅಂತು ರೂಪಿಂಗಗ್ಗಳಮಾದ ನಾಗಕನ್ಯೆಯಂ ಕಂಡರಸಂ ನೀಂ ಪೇೞ್ದ ಬಾಲಕಿಯಿದಾಕೆಯಾಗದೆ ಮಾಣಳೆಂದು ಮಾತಂಗಕನಂ ಕೇಳ್ದೊಡಾತಂ ಲಜ್ಜೆಯಿಂ ತಲೆವಾಗಿರಲದಱಿನಱಿದು ಮುನ್ನಮೆ ತಾಂ ಪೇೞ್ದಳಪ್ಪುದಱಿಂದಾ ಕನ್ಯೆಯಂ ಮಾತಂಗಕಂಗೆ ವಿವಾಹಮಂ ಮಾಡಿ ತದ್ರಾಜ್ಯದೊಳ್ ಪಟ್ಟಮಂ ಕಟ್ಟಿ ಯನಂತರಂ ತನ್ಮಾತಂಗಕನಿಂದರಸಂ ಕಳುಪಿಸಿ ಕೊಳ್ವಾಗಳಾಮಾತಂಗಕನಿಂತೆಂದಂ:—

ನಿನ್ನಿಂದಾವಿರ್ಬರುಂ ಕೂಡಿದೆವಹಿಭುವನಂ ಕೈಗೆ ಸಾರ್ದತ್ತು ದೇವ ।
ಗಿರ್ನ್ನೊಂದಂ ಬಿನ್ನಪಂಗೈದಪೆನೆನಿತು ಪಿಪಾಸೋದಯಂ ಕ್ಷುದ್ಭಯಂ ಕ್ಲೇ ॥
ಶನ್ನಿದ್ರಾಬಾಧೆ ಪಿಂಗಿರ್ಪುದು ನಿಜಮಿದಱಿಂ ಸಂತಸಂ ದಿವ್ಯಮಾಣಿ ।
ಕ್ಯನ್ನೀನೇ ಭಾಜನಂ ಚಿತ್ತವಿಸೆನುತೊಲವಿಂ ರತ್ನಮಂ ಕೊಟ್ಟನಾಗಳ್ ॥

ನಾಡಾಡಿಯ ಮಾಣಿಕಮೆಂ ।
ದೀಡಾಡದಿರಲೆ ಕುಮಾರ ಮನದುತ್ಸವದಿಂ ॥
ಚೂಡಾಮಣಿಯಂ ಮಾೞ್ಪುದು ।
ಪಾಡಿಸದೆಳವೆಱೆಯನಾಂತ ರುದ್ರನ ತೆಱದಿಂ ॥ ೪೨

ಎಂದು ಪೇೞ್ದು ಮಾತಂಗಕಂ ತನಗೆ ನಾಗಕನ್ಯಕೆ ಕೊಟ್ಟ ಮಾಣಿಕ್ಯಮಂ ಕುಡಲದಂ ಕೈಕೊಂಡು ಆತನಿಂ ಕಳುಪಿಸಿಕೊಂಡು ರಾಜವಾಹನಂ ತಳರಲುದ್ಯುಕ್ತನಾಗಿ ಖಡ್ಗದ್ವಿತೀಯನಾಗಿ

ಉದಯದೊಳೇೞ್ಗೆವೆತ್ತ ರವಿ ವಾರಿಧಿಯಂ ಪೊಱಮಟ್ಟನೆಂಬಿನಂ ।
ಮದವದರಿಪ್ರತಾನವನಿತಾನಯನೋತ್ಪಲಚಂಡಭಾಸ್ಕರಂ ॥
ವಿದಿತಪರೋಪಕಾರನಿಧಿ ಸಾಹಸಕೇಸರಿ ಶಸ್ತ್ರಶಾಸ್ತ್ರಕೋ ।
ವಿದನಹಿಲೋಕದಿಂ ಪದೆಪಿನಿಂ ಪೊಱಮಟ್ಟನಭಂಗವಿಕ್ರಮಂ ॥ ೪೪

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಪರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಾತಂಗಕರಾಜವಾಹನಪಾತಾಳಲೋಕವಿಜಯಂ

ಮಾತಂಗಕನಿಷ್ಟಸಿದ್ಧಿವರ್ಣನಂ

ತೃತೀಯಾಶ್ವಾಸಂ.

॥ ಚತುರ್ಥಾಶ್ವಾಸಂ ॥

— ಪುಷ್ಪೋದ್ಭವಚರಿತಂ —

ಶ್ರೀಲೀಲಾವಸಥಂ ಪಾ ।
ತಾಲದಿನೇಕಾಕಿಯಾಗಿ ಪೊಱಮಟ್ಟು ಮಹೀ ॥
ಪಾಲಂ ಕುಳ್ಳಿರ್ದನುಪಮ ।
ಲೀಲೆಯೊಳೊಪ್ಪಿದನಭಂಗವಿಭ್ರಮಭೃತ್ವಂ ॥ ೧

ಅಂತು ಪೊಱಮಟ್ಟೊಂದು ಚಂದ್ರಕಾಂತಶಿಲಾಂತದೊಳ್ ಕುಳ್ಳಿರ್ದು ಮನತಿದೂರದೊಳ್

ವ್ಯಾಯಾಮಶ್ರಮದಿಂ ಸಡಿಲ್ದವಯವಂ ಸ್ವೇದಾಂಬು ತಳ್ತಂಗಮು ।
ತ್ಸ್ಯಾಯಾಸವ್ಯಥೆಯಂ ನಿರೂಪಿಸುವ ವಕ್ತ್ರಾಬ್ಜಂ ಸಮುತ್ಪಾತಕಾ ॥
ಕ್ಷೇಯಂ ರಂಜಿಸುವೊರ್ಬ ವಿಕ್ರಮಭುಜಂ ಸಂರಂಭದಿಂ ಬರ್ಪುದುಂ ।
ಶ್ರೇಯಃಕಾಯನಿದಾವನೆಂದು ನರಪಂ ಸಂಪ್ರೀತಿಯಿಂ ನೋಡಿದಂ ॥ ೨

ಅಂತು ನೋಡಿ ಮತ್ತಂ

ಅವಯವಸೌಷ್ಠವಮಂಗ ।
ಚ್ಛವಿ ಶೀಘ್ರವಿಲಾಸಗಮನಮನುಜಸುವಲಂಪಿಂ ॥
ತನಕವಿದುಂ ದಲ್ ಪುಷ್ಪೋ ।
ದ್ಭವನೆಂಬುದನಱಿಪದಿರದು ಮನ್ಮಾನಸದೊಳ್ ॥ ೩

ಎಂದು ಬಗೆಯುತ್ತೆ ನೋಡಲ್ ।
ಮುಂದರಸಂಗಧಿಕಸೌಖ್ಯಮಿದಿರ್ವರ್ಪವೊಲಾ ॥
ನಂದದೆ ನಲಿದೀಕ್ಷಿಸುತುಂ ।
ಬಂದಂ ಪುಷ್ಪೋದ್ಭವಂ ಮುದಶ್ರುಗಳೊಗೆಯಲ್ ॥ ೪

ಅಂತು ಪುಷ್ಪೋದ್ಭವಂ ಬಂದು ಪಾತಾಳದ್ವಾರದ ಚಂದ್ರಕಾಂತಶಿಲಾತಲದೊಳಿರ್ದ ರಾಜವಾಹನನಂ ಕಂಡು,

ನಯನದೊಳಶ್ರುವಾರಿ ಪುಳಕಂ ನಿಜದೇಹದೊಳುತ್ಸವಂ ಮನೋ ।
ಜಯದೊಳನೂನಕಾಂತಿ ಮುಖಮಂಡಲದೊಳ್ ಗುರುಭಕ್ತಿ ಚಿತ್ತದೊಳ್ ॥
ಪ್ರಿಯಮಖಿಳಾಂಗದೊಳ್ ನಲಿಯೆ ಸಿದ್ಧಮನೋರಥನಿಂದು ದೇವರಂ ।
ಪ್ರಿಯನೊಸೆದೀಕ್ಷಿಸಲ್ ಪಡೆದೆನೆಂದು ಮನಂ ಮಿಗೆ ಮೆಯ್ಯನಿಕ್ಕಿದಂ ॥ ೫

ಅಂತು ಮೆಯ್ಯಿಕ್ಕಲೊಡಂ

ಆನಂದಾಶ್ರು ತುಱುಂಕೆ ನಿ ।
ಜಾನನದೊಳ್ ರೋಮಪುಳಕಮುಣ್ಮೆ ಶರೀರಂ ॥
ತಾನುಱೆ ಪೊರೆಯೇಱಲ್ ನೃಪ ।
ಸೂನು ನಿಜಾನುಜನನಪ್ಪಿಕೊಂಡನಲಂಪಿಂ ॥ ೬

ಅಂತರಸನಪ್ಪಿಕೊಂಡೊಡೆ ಪುಷ್ಪೋದ್ಭವನಿಂತೆಂದಂ:—

ದೇವಗೆ ದಾಸನಲ್ಲದೆ ।
ಭಾವಿಸೆ ಮತ್ತೊರ್ಬನಲ್ತು ತಳ್ಕೈಸಿಕೊಳ ॥
ಲ್ಕಾವ ಸಮನೆಂದು ಮತ್ತೆ ಪ ।
ದಾವನತಮುಖಾಬ್ಜನಾಗಲೆತ್ತಿದನರಸಂ ॥ ೭

ಅಂತರಸಂ ಪರಮೋತ್ಸಾಹದಿಂ ಶಿರಮಂ ಪಿಡಿದೆತ್ತಿ ಪತ್ತಿರೆ ಕುಳ್ಳಿರಿಸಿ

ನಿಷ್ಪಂದದೃಷ್ಟಿಯಿಂ ಸುಖ ।
ಬಾಷ್ಪಾಂಬು ತುಱುಂಕೆ ದಶನರುಚಿ ಹರ್ಷಲತಾ ॥
ಪುಷ್ಪದವೋಲ್ ಪಸರಿಸಲೇಂ ।
ಪುಷ್ಪೋದ್ಭವ ಸುಖಮೆ ಎಂದು ನರಪತಿ ಕೇಳ್ದಂ ॥ ೮

ಅಂತು ಕೇಳಲೊಡಂ

ಧರೆಯೊಳ್ ಜ್ಯೇಷ್ಠಭ್ರಾತೃವೆ ।
ಗುರು ದೈವಂ ಮಾತೃ ಪಿತೃವೆನಿಪ್ಪುದಱಿಂ ದೇ ॥
ವರನಗಲ್ದಿ*ರ್ದನಗೆ ಸುಖಂ ।
ದೊರೆಕೊಳ್ವುದುಮುಂಟೆ ದೇವ ನೀನಱಿಯದುದೇ ॥ ೯

ಎಂದು ಪೇೞ್ದೊಡದರಸಂ ಪರಿತೋಷಂಬಟ್ಟು ಬೞಿಕಿಂತೆಂದಂ:—

ಆನಲ್ಲಿಂ ಪೋದ ಬೞಿ |
ಕ್ಕೇನಂ ಬಗೆದಿರ್ದಿರೆಲ್ಲರೆಲ್ಲಿಗೆ ಪೋದಿರ ‖
ನೀನೆಲ್ಲಿರ್ದಪೆ ಪೇೞೆಂ |
ದಾನರಪತಿ ಕೇಳ್ದನಲ್ತೆ ಪುಷ್ಪೋದ್ಭವನಂ ‖ ೧೦

ಅಂತು ಕೇಳಲೊಡಂ ಪುಷ್ಪೋದ್ಭವನಿಂತೆಂದಂ:—

ದೇವರ ಕೆಯ್ಯಿಂ ಬೀೞ್ಕೊಂ |
ಡಾವೆಲ್ಲರ್ ಪೋಗಿಯಾಯಿರುಳ್ ಸಲೆ ಸುಖನಿ ‖
ದ್ರಾವಿಷ್ಟರಾಗಿ ಬೆಳಗಿನ |
ಜಾವದೊಳರ್ದಿರ್ದೆವೈದೆ ಬೆಳಗಾಯ್ತಾಗಳ್ ‖ ೧೧

ಅಂತು ಬೆಳಗಾಗಲೊಡಂ ಸಂಧ್ಯಾವಂದನಾದಿಕ್ರಿಯೆಗಳಂ ಮಾಡಿ,

ಕಮಳಾನಂದಕರಂ ತಮೋವ್ರಜಹರಂ ಚಕ್ರಪ್ರತಿಷ್ಠಾಪರಂ |
ಸುಮನಃಪ್ರೀತಿಯುತಂ ಮಹೋದಯನುತಂ ಪೀತಾಂಬರಾಲಂಕೃತಂ ‖
ನಮಿತಾಶಾಮುಖಶೋಭಿತಂ ಬಹಳದೋಷಾರಾತಿ ಲಕ್ಷ್ಮೀಶನಂ |
ತಮಿತಪ್ರಾಭವಮೂರ್ತಿ ಸೂರ್ಯನುದಯಂಗೆಯ್ದಂ ಧರಾಧೀಶ್ವರಾ ‖ ೧೨

ಕುಮುದಿನಿಗೆ ದಿವಾಭ್ಯಾಸಂ |
ಸಮನಿಸೆ ಕಮಳಿನಿ ನಗುತ್ತೆ ಕೋಕಂಗಳ್ಗ ‖
ದ್ಭ್ರಮರಧ್ವನಿಯುಂ ತೋಱಿಸೆ |
ಸಮಸುಖಮಾಯ್ತುಂವಳತಿರಜೋಗುಣಮೆಸೆಯಲ್ ‖ ೧೩

ಕಾಯಕ್ಲೇಶಮದೆನ್ನೊಳಾಗೆ ಜಗದೊಳ್ ಮಬ್ಬುರ್ಬಿ ವೈವರ್ಚಿದ |
ನ್ಯಾಯಂ ಕೈಮಿಗಲೆನ್ನ ಕಾಂತನನಲಂಪಿಂ ಕೂಡಿದಳ್ ಪಶ್ಚಿಮಾ ‖
ಶಾಯೋಷಿತ್ಕುಟಿಲಾತ್ಮೆಯೆಂದು ದಿವಸಶ್ರೀ ಬೈದು ಬೆಂಬತ್ತಿದಳ್ |
ಛಾಯಾಸಂಕುಳದಿಂದೆನಲ್ಕೆ ಪಡುವಲ್ ಮುಂತಾದುವೆಲ್ಲಾ ನೆೞಲ್ ‖ ೧೪

ಅಂತುದಯಮಾಗಲೊಡಂ ನಿಮ್ಮಡಿಗಳಂ ನೋಡಲಾಸ್ಥಾನಮಂಟಪಕ್ಕೆ ಬಂದು ಕಾಣದೆ ಸಜ್ಜೆವನೆಯುಂ ನೋಡಿಯಲ್ಲಿಯುಂ ಕಾಣದೆ

ಸಂಗಸುಖಕ್ಕೆ ಕೂರ್ತು ವನದೇವತೆಯೊಯ್ದಳೊ ಮೇಣ್ ಭುಜದ್ವಯಾ ।
ಲಿಂಗನದಾಸೆಯಿಂ ಖಚರಕಾಂತೆಯರೊಯ್ದರೊ ಯೌವನಕ್ಕೆ ಮೇ ॥
ೞಂಗವಿಸಲ್ಕೆ ಕಿನ್ನರಿಯರೊಯ್ದರೊ ಮೇಣ್ ಕಡುಪಿಂ ನಿಶಾಟರೊಳ್ ।
ಸಂಗರವಾಯ್ತೊ ಪೇೞೆನುತೆ ಚಿಂತಿಸುತಿರ್ದವಿಳಾಧಿನಾಯಕಂ ॥ ೧೫

ದಿಗಧಿಪರಂ ತೆರಳ್ಚಿವೆನೊ ನಾಗನಿವಾಸದ ಶೇಷನಂ ಬರಲ್ ।
ತೆಗೆವೆನೊ ಗೋತ್ರಪರ್ವತಮನಿರ್ಕಡಿಮಾಳ್ಪೆನೊ ಮೇಘಮಾರ್ಗಮಂ ॥
ಬಗಿವೆನೊ ವಾರ್ಧಿಯಂ ಮುಳಿದು ಪೀರ್ವೆನೊ ಭೂಮಿಯನೆಯ್ದೆ ಪೊತ್ತೆ
ಪೋ । ಬಗೆಮಿಗೆ ಪೇೞಿವೆಂಬ ಕಡುಪಂ ತಳೆದಿರ್ದವಿಳಾಧಿನಾಯಕಂ ॥

ಎಂದಾಮಾತಿಂಗರಸನ ಮೊಗದೊಳ್ ಮುಗುಳ್ನಗೆ ಮಿನುಂಗಲದನಱಿದು ಪುಷ್ಪೋದ್ಭವನಿಂತೆಂದಂ:—

ಆಪವನಾರಗವಾ ಸೇಃ ।
ನಾಪತಿಯೇಕಾಕಿ ಬಡವನಧಿಕಂ ಕಿಱಿಯಂ ॥
ತಾಪಸನುದ್ಧತನೆನ್ನದೆ ।
ಕೋಪಂ ಸಮನಲ್ತೆ ಜೀವರಾಶಿಯೊಳೆಲ್ಲಂ ॥ ೧೬

ಅಂತಸ್ತಾಪದಿಂದಾವ ಕೋಪನುಂ ತಗ್ಗಿಸಿ ಕೊಂಡು
ಸರ್ವೋಪಾಯದೊಳಱಿಯಲ್ ।
ನಿರ್ವಾಹಮದಲ್ಲದಿಲ್ಲವೆಂತೆನಲಾವಿ ॥
ನ್ನೊರ್ವೊರ್ವರೆಯ್ದಿ ದೆಸೆಗಳೊ ।
ಳುರ್ವೀವಲ್ಲಭನನಱಸೆ ಪೋಪುದೆ ಕಜ್ಜಂ ॥ ೧೭

ಅಂತು ದೇವರನಱಸಪೋಪುದಂ ನಿಶ್ಚಯಂಮಾಡಿ ಮಗಧೇಶ್ವರಂಗೆ ತದ್ವಿಶೇಷಮಂ ಪೇೞ್ದಿಟ್ಟು ಬಲಮೆಲ್ಲಮಂ ಪುಷ್ಪಪುರಕ್ಕೆ ಕಳಿಪಿ

ಎಣ್ಬಟ್ಟೆಗಳೊಳ್ ನೃಪನಂ ।
ಕಾಣ್ಬನ್ನಂ ತೊೞಲಿಮೆಂದು ಮನದೊಳಗೞಲಿಂ ॥
ದೆಣ್ಬರುಮನಪ್ಪಿಯಮಂ ಬಿಸು ।
ಗಣ್ಬನಿಯಿಂದೊಂದು ದೆಸೆಗೆ ಪೊಱಮಟ್ಟಾಗಳ್ ॥ ೧೮

ಎಲ್ಲೆಡೆಯೊಳಱಸಿ ಕಾಣದೊ ।
ಡೆಲ್ಲರ್ ಚಂಪಾಪುರಕ್ಕೆ ಬಂದೊಲವಿಂ ಮ ॥
ತ್ತಲ್ಲಿಂ ಮೇಲಣ ಕಾರ್ಯಮ ।
ನುಲ್ಲಾಸದೊಳಱಿಸಲೆಂದು ಕಳಿಪಿದೆನವರಂ ॥ ೨೦

ಅಂತವರೆಲ್ಲರಂ ಕಳಿಪಿಯಾನೊಂದೆಸೆಗೆ ಪೋಪಮಟ್ಟಾಗಳ್

ಸರಸೀಜಾತಸಖಂ ಸಹಸ್ರಕರದಿಂ ಸಪ್ತೋರ್ವಿಯೊಳ್ ಕೇಡವಂ ।
ಪರಪುತ್ತಿರ್ದನೊ ಮೇಣ್ ದವಾನಳಶಿಖಾಸಂತಾನಮಿಂತೀಗಳು ॥
ರ್ವರೆಯೊಳ್ ಮೂರ್ತಿಯನಾಂತು ನಿಂದುದೊ ದಿಟಂ ಪೇೞೆಂಬಿನಂ ಕಾ
ಯ್ಪು ನಿ । ರ್ಭರದಿಂ ಕೈಮಿಗೆ ಬಂದುದಗ್ಗಳಸಿದಾಘಂ ಮಾಘಸಂಹಾರಕಂ ॥

ಖರಕರತಾಪದಿಂದವನಿ ಪೊಪ್ಪಳಿಸಿತ್ತಖಿಳಾದ್ರಿಗಳ್ ಭಯಂ ।
ಕರಮೆನೆ ಕಾಯ್ದು ಕರ್ಬುನದವೋಲ್ ಕಿಡಿವೆತ್ತುವನೋಕಹವ್ರಜಂ ॥
ಮರುಟಿದುವಧ್ವಗರ್ ಮಿಡುಕಿ ಕಿಚ್ಚಿನ ಕೀಡೆವೊಲಾದರಾದಿಶಾಂ ।
ತರಮನಲಾಶೆಯಾದುವೆನಲೇಂ ಪೊಗೞ್ವೆಂ* ಕಡುಪಂ ನಿದಾಘದಾ ॥ ೨೧

ವನಮೃಗರಾಜಿಗಳ್ ತೃಷೆಯ ಕೋಟಲೆಯಿಂ ವನವೆಲ್ಲಮಂ ತೊೞ ।
ಲ್ದಿನಕಿರಣಂಗಳಿಂ ಕೆಡೆದು ಚೇಷ್ಟಿಸಿ ಕಂಡು ಮರೀಚಿಕಾಜಲ ॥
ಕ್ಕನುನಯದಿಂ ಕರಂ ಪರಿದು ಲಂಘಿಸಿ ತಮ್ಮೆರ್ದೆ*ಯಾಱೆ ತಾಱುತ ।
ಟ್ಟನಲಸುವಿಂದಗಲ್ದುವೆನಲಿಲ್ಲಿ ದುರಾಸೆಯೊಳಾರೊ ಬೀೞದರ್ ॥ ೨೨

ನಿರವಧಿನಿದಾಘದುರ್ಭರ ।
ಪರಿತಾಪದೊಳುರಿದು ಕರಿದು ವನಗಜಕುಂಭಂ ॥
ಬಿರಿಯೆ ತಳತಳಿಸಿದುವು ರವಿ ।
ಕಿರಣದ ತತ್ತಿಗಳೆನಲ್ಕೆ ಮುತ್ತುಗಳಾಗಳ್ ॥ ೨೩

ಅಂತುಗ್ರವಾದ ನಿದಾಘದೊಳಾಂ ಪೋಗುತ್ತೆ

ಮೆಯ್ಮಱಸುಂದಿ ಪಲ್ಲೊಣಗಿ ಕಣ್ ಕುೞಿದುಗ್ರನಿದಾಘತಾಪದಿಂ ।
ಬಾಯ್ಮಿಗೆ ಬತ್ತಿ ನಾಲಗೆ ಸುರುಳ್ದೆರ್ದೆ*ಯಾಱೆ ಮನಂ ಕಟಿಲ್ದು ಮೆ ॥
ಲ್ಸುಯ್ಮಿಗಿಲಾಗಿ ದೃಷ್ಟಿ ಪರಿಗುಂದಿ ಸಮಂತಸು ಪೋಪರಂದದಿಂ ।
ಕೆಯ್ಮುಡಿಸನ್ನೆಯೆನ್ನೊಳೆಸೆಯಲ್ ಕಡುನೀರಡಸಿರ್ದೆನುರ್ವಿಪಾ ॥ ೨೪

ಅಂತು ತೃಷಾಪೀಡಿತನಾಗಿ ಪೋಪೋಗಳ್ ಮುಂದೆ

ಇಭಸಂಹಾರಿರವಪ್ರತಿಧ್ವನಿಗುಹಾರಮ್ಯಂ ಜರತ್ತಾಪಸ ।
ಕ್ಷುಭಿತಂ ಕ್ರೂರಮೃಗಪ್ರಕೀರ್ಣಕಟಕಂ ನಿತ್ಯಾಂಧಕಾರಂ ಮಣಿ ।
ಪ್ರಭವಸ್ಥಾನನಿಕುಂಜಮೆನ್ನಿದಿರೊಳಂದೊಪ್ಪಿರ್ದುದೌನ್ನತ್ಯದಿಂ ।
ನಭಮಂ ಚುಂಬಿಸುತಿರ್ದುದೊಂದು ಕುಧರಂ ಭೂಪಾಲವಿದ್ಯಾಧರಾ ॥ ೨೬

ಮತ್ತಮಾಪರ್ವತಂ ಸರ್ವಜ್ಞನಂತೆ ಬಹಳಗುಹಾನ್ವಿತಮುಂ, ರಾಜಧಾನಿಯಂತೆ ಚಿತ್ರಶಾಲಾಭಿರಾಮಮುಂ, ಋಷಿಸಭಾಮಂಡಲದಂತೆ ಭೃಗುವಿರಾಜಿತಮುಂ, ರಂಗಶೋಭೆಯಂತೆ ಶೃಂಗಾರವಿಲಾಸಮುಂ, ದ್ವಿಜರಾಜಿಯಂತೆ ಸದ್ವಂಶಭೂಷಣಮುಂ, ವಿಳಾಸಿನೀಜನದಂತೆ ತಮಾಲಪತ್ರವಿರಾಜಿತಮುಂ, ಕೈಲಾಸಗಿರಿಯಂತೆ ಪಂಚಾಸ್ಯಸಂಚಿತಮುಂ, ನಭೋತ್ಪಾತಕದಂತೆ ಪ್ರತಿಸೂರ್ಯವಿಜೃಂಭಿತಮುಂ, ಭಾರತದಂತೆ ಸಕಲಮುಖಮಂಡಿತವ್ಯಾಳಮುಂ, ದಿವಸಶ್ರೀಯಂತೆ ಪತಂಗಪಥರಂಜಿತಮುಮೆನಿಸಿರ್ಪುದು. ಅಂತುಮಲ್ಲದೆಯುಂ,

ಬೆತ್ತದ ಕಂಕಣಂ ಬಳಪದೋಲೆ ಕುರುಳ್ಗಳವಟ್ಟೆ ಕಾಡ ಹೂ ।
ಕತ್ತರಿಪೀಲಿಯುಳ್ಳುಡೆ ವನೇಭಜಮೌಕ್ತಿಕಹಾರಯಷ್ಟಿ ಬಾ ॥
ಗೊತ್ತಿದ ಬಿಲ್ಸರಲ್ ಕದಕದಿಪ್ಪ ಕುಚಂ ಸುಲಿಪಲ್ಲ ಕಾಂತಿ ಚೆ ।
ಲ್ವೆತ್ತಧರಂ ಮನಂಗೊಳೆ ಪುಳಿಂದಿಯರೊಪ್ಪುವರಾಮಹಾದ್ರಿಯೊಳ್ ॥ ೨೭

ಮುಱಿಸಿಂಗಂಗಳ ಪಾಸಮಂ ತಿವಿದು ಮತ್ತೇಭಕ್ಕೆ ಬಿಟ್ಟಂತಮಂ ।
ತಱಿಸಲ್ವನ್ನಗಮಾಗಳಾಗಜದಕುಂಭಸ್ಥಾನದೊಳ್ ನೆತ್ತರಂ ॥
ಸುಱಿಸುಟ್ಟಿಂದಿರದಿಂಟಿ ದೋರೆಸಸಿಮುತ್ತಂ ಸುತ್ತಲುಂ ಚೆಲ್ಲಿ ಕಾ ।
ಡೆಱೆಯುಂ ಬಂದೊಸೆದಾಯ್ದುಮಂ ಶಬರಿ ಮೆಚ್ಚಲ್ ಮಾಡುವಳ್ ಹಾರಮಂ ॥

ಅರುಣಾಕ್ಷಂ ರೌದ್ರರೂಪಂ ಘುರುಘುರಿತಮುಖಂ ಶೀರ್ಣಶೃಂಗಂ ಶಿಲಾನಿ ।
ಷ್ಠುರದೇಹಂ ದೀರ್ಘವಾಳಂ ಕಠಿನಖುರಪುಟಂ ರೇಣುಭಾಳಸ್ಥಳಂ ಘ ॥
ರ್ಘರನಾದಂ ವೃತ್ತಕಂಠಂ ಕುಸುಮಧವಳರೋಮಂಥಫೇನಂ ಕರಂ ಭೀ ।
ಕರಮಾಗಲ್ಕೊಪ್ಪುಗುಂ ಕಾನನದೊಳಿಭಸಮಾನಂ ಲುಲಾಯಪ್ರತಾನಂ ॥

ಪುತ್ತಡರ್ದಿರ್ದ* ಮೆಯ್ ಪೊದೞುಗೊಂಡ ಜಟಾವಳಿ ಕೆಯ್ಯ ಕಾಲುಗುರ್ |
ಸುತ್ತಿ ಕಟಂಕಟೀಯುಮೆನಲಾದ ಬಸಿಱ್ ಪರಮಾತ್ಮರೂಪದೊಳ್ ||
ಪತ್ತಿದ ಶಾಂತದೃಷ್ಟಿ ಶಶಿಕಾಂತಶಿಲಾಬ್ರುಸಿ ಕಷ್ಟಮೌನಮೊ |
ಪ್ಪುತ್ತಿರೆ ಜೀರ್ಣತಾಪಸಕುಲಂ ಮೆಱೆದಿರ್ಪುದು ತನ್ಮಹಾದ್ರಿಯೊಳ್ || ೨೦

ಅಂತು ಪೊಗೞ್ತೆಗೆೞುಂಬಮಾದ ಪರ್ವತಮಂ ಕಂಡು

ತಪ್ಪಿಲ ತರುತತಿ ನೋಡಲ |
ನಳ್ಪವೆನಲ್ ಕುಸುಮಫಲಮನಾಂತುಪವನಮಂ ||
ಕೀಳ್ಪಿಡಿಸುತಿರ್ದುದಿಲ್ಲಿಯೆ |
ನೋಳ್ಪೆಂ ನೀರಿರದೆ ಮಾಣದೆಂದೆಯ್ದಲೊಡಂ || ೨೧

ಮತ್ಪ್ರಾಣಸಮೂಹಕ್ಕೆ ಲ |
ಸತ್ಪ್ರೀತಿಯನೊದವಿಸುತ್ತಮಿರ್ಪುದನಾನು ||
ದ್ಯುತ್ಪ್ರಮದಮೆಸೆಯೆ ಕಂಡೆಂ |
ತತ್ಪ್ರಸ್ತದೊಳಮರನದಿಗೆ ಸೆಣಸುವ ಕೊಳನಂ || ೨೨

ಜಳಪಕ್ಷಿಧ್ವಾನದಿಂ ಲಕ್ಷ್ಮಿಯ ವಿವಿಧಸುಖಾಸೀನದಿಂ ಕೋಕಕೋಳಾ |
ಹಳಶೋಭಾಯಾನದಿಂ ಪಂಕಜಕುವಲಯಸಂತಾನದಿಂ ತೀರಪುಷ್ಪಾ ||
ವಿಳಲೀಲೋದ್ಯಾನದಿಂ ನಿರ್ಮಳಮಣಿಮಯಸೋಪಾನದಿಂ ಖೇಚರೀಸಂ |
ಕುಳಕೇಳೀಸ್ಥಾನದಿಂ ರಂಜಿಪುದು ಲಹರಿಕೋದ್ದಂಡಮಂಭೋಜಷಂಡಂ ||

ಅಂತೆಸೆವ ಸರೋವರಮಂ ಕಂಡು

ಪಿರಿಯಕೊಳನುದಕಮಂ ಕಂ |
ಡುರವಣೆಯಿಂ ಪೊಕ್ಕು ತೀಂಕಿ ಮೊಗೆಮೊಗೆದೊಲವಿಂ ||
ದೆರಡಳ್ಳೆ ಪಿೞ್ದು* ತೀಗು |
ಬ್ಬರಿಸಲ್ ಕುಳಿರ್ವಮಳಜಲಮನೀಂಟಿದೆನರಸಾ || ೨೪

ಕರಚರಣಂದೊಳೆದು ಮನಂ |
ಪರಿತೋಷಮನೆಯ್ದಿ ತಂಪು ದೇಹದೊಳೊಲ್ದಾ ||
ವರಿಸಿ ಕುಳಿಕೊರ್ಡೆ ಸುಖೋ |
ತ್ಕರದಿಂ ಕುಳ್ಳಿರ್ದೆನೊಂದು ನಿಮಿಷಮಿಳೇಶಾ || ೨೫

ಅಂತು ಕುಳ್ಳಿರ್ದು ರಮಣೀಯದಿಂದರಲ್ದರುಣಸರೋಜದೊಳ್ ಮೊರೆವ ಮಧುಕರಗಾನಕ್ಕೆ ಕುಣಿವಂತೆ ಸುೞಿವ ಕಳಹಂಸೆಗಳುಂ, ಕಲ್ಹಾರಕಿಂಜಲ್ಕಪರಾಗದಿಂ ಮಂಜು ಮಸಗೆ ಸಂಜೆಯಾಯ್ತೆಂದಂಜುವ ಚಕ್ರವಾಕಂಗಳುಂ, ಬೆಳ್ಮುಗಿಲ್ದುಱುಗಲಂ ತರತರದಿಂ ತೇರಯಿಸುವ ತೆರೆಗಳುಂ, ಪಥಿಕಪರಿಶ್ರಾಂತಿಯುಂ ಪರಿಹರಿಸಲ್ ಕರೆವಂತೆ ರವಂ ಮಿಗುವ ನೀರ್ವಕ್ಕಿಗಳ ಕೂಜಿತಂಗಳುಂ, ಹಿಮಶೈಲಂ ಕರಗಿ ಸರಸಿಯಾದಂತೆಸೆವ ಪೂಗೊಳದ ರಮಣೀಯತೆಯುಂ ಮನಂ ದಣಿಯೆ ನೋೞ್ಪಾಗಳ್

ಅತಿಕಾಯಂ ಸಾಹಸಾಂಕಂ ಮುಕುಳಿತಕರಸಿರೋರುಹಂ ತೀವ್ರಚಿಂತಾ
ನ್ವಿತಚಿತ್ತಂ ಬದ್ಧವೇಣೀಜಟಿಲಿತನಭಯಂ ಸಂತತಂ ಕುಂಡಲಾಂದೋ ॥
ಳಿತಕರ್ಣಂ ದಿವ್ಯತೇಜೋಮಯನಭಿನವರೂಪಂ ಲಸಚ್ಛೈಲಶೃಂಗ ।
ಸ್ಥಿತನಿರ್ದಂ ಛಾಯೆ ನೀರೊಳ್ ಪೊಳೆಯೆ ಪದೆಪಿನಿಂ ಕಂಡನಾಗಳ್ ನರೇಂದ್ರಾ ॥

ಅಂತು ನೀರೊಳ್ ಪೊಳೆದ ನೆೞಲಂ ಕಂಡು ಪರ್ವತನುಂ ನೋೞ್ಪುದುಂ

ಶೃಂಗಾಗ್ರದಿಂ ನೆಲಕ್ಕೆ ಮ ।
ನಂಗುಂದದೆ ಬಿರ್ದು ಜೀವಮಂ ತೊಱೆವೆನೆನು ॥
ತ್ತುಂಗವಿಸಿ ಬೀೞುತಿರ್ದನ ।
ನಂಗೆಯ್ದಿಂದಾಂತೆನೊರ್ವನಂ ನೃಪತಿಲಕಾ ॥ ೩೭

ಅಂತು ಬೀೞ್ವಾತನಂ ನಾಂ ಕೆಯ್ಯೊಳಾಂಪ್ಪುದುಂ

ಏಕಲೆ ತಂಬೆಯಾಂತೆ ಗತಭಾಗ್ಯನನೂರ್ಜಿತಪಾಪಕರ್ಮನಂ ।
ಭೀಕರಜೀವವಂಚಕನನುಗ್ರನನಿಷ್ಟಸುಹೃದ್ವಿಯೋಗಿಯುಂ ॥
ಲೌಕಿಕಬಾಹ್ಯನಂ ಬಗೆಯೆ ಕಲ್ಲೆ*ರ್ದೆಯನಂ ಮಿಗೆ ಕಷ್ಟಚಿತ್ತನಂ ।
ಶೋಕಶರೀರನಂ ಸುಖವಿದೂರನನುತ್ಕಟದುಃಖಭಾರನಂ ॥ ೩೮

ಭಾವಿಸೆ ಚಿನ್ತಾನಳನಿಂ ।
ಬೇವುದಱಿಂ ಪ್ರಿಯರ ಸಂಗದಿಂದಗಲ್ದ* ಕರಂ ॥
ನೋವುದಱಿಂದಡವಿಗಳೊಳ್ ।
ಸಾವುದೆ ಲೇಸಲ್ತೆ ನೀತಿವಂತರ ಮತದಿಂ ॥ ೩೯

ಅದಱಿಂದಂ ಪಾತಕನಂ ।
ಬರ್ದುಂಕಿಸದಿರ್ ಮರಳಿ ನೂಂಕೆನುತ್ತಾತಂ ಮ ॥
ತ್ಪದಯುಗಳಕ್ಕೆಱಗಿದೊಡೆ ।
ತ್ತಿದೆನೆನ್ನಯ ಕಣ್ಗೊಳುದಕಮುಳ್ಕಿಡುವಿನಂ ॥ ೪೦

ಅಂತಾಮರಣನಿಶ್ಚಯದಿಂ ಮಿಗಿಲಾದ ದುಃಖಮೆನ್ನೊಳಾಗಲಂತಾನುಂ ಸಂತೈಸಿಕೊಂಡಾತನನಾನಿಂತೆಂದೆಂ:—

ಇನಿತಳಲೇತಱಿಂ ನಿನಗೆ ಸಂಭವಿಸಿತ್ತೆಲೆ ತಂದೆ ಪೇೞೆನಲ್ ।
ಮನದೊಳಳಲ್ದು ನಿಂದು ಬಿಸುಸುಯ್ದು ಕರಂ ಬೆಱಗಾಗಿ ಪೂರ್ವಮಂ ॥
ನೆನೆದು ವಿಧಾತೃಕಲ್ಪನೆಯನಾವನೊ ಮಾಱುವನೆಂದು ಮತ್ತೆ ಭೋಂ ।
ಕನೆ ತಿಳಿದೆನ್ನನೀಕ್ಷಿಸಿ ನಿಜಸ್ಥಿತಿಯಂ ನುಡಿಯಲ್ಕೊಡರ್ಚಿದಂ ॥ ೪೧

ಸಕಲಧರಣೀಶಮಣಿಮಯ ।
ಮಕುಟಸ್ಥಿತಪಾದಪೀಠನಭಿನವಲಕ್ಷ್ಮೀ ॥
ಮುಕುರಂ ಮಗಧೋರ್ವೀಪಾ ।
ಲಕನೆಸೆವಂ ರಾಜಹಂಸನೆಂಬ ನರೇಂದ್ರಂ ॥ ೪೨

ಆತನ ಸಚಿವರೊಳತಿವಿ ।
ಖ್ಯಾತಂ ರತ್ನೋದ್ಭವಂ ದಲೆಂದೆನ್ನ ಪೆಸರ್ ॥
ಮಾತೇಂ ರತ್ನವ್ಯವಹಾ ।
ರಾತುರದಿಂ ವಾರ್ಧಿಗೆಯ್ದಿದೆಂ ನಾವಿಂದಂ ॥ ೪೩

ಹರಿ ತನ್ನೞಿಯಂ ತಾನಾ ।
ಹರಿಯುೞಿಯಂ ತನ್ನೊಳೊಲ್ದು ಹರಿಯಿರ್ಪಂ ತಾಂ ॥
ಹರಿಯೊಳಗಿರ್ಪನೆನಲ್ ಸಾ ।
ಗರದಾಧಿಕ್ಯಮನಂದಾವನಭಿವರ್ಣಿಸುವಂ ॥ ೪೪

ಅಂತೆಸೆವ ಸಮುದ್ರಮಧ್ಯದಲ್ಲಿ ಸುವರ್ಣದ್ವೀಪಮುಮೆಯ್ದಿರ್ದುದುಮಲ್ಲಿ ರತ್ನದತ್ತನೆಂಬ ವಣಿಗ್ವರಂ ತನ್ನ ತನುಜೆಯುಪ್ಪ ಹೇಮಪ್ರಭೆಯುಮೆನಗೆ ಕುಡಲವಳ್ಗಮೆನಗಮನುದಿನಂ ನವಪ್ರಿಯಮಾಗಿ,

ಸಮಯೌವನಂ ಸಮಶ್ರೀ ।
ಸಮಸೌಖ್ಯಂ ಸಮಗುಣಂ ಸಮಪ್ರೀತಿ ಸಮ ॥
ಪ್ರಮದಂ ಸಮಸತ್ವಂ ಸಲೆ ।
ಸಮನಿಸಿತಿರ್ವರ್ಗೆ ಕೇಳ್ ದಯಾಂಬುನಿಧಾನಾ ॥ ೪೫

ಅಂತು ಸಮಸುಖದಿಂದಿರಲ್ ಕೆಲವಿದು ದಿನದಿಂ ಮೇಲೆ ತತ್ಕಾಂತೆ ಸುಂತ ವರ್ತ್ತಿಯಾಗಲಾರತ್ನದತ್ತನಿಂ ಕಳಪಿಸಿಕೊಂಡು ಮನೋವಲ್ಲಭೆಯುಮಾ ಕೆಯ ದಾದಿಯುಮಾನುಮಿಂತು ಮೂವರುಂ ಪಡಂಗನೇಱಿ ನಡುವಗಲೊಳ್ ಬರ್ಪಾಗಳ್,

ಇನ್ನೇವೇೞ್ದಪೆನಣ್ಣಾ ಬಳ್ಸಿಡಿಲವ್ರೊಯ್ಲಂ ಮಾರಿಯುದ್ರೇಕಮುಂ ।
ಖಿನ್ನಪ್ರೀತಿಯನೆಯ್ದೆ ಪೆರ್ಚಿದೆರ್ದೆಗಿಚ್ಚಂ ವಾರ್ಧಿಯೊಳ್ ತದ್ವಹಿ ॥
ತ್ರನ್ನೀವ್ರೊಯ್ದು ಮುೞುಂಗಲಾಂ ಬರ್ದುಕಿದೆಂ ಪಾಪಿಷ್ಠನಾಗಿರ್ದನ ।
ನ್ನೆನ್ನ ಧರ್ಮಂಗಿ ಬೞಿಕ್ಕ ತೀರ್ದ ಬಗೆಯಂ ಕೈಕೊಂಡೆನಾಂ ತೀರದೊಳ್ ॥

ಪ್ರಿಯತಮೆಯನಗಲ್ದ ಶರೀ ।
ರಿಯ ಜೀವನಮೇವುದೆಂದು ಮರಣಮನಾಂ ನಿ ॥
ಶ್ಚಯಮಂ ಮಾಡುವೆ ಪದದೊಳ್ ।
ಬಯಲ ರವಂ ಪುಟ್ಟಿತಂತರಿಕ್ಷದೆ ೞಾಗಳ್ ॥ ೪೬

ಅದೆಂತೆನೆ:—

ಪದಿನಾಱು ವರ್ಷದಿಂದೀ ।
ಮದನಾದ್ರಿಯೊಳೊಲ್ದು ಕಾಣ್ಬೆ ರತ್ನೋದ್ಭವ ನೀಂ ॥
ಸುದತಿಯನೆಂದೆಂದಾಕಾ ।
ಶದ ವಾಕ್ಯಂ ಪುಟ್ಟಿತದ್ಭುತಧ್ವನಿಯಿಂದಂ ॥ ೪೭

ಅದುಕಾರಣಮೀಕಾಮಗಿರಿಗೆ ಬಂದು ಪದಿನಾಱು ವರ್ಷಂ ತುಂಬಿತ್ತಿನ ಗಿನ್ನು ಮರಣಮೆ ಶರಣಮೆಂಬನ್ನೆಗಂ

ಪಿತನೆಂಬುದನಱಿದತಿದುಃ ।
ಖಿತನಾದೆಂ ದೇಸೆಗೆಟ್ಟು ಮುಚ್ಚಿತ್ತದೊಳೀ ॥

ಕತೆಯಂ ಕೇಳ್ದವರಳ್ಕಿ*ದರ್ ।
ಧೃತಿಗುಂದದೆ ಬಲ್ಪುವಿಡಿದು ಸ್ಥೈರಿಸಿದಪ್ಪುದೇ ॥ ೪೯

ಅಂತು ತತ್ಪ್ರಪಂಚಮಂ ಪೂರ್ವದೊಳ್ ಕೇಳ್ದಱಿವೆನದಱಿಂದಾತನೆನ್ನ ಪಿತನೆಂದಱಿದು ಆಶ್ವಾಸಿಸುವೆನೆಂದನುಮಾನಿಸುವಾಗಳ್ ಮತ್ತೊಂದು ದೆಸೆಯಲ್ಲಿ

ಎನಗಾರಿರ್ದಪರಕ್ಕೆ ಮುಪ್ಪಿನವಳಂ ಕಣ್ಗಟ್ಟಿ ಬಿಟ್ಟಂತು ಕಾ ।
ನನದೊಳ್ ವಹ್ನಿಮುಖಕ್ಕೆ ಸಲ್ವ ಬಗೆಯಂ ಕೈಕೊಳ್ವರೇ ಪೇೞಿಮಾ ॥
ವನಿತಾರತ್ನಮೆ ಕಾಮರಾಜವಿಜಯಂ ಕೈಸೂಱೆವೋಯ್ತುತ್ಕಟಂ ।
ಬನಿತಾರ್ತಧ್ವನಿ ಕೇಳಲಾಯ್ತೆನಗೆಲೇ ರಾಜಾಧಿರಾಜೋತ್ತಮಾ ॥ ೫೦

ಅಂತು ಪೊದಱ್ದಾರ್ತಧ್ವನಿಯಂ ಕೇಳ್ದು ರತ್ನೋದ್ಭವನನೊಂದಶೋಕತರುವಿನ ನೆೞಲೊಳ್ ಕುಳ್ಳಿರಿಸಿಯಾಧ್ವನಿಯ ಬೞಿವಿಡಿದೈದಿ ನೋೞ್ಪನ್ನೆಗಂ

ಜಗುಳ್ದ* ಕಚಾಗ್ರಮಂ ಸಸಿನೆಗೈದು ಕುಚಂಗಳನುತ್ತರೀಯದಿಂ ।
ಬಿಗಿದು ಪೊದಱ್ದ ಮುಂಜೆಱಗನೊಪ್ಪಿರೆ ಸೆಕ್ಕಿಯುಳುರ್ವ ಕುಂಡದ ॥
ಗ್ನಿಗೆ ಬಲವಂದು ತನ್ನ ನಿಜದೇವತೆಯಂ ನೆನೆದಿರ್ಕರಂಗಳಂ ।
ಮುಗಿದು ಚಿತಾಗ್ನಿಯಂ ಪುಗುವಳಂ ಮಿಗೆ ಕಂಡೆನಿಳಾಧಿನಾಯಕಾ ॥ ೫೧

ಅಂತಗ್ನಿಪ್ರವೇಶಮಂ ಮಾಳ್ಪಳಂ ಕಂಡು

ಭರವಸದಿಂದೆಯ್ದಿ ಪೊಗ ।
ಱ್ದುರಿಯೊಳ್ ಬೀೞ್ವವಳ ಬಾಹುಲತೆಯಂ ಪಿಡಿಯಲ್ ॥
ತರಳತರಭೀತಿರಸಮಂ ।
ಕುರಿಸಲ್ ತತ್ತರುಣಿಯೆನ್ನನಂದಿಂತೆಂದಳ್ ॥ ೫೨

ಅಡವಿಯೊಳಂತು ಬಂದು ಪರನಾರಿಯನಗ್ನಿಮುಖಪ್ರವೇಶಿಯಂ ।
ಪಿಡಿವುದು ನೀತಿಯಲ್ತು ಬಿಡು ತನ್ನ ಮನಃಪ್ರಿಯನಂಗಸಂಗಮಂ ॥
ಪಡೆದಪೆನಿಂದು ವಾಸವನಿವಾಸದೊಳಿಂದುಸಿ*ರ್ವನ್ನೆಗಂ ಕೆಲಂ ।
ಬಿಡಿದಱುತಿರ್ದ ವೃದ್ಧಸತಿಯೆನ್ನಡಿಯೊಳ್ ಪೊರಳ್ದಳ್ ನೃಪೇಶ್ವರಾ ॥ ೫೩

ಅಂತಾವೃದ್ಧಸತಿಯೆನ್ನಡಿಯೊಳ್ ಪೊರಳೆ
ಪೆೞ್ತಾಯೆ ಕಿಱಿಯನಡಿಯೊಳ್ ।
ಬೀೞ್ತಿರ್ಪುದನುಚಿತಮೀಸರೋಜಾನನೆ ತಾ ॥
ನೇೞ್ತಂದಳೇಕೆ ಶಿಖರಿಗೆ ।
ಪೇೞ್ತಡೆಯದೆನಲ್ಕೆ ಪೇೞಲುದ್ಯತೆಯಾದಳ್ ॥ ೫೪

ಅದೆಂತೆನೆ:—

ಭೂ ಪೊಗೞಲ್ಕೆ ಸುವರ್ಣ ।
ದ್ವೀಪಂ ಶರನಿಧಿಯ ನಡುವೆ ಮೆಱೆದಿರ್ಪುದು ತ ॥
ದ್ವೀಪದೊಳಿರ್ಪಂ ಸಕಳಕ ।
ಳಾಪತಿ ಸಲೆ ರತ್ನದತ್ತನೆಂಬ ಧನಾಢ್ಯಂ ॥ ೫೫

ಆಧನಿಕನಣುಗಿಯೀಪು ।
ಣ್ಯಾಧಿಕೆ ಪೆಂಪೆಸೆವ ಪೆಸರ ಹೇಮಪ್ರಭೆ ಬಿಂ ॥
ಬಾಧರೆ ಲಾವಣ್ಯರಸಾಂ ।
ಭೋಧಿ ಕಳಾವತಿ ನೆಗೞ್ದ ಕನ್ಯಾರತ್ನಂ ॥ ೫೬

ಇವಳನುಱೆ ರತ್ನದತ್ತಂ ।
ವಿವಿಧಾಲಂಕಾರಸಹಿತಮೊಲವಿಂ ರತ್ನೋ ॥
ದ್ಭವನೆಂಬ ಮಗಧನೃಪಸಚಿ ।
ವವರಂಗಿತ್ತಂ ಜಸಂ ಪದಿರ್ಮಡಿಸುವಿನಂ ॥ ೫೭

ಅಂತು ರತ್ನದತ್ತನೀಕನ್ಯಕೆಯುಂ ರತ್ನೋದ್ಭವಂಗೆ ಕುಡಲಿರ್ವರ್ಗನ್ಯೋನ್ಯಸ್ನೇಹಂ ಕೈಮಿಕ್ಕಿರೆ

ಕಾಮನ ತೂಣೀರಂ ಸುಮ ।
ನೋಮಾರ್ಗಣಗರ್ಭದಿಂ ಮನಂಗೊಳಿಪಂತೀ ॥
ಶ್ಯಾಮೆಗೆ ಗರ್ಭಂ ಮೆಱೆಯಲ್ ।
ಕಾಮಿಸಿದಂ ಕಾಂತನೆಸೆವ ತನ್ನಯ ಪುರಮಂ ॥ ೫೮

ಅಂತಿರ್ಕೆ ಪೂರ್ಣಗರ್ಭೆಯಂ ತಳೆಯಲಿರ್ಕೆಯುಂ ವಲ್ಲಭನಪ್ಪ ರತ್ನೋದ್ಭವಂ ತನ್ನ ಪತ್ತನಕ್ಕೆ ಪೋಗಲ್ ರತ್ನದತ್ತನಿಂ ಕಳಪಿಸಿ ಕೊಂಡುಮಾಕೆಯುನೊಡಗೊಂಡಾಂ ಸಹಿತಮಂಭೋಧಿಯೊಳ್ ಬಹಿತ್ರಮನೇಱಿ ಬರ್ಪಾಗಳ್

ಮೈನಾಕಗಿರಿ ಮಹಾಂಬುನಿ ।
ಧಾನದೊಳದ್ದಂತೆ ತದ್ಬಹಿತ್ರಂ ಮುಳುಗಲ್ ॥
ಮಾನಿನಿಯುಂ ತಳ್ಕಸಿಕೊಂ ।
ಡಾನೊಯ್ಯನೆ ಪುಣ್ಯದಿಂದೆ ತಡಿಗೇಱ್ತಂದಂ ॥ ೫೯

ಅಂತು ತಡಿಗೆ ಬಂದಿರ್ಕೆಯು ಬಳಿಕ್ಕೆಯುಂ ನಾನಾಱಿಸುತ್ತಿರೆ ತನ್ನ ಪತಿಯಂ ಕಾಣದೆ ಮುಳುಂಗಿದನೆಂದನುಮಾನಿಸಿ

ಗಹಗಹನೆ ನಕ್ಕು ನೋಡಾ ।
ಸಿಹಪರಸೌಖ್ಯಕ್ಕೆ ಬಾಹ್ಯವಾಗಿಯುಮಿನ್ನುಂ ॥
ಮ್ಮಹದಿಂ ಜೀವಿಪೆನೆಂದೇ ।
ಕೆ ಹೀನಬುದ್ಧಿಯನೊಡರ್ಚಿದಪೆನೊ ವಿಧಾತ್ರಾ ॥ ೬೦

ಎಂದು ರತ್ನೋದ್ಭವನಂ ಮುಳುಂಗಿ ತಾನುೞಿದಿರ್ದುದರ್ಕೆ ಪೇಸಿ ಮರಣೋಪಾಯಮಂ ನೆನೆಯುತ್ತಿರೆ,

ಹೇಮಪ್ರಭೆ ನೀಂ ಕೂಡುವೆ ।
ಕಾಮಾದ್ರಿಯೊಳಧಿಕನಪ್ಪ ರತ್ನೋದ್ಭವನಂ ॥
ವಾಮೆ ಪದಿನಾಱು ವರ್ಷ ।
ಕ್ಕೀಮಾತಂ ನಂಬಿರೆಂದುದಾಕಾಶರವಂ ॥ ೬೧

ಅಂತಶರೀರವಾಕ್ಯಮಂ ಕೇಳ್ದುದಱಿನೀಕೆಯು ಮರಣಚಿಂತೆಯುಂ ಬಿಡಿಸಿ ಕಾಮಶೈಲಕ್ಕೆ ಪೋಗಲೆಂದಿರ್ಪಾಗಳ್

ನೀರೊಳ್ ಬಂದ ಬಳಿಕ್ಕೆಯಿ ।
ನೋರಂತಿರೆ ಬೇನೆ ಮಸಗಿ ಹೇಮಪ್ರಭೆ ವಿ ॥
ಸ್ತಾರದಿನಾಗಳ್ ಪಡೆದಳ್ ।
ವಾರಿಜಸಖನಂತಿರೆಸೆವ ಪುತ್ರನನೊಲವಿಂ ॥ ೬೨

ಅಂತು ಪೇೞ್ದು

ಇನ್ನುಸಿರ್ವುದೇನೊ* ತತ್ಸುತ ।
ನನ್ನೋಡಲ್ ಪಡೆದಳಲ್ಲ ಪಾಪಿಷ್ಠೆಯೆನ ॥
ಪ್ಪೆನ್ನಯ ಕೆಯ್ಯೊಳ್ ಕುಡಲಾಂ ।
ಬೆನ್ನೀರ್ಗೆಂದೊಂದು ಪುರವನಱಸಲ್ ಪೋದೆಂ ॥ ೬೩

ಅಂತಾಶಿಶುವಿನ ಮೆಯ್ಯ ಮಾಸಂ ತೊಳೆಯಲ್ ಬಿಸುನೀರಂ ದೊರಕಿಸಲೆಂದೊಂದು ಪುರದ ದಾರಿಯೊಳ್ ಬರುತ್ತಿರ್ಪಾಗಳ್

ಪಾಪಹರಮೂರ್ತಿ ಕಟ್ಟಿದ ।
ಕೌಪೀನಂ ಮಿಱುಪ ಜಡೆಗಳೊಪ್ಪುವ ಹರಯಂ ॥
ಲೇಪನವಿಭೂತಿ ರಂಜಿಸ ।
ತಾಪಸಸುತನೆನ್ನನಂದು ಭೋಂಕನೆ ಕಂಡಂ ॥ ೬೪

ಅಂತೆನ್ನಂ ಕಂಡೀಬಾಲಕನೆಲ್ಲಿಯವನೆಂದಾಮುನಿಕುಮಾರಂ ಕೇಳ್ದ ಸಮಯದೊಳ್

ಕಾಡಾನೆ ಸೊರ್ಕಿ ತರುಗಳ ।
ನೀಡಱಿಯುತ್ತಿನ್ನಿದಿರ್ಗೆ ಬರಲೆನಗೆ ಭಯಂ ॥
ಮೂಡೆ ಕರದೆಳೆಯಮಗನಂ ।
ನೋಡದೆ ಬಿಸುಟೀಕೆಯಿರ್ದ ತಾಣಕ್ಕೊಗೆದೆಂ ॥ ೬೫

ಅಂತಾಮಗನಂ ಬಿಸುಟೀಕೆಯ ಸಮೀಪಕ್ಕೆ ಬಂದೆಲ್ಲಿಯುಮಿರಲಣ್ಮದಾಕಾಶವಾಕ್ಯಮಂ ಕೇಳ್ದೀಕಾಮಶೈಲಕ್ಕೆ ಬಂದೀಕೆಯ ಕಾಂತಾಗಮನಮಂ ಚಿಂತಿಸುತ್ತಿರ್ದೀಪ್ರೌಢೆಗೆ ಪದಿನಾಱು ವರ್ಷಂ ತುಂಬೆ

ನನ್ನಿಯ ಬರಿಸಂ ತುಂಬಿ ।
ತ್ತೆನ್ನರಸಂ ಬಾರನೆಂದು ಶಿಖಿಯಂ ಪುಗುವಳ್ ॥
ತನ್ನ ಮನದುರಿಗೆ ಸೈರಿಸ ।
ದಿನ್ನೇನಂ ಪೇೞ್ವೆನೆಂದು ಸುಬ್ಬನೆ ಸುಯ್ದಳ್ ॥ ೬೬

ಎಲೆಯರಸ ವೃದ್ಧೆ ಪೇೞ್ದುದಱಿಂದೆಮ್ಮ ತಾಯೆಂದಱಿದಾಕೆಯುನೆಂತಾನುಂ ಸಂತಯಿಸಿ ನಿನ್ನ ವಲ್ಲಭನಂ ತೋಱಿಪೆಂ ಬಾಯೆಂದಶೋಕತರುವಿನ ತಲದೊಳಿರ್ದ ರತ್ನೋದ್ಭವನಂ ತೋಱಿಸೆ

ಭೋಂಕೆನಲೊರ್ಬರೊರ್ಬರ ಮುಖಂಗಳನೀಕ್ಷಿಸಿ ಬಾಷ್ಪವಾರಿಯೊಳ್
ತೇಂಕಿದರಪ್ಪಿಕೊಂಡರತಿಸಮ್ಮದದಿಂ ಮಿಗೆ ದುಃಖಭಾರಮಂ ॥
ನೂಂಕಿವರಂತರಿಕ್ಷವಚನಂ ದಿಟಮಾಯ್ತು ಸಮಸ್ತಭಾಗ್ಯಮಿಂ ।
ದಂಕುರಿಸಿತ್ತೆನುತ್ತೆ ಮಗುಳ್ದೆನ್ನ ಮುಖಾಬ್ಜಮನೊಲ್ದು ನೋಡಿದರ್ ॥ ೬೭

ಅಂತು ನೋಡಿ ಎಲೆ ಮಹಿಮ ನೀನಾರೆಂದೆನ್ನಂ ಬೆಸಗೊಳೆ

ವಾರಣಮಂ ಕಂಡಂಜೆ ಮ ।
ಹಾರಣ್ಯದೊಳೀಕೆ ಬಿಸುಟು ಪೋದ ಕುಮಾರಂ ॥
ಕಾರಣದೆಳಲ್ಲಿಗೆಯ್ದಿದೆ ।
ನಾರಯ್ಯಲ್ ನಿಮ್ಮ ಪುತ್ರನೆಂದೆಱಗಿರ್ದೆಂ ॥ ೬೮

ಇದನೇವೇೞ್ವುದೊ ಭಾಗ್ಯದೇೞ್ಗೆ ರವನಾನಂದಾರ್ಣವಂ ಮೇರೆದ ।
ಪ್ಪಿದ ಚೆಲ್ವಂ ನಿಜಪುಣ್ಯಪುಂಜವೆನಸುಂ ಕೈಸಾರ್ದುದಂ ಮಂಗಳಾ ॥
ಸ್ಪದಸಂಸಾರಸುಖಂ ಫಲಂಬಡೆದುದಂ ಚಿತ್ತೋತ್ಸವಂ ಕೆಚ್ಚುಗೆ ।
ಟ್ಟದುದಂ ಮಾನಸಜನ್ಮಸಾರದೊದವಂ ನೇತ್ರಾಬ್ಜಸಾಫಲ್ಯಮಂ ॥ ೬೯

ಇಂದಿನ ಸೌಖ್ಯಮಿಂದಿನ ಮಹೋನ್ನತಿಯಿಂದಿನ ಭಾಗ್ಯದೇೞ್ಗೆ ಮ ।
ತ್ತಿಂದಿನ ಚಿತ್ತದುಜ್ಜ್ವಳಿಕೆಯಿಂದಿನ ಪುಣ್ಯಫಲಂ ಸಮಂತು ನ ॥
ಮ್ಮಿಂದಿನ ಮೆಯ್ಮೆಯಿಂದಿನನುರಾಗಸುಖಂ ಪರಿಭಾವಿಸಲ್ ಕರಂ ।
ಚೆಂದಮದಾಯ್ತೆನುತ್ತೆ ಮನದುತ್ಸವವಾರಿಧಿಯೊಳ್ ಮುೞುಂಗಿದರ್ ॥ ೭೦

ಅಂತೆನ್ನಂ ತೆಗೆದು ಮುಹುರ್ಮುಹುರಾಲಿಂಗನಮೂರ್ಧಘ್ರಾಣನಂ ಗೆಯ್ದು ಸಂಪೂರ್ಣಮನೋರಥರಾದ ತಾಯ್ತಂದೆಗಳ್ಬೆರಸು ಚಿತ್ತೋತ್ಸವಂ ಮುಂದುವರಿಯಲಲ್ಲಿಂದೆ ತೆರಳ್ದು ಬರ್ಪಾಗಳ್ ಮುಂದೆ

ನುತಸಾಮಧ್ವನಿ ಹೋಮಧೂಮಪವನಂ ಸಂಭಾಷಣಂ ಮಂತ್ರಹೂಂ ।
ಕೃತಿಯಾಹ್ವಾನವಿಸರ್ಜನಸ್ಥಿತಿ ಮಹಾದೇವಾರ್ಚನಂ ತಾಪಸ ॥

ಪ್ರತಿಪತ್ತಿವ್ರತಮಾತ್ತನಿತ್ಯನಿಯಮಂ ಕಾಲತ್ರಯಜ್ಞಾನಮು ।
ಗ್ರತಪಂ ಶಾಂತರಸಪ್ರವಾಹಮೆಸೆಯಲ್ ಚೆಲ್ವಾಯ್ತು ಋಷ್ಯಾಶ್ರಮಂ ॥೨೧

ಮತ್ತಮಲ್ಲಿ ಮೃಗರಾಜಿಯ ಮೊಯ್ಯನುಗುರ್ಗಳಂ ತುಱುಸಿ ಕಂಡೂತಿಯಂ ಕಳೆವ ಪುಂಡರೀಕಂಗಳಂ, ಕಂಠೀರವಕಿಶೋರಂಗಳಂ ಕರದೊಳಟ್ಟಿಯ್ಯನುಯ್ಯಲಾಡಿಸುವ ಕಾಡಾನೆಗಳಂ, ಬಿಸಿಲುರವಣೆಗೆ ಬಸವೞಿವ ವಿಷಾಹಿಗೆ ಪತತ್ರಪಲ್ಲವಮಂ ಜಲ್ಲರಿವಿಡಿವ ಕಲಾಪಿಗಳಂ, ಜರತ್ತಾಪಸರ್ಗೆ ಚರಣಪರಿಚರ್ಯೆಯಂ ಮಾಳ್ಪ ವನಚರಂಗಳಂ, ಮುನಿಕುಮಾರರ ಕೆಯ್ಯಂ ಪಿಡಿದು ಮೆಲ್ಲನಡಿಯಿಡಿಸುವ ಭಲ್ಲೂಕಂಗಳಂ, ಕವಲ್ಗೊಂಬಿನೊಳ್ ಕಮಂಡಲಮಂ ನೇಟಲ್ ತುಱುಂಕದಂತೆ ತಳೆದಿರ್ಪ ಸಾರಂಗಂಗಳಂ, ಋಷಿಕುಮಾರಿಯರ್ಗೆ ನೆರವಾಗಿ ಚರಿಯಿಪ ಹರಿಣಿಗಳಂ, ಪರ್ಣಶಾಲೆಯೊಳ್ ಪರೆದ ಪುಷ್ಪರಜಮಂ ಸಮಱಿ ತೊಡೆವ ಚಮರೀಮೃಗಂಗಳಂ, ಹೋಮಧೇನುಕಂ ಕ್ಷೇಮಮಪ್ಪಂತು ಕಾದಿರ್ಪ ಗೋಲಾಂಗೂಲಂಗಳಂ, ತಾಪಸಕುಮಾರರೊಡನೆ ಚಾಪಳತೆಯಿಂ ಶಾಸ್ತ್ರಾನುಮಾವನಂಗೆಯ್ವ ರಾಜಕೀರಂಗಳಂ, ಅಗ್ನಿಹೋತ್ರರಕ್ಷಣಾರ್ಥಂ ಬಾಲ್ವೇಲಿಯಂತಿರ್ಪ ಎಯ್ಯಪಂದಿಗಳಂ, ನೀವಾರಾಂಕುರಕ್ಕೆ ಕಾವಪ್ಪಂತು ಲಾಂಗೂಲಪದ್ಧತಿಯಂ ಮಾಳ್ಪ ವರಾಹಂಗಳಂ, ಶಾಂತರಸವಾರ್ಧಿ ಮೇರೆವಪ್ಪಿದಂತಿರ್ದುದು. ಅಂತುಮಲ್ಲದೆಯುಂ

ಶ್ರುತಿಮಾರ್ಗಶ್ರವಣಂ ಪುರಾಣಕಥನಂ ಷಟ್ತರ್ಕಸಂಭಾಷಣಂ ।
ಸ್ಮೃತಿಚಿಂತಾವ್ಯಸನಂ ಸಮಸ್ತಪುರುಷಾರ್ಥಾಳಾಪಕಂ ಪೆಂಪ್ರವೆ ॥
ತ್ತಿತಿಹಾಸಸ್ಮೃತಿವಿಸ್ಮಯಂ ಸಕಲಧರ್ಮಾಧರ್ಮನೈರೂಪಣ ।
ಸ್ಥಿತಿ ವೈಶೇಷಿಕದಿಂದದೇಂ ಮೆಱೆವುದೋ ಚೆಲ್ವಾಗಿ ಋಷ್ಯಾಶ್ರಮಂ ॥

ಅಂತೆಸೆವ ಋಷ್ಯಾಶ್ರಮಮಂ ಪುಗಲದಱೊಳ್

ಉರಿಗಣ್ದೋಱದ ಶಂಕರಂ ಫಣಿಕುಲಂ ತಳ್ತುವರ್ದೀಶಂ ಮಹಾ ।
ಗರಳಂ ಪೊರ್ದದ ಶಂಭು ಚರ್ಮವಸನಂ ಮೆಯ್ವೆರ್ಚದಂಧಾರಿ ಕೂ ॥
ರ್ಪರೆವೆಣ್ಣಾಗದ ರುದ್ರನೆಂಟಿ*ವೆರ್ಯುನಂಟಿಪರ್ಪಂಗಮಂ ತಾಳದಂ ।
ಬರಗಂಗಾಧರನೆಂಬ ಪೆಂಪುವಡೆದಂ ಸರ್ವಜ್ಞಯೋಗೀಶ್ವರಂ ॥ ೨೩

ಅಂತಿರ್ದ ಸರ್ವಜ್ಞರೆಂಬ ಯೋಗೀಶ್ವರರಂ ಕಂಡವರಿಂ ಪ್ರಸಾದಮಂ ಪಡೆದು ನಿರವಧಿಪರಿಚರ್ಯೆಯುಮಂ ಮಾಡುತ್ತಿರಲಾಂ ಸಂಸಾರಿಯಪ್ಪುದಱಿಂದರ್ಥಸಂಬಂಧದಿಂ ಜೀವಿಸುವನೆಂಬುದನವರಱಿತು ಕರುಣಿಸಿ

ಕರುಣಾಳುಗಳಪ್ಪುದಱಿಂ ।
ಪರಿಚರ್ಯೆಯ ತುಷ್ಟಿಯಿಂ ಮುನಿಶ್ರೇಷ್ಠಂ ನಿ ॥
ರ್ಭರಶಾಂತದೃಷ್ಟಿಯಿಂದಾ ।
ದರದಿಂ ಕರೆದೆನಗೆ ಕೊಟ್ಟರೊಂದೌಷಧಿಯಂ ॥ ೭೪

ಅಂತೌಷಧಿಯಂ ಕೊಟ್ಟು ಮತ್ತಮಿಂತೆಂದರ್:—

ಅಡಿಗಡಿಗೆ ನಿಧಾನಂಗಳ್ ।
ಪೊಡವಿಯೊಳಡಿದಿರ್ಪುವದಱಿನೀಯೌಷಧಿಯಿಂ ॥
ಪಡೆದಂಜನದಿಂ ಧನಮಂ ।
ತಡೆಯದೆ ಪಡೆಯೆಂದು ಬೆಸಸಿದರ್ ಮುನಿಮುಖ್ಯರ್ ॥ ೭೫

ಅದರ್ಕಂ ಮಹಾಪ್ರಸಾದಮೆಂದು ಔಷಧಿಯಿಂದಂಜನಂಬಡೆದು ನೋೞ್ಪಾಗಳ್

ನೋಡಿದ ತಾಣಂ ಕನಕದ ।
ಬೀಡಾಗಿರೆ ಕಂಡು ಚಿತ್ತದಾರ್ತಂ ಪಿಂಗಲ್ ॥
ತೋಡಿದೆನರ್ಥಮನೇನಂ ।
ಮಾಡದೊ ಸನ್ಮುನಿಪಸಂಗಮಾಪದ್ಭಂಗಂ ॥ ೭೬

ಅಂತು ಭರತಕುಲದಂತೆ ಗಾಂಗೇಯಸಂಪತ್ತಿಯಂ ಪಡೆದು ದೇವರಂ ಕಾಣ್ಬುಪಾಯಮಂ ಚಿಂತಿಸುತಿರ್ಪನ್ನೆಗಮೊಂದು ದಿವಸಂ

ಮಿಸುನಿಯ ಗಗ್ಗರಂ ಸಸಿನಗೊಂಬಿನ ಚಾರಿಯೆಬಿಲ್ವ ಗಂಟೆಗಳ್ ।
ಮಿಸುಪುರಗೆಜ್ಜೆ ಮಿಂಡಿಗೆಗಳಂ ಮಿಗೆ ಚುಂಬಿಪ ವಾಲಮೊಪ್ಪಿ ನಿಂ ॥
ದೆಸೆವೆಳಸಣ್ಣರೋಮತತಿ ಕೊರ್ಬಿದ ಮೆಯ್ ಮಿಗೆ ಹೇಱುವೆತ್ತನ ।
ಶ್ವಸಹಿತಮಾವನಸ್ಥಳಮನೆಯ್ದಿದನೊರ್ವ ಮಹಾವಣಿಗ್ವರಂ ॥ ೭೭

ದಾವಣಿಗೊಂಟವಮಂ ಪೊಡೆವ ಕಾಪ್ಪುರುಳಂ ಪರಿವಾಯ್ವ ಪೇರ್ಗಳಂ ।
ತಾವಱಿದೊಟ್ಟಲೊಟ್ಟುವ ಸಮಸ್ತಳದೊಳ್ ಗುಡಿವೊಯ್ವ ಬೆನ್ನ ಪು ॥
ಣ್ಣೋನ್ನವ ನೀರ್ಗೊಳಕ್ಕೆ ಬಱಿಲ್ವೆತ್ತುಗಳಂ ಪೊಡೆವಕ್ಕಿಯುಂ ಕರಂ ।
ಭಾವಿಸೆ ಸೇರೆಗೊಂಡಡುವ ದೋಲಿಗರಿಂದೆಸೆದಂ ವಣಿಗ್ವರಂ ॥ ೭೮

ಅಂತಲ್ಲಿಗೊರ್ಬ ವಸ್ತ್ರವ್ಯವಹಾರಿ ಬಂದು ಬೀಡುಬಿಡುವುದುಮದಱೊ ೞೊರ್ಬನನೀತನಾರೆಂದಾಂ ಕೇಳ್ವುದುಮಾತನಿಂತೆಂದಂ:—

ವಿಭವಧನೇಶಂ ಪದ್ಮ ।
ಪ್ರಭನೆಂಬಂ ಹೇಮದತ್ತನಣುಗನ ಪರದಂ ॥
.... ।
ಶುಭಚರಿತಂ ಸಲೆ ಪರೋಪಕಾರಚರಿತ್ರಂ ॥ ೭೯

ಎಂದು ಪೇೞ್ವುದುಮಾನಾತನಲ್ಲಿಗೆ ಪೋಗಿ ಮೃದುಸಂಭಾಷಣಂಗೆಯ್ಯಲಾತಂ ಪ್ರೀತಿವಟ್ಟು ಕಿಱಿದು ದಿನಮಿರ್ದಲ್ಲಿಂ ತಳರ್ದು ಪೋಪಾಗಳೆನ್ನಂ ಕರೆದು

ಎನ್ನ ನಿಜಮಿತ್ರನಾದೊಡ ।
ಮೆನ್ನೊಗೊರ್ಡವಂದು ತತ್ಪುರಶ್ರೀಯನಲಂ ॥
ಪಿನ್ನೋಡಿಯುವಂತೀಶ್ವರ ।
ನುನ್ನತಸಂಪದಮನೀಕ್ಷಿಪುದು ನಲವಿಂದಂ ॥ ೮೦

ಎಂದು ಪೇೞ್ದೊಡಂತಗೆಯ್ವೆನೆಂದಾತನಿಂ ಕೆಲವೆತ್ತುಗಳನೀಸಿಕೊಂಡು ಅಸಂಖ್ಯಾತವಸ್ತ್ರವಂ ತುಂಬಿ ಸರ್ವಜ್ಞರಂ ಬೀೞ್ಕೊಂಡು ಪದ್ಮಪ್ರಭನೊಡನೆ ಬಂದವಂತೀಪುರವಮಂ ಕಂಡು

ಅತನು ಪುರಾಧಿಪಂ ತಳವಟಂ ಶಶಿ ಪೆರ್ಗಡೆ ಮಂದಮಾರುತಂ ।
ರತಿ ನಗರಾಧಿದೇವತೆ ವಸಂತನಶೇಷಗುಣಪ್ರಬೋಧಕಂ ॥
ಕೃತಕನಗಾಳಿ ಕೋಂಟೆ ಮಕರಂದರಸಂ ನದಿಯಾದ ತತ್ಪುರ ।
ಸ್ಥಿತಿಯ ವಿಲಾಸಮಂ ಬಗೆದು ಬಣ್ಣಿಸುವಂ ಶುಕರೂಪನಲ್ಲವೇ ॥ ೮೧

ಆರಮಣೀಯಪುಷ್ಪಪುರಮಧ್ಯದೊಳೊಪ್ಪುವ ದೇವತಾಗೃಹ ।
ದ್ವಾರಸಮುಚ್ಚಳದ್ವಿಮಳಗುಗ್ಗುಳಧೂಪದ ಧೂಮ ಮಂಡಲಾ ॥
ಕಾರಮನಾಂತು ವಾರವನಿತಾಮಣಿಮಂಟಪಗೋಪುರಂಗಳೊಳ್ ।
.... ಮೆಱೆಗುಂ ಕಳಕಂಠಸಹಾಯಮೆಂಬಿನಂ ॥ ೮೨

ಮಲ್ಲಿಗೆವಳ್ಳಿ ಪರ್ಬಿದೆಳಮಾವೆಳಮಾವಿನ ಕೆಂದಳಿರ್ಗಳಂ ।
ಮೆಲ್ಲನೆ ಚಂಚುವಿಂ ಕರ್ದು*ಕಿ ಬಗ್ಗಿಪ ಕೋಕಿಲೆ ಕೋಕಿಲಸ್ವನ ॥
ಕ್ಕಲ್ಲಿಯೆ ಮೂರ್ಛೆವೋಪ ವಿರಹಿಪ್ರಕರಂ ವಿರಹಿಪ್ರತಾನಮಂ ।
ಘಲ್ಲಶರಂಗಳಿಂದಿಸುವ ಮನ್ಮಥನಿಂದೆಸೆಗುಂ ಬಹಿರ್ವನಂ ॥ ೮೩

ಅಂತು ಪೋಗುತ್ತಂ ನೆಗೆತ್ತೆವಡೆದವಂತೀಪುರಮಂ ಪೊಕ್ಕು ಪದ್ಮಪ್ರಭನಂ ಕಾಣಿಸಿಕೊಂಡಾತನಿಂ ಕೃತಪ್ರೀತನಾಗಿ ಪರಿತೋಷಮನೆಯ್ದಿ ತಾಯ್ತಂದೆಗಳಂ ಸಕಲವಸ್ತುವಂ ಕ್ಷೇಮದಲ್ಲಿರಿಸಿ ಪ್ರತಿದಿನಂ ಹೇಮದತ್ತನನನುವರ್ತಿಸಿ ಕೊಂಡಿರ್ಪಿನಮಾಹೇಮದತ್ತಂ

ಸ್ವರಗತಿಚೇಷ್ಟೆಗಳತ್ಯಾ ।
ದರದೀಪ್ತಸ್ಥಾನಶಾಂತಿದಿಙ್ಮಂತ್ರಮನೋ ॥
ಹರಕಾಲಮೆಂಬ ಶಕುನದ ।
ಪರಿವಿಡಿಯುಂ ಹೇಮದತ್ತನೋದುತ್ತಿರ್ದಂ ॥ ೮೪

ಅಂತಾಹೇಮದತ್ತಂ ಶಕುನಶಾಸ್ತ್ರಮನೋದುವುದಂ ಕೇಳ್ದೀತನಿಂದೆ ಮ್ಮಗ್ರಜನ ವಾರ್ತೆಯನಱಿಯಲ್ಬರ್ಪುದೆಂದಾತನನಿಂತೆಂದೆಂ:—

ಎಮ್ಮರಸನೆಂದು ಬಂದಪ ।
ನೆಮ್ಮ ಮನೋರಥವದೆಂದು ನೆರೆದಪುದೆಂದೀ ॥
ನಿಮ್ಮ ನಿಮಿತ್ತದಿನಱಿದೆನ ।
ಗುಮ್ಮಹಮಂ ಹೇಮದತ್ತ ಮಾಳ್ಪುದು ನಲವಿಂ ॥ ೮೫

ಎಂದೊಡಾತನಂತೆಗೆಯ್ವೆನೆಂದೊಂದು ದಿನಮೆನ್ನನೊಡಗೊಂಡೊಂದು ವನಕ್ಕೆ ಪೋಗಿ ಪಕ್ಷಿಯ ನಿಮಿತ್ತಮಂ ಹೇಮದತ್ತಂ ನೋಳ್ಪಾಗಳಾನಾವನವಿಸ್ತಾರಮಂ ನೋಳ್ಪೆನೆಂದು ತೊೞಲ್ವಾಗಳ್

ಮನಸಿಜಮತ್ತವಾರಣಮೊ ಕಾಮನ ಕಾರ್ಮುಕಗೇಹಮೋ ಮನೋ ।
ಜನ ಕೃತಕಾದ್ರಿಯೋ ಕುಸುಮಬಾಣನ ಸಜ್ಜೆಯೊ ಕಂತುರಾಜನಿಂ ॥
ಬಿನ ರತಿಶಾಲೆಯೋ ಮದನನೊಡ್ಡಿದ ಕಾಮುಕಕಂಠಪಾಶಮೋ ।
ನನೆಕೊನೆವೋದ ಮಾಮರನೊ ಪೇಳೆನೆ ರಂಜಿಸಿದತ್ತು ಮಾಮರಂ॥ ೮೬

ಮತ್ತಮದು ರಾಜಭವನದಂತು ಜಾಳಕವಿಳಾಸಮುಂ, ಗ್ರಹಚಾರದಂತುಪರಾಗಸಂಪೂರ್ಣಮುಂ, ಮುನಿಸಭಾಮಂಡಳದಂತು ಶುಕಪರಿಪ್ರೀತಿಯುಂ, ವಿಳಾಸಿನೀಜನದಂತು ದ್ವಿಜಚ್ಛೇದಮನೋಹರಮುಂ, ಕಲ್ಯಪಾನಗೃಹದಂತು ಮಧುಪಪರೀತಮುಂ, ವಿಕಸಿತಕಮಳದಂತು ವನಮಧ್ಯಸ್ಥಿತಮುಮೆನಿಸಿರ್ದುದು. ಅಂತುಮಲ್ಲದೆಯುಂ

ಆಸಹಕಾರದ ಕೇಳಿಗೊಳ್ ।
ವಾಸವನಂತನಿಮಿಷಾವೃತಂ ಗಗನದವೋಲ್ ॥
ದೇಸೆ ಮಿಗುವಬ್ಜಹಂಸಾ ।
ವಾಸಂ ಮೆಱೆದಿರ್ಪ ಪೂಗೊಳಂ ರಂಜಿಸುಗುಂ ॥ ೮೭

ಅಂತು ನೈರ್ಮಲ್ಯವಿಲಾಸವಾದ ಪೂಗೊಳನ ತಡಿಯೊಳ್

ವನಲಕ್ಷ್ಮಿ ತನ್ನ ಘನಲೋ ।
ಚನದೊಪ್ಪಮನಂಬುಜಕ್ಕೆ ಮೀಂಗಳ್ಗೆಯು ॥
ಲ್ಕನುನಯದಿಂ ಬಂದಿರ್ಪ ।
ಳೆನೆ ಪೂಗೊಳನಲ್ಲಿ ಕಾಂತೆ ಸಂತಸಮಿರ್ದಳ್ ॥ ೮೮

ವದನಸರೋಜಿನೀಪರಿಮಳಕ್ಕೆಱಗಿರ್ದಳಿಯೆಂಬ ಚೆಲ್ವನೊ ।
ಲ್ದೊದವಿಪ ಕುಂತಳಂ ಚಿಕುರಬಂಧುರಬಂಧಮಹಾಂಧಕಾರಮಂ ॥
ಬೆದಱಿಸುತಿರ್ಪಪಾಂಗಮರುಣಾಧರಧಾತುರಸಾನುಲೇಪನಂ ।
ಪುದಿದ ಕಪೋಲಭಿತ್ತಿ ಮೆಱೆಗುಂ ಪದೆಪಿಂ ಮೃಗಶಾಬನೇತ್ರೆಯಾ ॥ ೮೯

ಅಂತಿರ್ದ ಕಾಂತೆಯುಂ ಮೆಲ್ಲನೆ ಸಾರ್ದು

ಅನುರಾಗಂ ಮುಖಪದ್ಮದೊ ।
ಳನುತಾಪಂ ಚಿತ್ತದೊಳ್ ವಿಳಾಸಾದಿಗುಣಂ ॥

ತನುವಿನೊಳತಿಚಿಂತಾಸ್ಥಿತಿ ।
ಮನದೊಳ್ ಪೆರ್ಚಿರ್ದ ಸತಿಯನೊಸೆದೀಕ್ಷಿಸಿದೆಂ ॥ ೯೦

ಅಂತಾಕಾಂತೆಯುಂ ಕಂಡು ನೀನಿಲ್ಲಿಯೊರ್ವಳ್ ಇರ್ಪುದರ್ಕೆ ಕಾರಣಮೇ ನೆಂದಾಂ ಕೇಳಲೊಡಂ

ನಯನತ್ರಿಭಾಗದಿಂದೆ ।
ನ್ನಯ ಮೊಗಮಂ ನೋಡಿ ಮುಗುಳ್ದು ಮಱುವಟ್ಟಂತಾ ॥
ಶ್ರಯಮಿಲ್ಲದ ಲತೆ ತೆಂಗಾ ।
ಳಿಯೊಳಲ್ಲಾಡುವವೊಲಾಕೆ ಕಣ್ಣೆಸೆದಿರ್ದಳ್ ॥ ೯೧

ಅಂತೆನ್ನಂ ನೋಡಿ ಲಜ್ಜೆಯೊಳ್ ಮುಳುಂಗಿ ಬಿಸುಸುಯ್ದಿಂತೆಂದಳ್:—

ಕೇಳೆಲೆ ಪರೇಂಗಿತಜ್ಞಾ ।
ನಾಲಯು ಬಲ್ಪಿಂದವಂತಿದೇವಂ ಗುಣಸ ॥
ಲ್ಲೀಲಂ ತನ್ನಯ ಮಗನಾ ।
ಜ್ಞಾಲಂಬದಿನಿರ್ಪನತ್ತ ಕಾಪಿನ ಮನೆಯೊಳ್ ॥ ೯೨

ಅಂತವಂತೀಶ್ವರನ ಮಗನಪ್ಪ ದರ್ಪಸಾರಂ ತನ್ನ ತಂದೆಯಪ್ಪವಂತೀಶ್ವರನಂ ಸೆಱೆಯೊಳಿಟ್ಟು ತನ್ನ ಪ್ರಧಾನಿಯಪ್ಪ ಚಂಡವರ್ಮನ ಮೇಲೆ ರಾಜ್ಯಭಾರಮಂ ನಿಲಿಸಿ ತಾನಖಿಳಭೂಮಿಯುಂ ಪಡೆವೆನೆಂದು ತಪಂಗೆಯ್ಯಲ್ ಪೋದಂ. ಈಗಳ್

ಜನವಱಿಯೆ ಚಂಡವರ್ಮಂ ।
ಗನುಜನೆನಲ್ ಮೆಱೆವ ದಾರುವರ್ಮಂ ಪದೆಪಿಂ ॥
ತನಗೆ ವಧುವಾಗಬೇಕೆಂ ।
ದನುನಯದಿಂ ಕಾಡುತಿರ್ಪನಾನೊಲ್ಲದೊಡಂ ॥ ೯೩

ಯುವತಿಯರುಂ ಕವಿತೆಯುಮು ।
ತ್ಸವದಿಂ ಸ್ವೇಚ್ಛೆಗಳನೆಯ್ದಲತಿಸುಖಮಕ್ಕುಂ ॥
ತವಕದ ಬಲ್ಪಿಂದೆಚೆಯಲ್ ।
ಭುವನದೊಳತಿವಿರಸಮಾಗದಿರ್ಪುದೆ ಕೆಳೆಯಾ ॥ ೯೪

ನಲವಿಂ ಬೆರಸದೆ ಭೀತಿಯು ।
ಬಲದಿಂ ಬೆರಸಲ್ಕೆ ಕಾಂತೆಯುರ್ಗನುರಾಗಂ ॥
ಪಲಿದಾಗೆ ಪುರುಷನೌಷಧಿ ।
ಗುಳಿಗೆಯವೊಲ್ ಮನಕ್ಕೆ ಹೇಯಮಂ ಪುಟ್ಟಿಸುಗುಂ ॥ ೯೫

ಎಂದು ಮತ್ತಮಿಂತೆಂದಳ್:—

ಬಂದೆಡೆಗೆಱಗಿದ ಚಿತ್ತಮು ।
ನೊಂದೆಡೆಗೆಳೆದುಯ್ವನೆಂದು ಬಯಸುವ ಮನುಜಂ ॥
ಬಂದ ತೊಱೆಯುದಕಮಂ ಬ ।
ಲ್ಪಿಂದಂ ಶೈಲಾಗ್ರಮಕ್ಕೆ ತಿರ್ದದೆ ಮಾಣಂ ॥ ೯೬

ಅದಂ ಕೇಳ್ದಂ ನಿನ್ನ ಚಿತ್ತಮೆಲ್ಲಿರ್ದಪುದು, ನೀನಾರ್, ಪೆಸರೇನೆಂದು ಕೇಳ್ವುದುಮಾಕೆ ಲಜ್ಜೆಯಿಂ ತಲೆಗುತ್ತಿಂತೆಂದಳ್:—

ವಿನಯನಿಧಿ ಹೇಮಗುಪ್ತನ ।
ತನೂಜೆಯಾಂ ಬಾಲಚಂದ್ರಿಕಾಖ್ಯೆಯೆನುತ್ತಾ ॥
ನನನಮಂ ಬಾಗಿ ಮಗುಳ್ದಾ ।
ಯ್ಯನೆ ಮನ್ಮುಖಮಂ ನಿರೀಕ್ಷಿಸುತ್ತಿಂತೆಂದಳ್:— ॥ ೯೭

ಎಲೆ ಸೊಬಗ ನಿನ್ನನೆಮ್ಮಯ ।
ನಿಲಯದೊಳಂದೊರ್ಮೆ ಕಂಡೆನೆಂದು ಮೊದಲ್ಗೊಂ ॥
ಡಲರಂಬನೆನ್ನನುಱೆ ಕೋ ।
ಟಲೆಗೊಳಿಸುತ್ತಿರ್ಪನೆಂದು ಲಜ್ಜಿತೆಯಾದಳ್ ॥ ೯೮

ಅಂತು ಲಜ್ಜಿತೆಯಾದುದಂ ಕಂಡು ಮತ್ತಮಾನಿಂತೆಂದೆಂ:—

ಸತಿಯರ ಚಿತ್ತಮನಱಿಯಲ್ ।
ಪಿತಾಮಹಂಗರಿದು ಮನುಜರಳವಲ್ತೆಂಬು ॥
ನ್ನತಿಯುಳ್ಳೊಡೇನೊ ನಾಂನಿ ।
ನ್ನ ತೀವ್ರಚಿಂತೆಯನಗಲ್ಚುವೆಂ ಕಮಳಾಕ್ಷೀ ॥ ೯೯

ಎಂದೆಂತಾದೊಡಂ ನಿನ್ನ ಚಿತ್ತಕ್ಲೇಶಮಂ ಪರಿಹರಿಸುವಂತು ದಾರುವ ರ್ಮನಂ ಕಾಲನಿಳಯಮನೆಯ್ದುವಂತೊಂದುಪಾಯಮುಮಂ ಪೇೞ್ವೆನದೆಂತೆನೆ–

ಇಂದು ಮೊದಲಾಗಿ ನಿನ್ನೊಡ ।
ವಂದಿರ್ಪಂ ಬ್ರಹ್ಮರಕ್ಕಸಂ ಮತ್ತಾರಂ ॥
ಕಂಡೆಱೆದು ನೋಡಲೀಸಂ ।
ಸಂದೆಗಮಿಲ್ಲೆಂದು ಪೇೞ್ವುದೆಲ್ಲರೊಳಬಲೇ ॥ ೧೦೦

ಅದಲ್ಲದೆಯುಂ

ಇಂದುಮುಖಿ ನಿನ್ನ ಸಂಗದೊ ।
ಳೊಂದಿರುಳಿರ್ದೞಿದನಾದೊಡಾತಂ ನಿನಗೊ ॥
ಲ್ದೆಂದಿಂಗಂ ನಿಜವಲ್ಲಭ ।
ನೆಂದುಸಿರ್ದ*ನೆನುತ್ತೆ ಪೇೞ್ವುದೆಲ್ಲರೊಳಬಲೇ ॥ ೧೦೧

ಇದಂ ಕೇಳ್ದು ದಾರುವರ್ಮನಂಜಿದೊಡಂಜಲಿ ಅಂಜದಿರ್ದೊಡೆ ಬ ೞಿಕಂ

ಕರಿಕಳಭನನುದ್ಧತಕೇ ।
ಸರಿ ಸೀೞ್ದು ಸಿಡಿಲ್ಬುಳಾಡುವಂತಿರೆ ಖಳನಂ ॥
ಕರಚರಣಘಾತದಿಂ ಸಂ ।
ಹರಿಸಿ ಯಮಾಲಯಮನೆಯ್ದಿಪೆಂ ಕಮಳಾಕ್ಷೀ ॥ ೧೦೨

ಎಂದಾಕೆಗೆ ಪೇೞ್ದು ಕಳಪಿಯೆಂ ಹೇಮದತ್ತನ ಸಮೀಪಕ್ಕೆ ಪೋಗಿ ಶಕುನವೃತ್ತಾಂತಮಂ ಕೇಳ್ದೊಡಾತನಿಂತೆಂದಂ:—

ಭೋರೆನೆ ಮುಟ್ಟಿನ್ನತಗತಿ ।
ಚಾರವನೆನ್ನಿರಳೆಸಗಿದತ್ತದಱಿಂ ನೀ ॥
ನೀರೈದು ದಿವಸದೊಳ್ ವಿ ।
ಸ್ತಾರಮೆನಲ್ ಕಾಣ್ಬೆಯಲ್ತೆ ನಿಮ್ಮಗ್ರಜನಂ ॥ ೧೦೩

ಎಂದು ಪೇೞ್ದೊಡಾಮಾತಿಂಗೆನುರಾಗಂ ಮನದೊಳುರ್ಕೆಯಾ ಹೇಮದತ್ತ ನುಮಾನುಂ ನಿಜನಿವಾಸಕ್ಕೆ ಬರ್ಪುದುಂ,

ಮನೆಯೊಳ್ ಮಂತಣದೊಳ್ ಪುರ ।
ವನಿತಱೊಳಮರ್ಭಕಭವನದೊಳ್ ಸಚಿವನಿಕೇ ॥
ತನದೊಳ್ ಬೇಗಂ ಪರೆದುದು ।
ವನಜಾನನೆ ಬಾಲಚಂದ್ರಿಕೆಯ ವೃತ್ತಾಂತಂ ॥ ೧೦೪

ಅಂತಾಸುದ್ದಿ ಪರೆದೊಡಂ ದಾರುವವರ್ಣನದಂ ವಿಚಾರಿಸದೆ ಬಾಲಚಂದ್ರಿಕೆಯ ಧ್ಯಾನದೊಳಿರ್ಪನದೆಂತೆನೆ:—

ಕಳವಿಂದಿರ್ಪಂಗಂ ಸತಿ ।
ಯುಳಿಪಿಂದಿರ್ಪಂಗಮತಿದರಿದ್ರಂಗಂ ಕ ॥
ಳ್ಗಳಸಿರ್ಪಂಗಂ ಮಿಗೆ ತಾ ।
ನಱಿವ ಭಯಂ ತೋಱದೆಂಬುದಿದು ಸಿದ್ಧಾಂತಂ ॥ ೧೦೫

ಇದು ತಾವಿದು ತಾವಲ್ತಿಂ ।
ತಿದು ಸಾಮ್ಯಮಸಾಮ್ಯಮಿದು ಗುಣಂ ದುರ್ಗುಣಮು ॥
ಪ್ಪುದಿದಾಗದಿದೆಂಬ ವಿವೇ ।
ಕದ ಬಗೆಯುಂ ಬಗೆಯುರಲ್ತೆ ಕಾಮುಕರಿಳೆಯೊಳ್ ॥ ೧೦೬

ಅದು ಕಾರಣಮಾಗೆ ಭಯರಸಂ ತೋಱದೆ ಪ್ರಿಯರಸಂ ಮೇರೆದಪ್ಪೆ ಮೆಯ್ಮಱೆದು ಮಱೆದಿರಲ್ ಮಱುದಿವಸಂ

ಕಿರಣಸಮೂಹಮನೊಲವಿಂ ।
ಭರದಿಂ ಪೊಱಗಟ್ಟಿ ಪದೆಪಿನಿಂದಂಬರಮಂ ॥
ಪರಿಹರಿಸಿ ಪಡುವಣಬ್ಧಿಯು ।
ಸರವಿಂದಸಖಂ ವಿಲಾಸದಿಂದಂ ಪಾಯ್ದಂ ॥ ೧೦೭

ಅಂತಸ್ತಮಾನವಾಗಲೊಡಂ,

ಕಪ್ಪುರವೀಳೆಯುಂ ಕುಸುಮಮಾಲಿಕೆ ಕತ್ತುರಿಗಂಧದಣ್ಕೆ ಚೆ ।
ಲ್ವಪ್ಪಮಳಾಂಬರಂ ಮಣಿಮಯಾಭರಣಂ ಪುದಿದುದ್ಘಚಿತ್ರದಿಂ ॥
ದೊಪ್ಪುವ ಪಟ್ಟೆಯುಂ ಪದೆಪಿನಿಂ ಸತಿಗಿತ್ತೊಡಗೊಂಡು ಬೇಗದಿಂ ।
ಬಪ್ಪುದೆನುತ್ತಮಂ ಕೆಲವರಿಂ ಕರೆದಟ್ಟಿದನಾಕುಮಾರಿಯುಂ ॥ ೧೦೮

ಅಂತಾಕೆಯುನವಂ ಕರೆಯಲಟ್ಟಿದುದನಾನಱಿದು

ಮಿಗೆ ಸಪ್ಪುರಪ್ಪೀರೆಯುಂ ಮ ।
ಲ್ಲಗಂಟನಿಂದುಟ್ಟು ಮೇಲೆ ಪೆಣ್ಣುಡೆಯುಂ ದಿ ॥
ಟ್ಟಿಗೆ ಸೊಗಸಲುಟ್ಟು ಬಱಿಕೆೊ ।
ಯ್ಯಗೆ ಸಾರ್ದೆಂ ಬಾಲಚಂದ್ರಿಕಾಂತಃಪುರಮಂ ॥ ೧೦೯

ಅಂತು ಸಾರ್ದು ನಾನಾಕೆಯುಂ ದಾರುವರ್ಮನಲ್ಲಿಗೆ ನಡೆಯಲ್ ಪೇೞ್ದು

ಮೃಗಶಾಬನೇತ್ರೆಗಾನಡ ।
ಪಗಿತ್ತಿ ಯೆಂಬಂತಿರೆಲೆಯ ಮಡಿಸಿ ಕುಡುತ್ತುಂ ॥
ಮೊಗದೊಳ್ ಮುಳಿಸೊಗೆಯಲ್ ಪಿಂ ।
ದುಗೊಂಡು ಪೋಗಿರ್ದೆನವನ ಬಾಗಿಲೊಳರಸಾ ॥ ೧೧೦

ಅಂತಾವಿರ್ಬರುಂ ಬಾಗಿಲೊಳಿರ್ಪುದುಂ ದೌವಾರಿಕರ್ ಪೋಗಿ ಪೇೞೆ ರಕ್ಕಸನ ಭಯಕ್ಕಂಜಿ ಸಕಳಪರಿವಾರಮುಂ ಕಾಪುವೇೞ್ದು ದಾರುವರ್ಮನೆಮ್ಮಂ ಕರಸೆ

ಮೃದುಚಿತ್ರಂ ಜಾಳಕಂ ಪುತ್ರಿಕೆ ಶುಕತತಿ ಪಾರಾವತಂ ರಾಜಹಂಸ ।
ಚ್ಛದತಲ್ಪಂ ತಾಳವೃಂತಂ ಕುಸುಮವಿತತಿ ತಾಂಬೂಲಕಂ ಕಂಪುನೀರ್ ತೀ॥
ವಿದ ಚಂದ್ರಗ್ರಾವಕುಂಭಂ ಮೆಱೆದು ಸೊಗಸಿನಿಂದಿರ್ಪ ತತ್ಕಾಮಕೇಳೀ ।
ಸದನಕ್ಕಾವೇೞ್ತರಲ್ ಭೋಂಕನೆ ಮನದೊಲವಿಂ ಕಂಡನಾದಾರುವರ್ಮಂ॥

ಅಂತು ಕಂಡು

ಮೊಗದೊಳ್ ಪಸರಿಸೆ ರಾಗಂ ।
ನಗೆ ಮೊಳೆಯಲ್ ಕರ್ಣವಿತತಿ ತವಕಿಸೆ ಧೃತಿಯುಂ ॥
ಮಿಗೆ ಕುಂದಲಾತನಂಗದೊ ।
ಳೊಗೆಯಲ್ ಬಹುವಿಧವಿಕಾರಮಾನದನಱಿದೆಂ ॥ ೧೧೧

ಅಂತು ಮನದೊಳ್ ತವಕಂಗೆಯ್ದುಱಿದು ಕಣ್ಸನ್ನೆಯಿಂ ಸಕಲಪಾರನಾರಿಯರಂ ಕಳುಪಿಯಾನಿರ್ದೊಡಂ ನಾಣ್ಚದೆ

ಇನಿತು ದಿನಂ ಕಾಡಿದೆ ಧೂ ।
ರ್ತೆ ನಿನ್ನನಾನಿಂದು ಬಿಡುವೆನೇ ಎನುತುಂ ಭೋಂ ॥
ಕನೆ ನಿಱುಗೆ ಪೊಯ್ಯಲಾನಿ ।
ನ್ನೆನಿತಂ ಸೈರಿಸುವೆನೆಂದು ಮುಸುಕಂ ಮಾಣ್ದಂ ॥ ೧೧೩

ಅಂತೆನ್ನ ಮುಸುಕಂ ತೆಗೆದು ಅಡಪವಂ ಕೆಲದೊಳಿಟ್ಟು

ಇಂದು ಕೃತಾಂತಮಂದಿರಮನೆಯ್ದಿಪೆನೆಂದ ಈ ದಾರುವರ್ಮನಂ ।
ಮೊದಲೆವಾಯ್ದು ಮುನ್ನುರವನೊತ್ತಿ ನೆಲಕ್ಕೆಱಿದಿಕ್ಕಲವಂತನಂ ॥
ನೊಂದು ಕರುಳ್ಗಳಂ ರುಧಿರಮಂ ನೆಱೆ ಕಾಱೆ ಬಱಿಲ್ದು ಬಿದ್ದನೆ ।
ನ್ನಿಂದಮೆನಲ್ಕೆ ಕೊಂದು ಬಱಿಕಾಂ ಪೊಱಮಟ್ಟೆನಿಳಾಧಿನಾಯಕಾ ॥ ೧೧೪

ಅಂತು ಪೊಱಮಡುತುಂ

ತರುಣಿಗೆ ಝೋಂಪಿಸಿದೊಡೆ ಬೊ ।
ಮ್ಮರಕ್ಕಸಂ ದಾರುವರ್ಮನಂ ಮುಳಿಸಿಂ ಸಂ ॥
ಹರಿಸಿದನೆನುತಾಂ ಪೊಱಮಡೆ ।
ನೆರೆದಿರ್ದವರತ್ತಲಿತ್ತಲೋಡಿದರೆಲ್ಲರ್ ॥ ೧೧೫

ಆಕಳಕಳದೊಳ್ ಬಾಲಚಂದ್ರಿಕೆಯುಮಾನುಂ ಪೊಱಮಟ್ಟು ಪೋದೆವು. ಆತನ ಮರಣವಾರ್ತೆ ಕರ್ಣಪರಂಪರೆಯಿಂ ಚಂಡವರ್ಮನ ಕಿವಿಗೆಯ್ದೆ

ಮುನಿದೆಯ್ದೆ ಬಾಲಚಂದ್ರಿಕೆ ।
ನೆನೆದಳ್ ಹಾ ! ದಾರುವರ್ಮ ನಿನ್ನಯ ಸಾವಂ ॥
ಮನಸಿಜನಿಭಾಂಗ ಹಾ! ಹಾ! ।
ಎನುತುಂ ಗುಣಿ ಚಂಡವರ್ಮನಂದೆಯ್ತಂದಂ ॥ ೧೧೬

ಅಂತು ಬಾಯಱಿಯುತ್ತುಂ ಬಂದಾತನ ಕಳೇಬರನಂ ಕೃಶಾನುವಿಂ ಗೊಪ್ಪಿಸಿ ಬಱಿಯಂ

ತನತನಗೆ ಬೇಡಬೇಡೆಂ ।
ದೆನೆ ಸೊರ್ಕಿರ್ಪಂ ಬಾಲಚಂದ್ರಿಕೆಯನಾರ್ಪಿಂದಿಂ ॥
ಬಿನೊಳಿರಿಸಿ ಬೊಮ್ಮರಕ್ಕಸ ।
ನನುಮಾನಿಸದೊದೆಯೆ ದಾರುಮರ್ಪಂ ತೀರ್ದಂ ॥ ೧೧೭

ಎಂದು ಜನವಾದಂ ನೆಲೆಗೊಂಡಿರಲಾಂ ವಿಪ್ರವೇಷದೊಳಿರ್ದು ಕೆಲವು ದಿನದಿಂ ಮೇಲೆ ಹೇಮದತ್ತನಂ ಸಾರ್ದು ಬಾಲಚಂದ್ರಿಕೆಯಂ ಬೇಡಲಾತ ನಿಂತೆಂದಂ:—

ಈಕನ್ಯಕೆಯನದೊರ್ಬಂ ।
ಸೋಂಕಿರ್ಪಂ ಬೊಮ್ಮರಕ್ಕಸಂ ಬ್ರಾಹ್ಮಣ ನೀ ॥
ನೇಕೆ ಮರುಳಾಗಿ ಪರಿಣಯ ।
ನಾಕಾಂಕ್ಷೆಯೊಳೀವೆ ಜೀವವಂ ವಿಧಿಗೊಲವಿಂ ॥ ೧೧೮

ಎಂದು ಪೇಳ್ದೊಡೆ ಆಬ್ರಹ್ಮರಾಕ್ಷಸನನೆಂತಾದೊಡಂ ಸಂತವಿಟ್ಟು ಕನ್ಯೆಯನೆಱುವೆನೆಂದೊಡಾಂ ಕುಡುವೆನೆಂದು ಹೇಮದತ್ತಂ ಶುಭಲಗ್ನಮಂ ನಿಶ್ಚಯಂಮಾಡಿ,

ತಳಿರ್ವಂದರ್ ತೋರಣಂ ವೇದಿಕೆ ವಿವಿಧಪತಾಕಾಳಿ ಭೃಂಗಾರುಕುಂಭಂ।
ಕಳಸಂ ಮೇಲ್ಕಟ್ಟು ವಾದ್ಯಪ್ರತತಿ ಸಕಲಧಾನ್ಯಾಂಕುರಂ ಸತ್ಸಭಾಮಂ ॥
ಡಳವೇಪೋಚ್ಚಾರಣಂ ಮಂಗಳಜಯನಿನವಂ ಪೆರ್ಚಲುತ್ಸೃತ್ಸವಂ ಕಂ ।
ಗೊಳಿಸಲ್ ಗೃಹೋಕ್ತದಿಂ ಕನ್ಯಕೆಯನೊಲವಿನಿಂದೀಯಲುದ್ಯುಕ್ತನಾದಂ॥

ಅಂತನುಗೆಯ್ದಂ ಲಗ್ನಕಾಂ ಬಂದು ಮಜ್ಜನಂಬುಗುವಾಗಳ್

ಕುಸುಮಿತವಾದ ಪದ್ಮಲತೆಯೊಳ್ ಪೊಸಕೇದಗೆಯೊಳ್ಳಸಳ್ಗಳೊ ।
ಳ್ಪೆಸೆವಿನಮುಣ್ಕ್ರಿ ಪೊಣ್ಕ್ರಿದನಿತಲ್ಲದೆ ತುಂಬಿಗಳುಂ ಪೊದಟ್ದು ಲಾ ॥
ಲಿಸಿದಪುವೆಂಬಿನಂ ಸುದತಿಯರ್ ಪವೆದೆನ್ನಯ ದೇಹಮೊಯ್ದು ಘೋಂ ।
ಟಿಸುತಿರೆ ಪೂಸಿದರ್ ಮೃದುಕರಾಂಬುಜದಿಂ ನವಗಂಧತೈಲಮಂ ॥ ೧೧೯

ಅನಂತರಂ

ಹರಜೂಟದೊಳೊಲವಿಂದಂ ।
ಎರಗಂಗಾವಾರಿ ಸುರಿವ ತೆಱದಿಂದಂ ಮ ॥

ಚ್ಚಿರದೊಳ್ ಪೊಂಗಳಸಂಗಳ |
ನರುಣಾಧರೆಯರ್ ಜಲಾಭಿಷೇಕಂಗೆಯ್ದರ್ ‖ ೧೨೧

ಅಂತು ಮಜ್ಜನಂಗೆಯ್ಸಿ ಮಧುಪರ್ಕಮಂ ಮಾಡಿಸಿ

ಸೌಭಾಗ್ಯಪಟ್ಟಮಂ ತಾ |
ಳ್ವ್ಯ ಭಾಳದೊಳೆಂದು ಕುಂಭಿಕುಂಭದ ಪೊಂಗಿಂ ‖
ಶೋಭೆವಡೆದಿರ್ದ ನೊಸಲೊಳ್ |
ಶ್ರೀಭೂಸುರರೊಲ್ದು ಕಟ್ಟಿದರ್ ಬಾಸಿಗಮಂ ‖ ೧೨೨

ಅಂತು ಬಾಸಿಗಂಗಟ್ಟಿ

ಸತಿಯ ಪದನಖದ ದೀಧಿತಿ |
ಸಿತಾಕ್ಷಿನವಕಾಂತಿ ನಡುವೆ ದಟ್ಟೈಸಿತ್ತೆಂ ‖
ಬತಿಶಯಗುಣದಿಂ ಮೃದುಶು |
ಭ್ರತೆಯಿಂ ಮೆಱೆದಿರ್ಪ ಸೀರೆಯಂ ತೆಱೆವಿಡಿದರ್ ‖ ೧೨೩

ಅಂತು ತೆಱೆವಿಡಿದು

ಆಯತವೇ ಆಯತವ |
ತ್ಯಾಯತವೇ ಆಯತಂ ಸಮಂತಾಯತವೇ ‖
ಆಯತಪುಣ್ಯಾಹಮೆನ |
ಲ್ಕಾಯುವತಿಯ ಮೊಗಮನೊಲ್ದು ನೋಡುತ್ತಿರ್ದಂ ‖ ೧೨೪

ಅಂತು ತೆಱೆದೆಗೆಯಲೊರ್ಬರೊರ್ಬರ ಮೊಗಮಂ ನೋಡಿ ಸಮಯ
ದೊಳ್ ಪೇಮದತ್ತಂ ಕೈನೀರೆಱೆಯೆ

ಇನನುದಯಂಗೆಯ್ಯಲೊಡಂ |
ವನಜಂ ನೀರೇಱುವಂತೆ ತತ್ಕೋಮಳೆಯಾ ‖
ನನಕಮಳವರಳಲೆನ್ನಯ |
ಮನಮೆಂಬುದ್ಭ್ರಮರಮೆಱಗಲೆಳಸಿತ್ತಾಗಳ್ ‖ ೧೨೫

ಎಡೆವಿಡದೆ ಪುಳಕಮುಣ್ಮಲ್ |
ಕಡುಲಜ್ಜೆಯೆನಿಪ್ಪ ಮಡುವಿನೊಳ್ ಕಂಪಿಸುತುಂ ‖

ದಡದಡಿಸಿ ಬೀಳ್ವಿನೆನ್ನಂ ।
ಪಿಡಿಯೆಂಬಂತಾಕೆ ನೀಡಿದಳ್ ನಿಜಕರಮಂ ॥ ೧೨೬

ಸುದತೀರತ್ನಂ ಕೈಸಾ ।
ರ್ದುದು ಪುಣ್ಯದ ಫಲಮೆನುತ್ತೆ ಪದೆಪಿಂ ಕಾಂತಾ ॥
ಮೃದುಕರತಳಮಂ ಪಿಡಿದೆಂ ।
ಮದನಂ ತಿರುಪ್ರೋಯ್ದು ಕರ್ಬುವಿಲ್ಲಂ ಪಿಡಿಯಲ್ ॥ ೧೨೭

ಅಂತು ಪಾಣಿಗ್ರಹಣಂಮಾಡಿ ಯಥೋಕ್ತಹೋಮಮಂಬೇಳ್ದನಂತರಂ ಸಪ್ತಪದಿಗಳಂ ಮೆಟ್ಟಿಸಿ ಬಳಿಕ್ಕ ಚತುರ್ಥದಿನಸದೊಳ್

ಶಿರದೊಳ್ ತಳ್ತ ಸಿತಾಕ್ಷತಂ ಗಗನಗಂಗಾಂಭಃಕಣಂ ಬಾಸಿಗಂ ।
ತರುಣೇಂದುದ್ಯುತಿ ರೋಚನಾತ್ತತಿಲಕಂ ಭಾಳಾಂಬಕಂ ಗೌರಿ ತ ॥
ತ್ತರುಣೀರತ್ನಮೆನಲ್ಕೆ ನಾಂದಿಮುಖದೊಳ್ ವಿದ್ವದ್ಗಣಸ್ತೋತ್ರಮಂ ।
ಕುರಿಸಲ್ ಪೆಂಪಿನುಮಾಮಹೇಶ್ವರನವೋಲ್ ಪುಷ್ಪೋದ್ಭವಂ ರಂಜಿಪಂ ॥

ಎಂದು ಸಕಲಬಂಧುಜನಂ ವಂದಿಜನಂಗಳುಂ ಸ್ತೋತ್ರಮಂ ಮಾಡಲಲ್ಲಿ ಕೆಲಂಬರ್,

ಜನಜಮುಖಿಯುಂ ಭಯಂಬಿ ।
ಟ್ಟನುನಯದಿಂ ಮದುವೆಯಾದ ಪಾರ್ವಂ ನಮ್ಮಾ ॥
ಕನನೊದೆದ ಬೊಮ್ಮರಕ್ಕಸ ।
ನೆನುತಿರ್ದತ್ತಖಿಳಪೌರಜನಮನವರತಂ ॥ ೧೨೯

ಈಪುಷ್ಪೋದ್ಭವನೆಂಬ ಮ ।
ಹಾಪುರುಷಂ ಬ್ರಹ್ಮರಾಕ್ಷಸಂ ಮಿಗೆ ಮಾಯಾ ॥
ರೂಪಿಂದೆ ದಾರುವರ್ಮನ ।
ಹೀಪತಿಯಂ ಕೊಂದನಿವಳ ದೆಸೆಯಿಂದೊಲವಿಂ ॥ ೧೩೦

ಎಂದು ಜನಾನುವಾದಂ ನೆಗಟೆ ಬಳಿಕಲ್ಲಿಯೆ ಪಾರ್ವರೂಪಂ ನಟಿಸಿ

ಮೊಗಮಂ ನೋಡಿ ನಿಜಾಕ್ಷಿ ಲಲ್ಲನುಡಿಯುಂ ಕೇಳ್ದಟ್ಟಿಯಿಂ ಕರ್ಣಮಾ ।
ನಗವೊಲ್ದಂಗವನಪ್ಪಿ ತೋಳ್ಗಳಧರೋದ್ಯತ್ಸಾರಮಂ ಪೀರ್ದ ನಾ ॥

ಲಗೆ ಪೆಂಪಿಂದೊಡಗೂಡಿ ನಲ್ಮೆ ತಣಿವಂ ಪೆತ್ತಿರ್ಪುದಿಲ್ಲೆಂಬ ಕೂ |
ರ್ಮೆಗೆ ಜನ್ಮಾಲಯಮಾದ ಕಾಂತೆಯೊಲವಂತಿಂತುಂತೆನಲ್ ಬರ್ಕುಮೇ ||

ಇಂತು ಸುಖಮಿರ್ದು ಬೞಿಯಮಂ ನಿಮ್ಮಡಿಸುನಬಸಲ್ ಬಂದು

ನಯನಂ ಮಾಡಿದ ಪುಣ್ಯಮೆಂತುಟೊ ನಿಜಶ್ರೀಪಾದಮಂ ಕಂಡೆನೆ |
ನ್ನಯ ಜನ್ಮಂ ಸಫಲಕ್ಕೆ ಬಂದುದು ಸಮಸ್ತೋರ್ವೀತಳಂ ಕೈಗೆ ನಿ ||
ಶ್ಚಯದಿಂ ಸಾರ್ದುದೆನುತ್ತೆ ಭಕ್ತಿಭರದಿಂ ಮೆಯ್ಯಿಕ್ಕಿರಲ್ ತಮ್ಮನಂ |
ಪ್ರಿಯದಿಂ ಮನ್ನಿಸಿದಂ ನೃಪಾಲತಿಲಕಂ ಶ್ರೀಮಾಗಧೋರ್ವೀಶ್ವರಂ ||

ಅಂತು ಮನ್ನಿಸಿ ಮತ್ತಮಿಂತೆಂದಂ:—

ಇನಿಯಳ ಸಂಗಮುಂ ತೊಱೆದು ಪೆಂಪಿನ ತನ್ನ ಶರೀರಸೌಖ್ಯಮಂ |
ನೆನೆಯದೆ ತಂದೆತಾಯ್ಗಳಿರವಂ ಪರಿಭಾವಿಸದೆನ್ನ ಭಕ್ತಿಯಿಂ ||
ನನೆಕೊನೆವೋಗಿಯಿಂತಬಸಿ ಬಂದವನಾವನೆನುತ್ತೆ ತಮ್ಮನಂ |
ಮನವೊಸೆದಪ್ಪಿ............................ನಘಂಗವಿಕ್ರಮಂ || ೧೩೩

|| ಗದ್ಯಂ ||

ಇದು ನಿಖಿಲಬುಧಜನಮನೋಜನವದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಘಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ
ಅಭಿನವ ದಶಕುಮಾರಚರಿತೆಯೊಳ್
ಪುಷ್ಪೋದ್ಭವಕಥಾವೃತ್ತಾಂತಂ,
ಚತುರ್ಥಾಶ್ವಾಸಂ.

— ಸೋಮದತ್ತಚರಿತಂ —

ಶ್ರೀ ತಳೋತ್ಪ್ರವ ವಕ್ಷಂ ।
ಭೂತಳಪತಿ ನಿಜಸಹೋದರಾನ್ವಿತನೆೞ್ದಂ ॥
ಕೌತುಕದಿಂ ಶಶಿಕಾಂತಶಿ ।
ಲಾತಳದಿಂ ಪದೆದಭಂಗವಿಟ್ಠಲಭೃತ್ಯಂ ॥ ೧

ಅಂತಲ್ಲಿಂದೆೞ್ದು ಪುಷ್ಪೋದ್ಯಾನ ಸೊಗವುಂ ನೋಡಲಾತನಿಂಗಿತವನಱಿದಿಂತೆಂದಂ:—

ವಿಜಯಶ್ರೀಕುಚಮೌಕ್ತಿಕಾಭರಣ ಕೇಳ್ ವಿಜ್ಞಾಪನಂ ದೇವ ನೀಂ ।
ಬಿಜಯಂಗೆಯ್ವುದವಂತಿಸತ್ತ್ರನಕೆ ತತ್ಸೌಂದರ್ಯಮಂ ನೋಡಿ ದಿ ॥
ಗ್ವಿಜಯಂಮಾಳ್ಪುದೆನಲ್ಕದಂ ಮನದೆಗೊಂಡಾನಂದದಿಂ ಸದ್ಗುಣ ।
ವ್ರಜಯುಕ್ತಂ ತಳರ್ದಂ ವಿನೋದವಿಭವಂ ಶ್ರೀಮಾಗಧಕ್ಷೋಣಿಪಂ ॥ ೨

ಅಂತಲ್ಲಿಂ ತಳರ್ದವಂತೀಪುರಕ್ಕೆ ಬರ್ಪಾಗಳ್ ಮುಂದೆ

ಕಾಳಮೃದಂಗಕಾಹಳರವಂ ಪದೆದೊಪ್ಪೆ ಪಿಶಾಚಕೋಟಿ ಭೇ ।
ತಾಳರ ಬೊಬ್ಬೆ ರಕ್ಕಸರ ತಿಂತಿಣಿ ಭೂತಭಯಂಕರಸ್ವನಂ ॥
ಕಾಳಕರಾಳಭೈರವಿಯರಾರ್ತರವಂ ಪುದಿದೊಪ್ಪುತಿರ್ಪ ದು ।
ರ್ಗಾಳಯಮಂ ಮನೋಮುದದೊಳೀಕ್ಷಿಸಿದಂ ನೃಪಕಾಳಭೈರವಂ ॥ ೩

ತಲೆಗಳ ಹೂಜೆ ಬಲ್ಗರುಳ ತೋರಣಮಕ್ಷಿಗಳಕ್ಷತಂ ಬೆರ ।
ಲ್ಗಳ ನಿಡುರಾಸಿ ನಾಲಗೆಯ ಪಂದರಮಿಕ್ಕಿದ ಕೈಗಳೋಳಿ ಮುಂ ॥
ದಲೆಯ ಬಣಂಬೆ ಒಟ್ಟಗೆ ಭಯಂಕರಮುಂ ಮಿಗೆ ಮಾಳ್ಪ ಕಾಳಕಾ ।
ನಿಳಯಮನುರ್ವರಾಧಿಪತಿ ಕಂಡನತೀವಮನೋನುರಾಗದಿಂ ॥ ೪

॥ ರಗಳೆ ॥

ಅಂತಿರ್ಪ ದುರ್ಗಾಲಯಂ ಮನೋಹರಮಾಗಿ ।
ತಿಂತಿಣಿಯ ಮರುಳ್ಪಡೆಗಳಿಂ ಭಯಂಕರಮಾಗಿ ॥

ಭೂತಬೇತಾಳದಳ್ಳುಱಿದಾಡುವಾಟದಿಂ ।
ಪ್ರೇತನಿಯರಲೆದು ರುಧಿರವನೆಱೆವ ಕಾಟದಿಂ ॥
ನರಮಾಂಸಮಂ ಬೇಳ್ಪ ರಕ್ಕಸರ ನೆರವಿಯಿಂ ।
ಪುರುಳ ನಡುವಿಟ್ಟ ನೆತ್ತರ ತೋರ ಹರವಿಯಿಂ ॥
ಕಿಡಿಗಣ್ಣ ದಡಿಗಜಟ್ಟಿಗರ ಗರ್ಜನೆಗಳಿಂ ।
ನಿಡುಗರುಳ ಮಾಲೆಯುಂ ತಳೆದಸುರಮುನಿಗಳಿಂ ॥
ಬೊಮ್ಮರಕ್ಕಸರೊಡನೆ ನಗುವ ಶಾಕಿನಿಯರಿಂ ।
ಸುಮ್ಮಾನದಿಂ ತೊಳಲ್ವ* ವೀರಡಾಕಿನಿಯರಿಂ ॥
ಅರಿದರಿದು ಗುಡಿಸಿರ್ದ ಕೊಬ್ಬಿರ್ದ ಕುಱಿಗಳಿಂ ।
ಅರೆಗಣ್ಗಳೆಸೆವ ಕೋಣನ ತಲೆಯ ಮುಱಿಗಳಿಂ ॥
ಪುರುಷಾರ್ಥಸಿದ್ಧಿಯಂ ಪಡೆವಧಿಕಸಿದ್ಧರಿಂ ।
ಪರಮಾಯುವಂ ಬಯಸುವತಿತಪೋವೃದ್ಧರಿಂ ॥
ದೆಸೆವ ದುರ್ಗಾನಿಲಯಮಂ ಮಹೋದ್ಯೋಗದಿಂ ।
ವಸುಧಾಧಿಪಂ ಪೊಕ್ಕನತಿಮನೋರಾಗದಿಂ ॥ ೬

ಉರಿಯಂ ಸೂಸುವ ಭಾಳನೇತ್ರಮಹಿರಾಜೋತ್ತುಂಡಲಂ ಕ್ರೂರಭೀಃ ।
ಕರದಂಷ್ಟ್ರಾಂಕುರಮಸ್ತ್ರಶಸ್ತ್ರಭಯದೋದ್ಯತ್ಪಾಣಿ ಸನ್ಮೌಕ್ತಿಕಾ ॥
ಭರಣಂ ಕೇಸರಿವಾಹನಂ ಮೃದುಜಟಾಸಂತಾನಮೊಪ್ಪಿರ್ಪ ಭಾ ।
ಸುರದುರ್ಗಾಂಬಿಕೆಯಂ ನಮಸ್ಕರಿಸಿದಂ ವಿಕ್ರಾಂತಕಂಠೀರವಂ ॥ ೬

ಅಂತು ತಾನುಂ ಪುಷ್ಪೋದ್ಭವನುಂ ದುರ್ಗಾಂಬಿಕೆಗೆ ನಮಸ್ಕರಿಸಿ ಸ್ತೋತ್ರಜಪಧ್ಯಾನದಿಂ ಕಣ್ಗಳಂ ಮುಗಿದಿರ್ಪಾಗಳ್

ಅತಿರಭಸೋನ್ಮುಖಂ ಬಹಳಕಾರ್ಯಧುರಂಧರನಪ್ರತರ್ಕ್ಯನು ।
ದ್ಧತರಿಪುಸೈನ್ಯಸಾಗರಘಟೋದ್ಭವನೂರ್ಜಿತಭಾಗ್ಯವೈಭವಂ ॥
ಕತಿಪಯಸೇನೆಯಂ ತಳೆದನೊರ್ಬ ಕುಮಾರಕನೊಲ್ದು ಮರ್ತ್ಯಸೇ ।
ವಿತೆಯೆನಿಸಿರ್ಪ ದುರ್ಗಿಗೆ ನಮಸ್ಕರಿಸಲ್ ಪಡೆದಲ್ಲಿಗೆಯ್ದಿದಂ ॥ ೭

ಅಂತೊರ್ವ ಕುಮಾರಕಂ ಬಂದು ದುರ್ಗಾಲಯದ ಪೊಱಗೆ ಪರಿವಾರಮಂ ನಿಲಿಸಿಯೊರ್ಬನೆ ಬಳಗಂ ಪೊಕ್ಕು

ವಿಳಸದ್ವ್ಯಾಳಾಂಬಕಂ ಭಾಸುರವಾಣಿಮಾಕುಟಂ ಪ್ರೋದ್ಭಟೋದ್ಯದ್ಭುಜಂ ನಿ|
ರ್ಮಳಚಂಚತ್ಕುಂಡಲಂ ಕುಂಕುಮನವಳಯಜಕಸ್ತೂರಿಕಾಲಿಪ್ತವಕ್ಷ|
ಸ್ಸ್ಥಳಮೊಪ್ಪಂಬೆತ್ತ ದುರ್ಗಾಂಘ್ರಿಗೆ ನಲಿದು ನಮಸ್ಕಾರಮಂ ಮಾಡಿದಂ ನಿ|
ಶ್ಚಳಚಿತ್ತಂ ಭಕ್ತಿಯಿಂ ಕೌತುಕಮೆನಿಪ ಮಹಾಸ್ತೋತ್ರದಿಂದಾರ್ಯಪುತ್ರಂ||

ಅಂತು ನಮಸ್ಕರಿಸಿಯಿಂತೆಂದಂ:—

|| ಸ್ವಾಗತ ||

ರಾಜವಾಹನನೃಪಾಲಕನಂ ನಿ|
ರ್ವ್ಯಾಜದಿಂ ಪಡೆದು ಕಂಡೊಡೆ ನಿನ್ನಂ ||
ಪೂಜೆಯಿಂ ಬಹಳಮೌಕ್ತಿಕದಿಂದಂ |
ಭೋಜನೇತ್ರಿ ವನದುರ್ಗೆ ನಿತಾಂತಂ || ೯

ಎಂದು ಪರಸಿಕೊಳ್ವಾಮಾತಂ ರಾಜವಾಹನಂ ಕೇಳ್ದು

ಬೆಡಗಿದುವೆ ಸೋಮದತ್ತನ |
ನುಡಿಯುಪ್ಪೊಲಿರ್ದುದೆನುತ್ತುಮಲರ್ಗಣ್ಣಡೆಯುಂ* ||
ಪೊಡವಿಪತಿ ತೆಱೆದು ನೋಡಿದ |
ನಡಿಗಡಿಗುಣ್ಮಲ್ಕೆ ಬಹಳತನುಪುಳಕಂಗಳ್ || ೧೦

ಅಂತು ಧ್ಯಾನಮಂ ಬಿಟ್ಟು ಕಣ್ದೆಱೆದು ನೋಡಿ

ಇದಪೂರ್ವದರ್ಶನಂ ಸೋ|
ಮದತ್ತನಂ ಕಂಡೆನೆಂಬ ಮಾತಂ ಕೇಳ್ದು ||
ಬರ್ದ ನಯನಜಲದೊಳಾತಂ |
ಪದಕಮಳಕ್ಕೆಱಗಿ ಬಱಿಕ ನಲಿದೀಕ್ಷಿಸಿದಂ || ೧೧

ಅಂತು ಸೋಮದತ್ತಂ ರಾಜವಾಹನನ ಮುಖಕಮಲಮಂ ನೋಡಿ

ಇಂದೆನಗೆ ಭಾಗ್ಯದೇವತೆ |
ತಂದಿತ್ತಳ್ ದೇವ ನಿಮ್ಮ ಪದಕಮಳಮನೆಂ ||
ದಾದೊಲ್ದು ಸೋಮದತ್ತಂ |
ವಂದಿಸಿದಂ ಮುಗುಳ್ದು* ಮುಗುಳ್ದು* ನೃಪತಿಗಲಂಬಿಂ || ೧೨

ಅಂತು ವಂದಿಸುವುದುಂ ರಾಜವಾಹನಂ ಸೋಮದತ್ತನಂ ತೞ್ಕೈಸಿ ಕೊಂಡು ಪತ್ತಿರೆ ಕುಳ್ಳಿರಿಸಿ

ಈರಾಜ್ಯಪದವಿದೆತ್ತಣ ।
ದೀರಭಸಂಗೆಯ್ದು ಸೇನೆಯೆತ್ತಣ್ತೆನುತುಂ ॥
ಆರಾಜಸೂನು ಬೆಸಗೊಳ ।
ಲೋರಂತಿರೆ ಸೋಮದತ್ತನುಸಿರಲ್ ಬಗೆದಂ ॥ ೧೩

ದೇವರ ಪಾದಪಲ್ಲವಮನೆಲ್ದೆಸೆಯೊಳ್ ಪಡೆದೀಕ್ಷಿಸುತ್ತೆ ನಾಂ ।
ಭೂವಳೆಯಕ್ಕೆ ದರ್ಪಣಮೆನಿಸಿಪ್ಪ ಲಸತ್ಕುಸುಮಾಪುರಪ್ರದೇ ॥
ಶಾವನಿಯೊಳ್ ಬರುತ್ತಮಿರೆ ಮುಂದೆ ಪಸುರ್ದೞದೊರ್ಗಂಗಲಿಂದೆ ಶೋ ।
ಭಾವಹಮಪ್ಪುದೊಂದು ವನಮಿರ್ದುದು ಕೇಳ್ ಭುವನಾಧಿನಾಯಕಾ ॥ ೧೪

ಆವನಮನೆಯ್ದಲದಱೊಳಗೆ

ಉದಯಗಿರೀಂದ್ರದೊಳ್ ದಿನಕರಂ ಪದೆಪಿಂದುದಯಿಪ್ಪನೆಂಬ ಮಾ ।
ತದು ಪುಸಿಯೆಂಬಿನಂ ಕಿರಣಜಾಲದಿನೆಲ್ದೆಸೆಯಂಧಕಾರಮಂ ॥
ಬೆದಱಿಸುತಿರ್ಪುದೊಂದು ಪೊಸಮಾಣಿಕಮೆನ್ನಿದಿರಲ್ಲಿ ಬಿರ್ದಿರ ।
ಲ್ಕಿದು ಪೊಸತಾನ ಕಾರಣದಿನಿಲ್ಲಿಗೆ ಬಂದುದೆನುತ್ತೆ ನೋಡಿಮಂ ॥ ೧೫

ಇದು ಮಾಂಸಖಂಡಮೆಂದೋ ।
ವದೆ ಗಿಡುಗಂ ತಂದು ಬಿಸುಟುದೋ ಪಡೆಪಿಂ ಮೇ ॥
ಣಿದಮುಳ್ಳಮೆಂದು ದೈವಂ ।
ಮುದದಿಂದೆನಗಿತ್ತುದೋ ಎನುತ್ತೀಕ್ಷಿಸಿದೆಂ ॥ ೧೬

ಅಂತು ನೋಡಿ

ಫಣಿರಾಜವಿಶಾಲಲಸ ।
ತ್ಫಣಾಗ್ರದಂತೆಸೆವ ಹಸ್ತಕಂಕಣದೊಳ್ ಕೇಂ ॥
ಮಣಿಸಲ್ತಕ್ಕುದೆನುತ್ತಾ ।
ಮಣಿಯುಂ ತೆಗೆದೆಂ ನೃಪಾಲಕುಲಮಣಿದೀಪಾ ॥ ೧೭

ಅಂತಾಮಾಣಿಕಮಂ ಕೊಂಡು ಬರ್ಪಾಗಳ್

ತನಗೆ ಮಣಿ ದೊರಕದೆಂಬೊಂ ।
ದನುತಾಪದೆ ತಪನನೆಯ್ದಿದನೊ ಶರನಿಧಿಗೆಂ ॥
ಬಿನವೊಸೆವ ರಾಗದಿಂ ಭೋಂ ।
ಕೆನಲಪರಾಂಭೋಧಿಗಿೞಿದನಬ್ಜಸಹಾಯಂ ॥ ೧೮

ಅಂತು ಸೂರ್ಯನಸ್ತಮಾನವಾಗಲೊಡಂ,

ತೊೞಲ್ವ* ಭಟರ್ಕಳಬ್ಬರಣೆ ಕುಂಜರಬೃಂಹಿತಮಶ್ವಹೇಷಿತಂ ।
ಪಲವು ಪದಾತಿವಾದ್ಯರವಮುತ್ಕಲಕಸ್ಫುಟತಾಡನಸ್ವನಂ ॥
ಜಲಧರವೆಂಬೊಲೆನ್ನ ಕಿವಿಗೆಯ್ತರಲಾಂ ಪದೆದೊಂದು ವಾಹಿನೀ ।
ಕಳಕಳವೆಂದು ನಿಶ್ಚಯಿಸಿದೆಂ ಬಗೆಯೊಳ್ ನೃಪರೂಪಮನ್ಮಥಾ ॥ ೧೯

ಅಂತಾಕಳಕಳವಂ ಕೇಳ್ದಾರಾತ್ರಿಯೊಳೊರ್ಬನೆ ಪಾಳೆಯಮಂ ಪುಗು ವುದುಂ ಪಾಳೆಯಮೇೞ್ತಂದು..........................ಕುಸುಮಪುರದ ಪೊಱವೊೞಲ ದೇವಾಲಯದೊಳ್ ನಿದ್ದೆಗೆಯ್ದು ಬೆಳಗಾಗಲೊಡಂ

ಇಕ್ಕಿದ ಯಜ್ಞಸೂತ್ರಮೆರಡುಂ ಕ್ಕರದೊಳ್ ಪೊಸದರ್ಭೆ ಕೌಂಕುಳೊಳ್ ।
ಸೆಕ್ಕಿದ ಪುಸ್ತಕಂ ಪಿಡಿದ ಪೀಲಿಯು ನುಣ್ಗೊಡೆಯುಟ್ಟಧೋತ್ರಮು ॥
ಯ್ದುಕ್ಕುಟಿಸಿರ್ದ್ದ ಕುಕ್ಷಿ ನಡುಕಂ ಮಿಗುವಂಗವುಗುರ್ಬಿಸುತ್ತಿರಲ್ ।
ಚೆಕ್ಕನೆ ಬಂದನೊರ್ವ ಬಡಪಾರ್ವನರಾತಿಚಮೂಭಯಂಕರಾ ॥ ೨೦

ಅಂತೊರ್ಬಂ ಬಡಪಾರ್ವಂ ದಾನಾರ್ಥಿಯಾಗಿ ಬಂದು ದಾನಮಂ ಬೇಡ ಲೊಡಂ ಕಂಡು

ಕುಡುವನೊ ಕುಡನೋ ಎನುತುಂ ।
ನಡುನಡುಗುತ್ತಂಜಿ ಬಂದು ಬೇಡ್ಪವನಿಂದಂ ॥
ಕುಡದಿರ್ಪವನತಿಕಷ್ಟಂ ।
ಪೊಡವಿಯೊಳೆಂಬುಕ್ತಿಯುಂ ವಿಚಾರಿಸಿ ಬೞಿಯಂ ॥ ೨೧

ಅಪ್ರತಿದಾನವೆನುತ್ತುಂ ।
ಸುಪ್ರೀತಿಯೊಳೆನ್ನ ಕೆಯ್ಯ ಮಾಣಿಕಮಂ ತ ॥
ದ್ವಿಪ್ರಂಗೆ ಕೊಟ್ಟು ಪದಪ ।
ದ್ಮಪ್ರಣತಶರೀರನಾದೆನವನಿಪತಿಲಕಾ ॥ ೨೨

ಅಂತು ಬ್ರಾಹ್ಮಣಂಗೆ ರತ್ನಮಂ ಕುಡಲಾತಂ
ತನು ನಯಮೇಱೆ ವಕ್ತ್ರಕಮಲಂ ಸುವಿಕಾಸಮನೆಯ್ದೆ ಚಿತ್ತಸಂ ।
ಜನಿತಮುದಂ ಕವಲ್ವರಿಯೆ ವಿಸ್ಮಯಸಂಭ್ರಮಮುರ್ವೆ ಭೂಸುರಂ ॥
ಮನಮೊಸೆದೆನ್ನನೊಲ್ದು ಪರಸುತ್ತನುರಾಗದೊಳಿತ್ತ ದಾನದಿಂ ।
ನಿನಗೆ ಶುಭೋದಯಂ ಮಿಗುಗೆನುತ್ತೊಲವಿಂ ತಳರ್ದಂ ಮಹೀಪತೀ ॥ ೬೩

ಅಂತಾಬ್ರಾಹ್ಮಣನೆನ್ನಂ ಪರಸಿ ರತ್ನಮಂ ಕೊಂಡು ಪೋಗಿಯಾಂ ಮುನ್ನ ಕಳಕಳಮಂ ಕೇಳ್ದು ಪಾಳೆಯಮಂ ಪೊಕ್ಕು

ಭಾಂಡಸನಧಿಕದರಿದ್ರಂ ।
ಮಂದಂ ಜಿಹ್ವಾನಲಂಪಟಂ ಗತಭಾಗ್ಯಂ ॥
ಸೌಂದರರತ್ನಮನವರವ ।
*ರ್ಗಂದೊಲವಿಂ ಮಾಱಲೆಂದು ತೋಱಿದನರಸಾ ॥ ೬೪

ಅಂತಾರತ್ನಮನವರವರ್ಗೆ ತೋರ್ಪುದುಂ,

ಈಪಾರ್ವಂಗೀರತ್ನಮ ।
ದೀಪರಿಯಿಂ ಬರ್ಪುದರ್ಕೆ ಕಾರಣಮೇನೆಂ ॥
ದಾಪಾಳೆಯದೊಳ್ ತೊೞಲ್ವ ಮ ।
ಪಾಪಿಶುನರ್ ಪಿಡಿದು ಕಟ್ಟಿದರ್ ಕಡುಬೇಗಂ ॥ ೬೫

ಅಂತಾಪಾರ್ವನಂ ನಿರ್ಬಂಧಿಸುವುದುಮಾತಂ ಕೊಟ್ಟಾತನಂ ತೋರ್ಪೆನೆಂದೆನ್ನನವರ್ಗೆ ತೋರ್ಪುದುಂ;

ಅಱಿವರ್ ಕಳ್ಳರ ಕೂಡಲಾತನಿವನಂ ಕಟ್ಟಿರ್ಪಿನಿಂ ಮಾಣಿಕಂ ।
ಕುಱುಪಾಯ್ತೆಂದು ಕೆಲಂಬರೆನ್ನನಗಟಿಂ ಕಾರಾಗೃಹಕ್ಕುಯ್ದು ಕಾ ॥
ಲ್ಕೊಱೆವಂತಾಸುರವಪ್ಪಿನಂ ನಿಗಡಮಂ ಸಾರ್ಚಿಕ್ಕಿದೇನೆಂದು ಸೈ ।
ವೆಱಗಾಗಿರ್ದೆನದಲ್ತೆ ಪೂರ್ವವಿಧಿಯಂ ಮೀಱಲ್ಕದೇಂ ಬರ್ಕುವೋ ॥ ೬೬

ಅಂತೆನ್ನಂ ಸಂಕಲೆಯನಿಕ್ಕಿ ಮಾಣಿಕವಂ ಕೊಂಡಾಬ್ರಾಹ್ಮಣನಂ ಬಿಟ್ಟರ್. ಇತ್ತಲಾಂ ಕಾರಾಗೃಹದೊಳಗೆ

ಮೆಯ್ಗಳ್ ಬೆಳರ್ತುವು ಕಾಲ್ಗಳ್ ।
ಕೈಗಳ್ ಬಡವಾಗಿ ಕಱುಕು ಪತ್ತಿದ ಪುರ್ಬಿಂ ॥

ಬಾಯ್ಗಡಸಿದ ಕ್ಷೀರವಲ್ಲಿಂ ।
ಸುಯ್ಗೊಳಗಾಗಿರ್ದರಲ್ಲಿ ಸಂಕಲೆಯುವರ್ಗಳ್* ॥ ೨೭

ಅಂತು ಸಂಕಲೆಯಲ್ಲಿರ್ದಱುವರಂ ಕಂಡು ನೀವಾರೆತ್ತಣವರೆಂದಾಂ ಬೆಸಗೊಳ್ವುದುಂ,

ಕುಸುಮಪುರಿಗೊಪ್ಪುವರಸಂ ।
ಕುಸುಮಾಯುಧಮೂರ್ತಿ ಧರ್ಮಶೇಖರನೆಂಬಂ ॥
ಕುಸುಮಾವತಿಯುಂ ಪಡೆದಂ ।
ಕುಸುಮಂ ಪರಿಮಳಮನೊಲ್ದು ಪಡೆವವೊಲಾತಂ ॥ ೨೮

ಅಂತಾಕುಸುಮಪುರದೊಡೆಯನಪ್ಪ ಧರ್ಮಶೇಖರನ ಮಗಳಂ ಲಲಿತಪುರದ ದೀರ್ಘಬಾಹುಕಂ ಬೇಡೆ ಧರ್ಮಶೇಖರಂ ಕುಡದಿರ್ಪುದುಮಾದೀರ್ಘಬಾಹುಕಂ ಬಲ್ಪಿಂ ಕೊಳಲೆಂದು

ಕುಸುಮಾವತಿಯಂ ಕೊಳಲೆಂ ।
ದು ಸೇನೆಯಂ ನೆಱಪಿ ದೀರ್ಘಬಾಹುಕನಾಗಳ್ ॥
ಕುಸುಮಪುರದರಸನಂ ಮು ।
ತ್ತಿ ಸಾಹಸಂಮೆಱೆವೆನೆಂದು ಕಾನೆಯ್ತಂದಂ ॥ ೨೯

ಅಂತೆಯ್ತಂದು ದೀರ್ಘಬಾಹುಕನಲ್ಲಿ ಬಿಡಲೆಮ್ಮರಸನಪ್ಪ ಧರ್ಮಶೇಖರನೆಮ್ಮಂ ಕಂಡು

ಧರೆಯೊಳಮೂಲ್ಯಂ ದನುಜಾ ।
ಮರಲೋಕದೊಳಿಲ್ಲೆನಿಪ್ಪ ಮಾಣಿಕವೇಱಿಂ ॥
ಟರಿನೃಪನ ಮನೆಯೊಳಿಂದೆ ।
ಮ್ಮರಸಂ ಕೆಳಲಟ್ಟಿದಂ ಬಱಿಕ್ಕಱುವರಮುಂ ॥

ಅಂತಾಮಱುವರುಂ ಬಂದು

ನವರತ್ನದ ಮನೆಯಂ ಕ ।
ನ್ನವಿಕ್ಕಿ ಮಾಣಿಕವನುಯ್ವ ಪದದೊಳ್ ಕಾದಿ ॥
ದರ್ವರಱಿದು ಪಿಡಿದು ಮಾಣಿ ।
ಕ್ಯವನಾಱುಂ ಕಂಡರಱಿಸಿಯೊಂದಂ ಕಾಣರ್ ॥ ೩೦

ಅಂತಾವೇಂಟಿಮಾಣಿಕವಂ ಕೊಂಡು ಪೋಗುತ್ತು ಸಿಕ್ಕುವಲ್ಲಿಯೊಂದು ಮಾಣಿಕ್ಯವಂ ಬೀಳಿಲಿಕ್ಕಿದೆವು. ಅದು ದೈವಯೋಗದಿಂ ನಿನಗೆ ಬಂದುದ ಱಿಂ ನೀನೆಮ್ಮಂತು ಕಳ್ಳನಾದೆಯೆಂದವರ್ ಪೇೞ್ದು ಮತ್ತಂ

ಕಳವಿಂ ಕುಸುಮಪುರೀಶಂ ।
ಗೆಲಲಿರ್ದಪನೆಮ್ಮನೆಂದು ಲಲಿತಪುರೀಶಂ ॥
ಮುಳಿದೆತ್ತಿ ನಾಳೆ ಲಗ್ಗೆಯು ।
ನುಲಿಯುತ್ತುಂ ಮಾಪ್ಪೆನೆಂದು ಗರ್ಜಿಸುತಿರ್ದಂ ॥ ೩೦

ಅಂತು ಗರ್ಜಿಸುವ ದೀರ್ಘಬಾಹುಕಂ ಕಡೆವೇಂಟೆಗೆ ಪೋಗಿರ್ದಪನೆಂ ದವರ್ ಪೇೞ್ವ ಸಮಯದೊಳ್

ಅಂಬರಗಂಗಾತೀರದೊ ।
ಳಂಬಿಂದೋಲಾಡುತಿರ್ಪ ಹಂಸಂ ವರುಣಾ
ಶಾಂಬುಧಿಗೆ ಪಾಱಿ ಪೋದ ।
ತ್ತೆಂಬಂತಿನನಪರಜಲಧಿಗೆಯ್ದಿದನಾಗಳ್ ॥ ೩೧

ಇಂದಿರೆ ಪದ್ಮಮಂದಿರದೊಳಿರ್ದು ಮಹಾಪ್ರಣಯಪ್ರಕೋಪದಿಂ ।
ದೊಂದಿರುಳಕ್ಕೆ ಮುಚ್ಚುಳವನಾಪುಗಿಲೊಳ್ ತೆಱಪಾಗೆ ಸೂೞ್ಗೆ ಕೃ ॥
ಷ್ಣಂ ದಯೆಯಿಂದೆ ಬಂದು ಬಿಗಿಯಪ್ಪೆ ಧರಾಂಗನೆಯುಂ ತದಂಗಕಾ ।
ಷ್ಣ್ಯಂ ದಿಟದಿಂ ಕವಲ್ತುದೆನೆ ಪರ್ವಿದುದುರ್ವಿಯ ಚಿತ್ತಮುಂ ತಮಂ॥

ಅಂತಳವಿಗಱಿದ ಕತ್ತಲೆಯೊಳ್
ಅಲಘುಭುಜಬಲದಿನಾಗಳ್ ।
ಘಟಿಲನೆ ಪದೆದೆಲ್ಲರಂಘ್ರಿಯೊಳ್ ಸಾರ್ಚಿದ ಸಂ ॥
ಕಲೆಗಳನಿರ್ಕರದಿಂದಂ ।
ಬಳೆಯಂ ನುಗೊತ್ತುವಂತೆ ನುಗ್ಗಿದನಾಗಳ್ ॥ ೩೩

ಅಂತವರಱುವರ ಸಂಕಲೆಯುಮಂ ಮುಱಿದವರ್ಬೆರಸು ದೀರ್ಘಬಾಹು ವಿನ ಪಾಳೆಯದಿಂ ಪೊಱಮಟ್ಟು ಕುಸುಮಪುರಮಂ ಪೊಕ್ಕು ಧನುರ್ಶೇಖರ ನಂ ಕಾಣ್ಬುದುಮವನೊಡನೆಯವರಿಂತೆಂದರ್:—

ಈತನತಿವಿಕ್ರಮೋದಯ ।
ನೀತಂ ಪಡೆದೆನ್ನ ಕಾಲ ಸಂಕಲೆಯಂ ನಿ ॥
ರ್ಭೀತಿಯೊಳುಡಿಸು ಬಿಸುಟ್ಟಂ ।
ಭೂತಳಪತಿ ನಿನ್ನ ಭುಜಬಲಕ್ಕೆ ಸಹಾಯಂ ॥ ೩೬

ಎಂದವರ್ ಬಿನ್ನಪಂಗೆಯ್ಯಲಾಧನುರ್ಶೇಖರನೆನ್ನಂ ಮನ್ನಿಸಲಾತನೊಳಿಂತೆಂದೆಂ:—

ಎಲೆ ಧನುರ್ಶೇಖರೇಶ್ವರ ।
ಮುಳಿದೆಯ್ತಂದಿರ್ಪ ದೀರ್ಘಬಾಹುಕನಂ ದೋ ॥
ರ್ಬಳದಿಂ ಸಂಹರಿಸುವೆನ ।
ಗ್ಗಳವೆನಿಸಿರ್ಪಧಿಕಚಿಂತೆಯಂ ಬಿಸುಡೆಂದೆಂ ॥ ೩೭

ಆಮಾತಿಂಗಾತಂ ಪ್ರೀತಮನಸ್ಕನಾಗಿ ತನ್ನ ಚಾತುರಂಗಬಲವನೆನ್ನೊಡನೆ ತೆರಳವೇಳ್ದು

ಕತ್ತರಿಗೊಂಡ ಕರ್ಣಮೊಳನೀಲದ ನುಣ್ಪುಮರ್ದ*ಕ್ಷಿ ವಕ್ಷಮಂ ।
ಪತ್ತಿದ ಕಂಧರಂ ಮೃದುಸಟಾವಳಿ ಸುಯ್ಲಿನರಳ್ವ ಘೋಣಮಂ ॥
ದ್ವೃತ್ತಮನಂ ನಯಂಬಡೆದ ರೋಮಚಯಂ ನಿಮಿರ್ವೆತ್ತ ವಾಳಮಂ ।
ತ್ಯುತ್ತಮಲಕ್ಷಣಂ ಮೆಱೆವ ವಾರುವಮಂ ಪಡೆದಿತ್ತನಾನೃಪಂ ॥ ೩೮

ಸೊಗಸೆಸೆಯೆ ಬೆಂಗೆವಾಯ್ದೊ ।
ಯ್ಯಗೆ ಮಡದಿಂದೌಂಕಿ ವಾಘೆಯಂ ಸಡಿಲೆ ಬಿಡಲ್ ॥
ಮೃಗಕೌಶಿಕಸಂಭವಮೇ ।
ಗಗತಿಯಿನೊಪ್ಪಿದುದಾತುರಂಗಮರತ್ನಂ ॥ ೩೯

ಅಂತೆಸೆವ ಜಾತ್ಯಶ್ವಮನೆನಗೆ ಕುಡಲೊಡಂ

ವಿತತದೃಢಾಸನಂ ನವಖಲೀನಗುಣಾಂಕಿತಬದ್ಧದೃಷ್ಟಿ ಲೇ ।
ಪಿತಲಸದೂರು ಕಿಂಚಿದನುವಕ್ರಮಜಾನು ಋಜುಪ್ರಸನ್ನಸು ॥
ಸ್ಥಿತತನುವೆನ್ನೊಳೊಪ್ಪೆ ಗತಿ ಧಾರೆ ಲಯಂ ಜವಮುಣ್ಮಿ ಬಲ್ಮೆಯಂ ।
ಕೆತವೆನಿಸಿರ್ಪ ಚಿತ್ರಗತಿಯಂ ಮೆಱೆದಂ ಸುಕುಮಾರಶೇಖರಾ ॥ ೪೦

ಅಂತೆನ್ನ ತೊಡೆಗಳವಟ್ಟ ಕುದುರೆಯಂ ಬೆಂಗವಾಯ್ದು ಕಿಱಿದು ಸೇನೆ ಸಹಿತಂ ಪೊಱಮಟ್ಟು ಬೇಂಟೆಯಿಂ ಬರುತಿರ್ದ ದೀರ್ಘಬಾಹುಕನೊಳ್ ಪೊಣರ್ಚಲ್ ಪೋಪನ್ನೆಗಂ

ಪೆರ್ಬುಲಿ ಪಾಯೆ ಕಂಠಗತಜೀವಿತರಾದವರೆಕ್ಕಲಂ ಕನ ।
ಲ್ದುರ್ಬಿ ಪಿಸುಳ್ದು ದೊಂಡೆಗರುಳಂ ತಳೆದಿರ್ದವರಾರ್ದು ಭಲ್ಲುಕಂ ॥
ಉರ್ಬಿಯುಮುಂಡೆ ಬಲ್ಮಿದುಳೆಲ್ವು ಶಿರಂಗಳನೊತ್ತುತಿರ್ಪವರ್ ।
ಸರ್ಬಮೃಗಂಗಳಂ ಕೆಡಪಿ ಬರ್ಪವರೊಪ್ಪಿದರುರ್ವರಾಧಿಪಾ ॥ ೪೧

ಅಂತು ಬೇಂಟೆಕಾಱಪಡೆ ಬರ್ಪುದಂ ಕಂಡು ದೀರ್ಘಬಾಹುಕನ ಬರವಂ ನಿಶ್ಚಯಂಮಾಡಿ ಸಂಶಯಾಸ್ಪದಮಿಲ್ಲದಂತು ತನ್ನ ಪಾಳೆಯದಿಂದಿದಿರ್ವರ್ಪ ಸೇನೆಯೆಂಬಂತೆ ನಂಬುಗೆ ಪುಟ್ಟುವಂತೆ ಪೋಗಿ ತನ್ನೃಪನಂ ಸಮ್ಮುಖದೊಳ್ ಕಂಡು

ಬಿಡುಬಿಡು ನಿನ್ನ ಬಲ್ಗುದುರೆಯಂ ಕಡುಪಿಂ ಪಿಡಿದಿರ್ಪ ಡಾಣೆಯಂ ।
ಜಡಿ ಮಱೆದಿರ್ದೆನೆಂದಿರದಿರೆಂದು ನಿಜಾಶ್ವಮನಾಂಕೆ ಮಾೞಿಯುಂ ॥
ಸಿಡಿಲೆಱಪಂದದಿಂದೆಱಗೆ ಸೈವೆಱಗಾಗಿ ಮಹಾಗ್ರಹೋಚ್ಚಯಂ ।
ಪೊಡೆವಪ್ಪೊಲಾಗೆ ಮೂರ್ಛೆಗೊಳಗಾದನಟಿಲ್ ಮಿಗೆ ದೀರ್ಘಬಾಹುಕಂ ॥

ಅಂತು ಮೂರ್ಛಿತನಾದುದಂ ಕಂಡಾಂ ಶಿರಶ್ಛೇದಂಗೆಯ್ಯಲೊಡಂ ಕಳಕಳಂ ಪೊಣ್ಮೆ

ಎಲೆ ಕಳ್ಳರ್ ಪಾಯ್ದರಲ್ತಲ್ತು ಸವಸದೆ ಬಯಲ್ ಬಂದುದಲ್ತಲ್ತು ಕೇಳ್ ಮು।
ಚ್ಛಲವೀಗಳ್ ಬಂದುದಲ್ತಿತ್ತಿದು ಕುಸುಮಪುರೀನಾಥಸೈನ್ಯಂ ಮಹಾದೋ ॥
ರ್ಬಲದಿಂದೇಟಿತ್ತೆಂದು ನಮ್ಮುರ್ವಿಪನನದಟನಿಂ ತೀರ್ಚಿತೆಂದಂತತಿವ್ಯಾ ।
ಕುಳಚಿತ್ತರ್ ದೀರ್ಘಬಾಹುಕ್ಷಿತಿಪನ ಸುಭಟರ್ ಮುಂಗೆಡುತ್ತಿರ್ದರಾಗಳ್ ॥

ಅಂತು ಮುಂಗೆಟ್ಟು ಸುತ್ತಲುಂ ಪರಿದು ಪೋಪ ರಿಪುಸೈನ್ಯಮುಂ ಕಂಡು

ಗರುಡನಹಿನಿಚಯಮುಮಂ ಸಂ ।
ಹರಿಸುವ ತೆಱದಿಂದೆ ದೀರ್ಘಬಾಹುಕನ ಮಹೋ ॥
ದ್ದುರಸೇನೆಯನಾಪಿರಿಂದಾ ।
ವರಿಸಿ ಕೊಲಲ್ಕಸಗಿದೆಂ ನೃಪಾಲಕತಿಲಕಾ ॥ ೪೪

ಅಲ್ಲಿ ಬೆರಲಂ ಕರ್ಚಿದರಂ ಪರಿಹರಿಸಿ, ಮರನನೇಱಿದರಂ ಮರಳಿ ನೋಡದೆ, ಹಲ್ಲಂ ಕಱಿದರಂ ಕೊಲ್ಲದೆ ಬಿಟ್ಟು, ಹುತ್ತವನಡರ್ದರಂ ಹತ್ತೆ ಸಾರದೆ, ನೀರ್ಗಾಂತರ್ಗಳ್ಕೆಯುಂ ತೋಱದೆ, ಲಿಂಗವನಪ್ಪಿದರಂ ಹಿಂಗಳೆದು, ನೀರಂ ಪೊಕ್ಕರ್ಗೆ ಬೀರವಂ ತೋಱದೆ, ಬಿಡುದಲೆಯವರ್ಗೆ ಕಡುಪ್ರಮೀಱದೆ, ಹುಲ್ಲಂ ಹಿಡಿದರ್ಗೆ ಬಲ್ಲಾಳ್ತನವಂ ತೋಱದೆ, ನಿರಾಯುಧರಂ ಧುರದೊಳ್ ಮುಟ್ಟದೆ, ಶರಣೆಂದವರ ಶಿರವಂ ಕಾದು, ಮಾಱಾಂತರಂ ತಾಱುತಟ್ಟುಪ್ಪಿನಂ ಮಾಡಿ,

ಜವನಱೆಯುಟ್ಟುವಂತೆ ಕಡೆಗಾಲದ ನಂಜಿನ ಗಾಳಿ ಬೀಸುವಂ ।
ತವಿರಳಮೇಘವಹ್ನಿ ಕವಿವಂತಸಿತೋರಗನಟ್ಟಿ ನುಂಗುವಂ ॥
ತವಚಱದೆತ್ತಲುಂ ಪರಿದು ಭೀತಿಯೊಳೋಡುವ ದೀರ್ಘಬಾಹುಸೈ
ನ್ಯವನಡವಾಯ್ದು ಸಂಹರಿಸಿದೆಂ ನಿಜಸಾಹಸದಿಂ ಮಹೀಪತೀ ॥ ೪೫

ಅಂತು ರಣಾವೇಶದಿಂದಾಂತ ಭಟಸಂತಾನಮಂ ಕೃತಾಂತಮಂದಿರಮಂ ಪುಗಿಸುವಾಗಳ್

ಪಿರಿದುಂ ದೈವವಿಘಾತಿಯಿಂದೆ ಸುಖಮಂ ಕಾಣ್ಬಾಸೆ ಮಾಣ್ದಿರ್ದೊಡೇಂ ।
ಗಿರಿಯೊಳ್ ತಾಪಸವೃತ್ತಿಯಿಂ ಕ್ಷಪಿಸಿ ಜೀವಂ ಪೋಗದಿಂದಿಲ್ಲಿ ದು ॥
ರ್ಮರಣಕ್ಕಿಂತೊಳಗಾದೆನೇ ವಿಧಿಯೆ ಮುನ್ನಾನಾವನಂ ದುಃಖಿಸಾ ।
ಗರದೊಳ್ ನೂಂಕಿದೆನೆಂಬೊರಲ್ವ ದನಿಯಂ ಕೇಳ್ದೆಯ್ದಿದಂ ಭೂಪತೀ ॥ ೪೬

ಆಧ್ವನಿಯಂ ಕೇಳ್ದಲ್ಲಿಗೆಯ್ದಿ ನೋಪ್ಪಿನ್ನೆಗಂ

ಮಂಗಳಮೂರ್ತಿ ತಾಪಸಶಿರೋಮಣಿಯಾಗಮಚಕ್ರವರ್ತಿ ಶು ।
ದ್ಧಾಂಗನಬಾಧಕಂ ಕುಲವಧೂಸಹಿತಂ ಮಖಸೂತ್ರಸಚ್ಛಿಖಾ ॥
ಸಂಗತನತ್ಯಪೂರ್ವದುರಿತಾಂಬುಧಿಬಾಧಕಬಾಡಬಾನಳಂ ।
ಸಂಗರಬಾಧೆಗಳ್ಕಿ ಶಿವಧೋಯೆನುತಿರ್ದನದೊರ್ಬ ಭೂಸುರಂ ॥ ೪೭

ಮತ್ತಾತಂ ಬಾಡಬನಾಮಧೇಯನಾಗಿಯುಂ ಜಡಾಕರನಿವಾಸಿಯಲ್ತು; ತಿಲಕಾಲಂಕೃತನಾಗಿಯುಂ ಮಹಾರಣ್ಯಮಲ್ತು; ರಾಮಾನ್ವಿತನಾಗಿಯುಂ ಮಯೋಧ್ಯೆಯಲ್ತು; ಕಾಕಪಕ್ಷವಿಳಾಸಿಯಾಗಿಯುಂ ಬಲಿಭುಕ್ಕಲ್ಲೆನಿಸಿರ್ದ ಭೂಸುರನಂ ಕಂಡೆನ್ನ ಕೈದುವಂ ಕೀೞಾಳನ ಕೆಯ್ಯೊಳ್ ಕೊಟ್ಟುಮುರ್ವರುಮಂ ನಮಸ್ಕರಿಸಿ

ಈವೇಷಮೆತ್ತಣದು ಸಮು ।
ರಾವನಿಗೆಯುತ್ತುರ್ದೆತ್ತಣದು ನೀವೀರಾ ॥
ಜಾವಸಥಪುರೋಹಿರೋ ।
ಭಾವಿಸಲರಿದೆಮಗೆ ಪೂರ್ವ ನಿಮ್ಮಯ ಬರವಂ ॥ ೪೮

ಎಂದು ನಿಮ್ಮರವೆಲ್ಲಿ, ಇಲ್ಲಿಗೆತ್ತಣಿಂ ಬಂದಿರೆಂದು ಭಕ್ತಿಪುರಸ್ಸರಂ ಕೇಳ್ಳಾಗಿ ದ್ವಿಜೋತ್ತಮನಿಂತೆಂದಂ:—

ಏನಂ ಪೇಟ್ವುದೊ ಪೂರ್ವಂ ನೆನೆದೊಡಗ್ನಿಜ್ವಾಲೆ ಕೈಕೊಂಡು ಹೃ ।
ತ್ಸ್ಥಾನಂ ಭೋಂಕೆನೆ ಭಸ್ಮಮಾಗಲಸು ಬೇಗಂ ಪಾಱ ದಿಗ್ಭ್ರಾಂತಿಯಿಂ॥
ದೇನುಂ ತೋಱದೆ ಪೋಪುದಾದೊಡಮದಂ ಪೇಟ್ದಪ್ಪೆನೆಂದಾದ್ವಿಜಂ ।
ತಾನೆಂತಾನುಮನಸ್ಥೆಯಿಂದುಸಿರ್ದಕುರ್ದ್ಯೋಗನಂತಾಳ್ದದಂ ॥ ೪೯

ಅದೆಂತೆನೆ

ಮಗಧಕ್ಷಿತೀಶ್ವರಂ ಸ ।
ತ್ಯಾಗುಣಾನ್ವಿತರಾಜಹಂಸನೆಂಬಂ ವಿಶ್ವೋ ॥
ರ್ವಿಗೆ ಮೆಱೆವ ವಸುಮತೀಕಾಂ ।
ತೆಗೆ ಕಾಂತಂ ವಿವಿಧರಿಪುನೃಪಾಲಕೃತಾಂತಂ ॥ ೫೦

ಆತನರಮನೆಯ ಸಚಿವರ್ ।
ನೀತಿವಿದರ್ ಸಕಲಧರ್ಮಶಾಸ್ತ್ರಕ್ರಮವಿ ॥
ಖ್ಯಾತರ್ ನಾನಾಭೋಗಪ ।
ರೀತರ್ ಪದೆದೆಣ್ಬರುಂ ವಿನೋದವಿಳಾಸರ್ ॥ ೫೧

ಅವರೊಳ್ ಪ್ರಸಿದ್ಧಿವಡೆದೊ ।
ಪ್ಪವನಾತಂ ಪ್ರೇಮದತ್ತನೆಂಬಾತಂ ಪಾ ॥
ಪವಿದೂರತೀರ್ಥಯಾತ್ರಾ ।
ವ್ಯವಸಾಯದೊಳೊಂದಿ ಪದೆಪಿನಿಂ ಪೊಱಮಟ್ಟಂ ॥ ೫೨

ಅಂತು ಪೊಱಮಟ್ಟನೇಕದೇಶಮಂ ಕಳೆದೊಂದು ಧರ್ಮಪುರಮೆಂಬ ಅಗ್ರಹಾರಕ್ಕೆ ಬಂದು ಯಜ್ಞಶರ್ಮನೆಂಬ ದ್ವಿಜೋತ್ತಮನ ಮನೆಯೊಳ್ ಕಿಱದುದಿನವಿರಲ್

ಆತನ ಸಚ್ಚಾರಿತ್ರ |
ಕ್ಕಾತನ ಸದ್ಗುಣಕೆ ನಾಡೆ ಸಂತೋಷಂಬ ||
ಟ್ಟಾತಂಗೆ ಯಜ್ಞಶರ್ಮಂ |
ಪ್ರೀತಿ ವಿಗಲ್ ಕಾಳಿಯೆಂಬ ಮಗಳಂ ಕೊಟ್ಟಂ || ೫೩

ಅಂತಾಕಾಳಿಯಂ ಪಾಣಿಗ್ರಹಣವಂ ಮಾಡಿ ಕಿಱಿದುದಿನಮಿರಲವಳ್ಗೆ ಸಂತತಿಯಿಲ್ಲದಿರ್ಪುದಱಿಂ ಮಗುಳ್ದು ಯಜ್ಞಶರ್ಮನೆಂಬಂ

ಆವಳನುಜೆಯಂ ವಿಲಾಸೋ |
ತ್ಸವದಿಂ ಕಾಳಿಂದಿಯೆಂಬಳಂ ಕೊಟ್ಟಂ ಭೂ |
ದಿವಿಜನಿಧಿಯಾಕೆಯೊಳ್ ನಿ |
ತ್ಯವಿನೋದದಿನಿರ್ದನನುದಿನಂ ತತ್ಸಚಿವಂ || ೫೪

ಅಂತಾಕೆಗಮಾತಂಗಮತಿಸ್ನೇಹಂ ಸಲುತ್ತಿರಲ್ ಕೆಲವು ದಿನದಿಂ ಮೇಲೆ

ಹೃದಯದೊಳನುರಾಗಾಂಕುರ |
ಮುದಯಿಸೆ ಸಂತೋಷಮಖಿಳಬಂಧುಜನಕ್ಕಂ ||
ದುದಯಿಸೆ ಪರಮೋತ್ಸವದಿಂ |
ದುದಯಿಸಿದಂ ತನಯನವಳ್ಗೆ ವಿಕ್ರಮಸಿಳಯಾ || ೫೫

ಧನಧಾನ್ಯಬಂಧುಮಿತ್ರರ |
ವನಿತಾತತಿ ರಾಜ್ಯಮೆಂಬುವೇವುದೊ ಮುದ್ದಿಂ ||
ಜಿನದಮನೊಡಚರ್ಯಾಡುವ |
ತನಯಂ ಸಂಸಾರಶರಧಿಸೀಮೆಯುದಲ್ತೇ || ೫೬

ಅಂತವರ್ಗೆ ಪುತ್ರೋತ್ಪತ್ತಿಯಾಗಲೊಡಂ ಪೂರ್ವನಿಶ್ಚಿತಮಪ್ಪ ತೀರ್ಥಕ್ಕೆ ಪೋಗಲೆಂದು ಯಜ್ಞಶರ್ಮನಿಂ ಕಳಿಪಿಸಿಕೊಂಡು ಕಾಳಿ ಕಾಳಿಂದಿ ತತ್ಕುಮಾರನಾತನ ದಾದಿ ಸಹಿತಂ ಸರಯೂನದಿಗೆ ಪೋಗಿ ತಂತಮಗೆ ರಮ್ಯಸ್ಥಾನಮಂ ನೋಡಿ ಸ್ನಾನಮಂಗೆಯ್ವಾಗಳ್

ಉರಿ ಹರಿದಪ್ಪುದೆನ್ನೊಡಲೊಳುಳ್ಳೊರ್ದ್ ಬೆಂದಪ್ಪುದೆನ್ನ ಗಂಟಲಂ |
ಸೆರೆಬಿಗಿದಪ್ಪುದೊಂದು ನುಡಿಯುಂ ತಲೆದೋಱದು ಚಿತ್ತದುತ್ಸವಂ ||

ಮುಱುಟೆತು ಭಾಗ್ಯದೇೞ್ಗೆ ಬಯಲಾಯ್ತು ಸಮಸ್ತಮುದಂ ಮನೋಮುದಂ।
ಬಱಿಡೆನಿಸಿತ್ತು ಮತ್ತು ಸಿರ್ವುದೇನೊ ವಿಧಿಪ್ರತಿಬಂಧಕಾರ್ಯಮಂ ॥ ೫೭

ಎಂದು ಸ್ತ್ರೀಪುರುಷರಿರ್ಬರುಂ ಬಿಸುಸುಯ್ಯಲಾನಿನಿತು ದುಃಖಕ್ಕೆ ಕಾರಣಮೇನೆಂಬುದುಂ ಮತ್ತಮಾದ್ವಿಜೋತ್ತಮನಿಂತೆಂದಂ:—

ಕನಸಿನ ಸಿರಿ ಕಾಮರ್ಗಿಲೊ ।
ಡ್ಡಿನ ಚಿತ್ರಂ ಸತಿಯರೊಲ್ಮೆ ಮಿಂಚಿನ ಡಾಳಂ ॥
ಜನಪತಿಯ ಕೂರ್ಮೆಯೆನಲಾ ।
ತನೊಳಾಯ್ತಾತ್ಮಜನ ಸೌಖ್ಯಮಿನ್ನೇವೇೞ್ವೆಂ ॥ ೫೮

ಅದೆಂತೆನೆ—

ಹೃದಯದ ತಾಪದಿಂ ಸವತಿಮಚ್ಚರದಿಂ ತನಗಾತ್ಮಜಾತರಿ ।
ಲ್ಲದ ಘನಕೋಪದಿಂ ಪರರ ಪೆರ್ಚುಗೆಯುಂ ಕಡುಕೆಯ್ದು ಕಾಣಲಾ ॥
ಱದ ಛಲದಿಂದೆ ಪೆತ್ತವಗೆ ದುಃಖಮನೋವದೆ ಮಾಡಿ ಕಾಳಿ ನೂಂ ।
ಕಿದಳೊಡಸಂದು ಬಂದ ತೊಱೆಯೊಳ್ ಮಗನಂ ಪಗೆಯೆಂಬ ಮಾಟ್ಕೆಯಿಂ ॥

ಅಂತು ಕಾಳಿ ತೊಱೆಯೊಳ್ ಮಗನಂ ನೂಂಕಿ ತಾನಲ್ಲದಂತಿರುತ್ತಿರಲ್ ಇಂಗಿತಸ್ವಭಾವದಿಂದವಳೆ ನೂಂಕಿದಳೆಂದು ಪ್ರೇಮದತ್ತನಱಿದು

ಹಾ! ಮಗನೆ ಹಾ! ಕುಮಾರಕ ।
ಹಾ! ಮುದ್ದುಗ ಹಾ! ವಿಳಾಸನಿಧಿ ಹಾ! ಗುಣಿ ಹಾ! ॥
ಹಾ! ಮಕ್ಕಳ ಮಾಣಿಕಮೆಂ ।
ದಾಮೋಹದೊಳಾತನೆಯ್ದೆ ದುಃಖಿತನಾದಂ ॥ ೬೦

ಅದಲ್ಲದೆಯುಂ,

ಬಿಟ್ಟುಮನೇಱಿ ಪಾಸಱೆಗೆ ಬೀೞ್ವೆನೊ ಪೆರ್ದೊಱೆಗೆನ್ನ ಜೀವಮಂ ।
ಕೊಟ್ಟು ಕೃತಾರ್ಥನಪ್ಪೆನೊ ದವಾಗ್ನಿಗೆ ಬೀೞ್ವೆನೊ ತನ್ನ ಜಿಹ್ವೆಯಂ ।
ತೊಟ್ಟನೆ ಕಿಱ್ತುಕೊಳ್ವೆನೊ ನದೀತಟದೊಳ್ ಪದೆದನ್ನಪಾನಮಂ ।
ಬಿಟ್ಟು ಶರೀರಮಂ ತೊರೆದು ಗೆಲ್ವೆನೊ ಸಂಸೃತಿಯಂ ನಿರಂತರಂ ॥ ೬೧

ಎಂದು ಚಿಂತಿಸಿ ಮತ್ತಂ ಮನ್ಮಾರ್ಗಕ್ಕಾತ್ಮವಿಘಾತಂ ಕರ್ತವ್ಯಮಲ್ತೆಂದು,

ಮೃದುತರ ಲೋಳೆವಾಯ್ ತಳರ್ವ ದಟ್ಟಡಿ ಮೆಲ್ನಗೆ ಮುದ್ದುಗೆಯ್ತವಿಂ ।
ಪೊದವಿದ ನುಣ್ದೊದಱ್ನುಡಿ ಮುದಂ ಮಿಗೆ ತಪ್ಪಳೆಗಾಡುವಾಯತಂ ॥
ತುದಿವೆರಲುಯ್ಯಲಾಟಮಿನಿತುಂ ಪಡೆದೊಪ್ಪುವ ಸತ್ಕುಮಾರನಿ ।
ಲ್ಲದ ತನುವೇವುದೆಂದು ತಪಮುಂ ಚರಿಸಲ್ಬಗೆದಂ ಮಹಾದ್ರಿಯೊಳ್ ॥ ೬೨

ಸುತರುಳ್ಳೊಡೆ ಸಂಸಾರ ।
ಸ್ಥಿತಿ ಸುಖಮಾವರಿಲ್ಲದಂದು ಸಂಸಾರಿಗೆ ದು ॥
ರ್ಗತಿ ತಪ್ಪದಪ್ಪುದದಱಿಂ ।
ಯತಿಮಾರ್ಗಂ ಸೌಖ್ಯಮಲ್ತೆ ಭಾವಿಪ್ಪೊಡರಸಾ ॥ ೬೩

ಅಪ್ಪಪ್ಪೆನೆ ಮಿಗೆ ಪರಿತಂ ।
ದಪ್ಪುವ ಚೈಮುಂಡೆನಲ್ ನೊಸಲ್ಗೆಳಸುವ ಕೈ ॥
ತಪ್ಪಳೆಗುಟ್ಟಲ್ ಕುಣಿಕುಣಿ ।
ದಪ್ಪುವ ಬಾಲಕನನುೞಿದು ಜೀವಿಪರೊಳರೇ ॥ ೬೪

ಉಡಿಗಂಟೆ ಮುಱಿವು ಮಾಗಾಯ್ ।
*ಕೊಡರ್ವಕ್ಕಿನ ಬೊಟ್ಟು ಪೊಳೆವ ಕಿಱುಜಡೆದುಱುಗಲ್ ॥
ಸಡಗರದ ಗೆಜ್ಜೆಯುಂದುಗೆ ।
ಕಡುಚೆಲ್ವಾಗಿಪ್ಪ ಸುತನಡಂಗಿದನರಸಾ ॥ ೬೫

ಕೃಪೆಯಿನಗಲ್ದ ಭೂಪತಿಯ ಪಟ್ಟಣದಿಂ ವನವಾಸವಗ್ಗಳಂ ।
ಕಪಟಿಯ ಸಂಗದಿಂ ಪುಲಿಯ ಸಂಗಮತೀವಸುಖಂ ದರಿದ್ರದಿಂ ॥
ಕ್ಷಪಿಪುದಱಿಂದೆ ಲೇಸು ಮರಣಂ ಸುತರಿಲ್ಲದ ಬಾಳ್ಕೆಯಿಂ ಮಹಾ ।
ತಪದೊಳನಾರತಂ ತಪವನಾಂಪುದು ಸೌಖ್ಯಮಿದಲ್ತೆ ಸತ್ಪಥಂ ॥ ೬೬

ಎಂದು ಪುತ್ರವಿಯೋಗದಿಂ ಶರೀರಮಂ ನೀಗಲೆಂದು

ಘೂಕಧ್ವನಿ ಶಾರ್ದೂಲಮ ।
ಹಾಕಳಕಳ ವನಗಜಾಸ್ಯಪ್ರೋತ್ಕೃತಿ ಘನಭ ॥
ಲ್ಲೂಕವಿಕರಾಳಹೂಂಕೃತಿ ।
ಭೀಕರವೆನಿಸಿರ್ಪರಣ್ಯಮಂ ಮಿಗೆ ಪೊಕ್ಕಂ ॥ ೬೭

ಕಿವಿಟಕರಿಂದ್ರಾಶ್ರಿತಪೆಸರ್ಕುಳಪ್ರಚುರನಿರ್ಭೇದ್ಯಂ ಜರದ್ವ್ಯಾಘ್ರಸಿಂ |
ಹವನೇಭಾಕುಳಮುಗ್ರವಿಗ್ರಹಕಿರಾತಸ್ತೋಮಸಂಕೀರ್ಣಮುಂ ‖
ಣ ವಿಲಾಸಂ ಮೆಱೆದಿರ್ಪುದೊಂದು ವನಮಂ ಪೊಕ್ಕಲ್ಲಿ ನಿಶ್ಶಂಕೆಯಿಂ |
ಯುವತೀಸಂಯುತನೊಪ್ಪುವೆತ್ತ ತಪಮಂ ಕೈಕೊಂಡನುತ್ಸಾಹದಿಂ ‖ ೬೮

ಅಂತು ಘೋರಾರಣ್ಯಮಂ ಪೊಕ್ಕು ದಶೇಂದ್ರಿಯಮಂ ದಶವಾಯುವಂ ನಿರ್ಬಂಧಿಸಿ ಕಣ್ಗಳಂ ಮುಗಿದು ಕೆಯ್ವೊಡ್ಡಿ ವಾಯುವಶದಿಂ ಬಂದುದೆ ಆಹಾರಮೆಂದು ಪದ್ಮಾಸನದೊಳಿರ್ದು ಪದಿನಾಲ್ಕು ವರ್ಷಂ ತುಂಬೆ

ಇಂದೀರೇೞ್ಬರಿಸಂ ಮಿಗೆ |
ಸಂದತ್ತೊಲ್ದನಶನವ್ರತಂ ಬಿಡದಸುಮಂ ‖
ಪಿಂದಿಕ್ಕುವೆನೆಂದಿರೆ ಸಲೆ |
ಬಂದೆಸಗಿತ್ತದ್ಭುತಾಶೆ ನಿನ್ನಿನ ದಿವಸಂ ‖ ೬೯

ಯಮನಿಯಮಾಸನಾದಿವಿವಿಧಕ್ರಮದಿಂ ಗಿರಿತಲ್ಪದೊಳ್ ಮನೋ |
ರಮಣಿಯುತಂ ತಪಶ್ಚರಣಮಂ ತಳೆದಿನ್ನೊಡಲಂ ಬಿಸುಟ್ಟು ಸಂ ‖
ಯಮಿನಿಗೆ ಪೋಪೆನೆಂದು ತನುವಂ ಕ್ಷಪಿಸುತ್ತಿರಲೊಂದಪೂರ್ವಸಂ |
ಭ್ರಮದೊಳ್ ಗಾಳಿ ತೀಡಿತದನೇವೊಗೞ್ದಪ್ಪುದೊ ವಿಕ್ರಮೋದಯಾ ‖ ೭೦

ಅದೆಂತೆನೆ:—

ಪೊಡೆಯುತ್ತುಂ ಗಿರಿಶೃಂಗಮಂ ನೆಗೆಪುತುಂ ವ್ಯೋಮಕ್ಕೆ ಭೂಜಂಗಳಂ |
ಕೆಡಪುತ್ತುಂ ಗುಹೆಯೊಳ್ ಪ್ರತಿಧ್ವನಿಗುಡುತ್ತುಂ ನಿಮ್ನಗಾಸ್ಥಾನದೊಳ್ ‖
ತೊಡರುತ್ತುಂ ಮೆಳೆವಕ್ಕೆಯೊಳ್ ಮೃಗಮನಂದೊಡ್ಡೊಡ್ಡಿಸುತ್ತುರ್ಬಿಱು |
ಗ್ಗಡದಿಂ ತೀಡಿದುದೊಂದು ಘೋರಪವನಂ ಚಿತ್ರಾವಹಂ ನಾಡೆಯುಂ ‖ ೭೧

ಅಂತು ಬಿಱುಗಾಳಿ ತೀಡಲ್ಗಡೊಳ್

ನಿಮ್ಮಯ ಸುತನಂ ಕಣ್ಡಪಿ |
ರುಮ್ಮಳಮಿನ್ನೇಕೆ ನಾಳೆ ಪಗಲೆನುತಾಗಳ್ ‖
ತಮ್ಮಿರ್ಬರ ಮನದುತ್ಸಾ |
ಹಮ್ಮಿಗೆಲೋದೋಲೆ ಬಿಟ್ಟುದಾತನ ಕರದೊಳ್ ‖ ೭೨

ಅಂತಾತನೊಡ್ಡಿದ ಕರತಲದೊಳೊಂದೋಲೆ ವಾಯುವಶದಿಂ ಬೀೞ್ವು
ದುಮದಂ ಕಣ್ದೆಱೆದು ನೋಡಿ

ಇದು ಮತ್ಪ್ರಾಣಪ್ರತಿಷ್ಠಾಪಕಮಿದು ಮುದವಾರಾಶಿಪೂರ್ಣೇಂದು ನೋೞ
ಲ್ಕಿದಱರ್ಥಂ ಸಾರ್ಥಕರ್ಣಾಮೃತಮಿದಱ ಲಸದ್ದರ್ಶನಂ ಮತ್ತನೂಜಾ ॥
ಭ್ಯುದಯಂ ಪೆಂಪಿಂದಿದೇೞ್ತಂದುದು ಸಕಲಸುಖಂ ಮುಂದಿದಿರ್ವಪ್ಪುದಂ ಪೇ ।
ೞ್ದೆನುತ್ತಾ ಪತ್ರಮಂ ಕೂರ್ತವಯವದೊಳಲಂಪಿಂ ಸಮಂತೊತ್ತಿಕೊಂಡಂ

ಅಂತಪೂರ್ವಮಪ್ಪ ಪತ್ರಮಂ ಕಂಡು ಹರ್ಷವಿಷಾದಂಗಳನೊಂದನೊಂದಟ್ಟಿ ಮಗುೞ್ದು ಪುತ್ರಸ್ಮರಣದುಃಖಮಂ ಕೈಕೊಂಡು ಸಂತೈಸಿಕೊಂಡಿಂತೆಂದಂ:— †

ಜಗದೊಳ್ ಪುತ್ರವಿಹೀನರ ।
ಮೊಗಮಂ ನೋಡಲ್ಕೆ ದೋಷಮಕ್ಕುದಱಿಂದಂ ॥
ಮಿಗೆ ಪಾತಕಿಯಾನೆನ್ನಂ ।
ಬಗೆವರೆ ನುಡಿಸುವರೆ ಭಾಗ್ಯವಂತರ್ ಧರೆಯೊಳ್ ॥ ೭೫

ಅಂತೆಂಬುದುಂ;

ಎನಗನುರಾಗಮುರ್ಬೆ ತನು ಕೊರ್ಬೆ ಮುದಾಶ್ರುಗಳುಣ್ಮೆ ಕೂರ್ಮೆ ಭೋಂ
ಕನೆ ಪೊಱಪೊಣ್ಮೆ ಮೋಹರಸಮುಕ್ಕೆ ಮುದಂ ಕುಡಿಯಿಕ್ಕೆ ಭಕ್ತಿ ಭಾ॥
ವನೆ ತಲೆದೋಱೆ ವಕ್ತ್ರಕಮಲಂ ನಯಮೇಱೆ ಮನಂ ತಳರ್ತು ಜು ।
ಮ್ಮನೆ ಪುಳಕಂ ಕವಲ್ತು ಬಿಗಿದೆಮ್ಮಮಜನ್ಮಮ(?)ನುರ್ವರಾಧಿಪಾ ॥ ೭೬

ಅಂತಿರ್ದವರೆಮ್ಮ ಕಾಯ್ತಂಬೆಗಳೆಂಬುದನಱಿದಲ್ಲಿಗೆ ಬಂದ ವೃತ್ತಾಂತಮಂ ಕೇಳ್ವೆನೆಂದು ಸ್ಥೈರಿಸಿಕೊಂಡು ಮತ್ತಮಿಂತೆಂದಂ:—

ಈದೀರ್ಘಬಾಹುವಿರ್ದೆಡೆ ।
ಗಾದರದಿಂ ಬಂದಿರೇಕೆ ಪೇೞಿಮೆನಲ್ಕಾ ॥

ಈಕಡೆ ಮೂಲಪ್ರತಿಗಳಲ್ಲಿ ಕಥಾಸಂದರ್ಭಕ್ಕೆ ಅನುಚಿತವಾದ
† ಪಲವಾಳಾಪದೊಳೇಂ ಕೇ ।
ಳಲೆ ಸೊಬಗ ತದೀಯಪುತ್ರನುಂ ನೀನೆ ವನ
ಸ್ಥಲದೊಳ್ ತಪದುಜ್ಜುಗದಿಂ ।
ನೆಲಸಿರ್ದಾಪ್ರೇಮದತ್ತನುಂ ನಾನೆಂದಂ ॥ ಎಂಬ ಪದ್ಯವೊಂದಿದೆ.

ಹಾದ್ಯೆವವೆ ಎಂದಧಿಕವಿ ।
ಷಾದಂ ಮಿಗೆ ಕೇಳೆನುತ್ತುಮನನಿಂತೆಂದಂ ॥ ೭೭
ವಾಯುವಶದಿಂದೆ ಬಂದ ಶು ।
ಭಾಯುತವೆಂದೆನಿಪ ಪತ್ರಭಾಷಿತದಿಂದಾ ॥
ಹಾಯೆಂದು ಪೆರ್ಚಲೆನ್ನೊಳ್ ।
ಗೇಯರಸಂ ನೆಲಸಿದತ್ತು ಮನದುತ್ಸವದಿಂ ॥ ೭೮

ಅದೆಂತೆನೆ:—

ವನಮೃಗರಾಜಿಗಳ್ ಪದೆದು ಮೆಯ್ಮಱೆಯಲ್ಕರಿಕೆಳ್ದು ಕಾಜ್ಪೊಲಂ ।
ನನೆಕೊನೆವೋಗೆ ಭಿಲ್ಲತತಿ ಬಳ್ಬುಱಗಾಗಿರೆ ಮತ್ತೆ ಪಂಚಮ ॥
ಸ್ವನವೊಗೆವಪ್ಪಿ ಲಾಣೆವಣಿಯಿಂ ಪೊಸದೇಸೆಯೆನಲ್ಕೆ ಕೋಕಿಲ ।
ಧ್ವನಿಯನದಿರ್ಪಿಯೆನ್ನ ಮನಮುಕ್ಕಿರೆ ಪಾಡಿದೆನಾವನಾಂತದೊಳ್ ॥ ೭೯
ವಲ್ಲಕಿಯಂ ಕಾಮನ ಪೂ ।
ವಿಲ್ಲ ಗುಣಧ್ವನಿಯನಿಱಿಕೆಗೆಯ್ದು ಕುಜಂಗಳ್ ॥
ಪಲ್ಲವಿಸಲೆನ್ನ ಚಿತ್ತಸು ।
ಖೋಲ್ಲಾಸಂ ಪೆರ್ಚೆ ಪಾಡಿದೆಂ ನಲವಿಂದಂ ॥ ೮೦

ಅಂತಾಪುತ್ರನಂ ನಾಳೆ ಮಧ್ಯಾಹ್ನಕ್ಕೆ ಕಾಣ್ಬೆನೆಂಬ ಹರ್ಷಾತಿರೇಕದಿಂ ಪಾಡುತಿರ್ಪಾಗಳ್

ಈಭೂಪಂ ಬೇಂಟೆಗೆ ಬಂ ।
ದಾಭೂಧರದಲ್ಲಿ ಪಾಡುತಿರ್ದೆನ್ನಂ ಕಂ ॥
ಡಾಭೋಗವಾಗೆ ಕಿನ್ನರ ।
ಲಾಭಂ ತನಗಾಯ್ತೆನುತ್ತೆ ಪಿಡಿದೆಯ್ತಂದಂ ॥ ೮೧

ಎಂದು ಪೇೞ್ವುದುಂ

ಎನ್ನಯ ಕಣ್ಮಲರ್ಗಳ ನೀ ।
ರೆನ್ನಯ ಮುಂಗಾಣಲೆಸೆದಿರಲ್ ಕಂಡವರ್ಗಳ್ ॥
ನಿನ್ನೊಳಮಿತೇಕೆ ದುಃಖಂ ।
ಚೆನ್ನಿಗ ನೀನಾರೆನಲ್ ತೊದಳ್ಮಗೆ ನುಡಿದೆಂ ॥ ೮೨

ಕಾಳ ತೊಡೆಯೊಳಗೆ ನೂಂಕಿದ ।
ಬಾಳಕನೆಂಬಾತನಾನೆನುತ್ತಂಘ್ರಿಗೆ ಮ ॥
ದ್ಘಾಳವನೀಡಾಡಲ್ ಪದೆ ।
ದಾಳಿಂಗಿಸಿದರ್ ವಿಳಾಸದಿಂದವರೆನ್ನಂ ॥ ೮೩

ತಂದೆಯುಲಗ್ಗಣ್ಗಳೊಳಾ ।
ನಂದಾಶ್ರು ತುಱುಂಕೆ ತಾಯ ಮೊಲೆಯೊಳ್ ಪಾಲ್ ಜು ॥
ಮ್ಮೆಂದೆಚ್ಚು ಪಾಯಲಿರ್ಬರ್ ।
ನಂದನನಂ ನೋಡಿಯುಬ್ಬಿ ಹರ್ಷಿತರಾದರ್ ॥ ೮೪

ಅಂತು ಹರ್ಷಿತರಾಗಿ

ಕ್ಷೋಣೀತಲದೊಳ್ ತ್ರಿಜಗ ।
ತ್ರಾಣಂ ಪವನಂ ದಲೆಂಬುದೆನ್ನೊಳ್ ದಿಟಮಾ ॥
ಯ್ತ್ರೊಣೆಯುಮಿಲ್ಲದೆ ಮಕ್ಕಳ ।
ಮಾಣಿಕಮಂ ಕಂಡೆವೆಂದೆನುತ್ತವರೊಸೆದರ್ ॥ ೮೫

ಅಂತು ಸಂತಸದಂತವನೆಯ್ದಿದ ತಂದೆತಾಯ್ಗಳನಾಂದೋಳಾರೂಢರಪ್ಪಂತುಮಾಡಿ ಬರ್ಪರ್ಗಳ್ ದೀರ್ಘಬಾಹುಕನಂ ಕಾಲಮಂದಿರವನೆಯ್ದಿಸಿದೊಸಗೆಯುಂ ಕುಸುಮಪುರೇಶಂ ಕೇಳ್ದನಗಿದಿರ್ವಂದೊಡಾತಂ ಸಹಿತಂ ದೀರ್ಘಬಾಹುಕನ ಲಲಿತಪುರಕ್ಕೆ ನಡೆದು

ಅಂಜದೆ ಬಂದು ಕಾಣ್ಬುದು ಸಮಸ್ತಜನಂ ಸಚಿವರ್ಕಳೊಲ್ಮೆಯಿಂ ॥
ಕುಂಜರವಾಜಿಕೋಶತತಿಯುಂ ಪದೆದೊಪ್ಪಿಪುದಷ್ಟಶೋಭೆಯಿಂ ॥
ರಂಜಿಪುದಾವಗಂ ಪುರಮನೆಂದು ನೃಪಾಲನುಮಂ ವಿಳಾಸದಿಂ ।
ಸಂಜನಿತಪ್ರಿಯಂಬೆರಸು ಪೊಕ್ಕನತೀವಮನೋನುರಾಗದಿಂ ॥ ೮೬

ಅಂತು ದೀರ್ಘಬಾಹುಕನರಮನೆಯುಂ ಧರ್ಮಶೇಖರಸಹಿತಂ ಪೊಕ್ಕು ಪುರಜನಪರಿಜನಮಂ ತಂದು ಧರ್ಮಶೇಖರಂಗೆ ಕಾಣಿಸಲಾತಂ ಪ್ರೀತಿವಟ್ಟು

ಎನ್ನ ಛಲವಿಂದು ಸಂದ ।
ತ್ತೆನ್ನ ಮನೋರಥಫಲಂ ಕರಂ ಸಾರ್ದುದು ಮ ॥
ತ್ತೆನ್ನ ಕುಲಮೊಳ್ಪುವೆತ್ತುದು ।
ನಿನ್ನಿಂದೆನಗೆಂದು ಧರ್ಮಶೇಖರನೊರೆದಂ ॥ ೮೭

ಎಂದು ಸಂತೋಷಂಬಟ್ಟದೆ ಮುಹೂರ್ತವಾಗೆ ತನ್ನ ಮಗಳಪ್ಪ ಕುಸುಮಾವತಿಯುನೆನಗೆ ಕೊಟ್ಟಲ್ಲಿಯೆ ಪಟ್ಟಮಂ ಕಟ್ಟಿ ತಾಂ ಕುಸುಮಪುರಿಗೆ ಪೋದಂ. ಇತ್ತಲ್

ಪೊಸತೆನಿಸಿದ ರಾಜ್ಯವನಲಂಪು ಮಿಗುತ್ತಿರೆ ಸಂತವಿಟ್ಟು ಮ ।
ನ್ನಿಸಿ ಸಚಿವರ್ಕಳಂ ಪುರಜನಕ್ಕೊಡಲಿತ್ತು ಭವತ್ಪ್ರಪಂಚಮುಂ ॥
ಕುಸುಮಪುರೇಶನಂದನೆಗೆ ಪೇಳ್ದು ನಿಜಾಂಘ್ರಿಸರೋಜಮಂ ನಿರೀ ।
ಕ್ಷಿಸುವನುರಾಗದಿಂ ಕಿಱಿದು ವಾಹಿನಿಯುಂ ತಳರ್ದಂ ಮಹೀಪತೀ ॥ ೪೪

ಅಂತು ಪೋಱಮಟ್ಟು ದುರ್ಗಾಪ್ರಾರ್ಥನೆಯಂ ಮಾಡಿಯೊಡವಂದ ಸೇನೆಯಂ ಮಗುಳ್ದು ಕಳಿಪಿ ದೇಪುರಂ ಕಾಣ್ಬನ್ನಮೇಕಾಕಿಯಾಗಿ ಪೋಪೆನೆಂಬನ್ನೆಗಂ

ಕಂಗೆಟ್ಟಂಗಕ್ಷಿಗಳ್ ದಿಗ್ಭ್ರಮೆ ಮಿಸುಪ ನರಂಗೆಯ್ದೆವರ್ಬಟ್ಟೆ ದಾರಿ ।
ಪ್ರಂಗಳ್ ಶೂನ್ಯಚಿತ್ತಂಗಧಿಕವರವನೀವಿಷ್ಟದೈವಂ ಕರಂ ವೃ ॥
ದ್ಧಂಗಾದಿವ್ಯಾಪೃತಂ ತೋರ್ಪವೊಲೆನಗೆ ಭವನ್ಮೂರ್ತಿಯಿಂದಿಲ್ಲಿ ತೋಱಿ
ತ್ತಂಗಶ್ರೀಯೊಳ್ ವಿಳಾಸಂ ಮೆಱೆದುದೆನುತೆ ಮೆಯ್ವೆಚ್ಚದಂ ಸೋಮದತ್ತಂ

ಜಗದಂಬಿಕೆಯೆನಿಸುವ ದು ।
ರ್ಗೆಗೆ ಪರಕೆಯನೀವೆನೆಂಬ ಕತದಿಂ ನಿಮ್ಮಂ ॥
ಘ್ರಿಗಳಂ ಕಂಡೆನೆನುತೆ ಮು ।
ತ್ತುಗಳಿಂದರ್ಚಿಸಿದೆನಂಬಿಕಾಪದಯುಗಮಂ ॥ ೫೦

ಅಂತು ದುರ್ಗಾಂಬಿಕೆಗೆ ಪರಕೆಯನೊಪ್ಪಿಸಿಯುಪಾರಪರಿಣಾಮದಿಂ ಸೋಮದತ್ತಂ ರಾಜವಾಹನನಂಘ್ರಿಗಳನೋಲೈಸುತ್ತಿರೆಯಿರೆ

ಬಾಹುಬಲದಿಂ ತಳರ್ದತಿ ।
ಸಾಹಸದಿಂ ಕೊಂಡ ರಾಜ್ಯಮಂ ವಿಪುಳನವ ॥
ಸ್ನೇಹದ ಸತಿಯುಂ ಬಿಟ್ಟೇ ।
ಮೋಹದೊಳೇಬ್ಬಂದೆಯೇಕೆ ಪೇಟ್ ಸುಕುಮಾರಾ ॥ ೫೧

ಎಂದು ಬುದ್ಧಿವೇಳ್ದು ಪೊಸರಾಜ್ಯಮನೀಪರಿ ನಿರಾಧಾರಮಪ್ಪಂತಿರೆ ಇರಿಸಲಾಗದು, ಇಂದೆ ಪೋಗಾನಮಂತಿಪುರಮಂ ಪೊಕ್ಕುಬಪೆನೆಂದು ಸೋಮದತ್ತನಂ ಕಳಪಲಾತಂ ಬೀಳ್ಕೊಂಡು ಪೋಗೆ

ಇನಿತು ಸಮರ್ಥರಾರೊ ಪರರಾಜ್ಯವನಿಟ್ಟುಳಿಗೊಂಡು ಶೌರ್ಯದಿಂ ।
ಜನಪತನೂಜೆಯಂ ಮದುವೆಯಾಗಿ ವಿರೋಧಿಯನಿಕ್ಕಿ ಮೆಟ್ಟಿಯೊ ॥
ರ್ಬನೆ ಮಗುಳ್ದಮ್ಮನೀಕ್ಷಿಸಲನೂನಮಹೋತ್ಸವದಿಂ ತಳರ್ದನೆಂ ।
ದನುಜನನಾವಗಂ ಪೊಗೞ್ದು ಮೆಚ್ಚಿದನತ್ತಿಯಭಂಗವಿಕ್ರಮಂ ॥ ೯೧

॥ ಗದ್ಯಂ ॥

ಇದು ನಿಖಿಲಬುಧಜನಮನೋಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಸೋಮದತ್ತಕಥಾವೃತ್ತಾಂತಂ

ಪಂಚಮಾಶ್ವಾಸಂ.

॥ ಷಷ್ಠಾಶ್ವಾಸಂ ॥

— ರಾಜವಾಹನಚರಿತಂ —

ಶ್ರೀವಕ್ಷಸ್ಸ್ಥಳನಮಿಳಿಕ ।
ಳಾವಿನುತುಂ ಸೋಮದತ್ತನಂ ಕಳಿಪಿ ಕಳಾ ॥
ಕೋವಿದನಲ್ಲಿಂದೆಯ್ದಿಂ ।
ಪಾವನಗುಣನಿಧಿಯಭಂಗವಿಟ್ಟ್ಯಲಭೃತ್ಯಂ ॥ ೧

ಅಂತು ರಾಜವಾಹನಂ ದುರ್ಗಾಲಯಮಂ ಪೂಜಿಸುಟ್ಟವಂತೀದೇಶಕ್ಕಭಿ ಮುಖನಾಗಿ

ಪಲವು ನದೀನದಪ್ರಕರಮಂ ಪಲವದ್ರಿಗಳಂ ವನಂಗಳಂ ।
ಪಲವನನಂತದೇಶಮನನಂತಪುರಂಗಳನಂತೆನಂತಸು ॥
ಸ್ಥಲಮನಿತೆಲ್ಲಮಂ ಕಳೆದು ರಾಜಕುಮಾರಕನೊಲ್ದು ಪೊಕ್ಕನು ।
ಜ್ಜ್ವಲಮೆನಿಸಿರ್ಪವಂತಿವಿಷಯಾಂತರಮಂ ನಿಜಸೋದರಾನ್ವಿತಂ ॥ ೨

ಕೃತಯುಗದೊಂದು ಗೂಳಿಯುಮೊ ಮರ್ತ್ಯರ ಕೆಯ್ಯೊವಲನೋ ವಿಲೋಚನಾ । ಮೃತಮೊ ಕೊಳಂಗಳೋ ಸಿರಿಯ ತಾಯ್ಮನೆಯೋ ವನವೋ ವಸಂತದೇ ॥ ಪತಿಯೊ ವಿಳಾಸಿನೀಜನಮೊ ಕಾಮಶರಾಳಿಯೊ ಪೇಱೆನಲ್ಕೆ ಸ । ನ್ನುತಿವಡೆದೊಪ್ಪುಗುಂ ವಿಷಯಸಂತತಿಯಿಂ ವಿಷಯಂ ನಿರಂತರಂ ॥

ಅದಲ್ಲದೆಯುಂ

ವಿರಹಂ ಕೋಕಂಗಳೊಳ್ ಸತ್ಕುಲಹತಿ ಜಿನದೊಳ್ ಬಂಧನಂ ಸವ್ಯಪುಷ್ಪೋ । ತ್ಕರದೊಳ್ ದುಷ್ಟಸ್ವಭಾವಂ ತುರಗದೊಳರಿಸಂಮರ್ದನಂ ವಿಷ್ಣುಹಸ್ತಂ । ತರದೊಳ್ ವ್ಯಾಜಂ ಮಹಾಲಂಕೃತಿಯೊಳಧರಸಂಜೀವನಂ ಸಂತತಂ ನಾ । ಗರಿಕಾದಿಪಾರ್ಥರೊಳ್ ಸಂದೆಸೆವುದನುದಿನಂ ಸಲ್ಲದಾನಾಜೊಳೆಂದುಂ ॥ ೪

ಆವಿಷಯಕ್ಕೆ ನೂತ್ನಮಣಿದರ್ಪಣದಂತೆ ಲಸದ್ವಿಭೂತಿಸಂ ।
ಭಾವಿತನಿರ್ಮಳಪ್ರಚುರವೃತ್ತಮೆನಿಪ್ಪ ಜನಪ್ರಸನ್ನಸಾ ॥

ಖ್ಯಾವಹಮುಂ ನಿಮಿರ್ಚಿರ್ಪ ನವರತ್ನಸುವರ್ಣವಿಕೀರ್ಣದಿವ್ಯಪ।
ರ್ವ್ಯಾವಳಿಯಿಂ ವಿಚಿತ್ರಮೆನೆ ರಂಜಿಪುದಲ್ಲಿಯುಮಂತಿಕಾಪುರಂ॥ ೫

ಅಂತಾಪುರಮಂ ಪುಯ್ಟ್ಯವರೆ

ಸುಲಲಿತಚಂದ್ರಕಾಂತಕಲಶಂಗಳನಂಗನೆಯರ್ ವಿಳಾಸದಿಂ।
ಕುಳಿರ್ವ ಜಲಂಗಳಂ ಮೊಗೆದು ಪಾಂಥಜನಕ್ಕೆಱೆಯುತ್ತಿರಲ್ಕೆ ಶೀ॥
ತಳಜಲಮೆಲ್ಲಮುಂ ಸಮೆಯೆ ತಮ್ಮ ಮುಖೇಂದುಮರೀಚಿಯಿಂದಮಾ।
ಕಳಶಮನ್ಯದೆ ತೀವಿ ಪಥಿಕರ್ಗೆಱೆವರ್ ತೃಷೆ ಪಿಂಗುವನ್ನೆಗಂ॥ ೬

ಬಿಸಿಲಿಂ ಬೆಂಡಾದವರ್ ತತ್ತೃಷೆಗೆ ಪರಿದು ನೀರಟ್ಟೆಯಿಂ ನೀರ್ಗೆ ಕೈಮು। ಟ್ಟುಸಿರಂ ನುಂಗಿರ್ದ ನಾಸಾಪುಟಮರಳೆ ಬೆಮರ್ ಚುಮ್ಮಿನುತ್ತಿರ್ಕೆ ಕೈ ಕಂ॥ ಪಿಸೆ ಗಂಟಲ್ ತಟ್ಟುತಾಱಲ್ ತನು ತಣಿದು ಕುಳಿರ್ಕೊಳ್ಗೆ ಪಂಚೇಂದ್ರಿಯುಂ ರಾ। ಗಿಸೆ ತಾಪಂ ಪಿಂಗೆ ಪಾಂಥರ್ ಕುಳಿರ್ವ ಸಲಿಲಮಂ ಪೀರ್ದು ತೇಗುತ್ತೆ ಪೋಪರ್॥ ೭

ಅಂತಾಪ್ರಪೆಯೊಳಾತಪತಾಪಮಂ ಕಳೆದಲ್ಲಿಂ ತಳರ್ದಾಗಳ್ ಮುಂದೆ

ರಾಜಶುಕಂ ಕರ್ದುಂಕೆ ರಸಧಾರೆಗಳಂದೆಸೆದಿರ್ಪ ದಾಡಿಮಾ।
ರಾಜಿಗಳಿಂ ಪಿಕಾಳಿ ಕುಟುಕಲ್ ಸೊನೆಬಿಂದುಗಳುರ್ಪ್ಪ ಮಾಮ್ರಧಾ॥
ತ್ರೀಜದಿನುಳ್ಳ ರಲ್ದಲೆಗಳೊಳ್ನೆಱೆಗಂಪನೊಱಲ್ದು ಪೀರ್ವ ಭೃಂ।
ಗೀಜಯನಾದದಿಂ ಪರೆಪಿನಿಂ ಮೆಱೆಗುಂ ಪುರದಾಬಹಿರ್ವನಂ॥ ೮

ಅಂತಾಪುರದ ಬಹಿರ್ವನದ ವಿಳಾಸಮಂ ನೋಡುತ್ತುಂ ಬರೆವರೆ ಮುಂದೆ

ಅಗೞಿಂ ಪ್ರಾಕಾರದಿಂ ಪೆಂಕಣಿಯಿನನುಪಮದ್ವಾರದಿಂ ಸತ್ಪತಾಕಾ।
ಳಿಗಳಿಂದಾಳ್ವೇರಿಯಿಂ ಕೊತ್ತಳದಿನಿಡುಸರಳ್ಗಂಡಿಯಿಂ ಖಂಡಿಯಿಂದಂ॥
ಬಗೆಗೊಳ್ವಂ ಬೀಱಿ ನೋಡುತ್ತಡಿಗಡಿಗೆ ಶಿರಂದೂಗುತುಂ ಪ್ರೇಮದಿಂದಂ।
ಪುಗುತಂದಂ ಕೂರ್ತವಂತೀಪುರದೊಳಗನಿಳಾಕಾಮಿನೀಜೀವಿತೇಶಂ॥ ೯

ಅಂತು ಪುರಮಂ ಪೊಕ್ಕು ರಾಜವಾಹನಂ ಪ್ರಹೃಷ್ಟೋದ್ಭವನ ಮೊಗಮಂ ನೋಡಿ— ಈ ಪಟ್ಟಣಮನಾಳ್ವರಸನ ಪೆಸರೇನೆಂದು ಕೇಳ್ವುದುಮಾತನಿಂತೆಂದಂ:—

ಈಪುರಮನಾಳ್ವನಾನತ ।
ಭೂಪಾಲಕಮೌಳಿಮಕುಟಮಂಡಿತಚರಣಂ ॥
ಚಾಪಲರಿಪುನೃಪಮಥನಭು ।
ಜಾಪರಿಘನವಂತಿದೇವನೆಂಬ ನರೇಂದ್ರಂ ॥ ೧೦
ಆಭೂಪನರಸಿ ಗುಣಗಣ ।
ಶೋಭಾನ್ವಿತೆ ಪೆಂಪಿನಿಂ ಸುರೇಂದ್ರನ ಸತಿವೋಲ್ ॥
ಸೌಭಾಗ್ಯವಂತೆ ಮಂಗಳ ।
ವೈಭವೆ ಮಾದೇವಿಯೆಂಬ ವನಿತಾರತ್ನಂ ॥ ೧೧
ಅವರಿರ್ವರ್ಗೊಲವಿಂ ಸಂ ।
ಭವಿಸಿದರ್ಂ ಕೀರ್ತಿಸಾರನಿಂ ಪಿರಿಯಂ ಭೂ ॥
ಭುವನಪತಿ ದರ್ಪಸಾರಂ ।
ನವನೀತಿಪ್ರೌಢನತುಳಗರ್ವಾರೂಢಂ ॥ ೧೨
ಆದರ್ಪಸಾರನನುಜೆ ಕೃ ।
ಶೋದರಿ ಶಶಿಮುಖಿಯವಂತಿಸೌಂದರಿ ಲೋಕೋ ॥
ನ್ಮಾದಿನಿ ಘನಕುಚೆ ಸಕಲಗು ।
ಣೋದವಸಿತೆ ಪೆಸರೊಳೆಸೆವ ಕನ್ಯಾರತ್ನಂ ॥ ೧೩
ಆಕೆಗಮೆನ್ನರಸಿಗಮು ।
ವ್ಯಾಕುಳದಿಂದತಿಸಖಿತ್ವಮೆಸೆದಿರ್ಪುದು ಪ ॥
ದ್ಮಾಕರಕೆ ರಾಜಹಂಸಾ ।
ನೀಕಕ್ಕನವರತಸಂಗಮೊಪ್ಪುವ ತೆಱದಿಂ ॥ ೧೪

ಎಂದು ಪುಷ್ಪೋದ್ಭವಂ ಪೇೞಲ್ ರಾಜವಾಹನಂ ಕೇಳುತ್ತುಂ ಪುಷ್ಪೋದ್ಭವನ ಪಿತೃಮಾತೃಗಳಿರ್ದ ಮನೆಗೆ ಬಂದವರ್ಗೆ ನಮಸ್ಕರಿಸಿ ತನಗೆ ಪೊಡೆವಟ್ಟ ಬಾಲಚಂದ್ರಿಕೆಯುಂ ಪರಸಿ ಬೞಿಯಂ

ಹಿಮಜಲದಿಂ ಕರಚರಣಾ ।
ಗ್ರಿಮಮುಖಪ್ರಕ್ಷಾಳನಂಗಳಂ ಮಾಡಿ ಸುಗಂ ॥
ಧಮುಯಾಂಬುವನೀಂಟಿ ಪಥ ।
ಶ್ರಮಮಂ ಕಳೆದಂ ನೃಪಾಲತನಯಲಲಾಮಂ ॥ ೧೫

ಅನಂತರಂ ಮಜ್ಜನಭೋಜನಾದಿವ್ಯಾಪಾರಮಂ ಮಾಡಿ ದೇಶಾಂತರವೃತ್ತಾಂತಮಂ ರತ್ನೋದ್ಭವ ಹೇಮಪ್ರಭೆ ಬಾಲಚಂದ್ರಿಕೆಯರ್ಗೆ ಪೇಳ್ದು ಪಲವು ದಿನಮೆಲ್ಲರುಮಿಂತು ತಾನುಂ ಪುಷ್ಪೋದ್ಭವನುಂ ವಿಪ್ರವೇಷದಿಂದಿರಲ್

ಎಂದಿನ ತೆಱದಿನವಂತೀ ।
ಸುಂದರಿಯೋಲಗಕೆ ಬಾಲಚಂದ್ರಿಕೆ ಪೋಗಿ ॥
ವರ್ಂದಂದಿನ ವಾರ್ತೆಗಳಂ ।
ಬಂದೊಲವಿಂ ಪೇೞ್ದಳುವರಾಧೀಶ್ವರನೊಳ್ ॥ ೧೮

ಅಂತು ಪ್ರತಿದಿನಂ ಪ್ರಚ್ಛದ ವಾರ್ತಾವಿಶೇಷಮಂ ಪೇೞುತ್ತೊಂದುದಿವಸಂ ರಾಜವಾಹನನುಂ ಪುಷ್ಪೋದ್ಭವನುಂ ಕುಳ್ಳಿರ್ದಾಗಳಾಬಾಲಚ ದಿಂತೆಂದಳ್:—

ಭಾವನ ಗುಣಮನವಂತೀ ।
ದೇವಿ ಕರಂ ಕೇಳ್ದು ಮೆಚ್ಚಿ ಕಾಣಲ್ವೇೞ್ಕುಂ ॥
ದಾವಸಿತೆ ಪೊಱಗಣುಪವನ ।
ದೋವರಿಗೆತ್ತರ್ಪುದೆಂದು ಪೇೞ್ದಳ್ ನಿಮ್ಮಂ ॥ ೧೯

ಎಂದೊಡೀಪ್ರಸಂಗಕ್ಕೆ ಕಾರಣಮೇನೆಂದು ರಾಜವಾಹನಂ ಕೇಳ್ದೊಡಾಕೆ ಇಂದಾಂ ತಳ್ವಿ ಪೋಗಲೆನ್ನನವಂತಿಸೌಂದರಿ ನೋಡಿ

ವನಜಮುಖಿ ನಿನ್ನ ಬರವೇ ।
ಕಿನಿತುಂ ಪೊೞ್ತಾದುದೆಂದು ಪೇೞೆನಲಾಂ ಕೇಳ್ ॥
ವಿನಯವತಿ ನಮ್ಮ ಪೊಸಭಾ ।
ವನ ಪದಪರಿಚರ್ಯೆಯಿಂದೆ ನಾಂ ತಳ್ವಿದೆಂ ॥ ೨೦

ಎಂದೊಡಾತನೆಲ್ಲಿಂದಂ ಬಂದನೆಂದಾಕೆ ಕೇಳ್ದೊಡೆ ಆಂ ಮುನ್ನಮಿದಿರ್ದ ದೇಶಾಂತರವೃತ್ತಾಂತಮಂ ಪೇೞ್ದು ಮತ್ತಮನೇಕಗುಣಂಗಳಂ ಪೇೞಲಾ ಸುಭಗಮೂರ್ತಿಯಂ ನಾಳೆ ಪುಷ್ಪಾಪಚಯವ್ಯಾಜದಿಂ ವನಕ್ಕೆ ಬಂದು ನೋೞ್ಪೆನಾತನನುಪವನವಿಳಾಸಮಂ ನೋಡುತ್ತಿರಲ್ ಪೇೞೆಂದಳೆಂದು ಪೇೞ್ದೊಡದರ್ಕರಸಂ ಹರ್ಷಂಬಟ್ಟು ಮಱುದಿವಸಂ,

ಪಸುರ್ಗಳಿಗರ್ಗಳಿಸಲದೊಪ್ಪುವ ।
ಕುಸುಮಂಗಳನೊಲೆವ ಫಲವಿತಾನಂಗಳನೊ ॥
ಳ್ಪಸೆವ ಶುಕಪಿಕರವಂಗಳ ।
ನೆಸೆದಿರ್ಪುದ್ಯಾನವಂ ನೃಪಾಲಂ ಪೊಕ್ಕಂ ॥ ೧೯

ಅಲರ್ಗಲದೊಂಗಲಂ ಕುಣಿಸುತುಂ ಸೊನೆಸೋನೆಯನೆಯ್ದೆ ಸೂಸುತುಂ
ತಳಿರ್ಗಳಬಿಂಬಿಸಿಂ ನುಸುಳುತುಂ ಮಕರಂದಮನಪ್ಪುತುಂ ಕೊಳಂ ॥
ಗಳ ತಡಿಯೊಳ್ ವಿಹಾರಿಸುತೆ ಪಾಡುವ ಸೋಗೆಗಳಂ ಬಿದಿರ್ಚುತುಂ ।
ಪಲವು ವಿನೋದದಿಂ ಸುಳಿವುದಾಬನದೊಳ್ ಮಿಗೆ ಮಂದಮಾರುತಂ ॥ ೨೦

ಆಮಂದಮಾರುತನಸಿದಿಗೊಳ್ಳುತ್ತುಂ ನೋಡಲ್ ಮುಂದೆ,

ತಲ್ಲಣದಿಂ ಸಮಂತುದಯಮಾಗಲೊಡಂ ಪರಿತಂದು ತುಂಬಿ ತಂ ।
ಪೆಲ್ಲಮನೀಬ್ಬಿ ಕೊಂಡಪ್ರವೆನುತ್ತಿರವಂತಿಗೆಜಾಜಿಮೊಲ್ಲೆಗಳ್ ॥
ಮಲ್ಲಿಗೆ ತಮ್ಮತಮ್ಮ ನಱುಗಂಪನೆ ಬೈತಿಡಲಿತ್ತವೋಲ್ ಮನ ।
ಕ್ಕಲ್ಲೆಸೆಗುಂ ಕದಂಬಮೆನಿಪ್ಪೋಗರಗಂಪೆಸೆದಿರ್ಪ ಚಂಪಕಂ ॥ ೨೧

ಕುಸುಮಂ ತೀವಿರೆ ಪೊರ್ದುಗುಂ ಮಧುಪಸಂಗಕ್ಲೇಶಮೊಂದಂತಮಂ ।
ಬಿಸುಟತ್ಯದ್ಭುತದಿಂ ಮೊದಲ್ತುದಿವರಂ ಕಾಯ್ಪಣ್ಗಳಂ ಪೇಱು ಕ ॥
ಣ್ಸೆದೊಪ್ಪಂ ಬಡೆದಿರ್ಪ ಬಕ್ಕೆವಲಸಂ ಮುಂ ಕೊಂಡು ಪದ್ಮೋದ್ಭವಂ ।
ರಸವಸ್ತುಪ್ರಕರಂಗಳಂ ಬಱಿಕದೇಂ ಮಾಡಲ್ ಮನಂದಂದನೋ ॥ ೨೨

ಪದೆದು ಸುಧಾಂಶು ರಾಹುಭಯದಿಂದಮವರ್ಗಂ ಮಡಗಿಟ್ಟನೀಬ್ಬ ಪೋ ।
ಗದ ತೆಱದಿಂ ಸಯಂಬಡೆದ ಪಚ್ಚೆಯ ಕುಪ್ಪಿಗೆಯೊಳ್ ಸುರಕ್ಷೆಯಿಂ ॥
ಬುದನಱಿದಿಂಬಿಸಿಂ ಮೆಱೆವ ಕೋಮಳಕಾಂತಿಯನಾಂತು ನಾಡೆ ಭೂ ।
ಜದೊಳೊಲೆದಾಡುತಿರ್ಪ ಪಸುರ್ಗಾಯ್ಗಳನೀಕ್ಷಿಸಿದಂ ಕುಮಾರಕಂ ॥ ೨೩

ತಳಿರ್ಗನೆಮೊಳ್ ಪೊರಳ್ದು ಸೊನೆವಿಂಡುಗಳೊಳ್ ನಸುನಾಂದು ಗಂಡುಗೋ
ಗಿಲೆಗಿಳಿತುಂಬಿಗಳ್ಗಿದು ತಂಕಣ ಗಾಳಿಗೆ ಕಂಪಿಸುತ್ತೆ ಪು ।
ಗಳನುಱೆ ನೂಂಕಿ ಚೈತ್ರವಿಟನೊಳ್ ವಿರಹಾತುರೆಯಾದ ಕಾಂತೆವೋಲ್ ।
ವಿಳಸಿತಮಾಗಿ ಮಾಮರದೊಳಿರ್ದುವು ಮಾವಿನ ಪಣ್ಗಳೋಳಿಗಳ್ ॥ ೨೪

ತನಿವದನಾಗಿ ಕೆಂಪನೊಳಕೊಂಡು ಸುಗಂಧಮನಾಂತು ತುಂಬಿಯೊ |
ಪ್ಪಿನಿರಸಮುಬ್ಬಿ ಸದ್ವಿಜಪರೀಕ್ಷಿತಮಲ್ಲದ ಮುನ್ನ ಪೀರ್ದು ಮಾ ||
ವಿನ ತನಿವಣ್ಗಳಂ ಸೊಬಗರಾವವರಾಗಳ್ ತಮ್ಮ ಕೂರ್ತ ಕಾ |
ಮಿನಿಯರ ಪೆಂಪುವೆತ್ತಧರಸೇವೆಯ ಭಾವನೆಯೊಳ್ ಮುಜುಂಗಿದರ್ || ೧೫

ಮತ್ತಮದು ವನದೇವತೆಯರ್ ವನಕೇಳಿಗೆ ವಂದ ಮೆಲ್ಲಡಿವಜ್ಜೆಗಳನ ಱಿಪುವ ಪಿಂಜರಿತಪರಾಗಪುಂಜದಿಂ, ಕಲಕಂಠಂಗಳೊಳೊಗೆವ ನಗೆಗಳಂ ಕ*ರ್ದುಂಕಿ ಸುರಿವ ಸೊನೆವೊನಲಿಂದಗ್ಗಳಮಾದ ಕೋಟ್ಕಸಱಿಂ, ಗಿಳಿವಿಂಡುಗಳ್ ಕಱಿವಣ್ಗಳಂ ಕ*ರ್ದುಂಕೆ ಇನಿದುಮೊಸರ್ವ ದಾಡಿಮೀರಸಂಗಳಿಂ, ಮೆಲ್ಲೆಲರ್ ತೀಡೆ ವಲ್ಲಿಗಳಿಂದೊಕ್ಕ ಮೊಲ್ಲೆಮಲ್ಲಿಗೆಯುರಲಿಂ, ಖಚರೀನಿಚಯಂ ಗಗನಮನಡರಲ್ ಬಱಲ್ಕೆಯುಂ ಕಳೆಯೆ ಪಟ್ಟಿರ್ದು ಪೋದ ಪಲ್ಲವದ ಪಾಸಿಕೆಗಳಿಂ, ಬಂಡುಂಡು ಮಂಡಳಿಸಿ ಝುಂಕಾರಂಗುಡುವ ಮಱಿಜಱಿಮೊಗಳಿಂ, ಕಂದರ್ಪನ ಬೇಹಿನಂತಂದು ಸುಱಿವ ಮಂದಮಾರುತನಿಂ, ಚೆಂದಂಬಡೆದಿರ್ದ ವನಮಂ ನೋಡುತ್ತುಂ ಬರೆ, ಅಲ್ಲಿ

ಮದನಂ ಮುಂ ಮರುಳಾಗಿ ಶಂಕರನ ಫಾಳಾಕ್ಷಾಗ್ನಿಗಂದೇಕೆ ಸಿ |
ಲ್ಕಿದನೀಮಾಮರದೊಳ್ಪುವೆತ್ತ ನೆೞಲೊಳ್ ನಿಂದಿರ್ದೊಡಾಕಿರ್ಚು ತ ||
ನ್ನಿ*ದಿರ್ವಂದಾಗಳ್ ಶೈತ್ಯಮಾಗಿ ಪದೆಪಿಂ ಮಂದಾನಿಲಂ ಚಂದ್ರಿಕಾ |
ಭ್ಯುದಯಂಬೋಲ್ ಶಿಖಿರೂಪಮಂ ತಳೆಯದೇ ಸಾಮೀಪ್ಯಸಂಪತ್ತಿಯಿಂ ||

ಎಂಬ ಮಹಿಮೆಗಳುಂಬಮಾದ ಬಂದು ಮಾಮರನ ನೆೞಲಂ ಕೊಂಡಾಡಿ ತತ್ಪಲ್ಲವಾಸನಮನಲಂಕರಿಸಿ ಪುಷ್ಪೋದ್ಭವನಿಂ ಪರಿಚರ್ಯೆಯಂ ಮಾಡಿಸಿಕೊಳುತಿರ್ಪಾಗಳ್,

ರಣಿತಂ ನೂಪುರಚಾಪಳಧ್ವನಿ ಕಳಾಪಾನೂನಸತ್ಕಿಂಕಿಣೀ |
ಕ್ವಣಿತಂ ಕುಂತಳಗಂಧಮೋಹಸುಖಯಾನೋನ್ಮತ್ತಭೃಂಗೀರವಂ ||
ಮಣಿಕೇಯೂರಸುಕಂಕಣಪ್ರಚುರನಾದಂ ಚಾರುಸಲ್ಲಾಪಭಾ |
ಷಣಶಬ್ದಂ ಧರಣೀಶ್ವರಂಗೆ ಮುದಮಾಗಲ್ ಕೇಳಲಾಯ್ತಾಕ್ಷಣಂ || ೧೭

ಅಂತಾಧ್ವನಿಯುಂ ಕೇಳ್ದಾದೆಸೆಯುಂ ಯುವರಾಜಂ ನೋಳ್ಪನಂ,

ಹಿಮಕೃತ್ಪಙ್ಕ್ತಿಯೊ ಕಾಮುಕಂಗಿಲ್ದಳೊ ರಥಾಂಗಶ್ರೇಣಿಯೋ ಕಾಮಬಾ |
ಣಮೊ ಪೇೞೆಂಬಿನಮಾಸ್ಯಕೋಮಳತೆಯಿಂ ಭೃಂಗಾಳಕಾನೀಕದಿಂ ||

ದಮುದುರ್ಗತ್ತುಂಗಕುಚಂಗಳಿಂ ಲಸದಪಾಂಗಜ್ಯೋತಿಯಿಂ ಚಿತ್ತವಿ |
ಭ್ರಮಮಂ ಸಾಲಿಡುತಾವನಕ್ಕೆ ಮುದದಿಂದೆಯ್ದಿತ್ತು ಕಾಂತಾಜನಂ || ೨೮

ಧ್ವನಿಯಂ ಕೋಗಿಲೆಗಳ್ಗೆ ಮೆಲ್ನುಡಿಗಳಂ ಕೀರಾಳಿಗಳ್ಗಿತ್ತು ಕಂ |
ಪನಮಂ ಕೋಮಲವಲ್ಲಿಗಳ್ಗೆ ಲಸಯಾನಪ್ರೌಢಿಯಂ ಹಂಸೆಗ ||
ಳ್ಗೆ ನವೀನಂ ಮಿಗೆ ನೋಟಮಂ ವನಮೃಗಕ್ಕಾನಂದಸೌಭಾಗ್ಯಗುಂ |
ಘನಮಂ ತದ್ವನದೇವಿಯರ್ಗೆ ಸಲಿಸುತ್ತೆಯ್ದಿತ್ತು ಕಾಂತಾಜನಂ || ೨೯

ಚಾಪಲದೃಷ್ಟಿಯಿಂ ಕೆಲವು ಶಾಖಿಗಳೊಳ್ ಕೆಲವಂಘ್ರಿಪಂಗಳೊಳ್ |
ತೊಪಿಱಿದುನ್ನತಸ್ತನದ ಸೋಂಕುಗಳಿಂ ಕೆಲವುಂ ಕುಜಂಗಳೊಳ್ ||
ನೂಪುರರಂಜಿತಾಂಘ್ರಿತಳಸಂಗಮದಿಂ ಕೆಲವುಂ ದ್ರುಮಂಗಳೊಳ್ ಪಿಕಾ |
ಳಾಪೆಯರೊಲ್ದು ಪಲ್ಲವಮನಿತ್ತೊಲವಿಂ ನಡೆತಂದರಟ್ಟಿಯಿಂ || ೩೦

ಅಗಲದ ಚಕ್ರಮಂ ಕಠಿನಮಲ್ಲದ ಮಾಣಿಕಮಂ ತೆರಳ್ಕೆಯಿಂ |
ಮುಗಿಯದ ಪದ್ಮಮಂ ಬೆಳಗುಗುಂದದ ಮಿಂಚುಗಳಂ ಪೊದಪ್ಪಿ ಸಂ ||
ಪಗೆಗರಿಯಲ್ಲದಾಅಡಿಗಳಂ ಸ್ಮರನೆಂಬ ವಿಧಾತ್ರನೀಗಳೀ |
ಕೆಗಳ ಶರೀರದೊಳ್ ಪಡೆದವೋಲ್ ಮೆಱೆದತ್ತಬಲಾಕದಂಬಕಂ || ೩೧

ಅಂತು ಮಱಿಮಿಂಚಿನ ತುಱುಗಲಂತೆಯುಂ, ಇಂದುಕಳೆಯ ಸಂದಣಿಯಂತೆಯುಂ, ಅರಲ ಸರಲ ಹೊರಳಿಯಂತೆಯುಂ, ಕುಡಿಲತೆಯ ಗಡಣದಂತೆಯುಂ, ಪಸುರಡಕೆಯ ಸಸಿಯಂತೆಯುಂ, ಚಂದ್ರಿಕೆಯ ಗಡಣದಂತೆಯುಂ, ಚಿತ್ತಜಪತಾಕೆಯ ಮೊತ್ತದಂತೆಯುಂ, ತೆಂಬೆಲರ ಬಂಬಲಂತೆಯುಂ, ವಸಂತನ ಪೊಸಬೀಡಿನಂತೆಯುಂ, ವನದೇವತೆಯ ಮನೆದೇವತೆಯಂತೆಯುಂ, ವಿಲಾಸದಿಂ ಬರ್ಪ ವಿಲಾಸಿನೀಜನದ ನಡುವೆ

ಮೇಲುದನೊಯ್ಯನೋಸರಿಸುತುಂ ಕುರುಳಂ ಬೆರಲಿಂದಮುರ್ಚುತುಂ |
ತೋಳ ವಿಲಾಸಮಂ ಮೆಱೆಯುತುಂ ಕಡೆಗಣ್ಬೆಳಗಂ ತುಱುಂಕುತುಂ ||
ಸೋಲಮನೀಯುತುಂ ವಿಟರೊಳೆಣ್ದೆಸೆಯೊಳ್ ಮುಡಿಗಂಪುಮೀಱುತುಂ |
ಲೀಲೆಯೊಳಂದವಂತಿವಧು ಬಂದಳನಂಗನಿಧಾನಮೆಂಬಿನಂ || ೩೨

ಮತ್ತಮವಳಪಾದಮಸ್ತಕರೂಪವರ್ಣನಮೆಂತೆಂದೊಡೆ:—

ಪೊಸಮುತ್ತಸಾಗುಪ್ಸ್ವ* ನವಶು |
ಕ್ತಿಸ್ತಂಪುಟಂ ಕಡಲ ವಿದ್ರುಮಂ ಸೋಂಕಲೊಡಂ ||
ನಸುಗೆಂಪುವೆತ್ತುಮೆಂಬಂ |
ತೆಸೆಗುಂ ನಖದೀಪ್ತಿ ಮೆಱೆವ ಪದಯುಗಮವಳಾ || ೩೩

ಮದನನ ಬಾಣನಿಷಂಗಂ |
ಸುದತಿಯ ಕಾಲ್ಪಿಡಿಮ ಪೆಂಸ್ತುವಡೆಯಲ್ ಬಂದಿ ||
ರ್ದುದೊ ಪೇೞೆಂಬ ವಿಳಾಸಾ |
ಸ್ಪದದಿಂ ಮೆಱೆದಿರ್ಪುವವಳ ಜಂಘಾಕಾಂಡಂ || ೩೪

ಕಾಮನ ನಿಳಯಕ್ಕೊಲವಿಂ |
ಸೋಮಂ ಶುಭಲಗ್ನದೊಳ್ ಪ್ರತಿಷ್ಠಿಸಿದ ಲಸ ||
ತ್ಕೋಮಳರಂಭಾಸ್ತಂಭನಿ |
ಕಾಮಮೆನಲ್ ಮೆಱೆವುವಾಕೆಯೂರುದ್ವಿತಯಂ || ೩೫

ಮದನಶಬರಾಸ್ತ್ರತತಿಗ |
ಳ್ಕದ ವಿಟಮೃಗಸಮಿತಿಯಡರ್ದು* ಬೆದುರ್ಕುವ* ಶೈಲಾ ||
ಗ್ರದ ತೆಱದಿನೊಪ್ಪುತಿರ್ಕುಂ |
ಸುದತಿಯ ಗುರುತರನಿತಂಬಮತ್ಯುನ್ನತಿಯಿಂ || ೩೬

ಮಡದಿಯ ಸೆಳ್ನಡು ತನ್ನಯ |
ಬಡತನದಿಂ ಹರಿಯ ಮಧ್ಯಮಂ ನಯದಿಂ ಕೀ ||
ಳ್ಪಡಿಸುತ್ತಿರ್ಪುದನಱಿದುಂ |
ಪಿಡಿಗೊಳಗಾಗಿರ್ಪುದೆಂಬುದದು ಪುಸಿಯಲ್ತೇ || ೩೭

ವಿಟರ ಚಳನಯನಶಫರಂ |
ಚಟುಲತೆಯಿಂ ತಿರುಗುತಿರ್ಪ ಲಾವಣ್ಯರಸೋ ||
ತ್ಕಟಕೂಪಮೆಂಬ ತೆಱದಿಂ |
ಕುಟಿಲಾಳಕಿಗೆಸೆದುದಲ್ತೆ ನಾಭೀಗರ್ತಂ || ೩೮

ನಾರಿ ನನೆವಿಲ್ಲ ನುಣ್ಪಿನ |
ನಾರಿಯನೊಳ್ದೀಗಳಂತು ಪಡೆದಪಳೆನೆ ಭೃಂ ||

ಗೀರುಚಿರರುಚಿಯಿನೆಸೆಗುಂ ।
ನಾರಿಯ ನಿಡುಬಾಸೆ ಕೋಮಳಚ್ಛವಿಯಿಂದಂ ॥ ೩೯
ಶಶಿಕಿರಣವನಾಯ್ದೊಯ್ದು ।
ಳ್ಪಸೆಯಲ್ ಪೋಣಿಸಿದ ತೆರದ ಮುಕ್ತಾಹಾರಂ ॥
ನಸುಸೋಂಕೆ ಮುಗಿದುಮೆಂಬಂ ।
ತೆಸೆಗುಂ ಕುಚಕಮಲಕುಟ್ಮಲಂ ಕೋಮಳೆಯಾ ॥ ೪೦
ಸಲ್ಲಲಿತವಿಮಲಸುಮನೋ ।
ವೆಲ್ಲರಿಯುಂ ತಳೆದು ಪದೆಪಿನಿಂ ಮೆಲ್ಲಲರಿಂ ॥
ದಲ್ಲಾಡುವ ಲತೆಗಳವೆನೆ ।
ಸೆಳ್ಳುಗುರಿಂದೆಸೆವುವವಳ ನಿಡುನಳತೋಳ್ಗಳ್ ॥ ೪೧
ಇಂಬಿನ ಕಂಬುಗ್ರೀವಮಿ ।
ದೆಂಬರ ಮಾತಿರ್ಕೆ ಮುಕ್ತಿಕಗ್ರೀವಂ ತಾ ॥
ನೆಂಬುಪಮೆವೆತ್ತು ಶೋಭಾ ।
ಡಂಬರಮಂ ಪಡೆದುದವಳ ಕೋಮಲಕಂಠಂ ॥ ೪೨
ಅನುರಾಗರಸವಿಲಾಸಿನಿ ।
ಯಿನಿಯನ ಮೇಲಾಯ್ವಯಲೆಂದು ತದ್ವದನನಿಕೇ ॥
ತನದ ಪ್ರೋಸಂತಿಲೊಳರ್ದಪ ।
ಳೆನೆ ಸತಿಯೊಳ್ದುಟಿಯ ಕೆಂಪು ರಂಜಿಸುತಿರ್ಕುಂ ॥ ೪೩
ವದನಸಿತಾಂಬುಜದೊಳ್ ಕೊಂ ।
ಕದಂತು ತರತರದ ಶೋಭೆಯಿಂದೊಪ್ಪುವ ವ ॥
ಜ್ರದ ಕೇಸರವೆಂಬುಪಮೆಗೆ ।
ಪದೆದುವೆನಲ್ ಮೆಱೆವುವವಳ ದಂತದ್ಯುತಿಗಳ್ ॥ ೪೪
ಕ್ಷೋಣಿಯನಲೆಯಲ್ ಸುಮನೋ ।
ಬಾಣಂ ಕುಸುಮಾಸ್ತ್ರವಿತತಿಯಂ ಮಸೆವ ಲಸ ॥
ಚ್ಛಾಣವೆನಲೆಸೆಯುತಿರ್ಕುಂ ।
ಮಾಣಿಕ್ಯಾಧರೆಯ ನುಣ್ಪುವೆತ್ತ ಕಪೋಲಂ ॥ ೪೫

ಪಱಿಮೆಗಳೆಂಜಲಿಸದ ಮು ।
ನ್ನಱಿದು ವಸಂತಂ ಸುಗಂಧಮಂ ಬೈತಿಟ್ಟಾ ॥
ನಱುಗಂಪಿನ ಕುಪ್ಪಿಗೆಯೆಂ ।
ಬೆಱಕಮನೊಡರಿಸುವುದವಳ ನಾಸಾಮುಕುಳಂ ॥ ೪೬

ಲಳನಾರತ್ನವಿದೆನಿಸಿ ।
ಪೊಳೆಯುಳ ಕಣ್ಬುಗುವುದರ್ಕೆ ಸಮಯಂಬಡೆಯಲ್ ॥
ನೆಲಸಿರ್ಪಂಜನರೇಖಾ ।
ವಿಳಾಸಮಂ ಪಡೆದುವವಳ ತಳ್ತವೆದುಱುಗಲ್ ॥ ೪೭

ಅಂಬುಜಪತ್ರಕ್ಕೆಱಗಿದ ।
ತುಂಬಿಯ ಮಱಿಯೆಂಬ ತೆಱದಿನಬ್ಜಾಕ್ಷಿಯ ಕ ॥
ಣ್ಗೆಂಬಾಗಿರ್ದುವು ಸರ್ವರ ।
ಕಣ್ಬಗೆ ಕರಿಯಾಲಿ ನೀಲಮಣಿಸನ್ನಿಭದಿಂ ॥ ೪೮

ತಿಂಗಳ ಬೆಳಗಿನ ರಸದಿನ ।
ನಂಗಂ ಪೂಗಣೆಯನುರ್ದಿ ಚಿತ್ರಿಸಿದನೊ ಕರ ॥
ಣಂಗಳ ಸೀಮೆಯೆನಲ್ ನಿಡು ।
ಗಂಗಳ ಬಿಳಿಯಾಲಿ ರಂಜಿಕುಂ ಕೋಮಳೆಯಾ ॥ ೪೯

ಎಲೆ ಚಂದ್ರವದನೆ ನಿನ್ನಯ ।
ಕೆಳೆಯನ ಬಲ್ಪಗೆಯ ಮಱಿಗಳೆಂದಬ್ಜಭವಂ ॥
ಮುಳಿದೊಪ್ಪಗೊಟ್ಟ ರಾಹುವಿ ।
ನೆಳಮಱಿಯೆನ*ಲಡರ್ದ ಪುರ್ಬು ರಂಜಿಪುವವಳಾ ॥

ಕಿವಿಯೆಂದು ಬರೆಯುತುಂ ಮೊದ ।
ಲ ವರ್ಣಮಂ ಮಱೆದು ಕಡೆಯ ವರ್ಣಮನಂಗೋ ॥
ದ್ಭವನತುರ್ ಬರೆದನೆಂಬಂ ।
ತೆ ವಿಳಾಸಂಬೆತ್ತುವವಳ ವರ್ಣಿತಕರ್ಣಂ ॥

ಅಲರ್ವಿ*ಲ್ಲನೋಜೆಯಿಂದಾ ।
ಲಲನೆಯ ಸಮುದಾಯಶೋಭೆಯನಿತಂ ಬರೆಯಲ್ ॥

ಕಲಿಯುಲಳವಟ್ಟ ಚಿತ್ರದ ।
ಫಲಕವೆನಲ್ ಪೊಳೆವುದೆಸೆವ ಪೆಱನೊಸಲವಳಾ ॥ ೫೨

ನಾಸಾಚಂಪಕಗಂಧ ।
ಶ್ವಾಸುರದಿಂದಱಿಯದೆಱಗಿಬೆಳ್ದುಂಬಿಗಳೊ ॥
ಲ್ವಾಸೊರ್ಕೆ ನೆಲಸಿದಪ್ರವೆನೆ ।
ದೇಸೆಯನಾಂತವಳ ಕುಟಿಲಕುಂತಳವೆಸೆಗುಂ ॥ ೫೩

ಲೇಸೆನಿಸುವಾಲಿಯುರಳಂ ।
ಸೂಸುವ ನವಮೇಘದಂತೆ ಕುಸುಮಾವಳಿಯಿಂ ॥
ಬಾಸಣಿಸಿ ಮೆಱೆವ ಸೋರ್ಮುಡಿ ।
ಭಾಸುರಮೆನಿಸಿರ್ದುದವಳ ಕಮಳಾನನೆಯಾ ॥ ೫೪

ತಿಲಕಂ ತಮಾಲಪತ್ರಾ ।
ವಲಿಚಿತ್ರಕಮೆಸೆವ ಬನದೊಳಿರಲಲ್ಲದೆ ಪೇೞ್ ॥
ತಿಲಕಂ ತಮಾಲಪತ್ರಾ ।
ವಲಿಚಿತ್ರಕಮಿವಳ್ಗೆ* ಮೆಱೆವುದಚ್ಚರಿಯಲ್ತೇ ॥ ೫೫

ಅದಲ್ಲದೆಯುಂ

ಕನ್ನೆಯ ಚರಣದ ಸೊಬಗಿಂ ।
ತೆನ್ನರ ಮಕುಟಕ್ಕೆ ಸಾರ್ವುದೆಂದುಲಿವಂತ ॥
ತ್ಯುನ್ನತಪದದೊಳ್ ಮೆಱೆಗುಂ ।
ರನ್ನದ ನೇವುರದ ದನಿ ಸರೋಜಾನನೆಯಾ ॥ ೫೬

ಮಾರನರಮನೆಯ ರತ್ನದ ।
ತೋರಣವೆಂಬಂತೆ ಮೆಱೆವ ನವರತ್ನದ ಕಿ ॥
ರ್ಮ್ಮೀರರುಚಿ ಮೆಱೆಯೆ ಮೇಖಲೆ ।
ನೀಱೆಯ ಸೆಳೆನಡುವಿನೊಳ್ ಮನಂಗೊಳಿಸಿರ್ಕುಂ ॥ ೫೭

ಸುಲಲಿತಬಾಹುಯುಗದ ಸು ।
ಖಾಲಿಂಗನದಿಂ ಮೃದುತ್ವಮಂ ಪಡೆದಪೆವೆಂ ॥

ದಾಲಿಂಗಿಸಿದರ್ ಮಣಿಯೆನೆ ।
ಬಾಲೆಯ ನವರತ್ನಕಂಕಣಾಂಗದಮಿರ್ಕುಂ ॥ ೫೮

ಇರುಳನಿತು ತಿಮಿರವುಂ ಸಂ ।
ಹರಿಸಲ್ಕೆ ಸಹಸ್ರಕರವನಾಂತಿರ್ಪಂ ಭಾ ॥
ಸ್ಕರನೆಂದು ನಗುವವೋಲ್ ಭಾ ।
ಸುರಕಾಂತಿಯಿನೆಸೆವುವವಳ ಮಣಿಕಟಕಂಗಳ್ ॥ ೫೯

ಅಲರಂಬಿಂಗಣಸಂ ಮಣಿ ।
ಕುಲದಿಂ ಸಮೆದಂಗಸಂ ಪದಂಗೊಳಿಸಿದವೋಲ್ ॥
ತಳತಳಿಸಿ ಪೊಳೆಯುತಿರ್ಕುಂ ।
ಲಲನೆಯ ಪೆಂಪೆಸೆವ ಬೆರಳ ಮಣಿಮುದ್ರಿಕೆಗಳ್ ॥ ೬೦

ಸಸಿಮೊಗದೊಳ್ ನಕ್ಷತ್ರಂ ।
ಮಿಸುಪುದು ಮರ್ಯಾದೆಯೆಂದು ಸಕಲಜನಂ ಭಾ ॥
ವಿಸುತಿರೆ ನುಣ್ಬೆಳಗಿಂ ರಂ ।
ಜಿಸುಗುಂ ನಾಸಾಗ್ರದಲ್ಲಿ ಮೂಕುತಿಯವಳಾ ॥ ೬೧

ಸಿಡುಗಣ್ಬೆಳಗಿನ ಪೂರಂ ।
ಕಡುಪಿಂ ಕಡೆಗೋಡಿವರಿಯೆ ಕಾಂಚಿದಾವುಂ ॥
ತಡೆಯಲ್ಕಿರದಡರ್ದೆನಲ್ ।
ಮಡದಿಗೆ ಚೆಲ್ವಾಯ್ತು ತೋರ ಮುತ್ತಿನ ಹಾರಂ ॥ ೬೨

ಸಕಲಾಭರಣದ್ಯುತಿಕ ।
ಣಿಕೆಯಾದುದೇನಚ್ಚರಿಯಾಯ್ತು ವದನಸರೋಜಂ ॥
ವಿಕಸಿತವಾದುದಱಿಂದಂ ।
ಬಕೊರ್ಮೆಯಿಂ ಮುತ್ತಿನೋಲೆಯೊಪ್ಪಿದುವವಳಾ ॥ ೬೩

ಅದಲ್ಲದೆಯುಂ

ನಡುವಿಂಗೊಳ್ನುಡಿ ದೇಹಕಾಂತಿಗಳಕಂ ವಕ್ತ್ರಕ್ಕೆ ಪಾದದ್ವಯಂ ।
ಮುಡಿಗುತ್ತುಂಗಕುಚಂ ಭುಜಕ್ಕೆ ನಯನಂ ದಂತಕ್ಕೆ ನೈತಂಬದಿ ॥

ಟ್ಟಿಡೆಗಳ್ ಮೆಲ್ಲುಡಿಗೊಪ್ಪುವೆತ್ತಧರಮಾರ್ಪಿಂ ಬಲ್ಲವರ್ ಭಾವಿಸಲ್ |
ಕಡುಪಿಂದಂಜವವೆಂದೊಡೇಪ್ರೊಗೆಟ್ಟುದೋ ರೂಪಂ ವಿಚಿತ್ರಾಂಗಿಯಾ ॥

ಮತ್ತಮಾಕೆ ವನದೇವತೆಯಂತೆ ಮಂಗಳಪ್ರಮೋದಪ್ರಸವಮುಖವಿಕಾಸಿತೆಯುಂ, ದಿನಲಕ್ಷ್ಮಿಯಂತೆ ಸುಭಗಮೂರ್ತಿವಿಳಾಸಿಯುಂ, ಮೇಘಸಮಯಮಯೂರಿಯಂತೆ ಕಳಾಪಕಾಂತಿಕಮನೀಯೆಯುಂ, ಸರೋವರದಂತೆ ಹಂಸಕವಿಜೃಂಭಿತಪದಪ್ರಚಾರೆಯುಂ, ರಾಮಕಟಕದಂತಂಗಜಬಾಹುಸಾರಂಭೆಯುಂ, ಯೋಗಿನಿಯಂತೆ ಮುಕ್ತಾಹಾರಪ್ರಭಾವೆಯುಂ, ವರ್ಷಾಗಮದಂತೆ ಪಯೋಧರಪರಿಪೂರ್ಣಯೌವನೆಯುಮೆನಿಸಿದೀಯುಂಜವ್ವನೆಯ ಸೌಭಾಗ್ಯರೂಪಾತಿಶಯಮತ್ಯಾಶ್ಚರ್ಯಮೆನಿಸಿದುದು. ಅಂತುಮಲ್ಲದೆಯುಂ,

ತರುಣತಮಾಲಕುಂತಳೆ ಮನೋಹರಕಲ್ಪಲತಾಂಗಿ ಪಲ್ಲವಾ |
ಧರೆ ಸರಸೀಜಕುಟ್ಮಳಕುಚದ್ವಯೆ ಕೋಕಿಲನಾದೆ ಹಂಸಮಂ ॥
ಧರಗತಿ ಚಂಪಕಾಮಳತನುಪ್ರಭೆ ಕೈರವನೇತ್ರೆ ದಿಟ್ಟಿಗ |
ಚ್ಚರಿವಡೆದಳ್ ಮನೋಭವನೃಪಾಲನ ಕೇಣಿಯ ತಾಣವೆಂಬಿನಂ ॥ ೬೫

ಅಂತು ಮನೋಹರಂಬಡೆದವಂತಿಸೌಂದರಿ ವನಮಧ್ಯದೊಳ್ ನಿಂದು

ತರತರದ ಪುಷ್ಪಲತಿಕೋ |
ತ್ಕರವಂ ನೋಡುತ್ತಮಂತಿಸೌಂದರಿ ವೇಣೀ ॥
ಭರವನುಗುರ್ಚಲ್ ಬಿಂಬಾ |
ಧರೆಯರ್ ಪುಷ್ಪಾಪಚಯಮನೆಸಗಿದರಾಗಳ್ ॥ ೬೬

ಈಲತೆಯೆನಗೀಲತೆ ನಿನ |
ಗೀಲತೆ ತನಗೆಂದು ಪೂತ ಲತೆಗಳ ಪೂವಂ ॥
ಬಾಲೆಯರೆಲ್ಲರ್ ಮುದದಿಂ |
ಕೇಳೀವನದಲ್ಲಿ ತಿಱಿಯುತಿರ್ದರಲಂಪಿಂ ॥ ೬೭

ಅಂತಾಕೆಯರೆಲ್ಲರುಂ ಪೂದಿಱಿವುದಂ ಕಂಡವಂತಿಸೌಂದರಿ

ಪರಿಮಳಪ ಸಂಪಗೆಯ ಕಂ |
ಪರಿ ಮಧುಕರವಿತತಿಗೆಂಬರದನಱಿವೆನೆನು ॥
ತ್ತರುಣಾಧರೆ ತಿಱಿದಳ್ ತ |
ತ್ತರುಣಾಳಿಸಮಾಳಕಕ್ಕೆ ಸಂಪಗೆಯರಲಂ ॥ ೬೮

ನನೆಜಾಜಿಯ ನರವಿಂದಾ ।
ನನೆ ಜಾಣೆಸೆಯಲ್ಕೆ ತಿಳಿದು ಕಾಮನೊಳಂಜಿ ಕಾ ॥
ಯ್ದನಿತೆ ನಡೆನೋಲ್ಪ್ಪ ವಿಟರಂ ।
ವನಿತೆಗೆ ಪೊಡವಡಿಪಳೆಸೆನ ತನ್ನಯ ಸೊಬಗಿಂ ॥

ಪಡ್ವಳಯ ಪೊಗಸಿ ಬರುತಿ ।
ಪಳ್ಪಡ್ವಳಯಂ ಸೋವಿ ತಿಳಿದಳಾಪಡ್ವಳಯ್ದೊಳ್ ॥
ದೊಡ್ಡಲರಂ ಕಾಂತೆ ಕನ ।
ಲ್ದೊಡ್ಡಲನಂಗಂ ವಿಟರ್ಕಳಂ ಗುಜಿಮಾಡಲ್ ॥ ೭೦

ಪುನ್ನಾಗದಲರ್ಗಳಂ ಪಿಂ ।
ಪುನ್ನಾಗವಿಳಾಸಗತಿಯುವೊಪ್ಪವವಂತಿಃ ॥
ಕನ್ನೆ ಗಣನೆಗಳ ಪೂವ ।
ಕ್ಕನ್ನೆಗವೆಂದೊಲ್ದು ತಿಳಿದಳೆಂದುಪವನದೊಳ್ ॥ ೭೧

ಬಿರಿಮುಗುಳೊಳ್ಳೆದುವೆಂದೆಂ ।
ಬಿರಿ ಮುದದಿಂ ಬನ್ನಿ ಕೊಯ್ವೆನೆಂದಖಿಳಕಲಾ ॥
ಧರೆಯರೊಡಗೂಡಿ ಬಿಂಬಾ ।
ಧರೆಯನುವಿಂ ತಿಳಿದಳೆಸೆವ ಮೊಲ್ಲೆಯ ಮುಗುಳಂ ॥ ೭೨

ಗುರುಕುಚೆ ತನ್ನಯ ತೊಡವಿಂ ।
ಗುರುಕುಚದೊಳ್ ಕೊಯ್ದುಳಂಗಜಂಗನುರಾಗಾಂ ॥
ಕುರವಗ್ಗಲಿಸಲ್ ನಲವಿಂ ।
ಕುರವಕದಲರಂ ವಿಳಾಸಿನೀಜನಸಹಿತಂ ॥ ೭೩

ಪಾದಪರಿಚರಿಯಶೋಕದ ।
ಪಾದಪದೊಳ್ ಕೊಯ್ದಳೊಪ್ಪೆ ಗೊಂಚಲ್ಮುಗಳಂ ॥
ಕಾದಲರನಂಗನಿದಿರೊಳ್ ।
ಕಾದಲವಳ್ ತನ್ನನೆನಗೆ ತನಗೆಂದಾಗಳ್ ॥ ೭೪

ಪಿಕಚಂಚನ್ನಾದೆ ಚಳಾ ।
ಪಿಕಚಂ ಮೊಜೆಯಲ್ಕೆ ಫಲವನಾಯ್ದಳ್ ವಿಟಜಿಃ ॥

ವಕುಳಂ ತಳೆಗೇಱುತ್ತಿರೆ ।
ವಕುಳಂಗಳೊಳಲರ್ಗಳಂ ಮುದಂ ಮಿಗೆ ವನದೊಳ್ ॥ ೭೫

ಕಾಮಂಗಸಮಶರಂ ಕಳಿ ।
ಕಾಮುಕುಳವೆನಿಪ್ಪಮುಗುಳಲರ್ಗಳನುತ್ತುಂ ॥
ರಾಮಾಂತರ್ಗತೆ ನಲಿದಾ ।
ರಾಮಾಂತದೊಳಾಯ್ದಳೊಲ್ದು ಮಲ್ಲಿಗೆಯಲರಂ ॥ ೭೬

ನೆರವೆನಗಾಯ್ತನ್ಯರನಿ ।
ನ್ನಿಱಿಪೆನದೇಕೆಂದು ಕಾಮನಲರಂಬೆಸೆಯಲ್ ॥
ತ್ರಿಭುವಂ ನೇವರಿಸಲ್ಕಾ ।
ತ್ರಿರುವಂತಿಗೆಯಲರನಬಲೆ ಬನದೊಳ್ ತಿಱಿದಳ್ ॥ ೭೭

ಪಾದರಿಯಲರ್ಗಳ ನಸಂಗಂ ।
ಪಾದರಿಸಲ್ ತಕ್ಕುದೆಂದು ಕೊಯ್ದಳ್ ದಿವ್ಯಾ ॥
ಮೋದವೆಸೆಯಲ್ಕೆ ನಿಜಸಂ ।
ಮೋದವೆನಲ್ ಕಾಂತೆ ತದ್ವನಾಂತದೊಳೊಲವಿಂ ॥ ೭೮

ಮುಡಿ ಜಗುಳೆಲ್ ಕುರುಳ್ ಕವಿಯೆ ತುಂಗಕುಚದ್ವಯವೊಡ್ಡುಗುಂದೆ ಕ ।
ರ್ಪಡರ್ದುರುಕಕ್ಷಪ್ರೋಷ್ಠೆಯಲರ್ಗಣ್ಮುಮುಗುಳೊಪ್ಪಮನೀಯೆ ಕಾಂಚಿಬಿ
ಟ್ಟುಡೆ ಸಡಿಲಲ್ ನಿತಂಬಯುಗಳಂ ನಡುಗಲ್ ವಳಿ ತೆಪ್ಪಿತೆಪ್ಪನೊ ।
ಳ್ನಡು ಸೆಡೆಯಲ್ಕೆ ಕೈನೆಗಪಿ ಪೂದಿಱಿದಳ್ ಸತಿ ಸಾಕುಮಾರ್ಯದಿಂ ॥ ೭೯

ಅಂತು ಪ್ರಷ್ಟಾಪಚಯಮನೆಸಗಿಯನಂತರಂ,

ನವಹಾರಂ ನೂಪುರಂ ಮೇಖಲೆ ಪೊಸಕಡಗಂ ಜಾಳೆಯಂ ಸೂಸಕಂ
ಚೆ । ಲ್ವವತಂಸಂ ಜಂಪೆಯಂ ಮುಕುತಿ ಚಳಕಿಗೆ ತೋಳ್ಬಂದಿ ಮಿಂ
ಚೋಲೆ ಕೊಪ್ಪೊಪ್ಪವಿನಂ ಗ್ರೈವೇಯಕಂ ಪೊಂಜರಿಗೆಯೆನಿಪುವಂ ಪೂಗ
ಳಿಂ ಮಾಡಿ ನಾನಾ । ಯುವತೀಸಂತಾನಕಂ ಸಿಂಗರಿಸೆ ಪದೆಪಿನಿಂ ಕಾಂತೆ
ಕಣ್ಗೆಡ್ಡಮಾದಳ್ ॥ ೮೦

ಅಂತು ಕೆಳದಿಯರುಂ ತಾನುಂ ಸಿಂಗರಂಗೆಯ್ದು ಅವಂತಿಸೌಂದರಿ ಬಾ
ಲಚಂದ್ರಿಕೆಯ ಪೆಗಲೊಳ್ ಕೆಯ್ಯನಿರಿಸಿ,

ಮಿಸುಗುವ ದುಂಡುಮಲ್ಲಿಗೆಯ ಹಾರಮನೊಪ್ಪಿರೆ ತಾಳ್ದು ಮಾಲತೀ ।
ಕುಸುಮದ ಜಾಳಿಯಿಂದಳೆದು ಮೊಲ್ಲೆಯ ಕಂಕಣಮಿಕ್ಕಿ ಚಂಪಕ ॥
ಪ್ರಸವದ ಕರ್ಣಪೂರಕಮನಾಂತು ವಿಲಾಸಮನೆಯ್ದೆ ಬೀಱುತ ।
ಚರ್ಚಿಸಿದ ಮನೋಜರಾಜನಧಿದೇವತೆ ಬರ್ಪವೊಲಾಕೆಯೊಪ್ಪಿದಳ್ ॥ ೮೧

ಅಂತು ಪದವಿನ್ಯಾಸದಿಂದುಪವನಮುಂ ಕೃತಾರ್ಥಂಮಾಡುತುಂ ಮಾಕಂದ ವೀಥಿಯೊಳ್ ಬರುತಿರ್ಪಾಗಳ್ ಮುಂದೆ,

ವಿಮಳಾರ್ಕಂ ವ್ಯೋಮಯಾತ್ರಾಗತಿಯಿನತಿಬಳಲ್ದತೆನೀ ಚೂತ
ಭೂಜಾ । ತಮಂಧೂದ್ಯಚ್ಛಾಯೆಯೊಳ್ ಕಾಯದೊಳೊದಗಿದ ಸಂತಾಪಮಂ
ಲೋಪಿಪ್ಪೊಂದು ॥ ದ್ಯುಮದಿಂ ಬಂದಿರ್ದನೋ ಪೇೞೆನಲವಯವಶೋಭಾಪ್ರ
ಭಾಜಾಳದಿಂ ವಿ । ಶ್ವಮನಸ್ಸಂಪ್ರೀತಿಯುಂ ಪೆರ್ಚಿಸುತನುನಯದಿಂದೊಪ್ಪಿ
ದಂ ರಾಜಪುತ್ರಂ ॥ ೮೨

ಅಂತಾಮಾಮರದ ನೆೞಲೊಳ್ ಮಂಗಳಾಕಾರನಾಗಿರ್ದ ಮಾನನಿಧಾನನನವಂತಿಸೌಂದರಿ ಭೋಂಕನೆ ದೂರದೊಳ್ ಕಂಡು,

ಸ್ತನಕಲಶಂಗಳಿಂದಧರಪಲ್ಲವದಿಂ ಪುಳಕಾಕ್ಷತಂಗಳಿಂ ।
ವಿನುತಕಪೋಲದರ್ಪಣದಿನೂರ್ಜಿತನೂಪುರಶಬ್ದವಾದ್ಯದಿಂ ॥
ಮನದನುರಾಗದಿಂ ನಯನದೀಧಿತಿಮಂಗಳರತ್ನದೀಪದಿಂ ।
ವನಿತೆ ವಿಳಾಸವೊಪ್ಪೆ ಯುವರಾಜನನಂದಿದಿ*ರ್ಗೊಂಡಳರ್ತಿಯಿಂ ॥ ೮೩

ಅಂತಿದಿರ್ಗೊಂಡು

ಎತ್ತಣಿನೆಯ್ದಿದಂ ಮದನನಿಕ್ಷುಧನುರ್ಲತೆಯುಂ ಪ್ರಸೂನಕಾ ।
ಯತ್ತಶರಂಗಳುಂ ಮಕರಕೇತನಮುಂ ರತಿಯುಂ ಸಮೀರನಂ ॥
ಮತ್ತೆ ವಸಂತನಂ ಮಱಸಿಯೆಂದು ಕರಂ ಬೆರಗಾಗಿ ನೋಡಿದಳ್ ।
ಚಿತ್ತದ ಸಂಭ್ರಮಂಬೆರಸು ಕಾಂತೆ ಕಲಾಧರನಂ ಕುಮಾರನಂ ॥ ೮೪

ಮದನನನನಂಗನೆಂಬವ ।
ರೆ*ದೆರ್ಬಲ್ಲಿದರಕ್ಕ ಬಲ್ಲರಿನ್ನಾದೊಡೆ ನೋ ॥
ಟ್ಪಿದು ಸುಭಗಮೂರ್ತಿಯುಂ ಕಾ ।
ಣದೆ ಕೇಳದೆ ಪುಸಿಯನುಸಿರುತಿರ್ಪುದು ಲೋಕಂ ॥ ೮೫

ಎಂದಾತನ ಸುಭಗತ್ವಮನೆವೆಯಿಕ್ಕದೆ ನೋಡುತ್ತಿರಲ್ ಬಾಲಚಂದ್ರಿಕೆ ರಾಜಪುತ್ರನಿದಿರ್ಗೆ ವಂದು

ಭಾವನನೀಕ್ಷಿಸಲೆಮ್ಮ ಬು ।
ದೇವಿಯರ್ಕೈತಂದರೆಂದು ತತ್ಕಾಮಿನಿ ತ ॥
ದ್ಭಾವವ ನಱಿಪಲ್ ಕೇಳ್ದಂ ।
ದಾವಧುವನಿದಿರ್ಗೊಳಲ್ಕೆ ಭೂಪತಿಯೆಟ್ದಂ ॥ ೮೬

ಅಂತೆೞ್ದು ಮುಟ್ಟೆವಂದವಂತಿಸೌಂದರಿಯಂ ಕಂಡು

ಮೆಲ್ಲಡಿಗಳ್ ನೊಂದಪುವೆ ।
ನ್ನಲ್ಲಿಗೆ ಬರ್ಪೊಂದು ಭಾಗ್ಯಮಾಯ್ತೆನಗೆಂದು ॥
ತ್ಫಲ್ಲಾಸ್ಯನಾಗಿ ಧರಣೀ ।
ವಲ್ಲಭನುಪಚರಿಸಲೆೞ್ದಿನಾಕೆಯನಾಗಳ್ ॥ ೮೭

ಅಂತು ತನಗಿದಿರೇೞ್ವ ಯುವರಾಜನನವಂತಿದೇವಿ ಕಂಡು

ನಸು ತಲೆವಾಗಿ ಕೆಯ್ಯು ಮಱಿಗೊಯ್ದು ಮುಖಾಬ್ಜಮನೊಯ್ಯನೊ
ಯ್ಯನೀ । ಕ್ಷಿಸಿ ಕಡೆಗಣ್ಣಳಿಂ ತಡತಡಂ ಮಿಗೆ ಮೆಲ್ಲನಡಿಯಿಂದಿಳೇಶ ಭಾ ॥
ವಿಸದಿದಿರೇೞ್ದಪಿರ್ ಕೆಳದಿಯಂ ಪ್ರತಿಮಾಡಿಯೆನುತ್ತವಂತಿ ಮ ।
ನ್ನಿಸಿ ಮೃದುಪಲ್ಲವಾಸನದೊಳೊಪ್ಪಿರೆ ಕುಳ್ಳಿರವೇೞ್ದಳಾತನಂ ॥ ೮೮

ಅಂತು ಕುಳ್ಳಿರಲ್ವೇೞ್ದು ಮತ್ತಂ

ವನಿತೆಯರೆಲ್ಲರೊಳ್ ಸುಕೃತಮಂ ಮಿಗೆ ಮಾಡಿದಳಾವಳೆನ್ನವೋಲ್ ।
ಮನಸಿಜಮೂರ್ತಿಯಂ ಸುಭಗನಂ ಮೃದುಕೋಮಲಕಾಯನಂ ಪ್ರಸ ॥
ನ್ನನನಭಿರಾಮನಂ ಪಡೆದು ಕಾಣ್ಬನಿತರ್ಕೆ ಸಮಂತಿದೆಲ್ಲಮೊ ।
ಳ್ಪಿನ ಕಣಿ ಬಾಲಚಂದ್ರಿಕೆಯ ಕಾರಣದಿಂ ದೊರೆದತ್ತು ನಿಶ್ಚಯಂ ॥ ೮೯

ಎಂದು ಮತ್ತಂ ಬಾಲಚಂದ್ರಿಕೆಯೊಳಿಂತೆಂದಳ್—

ಅನುನಯಮಪ್ಪ ಚೆಲ್ವ ಪರೆಯಂ ಹರೆಯಕ್ಕಳವಟ್ಟ ರೂಪು ರೂ ।
ಪಿನ ಪೊಸದೇಸೆಗೊಪ್ಪುವ ಗುಣಂ ಗುಣಮಂ ಮಿಗುತಿರ್ಪ ನೂತ್ನಸ ॥
ದ್ವಿನಯಮನಾರತಂ ವಿನಯಮಂ ಕೆಳೆಗೊಳ್ವ ಮೃದೂಕ್ತಿ ರಾಜಪು ।
ತ್ರನೊಳೆಸೆದಿರ್ಪನಂ ಕೆಳೆಯರಲ್ಲದರಾರೊ ಸರೋರುಹೇಕ್ಷಣೇ ॥ ೯೦

ಎಂದು ನುಡಿಯುತ್ತಿರ್ಪನ್ನೆಗಂ,

ಲೇಸಿಂಗೆ ವಿಘ್ನಸಂತತಿ ।
ಯಾಸುರಮೆನಿಸಿರ್ದುದಲ್ತೆ ಕರ್ಣಕಠೋರಂ ॥
ತ್ರಾಸಕರಂ ಘನದುಃಖಾ ।
ವಾಸಂ ಮಿಗೆ ಕೇಳಲಾಯ್ತು ಶಂಖಧ್ವಾನಂ ॥ ೯೧

ಆ ಶಂಖಧ್ವನಿಯುಂ ಕೇಳ್ದು ಕೆಳದಿಯರ್— ಅವಂತೀಶ್ವರನಾರೋಗಣೆಗೆ ಕುಳ್ಳಿರ್ಪ ಸಮಯಮಾಯ್ತು, ಅಕ್ಕ, ನಿನ್ನ ನಿನ್ನೆಗಮುಱಿಸುತಿರ್ಪರೇಕೆ ಪೋಪಮೆಂದನುವಿಸಲೆಂತಾನುಂ

ಮನಮುಂ ಚೈತನ್ಯಮುಂ ಚಿತ್ತಮನೆಸಪ ಸಮಸ್ತೇಂದ್ರಿಯವ್ಯಾಪ್ತಿಯುಂ
ಭಾ । ವನೆಯುಂ ತಳ್ತಿರ್ದಹಂಕಾರಮನಱಿವನಿತಂ ಬುದ್ಧಿಯುಂ ಕೂರ್ತು
ತದ್ಭೊ ॥ ಪನ ಕೈಗಂಬೊಪ್ಪುಗೊಟ್ಟಾಳಿಯರನುವಿಸಲೆಂತಾನುಮಲ್ಲಿಂ ತಳ್ವ
ರ್ದಂ । ಗನೆ ಪೋಗುತ್ತೊಪ್ಪಿದಳ್ ಲೆಪ್ಪದ ಕರುವಿನಪೋಲ್ ಮೂರ್ತಿ
ವೈಚಿತ್ರ್ಯದಿಂದಂ ॥ ೯೨

ಅಂತಾಕೆಯತ್ತಲ್ ಪೋದಳ್. ಇತ್ತಲರಸಂ ಪುಷ್ಪೋದ್ಭವನ ಮೊಗಮಂ ನೋಡಿ

ಅಲರಂಬಾಕೆಯ ಚೆಂದದಿಂ ಸುಜಿದುದೋ ಮಿಂಚಂಗನಾಭಂಗಿಯಿಂ ।
ನೆಲಸಿತ್ತೋ ತ್ರಿಜಗನ್ಮನೋಮಯಸುಖಂ ಸ್ತ್ರೀವೇಷದಿಂ ಬಂದು ಸಂ ॥
ಚಲಿಸಿತ್ತೋ ಮಲಯಾನಿಲಂ ಸತಿಯ ರೂಪಂ ತಾಳ್ದುದೋ ಕಾಮಿನೀ ।
ಛಲದಿಂ ಚಂದ್ರಿಕೆ ಮೂರ್ತಿವೆತ್ತುದೊ ದಿಟಂ ಪೇಳೆಂದನಾಭೂಭುಜಂ ॥ ೯೩

ಅದಲ್ಲದೆಯುಂ

ಮಲಯಸಮೀರನೊಲ್ದು ಪಡೆದಂ ಮದನಂ ಪೊರೆದಂ ಸುಧಾಕರಂ ।
ತಳಿರಡಿ ರಂಜಿಸಲ್ ನಡೆಪಿದಂ ರತಿ ತನ್ನ ವಿಳಾಸದೇಳ್ಗೆಯುಂ ॥
ನಲವಿನೊಳಿತ್ತಳೊಲ್ದು ಮಧು ಮೆಲ್ನುಡಿಯುಂ ಕಲಿಸಿಟ್ಟನಲ್ಲದಂ ।
ದೆಳೆಯಳ ಸೌಕುಮಾರ್ಯಮಿನಿತಪ್ಪುದೆ ಭೂಮಿಯೊಳೆಂದನಾನೃಪಂ ॥ ೯೪

ಪ್ರಿಯ ಕೇಳ್ ಚಿತ್ತವಶೀಕೃತಂ ವಿಮಳಕಾಯಸ್ತಂಭನಂ ಲೋಚನೇಂ ।
ದ್ರಿಯಸಮ್ಮೋಹನನುತ್ಯಪೂರ್ವಮೃದುವಾಕ್ಯೋಚ್ಚಾಟನಂ ದುಷ್ಟಹೃ ॥

ಕ್ಷಯವಿದ್ವೇಷಣವಿಾಗಳಾಯ್ತು ನಗವಳ್ ಮೊಯ್ದೊಱಲಿನ್ನೇನನಾ ।
ಕೆಯ ಮಂತ್ರಂ ಕಡೆಯಲ್ಲಿ ಮಾಣ್ಪುದದನಿನ್ನಾರ್ ಬಲ್ಲವರ್ ಬಲ್ಲಿದರ್ ॥ ೯೫

ಇಂದುನಿಭಾಸ್ಯೆ ಪೋಗಲೆನಗಾವ್ರದ ತಣ್ಪಿರಿಯಾಯ್ತು ಕಾಮದೇ ।
ವಂ ದಯೆಗೆಟ್ಟನೆಯ್ದೆ ಪಗೆಯಾಯ್ತುಲರಾದರ್ ಪಿಕಂ ಕನಲ್ದುದಾ ॥
ಚಂದನಮುಷ್ಣಮಾದುದಿಳೆ ಕಾದಪ್ರದೇಶ್ದಿಸೆ ಕತ್ತಲಿಟ್ಟುದಿಂ ।
ತೊಂದಡಸಿದೊರ್ಡೇಜಿಡಸಿತೆಂಬುದನೆನ್ನೊಳೆ ಕಂಡೆನೀಕ್ಷಣಂ ॥ ೯೬

ಎಂದರಸಂಗೆ ಕಾಮಸಂತಾಪಂ ಪ್ರವೇಶಿಸಿದಾಗಳ್

ಖಗತತಿ ಗೂಡನೈದೆ ಪೊಣರ್ವಕ್ಕಿಗಳಕ್ಕೆಯನೈದಲಂಬುಜಂ ।
ದುಗುಡಮನೈಗಲುತ್ಪಳನಿ ಹಾಸ್ಯಮನೈದಲೊಱಲ್ದು ಪಾಣ್ಬರೊ ॥
ಯ್ಯಗೆ ನಿಜಸೂಚಿತಗ್ರಹಮನೈದೆ ವಿಯೋಗಿಗಳಂಗಜಾಸ್ತ್ರದ ।
ಗ್ನಿಗೆ ಗುಱಿಯಾಗಲೈದೆ ಪಗೆಪಿಂದಿನನೈದಿದನಸ್ತಶೈಲಮಂ ॥ ೯೭

ಪಗಲತಿಮಿತ್ರನೊಳ್ ಸುರತಗೋಷ್ಠಿಕರಂ ದ್ವಿಜರಾಜಪಾದದೊಳ್ ।
ಪಗೆ ಮಧುಪಪ್ರಸಂಗಮುಸಿತಂ ಜಡಸಂಗತಿ ಕಂಟಕತ್ವಮಂ ॥
ಬಗೆಣಿತದುಗುರ್ಣಕ್ಕೆ ನೆಲೆಯ್ದಾದ ಸರೋಜಿನಿಕೆಟ್ಟಳಿಂದಣಂ ।
ನಗುವಪ್ರೋಲೇನರಲ್ದುಪ್ರೊ ಸುಧಾಕರಸಂಗಮುಗಲ್ಲಸಿತೋತ್ಪಲಂ ವಲಂ ॥

ಮಿಡುಕುವ ಗಂಟಲಿರ್ದೆಸೆಗೆ ಜೋಲ್ದು ಮರಲ್ಬ ದೆಱಂಕೆ ಬಿಟ್ಟ ಬಾ ।
ಯಡಸಿದ ಕಣ್ಣ ನೀರ್ಗೆಳರೆಮುಚ್ಚಿದ ಕಣ್ ಬಿಸುಸುಯ್ದು ಸುಯ್ಲಿನಿಂ ॥
ಕಡುಬಡವಾದ ತಮ್ಮ ತನು ರಂಜಿಸೆ ಕೋಕಕುಳಂ ವಿಯೋಗದಿಂ ।
ಮಡದಿಯನೆಲ್ಲಿಯುಂ ತಿರುಗಿ ಕಾಣದೆ ನಿಂದುದಬೊಂದು ತಾಣದೊಳ್ ॥ ೯೯

ನೀಱೆಯನಂಬುಜದೊಳ್ ನೀ ।
ರೇಱಿದ ನೆಯ್ದಿಲ್ಗಳೊಳ್ ಕೊಳಂಗಳ ತಡಿಯೊಳ್ ॥
ಪಾಱಿ ಪರಿದಱಸಿ ಕಡುಬಾ ।
ಯ್ದಾಱುತ್ತಿರ್ದತ್ತು ಜಾತಶೋಕಂ ಕೋಕಂ ॥ ೧೦೦

ನಳಿನೀಬೀಜಮನೊಲ್ಲದೆ ।
ಕುಳಿರ್ವಕ್ಕಿಪ ಎಂಬ ದನಿಗಳೊಳ್ ಸಲ್ಲದೆ ಪೂ ॥

ಗೊಳದೊಳ್ ನಿಲ್ಲದೆ ವಿರಹಾ ।
ನಿಳನಿಂ ತಿರುಗಿತ್ತು ಚಕ್ರವಾಕಾನೀಕಂ ॥ ೬೦೧

ಅಂತು ಸೂರ್ಯಾಸ್ತಮಯಮಾಗಲೊಡಂ,

ಚಿತ್ತಜನೆಂಬ ಘಟ್ಟಿವಳನೊಪ್ಪುವ ಚಂದನಚರ್ಚೆಯಿಕ್ಕಿದಂ ।
ಕತ್ತುರಿಯುಂತೆಯುಂ ಘುಸೃಣಕೇಸರಸಂ ಶಶಿಕಾಂತಶಾಣದೊಳ್ ॥
ಬಿತ್ತರದಿಂದೆನಲ್ಕೆ ನಸುನುಣ್ಣಟಿಯುಂ ಕಿಸುಸಂಜೆಗೆಂಪನಾ ।
ಳ್ದತ್ತುದಯಾದ್ರಿಮಸ್ತಕದೊಳುಣ್ಮುವ ಪೂರ್ಣಶಶಾಂಕಮಂಡಳಂ ॥ ೧೦೨

ಕೆಂದಳದೊರ್ಂಗಲಾಗೆ ಕಿಸುಸಂಜೆ ಸಿತಾಕ್ಷತೆಯಾಗೆ ತಾರಕಾ ।
ವೃಂದವಲಂಕೆ ರಂಜಿಪುದಯಾದ್ರಿಕನತ್ಕಲಶಾಗ್ರದಲ್ಲಿ ಪೆಂ ॥
ಪಿಂ ದೆಸೆವೆಣ್ಣಳರ್ಚಿಸಿದ ಕಾಮನ ಗೆಲ್ಪೆಯ ರತ್ನದರ್ಪಣ ।
ಕ್ಕಂದೆಣೆಯಾಯ್ತು ಪರ್ಬಿದ ತನುಃಪರಿಖಂಡನವಿಂದುಮಂಡಲಂ ॥ ೧೦೩

ಸತತಂ ಸದ್ಯಾಗ್ನಿನೇತ್ರಂ ಸುರಗಿರಿವೃಷಭಾರೋಹಣಂ ತಾರಕಾದಿ ।
ಧೃತಿಗಂಗಾಮಸ್ತಕಂ ಲಾಂಛನವಿಷಸಹಿತಂ ಪೂರ್ವದಿಕ್ಪಾರ್ವತೀಸಂ ॥
ಯುತನುದ್ಯದ್ದಿವ್ಯಟ್ಟಮೋಭಂಜಕನಭಿನವಶೀತಾಂಶುಜೂಟೋತ್ತಮಾಂಗಾ ।
ವೃತಹಾಸಂ ಪರ್ವಿದಂತೇನೆಸೆದುದೊ ಪರ್ಪಿಂ ಕೌಮುದೀಶ್ರೀವಿಲಾಸಂ ॥

ಕಿಸುಸಂಜೆ ಪಿಡಿದ ಜವನಿಕೆ ।
ಮಿಸುಗುವ ತಾರಾಳಿ ಪರೆದ ಪುಷ್ಪಾಂಜಲಿಯಾ ॥
ಗಸಮಸೆವ ರಂಗಮಾಗಲ್ ।
ಶಶಿಪ್ರಭಾನಾಟ್ಯಮೇಂ ಮನಂಗೊಳಿಸಿದುದೋ ॥ ೧೦೫

ಅಂತಳುಂಬಮಾದ ಕೌಮುದೀವಿಳಾಸದೊಳ್ ರಾಜವಾಹನಂ ಕಾಮಪರವಶನಾಗಿ

ಇನ್ನೊರ್ಮೆಯುಮೆರ್ಪಳೋ ಬಾಲೆಳೆ ಬನಕೆನುತುಂ ಸುಯ್ವ ಸಂತಾಪದಿಂದಂ । ತನ್ನಂಗಂ ಕಾದು ಕಾಮಜ್ವರಮೊಗೆತರೆ ಬೆಂಡಾಗಿಯಾಹಾರಮಂ ಬಿ ॥ ಟ್ಟೆನ್ನೊಳ್ ಮಾತೇಕೆನುತ್ತುಂ ನುಡಿಯನುಟಿದು ದಿಗ್ಭ್ರಾಂತಿ ಕೈಕೊಂಡು ಕಾಮಾ । ಸ್ತ್ರಾನ್ನಟ್ಟಿತ್ತಂದು ಮೂರ್ಛಾಗತಿಗೆ ತನುವನೊಲ್ದಿತ್ತನಾರಾಜಪುತ್ರಂ ॥ ೧೦೬

ಅಂತು ಮೂರ್ಛೆಗೊಳಗಾದುದಂ ಪುಷ್ಪೋದ್ಭವಂ ಕಂಡು

ಪಲ್ಲವತಲ್ಪದೊಳ್ ಮಲಯಜದ್ರವಮಂ ತಳಿದುರ್ವರೇಶನಂ ।
ಮೆಲ್ಲನೆ ಸೈತು ಕುಳ್ಳಿರಿಸಿ ಕೋಮಳಬಾಳಮೃಣಾಳನಾಳಮಂ ॥
ಮೆಲ್ಲೆ*ರ್ದೆಯೊಳ್ ಪದಂಗೊಳಿಸಿಯುತ್ಪಲಪತ್ರದೊಳೊಲ್ದು ಬೀಸಿಯು ।
ತ್ಫುಲ್ಲಶರಾಗ್ನಿಯಂ ತವಿಸುವುಜ್ಜುಗಮಂ ತಳೆದಂ ಮನಃಪ್ರಿಯಂ ॥ ೧೦೭.

ಮತ್ತಂ ಪಲ್ಲವದ ಪಾಸಿಕೆಯಿಂ, ಪನಿನೀರ ತುಷಾರದಿಂ, ಲಾಮಂಚದ ಬಿಜ್ಜಣಿಗೆಯಿಂ, ಮೃಣಾಳವಲಯಂಗಳಿಂ, ಮಲಯೋದ್ಭವದ ಪಂಕದಿಂ, ಸೇವಂತಿಗೆಯ ಸೌರಭ್ಯದಿಂ, ಕಲ್ಹಾರದ ಕಂಠಿಕೆಯಿಂ, ಕುಸುಮತತಿಯ ಮಕರಂದದಿಂ, ಕರ್ಪೂರಪರಾಗದಿಂ, ನೀರಜದ ಕೇಸರದಿಂ, ಪೊಂಬಾಳೆಯ ತಿರಿದಾನದಿಂ, ಪಾದರಿಯ ಪರ್ಯಂಕದಿಂ, ಅಶೋಕದ ಪೊಸದಳಿರಿಂ, ಶಿಶಿರೋಪಚಾರಮಂ ಮಾಡುತ್ತುಮಿರೆ

ಯತಿಗಳ ಹೃತ್ಸರೋಜಮುರಳಲ್ ಮಿಗೆ ಕೌಶಿಕಲೋಚನೋತ್ಪಲೋ ।
ನ್ನತಿ ಮುಗಿಯಲ್ ಜಗಜ್ಜನದ ಜಾಡ್ಯತಮಂ ಬಿಱಿತೋಡೆ ಸತ್ಕವಿ ॥
ಪ್ರತತಿಸುತಿಪ್ರಕಾಶಕಿರಣಂ ಮಿಗೆ ಸಜ್ಜನಚಕ್ರವಾಕದಾ ।
ಯತಿ ಸುಖಮಪ್ಪಲಂದುದಯಶೈಲಮನೇಱಿದನಂಬುಜಪ್ರಿಯಂ ॥ ೧೦೮

ಅಂತು ಸೂರ್ಯೋದಯಮಾಗಲೊಡಂ ರಾಜವಾಹನನೆಂತಾನುಂ ಸಂತೈಸಿಕೊಂಡು ಮೆಲ್ಲನೆದ್ದು ಕುಳ್ಳಿರ್ದು ಪುಷ್ಪೋದ್ಭವನೊಳವಂತಿಸೌಂದರಿಯ ರೂಪಾತಿಶಯಮಂ ಬಣ್ಣಿಸಿ ಕಾಮನ ಪಕ್ಷಪಾತಮಂ ನಿಂದಿಸಿ ಚಿಂತಿಸುತ್ತಿರ್ಪಾಗಳ್

ಉಗುರಿಂ ಕೀಱಿಟ್ಟ ಗಂಧಂ ನೊಸಲ ವಿಮಲಬದ್ಧಾಕ್ಷತಂ ಕುಂಡಲಂ ಶಾ ।
ವ್ರುಗೆ ತೋಳೊಳ್ ರಕ್ಷೆ ನುಣ್ಪಿಕ್ಕಿದ ಮುಡಿ ಸುಲಿಪಲ್ ಕೈಯ್ಯ ಕುಂಚಂ ಕ
ರಂ ಸೋ ॥ ಜೆಗಮೊಂಬಂತೊಪ್ಪೆ ಮತ್ತೊಯ್ಯನೆ ಪದವಿಡುತುಂ ಸಿಂಗರಂ
ದೋಱುತ್ತುಂ ದಿ । ಟ್ಟಗೆ ಮಾಯಾಜಾಲಮಂ ಬೀಸುತುಮನುನಯದಿಂ
ದೊರ್ವ ಮಾಯಾವಿ ಬಂಗಂ ॥ ೧೦೯

ಮತ್ತಂ

ತೊಳಗುವ ಮಿಂಚುವಲ್ ಪಣೆಯ ಟಕ್ಕಿನ ಬೊಟ್ಟು ನಿಮಿರ್ದ ವೇಣಿಬ್ಬೈ |
ತಲೆಗಳವಟ್ಟು ಸಿಂದುರಮುಳಂಕೆಯೊಳೆಚ್ಚಿದ ಕಜ್ಜಳಂ ತಳ ||
ತ್ತಳಿಸುವ ಶಂಖದೋಲೆ ಕುಚದೊಡ್ಡಿನ ಮೇಲುದು ನೀಳ್ದ ಸೆಳ್ಳುಗುರ್ |
ಚಲನಯನಂಗಳೊಪ್ಪೆ ನಟನಂಗೆಯೆ ಪಿಂದನೆ ಬಂದನಾಕ್ಷಣಂ || ೧೧೦

ಎಡಗಾಲ ತೊಡರ ಬಾವುಲಿ |
ನಡೆಗೆಸೆವ ವಿಡಾಯಿ ಜಗಮನಂಗೆಯ್ಯೊಳ್ ನೋ ||
ಟ್ಪೊಡೆ ತೋರ್ಪೆನೆಂಬ ನುಡಿ ನೇ |
ರ್ಪಡೆದೊಪ್ಪಿರಲಿಂದ್ರಜಾಲಿಗಂ ಮಿಗೆ ಬಂದಂ || ೧೧೧

ಅಂತದ್ಭುತಾಕಾರದಿಂದೊರ್ಬನಿಂದ್ರಜಾಲಿಗಂ ಬಂದು ರಾಜವಾಹನನಂ ಕಂಡು

ತೇಜೋಮಯನಂ ಲಕ್ಷಣ |
ಪೂಜಿತನಂ ಸಕಲಗುಣಗಣಾಲಂಕೃತನಂ ||
ರಾಜೀವನೇತ್ರನಂ ಯುವ |
ರಾಜನನಾಧೂರ್ತನತಿಶಯಂ ಮಿಗೆ ಪೊಗೞ್ದಂ* || ೧೧೨

ಅಂತು ಪೊಗೞ್ದು ಕೊಂಡಾಡಿದಿಂದ್ರಜಾಲಿಗನಂ ಮೃದುಸಂಭಾಷಣದಿಂ ಮನ್ನಿಸಿ ಯುವರಾಜಂ ಕುಳ್ಳಿರಲ್ವೇೞ್ದುದುಂ,

ಚಿತ್ತವಧಾರು ರಾಜಪರಮೇಶ್ವರ ಲೋಕದೊಳುಳ್ಳ ಸೋಜಿಗಂ |
ಬಿತ್ತರವಾಗಲೆನ್ನ ಹರಿಮೇಖಲವಿದ್ಯಮನಿಲ್ಲಿ ತೋರ್ಪೆನೊ ||
ಲ್ದಿತ್ತುದೆ ಕೋಟಿ ದೇವ ಪರಿಭಾವಿಪುದೆಂದೊಸೆದಿಂದ್ರಜಾಲಿಗಂ |
ಬಿತ್ತದ ಕಾವಿನಿಂದೆಸೆವ ಕುಂಚಮನೊಯ್ಯನೆ ನೀವ್ರತಿರ್ಪಿನಂ || ೧೧೩

ಜನಪತಿಯಿಂದ್ರಜಾಲಿಗನ ವಿದ್ಯೆಗೆ ಚಿತ್ತಮನೀಯದಾತನೊ |
ಳ್ಪಿನ ಮೃದುಚಾಟುವಾಕ್ಯತತಿಯುಂ ಮಿಗೆ ಕೇಳದೆ ಸೋಪಚಾರದಿಂ ||
ವಿನಯಮನಾತನೊಳ್ ಮೆಱೆವುದರ್ಕೆ ಮನಂಬುಗದಿರ್ದನೆಂದೊಡೇ |
ಕೆನಲತಿದುಃಖಿತೇ ಮನಸಿ ಸರ್ವಮಸಹ್ಯಮದೆಂಬ ಕಾರಣಂ || ೧೧೪

ಅಂತಿರ್ದು ಮತ್ತಂ

ಎರೆವರ್ ತವರ್ಕ್ಕೆಯು ಬಡತನ ।
ದಿರವಿಂಗೆ ತೊಟಿಲ್ವರಲ್ಲದವರ್ಗಳ್ ಪುತ್ತಿ ॥
ಲ್ಲರ ಸುಖದುಃಖದ ಹದನಂ ।
ಪರಿಕಿಸಿದೊಡೆ ಸಂಪುದಂ ಧರಿತ್ರೀತಳದೊಳ್ ॥ ೧೧೫

ತೊಳತೊಳತೊಳಗುವ ಮುಕ್ತಾ ।
ವಳಿಯಿಂ ಮಾಣಿಕದಿನಿಳಗೆ ರಂಜಿಸುವೇಕಾ ॥
ವಳಿಯುಂ ಮಾಯಾವಿಗೆ ಭೂ ।
ತಳನಾಥಂ ಕೊಟ್ಟನವನ ಬಡತನನುಡಗಲ್ ॥ ೧೧೬

ಅಂತು ಕುಡಲೊಡಂ,

ಅರರೇ! ದಾನವಿನೋದಿ ಜಾಗು! ಭಲರೇ! ಸನ್ಮಾನಮಾಂಧಾತ ಭೂ
ಪುರೆ! ವಿದ್ವಜ್ಜನಕಲ್ಪವೃಕ್ಷ ಮುರುಪ್ಪೂತ್ತು! ಖ್ಯಾತ ಸಿಧೂರ್ತ ಖೇ ॥
ಚರ ಮಾಮಾ! ಕಲಿಕಾಲಕರ್ಣ ಎನುತುಂ ಮೆಯ್ವೆಚಿ ತಜ್ಜಾಲಿಕಂ ।
ಧರಣೀವಲ್ಲಭನಂ ಪೊಗಟ್ದನೊಲವಿಂ ಸಂತೋಷಮೇಗೆಯ್ದುದೋ ॥ ೧೧೭

ಅಂತು ಪೊಗಟ್ದು ಮುಗುಳ್ದರಸನ ಮೊಗಮಂ ನೋಡಿ ಇಂದ್ರಜಾ
ಗನಿಂತೆಂದಂ:—

ದೇವರ ಮೊಗದೊಳ್ ಚಿಂತಾ ।
ಭಾವಂ ನೆಲೆಗೊಂಡು ತೋಱುವಪ್ಪುದೆನ್ಗೊಳದ ॥
ಕರ್ಪುದು ಕಾರಣಮೆಂಬುದ ।
ನೋವದೆ ಬೆಸಸಲ್ಕೆವೇಟ್ಕುಮೆನಗೆನುನಯದಿಂ ॥ ೧೧೮

ಎಂದೊಡರಸಂ ವಿಕಸಿತಮುಖಾರವಿಂದನಾಗಿ

ಎನ್ನಿಂಗಿತಭಾವಮನಱಿ ।
ಪುನ್ನತಮತಿ ನಿನ್ನ ತೆಱದಿನಾವವನಱಿಂ ॥
ದಿನ್ನಿನಗೆ ಮಿತ್ರನೈಯೆನ ।
ಗನ್ನಿನಗಲ್ತೆಂದು ನೃಪಕುಮಾರಂ ಪೊಗಟ್ದಂ ॥ ೧೧೯

ಅಂತು ಮನೋಗತಭಾವಮನಸೆಂದ ಕಾರಣದಿಂ ಯುವರಾಜನಾತನಂ
ಸ್ತೋತ್ರಂಮಾಡಿ ಎನ್ನ ಚಿಂತೆಯ ಕಾರಣಮಂ ಕೇಳೆಂದು

ಅಲರ್ಗಣ್ಣ ಬಿಂಬಾಧರಂ ನಿರ್ಮಳಮುಕುರಕಪೋಲಂ ಸುವೃತ್ತಸ್ತನಂ ಕ।
ಲ್ಪಲತಾಬಾಹುದ್ವಯಂ ಬಂಧುರತರತನುಮಧ್ಯಂ ಸಮುದ್ಯನ್ನಿತಂಬ ॥
ಸ್ಥಲಮಭ್ರಾಕಾರವೇಣೀಭರಮತಿಸುಮನಮಂ ಕಣ್ಗೆ ಬೀರುತ್ತಿರಲ್ ಕೋ।
ಮಲೆಯೊರ್ವಳ್ ನಿನ್ನ ಬಂದೆನ್ನಿದಿರೊಳ್ ಸೊಬಗಂ ತೋಱು ಪೋದಳ್
ಮನೋಜ್ಞಾ ॥ ೧೨೦

ಅಂತು ಸೌಭಾಗ್ಯಸಾರಮಂ ಸೂಱೆಗೊಳ್ವ ನೀಱೆ ಸುಱಿವುದುಂ,

ಆವಧುವಂ ಕಾಣಬೊಡಂ ।
ಭಾಸ್ಪೋದ್ಭವನೆನ್ನನೆಯ್ದೆ ತನೆಶ್ಶಿಲ್ಕೆಯ ಬಾ ॥
ಣಾವಳಿಯೊಳ್ ಸುಡುತಿರ್ದಪ ।
ನೇವೆಂ ಚಿಂತಿಸದೆ ಪೇೞ್ ಪರಾರ್ಥಚರಿತ್ರಾ ॥ ೧೨೧

ಎಂದರಸಂ ಪೇೞ್ವುದುಮಾಜಾಲಿಕನಿಂತೆಂದಂ:—

ಸುರದನುಜಮನುಜಗಂಧ ।
ರ್ವರನೊರ್ಮೊದಲೆಯ್ದೆ ಸೋಲಿಸುವ ಸತಿಯರನ ॥
ಚ್ಚರಿಯೆನಲೆನ್ನಯ ವಿದ್ಯಾ ।
ಪರಿಣತಿಯಿಂ ಕ್ಷಣಕೆ ತೋಱಿಪೆಂ ನೃಪತಿಲಕಾ ॥ ೧೨೨

ಎಂದು ಮತ್ತಂ

ಇನಿತೊಂದು ಚಿಂತೆಯೇಕೆಂ ।
ದನುನಯದಿಂ ನಿನಗೆ ಮದುವೆಯುಂ ಮಾಡುವೆನಾ ॥
ವನಿತೆಯನೆನ್ನಯ ವಿದ್ಯಾ ।
ವಿನೋದಮಂ ನೋಡೆನುತ್ತೆ ಚಿತ್ತಂಬಿಡದಂ ॥ ೧೨೩

ಇವಳಳವೆ ದೇವಗಂಧ ।
ರ್ವವಿಳಾಸಿನಿಯರ್ಕಳಂ ಕ್ಷಣಾರ್ಧದಿನಿಂತೀ ॥
ಭುವನಕ್ಕೆ ತಂದು ನಿನ್ನೊಳ್ ।
ವಿವಾಹಮಂ ಮಾಳ್ಪೆನೆನ್ನ ವಿದ್ಯಾಬಲದಿಂ ॥ ೧೨೪

ಅದು ಮಾಳ್ಕೊಡಮೀಯವಂತಿಸುಂದರಿಯುಂ ನಿನಗೆ ಮಾೞ್ಪುದರಿದ ಲ್ಲೆಂಬ ಮಾತಂ ಕುಮಾರಂ ಕೇಳ್ದು ಸಚೇತನನಾಗಿ ಮತ್ತಮಿಂತೆಂದಂ:—

ಮಣಿಮಾಡದೊಳಾಕೆ ಬಹಿಂ ।
ವರ್ಣದೊಳ್ ನಾನಿರ್ದು ಸಂಗಮಂ ದೊರಕುವ ಕಾ ॥
ರಣಮೆಂತು ಪೇಳೆನಲ್ ಸ ।
ದ್ಗುಣಿ ಮಾಯಾಜಾಲಿಕಂ ನಗುತ್ತಿಂತೆಂದಂ ॥ ೧೨೫

ಮಣಿಮಂತ್ರೌಷಧಿನಿಚಯದ ।
ಗುಣದಿಂದಂ ಸಾಧ್ಯಮಾಗದಿರದಾವುದು ತತ್ ॥
ಕ್ಷಣದೊಳ್ ತೋರ್ಪೆಂ ನಿನಗೆ ।
ನ್ನಣಕದ ವಿದ್ಯಾವಿನೋದದೊಳ್ ಕಾಮಿನಿಯಂ ॥ ೧೨೬

ಎಂದಾಂ ನಾಳೆಯುಮವಂತೀಶ್ವರನಂ ಕೇಳಿಸಲ್ ಪೋಪಲ್ಲಿ

ಭೂನಾಥ ನೀನುಮೊಲವಿಂ ।
ದಾನೆರವಿಯೊಳಱಿಸುವಂತು ಬಂದಿರ್ಪುದು ಮ ॥
ತ್ರಾನಾಗಳೀನನೆಸಗುವೆ ।
ನೇನತಿಶಯಮುಮಂ ನೆಗೞ್ವೆಂ ನಿಂ ಕಾಣ್ಬೆ ॥ ೧೨೭

ಎಂದಿಂದ್ರಜಾಲಿಗಂ ಕಳಿಪಿಸಿಕೊಂಡು ಅವಂತೀಶ್ವರನರಮನೆಗೆ ಪೋಗಿ ಬಾಗಿಲೊಳಿರ್ದು ಅರಸಂಗೆ ಪೇೞ್ದಟ್ಟುವುದುಂ ಆತನಾಮಱುದಿವಸಂ ಕಾರಾಗೃಹನಿರ್ಬಂಧದಾಲಸ್ಯಂ ಪರಿಹರಿಸಲೆಂದವನಂ ಬರಿಸೆಂದಂ. ಇತ್ತಲ್,

*
ಅಮರ್ದಿಂದ್ರಜಾಲವಿದ್ಯಾ ।
ಕ್ರಮಮನಪೂರ್ವಂ ದಲೆನಿಸುವಾಶ್ಚರ್ಯವಿನೋ ॥
ದಮನೊಸೆದು ನೋಡಲೊಪ್ಪುವ ।
ಕುಮಾರಿಯುಂ ಕರೆಯಿಮೆಂದನಾಭೂಪಾಲಂ ॥ ೧೨೮

ಅಂತವಂತೀಶ್ವರನವಂತಿಸೌಂದರಿಯುಮಂ ಕರೆಯಿಸಲೊಡಂ

ಅಂಗಜತಾಪದಿಂ ಕೊಱಗಿದಬ್ಜಮುಖಂ ಪರೆದಿರ್ದ ನುಸ್ಗೊರಲ್ ।
ತುಂಗಕುಚಂಗಳೊಳ್ ತೆಗಳ್ಗೊಂಡ ಲಸನ್ಮಳಯೋದ್ಭವಂ ಬೆಳ ॥
ತರಂಗಮುರೋಂತರದೊಳ್ ತಳೆದ ಕರ್ಪುರದಚ್ಛೆಯ ರೇಣು ರಂಜಿಸಿ ।
ವರಂಗನೆ ಕಾಮದೇವನೆಡೆಯಾಡಿಪ ಪುತ್ರಿಕೆಯಂತಿರೆಯ್ದಿದಳ್ ॥ ೧೨೯

ಅಂತು ವಿರಹಾನಳದಂದಹ್ಯಮಾನಹೃದಯೆಯಾದ ಕುಮಾರಿ ಬಂದು ತನ್ನ ತೊಡೆಯಮೇಲೆ ಕುಳ್ಳಿರ್ದುದುಂ; ಅರಸನಿಂದ್ರಜಾಲಿಗನನಾಸ್ಥಾನಕ್ಕೆ ಕರೆಸುವುದುಂ;

ಪುಲಿದೊವಲ ಜೋಗವಟ್ಟಗೆ।
ತೊಳಗುವ ಸೆಳ್ಳುಗುರ ಮಿಂಚು ಮಾಯದ ಕುಂಚಂ॥
ನೆಲನನಲೆವುಡಿಗೆ ರಂಜಿಸೆ।
ನಲವಿಂ ಮಾಯಾವಿಯೆಯ್ದಿದಂ ನೃಪಸಭೆಯಂ ॥ ೧೩೦

ತ್ರಿಜಗನ್ಮೋಹನತಿಲಕಂ।
ನಿಜದಿಂ ಬಲಗಿವಿಯೊಳುಲಿವ ಬಾವುಲಿ ಕೆಯ್ಯೊಳ್ ॥
ವಿಜಯಕ್ಕೆ ನೆಗಪಿದುದ್ಯ।
ದ್ಧ್ವಜವೊಪ್ಪಲ್ ಬಂದನಲ್ಲಿಗಾಕಾಪಟಿಗಂ ॥ ೧೩೧

ಅಂತು ಬಂದು,

ಅಂದಂಬಡೆದಾಭರ್ಣಟಿಯಿಂ ।
ನಿಂದುಗುರ್ಗಳ ಬೆಳಗು ದೆಸೆಗೆ ಪಸರಿಸೆ ಕರಮಂ ॥
ಚಂದಂಬಡೆದಿರಲೆತ್ತಿದ ।
ನಂದು ಮಹೇಂಪ್ರಪ್ರಸಾದವೆಂದಾಧೂರ್ತಂ ॥ ೧೩೨

ಅಂತೆಂದು ಮತ್ತಂ,

ದಿಗಧಿಪರಂ ಸರೋಜಭವನಂ ಹರನಂ ಹರಿಯಂ ಸುರೇಂದ್ರನೋ।
ಲಗಮನಿತೆಂದು ಮೂರ್ತಿಗಳನಷ್ಟವಸುಸ್ಥಿತಿಯಂ ಗ್ರಹಂಗಳಂ ॥
ಗಗನತರಂಗಿಣೀವಿಭವಮಂ ಸುರಕಾಂತೆಯರಂ ನಿರೀಕ್ಷಿಸಿ।
ಲ್ಲಿಗೆ ತರಲಾರ್ಪೆನೆನ್ನಧಿಕವಿದ್ಯೆಯನೆಂದನೊಱಲ್ದು ಜಾಲಿಕಂ ॥ ೧೩೩

ಎಂಬುದುಮವಂತೀಶ್ವರಂ ವಿಸ್ಮಯಂಬಟ್ಟು—ಆದೊಡೆ ನಿನ್ನ ವಿದ್ಯಾವಿನೋದಮಂ ಪ್ರಕಟಿಸೆಂಬುದುಂ;

ಅಲರ್ಗಣ್ಮಿಗಿದಾಕಾಶವು।
ನೊಲೆದೊಯ್ಯನೆ ನೋಡಿ ತುಟಿಗಳಂ ಮಿಡುಕುತೆ ದಿ ॥

ಗ್ವಲಯಕ್ಕೆ ಕೆಯ್ಗಳಂ ಮುಗಿ |
ದೊಲವಿಂ ಪ್ರೋತ್ಸುಕ್ಯ ಬೀಸಿಗಂ ಚಾಮರಮಂ || ೧೩೪

ಅಂತು ಚಾಮರಮಂ ಬೀಸಿ,

ಮಕುಟಂ ಕೇಯೂರಕಂ ಕುಂಡಲಮೆಸೆವ ಸಹಸ್ರಾಕ್ಷನೈರಾವತಂ ಬೇ |
ವಕುಲಂ ವಜ್ರಾಯುಧಂ ದಿಕ್ಪತಿತತಿ ಶಚಿ ರಂಭಾದಿದೇವಾಂಗನಾಜಾ ||
ಲಕಮುಷ್ಣಾಶೀತಿಬಿಂಬಪ್ರಾವಳಿ ಸುರುಚಿರಗಂಧರ್ವಗೀತಾಮೃತಂ ಕಾ |
ತುಕಮಾಗಿರ್ಪನ್ನಂ ಸೂತ್ರೋಲಗಮೆಸಗಿರ್ದಂ ಘೂರ್ಜರಮಾಯಾಭುಜಂಗಂ ||

ವಿಲಸದ್ಭಾಳವಿಲೋಚನಂ ಧವಳಜೂಟಂ ಮರುದ್ವಾಹಿನೀ |
ಲಲಿತೋತ್ತುಂಗಜಟಾಧರಂ ಗರಳಕಂಠಂ ಸರ್ಪಹಾರಂ ಶಿವಾಂ ||
ಗಲತಾಲಂಕೃತವಾಮಭಾಗನಿಶಿತೋಕಮಾರ್ಗಣ್ಣದನಂ ರಂಜಿಪ |
ಜ್ಜ್ವಲತೇಜೋಮಯಮೂರ್ತಿ ರುದ್ರನನಂ ತಾರಾಧ್ವದೊಳ್ ತೋರಿದಂ ||

ಶ್ರೀವತ್ಸಂ ಕೌಸ್ತುಭಂ ಪೇರುರದೊಳೆಸೆದಿರಲ್ ಕಂಬು ಚಕ್ರಂ ಗದಾರಾ |
ಜೀವಂ ಹಸ್ತಂಗಳೊಳ್ ತಳ್ತಿರೆ ಜಘನದೊಳೊಪ್ಪಲ್ಕೆ ಪೀತಾಂಬರಂ ಸ |
ದ್ಭಾವಂಬೆತ್ತಬ್ಜನೇತ್ರಂ ವಿಕಸಿತವದನಂ ರತ್ನಕೋಟೀರಕಂ ಭ್ರಂ ||
ಗೀರ್ವಾಣಂ ಮೆಯ್ಗೆ ಚೆಲ್ವಾದ ಸುರವಿಜಯಿಯುಂ ತೋರಿದಂ ಜಾಲಗಾರಂ ||

ಪರೆಯುದ ಜನ್ಯನಂ ತೊಲಗದಾಭರಣಂ ಸಲೆ ಮಾಸದಂಬರಂ |
ತೆರಳದ ಕಾಂತಿ ಕುಂದದನುಲೇಪನಮಾಜಿದಲಕ್ತಕಪ್ರಸಂ ||
ಪರಿಮಳಮೋಡಿ ಬಾಡಿರದ ಪೂಮುಡಿಯೊಪ್ಪುವ ದೇವಲೋಕಮಂ |
ದರಿಸುರನಿಂದ್ರಜಾಲಿಕನತೀವಮನೋಹರಮಾಗೆ ತೋರಿದಂ || †೧೩೫

ಅಂತಹಿತುಂಡಿಕನಂತೆ ಕೌತಿಕವಿಳಾಸದಿಂ, ಅರಣ್ಯಸ್ಥಳದಂತೆ ಸ್ಥಾಣುಪರಿಪೂರ್ಣದಿಂ, ಪದ್ಮಿನೀಜನದಂತಂಬುಜನೇತ್ರಾಭಿರಾಮದಿಂ, ಸರೋವರದಂತೆ ಕಮಲಾಜಾತಸಂಪೂರ್ಣದಿಂ, ಮಾನಸಸರಸಿಯಂತೆ ರಾಜಹಂಸಪ್ರಚಾರದಿಂ,

---

† ಸಲೆ ನಾಲ್ಕುಂ ಮೊಗದೊಳ್ ಪ್ರತಿಪ್ರತತಿ ಪೊಣ್ಮಲ್ ಸುತ್ತಲುಂ ಸತ್ಕಳಾ |
ವಲಿಗಳ್ ಕೈವಶದೊಪ್ಪೆ ದೋಲಗದೊಳಿಂದ್ರಾದ್ಯಗ್ರ್ಯಕಂ ರಾಕ್ಷಸಂ ||
ಜಲಧೀಶಂ ಪವನಂ ಕುಬೇರನಧಿಭೂಷಂ ರಂಜಿಸಲ್ ಪೆಂಪ್ರವೆ |
ತ್ತೊಲವಿಂದೊಪ್ಪುವಪೂರ್ವಪದ್ಮಭವನಂ ಮಾಯಾವಿಕಂ ತೋರಿದಂ || ೧೩೬

ಈ ಪದ್ಯವು ಒಂದು ಪ್ರತಿಯಲ್ಲಿಮಾತ್ರ ಇದೆ.

ರಣಭೂಮಿಯಂತೆ ವಿಗ್ರಹವಿತಾನದಿಂ, ರೋಹಣಾದ್ರಿಯಂತೆ ವಸುವಿಸ್ತಾರದಿಂ, ಪುಣ್ಯಕ್ಷೇತ್ರದಂತೆ ಪುಷ್ಕರಪಾಲಿಸೇವಿಭವದಿಂ, ರಾಜಭವನದಂತೆ ನಾನಾಮಾತ್ಯಕಾಮಿನೀಕಮನೀಯತೆಯಿಂ ಮೆರೆವಾಕಾಶದೊಳ್ ಭೂಲೋಕಮುಂ ನೆನೆಯಿಸುತ್ತೆ ದೇವಸಂಕುಳಮುಂ ತೋರೆ,

ಕಡೆಯೊಳ್ ತನ್ನ ಪ್ರವಾಸಾತುರ ನೋಡುವ ಪಿತೃಭ್ರಾತೃವ್ರಜಂ ಕುಳ್ಳಿರೆ।
ಪೆಡೆಯಂ ಶಕ್ರಸಮೀಪದೊಳ್ ಪದೆಪಿನಿಂ ತೋರಲ್ಕೆ ಸಂತೋಷಮಿ॥
ರ್ಮಡಿಸುತ್ತಂತವರಂ ನಿರೀಕ್ಷಿಸಿ ನೃಪಂ ಹಾರೈಸುತುಂ ಮೆಚ್ಚಿ ಸಾ।
ಲಿಡೆ ಕರ್ಪೂರದ ವೀಳೆಯಂಗುಡುವೆನೆಂದೆಂದಾತನಂ ನೋಡಿದಂ॥ ೧೪೦

ಅಂತವಂತೀಶ್ವರಂ ತನಗೆ ವೀಳೆಯಂಗುಡುವೆನೆಂಬಾಗಳಾಜಾಲಿಕಂ ಮುಗುಳ್ದು ಕುಂಚಮಂ ಬೀಸಲ್ ನೆರೆದ ದೇವಸಭೆಯೆಲ್ಲಂ ಪರೆದು ಪೋಗಲದರ್ಕಂ ವಿಸ್ಮಯಂಬಡುತ್ತಿರ್ದರಸನಂ ಮಾಯಾವಿಕನಿಂತೆಂದಂ:—

ಇನ್ನೊಂದತಿಶಯಮುಮಂ ಪೆಂ।
ಪಿನ್ನೋಡೆಲೆ ದೇವ ಮಾಳ್ಪೆನೆಂದು ಕಳಾಸಂ॥
ಪನ್ನಂ ಮಾಯಾಭುಜಗಂ।
ಬಿನ್ನವಿಸಿದನೊಂದು ಕಾರ್ಯಮಂ ನಲವಿಂದಂ॥ ೧೪೧

ಅದೆಂತೆನೆ—

ಕಡೆಯೊಳ್ ಮಂಗಳಕಾರ್ಯಮ।
ನೊಡರ್ಚುವೆಂ ದೇವ ಕೇಳದೆಂತೆನೆ ನಿನ್ನೀ॥
ತೊಡೆಯೊಳ್ ಮೆರೆವ ಕುಮಾರಿಗೆ।
ಕಡುಚೆಲ್ವಪ್ಪೊಂದು ಮದುವೆಯಂ ನಯದಿಂದಂ॥ ೧೪೨

ಆದೊಡಂತೆಗೆಯ್ಯೆಂದರಸಂ ಪೇಳ್ವುದುಂ

ಎನ್ನ ವಿನೋದಮುಂ ಪಡೆದು ಚಿತ್ತವಿಸೆಂಗತಿವೇಗದಿಂದಮಂ।
ತನ್ನಯ ಕುಂಚಮಂ ತಿರುಪಲಾಕ್ಷಣದೊಳ್ ಪಟುಕಾಳೆತಾಳದಿಂ॥
ಚೆನ್ನನೆ ಮಾಯದಾಕೃತಿಯ ಪುತ್ತಳಿಗಳ್ ನೆರೆದಿರ್ದವಂದನೇ।
ಕನ್ನಟನಾಜ್ಞೆಯಿಂ ಸಭೆ ಕರಂ ಬೆರಗಾಗಿ ಮುಗುಳ್ದು ನೋಳ್ಪನಂ॥ ೧೪೩

ಅಂತು ಪುತ್ತಳಿಗಳನೇಕಮುಮಂ ನಿರ್ಮಿಸಿ ಮತ್ತಮಿಂತೆಂದಂ:—

ಇದನೊರ್ಬರ್ ಕಂಡೆವೊರ್ಬರ್ ಮದುವೆಯನೆನಸುಂ ಕಾಣೆವೆಂದೆ ಱನ್ನದೆಲ್ಲರ್ ಪದೆಪಿಂದಂ ನೋೞ್ಪುದೆಂದಾನೆರವಿಯ ಮೊಗಮಂ ನೋಡಿ ಪೇೞ್ದಂತೆ ಮಾಯಾ । ಸದನಂ ತಜ್ಜಾಲಿಕಂ ಮಾಗಧನೃಪಸುತನಂ ಕಂಡು ಕಣ್ಣೆತ್ತಿ ಬಾಯೆಂ । ಬುದುಮಾತಂ ಗೆಂಟಱೊಳ್ ಬಂದಿರೆ ಕಳಕಳಮಂ ಮಾಡಿದಂ ಜಾಲಗಾಱಂ ॥ ೧೪೪

ಸುದತಿಯನೆನಗಾಗಿಪೆನೆಂ ।
ಬುದು ಪುಸಿಯೋ ದಿಟಮೊ ಎಂದು ಮಾಯಾವಿಯ ಮಾ ॥
ಕ್ಯದ ನೆಲೆಯನಱಿದು ಬರ್ಪೆಂ ।
ಪದುಳದೆ ನೀಂ ಚಂಪೆಯಲ್ಲಿ ಪೋಗಿರು ಕೆಳೆಯಾ ॥ ೧೪೫

ಎಂದು ಪ್ರಶ್ನೋದ್ಭವನಂ ಕಳಿಪಿ ನೆರವಿಯೊಳಿರ್ದು ತನ್ನ ಸಮೀಪಕ್ಕೆ ಬಂದ ಯುವರಾಜನಂ ಜಾಲಿಕಂ ನೋಡಿ,

ಜಾ ಜಾ ಕಾಮಾಕ್ಷಿ ಎನು ।
ತ್ತಾ ಜೋಗಿ ವಿಚಿತ್ರವೆನಿಪ ಮದವಣಿಗಂ ಬಂ ॥
ದೀಜನದ ಬಗೆಗೆ ಬೆಱಗಂ ।
ಸೋಜಿಗಮನೆ ಮಾೞ್ಪುದೆಂದು ಚಿಟುಕಿಸಲಾಗಳ್ ॥ ೧೪೬

ಅಗಲಂಬೆತ್ತುರುವಕ್ಷದಿಂದುರುಲಸದ್ರಕ್ತಾಂಬುಜಾತಾಕ್ಷಿಯಿಂ ।
ಪೊಗರಿಂ ರಂಜಿಪ ವಕ್ತ್ರದಿಂ ಮಹಿಮೆಯಿಂ ತಾಳ್ದೊಪ್ಪುವಾಜಾನುಬಾ ॥
ಹುಗಳಿಂದುನ್ನತಕಂಠದಿಂ ಕರಿರಿಪುಪ್ರೋನ್ನಮ್ರಮಧ್ಯದಿಂದೆಲ್ಲರ ।
ಕ್ಷಿಗೆ ಚೆಲ್ವಂ ಕಱೆಯುತ್ತಿಳಾಪತಿಸುತಂ ಬಂದಿರ್ದನಾಸ್ಥಾಯಿಯೊಳ್ ॥ ೧೪೭

ಅಂತು ಮಂಗಳಾಕಾರನಾಗಿ ಕುಮಾರಂ ಬಂದು ನಿಲೆ,

ನೋಡೆಲೆ ಕುಮಾರಿ ನಿನ್ನೊಡ ।
ಗೂಡಲ್ ತಕ್ಕಾತನೆಂದು ನೃಪಸುತನಂ ಕೊಂ ॥
ಡಾಡಿ ನಟನೊಲ್ದು ತೋಱಲ್ ।
ನೀಡುಂ ಭೋಂಕೆನಲವಂತಿಸೌಂದರಿ ಕಂಡಳ್ ॥ ೧೪೮

ಕಾಣಲೊಡಂ ಜಜಮ್ಮನೆ ಬೆಮರ್ ಪೊಱಪೊಣ್ಮೆ ಶರೀರಕಂಪದಿಂ ।
ನಾಣೞಿಯಲ್ ಮನಂ ಬೆಱಗಿನಿಂ ಮರವಟ್ಟಿರೆ ವಕ್ತ್ರಪಂಕಜಂ ॥

ಕೂಣಿತದೃಷ್ಟಿಯಿಂದೆಸೆಯೆ ಚಿತ್ತಭವಂ ಕುಸುಮಾಸ್ತ್ರಜಾಲಮಂ ।
ಮಾಣದೆ ಸೂಸೆ ಕಾಂತೆಗೆ ಕರಂ ಮಿಗಿಲಾದುವು ಕಾಮಚೇಷ್ಟೆಗಳ್ ॥ ೧೪೯

ಅಂತಾಚೇಷ್ಟೆಯಂ ಕಂಡು ಮಾಯಾವಿಕನವಂತೀಶ್ವರಂಗಿಂತೆಂದಂ:—

ನಿನ್ನಳಿಯನೀತನೊಲ್ದೀ ।
ಕನ್ನಿಕೆಯಂ ತತ್ಕುಮಾರಪಾಣಿಗ್ರಹಣ ॥
ಕ್ಕಿನ್ನೆಟ್ಟಸೆಂದು ಪೇಳೆ ।
ಲ್ಕಂ ನಗುತೇಳೆಂದನಾಕೆಯಂ ಭೂಪಾಲಂ ॥ ೧೫೦

ಅಂತವಂತೀಶ್ವರನಿಂಗುವ್ರೊಂದು ವಿನೋದವಂ ನೋಳ್ಪೆನೆಂದು ನಗುತ್ತುಂ ಕುಮಾರಿಯನೆಬ್ಬಿಸೆ

ನಸುನಗೆ ವಕ್ತ್ರದೊಳ್ ಮಿನುಗೆ ಚಿತ್ತದೊಳಿರ್ದನುರಾಗಮಂಗದೊಳ್
ಪಸರಿಸೆ ತೋಳ್ಗಳುನ್ನತಕುಚಂ ಲಲಿತಾಧರಮುಯ್ದು ಕೆತ್ತೆ ಕಂ ॥
ಪಿಸೆ ನಲವಿಂ ನಿತಂಬಯುಗಳಂ ಪುಳಕಂ ತಲೆದೋಱೆ ಕಾಮನಾ ।
ರ್ದಿಸುವುದನೊಯ್ಯನೊಯ್ಯನೆ ನಿಲಲ್ ನೃಪನಂದನೆಯೆಟ್ದಳೞ್ತಿಯಿಂ ॥

ಅಂತು ಕುಮಾರಿಯೆೞ್ದು ನಿಂದಿರೆ ಜಾಲಿಕಂ ಪುತ್ತಳಿಗಳಿಂ ವಾದ್ಯಮೇಳಾಪಮಂ ಮಾಡಿಸಿ ಮಾಯಾಮೌಹೂರ್ತಿಕನಿಂ ಲಗ್ನಮಾಸನ್ನಮೆನಿಸಿ ಕುಮಾರನಂ ಕುಮಾರಿಯು ಪಾಣಿಗ್ರಹಣಂ ಮಾಡಲ್ವೇೞ್ವುದುಂ

ನಾನಾವಾದ್ಯಂಗಳುಣ್ಮಲ್ ಪಲವು ದಿಸೆಗಳೊಳ್ ಮಂಗಳಾಚಾರಮೊಪ್ಪಲ್ ।
ಗಾನಂ ಕೈಗಣ್ಮೆ ಮೌಹೂರ್ತಿಕರತಿಶುಭಲಗ್ನಂ ಕರಂ ಲೇಸೆನಲ್ ತ ॥
ದ್ಭೂನಾಥಂ ನೋಡೆ ಚೋದ್ಯಂಬಡುವಿನಮೊಲವಿಂ ಸರ್ವಸಂತೋಷದಿಂದಂ ।
ದಾನಾರೀರತ್ನಮಂ ಕೈವಿಡಿದು ನಲವಿನಿಂದೊಪ್ಪಿದಂ ರಾಜಪುತ್ರಂ ॥ ೧೫೧

ಅಂತು ಪಾಣಿಗ್ರಹಣಂಮಾಡಿದನಂತರಂ ಮದವಕ್ಕಳಂ ಮನೆಯುಂ ತುಂಬಿಸವೇೞ್ಕೆಂದು

ಪುತ್ತಳಿಗಳ್ ದಿಬ್ಬಣಿಗರ್ ।
ಪುತ್ತಳಿಗಳ್ ಸಕಲವಸ್ತುಗಳ ಪೆಟ್ಟಿಗೆಯಂ ॥
ಪೊತ್ತೊಡನೆ ಪೋಪರಾಗಿರೆ ।
ಬಿತ್ತರದಿಂ ಮನೆಗೆ ಕಳಪಿದಂ ದಂಪತಿಯಂ ॥ ೧೫೨

ಅಂತು ಮದವಕ್ಕಳನನೇಕಪುತ್ತಳಿಗಳಂ ಕೂಡಿಯರಮನೆಗೆ ಕಳಿಪಿ ಇಂದ್ರಜಾಲಿಗನರಸಂಗೆ ಕೈಮುಗಿದಿರ್ಪುದುಮರಸಂ ಮೆಚ್ಚಿ

ಕಟಕಂ ಕುಂಡಲಮಂಗದಂ ಪದಕಮುದ್ಯದ್ವಾಹನಂ ಚಿತ್ರಕ |
ರ್ಪಟಮಾನಂದಿತವಸ್ತುವಂ ಪದೆಪಿನಿಂ ಭೂಪಾಲಕಂ ಕೊಡುತಿರ್ಕಾ ‖
ಪಟಿಕಂಗೀಯಲವಂ ಕರಂ ತಣಿದು ತನ್ನುತ್ಸಾಹದಿಂ ಸಂತತಾ |
ರ್ಭಟೆಯಿಂದಂ ಪೊಗಳುತ್ತದೇಂ ತಳರ್ದನೋ ಕೋಲಾಹಲಂ ಮಾಡುತುಂ ‖

ಅಂತಾಜಾಲಿಕಂಗವಂತೀಶ್ವರಂ ಬೇಳ್ಪನಿತುವಸ್ತುವಂ ಕೊಟ್ಟು ಬೀಳ್ಕೊಂಡವನತ್ತಲ್ ಪೋದಂ. ಇತ್ತಲ್

ಮನದನುರಾಗಮಂ ತಳೆದು ಜಾಲಿಗನೋಜೆಗೆ ಮೆಚ್ಚಿ ನಲ್ಮೆಯಿಂ |
ತನುಪುಳಕಂಗಳುಣ್ಮುತಿರೆ ಕಾಮನಿದಾನಮೆ ಕೈಗೆ ಸಾರ್ದಪೋಲ್ ‖
ವನಿತೆಯ ಕೋಮಳಾಂಗುಲಿಯನೊಪ್ಪಿರೆ ಬಳ್ಪಿಡಿದಂಗನಾನಿಕೇ |
ತನಮನಲಂಪಿನಿಂ ಸುಖದೊಳೊಯ್ಯನೆ ಪೊಕ್ಕನಿಳಾಧಿನಾಯಕಂ ‖ ೧೫೫

ಅಂತು ಪುಗಲೊಡಮಂತ್ರಿಸೌಂದರಿ,

ಬಯಸಿರ್ದ ವಸ್ತು ಕೂರ್ತೆ |
ನ್ನಯ ಕಯ್ಗೆಯ್ದಿತ್ತೆನುತ್ತಮಂತೀವಧು ಲೀ ‖
ಲೆಯಿನರಸನನಪ್ಪಿ ಸುಧಾ |
ಮಯಮೆನಿಸಿರ್ದಧರರತ್ನಮಂ ಚುಂಬಿಸಿದಳ್ ‖ ೧೫೬

ಪೊಸತೆನಿಪ್ಪೊಲ್ಮೆಯುಗ್ಗಡಿಸೆ ಕಣ್ವಳಗೋಪನ ವಕ್ತ್ರಪದ್ಮದೊಳ್ |
ಪಸರಿಸೆ ಸಣ್ಣ ಸುಯ್ಲ ನಡುಗಂಪು ಪೊದಳ್ದಿರೆ ನುಣ್ಗೊರಲ್ ವಿರಾ ‖
ಜಿಸೆ ಜಲಪಕ್ಷಿಯಂ ಜಱೆದು ನಾಣ್ಕಿಡೆ ಡಿಳ್ಳಮನೈದೆ ನಲ್ಮೆಯಿಂ |
ಮಿಸುಪಧರಾಗ್ರಮಂ ಸವಿದಳಂಗನೆ ಜಾಣ ಮಿಗೆ ತನ್ನೃಪಾಲನಾ ‖ ೧೫೭

ಅಂತಧರಗ್ರಹಣಂಗೆಯ್ದನಂತರಂ,

ಸ್ಥಿರಗಾಢಾಲಿಂಗನಂ ಹೂಂಕೃತಿ ಗಳರವಮನ್ಯೋನ್ಯಸಂಲಾಪವಾದಂ |
ಕರಘಾತಂ ಚುಂಬನಂ ಸ್ವೀಕೃತಕುಟಿಲಕಚಾಕರ್ಷಣಂ ನೂತಜಿಹ್ವಾ ‖
ವಿರುತಂ ಚಿತ್ತಾನುಮೋದಂ ಪರಿವಿಡಿಯೆ ಮನೋರಾಗದಿಂ ಕಾಮಕೇಳೀ |
ತರುಣಪ್ರಾರಂಭಮುಂ ಕೂರ್ತಸಗಿದಳೊಲವಿಂ ಕಾಂತೆಯುತ್ಸಾರ್ತದಿಂದಂ ‖

ಬಿಸುಟಿಪೆಂರಿಂಗುವಂತಗಲ್ದು ಮತ್ತಮರ್ದಪ್ಪುವ ಮೊಣ್ಪು ಮೊಣ್ಪು ಚುಂ।
ಬಿಸಿಯುಧರೋಷ್ಠಮಂ ಸವಿವ ಸಾನ್ಯಸುಖಂ ತಲೆದೋಱೆ ಮೂರ್ಛೆಯಿಂ॥
ದೆಸೆವ ಮನೋಮುವಂ ಮಿಗುವ ಕೂಟದ ತೋಟಿಗೆ ಮೇಲೆನಲ್ ಕರಂ ।
ಮಿಸುಪ ಮನೋಜಕೇಳಿಯಿನದೇನೆಸೆದಿರ್ದರೊ ನಿತ್ಯಕಾಮಿಗಳ್ ॥ ೧೫೯

ಮತ್ತಂ

ಅಡಿಗಡಿಗಪ್ಪಿಕೊಳ್ವ ಚುಂಬುಕಾಗ್ರಮನೊತ್ತಿ ಸುಧಾಧರೋಷ್ಠಮಂ ।
ಪಿಡಿದೊಲವಿಂದೆ ಚುಂಬಿಸುವ ಗಾಸಿಗೆ ಸೂಸಿವ ಕೇಶಪಾಶಮಂ ॥
ಮುಡಿಸುವ ನಾಣ್ಗೆ ನಾಣ್ಚುದೆ ವಿಚಿತ್ರವಿನೋದದ ಕೂಟದಿಂ ಸುಖಂ ।
ಬಡೆವ ಲತಾಂಗಿ ಮನ್ಮಥನ ಮುದಿರಸಂಗಳಲಕ್ಷ್ಮಿ ಕ್ರಿಯುಲ್ಲಳೇ ॥ ೧೬೦

ಮಲ್ಲಿಗೆಪೊಳ್ಳೆಯುಂ ಕುಣಿಯು ಕಾಡುಮುಂತಬನಾಕಿ ಕಂಕಣಂ ।
ಮೆಲ್ಲುಲಿಯಿಂ ಪಳಂಚಿಕೆ ಮೃದುಕಾಂತರವಂ ಪ್ರಸಿತಾಗೆ ಮಾತುಗಳ್ ॥
ಲಲ್ಲೆಯುನ ಸ್ಪಕೆಯ್ದು ಬೆನಾಂತ್ರಿ ಸುಖಂ ತಲೆದೋಱೆ ನುಣ್ಣನಂ ।
ಜೆಲ್ಲನೆ ಪಾಯ್ದು ಚೆಲ್ಲೆ ಪುರುಷಾಯಿತ ... ವಿಚಿತ್ರಮನಾನೆಗೋ ॥ ೧೬೧

ತವೆಯುವ ನಿಕ್ಕಿ ತೋರ್ಗಿದೇಳು ದುಗುಲ್ಲ ... ಮಿಕ್ಕಿ ।
ಚರ್ಗುವ ಮನದೊಳ್ಗೆ ಕೂಡಿ ತಳಿಸಿಲ್ಲದ ಕಾಮು ಸರೋಜ ... ಸು ॥
ಣ್ಪವಿರಳವಪ್ಪಿನಂ ನಲಿದು ಕೂಡಿ ಸುಖಾಂಬುಧಿಯೊಳ್ ಮುಳುಂಗಿದೊ ।
ಪ್ಪುವರವರಾವಗಂ ಸುರತಕಾಲವೆನಿಪ್ಪ.....ಮೂರ್ಛೆಯಿಂ ॥ ೧೬೨

ಅಂತು ನಾನಾಪ್ರಕಾರದ ಕರಣಂಗಳನೊಡರಿಚಿ ಕೂಡಿದ ಕಡೆಯೊಳ್

ಕೆದಱಿದ ಕುಂತಳಂ ಪರೆದ ಕಜ್ಜಳಮುಣ್ಮುವ ನುಣ್ಬೆಮರ್ ಮದಂ ।
ಪುದಿದ ವಿಲೋಚನಂ ಬಱಿಯುನಟ್ಟುವ ಸುಯ್ ಕಡುಪೊಲ್ದು ವೇಣಿ ಬ ॥
ತ್ತಿದ ಬೆಳರ್ವಾಯೆ ಬಿಲ್ದು ಲುಳಿತಾಂಬರಮೊಪ್ಪೆ ರತಾಂತದೊಳ್ ಸುಖಾ।
ಪ್ಪದಮನೊಡರ್ಚುವಂಗನೆಯು ರೂಪು ವಿಚಿತ್ರಮನುಂಟುಮಾಡದೇ॥ ೧೬೩

ಅಂತಾದ ರತ್ಯಂತದೊಳವಂತಿಸುಂದರಿ ರಾಜವಾಹನನ ಮುಖಾರವಿಂ
ದಮಂ ನೋಡಿ,

ಆವಾವ ದೇಶಮಂ ಸ ।
ದ್ಭಾವಂ ಮಿಗೆ ತೊಳಲುತಿರ್ದರಸರ್ ನುವಿಂ ॥
ಭಾವಿಸೆ ಬೆಸಸಲ್ವೇಳ್ಪುದು ।
ದೇವರ್ ಪದೆದೆನಗೆ ಕರ್ಣಕೌತುಕಮಾಗಲ್ ॥ ೧೬೮

ಎಂದು ಬೆಸಗೊಳ್ಲೊಡಂ

ವನಿತೆಯ ಬಿನ್ನಪಕ್ಕೆ ಕಡುಮೆಚ್ಚಿ ನೃಪಾಲಕನೊಪ್ಪಲುರ್ವರಾ ।
ಜನಿತವಿಶೇಷಮುಂ ಭುವನಕೋಶಮುಮಾಕೆಯ ಕರ್ಣಕೌತುಕಂ ॥
ಮನಮನುರಾಗಮುರ್ಕೆ ಮಿಗೆ ಪೇಳಲೊಡರ್ಚಿದನಂಗನಾಶನ ।
ಸ್ತನನಮೌಕ್ತಿಕಾಭರಣನಪ್ರತಿಯಾಗಲಭಂಗವಿಕ್ರಮಂ ॥ ೧೬೯

॥ ಗದ್ಯಂ ॥

ಇದು ನಿಖಿಳಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವದಶಕುಮಾರಚರಿತೆಯೊಳ್

ಅವಂತೀಸೌಂದರೀದರ್ಶನವರ್ಣನಂ

ಷಷ್ಠಾಶ್ವಾಸಂ

|| ಲೋಕಾಖ್ಯಾನಂ ||

ಶ್ರೀಮಗಧೇಶನಮಂತ್ರೀ |
ಕೋಮಳಿಗೆ ನೆಗಳ್ದ ಭುವನಕೋಶವನಧಿಕ ||
ಪ್ರೇಮದೆ ಪೇೞಲೊಡರ್ಚಿದ |
ನೇಮಾತೋಂ ಪದೆದಭಂಗವಿಟ್ಠಲಭೃತ್ಯಂ || ೧

ಅದೆಂತೆನೆ—

ನಿರುಪಮಸತ್ವದಿಂ ಕಮಲಜಾಂಡಕಟಾಹಮನಾದಿಶಕ್ತಿ ತಾ |
ಳ್ದಿರಲದಱಾಶ್ರಯಂಬಿಡಿದು ಕೂರ್ಮನಿರಲ್ ತದನೂನಖರ್ಪರೋ ||
ಪರಿಯೊಳನಂತನಿರ್ದು ನಿಜಮಸ್ತಕದೊಳ್ ಸಲೆ ಭೂಮಿಯಂ ಚರಾ |
ಚರಸುಖಭೂಮಿಯಂ ತಳೆದನಲ್ತೆ ಸರೋರುಹಪತ್ರಲೋಚನೇ || ೨

ಅತಳಂ ವಿತಳರಸಾತಳ |
ಸುತಳಂ ಪಾತಾಳಮಾತಳಾತಳಮಧಿಕ ||
ಪ್ರತಳಂಗಳಧೋಲೋಕ |
ಪ್ರತತಿಗಳೆಸೆದಿರ್ಪುವಲ್ತೆ ಕಮಲದಳಾಕ್ಷೀ || ೩

ಭೂಲೋಕಭುವರ್ಲೋಕತ |
ಪೋಲೋಕಂ ಸ್ವರ್ಗಲೋಕಜನಲೋಕಂ ಕೇಳ್ ||
ಬಾಲೆ ಮಹರ್ಲೋಕಂ ಸ |
ಲ್ಲೀಲೆಯೊಳಾಸತ್ಯಲೋಕಮೊಂದೂರ್ಧ್ವಜಗಂ || ೪

ರವಿಮಂಡಲದಿಂ ಮೇಲಾ |
ಯ್ತು ವಿಧುವ ಮಂಡಲಮದತ್ತು ತಾರಾಗತಿ ಮೇಣ್ ||
ವಿವಿಧಂ ವಾಯುಸ್ಕಂಧಂ |
ನವೀನಮೆನಿಸಿರ್ಪುದಲ್ತೆ ಭುವನಾಧಾರಂ || ೫

ಇಂತು ಚತುರ್ದಶಭುವನಂ |
ತಿಂತಿಣಿಯಿಂದಿರ್ಕುಮಿನಿಬೊಳೊಪ್ಪಿಸರ್ಗ ಧರಾ ||

ಕಾಂತೆಯು ಮೋಲಿಸೆಗುಂ ನಿ ।
ಶ್ಚಿಂತಂ ಪರಿಭಾವಿಸಲ್ಕೆ ನಾನಾದೇಶಂ ॥ ೬

ಮತ್ತಮಾಭೂಮಿಗೆ ಸೀಮೆಯಾಗಿ

ಪೃಥುಸತ್ವರ್ ದೇವದೈತ್ಯರ್ ತಮಗಭಿಮತಮಾಗಲ್ಕೆ ಸಂರಂಭದಿಂದಂ ।
ಮಥಿಸಲ್ ಮಾಂಗಲ್ಯವಸ್ತುಪ್ರಕರಮನಮೃತಾಹಾರಮಂ ಕೊಟ್ಟು ಮತ್ತಂ ॥
ವ್ಯಥೆ ತಾಂ ಪುಟ್ಟಲ್ಕೆ ಹಾಲಾಹಲಮನುಗುಳ್ದು ಗಂಭೀರಸಾಮರ್ಥ್ಯತೇಜಃ ।
ಪ್ರಥಿತಪ್ರಖ್ಯಾತಿವೆತ್ತಂ ಸಲೆ ಜಲಚರಸಂಘಾತರಾದಂ ಸಮುದ್ರಂ ॥ ೭

ಅತಿಲವಣೋಕ್ಷು ವಾರುಣಿ ಘೃತಂ ದಧಿ ದುಗ್ಧಮಗಾಧವಾರಿ ಕೇ ।
ಳತುಲಸಮುದ್ರವೊಂದಱಿನಗೊಂದಧಿಕಂ ಪಡೆದಲ್ಲಿ ಸಪ್ತಸಂ ॥
ಮಿತವೆಸೆ ದೀವಿಯುಂತವಱ ಮಧ್ಯದೊಳಿರ್ಪುದು ಚಕ್ರಮಧ್ಯದಾ ।
ಯುತಿಮಣಿಕೇವಣಂಬೊಲನಿಶಂ ಸುಖಮುಂ ತಳೆದಂಬುಜಾನನೇ ॥ ೮

ಸಲೆ ಜಂಬೂಪ್ಲಕ್ಷಂ ಶಾ ।
ಲ್ಮಲಿ ಕುಶಮಾಕ್ರೌಂಚಪುಷ್ಕರಂ ಶಾಕಂಗಳ್ ॥
ತ್ರಿಳೆಯುಲ್ ಸಪ್ತದ್ವೀಪಂ ।
ಜಳಜಾನನೆ ಸಂ[illegible] ॥ ೯

ಮತ್ತ[illegible]

ಸುರಸಿಕರಂ [illegible] ದಿಶಾ
ಕರಿ ಮೃಗರಾಜಿ ಸಿದ್ಧರಸವೆ[illegible]ಕಾಂತಿ ಭಾಃ
ಸುರದಮವಪ್ಪಿ ರತ್ನಸಿಚಯಂ ತಿರಿಕಲ್ಲೆನೆ ಪದ್ಮ[illegible]ಂ ಧರಾ ।
ತರುಣಿಗೆ ರಂಜಿಸಿಟ್ಟ ಕೃತಕಾದ್ರಿವೊಲಿರ್ಪುದು ಮೇರುಪರ್ವತಂ ॥ ೧೦

ಮತ್ತಮದು ಗಾಂಗೇಯತೇಜೋರಂಜಿತಮಾಗಿಯುಂ, ಭಾರತಸಂಬಂಧಮಲ್ತು; ಕುಲಗೋತ್ರಪರಿವೇಷ್ಟಿತಮಾಗಿಯುಂ, ಸಂಸಾರಿಯಲ್ತು; ಸುರಾಧಿವಾಸಮಾಗಿಯುಂ, ಜನನಿಂದ್ಯಮಲ್ತು; ಧರಣೀಧರನಾಗಿಯುಂ, ವರಾಹಾವತಾರಮಲ್ತು; ಶೃಂಗಾನ್ವಿತಮಾಗಿಯುಂ, ಮೃಗರೂಪಮಲ್ತು; ರತ್ನಕಟಕರಂಜಿತಮಾಗಿಯುಂ, ಹಸ್ತನ್ಯಸ್ತಮಲ್ತೆನಿಸಿರ್ಪುದು. ಅಂತು ಮಲ್ಲದೆಯುಂ

ಅದಱೊಪ್ಪುವ ತೆಂಕಲ್ ಪೆ ।
ರ್ಚಿದ ಹಿಮವಾನ್ ಹೇಮಕೂಟ ನಿಷಧಂ ಬಡಗಲ್ ॥
ಸದಮಳನೀಲಶ್ವೇತಂ ।
ಪದೆಪಿಂ ಶೃಂಗಿಗಳೆನಲ್ಕೆ ವರ್ಷಗಿರೀಂದ್ರಂ ॥ ೧೧

ಅದಱಿಂ ಮೂಡಲ್ ಮಂದರ ।
ಮದು ತೆಂಕಲ್ ಗಂಧಮಾದನಂ ಪಡುವಲ್ ಪೆ ॥
ರ್ಚಿದ ನಿಷಧಮದಱ ಬಡಗಲ್ ।
ಪದೆದು ಸುಪಾರ್ಶ್ವಂ ಸುರಾದ್ರಿಗೆಸೆದಪ್ಪದಬಲೇ ॥ ೧೨

ಈವಿವಿಧಗಿರಿಗಳೊಳ್ ಸ ।
ದ್ಭಾವಕಿ ಕೇಳ್ ಕಡವು ಜಂಬು ಪಿಪ್ಪಲಮಾಲಂ ॥
ತ್ರೀವಿಕರ್ಮಂ ಮತ್ತವಱೊಳ್ ।
ಭಾವಿಸಿ ಕೇಳ್ ಪೇೞ್ವೆನವಱ ನಂದನವನಮಂ ॥ ೧೩

ಕ್ರಮದಿಂ ಚೈತ್ರರಥಂ ಗಂ ।
ಧಮಾದ ವೈಭ್ರಾಜ ನಂದನಂಗಳೆನಿಪ್ಪವಂ ॥
ಕಮಳನಿಭಾನನೆ ಕೇಳ್ ಮ ।
ತ್ತಮುದಂ ಮಿಗೆ ಪೇೞ್ವೆನೆಸೆವ ಸುರಸರಸಿಗಳಂ ॥ ೧೪

ಅರುಣೋದ ಮಹಾಭದ್ರಂ ।
ಸ್ಫುರಿಸಿದೊಡಾಅಗ್ರಮಾನಸಂ ಸರಸಿಗಳಾ ॥
ಗಿರಿಗಳಮೇಲೆಸೆದಿರ್ಕುಂ ।
ಗುರುಕುಚೆ ಕೇಳ್ ಮತ್ತೆ ಪೇೞ್ವೆನಱುಕುಲಗಿರಿಯಂ ॥ ೧೫

ಅದಾವುವೆಂದೊಡೆ–

ಕಾದಲೆ ಕೇಳ್ ಮಹೇಂದ್ರ ಮಲಯಾಚಲ ಸಹ್ಯಗಿರೀಂದ್ರ ಶುಕ್ತಿಮಾರ್ ।
ಭೇದಿಸೆ ಋಕ್ಷಪರ್ವತ ಸುವಿಂಧ್ಯ ಮಹೀಧರ ಪಾರಿಯಾತ್ರಮೆಂ ॥
ದಾದುವು ಗೋತ್ರಶೈಲಮಿಳೆಗಬ್ಜಭವಂ ಮಿಗೆ ಕೊಟ್ಟ ಕೀಲ್ಗಳಿಂ ।
ದಾದಿ ಜಗಂಗಳಾಂಕೆಯೆನೆ ರಂಜಿಸುಗುಂ ಧವಳಾಬ್ಜಲೋಚನೇ ॥ ೧೬

ಮತ್ತಂ

ಸುರುಚಿರ ಭಾರತ ಕಿಂಪ್ರುರು ।
ಷರಮ್ಯ ಹರಿವರ್ಷಮೆಂಬುವಿವು ವರ್ಷಂ ತ ॥
ದ್ಗಿರಿಯೆಸೆವ ತೆಂಕಲಿಕಾರ್ಗಂ ।
ತೆರಳದಿಳಾವೃತಮುಮಂ ಕರಂ ಬಳಸಿರ್ಕುಂ ॥ ೧೭

ಅದಲ್ಲದೆಯುಂ

ಜಂಬೂಫಲಮೊಂದಾಶಾ ।
ಸ್ತಂಬೇರಮದಂತುಟಲ್ಲಿ ಬೀರ್ಪ್ಪುದಱಿಂ ॥
ಜಂಬೂದ್ವೀಪಮದಾದುದು ।
ಬಿಂಬಾಧರೆ ಕೇಳ್ ಪ್ರಸಿದ್ಧಮುಮಿರ್ತಳದೊಳ್ ॥ ೧೮

ಆಜಂಬೂಫಲರಸಮು ।
ವ್ಯಾಜದಿನಿಳಿಯಲ್ಲಿ ಪರಿಯಲದಱಿಂ ಜನಿಸಿ ॥
ತ್ರೀಜಗದೊಳ್ ಹೇಮಂ ನಾ ।
ನಾಜನಸುಕ್ಷೇಮಮನಂಬುಜಾಯತನೇತ್ರೇ ॥ ೧೯

ಮತ್ತಮಾಮೇರುಗಿರಿಯೊಳ್

ಜ್ಯೋತಿಶ್ಚಕ್ರಂ ತುದಿಯೊಳ್ ।
ಮಾತೇಂ ಜೂಟಳದ ತೆಱದೆ ತಿರುಗುತ್ತಿರ್ಕುಂ ॥
ಖ್ಯಾತಿಯ ಮೇರುವಿನೊಳ್ ನಿ ।
ರ್ಣೀತಂ ತದ್ಧ್ಯುಮಣಿಮುದಯಮುಸ್ತಮಯಂಗಳ್ ॥ ೨೦
ಗ್ರಹಚಾರಸ್ಥಿತಿಯಿಂಗಂ ।
ಗ್ರಹಣಮನಾವೃಷ್ಟಿಗಳೀ...... ॥
ಮಹಿಯೊಳ್ ತೋಱುಗುಮದಱಿಂ ।
ಸಹಜದೊಳರೆ ಸಕಲದೇಶದೊಳ್ ಸುಕ್ಷೇಮಂ ॥ ೨೧

ಅದಲ್ಲದೆಯುಂ

ಪಂಚಾಶತ್ಕೋಟಿವಿಸ್ತೀರ್ಣಬೊಳಸೆವ ಧರಾದೇವಿಗೊಪ್ಪಿರ್ಪುದೆಂದುಂ ।
ಕಾಂಚೀದಾಮಂಬೊಲುದ್ಯತ್ಕ್ಷಾರನಿಧಿ ನೆಗ*ಟ್ದ ಭೂಮಿ ನೋಡಲ್ಕೆ ಮತ್ತಂ ।

ಚಂಚದ್ಭಾಗಾಂತರಂ ಭಾವಿಸಲದು ನವಖಂಡಂ ಮಹಾಹೇಮರತ್ನಾ ।
ದಂಚದ್ಗರ್ಭಂ ನಿತಾಂತಂ ವಿವಿಧಸಕಲಧಾನ್ಯಪ್ರಭೂತಪ್ರದೇಶಂ ॥ ೨೧

ಹಿಮಸೇತುಮಧ್ಯಭೂಮಿಯೊ ।
ಳಮರನದೀತತಿಗಳಿರ್ಪ ವಸುಸಂಕುಳದು ॥
ಗಮಕಾನನದಾವಾಗ್ನಿಗ ।
ಳಮರ್ತ್ಯಲೋಕಪ್ರಸಿದ್ಧಿಗಳ್ ತರಳಾಕ್ಷೀ ॥ ೨೩

ಸುರನದಿ ಗಂಗೆ ಗೌತಮಿ ಸರಸ್ವತಿ ನರ್ಮದೆ ಕೃಷ್ಣವೇಣಿ ಭೀ ।
ಮರಥಿ ಪಯೋಷ್ಣಿಕಾದ್ರಿ ಯಮುನಾನದಿ ಸಿಂಧು ಕವೇರಕನ್ಯೆ ಭಾ ॥
ಸುರತರತುಂಗಭದ್ರೆಯೆನಿಪ್ಪತ್ತಮತೀರ್ಥಮನೇಕಮುರ್ವಿಯೊಳ್ ।
ಪರಿವಿಡಿದಿರ್ಪುವಲ್ತೆ ದುರಿತಕ್ಷಯಕಾರಣಪುಣ್ಯಮೂರ್ತಿಗಳ್ ॥ ೨೪

ಮತ್ತಂ

ಮಾಳವ ಗೌಳ ಘೂರ್ಜರ ವರಾಳ ಕಳಿಂಗ ತುರುಷ್ಕ ಸಿಂಧು ನೇ ।
ಪಾಳ ಸುಪಾಂಡ್ಯ ಕೇರಳ ಮಹಾಂಧ್ರ ಸುರಾಷ್ಟ್ರಮಿವಾದಿಯಾದ ಸ ॥
ಲ್ಲೀಲೆಯ ದೇಶಸಂತತಿಯನೇಕಮೆನಲ್ ಮೆಱೆದಿರ್ಪುವಲ್ತೆ ಕೇಳ್ ।
ಬಾಲಕಿ ನೋಡಲಲ್ಲಿ ಸುಖಸಂತತಿ ಸಂದೆಸೆಗುಂ ನಿರಂತರಂ ॥ ೨೫

ಈದೇಶಂಗಳೊಳುಳ್ಳ ನಾರಿಯರೊಳೊಂದೊಂದತ್ಯಪೂರ್ವಂ ಕಳಾ ।
ಭೇದಂ ಕೂರ್ಮೆಯೊಳಾದ ಸಂಗಮವಿನೋದಂ ರೂಪಲಾವಣ್ಯಸಂ ॥
ಮೋದಂ ಪೆಂಪಿನೊಳೊಪ್ಪುತಿರ್ಪ ವನಿತಾಸಲ್ಲಕ್ಷಣಂ ಕೇಳವಂ ।
ತೀದೇವೀ ವಿವರಕ್ಕಗೋಚರಮೆಲೇ ಶುಂಭತ್ಪ್ರವಾಳಾಧರೇ ॥ ೨೬

ಇದು ಕರ್ಮಭೂಮಿಯಿದಱೊಳ್ ।
ಸದಮಳಧರ್ಮಾರ್ಥಕಾಮಮುಮಂ ಸಾಧಿಸದು ॥
ಬ್ಧಿದ ದುಷ್ಕರ್ಮಮನೆಸಗುವ ।
ಮದಮುಖರಿಹಪರಸುಖಕ್ಕೆ ಬಾಹಿರರಲ್ತೇ ॥ ೨೭

ಎಂದನಂತರಂ

ಇದಱ ವಿಶೇಷಮಂ ನಿನಗೆ ಪೇೞ್ವೊಡದಗ್ಗಳಮೆನ್ನ ಬಲ್ಲಪೋಲ್ ।
ಪದೆದಱಿವಂತುಟಂ ನಿನಗೆ ಪೇೞ್ವೆನೆನಲ್ ಸುಕುಮಾರನಂ ಮನೋ ॥

ಮುದದಿನವಳ್ ವಿಳಾಸವೆನಲಪ್ಪಿ ತದೋಷ್ಠವನೀಟ್ಟು ಚುಂಬಿಸಲ್ ।
ಸದವುಳರಾಗವಂ ತಳೆದು ತಾಂ ಮಗುಳ್ದಪ್ಪಿದನುರ್ವರಾಧಿಪಂ ॥ ೨೮

ಅಂತಾಭುವನಕೋಶವಂ ರಾಜವಾಹನನಿಂ ಸೂಚನಮಾತ್ರದಿಂದಱಿದ ಅವಂತೀಸೌಂದರಿ

ಶ್ರೀಮದಶೇಷಸದ್ಭುವನಕೋಶವು ನೆಯ್ದುಯವಂತಿಸೌಂದರೀ ।
ಕಾಮಿನಿ ರಾಜವಾಹನೃಪನಿಂ ಸಲೆ ಕೇಳ್ದಲೆ ಭೂಪ ಮನ್ಮನಃ ॥
ಪ್ರೇಮವೆನಿಪ್ಪ ನಿನ್ನ ನುಡಿ ಕರ್ಣರಸಾಯನವಾಯ್ತು ನಂತಸೌ ।
ಖ್ಯಾಮೃತವಂ ಸಮಂತು ಪಡೆದೆಂ ಸಕಲೇಂದ್ರಿಯಸೌಖ್ಯಸಾರವಂ ॥

ಆದೊಡಮಾಂ ನಿನಗೆ ಮಾಳ್ಪ ಪ್ರತ್ಯುಪಕಾರಮಾವುದುಮಿಲ್ಲವೊಡಂ

ಶಾರದೆ ರಂಜಿಸಿಪ್ಪ ಮುಖಪಂಕಜವಂ ಸಲೆ ಲಕ್ಷ್ಮಿಯೊಪ್ಪುವೀ ।
ಪೇರುರವಂ ಸಪತ್ನಿಯುರಯುತ್ತ್ಪಡೆ ಸೋಂಕಿದ ತಾಣವೊಂಬ ೞ ॥
ಜ್ಜಾರಯುಮಿಲ್ಲದಾಂ ಮಗುಳ್ದು ಚುಂಬಿಸಿಯುತ್ತ್ಸವ ಧೈರ್ಯವಂ ಮಹೋ
ದಾರದೊಳೀಕ್ಷಿಸೊಲ್ದು ನೃಪನಂದನ ನಿನ್ನ ಗುಣ ಪ್ರತೀಕದಿಂ ॥ ೩೦

ಅಂತೆಂದು

ಈತನ ಸೌಖ್ಯಾಮೃತಸಂ ।
ಪಾತಕ್ಕಿದು ತಾಣವೆಂದು ತಾಮ್ರಾಧರವಂ ॥
ಪ್ರೀತಿಯಿನೊಪ್ಪಿರೆ ಚುಂಬಿಸಿ ।
ನೂತನಸೌಖ್ಯಕ್ಕೆ ತಾನೆ ನೆಲೆಯೆನಿಸಿರ್ದಳ್ ॥ ೩೧

ಕುಡಿಯಿಡುತಿರ್ಪ ಕಲ್ಪಲತೆ ಕಲ್ಪಕುಜಾಗ್ರಮನಪ್ಪುವಂತೆ ನಾಣ ।
ಸಡಿಲೆ ಕುಮಾರನಂ ಭುಜಲತಾದ್ವಯದಿಂ ಬಿಗಿಯಪ್ಪಿ ಪೊಪಿನಿಂ ॥
ಪಿಡಿದಧರಾಗ್ರಮಂ ಸವಿದು ಮತ್ತೆ ರತೋತ್ಸವದಿಚ್ಛೆಯಾಗೆ ನಾ ।
ಣ್ಬಿಡುಕುವ ಕಾಂತೆಯಂ ಮಗುಳ್ದು ತಾನಮರ್ದಪ್ಪಿದನುರ್ವರಾಧಿಪಂ॥ ೩೨

ಅಂತು ಮಗುಳ್ದು ಮಗುಳ್ದನೇಕಕರಣಂಗಳಿಂ ಕಾಮಕಲಹಮನೊಡರ್ಚಿ

ನೆಗೆದ ಕುಚಂಗಳೊತ್ತಿಱಿದು ಚಪ್ಪಲದರ್ಪಿನಮಂಗಮಂಗದೊಳ್ ।
ಸೊಗಸುವಿನಂ ಪೊಗರ್ ಮಿಗುವ ತೋಳ್ ಸಳಿತೋಳೊಳಮರ್ಕೆವೆತ್ತಿರಲ್॥

ಬಿಗಿದಮುರ್ದಿಕ್ಕಿಕೊಂಡು ಸುರತಶ್ರಮದಿಂ ಸುಖನಿದ್ರೆಗೈದು ಕಾ ।
ಮಿಗಿಲೆಸೆದರ್ ಮನೋಭವನ ನಾಟಕದಿಂಬಿನ ಬೊಂಬೆಯೆಂಬಿನಂ॥ ೩೩

ಅಂತು ಕಂದರ್ಪಕೇಳೀಕಲಾಪದೊಳ್ ಬಳಲ್ದು ಸುಖನಿದ್ರೆಯಿಂದಿರ್ಪಾಗಳ್

ಜರಠಕಲಹಂಸಚರಣಾಂ ।
ತರದೊಳ್ ತಾವರೆಯ ನೂಲ ಸಂಕಲೆಯಿಕ್ಕಿ ॥
ಪಿರ್ರವಿನ ಕನಸಂ ಕಂಡರ್ ।
ನರಪತಿಯುಮವಂತಿಸೌಂದರಿಯುಮವಾಕ್ಷಣದೊಳ್ ॥ ೩೪

ಅಂತು ದುಸ್ಸ್ವಪ್ನವಂ ಕಂಡು

ಅರುಣೋದಯಕಾಲದೊಳ್ ।
ಬರ್ರುವೊರ್ವೊರ್ದಲೆಟ್ದು ನೋಡೆ ಭೂಪಾಲನ ಸ ॥
ಚ್ಚರಣಾಗ್ರದೊಳಿರ್ದುದು ಭೀ ।
ಕರಮೆನಿಸುವ ಬೆಳ್ಳಿವೆಸದ ಸಂಕಲೆಯಾಗಳ್ ॥ ೩೫

ಉಡುಗಣಮಂ ನಿಜಾಂಘ್ರಿನಖದೀಧಿತಿಯಿಂ ಸೆಱೆಗೆಯ್ದುಯಿನ್ನುವಂ ।
ಬಿಡುವುದೆನುತ್ತೆ ಪೂರ್ಣಶಶಿ ಕಾಲ್ವಿಡಿದಿರ್ದನೊ ಪೇೞೆನಲ್ಕೆ ಬೆ ॥
ಳ್ಪೆಡೆವಿಡದಿರ್ಪ ರೂಪ್ಯಮಯಶೃಂಖಲೆ ರಾಜಕುಮಾರನಂಘ್ರಿಯೊಳ್ ।
ತೊಡರ್ದಿರೆ ಕಂಡನಂತವಧು ಬಾಯುಱಿದತ್ತುಳತೀವಖೇದದೊಳ್ ॥ ೩೬

ಅಂತಶ್ರೀಕರಮಪ್ಪ ಸಂಕಲೆಯುಂ ಕುಮಾರನ ಕಾಲೊಳ್ ಭೋಂಕೆನಲ
ವಂತೀಸೌಂದರಿ ಕಂಡು

ಪಾಪಿ ವಿಧಾತ್ರನಿಂ ಕುಸುಮಕೋಮಲದೇಹನ ಕಾಲ್ಗೆ ಬಂಧನಂ ।
ಪ್ರಾಪಿಸಲಕ್ಕುಮೇ ಎನುತೆ ಶೋಕಮನ್ಯೈದೆ ಕುಮಾರಿ ತನ್ನ ಕಾಂ ॥
ತಾಪರಿವಾರಮಂಬೆರಸು ಬೇಡೆಲೆ ವಲ್ಲಭೆ ಶೋಕಮೆಂದು ಧಾ ।
ತ್ರೀಪತಿ ಪೇೞ್ದನೊಂದೆರಡು ತಿಂಗಳ ಬಂಧನಮೆಂದು ಕಾಂತೆಯೊಳ್ ॥ ೩೭

ಆಂ ಪೂರ್ವಭವದೊಳೆರಡು ದಿ ।
ಸಂ ಪಿಡಿತಂದೊಂದು ಹಂಸಿಯಂಘ್ರಿದ್ವಯಮಂ ॥
ತಂಪಿನ ತಾವರೆನೂಲಿಂ ।
ಪೆಂಪಿಂ ಕಟ್ಟಿರ್ದೆನಂಬುಕೇಳಿಯೊಳಬಲೇ ॥

ಅಂತಾಂ ಪೂರ್ವಭವದೊಳ್ ಶಾಂಭವನೆಂಬರಸಾಗಿರ್ದಲ್ಲಿ ಜಲಕ್ರೀಡಾ ಸಮಯದೊಳ್ ಒಂದು ಹಂಸಿಯನೆರಡುದಿನಂ ನಿರ್ಬಂಧಿಸಿದ ಕಾರಣದಿಂದೆ ನಗೀಜನ್ಮದೊಳಂತೀಬಂಧನಂ ಬಂದುದೆಂಬುದಂ ಕೇಳ್ದುಱಿವೆನೆಂದೊಡಂ ಮಾಣದೆ

ಇಂದುವ ಬಿಂಬದಿಂದಮೃತಬಿಂದುಗಳುಕ್ಕುವವೆಂಬವೋಲ್ ಮಹಾ ।
ಕ್ರಂದನವೇಗದಿಂದೆ ಸುರಿವಶ್ರುಜಲಂ ಪೊನಲಾಗೆ ಮತ್ತಮಿಂ ॥
ಟುಂ ದೆಸೆ ತೀವ್ರವಂತೆ ಮಿಗುವಾರ್ತರವಂ ಪೊಸತಾಗೆ ದುಃಖದಿಂ ।
ಮುಂದುಗೆಡುತ್ತೆ ಶೋಕಿಸುವ ಕಾಂತೆಗೆ ಮತ್ತಿನ ಭೀತಿಯೊಪ್ಪದೇ ॥ ೩೯

ಅಂತು ಕಟ್ಟಾಸುರದಿಂದಮಂತೀಸೌಂದರಿ ಕನ್ಯಾವ್ರತದ ಭೀತಿಯಂ ಬಗೆಯದೆ ಶೋಕಿಸುವ ಧ್ವನಿಯನಂತವರ್ ಸಿಕರ್ ಕೇಳ್ದು ಬಂದು ನೋೞ್ಪನಂ

ಕೋಮಳದೇಹನನತ್ಯಭಿ ।
ರಾಮನನದ್ಭುತಗಭೀರಮೂರ್ತಿಯನತುಳೋ ॥
ದ್ದಾಮಭುಜನಂ ಮನೋಹರ ।
ಭೂಮೀಶ್ವರಸುತನನಂತವರ್ ಪಿಡಿಗೆ ಕಂಡರ್ ॥ ೪೦

ಅಂತಿರ್ದ ಕುಮಾರನಂ ಕಂಡು

ಕನ್ಯಾಂತಃಪುರಮಂ ವಿಚಾರರಹಿತಂ ನಿರ್ಭೀತಿಯಿಂ ಪೊಕ್ಕನ ।
ತ್ಯನ್ಯಾಯಂ ಬಿಗಿ ಕಟ್ಟಿ ಕಳ್ಳನನೆನುತ್ತುದ್ರೇಕಿಸಲ್ ಚಿತ್ತಕಾ ॥
ಱನ್ಯಂ ಮಿಕ್ಕವನೊರ್ವ ಕಿಂಕರವರಂ ತದ್ರೂಪನಂ ಕಂಡಿವಂ ।
ಮಾನ್ಯಂ ದಂಡಿಸಲಕ್ಕೆನೊಲ್ದುಱಿಪುವೆಂ ಶ್ರೀಚಂಡಮರ್ಮಾಖ್ಯನೊಳ್ ॥ ೪೧

ಎಂದು ಚಂಡಮರ್ಮಂಗವಂ ಪೋಗಿ ಪೇೞಲವನಂ ಬೇಗದಿಂ ತನ್ನಿಮೆನಲೊಡಂ

ಬೆಳ್ಳಿಯ ಸಂಕಲೆಯೊಡನಾ ।
ಬಲ್ಲಾಳ್ಗಳ್ ಕೆಯ್ಯನಾರ್ಪಿನಿಂ ಪಿಡಿದು ಧರಾ ॥
ವಲ್ಲಭನಂ ತಂದರ್ ಸಭೆ ।
ಯೆಲ್ಲಂ ಬೆಱಗಾಗಿ ನೋೞ್ಪನಂ ಕಡುವೇಗಂ ॥ ೪೨

ಅಂತು ಪಿಡಿತಂದು ರಾಜಕುಮಾರನಂ ಚಂಡವರ್ಮನ ಮುಂದೆ ನಿಲಿಸಲಾತಂ ನೋಡಿ

ಇವನೇ ಅಂತವನೊಪ್ಪುವೆನ್ನನುಜನಂ ಕನ್ಯಾರ್ಥದಿಂ ಕೊಂದ ಕೈ ।
ತವಪ್ರಷ್ಟೋದ್ಧನಮಿತ್ರನೀತನಸುವಂ ವೈವಸ್ವತಂಗೊಪ್ಪಿಸೆಂ ॥
ಬ ವಿಶೇಷೋಕ್ತಿಯುಮಂತಿದೇವನ ಕಳಾಸಂಪನ್ನೆ ಮಾದೇವಿಯಾ ।
ಶ್ರವಣಕ್ಕೆಯ್ತರೆ ಚಂಡವರ್ಮಸಚಿವಂಗಿಂತೆಂದು ಪೇೞ್ದಿಟ್ಟಪಳ್ ॥ ೪೩

ಅದೆಂತೆನೆ—

ಅವನಂ ಕೊಂದೊಡವಂತಿದೇವಿ ಮೊದಲೊಳ್ ತೀರ್ಗುಂ ದಿಟಂ ತೀರ್ದೊಡೇ
ನವಳಿಂ ಪಿಂದಿರವೆಮ್ಮ ಜೀವಮೆರಡೆಂಬೀನಿಶ್ಚಯಕ್ಕಲ್ಲಿ ತ ॥
ನ್ನವಿಚಾರಕ್ರಮಮೆಂತುಟಂತೆಸಗುಗೆಂಬೀವಾರ್ತೆಯಂ ಕೇಳ್ದು ಮಂ ।
ತ್ರಿವರಂ ಕೊಲ್ಲದೆ ಭೂಪನಂ ಕಳಿಪಿದಂ ಕಾರಾಗೃಹಕ್ಕಾಕ್ಷಣಂ ॥ ೪೪

ಅಂತಾತನಂ ಸೆಱೆಯಿಡಲ್ ಬೞಿಕ್ಕಿತ್ತಲ್

ಮರುಳಾಗಿಯುಮಂತೀಶ್ವರ ।
ನರಸಿ ಮಹಾದೇವಿಯಿರ್ವರುಂ ಕನ್ಯಾಂತಃ ॥
ಪುರದೊಳ್ ಸಿಕ್ಕಿದ ಕಳ್ಳನ ।
ನೊರಸಲ್ವೇಡೆಂಗಪರ್ ಮಗುಳ್*ದೀಗೆಯ್ವಂ ॥ ೪೫

ಎಂದು ಮಹೇಂದ್ರಾಚಲದೊಳ್ ತಪಂಬಡುತಿರ್ಪ ಪರ್ಣಸಾರಂಗೋಲೆಯಂ ಕಳಿಪಿ ಕುಳ್ಳಿರ್ದಾಗಳ್

ಚಂಪಾಪುರಪತಿಯೆನಿಸುವ ।
ಪೆಂಪಂ ಪಡೆದಿರ್ಪ ಸಿಂಹವರ್ಮನ ಮಗಳಂ ॥
ತಱಂ ಪೂರ್ವದೊಳೆರೆದಟ್ಟಿದ ।
ಪೆಂಪಿನ ದೂತಂ ಕನಲ್ದು ಮಗುಳ್*ದೆಯ್ತಂದಂ ॥ ೪೬

ಅಂತಾದೂತಂ ಬಂದೋಲಗದೊಳಿರ್ದ ಚಂಡವರ್ಮಂಗೆ ಪೊಡೆಮಟ್ಟಿಂತೆಂದಂ—

ಎಲ್ಲಿಯು ಚಂಡವರ್ಮನವನಂ ಬಗೆಗೊಳ್ವವನಾವನುರ್ವರಾ ।
ವಲ್ಲಭನಾದವಂಗೆ ಕುಡುವೆಂ ಮಗಳಂ ಬಡಮುಂತ್ರಿಗೀಯೆನಂ ॥
ದೆಲ್ಲರ ಮುಂದೆ ಧಿಕ್ಕರಿಸಿ ನೂಂಕಿದನೆನ್ನನೆ ಸಿಂಹವರ್ಮನೀ ।
ಪ್ರೊಲ್ಲಮೆಯುಂ ವಿಚಾರಿಸುವುದೆಂದುಸಿರ್ದಂ* ಚರನುಕ್ತಿಭೀಕರಂ ॥ ೪೭

ಇಂತಾದೂತಂ ಪೇೞಲೊಡಂ

ಭಂಗುರಭೀಷಣಭ್ರುಕುಟಿ ಕೆಂಪಡರ್ದ*ಕ್ಷಿಯುಗಂ ವಿವರ್ಣಮಾ ।
ದಂಗಮುಗುರ್ವಿನಿಂ ಕುಣಿವ ಮೀಸೆ ಕನಲ್ವ ಮುಖಂ ವಿರೋಧಿಯಂ ॥
ನುಂಗಿಯುಗುಳ್ವೆನೆಂಬ ನುಡಿ ಲೋಕಭಯಂಕರಮಾಗೆ ಚಂಡವ ।
ರ್ಮಂ ಗಡಿಗೆಟ್ಟ ಕೋಪದೊದವಿಂ ದಳಮುಖ್ಯನನಂದು ನೋಡಿದಂ॥ ೪೮

ಅಂತು ದಳಮುಖ್ಯನಂ ನೋಡಿ ಚತುರಂಗಬಲಮಂ ಬರಿಸೆಂಬುದುಂ,

ಸಿಂಗದ ಸಂಗಮಂತಕನ ತಿಂತ್ರಿಣಿ ಮಾರಿಯ ಮಾರಿ ಕಾಲರು ।
ದ್ರಂಗನುಸಾರಿ ಭೈರವನ ಭಾರಣೆ ರಕ್ಕಸರುರ್ಕು ಮಿಬ್ಬು ಮೊ ॥
ತ್ತಂ ಗಣನಾತಿರೇಕಮೆನಲೊಪ್ಪುವಪ್ರೋಲ್ ನೆರೆದಿರ್ದುದಾಕ್ಷಣಂ ।
ಸಂಗರದುಜ್ಜುಗಕ್ಕೆ ಚತುರಂಗಬಲಂ ನಸು ತರ್ಗೆ ಭೂತಳಂ ॥ ೪೯

ಅಂತು ಚತುರಂಗಬಲಂ ನೆರೆದು ಬರೆ ಕಂಡು

ಮಾರಿ ಮಸಗಿತ್ತೆನಲ್ ಸಂ ।
ಹಾರಂಮಾಡುವೆನರಾತಿಬಲಮಂ ಪಿಡಿದಾಂ ॥
ಕೂರಸಿಯನೆಂದು ಭಾಷೆಯ ।
ನೋರಂತಿರಲಿತ್ತು ಘೂರ್ಮಿಸಿತ್ತಾಸ್ಥಾನಂ ॥ ೫೦

ಅಲ್ಲಿ

ಎನ್ನಾನೆಯಿಂದೆ ಪಗೆಗಳ ।
ಬೆನ್ನೆಲ್ವಂ ಮೆಟ್ಟ ಮುಱಿಸಿ ಸಪ್ತಾಂಗದ ಸೊಂ ॥
ಪನ್ನಿನಗೆ ತಂದು ಕುಡದೊಡೆ ।
ನಿನ್ನಹಿತನ ಮನೆಗೆ ತೊಬ್ತು ಮಾಡುವುದೆನ್ನಂ ॥ ೫೧

ಎಂಬ ನಿಷಾದಿಗಳ್ ಭಾಷೆಯಂ ಕುಡುವುದುಂ,

ತುರಗಖುರಪ್ರಹತದೊಳರಿಗಳ ।
ಶಿರಂಗಳಂ ಚೆಂಡುದಾಡಿಸಿ ವಿಜಯಶ್ರೀಯಂ ॥
ನೆರೆಯದೆ ಮಾಣ್ದಪೆವಾದೊಡೆ ।
ಧುರದೊಳ್ ಪಗೆವಂಗೆ ಮಾರುವೋಪೆವಿಳೇಶಾ ॥ ೫೦

ಎಂದಶ್ವಾರೂಢರುಂ ಪ್ರತಿಜ್ಞೆಗೆಯ್ದಿರಪ್ಪಿನಂ,
ರಥದುರವಣೆಯಿಂ ರಿಪುಸಾ ।
ರಥಿಯುಂ ತದ್ರಥಮುನದಟು ಕುದುರೆಯನಾಶಾ ॥
ಪಥಮಂ ಪತ್ತಿಸಿದಪೆವವಿ ।
ತಥಮೆನ್ನದೆ ನೋೞ್ಪುದೆಮ್ಮ ಕಾಳಗದನುವಂ ॥ ೫೩

ಎಂದು ರಥಿಕರ್ ನುಡಿದು ನಿಟ್ಟೆಯಿಂ ನಿಲ್ವುದುಂ,
ಸಂಹಾರರುದ್ರನಂತಿರ ।
ಲಾಹವದೊಳ್ ನಡೆದು ಪಗೆಗಳಂ ಕಾಣಲೊಡಂ ॥
ಬಾಹಾಬಲದಿಂ ಮರ್ದಿಸಿ ।
ಸಾಹಸಮಂ ಮೆಱೆವೆವೆಂದರುದ್ಧತವೀರರ್ ॥ ೫೪

ಸಿಡಿಲೆಱಗುವಂತೆ ಪಗೆಗಳ ।
ನಡುನೆತ್ತಿಯನೆಱಗಿ ಪೊಯ್ದು ನೆತ್ತರ್ಪೂರ್ನಲಿಂ ॥
ಕಡಲಾಯ್ತೆನಿಸುವೆನಾಹವ ।
ದೆಡೆಯೊಳೆನುತೆತ್ತೆ ವರ್ ಲಾಡಿಗಾಱಂ ಮೆಱೆದಂ ॥ ೫೫

ಕೋಲಿಂ ರಿಪುಗಳ ಪಂದಲೆ ।
ಸಾಲಂ ರಣಭೂಮಿಯಲ್ಲಿ ತೋಱದೊಡೆಲೆ ಭೂ ॥
ಪಾಲ ಗುಱಿಮಾೞ್ಪುದೆನ್ನಂ ।
ಸೂಲಕ್ಕಾಹವದೊಳೆಂದರಾಬಿಲ್ಲಾಳ್ಗಳ್ ॥ ೫೬

ಸಬಳಂಬಿಡಿದನಿತಂ ಕೊಂ ।
ದು ಬಾನ್ಗವಂ ಕೆತ್ತಿ ದೇವತತಿಗಂಜಿಕೆಯಂ ॥
ನಿಬಿಡವೆನೆ ಮಾಡದೊಡೆ ನರ ।
ಕಬಾಧೆಗೊಳಗಪ್ಪೆನರಸ ನಿನ್ನಾಣೆ ಕೆಯ್ದ್ಯಾಳ್ ॥ ೫೭

ಆನೆ ಬರಲೆನ್ನ ಪರಿಗೆಯೊ ।
ಳಾನದೆ ಪೆಱ ಮೆಟ್ಟಿ ನಿಂದೆನಾದೊಡೆ ಪಗೆಗಾಂ ॥
ಮಾನಿನಿಯಾದಪೆನೆಂದಸ ।
ಮಾನದ ಬಿರುದೆಸಿನ ಪರಿಗೆಕಾಱರ್ ಮೆಱೆದರ್ ॥ ೫೮

ಅಂತು ಸುಭಟನಿಕರಂ ಸಂರಂಭದಿಂದಿರಲದಂ ಚಂಡವರ್ಮಂ ಕಂಡು

ಸಾಮಂ ಪಾರ್ವರ್ಗೆ ಭೇದಂ ನಿಗಮನಿಕರಶೂನ್ಯರ್ಗೆ ದಾನಂ ಮದೇಭ।
ಸ್ತೋಮಕ್ಕಾರಯ್ಯೆ ಮುಖ್ಯಂ ನೃಪತಿಗೆ ಬಗೆಯೊಳ್ ದಂಡಮೇ ಮುಖ್ಯ
ಮೊಂದಾ ॥ ಭೂಮೀಶಂ ಚಂಡವರ್ಮಂ ನಿಜಭುಜಬಲದಿಂ ವೈರಿಭೂಪಾಲ
ರಾಜ್ಯ । ಶ್ರೀಮಾನ್ಯಶ್ರೀಯ ಪಾಣಿಗ್ರಹಣಮನೊಲವಿಂ ಮಾಳ್ಪೆನೆಂದೆಟ್ಟಿ
ದಾಗಳ್ ॥ ೫೯

ಅಂತೆಟ್ಟಿ ಚಂಪಾಪುರಕ್ಕಭಿಮುಖನಪ್ಪುದುಂ,

ಕಡಲೇಱುಂ ಕದಡಲ್ ದಿಶಾವಿತತಿಗಳ್ ಬೆಂಡಾಗೆ ಸರ್ವೋರ್ವಿ ಬಾ ।
ಯ್ವಿಡೆ ಗೋತ್ರಾದ್ರಿನಿಕುಂಜದೊಳ್ ಪ್ರತಿರವಂ ಪೊಣ್ಮಲ್ಕೆ ವಿದ್ವೇಷಿಗಳ್॥
ನಡುಗಲ್ ಭೀಕರಮಪ್ಪಿನಂ ಪದೆಪಿನಿಂ ಶ್ರೀಚಂಡವರ್ಮಂ ಬೆಸಂ ।
ಗುಡೆ ಪೊಣ್ಮಿತ್ತು ಸುವರ್ಣಕೋಣಹತಿಯಿಂ ಪ್ರಸ್ಥಾನಭೇರೀರವಂ ॥ ೬೦

ಅಂತು ಪ್ರಸ್ಥಾನಭೇರಿಯುಂ ಪೊಯ್ಸಿ

ಅಂತಃಪುರದೊಳ್ ಸಿಕ್ಕಿದ ।
ನಂತಾತನನೆನ್ನ ಕೂಡೆ ಕೊಂಡುಯ್ವೆಂ ನಿ ॥
ಶ್ಚಿಂತಮೆನಗಪ್ಪುದೆಂದು ದು ।
ರಂತಮೆನಿಪ್ಪಧಿಕಕೋಪದಿಂ ತರವೇೞ್ದಂ ॥ ೬೧

ಅಂತು ಕೋಪಂ ಕೈಮಿಕ್ಕು ಚಂಡವರ್ಮಂ ಕಾರಾಗೃಹದೊಳಿರ್ದ
ರಾಜವಾಹನನಂ ತರಿಸಿ

ಕುಂಜರನ ಕೆಯ್ಯೊಳಿವನಂ ।
ಕಂಜಮನೀಡಾಡುವಂತೆ ಕೊಲಿಸುವೆನಿವನಾ ॥
ಗರ್ಜುವನಲ್ಲಂ ಭಂಡಿಯು ।
ಪಂಜರದೊಳಗಿಕ್ಕಿಮೆಂದು ಪುಗಿಸಿದನಾಗಳ್ ॥ ೬೨

ಅಂತು ಕುಮಾರನನೊಂದು ಪಂಜರದೊಳ್ ಪುಗಿಸಿ ಕವಾಟಮಂ ಬಂಧಿಸಿ

ಪರಿವೇಷಗ ನಡುವೆ ಮನೋ |
ಹರಪೂರ್ಣಶಶಾಂಕನಿರ್ಪ ತೆಱದಿಂದಾಪಂ ||
ಜರದೊಳಗೆ ತೇಜದಿಂದು |
ರ್ವರೇಶತನಯಂ ವಿಲಾಸದಿಂ ಕಣ್ಗೆಸೆದಂ || ೬೩

ಕೇಸರಿಯೊಂದುಮನಾರ್ಪಿಂ |
ದಾಸುರಮೆನಿಪ್ಪೊಂದು ಪಂಜರಾಂತದೊಳಿಟ್ಟಂ ||
ತಾಸಿಂಹವಿಕ್ರಮಂ ಸವಿ |
ಳಾಸದಿನಿರ್ದಂ ವಿಧಾತೃವಶಮೆನುತಾಗಳ್ || ೬೪

ಚೂಡಾಮಣಿಯಿಂದೆ ತೃಷಾ |
ಪೀಡೆಯುಮಗ್ಗಳದ ಪಸಿವನಾರ್ತವನೊಡನೀ ||
ಡಾಡಿ ಬಡವಾಗದಿರ್ದಂ |
ಪಾಡಱಿಯದೆ ನೃಪಕುಮಾರಕಂ ಪಂಜರದೊಳ್ || ೬೫

ಅಂತು ಮಾತಂಗಕಂ ಕೊಟ್ಟ ಮಾಣಿಕ್ಯದ ಬಲದಿಂ ಕ್ಷುತ್ಪಿಪಾಸೆಯಂ ಬಗೆಯದಿರ್ಪ ಕುಮಾರನಂ ಪಂಜರದೊಳಿಟ್ಟು ಚಂಪಾಪುರಕ್ಕೆ ಚಂಡವರ್ಮಂ ನಡೆವಾಗಳ್

ಕರಿ ತುರಗಂ ರಥಂ ನಿಜಪದಾತಿ ಭಯಂಕರಕೋಪದಿಂದಮೆ |
ಯ್ತರೆ ಪದಘಾತದಿಂ ನೆಗೆದ ಧೂಳಿ ಕರಂ ಪುದಿದಂತರಿಕ್ಷದೊಳ್ ||
ಪರಿನಡೆದಿರ್ದುದೆಯ್ದೆ ಗಗನಂ ಬಯಲೆಂಬರ ಮಾತದೇಕೆ ಕಂ |
ಡಿರೆ ಗಗನಸ್ಥಳಸ್ಥಿತಿಯನೆಂದುಱೆ ತೋರ್ಪವೊಲೆಲ್ಲಿ ನೋೞ್ಪೊಡಂ || ೬೬

ಬೆಟ್ಟುಗಳೆಯ್ದೆ ನುಗ್ಗೆ ಪೞವಟ್ಟೆವೊಲಾಗೆ ನದೀನದಂ ಪದೋ |
ದ್ಘಟ್ಟನೆಯಿಂ ಮಱಲ್ ಮುಸಗೆ ದಿಗ್ವಿವರಂ ಚತುರಂಗಸೇನೆಗಂ ||
ಬಿಟ್ಟೆಡೆಯಾಗೆ ಭೂಮಿ ದಳಭಾರಣೆಯಿಂ ನಸು ನೆಗ್ಗೆ ವೈರಿ ಮುಂ |
ಗೆಟ್ಟಿರೆ ಚಂಡವರ್ಮನರಪಂ ನಡೆಗೊಂಡನತೀವಕೋಪದಿಂ || ೬೭

ಅಂತತಿಸಂಭ್ರಮಂಬೆರಸು ಚಂಡವರ್ಮಂ ನಡೆತರ್ಪುದಂ ಸಿಂಹವರ್ಮಂ ಕೇಳ್ದು

ಮುಳಿದೀಗಳ್ ಚಂಡವರ್ಮಂ ತನಗೆ ಮಗಳನಾನೀಯೆನೆಂಬುಗ್ರಕೋಪಾ । ನಳಸಿಂ ಮೇಲೆತ್ತಿ ಬಂದೆನ್ನಯ ಮಗಳೊಡನೀರಾಜ್ಯಮಂ ಕೊಳ್ವಬಾಹಾ ॥ ಬಳದಿಂದೇಱ್ತರ್ಪನೇಱ್ತರ್ಪುದು ಪಡಿಬಲಮಪ್ಪಂತಿರೆನ್ನೊಳ್ನೃಪರ್ ತೋ । ಳ್ವಳದಿಂದೆಂದೋಲೆಯಂ ನಾಲ್ದೆಸೆಗೆ ಕಳಿಪಿದಂ ಕೂರ್ಮೆಯಿಂ ಸಿಂಹವರ್ಮಂ ॥ ೬೮

ಅಂತು ತನಗೆ ಮಿತ್ರರಪ್ಪರಸುಗಳಂ ಪಡಿಬಲಮಾಗಿ ಬರಲ್ವೇೞ್ದು ಸಿಂಹವರ್ಮಂ ತನ್ನುಳ್ಳ ಸೈನ್ಯಮಂ ಕೂಡಿಕೊಂಡು ಚಂಡವರ್ಮಂಗಿದಿರಾಗಿ ಬಿಡಲ್

ಆರೀಸೈನ್ಯಮನಾಂಪರ್ ।
ಧಾರಿಣಿಯೊಳೆನಲ್ಕೆ ಚಂಡವರ್ಮಂ ಸಲೆ ದು ॥
ರ್ವಾರಿತಸಂರಂಭದಿನಂ ।
ಬೋರೆಂತಿರೆ ಬಿಟ್ಟನಲ್ತೆ ಚಂಪೆಯ ಗಡಿಯೊಳ್ ॥ ೬೯

ಅಂತುಭಯಬಲಮತ್ಯಾಸನ್ನಮಾಗಿ ಬಿಡುವುದುಂ ಚಂಡವರ್ಮನ ಸುಭಟರ್ ಮುಂದುವರಿದು

ಕಡುಪುಳ್ಳರ್ ಬಂದು ಕೈದೋಱದೆ ಮಱೆದಿರೆವೆಂದಿದಿರ್ಗೊಡ್ಡಂ ಚಂಡವರ್ಮಂ । ಬಿಡನೆಂತುಂ ಸಿಂಹವರ್ಮಾತ್ಮಜೆಯನವನಿಯಂ ಕೊಳ್ವದೆಂದಾದುರ್ಸೈನ್ಯಂ ॥ ನಡೆಯಲ್ ಬೊಬ್ಬಿಟ್ಟು ಕೋಲಂ ತುಡುಕೆ ಮುಳಿಸಿನಿಂ ಮಾರ್ಬಲಂ ಚೂಣಿಯೊಳ್ ಕೂ । ಗಿಡಿಸಿತ್ತಂದಾಂಪ ವೈರಿಕ್ಷಿತಿಪನ ಭಟರಂ ದಿಂಡುಮಾಯ್ದೆೞ್ಚು ಬೇಗಂ ॥ ೭೦

ವೈರಿಶಿರೋಜರಕ್ತಮಧುವಂ ತವೆ ಪೀರ್ವ ಶಿಲೀಮುಖಂಗಳಾ ।
ಕಾರದೊಳಂಬುಗಳ್ ಗಗನದೊಳ್ ಮಿಗೆ ಪಾಱೆ ವಿರೋಧಿಮಾಳಿಯೊಳ್ ॥
ಭೋರೆನಲಾರ್ಪಿನಿಂ ಬೆಱಗೆ ತೊಟ್ಟು ಕಟಿಲ್ಚಿದ ಪೂವಿನಂದದಿಂ ।
ಧಾರಿಣಿಯಲ್ಲಿ ಬಿೞ್ದುವು ಶಿರಂ ಪೊಸತಾಗೆ ಧನುರ್ಧರಾಹವಂ ॥ ೭೧

ಮುತ್ತಿನ ಬಯ್ಕೆಯಂ ತೆಗೆವೊಡಂಜನಮಲ್ತೆ ಮದೀಯಖಡ್ಗಮೆಂ ।
ದೆತ್ತಿನ ದಾಯದಿಂ ಗಜದ ಮಸ್ತಕಮಂ ಕಡುಕೆಯ್ದು ಪೊಯ್ದೊಡಾ ॥

ನೆತ್ತಿಯ ಮುತ್ತು ಝಲ್ಲನೆ ರಣಾಂಗಣದೊಳ್ ಕೆದಱಲ್ಕೆ ಜಾಗು ವೀ ।
ರೋತ್ತಮ ಎಂದು ವೀರತತಿ ಬಣ್ಣಿಸೆ ಖಂಡೆಯಕಾಱರೊಪ್ಪಿದರ್ ॥ ೨೨

ಭಾವಿಸೆ ಹಿಂದೆ ಮುಂದೆಡಬಲಂಗಳೊಳಂಬಿನ ಸೋನೆಯಿಂದಣಂ ।
ತೀವೆ ವಿರೋಧಿರಕ್ತಜಲದಿಂ ರಥಿಕರ್ ಕಡುಪಿಂ ರಥಂಗಳಂ ॥
ಡಾವರಿಸುತ್ತೆ ತೋಳ್ದಣಿಯಲೆಚ್ಚು ವಿರೋಧಿಭಟರ್ಕಳೆಯ್ದೆ ನಿ ।
ಶ್ಚೇರ್ವನರೆಂಬಿನಂ ಪೊ*ಣರ್ದರ್ದೇಂ ಪೆ*ಸರ್ವೆತ್ತರೊ ದೋರ್ಬಲಂಗಳಂ ॥ ೨೩

ಅಂತುಭಯಬಲಕ್ಕಂ ಸಮಯುದ್ಧಮಪ್ಪುದುಂ, ಚಂಡವರ್ಮಂ ಕಂಡು

ಇನಿತೇಕೆ ಸಿಂಹವರ್ಮಂಗೆನುತತಿಬಲದಿಂ ಚಂಡವರ್ಮಂ ಪ್ರತಾಪಾ ।
ರ್ಜನನಾಗಳ್ ಸೇನೆಯುಂ ಮುಂ ಕವಿ ಕವಿಯುದಟಿಂ ನೂಂಕು ನೂಂಕೆಂದು
ಯುದ್ಧ ॥ ಕ್ಕನುವಾದಂ ತಾನೆ ಜಾತ್ಯಶ್ವಮನನುನಯದಿಂದೇಱಿ ಕಾಂಕ್ಷೇ
ಯುಮಂ ಕಿ । ಟ್ಟನಿತಂ ಸಂಹಾರಮಂ ಮಾಡುವ ಬಗೆಯೊದವಂ ತಾಳ್ದ
ಸಂಗ್ರಾಮಭೀಮಂ ॥ ೨೪

ಮಾರಿ ಕನಲ್ದು ಸಂಗರಕೆ ಮೊಗ್ಗರವಾಯ್ದುವೊಲಾರ್ದು ವಾಜಿಯಂ ।
ಧಾರೆ ಲಸಾದಿಗಳ್ ಮೆಱೆಯೆ ವೈರಿಪತಾಕಿನಿಯುಂ ನಿಜಾಸಿಯಿಂ ॥
...............ಕಶೆಗೆನ್ನೆಗಮಂ ಪೊಡೆಸೆಂಡನಾಡಿ ಸಂ ।
ಹಾರಮನೆಯ್ದಿಸುತ್ತಧಿಕಸಾಹಸಮಂ ತಳೆದಂ ನೃಪಾಲಕಂ ॥ ೨೫

ಅಂತು ಚಂಡವರ್ಮನುರವಣಿಪುದುಂ ಸಿಂಹವರ್ಮನ ಭಟರ್ ಕಂಡು

ಮೃಕಶಾಬಂ ಮತ್ತಮಾತಂಗದ ಬಿದುವನವಷ್ಟಂಭದಿಂದೇಱಿ ಶೌರ್ಯಾ ।
ಧಿಕನಪ್ಪಿಂ ಧಾತ್ರಿಗೆಂಬೋವದೆ ಬಸುಸುವವೋಲ್ ಪೆಂಪುವೆತ್ತೊಪ್ಪವಂಬಾ ।
ಲಿಕೆಯಂ ಸ್ತ್ರೀರತ್ನಮಂ ಕೂಡುವ ಬಯಕೆಯೊಳೈತಂದನೇಕಾಳಿಗಕ್ಕಂ
ದು ಕನಲ್ದಾ ಸಿಂಹವರ್ಮಕ್ಷಿತಿಪನ ಸುಭಟರ್ ಬಲ್ಪಿನಿಂದೆಚ್ಚರಾಗಳ್ ॥ ೨೬

ಅಂತು ಸಿಂಹವರ್ಮನ ಸುಭಟರ್ ಮುಂಬುಗಿಡಿಸಲದಂ ಚಂಡವರ್ಮಂ
ಕಂಡು

ಪ್ರಳಯಾಗ್ನಿಜ್ವಾಲೆಯುಂ ಕಣ್ ಕೆದಱುವಿನಮುಗುರ್ವ್ವಪಿನಂ ಕೋಪಮು
ಣ್ಮಲ್ । ಮುಳಿಸಿಂದಂ ಸಿಂಹವರ್ಮೋರ್ವಿಪನ ಬಲಮನೆಚ್ಚಿಟ್ಟು ತದ್ಭ್ಯಾ

ಪನಂ ತೋ೯ || ಳ್ವಲದಿಂ ಮೇಲ್ವಾಯ್ದು ಬೇಗಂ ಪಿಡಿವು ನಡೆಸು ಚಂಪಾ
ಪುರಾವಾಸವಂ ಸಿ | ಶ್ವಲಸತ್ವಂ ಪ್ರೊಕ್ಕು ಬಾಹಾಬಲದ ಸೊಬಗಿನಿಂದಿ
ರ್ದನಾ ಚಂಡವರ್ಮಂ || ೭೭

ಅಂತು ಸಿಂಹವರ್ಮನಂ ಪಿಡಿದು ಚಂಪಾಪುರಕ್ಕೆ ಬಂದು ಅರಮನೆಯಂ ಪೊಕ್ಕು ಮಱುದೆವಸಂ

ಬರವೇಱೂನ್ನಿಲ್ಲಿಗಂ ಬಾಲಿಕೆಯನಿದು ಮುಹೂರ್ತಂ ವಿವಾಹಕ್ಕೆನುತ್ತಾ |
ದರದಿಂ ಮಾಂಗಲ್ಯವಸ್ತುಪ್ರಕರಮನೊಲವಿಂದಾಕ್ಷಣಂ ಮಾಡಿ ತತ್ಸ್ವಂ ||
ದರಿಯಂ ಕೈಗೈದು ಬೇಗಂ ಬರಿಸಿ ಮದುವೆಯೊಳ್ ನಿಲ್ವ ಸಂರಂಭದಿಂ ನಿ |
ರ್ಭರಸಂತೋಷಾತಿರೇಕಂ ಮಿಗುವಿನಮೆಸೆದಂ ರಾಗದಿಂ ಚಂಡವರ್ಮಂ ||

ಅಂತಂ ಬಾಲಿಕೆಯಂ ಹಸೆಗೆ ಬರಿಸಿ ಮದುವೆಯಪ್ಪೆನೆಂಬ ಸಮಯದೊಳ್

ನಸುಕೆಂಪಾದಕ್ಷಿ ಕೆಂದೂಳಡರ್ದ* ಪದಯುಗಂ ಬಳ್ಬಿಮುರ್ ಸೋರ್ವ
ಫಾಳಂ | ಬಿಸುಸುಯ್ಲಿಂ ತೇಂಕುವಂಗಂ ಬಱತೊಣಗಿದ ಗಂಟಲ್ ಕರಂ
ಕಂದಿದಾಸ್ಯಂ || ಪೊಸತಪ್ಪಾಟೋಪವೊಪ್ಪಲ್ ಸರಭಸಗತಿಯಿಂ ಬಂದನು
ದ್ದಂಡಸತ್ವಾ | ವಸಥಂ ದೂತಪ್ರಸಿದ್ಧಂ ಹರಿಣಚರಣನೆಂಬಂ ಮನೋವೇ
ಗದಿಂದಂ ೭೯

ಅಂತು ಹರಿಣಚರಣನೆಂಬ ದೂತಂ ಬಂದು ಚಂಡವರ್ಮಂಗೋಲೆಯಂ ಕುಡಲದಱೊಳ್

ಧರೆಯೊಳ್ ನೀತಿವಿದಂ ವಿಚಾರಪರನೆಂದಾರಾಜ್ಯದಾರ್ಯೈಕೆಗೆಂ |
ದಿರಿಸಲ್ ಮುಪ್ಪಿನ ತಂದೆ ತಾಯ ನುಡಿಯಂ ಕೇಳ್ದಲ್ಲಿ ಕನ್ಯಾಗೃಹಾಂ ||
ತರದೊಳ್ ಸಿಲ್ಕಿದ ಕಳ್ಳನಂ ಸೆಱೆಯೊಳಿಟ್ಟಿಂ ಕೊಲ್ಲನೇಕೀಗ ಚೆ |
ಚ್ಚರದಿಂ ಕೊಲ್ವುದನೇಕಚಿತ್ರವಧೆಯಿಂದೀವೋಲೆಗಂಡಾಕ್ಷಣಂ || ೮೦

ಎಂದಿರಲದಂ ಕಂಡು

ಕಡುಲೇಸಾಯ್ತೀ ಮದುವೆಯೊ |
ಳೊಡಗೂಡಿ ಬಱಿಕ್ಕಮವನನಾನೆಯ ಕೈಯಿಂ ||
ಪೊಡೆಸಿ ರದನಾಗ್ರದಿಂದಿ |
ರ್ಕಡಿಯಂ ಮಾಡಿಸುವೆನೆಲ್ಲರುಂ ನೋೞ್ಪನೆಗಂ || ೮೧

ಎಂದು ಮಾವತಿಗನ ಮೊಗಮಂ ನೋಡೆ
ಮದಮೊಸರ್ವ* ಚಂಡಪ್ರೋತನ ।
ನನಟಿಂ ಸಿಂಗರಿಸಿ ತಂದು ಬಾಗಿಲೊಳಿರಿಸೆಂ ॥
ಒಂದುಮಾತನಾಕ್ಷಣಂ ಪೆ ।
ರ್ಚಿದ ಗಜಮಂ ತಂದು ಬಾಗಿಲೊಳ್ ನಿಲಿಸಿರ್ದಂ ॥ ೮೨

ಅದೆಂತೆನೆ—

ಗಂಡಸ್ಥಾನದೊಳುರ್ಕಿಸೋರ್ವ ಮದದಿಂ ಮುಂಗಾಣದುದ್ರೇಕದಿಂ ।
ಶುಂಡಾದಂಡಮನೆತ್ತಿ ತನ್ನ ನೆೞಲಂ ಮಾಱಾನೆಯೊಂದಟ್ಟುವು ॥
ದ್ದಂಡಕ್ರೋಧದಿನೊಂದಿ ನಿಂದುದು ನಗಂ ಮಾತಂಗಮಾದಂತೆ ವೆ ।
ತಂಡಂ ಬಂದುದು ಚಂಡಪ್ರೋತವೆಸರಿಂ ರಾಜಾಲಯದ್ವಾರದೊಳ್ ॥ ೮೩

ಧೃತಪದ್ಮಾನುನಯಂ ಸುಗೋತ್ರಜನನಂ ಭದ್ರಾನ್ವಯಂ ದಾನವಾ ।
ರಿತನಂ ಕೌತುಕಕೀರ್ತನಂ ನೆಲಸಿದತ್ತೆನ್ನಲ್ಲಿ ಪಂಚಾಸ್ಯದೂ ॥
ರಿತಮಾತಂಗಮೆಸಗರ್ ನೋಂತೆನೆನುತುಂ ಕೈಮೆಚ್ಚೆ ಸುಯ್ಯುಂತೆ ಘ್ರಾ ।
ತ್ಕೃತಿಯಿಂ ರಂಜಿಸುತಿರ್ದುದುನ್ಮದಗಜಂ ರಾಜಾಲಯದ್ವಾರದೊಳ್ ॥ ೮೪

ಅಂತು ರಾಜವಾಹನವಧಾರ್ಥಂ ಚಂಡಪ್ರೋತಗಜಮಂ ಸಿಂಗರಿಸಿ ಬಾಗಿಲೊಳಿರಿಸಿ ಚಂಡವರ್ಮಂ ಪಸೆಯುಂ ನಿಲ್ವುದಕೊರ್ಗಳಗಂ ಪುಗಲಿತ್ತಲ್

ಚಳದುರುಕುಂಡಲಂ ಘನತರತ್ರಿಸರಂ ಮಣಿಕಂಕಣಂ ಲಸ ।
ತ್ಕಳಶಕುಚಂ ಕಳಾಪನವಕಿಂಕಿಣಿ ನೂಪುರಕಾಂಚಿ ಸಿಂಗರ ॥
ಕ್ಕಳವಡೆ ರಾಜವಾಹನನೃಪಾಲನ ಕಾಲ್ಗಳೊಳಿರ್ದ ರೂಪ್ಯಶೃಂ ।
ಖಳೆ ಸತಿಯಾಗಿ ಕೈಮುಗಿದು ನಿಂದುದದೊಂದು ಮಹಾವಿಲಾಸದಿಂ ॥ ೮೫

ಅಂತು ಕೈಮುಗಿದು ನಿಂದ ವಿಳಾಸಿನಿಯುಂ ರಾಜವಾಹನಂ ನೋಡಿ

ನೀನಾರ್ಗೆ ಬಂದ ಕಾರ್ಯಮ ।
ದೇನಿಲ್ಲಿಗೆ ಮತ್ಪದಕ್ಕೆ ಶೃಂಖಲೆಯಾಗಲ್ ॥
ಮಾನಿನಿ ಕಾರಣಮೇನೆಂ ।
ದಾನರಪತಿ ಕೇಳೆ ಪೇೞಲುದ್ಯತೆಯಾದಳ್ ॥ ೮೬

ಆಗೆಂತೆನೆ—

ಮಾಂಡವ್ಯಾತ್ರಿವಸಿಷ್ಠಗೌತಮಮುನಿಖ್ಯಾತಂ ಮಹಾಂಭೋಜಗೆ ।
ಭ್ರಾಂಡಂ ಕೋಟಿಯುಗಂಗಳೆಯ್ದೆಱೆದೊಡಂ ಸಿಟ್ಟಿಂತದಿಂದಿರ್ಪ ಮಾ ॥
ರ್ಕಂಡೇಯಂ ಪದೆದೊಂದು ಪುಣ್ಯನದಿಯಂ ಮೀಯಲ್ಕೆ ಬಂದಿರ್ದನು ।
ದ್ದಂಡಸ್ಥೈರ್ಯಶರೀರನೊಂದುದಿವಸಂ ಭೂಪಾಲವಿದ್ಯಾಧರಾ ॥ ೮೭

ಅಂತಾಮಹರ್ಷಿ ಸ್ನಾನಂಗೆಯ್ವಾಗಳ್

ಚಿತ್ತದ ಸಂಭ್ರಮಂ ಬೆರಸು ಖೇಚರಮಾರ್ಗದೊಳಾಂ ಬರುತ್ತಿರಲ್ ।
ಮುತ್ತಿನ ಹಾರಮೆನ್ನ ಕೊರಲಿಂ ಪಱಿದಾತನ ಚೆಲ್ವುವೆತ್ತ ನು ॥
ಣ್ಪೆತ್ತಿಯ ಮೇಲೆ ಬೀೞೆ ಕಡುನೊಂದು ಶಿರಸ್ತಟಮಂ ಕರಂಗಳಿಂ ।
ದೊತ್ತಿಕೊಳುತ್ತೆ ಮೇಲೆ ಸುಱಿವೆನ್ನನೊನಲ್ದು ಕನಲ್ದು ನೋಡಿಪಂ ॥

ಎಲೆ ಪಾತಕಿ ಯೌವನಮದ ।
ವಿಲಾಸದಿಂ ಪೆರ್ಚಿರ್ತೀತಕಘಮರ್ಷಣನಿ ॥
ಷ್ಠಾಲಚಿತ್ತನೆನಿಪ್ಪೆನ್ನಂ ।
ತಿಳಿಯದೆ ಪೇೞ್ ಲೋಹಜಾತಿಯೊಳ್ ನೋಯಿಸಿದೋ ॥ ೮೯

ಎಂದು ಮತ್ತಂ

ಕೋಪಂ ಕೈಗಣ್ಮೆ ಚಿತ್ತವ್ಯಥೆಯಿನಪಿಲ್ದು* ಪೋ ಲೋಹವಾಗೆಂದು ತೇ
ಜೋ । ರೂಪಂ ಕೊಟ್ಟಂ ಮಹಾಶಾಪಮನದನಱಿದಾಂ ಸ್ತೋತ್ರಮಂ
ಮಾಡೆ ಶಾಪಂ ॥ ಲೋಪಂ ತಾನಕ್ಕೆ ರತ್ನಂಗಳೊಳನವರತಂ ರಾಜಮಾಹಾಂ
ಘ್ರಿಸೇವಾ । ವ್ಯಾಪಾರಂ ನಿನ್ನೊಳಾಗಲ್ ಸುದತಿ ತೊಡಱದಲ್ತೆಂದು ಬೀ
ೞ್ಕೊಟ್ಟನೆನ್ನಂ ॥

ಅಂತು ಬೀೞ್ಕೊಡಲೊಡಂ

ಅಂತಾಮುನಿಪನ ಶಾಪದಿ ।
ನಂತಸ್ತಾಪದೆ ಕರಂ ಕೊರಂಗಿ ಮನ ॥
ಶ್ಚಿಂತಾಹತಿಯಿಂ ಕಣ್ಬನಿ ।
ಯಿಂ ತವೆ ನೀರುಂಡು ರೂಪ್ಯಶೃಂಖಲೆಯಾದೆಂ ॥ ೯೧

ಅಂತಾಂಸುರಮಂಜರಿಯೆಂಬ ಖೇಚರಸ್ತ್ರೀ ಶಾಪದಿಂ ಬೆಳ್ಳಿಯ ಸಂಕಲೆ
ಯಾಗಿ ಮಹೇಂದ್ರಾಚಲದ ಕೆಲದೊಳ್ ಬಿೞ್ದಿರೆ

ಖೇಚರಲೋಕದಿನೊರ್ವಂ ।
ಖೇಚರನೆಯ್ತಂದು ದರ್ಪಸಾರನೃಪಾಲಂ ॥
ಗಾಚಾರವನೆಸಗಿ ಬೞಿ ।
ಕ್ವಾಚಾತುರ್ಯೋಕ್ತಿಯಿಂದಮಂಗಿಂತೆಂದಂ ॥ ೯೨

ಎನ್ನೊಡನೊರ್ವಂ ಖೇಚರ ।
ನುನ್ನತಿಯಿಂ ತೊಡ*ರ್ದೊಡವನೊಳಾಂ ಸೋಲ್ತಂ ನೀ ॥
ನಿನ್ನನಗೆ ವಿಜಯಸಿದ್ಧಿಯ ।
ನುನ್ನತಮಪ್ಪಂತೆ ಮಾಳ್ಪುದತಿದೋರ್ವಲದಿಂ ॥ ೯೩

ಎಂದಾವೀರಸೇನನೆಂಬ ಖೇಚರಂ ಮಿತ್ರಭಾವದಿಂ ಮಹೇಂದ್ರಾಚಲದೊಳ್ ತಪಂಗೆಯ್ಯುತ್ತಿರ್ದ ದರ್ಪಸಾರಂಗೆ ಪೇೞ್ದೊಡಾತನಿಂತೆಂದಂ:—

ನಿನಗಾಂ ಸಹಾಯನಪ್ಪೆಂ ।
ನಿನಗೆ ಜಯಾಭ್ಯುದಯಮಪ್ಪವೊಲ್ ಮಿಗೆ ಮಾೞ್ಪೆಂ ॥
ನಿನಗೆನ್ನನುಜೆಯನಿತ್ತಪೆ ।
ನನುನಯದಿಂದಿನ್ನು ಸಂದೆಯಂ ಪೆಱತುಂಟೇ ॥ ೯೪

ಎಂದು ದರ್ಪಸಾರಂ ಖೇಚರಂಗೆ ಪೇೞ್ದೊಡಾಖೇಚರಂ ವಿಜಯಸಿದ್ಧಿಯಿಂ ಕನ್ಯಾಸಿದ್ಧಿಯಗ್ಗಳಮೆಂದು ಭಾವಿಸಿ ತನಗೆ ಕೊಟ್ಟ ಕನ್ನಿಕೆಯಂ ನೋೞ್ಪೆನೆಂದು ಬರುತ್ತಿನ್ನಂ ಕಂಡು

ಈಸಂಕಲೆಯಂ ಕೊಂಡು ।
ಯ್ದಾಸುರಮೆನಲೆನ್ನ ಪಗೆಯ ಕಾಲ್ಗಿಕ್ಕುವೆನೆಂ ॥
ದಾಸುಭಟಖೇಚರೇಶ್ವರ ।
ನೋಸರಿಸದೆ ತೆಗೆದನಲ್ತೆ ನೃಪಕುಲತಿಲಕಾ ॥ ೯೫

ಅಂತು ಸಂಕಲೆಯಂ ಕೊಂಡು ಬಂದು ಕನ್ನಿಕೆಯಿರ್ದ ಕರುಮಾಡಮಂ ಪುಗುವುದುಂ

ನೀನುಂ ನಚ್ಚಿ ಸವಂತಿದೇವಿಯುಮನಂಗಕ್ರೀಡೆಯಿಂದಂ ಬೞಿ ।
ಲ್ದಾನಂದಾಂಬುಧಿಯೊಳ್ ಮುೞುಂಗಿ ಸುಖನಿದ್ರಾಸಕ್ತರಾಗಿರ್ದುದಂ ॥
ತಾನುಂ ನೋಡಿಯೆ ಖೇಚರಂ ನಿಗಳವಂ ನಿನ್ನಂಘ್ರಿಯೊಳ್ ಸಾರ್ಚಿದಂ ॥
ಭೂನಾಥಂ ತನಗೀವೆನೆಂಬ ಸತಿಯೊಳ್ ಕೂಡಿರ್ದನೆಂಬೀರ್ಷ್ಯೆಯಿಂ॥ ೯೬

ಇದು ಮಚ್ಛಾಪಪ್ರಪಂಚಂ ನಿನಗೆ ರಿಪುಜಯಂ ರಾಜ್ಯಸಂಸಿದ್ಧಿಯಕ್ಕೆ ।
ನ್ನುದಯಂಗೆಯ್ಮಾಪ್ಪಿದಂ ನೀಂ ಬೆಸಸುವುದೆನಗೆಂದಪ್ಸರಸ್ತ್ರೀವಿಳಾಸಾ
ಸ್ಪದದಿಂದಂ ಪೇೞೆ ಕೆಯ್ಯಂ ಮುಗಿದು ಪಿನಸುವಾಕ್ಪ್ರೀತಿಯಿಂ ರಾಜವಾಹಂ।
ಮುದದಿಂದಾಖೇಚರಸ್ತ್ರೀಗನುನಯಮೊಸೆಯಲ್ಕಾತನಿಂತೆಂದನಾಗಳ್ ॥ ೯೭

ಈವೃತ್ತಾಂತಮನೆನ್ನ ಮ ।
ನೋವಲ್ಲಭೆಯಪ್ಪವಂತಿದೇವಿಗೆ ಪೇೞ್ದಂ॥
ದ್ರಾವಾಸಮನೆಯ್ದುವುದೆಂ ।
ದಾವಧುವಿಂಗರಸನುಸಿರ್ದ* ಸಮಯಾಂತರದೊಳ್ ॥ ೯೮

ಅತಿಕೋಳಾಹಳಮಪ್ಪೂ ।
ರ್ಜಿತಘನತರಮಪ್ಪ ಸಂಗಮಿಲ್ಲದೆ ದಿಕ್ಸಂ ॥
ತತಿಯೊಳ್ ಬಳೆದುದು ಬೇಗಂ ।
ಹತೋಹತಶ್ಚಂಡವರ್ಮ ಎಂಬೀವಾಕ್ಯಂ॥ ೯೯

ಆರೆಂದಱಿಯೆನದೊರ್ವಂ ।
ವೀರಂ ಪರಿಣಯನಕಳಕಳಂ ಮಿಗುವಾಗಳ್ ॥
ಕೂರಸಿಯುಂ ಕಿೞ್ತಾಗಳ್ ।
ಪೇರುರವಂ ತಿವಿಯೆ ಚಂಡವರ್ಮಂ ಮಡಿದಂ ॥ ೧೦೦

ಅಂತು ಹತೋಹತಶ್ಚಂಡವರ್ಮ ಎಂಬ ಧ್ವನಿಯಂ ರಾಜವಾಹಂ ಕೇಳ್ದು

ಭರದಿಂ ಗರ್ಜಿಸಿ ಕೇಸರಂಗೆದಱಿ ಸಿಂಹಂ ಕೋಪದಿಂದದ್ರಿಗ ।
ಹ್ವರದಿಂದಂ ಪೊಱಮಟ್ಟುದೆಂಬ ತೆಱದಿಂ ಬಾಹಾಬಲಂ ಪೆರ್ಚಿ ಪಂ ॥
ಜರದಿಂದಂ ಪೊಱಮಟ್ಟು ಮಾಗಧಧರಿತ್ರೀಪಾಲಪುತ್ರಂ ಮದ ।
ದ್ವಿರದಂ ಬಾಗಿಲೊಳೊಪ್ಪಿರಲ್ ಪದೆಪಿನಿಂ ಕಂಡಂತವರ್ಕೆಯ್ದಿದಂ॥ ೧೦೧

ಅಂತು ಮುನ್ನಮೆ ತನ್ನಂ ಕೊಲಲ್ ಸಿಂಗರಿಸಿ ಬಂದ ಚಂಡಪ್ರೋತಗಜಮಂ ಕಂಡು

ಮಾವತಿಗನ ಕಾಲಂ ಪಿಡಿ ।
ದೋವದೆ ಸೆಳೆದವನನಿಕ್ಕಿಯಂಕುಸಮಂ ಕೊಂ ॥
ಡಾಮಾರಣಮುಸ್ತಕದಿನಿ ।
ಳಾವಲ್ಲಭನಿರ್ದನತುಳಸತ್ತ್ವಸಮಗ್ರಂ ॥ ೧೦೨

ಉದಯಗಿರಿಗಲಸಿ ರವಿ ಮೇ ।
ಣುದಿಸಿದವೋ ನೀಲಗಿರಿಯೊಳೆನೆ ಮದಮಾತಂ ॥
ಗದ ಮಸ್ತಕದೊಳ್ ಕುಳ್ಳಿ ।
ರ್ದದಟಂ ಮಿಗೆ ರಾಜವಾಹನಂ ಕಣ್ಗೆಸೆದಂ ॥ ೧೦೩

ಅಂತು ಗಜಸ್ಕಂಧದೊಳಿರ್ದು

ಪ್ರಜೆಯೊಳ್ ಕೂಸೆ ನಿತಾಂತಂ ।
ಗಜಬಜೆ ಮಿಗುತಿರಲದಂ ನೃಪಾಲಂ ಕಂಡಾ ॥
ಗಜದಿಂ ಪಲರಂ ಸೀೞಿಸಿ ।
ವಿಜಯೋದ್ಯೋಗಕ್ಕೆ ದಾರಿದೆಗೆದನಲಂಪಿಂ ॥ ೧೦೪

ಜಗದೊಳ್ ದುರ್ಬಲಚಂಡವರ್ಮನನದಾವಂ ಕೊಂದನಾವೀರನಿ ।
ಲ್ಲಿಗವಂ ಬಂದೊಡೆ ದೇವದಾನವರೊಳಾವಂ ಕೊಲ್ವೊಡಂ ಕಾವೆನೆಂ ॥
ಬ ಗಭೀರಧ್ವನಿಯಿಂ ನೃಪಾಲತಿಲಕಂ ಸಂಗ್ರಾಮದೊಳ್ ಬೀಱು ಮ ।
ತ್ತಗಜಕ್ಕಂಕುಶಮಿಕ್ಕಿ ನೂಂಕಿ ನಡೆದಂ ಸಾಮರ್ಥ್ಯದಿಕ್ಕುಂಜರಂ ॥ ೧೧೫

ಅಂತಾತನ ಗಂಭೀರಧ್ವನಿಯಂ ಕೇಳ್ದು

ಕರದೊಳ್ ಕಿೞ್ತ ಕಠಾರಂ ।
ಬೆರಸದಟಂ ಬೀದಿವರಿಯುತಿರ್ಕೆಲನಂ ಸಂ ॥
ಹರಿಸುತ್ತಾದನಿವಱಿಯಿಂ ।
ದರಸನಿದಿರ್ಗೋರ್ವ ವೀರನೆಯ್ದಿದನಾಗಳ್ ॥ ೧೦೬

ಬಂದಾವೀರನನಾನೆಯು ।
ಪಿಂದೇಱಿಸುತುಂ ತದಾಸ್ಯವಮಂ ಕಾಣುತೆ ನ ॥
ಣ್ಪಿಂದಮುಪಹಾರವರ್ಮನೆ ।
ಎಂದರಸಂ ಪಿಂದುಗೆಯ್ದು ತಳ್ಕೈಸಿಕೊಂಡಂ ॥ ೧೦೭

ಅಂತು ಬಂದಾತಂ ತನ್ನ ತಮ್ಮನಪ್ಪಪಹಾರವರ್ಮನಾದುದಱಿಂ ರಾಜ
ವಾಹನಂ ತಳ್ಕೈಸಿಕೊಳಲೊಡಂ

ಈತಂ ಮದಗ್ರಜಂ ಧಾ ।
ತ್ರೀತಳಪತಿ ರಾಜವಾಹನಂ ತಪ್ಪದೆನು ॥
ತ್ತೋತೆಱಗಿ ಹರ್ಷಪುಳಕ ।
ವ್ರಾತಮುನಪಹಾರವರ್ಮನಾಂತೆಸೆದಿರ್ದಂ ॥ ೧೦೮

ಅಂತೊರ್ವರೊರ್ವರನಱಿದು ಸಂತೋಷಮಂ ತಳೆದಾನೆಯುಂ ಮುಂದಕ್ಕೆ
ನೂಂಕಿ

ಪರಿಪರಿದು ಚಂಡವರ್ಮನ ।
ಪರಿವಾರಮನೆಯ್ದೆ ಮತ್ತಗಜದಿಂ ಮಿಗೆ ಸಂ ॥
ಹರಿಸಿ ವಿಜಯಾಂಗನಾನಿಜ ।
ವರನಾದಂ ರಾಜವಾಹನಕ್ಷಿತಿನಾಥಂ ॥ ೧೦೯

ಕರಿಕರಘಾತದಿಂ ಕೆಲಬರಂ ಕೆಲರಂ ಕರಖಡ್ಗಘಾತದಿಂ ।
ದೊಱಸಿ ಬಿಸುಟ್ಟು ಭೀತಶರಣಾಗತರಂ ತವೆ ಕಾದು ತತ್ಪುರೀ ।
ಶ್ವರಪರಿಖೇದಮಂ ಕಳೆದು ನಾಲ್ದೆಸೆಯೊಳ್ ಪರೆದಿರ್ದ ವಸ್ತುವಂ ।
ತರಿಸಿ ಭುಜಪ್ರತಾಪದೊದವಿಂದೆಸೆವಂ ನೃಪರಾಜವಾಹನಂ । ೧೧೦

ಅಂತು ಸಿಂಹವರ್ಮನಂ ಬಿಡಿಸಿ ಪರೆದಿರ್ದ ವಸ್ತುವಂ ನೆರಪುವ ಸಮ
ಯದೊಳ್

ಕದಪನಮರ್ದ ಕುಂಡಲಮುಮುನ್ಮಣಿಕಂಕಣಮಾಂತ ಕೆಯ್ಯ ಬೆ ।
ತ್ತದ ಸೆಳೆ ತೊಟ್ಟ ಪೊಚ್ಚ ಪೊಸಕುಪ್ಪಸಮೊಪ್ಪಮನಾನೆ ಮುಂದಿಯುಂ ॥
ಕೆದಱಿಸುತಂದು ಬಂದು ಜನಪಂಗೊಲವಿಂ ಪೊಡೆಮಟ್ಟು ನಿಂದನಂ ।
ಬುದರನದಿಂದಮೊರ್ವನುರುವೇತ್ರಧರಂ ಜನತಾಮನೋಹರಂ ॥ ೧೧೧

ಅಂತು ಬಂದಾತನಂ ಕಂಡೀತನಾರೆಂದಪಹಾರವರ್ಮನಂ ರಾಜವಾಹನಂ ಕೇಳ್ವುದುಂ

ದೇವರ್ಗೆನ್ನಿಂದಧಿಕಂ ।
ಕೋವಿದನತಿನೀತಿನಂತನಾಪ್ತಸಹಾಯಂ ॥
ಭೂವಿನುತಿವಿತ್ತವೆಸರಿಂ ।
ಭಾವಿಸೆ ಧನಮಿತ್ರನೆನಗೆ ನಚ್ಚಿನ ಮಿತ್ರಂ ॥ ೧೧೩

ಎಂಬೊಡಾತನಂ ಮನ್ನಿಸಲಾಧನಮಿತ್ರನಿಂತೆಂದಂ:—

ಸಕಳೋರ್ವೀನಾಥರೀಚಂಪೆಸು ನೃಪತಿಗೆ ಸಾಹಾಯ್ಯಮಂ ಮಾಡಲೇಬ್ತಂ।
ಮು ಕರಂ ಮಾರ್ಗಶ್ರಮಂ ಪೆರ್ಚಿದೊಡನುಪಮಗಂಗಾನದೀತೀರದೊಳ್ ಸೈ।
ನಿಕಯುಕ್ತರ್ ದೇವ ಬಿಟ್ಟಿರ್ದಪರನುನಯದಿಂ ಪೋಗಿ ಸಂತೋಷದಿಂ ಕಾ।
ಣಿಕೆಯುಂ ಕೈಕೊಳ್ವುದೆಂದಟ್ಟಿಱು ಮಿಗೆ ನಲವಿಂ ಬಿನ್ನಪಂಗೆಯ್ದನಾಗಳ್ ॥

ಅಂತು ಬಿನ್ನಪಂಗೆಯ್ವಲಾಗಳರಮನೆಗೆ ಬಂದು

ಆಪ್ರೌಢನೊಳಾಪಸೆಯೊಳ ।
ಮಾಪಂದರೊಳಾಕುಮಾರಿಯುಂ ನಲವಿಂ ತ ॥
ದ್ಭೂಪನಪಹಾರವರ್ಮಂ ।
ಗೋಪಳೆನಲ್ ಪದೆದು ಮದುವೆಯುಂ ವಿರಚಿಸಿದಂ ॥ ೧೧೪

ಪಿಗೆಯ್ದೊಡಮಲ್ಲಿದೋರ್ಡ ।
ಪೋಗಳ್ ಸಾಹಸಮನೆಸಗಿದೊಡಮಧಿಕಮೆನಿ ॥
ಪ್ಪಾಗುಂಚೇಗಿಯುಮೆಂಬಿವು ।
ಭೋಗಾಪ್ಪೃಷ್ಟಾನುಸಾರಿಯೆಂಬುದು ಪುಸಿಯೇ ॥ ೧೧೫

ಅಂತುನ್ನತಿಕೆಯನಂಬಾಲಿಕೆಯಿನಪಹಾರವರ್ಮಂಗೆ ಸಿಂಹವರ್ಮನಿಂ ಧಾರೆಯನೆಱೆಯಿಸಿ ಸಿಂಹವರ್ಮನಂ ಪ್ರತಿಷ್ಠಿಸಿ

ವಿಲಸನ್ಮುಕ್ತ್ಯವತಾರಮಂ ಸಕಲಪುಣ್ಯಾಧಾರಮಂ ಪಾಪಸಂ ।
ಕುಲಸಂಹಾರಮನುವಿಚಾರಮನಿಳಾವಿಸ್ತಾರಮಂ ನಿತ್ಯನಿ ॥
ರ್ಮಲಿನಾಕಾರಮನುದ್ಘಸಾರಮನದೃಷ್ಟದ್ವಾರಮಂ ಜ್ಞಾನಕ ।
ಲ್ಪಲತಾಗಾರಮನೆಯ್ದಿದಂ ನೃಪವರಂ ಶೋಭಾನದೀತೀರಮಂ ॥ ೧೧೬

ಲಳಿತತರಂಗವೊಳ್ಪುಱೆ ಲಸತ್ಪುಳಿನಸ್ಥಳಿ ಸತ್ತಟೀತಟಂ ।
ಸುಱೆ ಸುಱೆನಾಭಿ ಕೋಕಯುಗಳಂ ಕುಚಮಾಡುವ ಮೀಂಗಳಕ್ಷಿಯು ॥
ಜ್ಜ್ವಳಮುಮಪಾರಿ ಯೌವನರಸಂ ದಳಿನಿಪ್ಪ ಪಿಯತ್ತರಂಗಿಣೀ ।
ಲಳನೆಯ ನೀಳ್ದು ತೋಳ್ನಿಪ ಕೂಲಮನೆಯ್ದಿದನಾನೃಪಾಲಕಂ ॥ ೧೧೭

ಮದಗಜಮುಂ ವಿಲಾಸಮೆನಲೇಱೆ ಸಮಸ್ತನೃಪಾಲಸೈನ್ಯಮುಂ ।
ಪದೆಪಿನೊಳೊಲ್ದು ಕಾಣಿಸಿಕುಡಲ್ ನಡೆತಂದನತೀವಮಂಗಳಾ ॥
ಭ್ಯುದಯಸಮನ್ವಿತಂ ನೃಪಶಿರೋಮಣಿ ಕೂರ್ತಪಹಾರವರ್ಮಸ ।
ನ್ಮುದಸಹಿತಂ ನದೀಪರಿಸರಕ್ಕಭಿಧೇಯನಭಂಗವಿಕ್ರಮಂ ॥ ೧೧೮

॥ ಗದ್ಯಂ ॥

ಇದು ನಿಖಿಳಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ರಾಜವಾಹನಕಥಾವೃತ್ತಾಂತಂ

ಸಪ್ತಮಾಶ್ವಾಸಂ

ಪ್ರಥಮ ಸಂಪುಟಂ ಸಂಪೂರ್ಣಂ.

ದ್ವಿತೀಯಸಂಪುಟಂ.

॥ ಅಷ್ಟಮಾಶ್ವಾಸಂ ॥

—ಅಪಹಾರವರ್ಮನ ಕಥೆ—

ಶ್ರೀಮದ್ಗಂಗಾತೀರ ।
ಕ್ಕಾಮಹಿಪನುಂ ಬಂದದೊಂದು ಪುಳಿನಸ್ಥಳದೊಳ್ ॥
ಪ್ರೀಮುದಿನಿರ್ದಂ ಗುಣನಿ ।
ಸ್ಸೀಮಂ ನಲವಿಂದಭಂಗವಿಟ್ಠಲಭೃತ್ಯಂ ॥ ೧

ಅಂತು ಬಂದಪಹಾರವರ್ಮನಿಂ ಮಾಡಲ್ಪಟ್ಟ ಸೈಕತಸಿಂಹಾಸನಮನಲಂಕರಿಸಿರ್ದನಂ,

ಅಂದಣಮುಂ ಮದೇಭತತಿಯುಂ ತುರಗಂಗಳನೇಕ ಭೂಸುರಾ ।
ನಂದದೆ ಛತ್ರಚಾಮರದ ತಿಂತಿಣಿಯೊಳ್ ನಡೆತಂದು ಚಿತ್ತದು ॥
ಬೊರ್ಗಂದಿರೆ ರಾಜವಾಹನನೃಪಾಲಕನಂ ಮಿಗೆ ಕಾಣಲುತ್ಕಪೂ ।
ರ್ವಂ ಪಳೆನಲ್ಕವರ್ ನಿಜಸಹೋದರರಾದರಿದಲ್ತೆ ವಿಸ್ಮಯಂ ॥ ೨

ಅಂತು ಧನಮಿತ್ರಂ ತಂದು ಕಾಣಿಸಿದರಸುಗಳೆಲ್ಲರರಸಂಗೆ ತಮ್ಮಂದಿರಾದರ್; ಅದೆಂತೆನೆ:—

ತನಗೆ ಕೃತಪುಣ್ಯಮಿಲ್ಲದ ।
ದಿನಮೇನಂ ಮಾಡಲದು ನಿರರ್ಥಕಮಕ್ಕುಂ ॥
ತನಗಧಿಕಪುಣ್ಯಮೊದವುವ ।
ದಿನವಿರ್ದೆಡೆಗೆಯ್ದುಗುಂ ನಿಜಾಭೀಷ್ಟಫಲಂ ॥ ೩

ಅಂತವರೆಲ್ಲರುಂ ನೃಪನನೀಕ್ಷಿಸಿಯೆಮ್ಮವೊಲಾರ್ ಕೃತಾರ್ಥರೆ ।
ಮ್ಮಂತತಿಭಾಗ್ಯಮಂ ಪಡೆದರಾರೆನುತುಂ ನೃಪನಂಘ್ರಿಪದ್ಮಮಂ ॥
ತಂತಮಗಪ್ಪಿ ಕೆಯ್ಮುಗಿದು ದೇವರೆ ನಿಮ್ಮಯ ಪೋದ ಬಂದ ವೃ ।
ತ್ತಾಂತಮನೆಮ್ಮೊಳೊಲ್ದು ಬೆಸಸಲ್ ದಯೆಗೆಯ್ ನೃಪರೂಪಮನ್ಮಥಾ ೪

ಎಂದವರ್ ಬಿನ್ನಪಂಗೆಯ್ಯಲರಸಂ ತನ್ನ ವೃತ್ತಾಂತಮಂ ಪುಷ್ಪೋದ್ಭವ

ಸೋಮದತ್ತರ ಪ್ರಪಂಚಮುಮಂ ಪೇಳ್ದು. ಅನಂತರಮುಪಹಾರವರ್ಮನ ಮೊಗಮುಮಂ ನೋಡಿ ನೀನೆಸಗಿದ ವಿಸಮಾದಮುಮಂ ಪೇಳೆನಲಾತಂ ಕೆಯ್ಗಳಂ ಮುಗಿದಿಂತೆಂದಂ:—

ಎಲ್ಲರ ತೆಱದಿಂ ನಿಜಪದ ।
ಪಲ್ಲವಮಂ ಭಕ್ತಿಪೂರ್ವಮಱಸುವ ಒಗೆಯಿಂ ॥
ದಲ್ಲಲ್ಲಿ ತೊಳಲುತ್ತುಂ ಬೆ ।
ತ್ತೊಲ್ಲಾಸದೊಳಂಗದೇಶಮಂ ಮಿಗೆ ಪೊಕ್ಕೆಂ ॥ ೫

ವಿಪ್ರೋಗ್ರ*ಂಗರಾಜವಿಷಯಪ್ರಾಂತರದೊಳ್ ಬುಧಕಾವ್ಯಮುಂಗಳ ।
ಶ್ರೀಪದದಿಂ ಲಸತ್ತ್ರಿದಿವಮುಂ ಪದೆದೊಗ್ಗಿನನಂತಭೋಗಶೋ ॥
ಭಾಪರಿಪೂರ್ಣದಿಂ ಭುಜಗಮಂದಿರಮುಂ ಮಿಗೆ ಪೋಲ್ತು ಚೆಲ್ವಚಂ ।
ಪಾಪುರಮೊಪ್ಪುಗುಂ ಸಕಳಸಂಪದಸೌಖ್ಯವಿಳಾಸದೇಳ್ಗೆಯಿಂ ॥ ೬

ಅಂತಾಪಟ್ಟಣದ ಪೊಱವೊೞಲೊಳ್ ತ್ರಿಕಾಲಜ್ಞಾನಿಯಪ್ಪ ಮರೀಚಿ ಮಹರ್ಷಿಯಿರ್ಪನೆಂದು ಕೇಳ್ದಾಕ್ಷನಿಂ ದೇವರ ವೃತ್ತಾಂತಮಂ ಕೇಳ್ವೆನೆಂದು ಪೋಗಿ ನೋೞ್ಪನಮಲ್ಲಿ,

ಪಸುರ್*ದಳದೊ*ಂಗಲಿಂ ಪುದಿದ ಬಳ್ಳಿನೆಯಿಂ ಮುಗುಳಂದಲರ್ಗಳಿಂ ।
ಪಸುರ್*ಮಿಡಿಯಿಂ ಬೆಳತೊರ್ಲೆವ ಕಾಯ್ಗಳನೊಪ್ಪುವ ಪಣ್ಗಳಿಂ ಕರಂ ॥
ಪಸರಿಸಿ ಗುಜ್ಜುಗೊಂಡು ಮಧುಪಾವಳಿಸಂಗತಮಾಗಿಯುಂ ಹರಂ ।
ಗೆಸೆವುದೊಂದು ಬಿಲ್ವಕುಜಮೆನ್ನಿದಿರೊಳ್ ಮೆಱೆದಿರ್ದುದುರ್ವಿಪಾ ॥ ೭

ಅದಱ ಮೊದಲೊಳ್ ಮಲೀಮಸ ।
ಹೃದಯಂ ನಿರ್ವಿಣ್ಣಚಿತ್ತನಭಿನವಚಿಂತಾ ॥
ಸದನಂ ತಾಪಸಜನವೇ ।
ಷದೊಳಿರ್ದನದೊರ್ವನಾತನಾರೆಂದಱಿಯೆಂ ॥ ೮

ಇಲ್ಲಿ ಮರೀಚಿಯೆಂಬ ಋಷಿಯಿರ್ಪನಲ್ತೆ ಮಹಾನುಭಾವನೆಂ ।
ದೆಲ್ಲರುಸಿರ್ವರಾತನ ಪದಾಬ್ಜಮನೀಕ್ಷಿಸಲೆಂದು ಬಂದೆನಿಂ ॥
ದೆಲ್ಲಿಗೆ ಪೋದನೆಂದು ಪದೆದಾಂ ಬೆಸಗೊಳ್ವನಮಾತನಲ್ಕಱಿಂ ।
ಮೆಲ್ಲನೆ ಕಣ್ಗಳಂ ತೆಱೆದು ನೋಡಿದನೆನ್ನನಿಳಾಧಿನಾಯಕಾ ॥ ೯

ಬಸೆದೆನ್ನ ಮೊಗಮನಂದೀ ।
ಕ್ಷಿಸಿ ಚಿತ್ತದೊಳೊಗೆದ ಚಿಂತೆ ತನ್ನಾನನದೊಳ್ ॥
ಪಸರಿಸುವಂತಿರೆ ಭೋಂಕನೆ ।
ಬಿಸುಸುಯ್ದಿಂತೆಂದನಾತನೆನ್ನೊಡನಾಗಳ್ ॥ ೧೦

ಗುರುಕುಚೆ ಕಾಮಮಂಜರಿಯೆನಿಪ್ಪವಳಿಲ್ಲಿಗೆ ಬಂದು ತನ್ಮುನೀ ।
ಶ್ವರಚರಣಾಂಬುಜಕ್ಕೆಱಗಿ ದೇವರೆ ದೀಕ್ಷೆಯನೀವುದೆಂದು ಸ ।
ತ್ಕರಕಮಳಂಗಳಂ ಮುಗಿದು ಬಿನ್ನವಿಸುತ್ತಿರಲೆಯ್ದಿದತ್ತು ತ ।
ತ್ತರುಣಿಯ ಪಿಂದುಗೊಂಡಖಿಳಬಂಧುಜನಂ ಪಿತೃಮಾತೃಸೋದರರ್ ॥ ೧೧

ಅದಲ್ಲದೆಯುಂ,

ನರೆದಲೆ ಬೇರ್ಬಱಿಲ್ದ ಪಱಿವಲ್ ಕಲೆಗಳ್ ತುಱುಗಿರ್ದ ಮೆಯ್ಯಾಗ ।
ಲ್ದರವೆಮೆಯಿಲ್ಲದಕ್ಷಿ ಬಸಿಱೊಳ್ ಮಿಗೆ ನೇಲ್ವ ಕುಚದ್ವಯಂ ಮಹೋ ।
ದರಮೆಸೆಯಲ್ಕೆ ಶೋಕಿಸುತೆ ಪಿಂದನೆ ಬಂದಳೊಱಲ್ದು ಕಾಮಮಂ ।
ಜರಿಯುಟಲಿಂ ಬಳಾರಿಯುವ್ರೊಳೊಪ್ಪುವ ಮಾಧವಸೇನೆಯೆಂಬವಳ್ ॥ ೧೨

ಅಂತವಳ ತಾಯಪ್ಪ ಮಾಧವಸೇನೆ ಬರಲೊಡಂ ಕಾಮಮಂಜರಿ ಕೆಯ್ಗಳಂ ಮುಗಿದಿಂತೆಂದಳ್ :—

ಎಲೆ ಮುನಿಯೈಹಿಕದೀಕ್ಷೋ ।
ಟಲೆಯೆನಗಿಂ ಸಾಲ್ಗು ಪೆರ್ಚಿದಾಮುಷ್ಮಿಕದೊಳ್ ॥
ನೆಲೆಗೊಳಿಸಲ್ವೇಳ್ಕೆನ್ನಂ ।
ಲಲಿತಭವತ್ಪಾದಪದ್ಮಮಂ ಪ್ರಾರ್ಥಿಸುವೆಂ ॥ ೧೩

ಎಂದು ಮುನಿನಾಥಂಗೆ ಕಾಮಮಂಜರಿ ಬಿನ್ನಪಂಗೆಯ್ವಲದಂ ಕೇಳ್ದು ಮಾಧವಸೇನೆಯಿಂತೆಂದಳ್ :—

ಬಿನ್ನಪಮಂ ಚಿತ್ತೈಸಿವ ।
ಳೆನ್ನಯ ದೋಷಂಗಳಂ ಕರಂ ಪ್ರಕಟಿಸಲೆಂ ॥
ದೆನ್ನೊಡನೆ ಮುನಿದು ಬಂದಳ್ ।
ನಿನ್ನಾಣೆ ಮುನೀಂದ್ರ ತನಗೆ ತಪಕಿದು ದಿವಸಮೋ ॥ ೧೪

ಎಂದು ಮತ್ತಂ

ನೋಡಿರೆ ಪುಟ್ಟಿದೈದು ಬರಿಸಂಬರವಿಾಕಡುಧೂರ್ತೆಯಂಗವಂ ।
ಗಾಡಿ ಮಿಗಲ್ ಪಿತಂಗೆ ಮೊದಲಾಗಿಯುಮೋವರ್ಯೆ ತೋಱದಿಚ್ಛೆ ಕೈ ॥
ಗೂಡುವ ಲಜ್ಜೆ ಪಜ್ಜಳಿಸುವನ್ನಗಮೊಪ್ಪಿರೆ ಸಾಕಿದೆನ್ನೊಳೀ ।
ಜೋಡೆ ಕನಲ್ದು ಬಂದು ತನವಂ ತಳೆವಳ್ ಗಡ ಕೇಳತಕ್ಕುಮೋ ॥ ೧೫

ಅವಯವಶೋಭೆಯಂ ಸಸಿನೆಗೆಯ್ವ ಮಿತಾಶನಮಿಕ್ಕಿ ಧಾತುದೋ ।
ಷನನೊಡವೆರ್ಚದಂತೆಸಗುವಾಪ್ತಜನಂಗಳನೆಸ್ಮ ವಿದ್ಯೆಯಂ ॥
ನವವಿಧವಾಗೆ ಕಲ್ಪಿಸುವ ಜೋಯಿಸರಿಂ ನಿಜಲಕ್ಷಣಂಗಳಂ ।
ಭುವನದೊಳೆಯ್ದೆ ಸಾಱಿಸುವ ಬಲ್ಲಗೆ ಸೂಳೆಯರಬ್ಬೆಗೊಪ್ಪಗುಂ ॥ ೧೬

ಕಂತುಮಹೋತ್ಸವಂ ರತಿಯ ನೋಂಪಿ ವಸಂತನೃಪಾಲ ಪೂಜೆಯೊ ।
ಳ್ಸಂತಿಯಪೂರ್ವದಾನತಿಥಿ ಮಾಲಿಗೆಪ್ರಂಟಿಗೆ (?) ಜನ್ಮತಾರೆಯೊಂ ॥
ದಿಂತತಿಕೀರ್ತಿಯಂ ಪ್ರತಿದಿನಂ ತನಗಾಂ ಮಿಗೆ ಮಾಡಿದಳ್ಗೆ ದುಃ ।
ಖಂ ತಲೆದೋರ್ಪುದೆಲ್ ಮುನಿದು ಬಂದಪಳಲ್ಲಿಗೆ ದೀಕ್ಷೆಗೊಳ್ಸುಗಂ॥ ೧೭

ದೇವಿಯ ಜಾತ್ರೆಯೆಂದು ಮಿಗೆ ಸಾಱಿಸಿ ಸಂಭ್ರಮದಿಂದನಂತವೇ ।
ಶ್ಯಾವಧುನಾಗರೀಕತತಿ ಸೈಪಱಗಿಂ ನಡೆನೋಳ್ಪನಂ ತುರಂ ॥
ಗಾವಳಿಮಧ್ಯದೊಳ್ ಮಿಸುಸಿಯಂಗಳವೋಱಿಸಿ ದಟ್ಟಿಮುಚ್ಚಿ ಶೋ ।
ಭಾವಹಮಂ ನೆಗಟ್ಟುವುದು ಸೂಳೆಯ ರಬ್ಬೆಗೆ ತಕ್ಕುದಲ್ಲವೇ ॥ ೧೮

ಅದಲ್ಲದೆಯುಂ

ನಯದಿಂದರ್ಥಮನೀವವಂಗೆ ನಲವಿಂ ಕೂರ್ತಿರ್ಪುದುದ್ದಂಡಲೋ ।
ಭಿಯೊಳರ್ಥಂ ದೊರೆಕೊಳ್ಳದಿರ್ದೊಡಮನುಂ ಕೊಟ್ಟಂತೆ ಸಂತೋಷಮು ॥
ದ್ಭಿಯನುಂಟಾಗಿಪ್ಪದೀಯದಾಪಿರ್ನಡಟಂ ತೋರ್ಪಾತನಂ ಸೂಳೆಗೇ ।
ರಿಯೊಳಿಲ್ಲರ್ ನಡೆನೋಳ್ಪನಂ ತೆಗೆವುದಾಂ ಮಾಡಲ್ಕೆ ತಕ್ಕಾಜ್ಞೆಗಂ ॥ ೧೯

ಕುಡುವನಿತರ್ಥಮುಳ್ಳ ವಿಟನೊಳ್ ಮಿಗೆ ಕೂರ್ಪುದು ವಿತ್ತಹೀನನಂ ।
ಬಿಡುವುದು ಮಾತನಾಡೆ ಕಡುಮೇಲ್ಗಿಪಳೆಪ್ಪುದು ಚಿತ್ತವೃತ್ತಿಯಂ ॥
ಮೃಡನೊಳಗಾಗೆ ಕಾಣವಪ್ಪಲಿರ್ದೆಡೆಯೊಳ್ ಗಣಿಕಾಧಿಪತ್ಯಮಂ ।
ಪಡೆವುದು ಸೂಳೆಯರ್ಗುಚಿತಮೆಂಬುದಿ ಪೇೞ್ದಿದೊಂದು ದೋಷಮೋ॥

ಕಡೆಗಣ್ಣೊಳ್ ಮಾತಾಡುವು |
ಬೆಡೆನುಡಿಯೊಳ್ ಮೆಚ್ಚುಬೋಪುರ್ದನ್ಯರೊಲವಂ ||
ಪಡೆದವ್ರೊಲಿಪುರ್ದು ವಿಟಗರ್* |
ಳ್ಳೊಡವೆಯುಮಂ ಕೀಳ್ಕೊಳ್ವುದಿದುವೆ ವೇಶ್ಯಾಧರ್ಮಂ || ೨೧

ನಗೆ ಬಗೆಯೊಲ್ಮೆ ನಲ್ಮೆ ಪೊಸಜಾಣ್ನುಡಿ ನಾಣ್ನುಡಿ ಪುರುಷರ್ಜರ್ಗೆ ಕೆಮ್ಮಗೆ ಮಿಗೆ ಕೆಲ್ಲನೋಟವೊಡಗೂಟನುಗಲ್ಬದಕೂಮೆರ್ ಪ್ರೇಮರ್ ಪ್ರೊದರ್ಗೆಯೊಗೆವಿಚ್ಚೆ ಮಚ್ಚು ವಿಟರಂ ಕೊಱಚಾಡುವ ಪಾಡುವ ಗಾಡಿಯಿಂ ಬಗಣಿತಚೇಷ್ಟೆಗಳ್ ಮೆಱೆದಿರಲ್ ತಱಿಸಲ್ಬುದು ಸೂಳೆವಿದ್ಯೆಯೊಳ್ || ೨೨

ಮುಳಿಸಂ ಮಾಣ್ ಮಾಣ್ ನೋರ್ಗಂಗನೆ ನಡೆ ನಷೆಯಿಂ ಪೇೞ್ವುದಂ ಮಾಡು ಮಾಡೆಂ | ಚಲವೆನ್ನೊಳ್ ಬೇಡ ಬೇಱ್ಕನ್ನೆಯ ನುಡಿಯಿನಿತಂ ಮೀಱಿದಿರ್ ಮೀಱುವೆಂ ಮ ‖ ತ್ಕುಲಮಂ ಕೀೞ್ಮಾಡದಿರ್ ಮಾಡುವೆನಧಿಕತಪಂಗೆಯ್ವುದಿರ್ ಗೆಯ್ವೆನೆಂದ | ಗ್ಗಳವಾಗಳ್ ತನ್ನ ತಾಯಂ ತೊಱೆದು ಜಱೆದು ವೈರಾಗ್ಯಮಂ ತಾಳ್ದು ನಿಂದಳ್ || ೨೩

ಅಂತೆಂತಾನುಂ ತಿಳಿಪಿದೊಡಂ ತಿಳಿಯದಂತಿರ್ದ ಕಾಮಮಂಜರಿಯುಂ ಕಂಡು ಕೆಯ್ಗಳಂ ಮುಗಿದು ಮತ್ತಿಂತೆಂದಳ್:—

ಬೆಸಸಲ್ವೇೞ್ವುದು ಕಾಮಮಂಜರಿಗೆಲೇ ಯೋಗೀಂದ್ರ ವೈರಾಗ್ಯಮಂ |
ಬಿಸುಡೆಂದಲ್ಲದೊಡಿಲ್ಲಿ ಬಂದಿನಿಬರೀಗಳ್ ತೀರ್ಗಮಿದ್ಧಂ ಪದಾ ||
ಬ್ಜಸಮೀಪಂ ದೊರಕಿತ್ತು ಪುಣ್ಯಮೆನುತುಂ ಮೆಯ್ಯಿಕ್ಕಿದಳ್ ತನ್ನ ಬಂ |
ಧುಸಹಸ್ರಂ ಬೆರಸಂತವಳ್ ಮುನಿಪರಂಗೇೞೇೞೆಂಬನ್ನೆಗಂ || ೨೪

ಅಂತನೇಕಬಂಧುಜನಂ ಬೆರಸು ದಂಡಪ್ರಣತೆಯಾದ ಮಾಧವಸೇನೆಯ ದೀನಭಾವಮಂ ಮುನೀಶ್ವರಂ ಕಂಡು ಕಾಮಮಂಜರಿಗಿಂತೆಂದಂ:—

ಎಲೆ ಮರುಳೆಯುಗ್ರತಪದಿಂ |
ಫಲವೇಂ ನಿಜಬಂಧುವರ್ಗಮಂ ನಲವಿಂದಂ ||
ಸಲಹುವುದೆ ಕೋಟಿತಪದಿಂ |
ದಿಳೆಯೊಳ್ ಮಿಗಿಲೆತ್ತು ಸಕಲಶಾಸ್ತ್ರಕ್ರಮದಿಂ || ೨೫

ಎಂಬುದುಂ ಕಾಮಮಂಜರಿ |

ಕಱಿದ ಸುಖಂಗಳುಂ ಪರೆದ ಜವ್ವನಮುಂ ದೊರೆಕೊಳ್ವದರ್ಥಮುಂ |
ಚಳಿಸಿದ ರಾಜ್ಯಮುಂ ಸವೆದ ಸಂಪದಮುಂ ಮಗುೞ್ದಾಸೆಮಾಡಿಯುಂ ||
ವ್ಯಾಳಿಸುವರೇಕೆ ದುರ್ಮತಿಗಳಾಗದುದಾಗದಪ್ಪುದಪ್ಪುದೆಂ |
ದಳವಡೆ ಚಿತ್ತಮಂ ಪಿಡಿದು ನಿಲ್ಲದೆ ತಲ್ಲಣದಿಂ ಧರಿತ್ರಿಯೊಳ್ || ೧೬

ಎಂದು ತನ್ನಾಸೆಯು ದೆಸೆಯುಂ ಮಾಧವಸೇನೆಗೆ ಬಿಡಿಸಿ ಮತ್ತಂ ಮುನಿಗಿಂತೆಂದಳ್:—

ಅವರಿವರ ಮಾತು ನಿನ್ನಯ |
ಕಿವಿಪೊಕ್ಕೆನ್ನಂ ಮಗುೞ್ದು ಕಳಪುವೊಡಾಂ ಜೀ ||
ವವನಿಲ್ಲಿ ತೊಱೆವೆನೆಂದಾ |
ಕೆ ವಧಾರ್ಥಂ ಮುನಿಯ ಕೆಯ್ಯ ಡಾಯುಧಮಿತ್ತಳ್ || ೧೭

ಅಂತು ತನ್ನಂ ಪರಿಚ್ಛೇದಿಸಿದ ಕಾಮಮಂಜರಿಯ ಮಾತಂ ಮುನಿನಾಥಂ ಕೇಳ್ದು ಮಾಧವಸೇನೆಗಿಂತೆಂದಂ:—

ಈವನವಾಸಾಯಾಸದ |
ಬೇವಸದಿಂ ತಾನೆ ಬರ್ಪಳಯ್ದಾದಾಱುದಿನ ||
ಕ್ಕಾವೆತೆಗೆ ಪೋದಪಳ್ ಸಲೆ |
ನೀವೆಲ್ಲರ್ ಪೋಗಿ ನಿಜನಿವಾಸಕ್ಕೀಗಳ್ || ೧೮

ಎಂಬುದುಂ ಮಾಧವಸೇನೆ ತನ್ನ ಮಗಳ ಮೊಗಮಂ ನೋಡಿ,

ಮಳಯಜಚರ್ಚೆಯುಂ ತಳೆದ ದೇಹದೊಳೆಂತು ವಿಭೂತಿಯಾಂಪೆಯುಂ |
ಜ್ವಳಮಣಿಕಾಂಚಿಯಿಂಬೆಸೆವ ಮಧ್ಯದೊಳೆಂತುಗೆ ನಾರ ಸೀರೆಯುಂ ||
ತಳೆವೆ ಸುಗಂಧಕುಂತಳದೊಳೊಪ್ಪುವ ಮಾಳೆಯೊಳೆಂತು ತಾಳ್ವೆ ಕೋ |
ಮಳೆ ಜಡೆಯುಂ ರಸಾಯನಮನೊಲ್ಲದೆ ಪೊಲ್ಲೆಯುದೆಂತು ಕಂದಮುಂ || ೧೯

ಹಾಸುಗಳಿಲ್ಲದೊಡೆಂತುಗೆ |
ಪಾಸಱೆಯೊಳ್ ಪಡುವೆ ದಂಬುದೊಜವೆಯುದೆಂತ ||
ಭ್ಯಾಸಿಸುವೆಯುಂಗೆಲೆಯುಂ (?) ಮ |
ತ್ತೋಸರಿಸಲ್ಕೆಂತು ತಾಳ್ವೆ ರುದ್ರಾಕ್ಷಿಗಳಂ || ೨೦

ಕೆಳದಿಯರನುಜಾದು ಪೇೞೆ ।
ಬರ್ಳೆಂತು ಕಾನನದೊಳಪೆರ್ ಋಷಿಪರಿಚರ್ಯೆಯಂ ॥
ಬಳವೆಂತಪ್ಪುದು ನಿನಗು ।
ಜ್ವಲಾಕ್ಷಿ ಬಿಡು ಮುಳಿಸನೂಗರ್ ನವೆ ಪೂಡೆವುಡುವೆಂ ॥ ೩೧

ಎಂದೊಡವಳೆಂತುಂ ಬಾರದಿರ್ದುದಂ ಕಂಡು ಶೋಕಾನಳದಂದಹ್ಯಮಾನೆಯಾಗಿ ಬಂಧುಜನಂಬೆರಸು ಮಾಧವಸೇನೆ ನಿಜನಿವಾಸಕ್ಕೆ ಪೋದಳ್. ಇತ್ತಲಾದಿನಂ ಮೊದಲಾಗಿ ಕಾಮಮಂಜರಿ

ಪೂಗಿಡುಗಳ್ಗೆ ನೀರೆಱೆವ ಪುಷ್ಪವನೊಪ್ಪಿರೆ ತರ್ಪ ತತ್ತ್ವವಿ ।
ದ್ಯಾಗಮಮುಂ ಮನಂಬಡೆದು ಕೇಳ್ವ ಯತೀಂದ್ರಪದಾಬ್ಜಸೇವೆಯಂ ॥
ಬೇಗದೆ ಮಾಳ್ಪ ವಲ್ಕವಸನಂಗಳನುಳ್ಳ ನೋಪಚಾರದಿಂ ।
ವಾಗಣಿಕಾಪುರಂಧ್ರಿ ಕೆಲವುಂ ದಿನಮಿರ್ದಳತೀವಭಕ್ತಿಯಿಂ ॥ ೩೨

ಕಮಲದಳಾಕ್ಷಿ ತನ್ಮುನಿವರೇಣ್ಯನ ಪಾವನದೇವತಾರ್ಚನಾ ।
ಸಮಯದೊಳಂಗಹಾರಕರಣಾಯುತಪಸ್ತರೋಜದೃಷ್ಟಿಯವಿ ॥
ಭ್ರಮವನೊಡರ್ಚಿ ಲಾಸ್ಯರಸದಿಂ ಮರುಳಾಗಿಸುವಳ್ ವನಾಂತದು ।
ದ್ಭ್ರಮಮೃಗಪಕ್ಷಿಸಂಕುಳಮನಿಂಪರಿಯಿಂದೆಸೆದಿಪ ಳಾಸಗಂ ॥ ೩೩

ಉಪಹಾರಕ್ಕೆ ಸಮಸ್ತಭಕ್ಷ್ಯತತಿಯುಂ ಮಾಧುರ್ಯವಪ್ಪಂತು ಮಾ ।
ಡಿ ಪದಾರ್ಥಂಗಳನಿತ್ತು ತನ್ನ ಕರಸ್ಪೈರ್ಗಣ್ಯಂಗಳಂ ಯೋಗಿಮೊಳ್ ॥
ಕೃಪೆಯುಂ ಪೆತ್ತು ನಿರಂತರಂ ಪ್ರತಿದಿನಂ ಶುಶ್ರೂಷೆಯುಂ ಮಾಳ್ಪಳ್ ।
ನೃಪಥಂ ದುಷ್ಪಥಮೆಂದು ದೇಹಸುಖಮಂ ತಾನಾವಗಂ ಲೆಕ್ಕಿಸಳ್ ॥ ೪೦

ಇಂತನೇಕಪರಿಚರ್ಯೆಮಂ ಮಾಡುತುಂ

ಎಂದಿನ ತೆಱದಿಂ ಸತಿ ಮುನಿ ।
ವೃಂದಾರಕನಂಘ್ರಿಯುಂ ಕರಾಬ್ಜದಿನೊತ್ತು ॥
ತ್ತೊಂದುಂ ಕಾರಣಮಿಲ್ಲದೆ ।
ಮಂದಸ್ಮಿತವೆಸೆಯಲಂತವಳ್ ನಸುನಕ್ಕಳ್ ॥ ೪೧

ಅಂತವಳ ನಸುನಕ್ಕುದಂ ಮುನಿನಾಥಂ ಕಂಡು,

ಏನುಂ ಕಾರಣಮಿಲ್ಲದೆ ।
ಮಾನಿನಿ ನಸುನಕ್ಕೆಯೇಕೆಯೆಂದಾಮುನಿಪಂ ॥
ತಾನೊಸೆದು ಕೇಳ್ವುದಾಕೆ ನಿ ।
ಜಾನನಮಂ ಬಾಗಿ ಬಾಗಿ ಮತ್ತೆ ಮತ್ತಿಂತೆಂದಳ್ ॥ ೪೨

ಲೋಕಂ ತ್ರಿವರ್ಗಮುಂ ಸಮ ।
ಮೇಕೆಂಬುದು ಧರ್ಮಮಧಿಕಮೆನ್ನದೆ ದೇವಾ ॥
ನೀಕಕ್ಕೆ ಮರ್ತ್ಯರಂ ನಿ ।
ರ್ವ್ಯಾಕುಳದಿಂ ಸಮನೆನಿಪ್ಪ ತೆಱದಿಂದೀಗಳ್ ॥ ೪೩

ಸತತಂ ಪೂಜ್ಯಮನಾತ್ಮದೇಹಹಿತಮುಂ ಸ್ವರ್ಗಾಪವರ್ಗೈಕಪ ।
ದ್ಧತಿಯುಂ ಪಾವನವಸ್ತುವಂ ಪರಮರಕ್ಷಾಸಿದ್ಧಿಯುಂ ದೋಷವ ॥
ರ್ಜಿತಮುಂ ಜ್ಞಾನಲತಾಭಿವೃದ್ಧಿಯುನಶೇಷಪ್ರೀತಿಯುಂ ಲೋಕವಿ ॥
ಶ್ರುತಮುಂ ಧರ್ಮಮನೇಕೆ ಮಿಕ್ಕ ಪುರುಷಾರ್ಥಕ್ಕಂ ಸಮಂ ಮಾಳ್ಪಿರೋ ॥

ಗಾಡಿಯೊಳರ್ಥಕಾಮಮೆರಡುಂ ಗಳಿಸಲ್ಬಗೆದಂದು ಧರ್ಮಮುಂ ।
ನೋಡಿದೊಡಂತದೆಲ್ಲಿಯುದು ಸಂತತನಿರ್ಮಳಮಪ್ಪ ಧರ್ಮಮುಂ ॥
ಮಾಡುಪ್ರೌಢರ್ಥಕಾಮಮೆರಡುಂ ಕಿಡವೆಂದಱಿದಿರ್ದ ಧರ್ಮದೊಳ್ ।
ಕೂಡುವರೇಕೆ ಮಿಕ್ಕ ಪುರುಷಾರ್ಥಮನಜ್ಞರೆನಿಪ್ಪ ಮಾನವರ್ ॥ ೪೪

ತಿಳಿಪೊಡಿವಲ್ತೆ ತತ್ತ್ವದ ತಿರುಳ್ಮಿಗೆ ಧರ್ಮವ ಧರ್ಮಶಾಸ್ತ್ರಮುಂ ॥
ಗಳ ವಿವರಪ್ರತಿಷ್ಠೆ ಪರಮಾರ್ಥದ ಸಾರವನೇಕದರ್ಶನಂ ॥
ಗಳ ಮತವಲ್ತೆ ಲೌಕಿಕದ ಸೀಮೆಯೆನಿಪ್ಪುದು ಕಾಮಮಂಜರೀ ।
ಲಳನೆಯ ವಾಕ್ಯದೋಜೆ ಪರಿಭಾವಿಸೆ ಪೂರ್ಣರಸಾತಿರೇಕದಿಂ ॥ ೪೫

ಎಂದ ಕಾಮಮಂಜರಿಯೋಜೆಗೆ ಮುನಿನಾಥಂ ಪರಿತೋಷಂಬಡುವುದುಂ ಮತ್ತಮವಳಿಂತೆಂಗಳ್—

ಸುರಪಂ ತಾಪಸಕಾಂತೆಯೊಳ್ ಶಶಿ ಗುರುಸ್ತ್ರೀಯೊಳ್ ಮುಕುಂದಂ ನಿರಂ ।
ತರಗೋಪೀಜನದೊಳ್ ಸರೋರುಹಭವಂ ತತ್ಪುತ್ರಿಯೊಳ್ ಮಾರುತಂ ॥
ಭರದಿಂ ಕೇಶಿಯ ನಾರಿಯೊಳ್ ಬಡಬೆಯೊಳ್ ಚಂಡಾಂಶುಮೀಶಂ ಸಮ ।
ಸ್ತರುಷಿಸ್ತ್ರೀಯರೊಳೊಪ್ಪಿನಿಂ ಬೆರಸಲುಂ ದೇವತ್ವಮೇಂ ಪೋದುದೇ ॥

ಎಂದು ಕಾಮಮಂಜರಿ ಅರ್ಥಕಾಮಂಗಳನೆಸಗಲ್ ಧರ್ಮಕ್ಕೆ ಹಾನಿಯಿಲ್ಲೆಂಬುದುಂ, ಋಷಿಯಿಂತೆಂದಂ—

ಸುಲಲಿತಧರ್ಮಮನಱಿವಂ ।
ತಿಳಿಯದು ಕೇಳರ್ಥಕಾಮಮುಮವಱಭಿರೂಪಂ ॥
ಫಲವುಂ ಪೇೞ್ ಬೞ್ಲ್ದಡೆ ಕೋೞ್ ।
ಮಳೆ ಕೇಳ್ವಂ ಪ್ರಿಯದಿನೆಂದನಾಮುನಿಮುಖ್ಯಂ ॥ ೪೮

ಎಂಬುದುಂ;

ಪಶುಗಳನೋವಿಯೊಲ್ದು ಕೃಷಿಯೊಳ್ ವ್ಯವಹಾರಮನೊಲ್ದು ಮಾಡಿಯಾ । ರ್ಜಿಸುವುದು ವಿತ್ತಮಂ ಪಡೆದು ಸದ್ವ್ಯಯದೊಳ್ ಸಲಿಪಿಟ್ಟು ಕೂತುರ್ ಸಾ । ಧಿಸುವುದು ಧರ್ಮಮಂ ಧರೆಯೊಳೀಕ್ರಮಮರ್ಥದ ಸಿದ್ಧಿ ರಕ್ಷೆ ಭಾ । ವಿಸು ಮುನಿನಾಥ ಧರ್ಮದೆಸೆಯಪ್ಪುದು ಲೋಕದಳಂಟೆ ಸಂತತಂ॥

ಎಂಬುದುಮರ್ಥಸ್ವರೂಪಸಿದ್ಧಿಯಱಿಯಲ್ ಬಂದುದು; ಕಾಮಮೆಂತಿರ್ಪುದು ? ಎಂಬುದುಂ;

ನಿರುಪಮಕಾಮಮುಂ ಪೆಸರ್ಗೊಳಲ್ ಫಲವಂ ತಿಳಿಯಲ್ಕೆ ಬಾರದ ।
ಕ್ಕರಿಯೆನೆ ದೃಷ್ಟಮಲ್ಲದೆ ಶ್ರುತಕ್ಕದು ಗೋಚರಮಲ್ತು ಸಂತತಂ ॥
ಪರಿಕಿಸಲಂತರಂಗಬಹಿರಂಗಸುಖಂ ತನಿವೆರ್ಚೆ ಯೋಗಮು ।
ಚ್ಚರಿಸೆಯನೂನಧರ್ಮಮೊದಗಿಪ್ಪುದು ತಪ್ಪದೆಲೇ ಮುನೀಶ್ವರಾ ॥ ೫೦

ನಿತ್ಯಂ ಚಿತ್ತಪ್ರಸನ್ನಂ ನಿರತಿಶಯಸುಖಂ ಜಾಡ್ಯವಿದ್ರಾವಣಂ ಮೇ ।
ಣತ್ಯಂತಪ್ರೀತಿಕಾಂತಿಪ್ರದಮುಭಯಮನಂಗೋತ್ಸವಂ ಸರ್ವಲೋಕ ॥
ಸ್ತುತ್ಯಂ ಚಾತುರ್ಯಪೂರ್ವಂ ನಿರುಪಮವಿಭವಂ ಕಾಮಕೇಳೀವಿಲಾಸಂ ।
ಸತ್ಯಂ ಕೇಳ್ ಯೋಗಿವೃಂದಾರಕ ಪಶುಮೃಗಪಕ್ಷಿಪ್ರತಾನಕ್ಕೆ ಸಾಧ್ಯಂ ॥

ಎಂಬುದುಮೀಪುರುಷಾರ್ಥದ ಫಲಮೆನಗೆ ಸಿದ್ಧಿಸುವುಪಾಯಮಂ ಮಾಡೆಂಬುದುಂ;

ಮೆಲ್ಲನೆ ಪೊರ್ದಿ ಕಾಮಕಳೆಯಂ ಪಡೆದೋಷ್ಠಮನೀಂಟೆ ಮುಂಜೆಯುಂ
ಪಲ್ಲವಹಸ್ತದಿಂ ಸೆಳೆದು ಕುಂಭಕುಚಂಗಳೊಳೊಂಕಲಪ್ಪಿ ಮೆ ॥

ಳ್ಪಲ್ಲವೋಳಾಕೆ ನಾಣ್ದುಡುಕಿ ನುಣ್ಗೊರಲಿಂ ದನಿ ಪ್ರೋಕ್ತೆ ಚುಂಬಿಸು ।
ತ್ತಿಲ್ಲ ಸುಖಕ್ಕೆ ಸೀಮೆಯೆನಲಂಗಜಕೇಳಿಯನುಂಟುಮಾಡಿದಳ್ ॥ ೫೦

ಅನಂತರಂ,

ಜಡೆಗೆದರಲ್ ವಿಭೂತಿ ಪರಿಯಲ್ ಪೊಸಕಾಪಟಿಯಲ್ ಸಮಾಧಿ ಮುಂ ।
ಗಿಡಲುಪವೀತಮೊಪ್ಪೆ ಪಟಿಯಲ್ ತಪಮೋಡೆ [ವಿಸಿಷ್ಟಲಂ] ಮನಂ ॥
ಸಡಿಲಲನಂತರಂ ಮುನಿವರಂ ಸವಿಗಂಡಮೊಲಂದು ತಾನೆ ಕೂ ।
ಡೊರ್ಡರಿಸಿದಂ ಕರಂ ಸುರತಕೇಳಿಯನಾಕೆಯೊಳತ್ಯಪೂರ್ವಮಂ ॥ ೫೧

ಮತ್ತಂ,

ಪೂರ್ಣಕುಟೀರದೊಳ್ ಶಳಿರ ತಲ್ಪದೊಳಿರ್ದು ಲಸತ್ಕರಾಗ್ರದಿಂ ।
[ಸ್ವರ್ಣದ ಕಾಂತಿಯಂ] ಮಿಗುವ ಕೆಂಪಡಯಂ ಪಿಡಿದೊಪ್ಪವಂ ಪೂಭಾ ।
ಕೀರ್ಣವೆನಲ್ಕೆ ಚುಂಬಿಸಿ ಕರಂ ಬಿಗಿಯಪ್ಪಿದ ಕಾಮನಂಜರೀ ।
ಪೂರ್ಣಕುಚಾದ್ರಿಯೊಳ್ ಸುಖಸಮಾಧಿಯನಾಂತೆಸೆದಂ ಮುನೀಶ್ವರಂ ॥

ಸುರತಸ್ವೇದಾಂಬುವಿಂ ಮಜ್ಜನಕೆಮೆದೊಡನಿಡಾಡಿ ಲಜ್ಜಾಪ್ರಸೂನೋ ।
ತ್ಕರಮಂ ಧೈರ್ಯಾದಿನಾನಾಗುಣಸಮುದಯನೈವೇದ್ಯಮಂ ತೀವಿ ಕಾಂತಾ ।
ಗುರುವಕ್ಷೋಜಾತಲಿಂಗಕ್ಕರಿಗಿ ಪಡೆದಲಗ್ನಂಗಳಂ ಮುಚ್ಚಿ ಯೋಗಂ ।
ಬೆರಸೊಪ್ಪಿರ್ದಂ ಮಯೂರಾಸನಮೆಸೆಯೆ ಮರೀಚಿವ್ರತೀಂದ್ರಂ ನಿತಾಂತಂ ॥

ಅಂತು ಪರಿವರ್ತನ ಕಾಮಪುರುಷಾರ್ಥಫಲಸಿದ್ಧಿಯಂ ಪಡೆದು ಮತ್ತಂ

ಎಲೆ ಸತಿಯೆ ಕಾಮವೆಂಬುದು ।
ತಿಳಿಯಿತ್ತದಱುಳ್ಳ ಪರಿಕರಂಗಳವೇನೆಂ ॥
ದಳವಡೆ ಪೇಳೆಂದೊಡೆ ಕೋ ।
ಮಳೆ ಪದೆದಾಯತಿವರಂಗೆ ಮತ್ತಿಂತೆಂದಳ್ ॥ ೫೪

ಕುಸುಮಂ ಕರ್ಪೂರರತಾಂಬೂಲಕಮನುಪಮಕಸ್ತೂರಿಕಾಚಂದನಂ ಸ ।
ದ್ವಸನಂಗಳ್ ಕಾಮಸಂದೀಪನಕರಮವು ಚಂಪಾಪುರಸ್ಥಾನದೊಳ್ ನಾ ॥
ಡೆ ಸಮಗ್ರಂ ದೇವ ನೀಮಲ್ಲಿಗೆ ಪದೆದು ಬರಲ್ತೋರ್ಪೆನೆಂದಂತವಳ್ ತಾ ।
ವಸನಂ ಬೇಳ್ಕಾಡಿ ಬೇಗಂ ನಲವಿನೊಳೊಡಗೊಂಡುಯ್ದಳಾಪಟ್ಟಣ
ವರ್ನಾಗಲ ॥ ೫೫

ಎಂದೆಂತೆನೆ .

ಮುದದೊದವಂ ದುರಾಸೆ ಗುಣಮಂ ಧನಲೋಭಮನೂನವಿದ್ಯೆಯಂ ।
ಮದಮುಮನುರಾಗಮುಂ ವಿಭವಚಿಂತೆ ಪರಾಕ್ರಮಮಂ ದರಿದ್ರಮಂ ॥
ಭ್ಯುದಯಮನಿರ್ದ್ದ ದುರ್ಗುಣಕಯುಂ ಕಿಡಿಪಂತೆ ಮುನೀಂದ್ರ ಚಿತ್ತಮಂ ।
ಕದಡಿಸಿ ತನ್ನ ಪಂಬಲೊಳಗೊಳ್ಗುಯ್ದುದು ದೋಷಸನ್ಮುನೀಶನಂ ॥ ೫೮

ತಲೆಯುಮಂ ಬೋಳಿಸಿ ಸ್ರಗಳಂ ಕಿವಿಗಳೊಳ್ ಸಿಕ್ಕಿಟ್ಟು ಕಣ್ಗಳ್ಗೆ ಕ ।
ಜ್ಜಳಮಂ ತೀವಿ ಹರಿದ್ರವಂ ತೊಡೆದು ಮೆಯ್ಯೊಳ್ ಧಾತಕಾಷೀನದೊಳ್ ।
ಬಟ್ಟೆಕಂದೊಪ್ಪುವ ಗಂಡಿಯೊಳ್ ಸಿಲುಕಿಸಿ ತನ್ನಾಗಾರಕ್ಕೆ ಕೊಂಡುಯ್ಯಲಾ ।
ಗಣಿಕಾವೃಂದದ ನೇತ್ರಪಾತನಿಕರಂ ನೋಡಲ್ಕೆ ಯೋಗೀಂದ್ರನಂ ॥ ೫೯

ಅಂತಾ ಮುನಿಯುಮಂ ತಂದು ಚಂಪಾಪುರದೊಳಗಣ್ಣಂ ಕೊಂಡು ಪೋಗಿ

ಆ ಮುನಿನಾಥನವರೆತಂ ।
ಕೊಂಬಳ್ ಸತಿ ಸಿಂಹಾಸನದಾಸ್ಥಾನಮನು ॥
ದ್ದಾಮುವೆಸೆಯಲ್ಕೆ ಪ್ರಕಾಶ ।
ಭೂಮಧ್ಯದೊಳಾಕೆ ನಿಂದಿರಲ್ ನಸುಸಿಂದಂ ॥ ೬೦

ಚೀರಂ ವಾರುಣಕೋಟಿಯುಂ ಗೆ... ವಂತ ... ಪೊಂಚಕ್ಕೆ... ।
ಲ್ಲಾರತ್ನಾಭರಣಂಗಳಂ ... ಚೋಳಂ ಸಿ... ಪದ್ಮಿನೀ ।
ನಾರೀಸಂತತಿಯುಂ ನಿಜಂ ಕಳಿಪಿದಂ ಚಿತ್ರೈಸು ... ತ ।
ತ್ಸಾರಂಭಂ ಮಿಗೆ ಸಂಧಿವಿಗ್ರಹಿಗಳಿಂದೊಪ್ಪಿದು ದೊಡ್ಡೋಲಗಂ ॥

ಅಂತಿರ್ದೊಡ್ಡೋಲಗದೊಳ್ ಕಾಮಮಂಜರಿ ಮುನಿಪನ ತೊಗಲೊಳ್ ಕೈ
ಯ್ಯನಿಕ್ಕಿರ್ದ್ದಳಂತದಂ ನೃಪಂ ಕಂಡು,

ನಸುನಗುತೆ ನೃಪವರಂ ತಾ ।
ಪಸಸಹಿತಂ ಕುಳ್ಳಿರಬೆಲೆಯೆಸುಬಾಳ್ವಿನಂ ।
ಬಿಸಿ ರುಷಿಯು ತೊಡೆಯು ಮೇಲ್ತೊ ।
ಳ್ಪೆಸೆಯುಲ್ ಕುಳ್ಳಿರ್ದಳಿರ್ದ ಸಮಯಾಂತರದೊಳ್ ॥ ೬೧

ನೆರೆದಾಸ್ಥಾನದೊಳೆಟ್ಟಿ ಬಂದು ಪೊಡೆಮಟ್ಟಾಂ ಸೋಲ್ತ ನೀಕಾಮಮಂ
ಜರಿಗೆಲ್ದಳ್ ಕಡುಬಾಷ್ಪೆಗೆಯ್ದ ತಳದಿಂ ತೊಟ್ಟಾದೆ ನಾಸೀಕಗಂ ॥

ದರಸಂಗೊರ್ಬ ವಿದಗ್ಧೆ ಕೈವಮುಗಿದು ಪೋಗಲ್ ಮತ್ತೆ ತನ್ನಾಳ್ಪನಾ ।
ದರದಿಂ ಮನ್ನಿಸಿ ಕಾಮಮಂಜರಿಯನಿಂ ಪೋಗೆಂದನಾನಂದದಿಂ ॥ ೬೩

ಅಂತರಸಂ ಕಾಮಮಂಜರಿಗೆ ಗಣಿಕಾಧಿಪತ್ಯಮಂ ಕೊಟ್ಟು ಕಳಿಪಲಾ ಕಾಂತೆಯಾಸ್ಥಾನದಿಂ ಪೊಱಮಟ್ಟು ತನ್ನ ಮನಿಯ ಮುಖಾರವಿಂದಮಂ ನೋಡಿ

ಮುನಿಗೆ ಕರಕಮಳಮಂ ಮುಗಿ ।
ದಿನಿತಾಯಾಸಕ್ಕೆ ತಂದೆ ನಾಂ ನಿನ್ನಂ ಮೆ ॥
ಲ್ಲನೆ ನಿನ್ನ ಪರ್ಣಶಾಲೆಗೆ ।
ಮುನಿ ಬಿಜಯಂಗೆಯ್ಯೆನುತ್ತೆ ಕಾಲ್ಗೆಱಗಿರ್ದಳ್ ॥ ೬೪

ಆನುಡಿ ಕರ್ಣಶೂಲಮೆರ್ದೆಯಂ ಬಗಿದುರ್ಚುವ ವಜ್ರಮಂತ್ಯಕಾ ।
ಲಾನಲನೇೞ್ಗೆಯೆಂಬ ತೆಱನಾಗಿರೆ ಸುಟ್ಟನೆ ಸುಯ್ದು ಪೂರ್ವಮಂ ॥
ಜಾಸಿಸಿ ಚೇಷ್ಟೆಗುಂದಿ ಮತಿಗೆಟ್ಟು ಮನಃಪರಿತಾಪದಿಂ ಸರೋ ।
ಜಾನನಮೆಯ್ದೆ ಬಾಡೆ ಬೞಿಗಂ ಪಿಡಿದಂ ಮುನಿಮುಖ್ಯನಾಕ್ಷಣಂ ॥ ೬೫

ಅಂತು ಬೞಿಗಾಗಿ,

ಎಲೆ ಸೊಬಗೆ ನಿನ್ನ ದೆಸೆಯಿಂ ।
ತೊಲಗಲ್ ಕಾಲೇೞಿವೇವೆನೇಕಾರಣಮೊ ॥
ನ್ನೊಲವಂ ಕಿಡಿಸಿ ಕರಂ ಕೋ ।
ಟಲೆಗೊಳಗಾಗಿಸುವೆ ಪೇೞ್ ಸರೋಜದಳಾಕ್ಷೀ ॥ ೬೬

ಎನ್ನೊಡನೊರ್ವಳ್ ಮಚ್ಚರ ।
ದಿನ್ನಾಣುಳ್ಳಕೆಯಾಮರೀಚಿವ್ರತಿಯಂ ॥
ತನ್ನಯ ಸೊಬಗಿಂ ತಂದಪ ।
ಳೆನ್ನಯ ದೊರೆಯೆಂದೊಡಾನೆ ತಂದೆಪೆನೆಂದೆಂ ॥ ೬೭

ಎಂದೊಡೆನ್ನ ವಿರೋಧಿಯಪ್ಪ ಮದನಮಂಜರಿ ಮತ್ತಮಿಂತೆಂದಳ್ —

ಸುಂದರಿ ಮರೀಚಿಯಂ ನೀಂ ।
ತಂದೊಡೆಯಾಂ ನಿನಗೆ ದಾಸಿಯಾದಪೆನಿನು ಮಾ ॥
ಣ್ದಂದೆನಗೆ ದಾಸಿ ನೀನೆನ ।
ಗೆಂದೊಡೆ ಬಂದೆಂ ನಿಜಾಶ್ರಮಕ್ಕಾದರದಿಂ ॥ ೬೮

ಅಂತು ಬಂದು ನಿಮ್ಮಡಿಯನೆಂತಾನುಮೊಂದುಪಾಯದಿಂ ತಂದು,

ನಿನ್ನ ದೆಸೆಯಿಂದಿಳೇಶನ ।
ಮನ್ನಣೆಯುಂ ಪಡೆದೆನೆನ್ನ ಪಗೆಯುಂ ಗೆಲ್ದೆಂ ॥
ನಿನ್ನ ಪದಸೇವೆ ಭಾವಿಸ ।
ಲೆನ್ನರಿವುಂ ರಕ್ಷೆಗೆಯ್ವುದೆಲೆ ಮುನಿಮುಖ್ಯಾ ॥ ೧೯

ಎಂದು ಕೆಯ್ಗಳಂ ಮುಗಿದನುಷ್ಠಾನಂಗೆಟ್ಟಸ್ತ್ರದಾಶ್ರಮಕ್ಕೆ ಬಿಜಯಂಗೆಯ್ವೆಮೆಂಬುದುಂ;

ಜಡೆಗಳ್ ಪೋದುವು ತನುವಿನೊ ।
ಳಡರ್ದಿರಿಸಿನಮಾಱಿದೆನ್ನ ಕೌಪೀನಂ ಪೋ
ಯ್ತುಡಿ ನಡೆಯುವತ್ತಲಿನ್ನಾ ।
ವೆಡೆಯೊಳ್ ಪೋಗಿರ್ಪೆನಬಲೆ ಪೇೞ್ ದಯೆ ೨೦

ಬಗೆಗೇರವಾದೆನೆನ್ನ ನಿಜವೃತ್ತಿಗೆ ಸಲ್ಲದೆ ಪೋದೆನೆಲ್ಲರಾ ।
ನಗೆಗೆಡೆಯಾದೆನಲ್ಪಸುಖಮೆಂದು ವಿಚಾರಿಸದಾದೆನೆಯ್ದೆ
ಜ್ಜೆಗೆ ಪೋಱಿಗಾದೆನಂಗಜನ ಬಾಣದ ಕೋಳ್ಗೊಳಗಾದೆನುಸ ಕ್ರ
ಮಿಗೆ ಲಘುವಾದೆನಿನ್ನುಸಿರ್ಪುದೇನೆಲೆ ಕಾಮಿನಿ ನಿನ್ನದೂಸಱಿಂ ॥ ೨೧

ಎಂದೊಡಂ ಮಱುಮಾತುಗುಡದಿರ್ಪುದುಂ;

ಕುಲಮುಂ ಚಾರಿತ್ರಮುಂ ಸುವ್ರತನಿಯುತಮನಾಚಾರಮುಂ ಧರ್ಮಮುಂ
ಮು । ಯ್ಯೊಲವಂ ಸನ್ಮಾರ್ಗಮುಂ ಭಾವಿಸಲಿಹಪರಲೋಕಂಗಳಂ ನೀತಿ
ಯುಂ ನಿ ॥ ರ್ಮಲಯೋಗಧ್ಯಾನಮುಂ ತತ್‌ಕ್ಷಣದೊಳ್ ಕಿಡಿಸಿತ್ತದ್ಭುತಂ
ನೋಡಲಿಂತೀ । ಲಲನಾಸಂಸರ್ಗಮೆಂದುಮ್ಮಳಿಸಿ ಕಡುಬಱಲ್ದಂ ಮರೀಚಿ
ವ್ರತೀಂದ್ರಂ ॥ ೨೨

ಅಂತು ವಿಹ್ವಳೀಭೂತಹೃದಯನಾಗಿ,

ಮದಮುಱಿದಾನೆಯಂತೆ ವಿಷಪೋಡಿದ ಪನ್ನಗದಂತೆ ಬಲ್ಪುಗುಂ ।
ದಿದ ಮೃಗವೈರಿಯಂತೆ ಕಡುಪಾಱುದ ಭಾಸ್ಕರನಂತೆ ಕಾಂತಿ ಬ ॥
ತ್ತಿದ ಸಸಿಯಂತೆ ಬೇರುಡಿದ ಪಾದಪದಂತೆ ಕುಲಪ್ರಸಿದ್ಧಿ ಪಿಂ ।
ಗಿದ ಬುಧನಂತೆ ಸತ್ವಮುಱಿದಾಯೆಡೆಯಿಂ ತಳರ್ದಂ ಮುನೀಶ್ವರಂ ॥ ೨೩

ಎಂದು ಬಿಲ್ವಕುಜದ ವೆ[illegible]ಲೊಳಿರ್ದ [illegible] ಕಾ[illegible]
ಳಿಂತೆಂದಂ:—

ಆಪಾತಕಕೊಳಗಾದನು ।
ಶಾಪಂ ತನಿವರ್ಚೆ ವ ತ್ತ ಸ್ರಾವಾಶ[illegible]ದಿಂ ॥
ರೂಪಂ ಪ[illegible]ದಪೆನೆಂಬಾ ।
ಪಾಪಿಷ್ಠ ವಾಂಛೆಯೊಳಿಗೆ ತಾನೆಂದೇವಂ ॥ ೭೪

ಎಂದಾತಂ ಪೇಳೆ ಕೇಳ್ದಾ[illegible] [illegible]ಯಸ್ಯಂತನಾಗಿ [illegible] ವಂಗೊಂ[illegible]
ಮಹರ್ಷಿಯಿಂತೆಂದಂ —

ದುಸ್ಸಂಗದಿಂ ಮಿದೀಯುತ ।
ಪಸ್ಸಾಮರ್ಥ್ಯಂ ಸಮಿಲ್ಲದೊಳಿಸಿ [illegible] ॥
ನಿಸ್ಸಂದೇಹಮೆನಲ್ಕೆ [illegible] ।
ನಸ್ಸಂಧಾನದೊಳೊಡಲ್ದ ನಿಸ್ಸ[illegible] ॥ ೭೫

ಅಸ್ನೆಗವಿಶಾಚಂಪಾ[illegible]ರಯೊ [illegible] ತ್ರಿ[illegible]ಯವಿನಂಗಳಂ ಕಳೆಯೆಂಬುದುವಮಂ
ಮಹಾಪ್ರಸಾದಮೊಂದೆಂ[illegible] ಸಮಯದೊಳ್

ಎನ್ನಿಂದಂ ದ್ವಿಜರಾಜನತ್ಯು[illegible] ಮಹಾ[illegible]ಯಂ ಕರಂ ಕಂದಿದ ।
ತ್ತೆನ್ನಿಂದಂ ಕುಮುದಂ ಮು[illegible] ಕೊರಗಿತ್ತಾ ದೋಷಮುಂತಿರ್ಕೆ ಮೆ ॥
ತ್ತೆನ್ನಿಂ ವಿಷ್ಣುಪದಕ್ಕೆ ಕಾಯ್ದೊದಗಿದತ್ತೆಂದಬ್ಜಿನೀವಲ್ಲಭಂ ।
ತನ್ನುದ್ಯೋಗದೊಳಿರ್ದ್ದಗಂ ತಪಮಿರಲ್ ತತ್ಪೂರ್ವ ಪಾದ್ರಿಯಂ ॥ ೭೬

ಅಂತು ಪಗಲೊಡೆಯನ ಮರೀಚಿ ಮರೀಚಿಯೊಡನಂತ[illegible]ವಾಗ
ಲೊಡಂ,

ಮೃಗಗಣಮಿಕ್ಕೆಯಂ ಖಗಕುಲಂ ನಿಜಕೋಟರಮಂ ಬಟಿಲ್ಕೆಯು ।
ಧ್ವಗತತಿಯೂರ್ಗಳಂ ವಿಟಜನಂ ಗಣಿಕಾಜನದಾಲಯಂಗಳಂ ॥
ಗಗನಮನುರ್ವಿಯುಂ ತಿಮಿರಮಕ್ಷಿಗಳಂ ಸುಖನಿದ್ರೆ ಸಾರ್ದರ್ ।
ಖಗನಪರಾದ್ರಿಯಂ ಪದೆದು ಸಾರ್ದನನಂಗನೊಳೊಂದೆ ಕೈಪಿಗಲ್ ॥ ೭೭

ಅಂತೊಂದೆಡೆಯನೊಂದೊಂದು ಸಾರ್ದರಲ್ ಮರೀಚಿ ಎನ್ನಂ ತನ್ನಾಶ್ರಮ
ದೊಳಿರುಳಂ ಕಳೆಯಲ್ವೇಳ್ಕೊಂಡಂತೆಗೆಯ್ವೆನೆಂದು ಪೂರ್ವರಾತ್ರಿಯನಲ್ಲಿ ಕಳೆದು
ದಯವಾಗಲೊಡನಾತನಿಂ ಬೀಳ್ಕೊಂಡು ಚಂಪಾಪುರದೊಳಗನೆ ಬರ್ಪಾಗಳ್

ಅವನತಕಂಧರಂ ಘನವಾಲಿ ನುಸಪೇವನತೀವದುಃಖಸಂ ।
ಭವವು ಖಸಕು ವಾರಿಪರಿಲಗ್ನ ನಿಜಾವಯವಂ ದುರಂತವಾ ॥
ಗವಿರಳಶ್ರೀ ಬಚಿಪ ನತ್ತಿಚಿಂತದೆ ಳಿವನನೂರುಜಾದ್ವವೆ ।
ಘನನೊಳ್ ಕಾಣಂದೊಬಿನಫಿ ರಾಸಪನೊಕ್ಕು ಟಗಂಬರತ್ವದಿಂ ॥ ೭೮

ಅಂತ್ರಿವಾಕ್ತನುಂ ಕಂಡು - ನೀನಾರೇನು ಭಾಜನಮಪ್ಪ ತಪಕ್ಕೆ ಕಾರಣ ವೇಂ, ನಿನ್ನ ಪ ರ ನೆಂಬುದುಮಾತನಿಂತ ವಂ —

ಎನ್ನ ಪೆಸರ್ ಸಾಂದರಕಂ ।
ವಎನ್ನಂ ಬಟಕಂ ವಿರೂಪಕಂ ಸೀನೆಂದಂ ॥
ಪೆನ್ನ ನತ್ತಿಧೂರ್ತ ಲ್ಲರ ।
ಬಿನ್ನಂಬಟಿಸಿದೂಡವಂತಪಕ್ಕಾಗಾದೆಂ ॥ ೭೯

ಂದೂತಾಧೂರ್ತನಿಕರಂ ನಿನ್ನಂ ನಿಷ್ಕಾರಣಂ ಬಂಗಂಬಟಸಿಪ ತೆಜನೆಂ ತೆಂದಾಂ ಕೇಳಲಾತನಿಂತೆಂದಂ —

ಸಂವ ಧನಮಿತ್ರನೆಂಬಂ ।
ಸಾಂದರ್ಯಶರೀರನಪ್ಪನಾತನೊಳ್ನೋಳ್ ॥
ಕುಂದದ ಮಚ್ಚರದಿಂ ಕಡು ।
ಪಿಂದೆಸಗಿತ್ತಲ್ಲಿ ಸುಜನ ಧೂರ್ತಸಮೂಹಂ ॥ ೮೦

ಧನಹೀನಂ ಧನಮಿತ್ರಂ ।
ಧನಮುಳ್ಳವನಾವನಸ್ರೂಪಂ ಚಿದಾ ॥
ಪನಿವಾಸಿಯಾನದರ್ಕಂ ।
ದೆನಗವುವಂಗಂ ವಿದೂಷಕರ್ ಪಗೆವ್ರೋಯ್ದರ್ ॥ ೮೧

ರೂಪು ಗುಣಂ ಶೀಲಂ ವಿ ।
ದ್ಯಾಪರಿಣತೆ ಸೌಕುಮಾರ್ಯಮುತ್ತಿಚಾತುರ್ಯರ್ ॥
ಳಾಪಮಿವುಳ್ಳೊಡೆ ಧನಕುವ ।
ತಾಪಮದೇವುದೊ ನರರ್ಗೆ ವಸುಧಾತಳದೊಳ್ ॥ ೮೨

ಮನಸಿಜರೂಪಂ ಕುಲಜಂ ।
ವಿನಯವಿದಂ ಸುಭಗಮೂರ್ತಿ ವಿದ್ಯಾಧಾರಂ ॥

ವಸಿಕಾಜನಪ್ರಿಯುಂ ಬಹ ।
ಧನವುಳ್ಳವನಲ್ತೆ ಲೋಕನೀತಿಕ್ರಮದಿಂ ॥ ೮೩

ಎಂಬರ್ಥಪಕ್ಷಪಾತದಿಂದೆನ್ನಂ ಸ್ವರೂಪಪಕ್ಷಪಾತದಿಂ ಧನಮಿತ್ರನಂ ಕೊಂಡು ಕೊನೆದಿರ್ವರ್ಗಂ ವೈರಮಂ ಬಳೆಸೆ ವೈರಂ ಕೈಗಟ್ಟಿಯಾಂ ಮಿಗಿಲ್ ತಾಂ ಮಿಗಿಲೆಂಬುದಂ ಧೂರ್ತಜನಂಗಳ್ ಕೇಳ್ದಂತೆಂದರ್:—

ನಿಮ್ಮಿರ್ಬರ ಸೌಭಾಗ್ಯದ ।
ಹಮ್ಮುಗೆಯುಂ ಸುಭಗೆ ಕಾಮಮಂಜರಿ ಪದೆಪಿಂ ॥
ದೊರ್ಮೆ ಪರೀಕ್ಷಿಸಿ ಪೇೞ್ದೊಡೆ ।
ನಿಮ್ಮಯ ಹೀನಾಧಿಕತ್ವಮತಿನುತಿವಡೆಗುಂ ॥ ೮೪

ಎಂದೊಡಾವಿರ್ಬರುಂ ಕಾಮಮಂಜರಿಯೆಡೆಗೆ ಧೂರ್ತದೂತರಂ ಕಳು ಪಲುಂ

ಧನವುಳ್ಳಾತಂ ದಿಟಂ ಜಾಣೊಡೆಯನಧಿಕನುರ್ವೀಶ್ವರಂ ಮನ್ಮಥಂ ಸಜ್ಜನರೆಲ್ಲಾ ವಿದ್ಯೆಯೊಳ್ ಬಲ್ಲವನತಿಸುಭಗಂ ಭೋಗಿಲೋಕಪ್ರಿಯಂ ಮೋಹನರೂಪಂ ಸತ್ಕಳಾಪಂ ಸಕಲಗುಣಯುತಂ ಸತ್ಕುಲೀನಂ ಜಗತ್ಖ್ಯಾ ।
ತನಿಳಾಸಂಪ್ರೀತನುತ್ಪಾದಿತಶುಭಚರಿತಂ ಸಂತತಾಕಾರಪೂಜ್ಯಂ ॥ ೮೫

ಎಂದವಳೆನ್ನಂ ಪರಿಗ್ರಹಿಸಿ ಧನಮಿತ್ರನನುದಾಸೀನಂಗೆಯ್ದುದಱಿನಾನವಳೊಳ್ ಪ್ರೀತಿಯಿಂ ಪುದುವಾೞ್ಕೆಯಿಂದಿರಲ್ ಕಿಱಿದು ದಿನದಿಂ ಮೇಲೆ

ಗಳಿಸಿರ್ದರ್ಥವನವಳೀ ।
ಬ್ಬಳಗೊಂಡಾ ಕಾಮಮಂಜರೀಸತಿಯೆನ್ನಂ ॥
ಕಳಿವೂವನುೞಿವ ತುಂಬಿವೊ ।
ಲಳಕುಂತಳೆ ಪೊಱಗೆ ನೂಂಕಿ ಕಳೆದಳ್ ಬೇಗಂ ॥ ೮೬

ಅಂತವಳ್ ನೂಂಕಿದೆನ್ನಂ ಕಂಡು ಧೂರ್ತರ್ ವಿರೂಪಕನೆಂದು ಪೆಸರಂ ಕೊಟ್ಟುಪಹಾಸ್ಯಂಗೆಯ್ಯಲೊಡಂ ಖಿನ್ನನಾಗಿ ದಿಗಂಬರತ್ವಮಂ ಪಡೆದೆನೆಂಬುದುಮಾತನನಾಶ್ವಾಸಿಸಿ ಅಲ್ಲಿಂ ತಳರ್ದು ಪುರದೊಳಗೆ ಬರ್ಪಾಗಳ್

ರಾಜಕುಮಾರಕರ್ ನಿಜವಿನೋದಿಗಳಂಗವಿಕಾರಿಗಳ್ ಕಳಾ ।
ಬೋಜಕರರ್ಥಿಗಳ್ ಸುಭಗಮೂರ್ತಿಗಳೊಪ್ಪುವ ನಾಗರೀಕನಾ ॥

ನಾಜನಮಂದು ಪೆಂಪೆಸೆವ ಮಂತೆಯದೊಳ್ ನೆರೆಮತ್ಸವಂ ಮಿಗಲ್ |
ಜೂಜುಗಳಂ ಸಮಗ್ರಮೆನಲಾಡುತಿರಲ್ ಪಟೆದಲ್ಲಿಗೆಯ್ದಿದೆಂ ॥ ೮೭

ಸಂದಿ ಕಳಂತಿ ಗಜಾಗರ |
ಮೊದಚ್ಚಂ ಕೊಂಡು ಕನಡೆಯುಂ ತೂಗಿಯಿನಿ ॥
ತ್ತಂದುಱಿಕ್ಕೈಚಳಕಂ ಮಿಗೆ |
ಚೆಂದಮೆನಲ್ ಲಗ್ಗೆದೋಟಲಾಡುತ್ತಿರ್ದರ್ ॥ ೮೮

ಅದಲ್ಲದೆಯುಂ,

ಸದರದೆ ದಾಯಮಂ ಪಿಡಿವ ಪಿತ್ತಮನೊಡ್ಡುವ ಜೊತ್ತುಗಾಱರಿಂ |
ಇದಿರವರಂ ಕೆಗಳ್ಚುಸುವ ಥಾಳಿಸಿ ಮೊಯ್ಯಮಿದಕ್ಷಮಂ ಕರಾ ॥
ಗ್ರದಿನುಱಿ ದಂಡೆಗೊಳ್ವ ತೆಗೆಯಾಗಳ್ ತಾಗಿತೆನಲ್ಕೆ ಸಾರಿಯುಂ |
ಕೆದಱುವ ನೆತ್ತಗಾಱರ ವಿನೋದಮನೀಕ್ಷಿಸುತಿರ್ದನುವಿರ್ಪಾ ॥ ೮೯

ಅಂತಾವಿನೋದಮಂ ನೋಡುವೆನೆಂದು ಕುಳ್ಳಿರ್ಪಾಗಳುಂ,

ಸಾರಿಯನುಂಟುಮಾಡಿ ನೆನೆದೊಡ್ಡಿದ ದಾಯಮೆ ಬೀೞಲಾರ್ಮ ವಿ |
ಸ್ತಾರಮನೊಯ್ಯನೀದ್ವಿಗುಣದಿಂ ದಶದಾಯಮನೊಯ್ದು ಲೇಸು ಕೈ ॥
ಮಾರದೊಳಕ್ಷಮಂ ಪಿಡಿದು ಥಾಳಿಪನಾವನನೆನ್ನ ಮುಂದೆನು |
ತ್ತೂರಿಗದಿಟ್ಟನೊರ್ವನತಿಭಾಷೆಯನಗ್ಗಳಮಾಗಲಾಡಿದಂ ॥ ೯೦

ಅಂತನನುಚ್ಛೃಂಖಲವಾಗ್ಜಾಲಮಂ ಬೆಸೆತಾಡುವುದಂ ಕಂಡಾನಿಂತೆಂದೆಂ:—

ಬೇಡಿದು ಭಾಷೆಯೇಕೆ ಪಿಡಿ ದಾಯಮನಾಜಿದೊಡೇಱೆನುತ್ತಲಾ |
ನೇಡಿಸಲಂತನಂ ಜರೆದು ಕೋಪಿಸಿ ಬಲ್ಲೊತೆ ಬಂದು ಕುಳ್ಳಿರಾ ॥
ನಾಡುವೆನೆನ್ನ ನಿನ್ನ ಧನವುಳ್ಳನಿತರ್ಕ್ಕನಲೆದ್ದಿ ಸಾರಿಯಂ |
ಪೂಡಿದೆನಕ್ಷಮಂ ಪಿಡಿದು ಹಾವುಗೆಯಾವವನೆಂದು ನೋಡಿದೆಂ ॥ ೯೧

ಎಂಬುದುಂ ಮತ್ತಮಾವನಿಂತೆಂದಂ:—

ಆರಿದಿರಾದೊಡಾಡಿದಪೆನೆಕ್ಕುಡಿಯುಂ ಪಸೆ ಪಂಚದಾಯಮುಂ |
ವೀರವಿಳಾಸಮುಂ ತಗರಸನ್ನೆಯುಮೈದೆರಡಂ ನೆಗೞ್ವ ಚಾ ॥
ಸಾರಿಯುನಾಱು ಪನ್ನೆರಡನೊಪ್ಪುವ ರಾಜಕುಮಾರನಂ ಮಹೋ |
ದಾರಮನೊಡ್ಡಿ ಬೊಡ್ಡನೆನುತೆನ್ನನನಂ ಕಡುಪಿಂ ಕೆರಳ್ಚಿದಂ ॥ ೯೨

ಇನ್ರು ಮೊದಲಾಗಿ ಪತ್ತು ವಿಧದ ನೆತ್ತವನಾಡುವೆನೆಂದೆನ್ನಂ ಕರಳ್ಬಲಾಂ ವಿಮರ್ದಕನೆಂಬ ಹಾವುಗೆಕಾಱನ ಮೊಗನಂ ನೋಡಲಾತಂ ಅರ್ಥಮನೊತ್ತಿಬುದುಂ,

ಹಲಗೆಯನಳವಡಿಬಿಟ್ಟು |
ಗಳ್ ಮುಯ್ಯೞಿನಕ್ಷಯುಗಳಮಂ ಧಾಳಿಸಿ ಮೇ ||
ಲೆನಿಸುಪ್ರೌಢತ್ವಮಂ ನುಡಿ |
ದಳುಪಿಲ್ಲದೆ ಜೂದಗಾಱರಂ ಕೆಳೆಗೊಂಡೆಂ || ೯೩

ಅಲ್ಲಿಂ ಬೞಿಯಿಂ

ತಾಗುವ ದಾಯಮಂ ತಡೆವ ತಪ್ಪಿದ ಸಾರಿಯನೊತ್ತಿಕೊಳ್ವ ಗೆ |
ಲ್ವಾಗಱಿವೊತ್ತಿನೇಱಿಸುವ ಮುಯ್ಯೞಿದಕ್ಷಮನೊಯ್ಯನೆತ್ತಿ ಕ್ಕೈ ||
ವೇಗದೊಳಾರ್ದು ಧಾಳಿಸುವ ಹಾವುಗೆ ಸಾಕೆನಲೇೞ್ವ ಬಿನ್ನಣ |
ಕ್ಕಾಗರಮಾಗಲಾಂ ಪದೆದು ನೆತ್ತಮನಾಡಿದೆನುರ್ವರಾಧಿಪಾ || ೯೪

ಷೋಡಶಸಹಸ್ರವಿತ್ತ |
ಕ್ಕಾಡಿಯುಮಂ ಗೆಲ್ದು ಹಾವುಗೆಗೆ ಕಿಱಿದಂ ಕೊಂ ||
ಡಾಡುವವರ್ಗಂ ಕಿಱಿದುಮ |
ನೀಡಾಡಿ ಬೞಿಕ್ಕಮಿರ್ಕ್ಕಮಂ ಕೊಂಡೆಲ್ಗಂ || ೯೫

ಅಂತೇೞಿಲೊಡಂ,

ಹಾವುಗೆಯಾದ ವಿಮರ್ದಕ |
ನಾವಾಸಕ್ಕೆನ್ನನಱ್ತಿಯಿಂ ಕೊಂಡೊಯ್ದು ರಸಂ ||
ತೀವಿದ ಭೋಜನದಿಂ ಸಂ |
ಭಾವಿಸೆ ಬೞಿಕವನೊಳಾಯ್ತು ಮಿತ್ರಸ್ನೇಹಂ || ೯೬

ಅಂತಾವಿಮರ್ದಕಂಗಮೆನಗಮತ್ಯಂತಸ್ನೇಹಂ ಮಿಗಲಾತನಿಂ ಪುರದೊಳಗಣ ಲುಬ್ಧಕಗೃಹಂಗಳ ವೃತ್ತಾಂತಮೆಲ್ಲಮಂ ತಿಳಿದಾಮುಂದಿವಸಂ

ಕಮಳಭವಾಂಡದೇವರಿಯ ಭಾಸ್ಕರದೀಪಿಕೆ ನಂದೆ ವಸ್ತುಭೇ |
ದವ ನಱಿಯಲ್ಕೆ ಬಾರದವೊಲುರ್ಬಿದ ಕತ್ತಲೆ ಪರ್ಬೆ ದಿಕ್ಕನಾ ||
ಕ್ರಮಿಸಿ ಕಱಂಗಿ ಕತ್ತಲಿಸಿ ಸೂಚಿಗಭೇದ್ಯಮೆನಲ್ಕೆ ಮರ್ತ್ಯದೃ |
ಕ್ಕಮಳನಿರೋಧಮಂ ಪಡೆದುದೇನೊಗೆದಂ ತಿಮಿರಾತಿರೇಕಮಂ || ೯೭

ಅದು ಕೃಷ್ಣಪಕ್ಷಮಾಗಿಯುಂ ।
ಮೊದವಿದ ಕಮಳಾನುಮೋದನಂ ಪತಿಯುಮ ಚ ॥
ಕ್ರದೊಳನುರಾಗಂ ಪಿಂಗಿ ।
ಪೂರ್ದು ಚೋದ್ಯಮೆನಿಪ್ಪ ಮಾರ್ಗನೊಳ್ವೀಕ್ಷಿಸಿದಂ ॥ ೯೮

ಅಂತು ಪರ್ಬಿದ ಮಾರ್ಗಮಂ ಕಂಡು,

ವಿಳಸಿತಯೋಗಚೂರ್ಣತತಿ ಕರ್ಕಟರಜ್ಜು ಸುದೀಪಸಂತತಿಗಳ್ ।
ಶಳಭಕರಂಡಕಂ ಮರದ ಮಾಟದ ಪೆರ್ಗಲೆ ಮಾನಸೂತ್ರಕಂ ॥
ಪಳಹಮೆನಿಪ್ಪುಪಾಯಶತಮಂ ತಳೆದುಬರ್ಪ ಮಾರ್ಗನೊಳ್ ಸಿರಾ ।
ಕುಳಮೆನೆ ಕನ್ನಗತ್ತಿಸಹಿತಂ ಪೊಱಮಟ್ಟನಿಳಾಧಿನಾಯಕಂ ॥ ೯೯

ಅಂತು ನಿದ್ರೆಯುಂ ಮಿಗಿಲಾಗಿಸುವ ಯೋಗಚೂರ್ಣಮಂ, ಮಾಗಿಲೊಳ್ ಸಿಕ್ಕಿಸಿ ಪಿಡಿದೇಱುವೇಱುವರ್ಗಮಂ, ಸಜ್ಜರಸನನೂಡಿದ ದೀಪಸಂತತಿಯುಮಂ, ಬಳಗಿವರ್ ದೀವಿಗೆಯುಂ ನಂದಿಸುವ ಪತಂಗದ ಕರಡಗೆಯುಂ, ಕನ್ನದೊಳ್ ನೀಡಿಯೊಳಗಣೆಚ್ಚಱಿಕೆಯಱಿವ ಮರದ ತಲೆಯುಂ, ಬಳಗಣುಗ್ರಾಣಮಂ ಅಱಿಯಲಱಿವ ಮಾನಸೂತ್ರಮುಂ, ಕನ್ನದಿಂ ಗಾಳಿ ಬಾರದಂತೆ ಮುಚ್ಚುವ ಪಳಹಮುಂ, ಕನ್ನದೊಳ್ ಸಂದಿಸಿದ ಕಲ್ಲಂ ತೆಗೆವಿಕುರ್ಚಿಯುಂ, ಮತ್ತಮನೇಕಚೌರ್ಯಸಾಧನಂಗಳುಮಂ ಕೊಂಡು,

ಸೊಗಸೆಸೆಯಲ್ಕೆ ಪೊಚ್ಚಪೊಸ ಕಾಗಿನ ಕಚ್ಚೆಯನುಟ್ಟು ಕನ್ನಗ ।
ತ್ತಿಗೆಯನಲಂಪಿನಿಂ ಪಿಡಿದು ಕಟ್ಟಿಲೆಯೊಳ್ ಪೊಱಮಟ್ಟು ಮೆಲ್ಲಮೆ ॥
ಲ್ಲಗೆ ನಸೆಗೊಂಡು ಮುಂದೆಡಬಲಂಗಳನಾಲಿಸುತುಂ ನೆಚಿಲ್ದಮೆ ।
ಯ್ದೆಗೆಯುತುಮಾಪಿನಿಂ ನಗರವೀಥಿಯೊಳೆಯ್ದಿರುತಿರ್ದನಾರ್ಪವಂ ॥ ೧೦೦

ಅಂತು ಬರ್ಪಾಗಳ್ ಮುಂದೆ

ನಗರಾಧಿದೇವತೆಯ ಮೊ ।
ಲ್ಲಗೆಯೋ ಬೆಳ್ದಿಂಗಳಗೆಯೊ ರನ್ನದ ಕೈದೀ ॥
ವಿಗೆಯೋ ಮಿಂಚಿನ ಗೊಂಚಲ ।
ಬಗೆಯೋ ಎನಲೊಂದು ಬೆಳಗು ತೋಱಿತ್ತಾಗಳ್ ॥ ೧೦೧

ಅಂತಾಬೆಳಗಂ ಭಾವಿಸಿ ನೋಳ್ಪನ್ನೆಗಂ,

ಸುೞಿಪಲ್ಲೊಳಗಿಂ ಕಟಾಕ್ಷರುಚಿಯಿಂ ಚಂಚನ್ನಖಜ್ಯೋತ್ಸ್ನೆಯಿಂ |
ವಿಲಸದ್ಭೂಷಣರತ್ನದೀಧಿತಿಗಳಿಂದುರ್ಬೆಱ್ದು ಪರ್ಬಿರ್ದ ಕ ||
ತ್ತಲೆಯುಂ ನೂಂಕರಿಸುತ್ತಮೂನತಶಿರೇಖಾವಿಭ್ರಮುಂ ಕೂರ್ತು ಕೋ |
ಮಲೆಯಾಯ್ತೆಂಬಿನಮೊಪ್ಪಿ ಬರ್ಪ ಸತಿಯುಂ ಕಂಡೆಂ ಕಳಾವಲ್ಲಭಾ ||೧೦೨

ಮತ್ತಂ ಪಲಿ ಗಲ್ಲಂ ನಗೆ |
ಮುತ್ತಿನ ಕನ್ನಡಿಯ ಪಡಿಯೆ ಕಾಂತೆಯ ಚೆ ||
ಲ್ವೆತ್ತಳಕಂ ಭ್ರೂಮಧ್ಯಂ |
ಬಿತ್ತರವೆನಿಪಂತು ಘನಘನಗುಣದಿಂದಂ || ೧೦೩

ಅಂತಿರ್ದ ಕಾಂತೆಯುಂ ಕಂಡವಳಂ ವಿಚಾರಿಸುವೆನೆಂದವಳಿದಿರ್ಗೆ ಮಂದು ಪೋಗದಿರೆಂಬುದುಂ;

ನೀನಾರಾಂ ಕಳ್ವನೆನ |
ಲ್ಕೇನಂ ಮಾಡಲ್ಕೆ ವೇಟ್ಟೆದೆಂಗಾಗಳ್ ಚಂ ||
ದ್ರಾನನೆ ತೊಡವಿನ ಪೆಟ್ಟಿಯು |
ನಾನಂದದಿನೀಯಲಾಂ ಬಚಿಕ್ಕಿಂತೆಂದೆಂ || ೧೦೪

ಆರ ಮಗಳ್ ನೀಂ ಪೆಸರೇ |
ನೀರಾತ್ರಿಯೊಳಲ್ಲಿಗೆಯ್ದಿದಪೆಯೊರ್ಬಳೆ ನೀ ||
ರೇರುಹಲೋಚನೆ ಪೇೞ್ ವಿ |
ಸ್ತಾರದೊಳೆನಗೆಂಬೊಡಾಕೆ ಮಗು*ೞ್ದಿಂತೆಂದಳ್ || ೧೦೫

ನೆ*ಗೞ್ದ ಕುಬೇರದತ್ತನ |
ಮಗಳಾಂ ಕುಲಪಾಲಿಕಾಖ್ಯೆಯೆನ್ನಂ ಮುನ್ನಂ ||
ಬಗೆ ಮಿಗೆ ಧನಮಿತ್ರಂಗಿ |
ತ್ತು ಗಡೀಗಳ್ ಕುಡುವನಲ್ತೆ ಪೆಱಗೆನ್ನಯ್ಯಂ || ೧೦೬

ಧನಮಿತ್ರನರ್ಥಮುಂ ಮಂ |
ದಿನಿಕಾಯಕ್ಕಿತ್ತು ಬಡವನಾಗಲೊಡಂ ಭೂ ||
ಜನಮೊಲ್ದುದಾರಕಂ ನಿ |
ನ್ನ ನಾಮಮೊಂದಾತನಂ ಪ್ರಿಗದ್ದುಪರಿಗಳ್ || ೧೦೭

ಅಂತಾತಂ ತ್ಯಾಗಶೀಲದಿಂ ಬಡವಟ್ಟು ದಾರಕನೆಂಬ ಪೆಸರಂ ಪಡೆಯೆ,

ಪೆಱನೊರ್ವನರ್ಥಪತಿಯೆಂ ।
ಬಱಿಕೆಯು ವೈಶ್ಯೇಂದ್ರನಿರ್ವನಾತಂಗೆನ್ನಂ ॥
ಮಱುಮಾತಿಲ್ಲದೆ ತಾಂ ಪ್ರೊ ।
ಬ್ಬುಱೆ ಕೊಟ್ಟಪನೆಂಬ ಮಾತನೀಗಳ್ ಕೇಳ್ದಂ ॥ ೧೦೮

ಅದಂ ಕೇಳ್ದು

ಇಂತಿರೆಯುಮಂಗಲವನಾ ।
ನೆಂತನುಭವಿಸಿದಪೆನೆನ್ನನಯ್ಯಂ ಮುನ್ನೊ ॥
ಲ್ದಿಂತಾವಂಗಿತ್ತನನಂ ।
ಕಾಂತೆನೆನುತ್ತವನ ಮನೆಗೆ ಪೋದಪೆನೀಗಳ್ ॥ ೧೦೯

ಕುಡುವೆಡೆಯೊಳ್ ಸಂಪದಮುಂ ।
ಬಡತನಮುಂ ಕುಲಮುಮಾದಿಯೊಳ್ ತಿಳಿದೊಲವಿಂ ॥
ಕುಡುವುದು ಕೊಟ್ಟು ಬೞಿಕ್ಕಂ ।
ಪಡಿಮಾತಾಡುವುದು ನೀತಿಧರ್ಮವಿರೋಧಂ ॥ ೧೧೦

ಎಂದಾಂ ಧನಮಿತ್ರನ ಮನೆಗೆ ಪೋದಪೆಂ ನಿನಗೆ ಬೇಱೆ ಪ್ರಾರ್ಥನಮಾಯಿತ್ತು, ಪೋಗೆಂಬುದುಮಾನಾಕುಂಭಪಾಲಕಿಗಿಂತೆಂದೆಂ:—

ನಿನ್ನೊಡನೆ ಬಂದು ಪೞಿಪಿಂ ।
ನಿನ್ನಧಿಪನ ಮಂದಿರಕ್ಕೆ ಕಳಿಪುವೆನೊಲವಿಂ ॥
ಕನ್ನೆ ನಡೆಯೆಂದು ಸತಿಯಂ ।
ಬೆನ್ನಿಕ್ಕಿ ಬೞಿಕ್ಕಮೊರ್ವರ್ದಲ್ ನಡೆಗೊಂಡೆಂ ॥ ೧೧೧

ಅಂತು ನಡೆಗೊಳಲ್ ಮುಂದೆ

ಜಡಿವ ರವಂಗಳಿಂ ಸೆಳೆದ ಕೈದುಗಳಿಂ ಕರದೀಪಕೋಟಿಯಿಂ ।
ದೊಡನೆಯು ವೀರರಿಂ ಪೊಡೆವ ಜೇಗಟೆಯಿಂ ಕಡುಕೆಯ್ವ ಡಾವಡೆಯು ॥
ಗ್ಗಡಣೆಗಳಿಂ ಮಹಾಧ್ವನಿಯ ಕೊಂಬುಗಳಿಂ ಭಯಮಂ ನೆಗೞ್ಚುತಿ ।
ರ್ದೆಡೆಯೊಳೆ ಮುಂದೆ ಸಂದಣಿಸಿದರ್ ಪುರರಕ್ಷಕರರ್ಧರಾತ್ರಿಯೊಳ್ ॥ ೧೧೨

ಅಂತು ಘೋರಾಕಾರದ ಕಾರಿರುಳೊಳ್ ಘೋರಿಸೆ ಬನ ತಳಾಱರಬ್ಬರವಮಂ ಕೇಳ್ದು,

ಮೃಗಶಾಬಂ ಮಿಗೆ ಕಾದರ್ |
ಉಗರ್ಜಿತಕ್ಕಂಜುವಂತೆ ತದ್ರಾತ್ರಿಯೊಳಾ ||
ಮೃಗಶಾಬನೇತ್ರೆ ಬೆರ್ಚಿದ |
ಳಗಣಿತಪುರರಕ್ಷಕಕರ್ಕಳಬ್ಬರಕಾಗಳ್ || ೧೧೩

ಅಂತಾಕೆಯಂಜಿಕೆಯಂ ಕಂಡಾಂ ಪ್ರೋಗದಿಲ್ಲಿಗೊಂದುಪಾಯಮನಂ ಬಗೆಯುತೆಂದಾನಾಕೆಯೊಳಿಂತೆಂದೆಂ:—

ಉರಗಂ ಪಿಡಿದೊಡೆಯುನನು |
ಕರಿಸಿ ಬಟಿಲ್ದಂತೆ ಪಡೆಯ ಮಂದಿರಮುಗಿಲ್ ಗು ||
ಮರ್ರಣಾಕಾರದೊಳಿರ್ಪೆಂ |
ಪರವಶನಾದಂತಿರೊಡಗಿಯುಸಿರ್ಗೆಗಿದಿಂಗಳ್ || ೧೧೪

ಎಂದವಳ್ಗೆ ಪೇಳ್ದು

ನೊರೆ ಬಾಯೊಳ್ ಸುತ್ತಿ ಕಣ್ಗಳ್ ಮುಗಿದುಸಿರೆನಸುಂ ಭೇದಿಸಲ್ಬಾರದಂತು | ಬ್ಬರಿಸಿಲ್ ಬಿಣ್ಪಂ ಬಸಿಗೊರ್ಣುಱುಂಗಿ ತನು ಬಟಿಲ್ಪಂತಿರಿರ್ಪೊರ್ಂದುವೇಷಂ || ತರವಂ ಕೈಕೊಂಡು ನೋಲ್ಪಗರ್ಕಟ ಭುಜಗವಷ್ಟಾಂಗನಾಗಿರ್ದನೆಂಬಂ | ತಿರಲಿರ್ದೆಂ ರಾತ್ರಿಯೊಳ್ ಶೋಕಿಸೆ ಸತಿ ಕೆಲದೊಳ್ ಧೂರ್ತರ್ನಿಂ ರಾಜಪುತ್ರಾ || ೧೧೫

ಅಂತಿರ್ಪ ಸಮಯದೊಳ್ ತಳವಾಱರ್ ಮುಟ್ಟಿವಂದು ಕುಸುಮಕೋಮಳೆಯಪ್ಪ ಕೋಮಳೆಯ ಕೆಲದೊಳಿರ್ದ ಪೆಟ್ಟಿಗೆಯುಂ ಬಿಬ್ಬರ್ದನ್ನಂ ಕಂಡಿದೇನೆಂಬುದುಂ,

ಕಡುಪೆಂಪೊಪ್ಪುವ ರಾಜಧಾನಿಯಿವೞೊಳ್ ಸದ್ವಿದ್ಯೆಯಿಂದರ್ಥಮಂ |
ಪಡೆವೊಂದಾಸೆಯೊಳಿಲ್ಲಿ ಬಿಟ್ಟಿರಲದೊಂದುಗ್ರೋರಗಂ ಬಲ್ಪಿನಿಂ ||
ಪಿಡಿಯಲ್ ನಾಯಕನಿಂತು ತೀರ್ದನಸುವಂ ಕಾರುಣ್ಯದಿಂದಣ್ಣಗಾ |
ರಾಡವಂ ಬಲ್ಲನರೆತ್ತಿ ಮೊಂದು ಕೆಡೆದಳ್ ತತ್ಕಾಂತೆ ಭೂಭಾಗದೊಳ್ || ೧೧೬

ಅಂತು ಪೂರಬ್ಬಿ ಕಾಂತೆಯನಾತುರದನವಂ ಸಂತೈಸಿಯುಪದೊಳ್

ಮಿಗೆ ಗರುಡಮಂತ್ರಯುಂ ಪಿರಿ ।
ದಗಣಿತಪಂಚಾಕ್ಷರಾದಿಮಂತ್ರಂಗಳನಾ ॥
ವಗನೋದಿ ಯಂತ್ರ ಮಂ ಬರೆ ।
ದು ಗಾರುಡಂ ಕೊಳ್ಳದೆಂದು ತೊಳಗಿದನೊರ್ವಂ ॥ ೧೧೭

ಈತೆಱದಿಂ ಗಾರುಡಿಸಲ್ ।
ಚೈತನ್ಯಂ ತೋಱದಂತು ಬೆಱತಿರೆ ಕಂಡಂ ॥
ತಾತಳವಾಱರ್ ಜೀಸ ।
ತ್ತೀತಂಗಿದು ಕಾಲವೆಂದು ಸತ್ತಿಗಿಂತೆಂದರ್ ॥ ೧೧೮

ಉದಯಂದೊಳೀತನ ಸಂಸ್ಕಾ ।
ರದ ದೆಸೆಗಿಂಧನವನೀವೆವೆಂದವರಲ್ಲಿಂ ॥
ಬೊದಱುತ್ತೆ ಪೋದರಿತ್ತಲ್ ।
ಪದುಳದಿನಾನೆಯ್ದೆ ಪೋದೆನಲ್ಲಿಂದಾಗಳ್ ॥ ೧೧೯

ಅಲ್ಲಿಂ ತಳರ್ದಾಗಂ ಕುಬಪಾಲಿಕೆವೆರಸು ಧನಮಿತ್ರನ ಮನೆಗೆಯ್ದೆ ಪಡಿ
ಯಂ ತೆಱೆಯಿಸಿ ಪುಗಲೊಡಂ

ಭೋಂಕನಲಾಗಳಾಕೆ ಸಹಿತಾಂಬರಲಾಧನಮಿತ್ರನೊರ್ವಗದಲ್ ।
ಶಂಕಿಸಿದಂ ಮಗುಳ್ದು ಮುದಮಂ ತಳೆದಂ ಕಡುಲಜ್ಜೆ ತನ್ನೊಳೊ ॥
ಲ್ದಂಕುರಿಸಲ್ ಕರಂ ತಲೆಯನೊಯ್ಯನೆ ಬಾಗಿದನಾಪ್ತಬಂಧುವೀ ।
ತಂ ಕೆಳೆಯಂ ದಿಟಂ ಪೆಱವನಲ್ತೆನುತೆನ್ನನೊಱಲ್ದು ನೋಡಿದಂ ॥ ೧೨೦

ಅಂತಾತಂ ಪಲವುಭಾವಂಬೆರಸೆನ್ನಂ ನೋಡಲೊಡಂ

ನಿನ್ನರಸಿಯೀಕೆಯೀಕೆಯು ।
ರನ್ನದ ತೊಡವುಗಳ ಪೆಟ್ಟಿಯಿದೆಕೊಳ್ಳೆಂದು ॥
ತ್ಪನ್ನಮತಿಗಿತ್ತೆನೀಯಲ್ ।
ತನ್ನುತ್ಸಾಹದೊಳವಂ ಮಗುಳ್ದಿಂತೆಂದಂ ॥ ೧೨೧

ನಿನಗೇನಂ ಮಾಳ್ಪೆನೀಪ್ರೊಟ್ಟೆ ಸಗಿನುಚಿತಕಾರ್ಯಕ್ಕೆ ಭಾವಿಪ್ಪೊಡಿಂತೀ ।
ತನು ಜೀವಂ ನಿನ್ನವಾವೆಂದಱಿವ ಸಿತೆಸಿ ಸ್ತೋತ್ರದಿಂ ಭಕ್ತಿಯಿಂ ವಂ ॥
ದನೆಯಂ ಮಾಡ್ಪಂಗವೆಂಬಂತತಿವಿಚಿತನದಿಱಾರಿಯಂ ತನ್ನ ದೀಜೇ ।

ವನದೊಳ್ ಕಾರ್ತರ್ಘ್ಯವೀಂವ್ರೊಂದಣಕವುವನಿಯೊಳ್ ಮಾಱ್ಪ್ರವ್ರೋಲ್ ತೋಂ
ಪುರ್ದೆನೆನ್ಬೊಳ್ ॥ ೧೨೨

ಮತ್ತ ಗಜಗಮನೆ ತಡೆವಳೆ ।
ಸುತ್ತಸು ತನುವಿಂದಗಲ್ವುದೀವಧುವಂ ತಂ ॥
ದಿತ್ತುದಱಿಂ ತನು ಜೀವಂ ।
ವಿತ್ತಂ ನೀನಿತ್ತ ವಸ್ತುವೆಂಬುದು ಪುಸಿಯೇ ॥ ೧೨೩

ಇನಿತಂ ಮಾಱ್ಪವರಾರೊ ಕೇಳ್ ಮನುಜರೊಳ್ ಸ್ತ್ರೀರತ್ನಮಂ ರತ್ನಮಂ
ಧನಮಂ ನಿರ್ನೆರವಿಂತು ತಂದು ಪೆಱರೊಳ್ ಪ್ರತ್ಯರ್ಪಣಾಕಾಂಕ್ಷೆಗೆ ॥
ಟ್ಟನಸುಂ ಕೊಟ್ಟಿಹಲೋಕದೊಳ್ಪ್ಪ ಪರಲೋಕಶ್ರೀ ನಿತಾಂತಂ ಕರಂ ।
ನಿನಗಪ್ಪಂತಿರೆ ಚಿತ್ತದುತ್ತಮಿಕೆಯುಂ ಕೇಳ್ ಮಿತ್ರಕಲ್ಪದ್ರುಮಾ ॥ ೧೨೪

ಎನ್ನಯ ನುಡಿಯುಂ ಕೊಂಡೀ ।
ಕನ್ನೆಯನೊಲ್ದಿತ್ತೆಯೆಂಬುವದು ವಿಕ್ರಯದೋ ॥
ಷನ್ನಿನಗೆ ಬಕುರ್ವೊಂತೆನೆ ।
ರನ್ನವನಳೆಗಿತ್ತರೆಂಬ ನಾಣ್ಕ್ಮಾತಿನವೋಲ್ ॥ ೧೨೫

ವ್ಯರ್ಥಾಳಾಪದೆಳೇಂ ಧನ ।
ಮರ್ಥಂ ಪ್ರಾಣಂ ನಿಜಕ್ಕೆ ನಿನ್ನದು ನಿಜಕಾ ॥
ತೀರ್ಥಂ ನೀಂ ಪದೆಪಿಂ ಮ ।
ತ್ಪ್ರಾರ್ಥನೆಯಿದು ರಕ್ಷಿಸೆಂದು ಚರಣಂಬಿಡಿದಂ ॥ ೧೨೬

ಅಂತಾಧನಮಿತ್ರನೆನ್ನನರ್ಥವಾದದಿಂ ತುಷ್ಟಿವಡಿಸಿ ಕಡೆಯೊಳಿಂತೆಂದಂ—

ಪರಿಕಿಸುವ್ರೋಡರ್ಥಪತಿ ಕಡು ।
ಸಿರಿವಂತಂ ಬಡವನಾಂ ನೆಗಳ್ದಾತನ ಮಾ ॥
ಚ್ಚರದಿಂದಿಲ್ಲಿರ್ಪುದು ತನ ।
ಗೆ ರಕ್ಷಸುತ್ತೆಂದನಕ್ಕಿಱಿಂ ಧನಮಿತ್ರಂ ॥ ೧೨೭

ಎಂಬೊಡಾತಂಗಭಯಮುಮಂ ಕೊಟ್ಟು ಸಂತಮಿಡಲ್ ಮತ್ತಮಿಂತೆಂದಂ—

ಈಕನ್ನಿಕೆಯುಂ ತತ್ಪಿತೃ ।
ಲೌಕಿಕವಿಧಿಯಿಂ ವಿವಾಹಮಂ ಮಾಡಿದೊಡ ॥

ವ್ಯಾಕುಳದಿಂ ನಿನಗೆಲ್ಲಾ |
ಲೋಕದೊಳೆಸೆಗುಂ ಜಸಂ ಫಲಂ ನಿಜವಂಶಂ ‖ ೧೨೮

ಎಂದೊಡಾಂ ಕುಬೇರದತ್ತನಿಂ ನಿನಗೆ ಕನ್ನೆಯಂ ಕೊಡಿಸುವುಪಾಯ ಮಂ ಮಾಳ್ಪೆಂ. ಅನ್ನೆಗಮಾಕುಮಾರಿಯುಂ ನಿಜವಾಸಕ್ಕೆ ಕಳಿಪಿದಳ್ ಎಂದಾನುಂ ಧನಮಿತ್ರನುಮವಳಂ ಕುಬೇರದತ್ತನ ಮನೆಯುಂ ಪುಗಿಸೆ

ಎನಸುಂ ಕುಬೇರದತ್ತನ |
ಮನೆಯರ್ಥಮುಮೊಪೆದ ಮಾಡಕೆ ಪೋಪಗಾಗೆ ತದಂ ‖
ಗನೆ ಪೊಕ್ಕು ಬಾಗಿಲೊಳ್ ಪೊ |
ಕ್ಕನಿತಂ ಕಳ್ದೊಂದು ತಿಪ್ಪೆಯೊಳ್ ಪೂಳ್ದಿಟ್ಟೆಂ ‖ ೧೨೯

ಅಂತದೆಲ್ಲಮಂ ಪೂಳ್ದಿರ್ದುಂ ಮಗುಳ್ದು ಬರ್ಪಾಗಳ್ ಮುಂದೆ

ಸ್ಥೂಳಾಗಾರಂಗಳಂ ನಿರ್ಗಮದೊಳ್ ಕಿಳ್ತಿತ್ತು ಮೆಯ್ಬಲ್ಮೆಯಿಂ ಕಿ |
ಟ್ಟಾಳಾನಸ್ತಂಭಮಂ ಮೇಣ್ ಮದದೊದವು ಮಿಗಲ್ ಕೊಬಿ ಕೋಟ್ಟು ಕ್ಕಿಟ್ಟ ರೌದ್ರಾ ‖ ಭೀಳಂಬೆತ್ತೊಂದು ಮಾತ್ಸ್ಯದ್ಗಜಪತಿ ರಜನೀಮಧ್ಯದೊಳ್ ಬರ್ಪುದಂ ಕಂ | ಡಾಳಾಪಂಬೋಟು ಭೈಭೈಪಡಿಪಡಿಯೆನುತಾರ್ದರ್ ಉದೆಂ ಸಾರ್ವಭೌಮಾ ‖ ೧೩೦

ಅಂತು ರಾಜಾಲಯಮಂ ಪೊಕ್ಕುಮುಟ್ಟಿ ಮುಂಡಾಸನದಿಂ ಮದಮುಕಿ ಬರ್ಪ ಆನೆಯುಂ ಮಾಗಂಕುಶಪ್ರಘಾತದಿಂ ಮುಟ್ಟಕ್ಕೆ ತಂದು ಮಸ್ತಕಕ್ಕೆ ಬಂದು ಪಿಂದೆ ಧನಮಿತ್ರನನೇಱಿಸಿ ವಜ್ರನಖಾಂಕುಶದಿಂದಮಂಕಿ ಬಿಟ್ಟಕ್ಕುವ ಸಮಯದೊಳ್ ತಳವಾರರ್ ಬಂದು ಮುತ್ತೆ

ರದನಾಗ್ರದಿಂ ಕೆಲಂಬರ |
ನೊಡೆಯಿಸಿ ಮೆಟ್ಟಿಸಿ ಪಲಂಬರಂ ಕರಸಂಘಾ ‖
ತದಿನನಿಬರನಾಗಳ್ ಯಮ |
ಸದನಕ್ಕೊಪ್ಪಿಸಿದೆನಿರ್ದರಳೆವಟಿದೋಡಲ್ ‖ ೧೩೧

ಅಂತು ಮಿಕ್ಕವರೆಲ್ಲರರಮನೆಯಾನೆ ಮದಮುಕಿ ಕೊಲುತಿರ್ಪುದೆಂ ದೋಡಿ ಪೋಗೆ ಬೞಿಯಂ

ಆಳೆನಿಸುವರ್ಥಪತಿಯ ನಿ |
ಜಾಲಯಮುಮಂ ತದ್ಗಜೇಂದ್ರನಿಂ ನುಗ್ಗಿಸಿ ಸ ‖

ಲ್ಲೀಲೆಯಿನಲ್ಲಿಂ ತಳರ್ದರ್ ವಿ ।
ಶಾಲವೆನಿಪ್ಪೊಂದು ಚೆಲ್ವ ಕುಜವಂ ಕಂಡೆಂ ॥ ೧೩೨

ಅಂತಾಕುಜಕ್ಕಾನೆಯುಂ ನೂಂಕಿ ಅದಱ ಮೇಲೊಂಬಂ ಪಿಡಿದಾನೆಯುಂ ಬಿಡಲವತ್ತಲ್ಪೋದುದು. ಆನುಂ ಧನಮಿತ್ರನುಂ ಬೞಿಕ್ಕಾವೃಕ್ಷದಿಂದಿೞಿವನ್ನೆಗಂ

ಅಳಿಗಳ ಪಾಡುವಿನಂ ಸರೋಜಿನಿ ನಗುತ್ತುಂ ನೋೞ್ಪಿನಂ ಕೂಡೆ ಪಾಂ
ಸುಳೆಯರ್ ಬೆರ್ಚುವಿನಂ ರಥಾಂಗಯುಗಳಂ ಪಾರ್ಚುಪಿನಂ ತೆಂಬೆರಲ್ ॥
ಕಳವ್ರಾವಂ ಬಲಿಗೆಯ್ವಿನಂ ರವಿನಟಂ ಬಂದಾಡುವಾಗಳ್ ಸುಪಾ ।
ಟಳವಸ್ತ್ರಂ ತೆರೆಯಾದವೋಲ್ ಮೆಱೆದುದಾಪ್ರಾಗಾಶೆ ನುಣ್ಗೆಂಪಿನಿಂ ॥

ನಗೆಯುಂ ಪಂಕಜವಕ್ತ್ರದೊಳ್ ದುಗುಡಮುಂ ನೈದಿಲ್ಗಳೊಳ್ ಅಲ್ಲೆಯು
ಪ್ಪುಗೆಯುಂ ಕೋಕಯುಗಂಗಳೊಳ್ ಪದೆಪಿನಿಂ ಕಣ್ಬೇನೆಯುಂ ಗೂಗೆಯೊಳ್
ಸೊಗಸಂ ದಿಕ್ತಟದೊಳ್ ಪೊದಱ್ದ ಭಯಮುಂ ಜಾರಾಂಗನಾನೀಕದೊಳ್ ।
ಮಿಗೆ ಮಾಡುತ್ತುದಯಾದ್ರಿಯೊಳ್ ನೆಲಸಿದಂ ಪಂಕೇಜಿನೀವಲ್ಲಭಂ ॥

ಅಮೃತಕರಸಂಗಮಂ ಮಾ ।
ಡಿ ಮುಗುಳ್ದಿಂತುಷ್ಣಕರಕೆ ಮೆಯ್ದೊಡ್ಡುವೆನೆಂ ॥
ಬಮೆಳನಸುಕುಮಾರತೆಯಿಂ ।
ಕುಮುದಿನಿ ತಲೆವಾಗಿ ದುಗುಡಮಂ ತಳೆದಿರ್ದಳ್ ॥ ೧೩೪

ಅಂತು ಸೂರ್ಯೋದಯಮಾಗಲಾಂ ಮನೆಗೆ ಪೋದೆಂ. ಅತ್ತಲ್

ಎನಸುಂ ಕುಬೇರದತ್ತನು ।
ಮನುತಾಪದಿನರ್ಥಪತಿಯುಮಿರ್ಬರ್ ತಂತ ॥
ಮ್ಮ ನಿಕೇತನಂಗಳಂ ನೋ ।
ಡಿ ನೋಡಿ ಕಡುನೊಂದು ಚಿಂತೆಯೊಳ್ ಮುೞುಗಿರ್ದರ್ ॥ ೧೩೬

ಅಂತವರಿರ್ವರ್ ತಂತಮ್ಮ ಮನೆಯಾದವಸ್ಥೆಯಂ ಕಂಡವಶಕುನವಾದುದೆಂದಾಲಗ್ನಮುಂ ಬಿಟ್ಟು ಮತ್ತೊಂದು ಲಗ್ನದೊಳ್ ಮದುವೆಯುಂ ಮಾಳ್ಪೆವೆಂದೊಂದು ತಿಂಗಳ್ ಅರ್ಥಪತಿಯ ಮದುವೆ ನಿಲಲಾಸಿತ್ತಲ್,

ಹುಸಿಯುಂ ವಂಚನೆಯುಂ ನಿರರ್ಥಕವನತ್ಯಾಶ್ಚರ್ಯಮಂ ನನ್ನಸಾ ।
ಹಸಮಂ ಪೂರ್ಣದುರಾಶೆಯುಂ ಸಕಲಮಿಥ್ಯಾಪಾಪಮಂ ಕೂಡೆ ತಂ ॥

ತ್ರಿಸಿದಂತೊಪ್ಪುವ ಚರ್ಮಭಸ್ತ್ರಿಕೆಯನೊಂದಂ ಚೆಂದಮಪ್ಪಂತು ನಿ ||
ರ್ಮಿಸಿದೆಂ ಲಕ್ಷಸುವರ್ಣಮಂ ಕಱೆವುದೆಂಬೀಸುದ್ದಿಯುಂ ಬಿತ್ತಿದೆಂ || ೧೩೩

ಅಂತೊಂದು ತೊಗಲ ಚೀಲವಂ ನಿರ್ಮಿಸಿ ಧನಮಿತ್ರನಂ ಕರೆದು ನೀನೀ ಚಂಪಾವತಿಯ ಸಮೀಪಕ್ಕೆ ಪೋಗಿ ಚರ್ಮಭಸ್ತ್ರಿಕೆ ಬಂದ ಕ್ರಮಮಂ ತನ್ನ ಮಾಹಾತ್ಮ್ಯಮಂ ನಿನ್ನ ದರಿದ್ರಘನತೆಯುಂ ಪೇೞ್ದು ಬಾಯೆಂದೊಡಾ ನಿಂತೆಂದು ಪೇೞ್ದಂ

ಅನಿಶಂ ದುಃಖಮನೇಕಗೋಷ್ಠಿಯೊಳತಿದ್ವೇಷಂ ಮಹಾಪಾಪದೊಳ್ |
ಮನಮತ್ಯಾಶೆ ಕರಂ ಕ್ಷುಧಾಭಯಮನಾಚಾರಂ ಮತಿಭ್ರಾಂತಿ ಜೀ ||
ವನಚಿಂತಾತತಿ ನಿಚ್ಚ ಪೆರ್ಚಿದ ದರಿದ್ರಕ್ಕೆಯ್ದೆ ಬೇಸತ್ತು ಕಾ |
ನನದೊಳ್ ಬೆಂದ ಶರೀರಮಂ ತೊರೆವೆನೆಂಬುದ್ಯೋಗದಿಂದೆಯ್ದಿದೆಂ || ೧೩೪

ದಾರಿದ್ರ್ಯಂ ಪೆರ್ಚಿದ ಸಂ |
ಸಾರಮಿದೇಕೆಂದು ಚಿತ್ತದುಮ್ಮಳದಿಂ ಕಾಂ ||
ತಾರಕ್ಕೆ ಪೋಗಿ ನಿಜತರ |
ವಾರಿಯೊಳೊಲ್ದೆನ್ನ ಶಿರವನಾನಱಿವಾಗಳ್ || ೧೩೫

ನಿಡುಜಡೆ ಕರ್ಣದೊಳ್ ಪಳಿಕಿನೊಪ್ಪುವ ಕುಂಡಲಮಂಗದೊಳ್ ನಯಂ |
ಬಡೆದ ವಿಭೂತಿ ಮೆಲ್ನಗೆ ತುಳುಂಕುವ ಮುದ್ದುಮೊಗಂ ಕರಾಗ್ರದೊಳ್ ||
ಪಿಡಿದ ವಿಪಂಚಿ ತನ್ನೊಳತಿಕೌತುಕಮಾಗಿರೆ ಭೋಂಕೆನಲ್ಲಿಗೊ |
*ಳ್ವಡರ್ದಿರೆ ಬಂದನೊರ್ವ ನವಪಾಶುಪತಾಸ್ತ್ರಕಧಾರಿತಾಪಸಂ || ೧೩೬

ಅಂತು ಬಂದಾತಪೋಧನನೆನ್ನಂ ಕಂಡು

ಈಸಾಹಸಮಂ ಮಾಡಲ |
ದೇಸುಂ ಮನವೇಕೆ ರಂಜಿಪಾತ್ಮದ್ರೋಹಾ ||
ಭ್ಯಾಸಮನೆಸಗುವೆ ಪೇೞಾ |
ಶ್ವಾಸಿಸುವೆಂ ಪಡೆದು ನಿನ್ನನೆಲೆ ದುರ್ಬೋಧಾ || ೧೩೭

ಎಂದಾತಪೋಧನಂ ಪೇೞ್ದೊಡಾನಿಂತೆಂದೆಂ:—

ಅತಿದಾರಿದ್ರ್ಯಂ ಮಾನ |
ಚ್ಯುತಿ ದುಃಖಂ ಪೆರ್ಚಲೆನ್ನೊಳೀ ಜೀವನದು ||

ಗರ್ತ್ರಿಯಿಂ ಮರಣಂ ಸುಖಮೆಂ |
ದತಿವೇಗದಿನಿಲ್ಲಿಗೆಯ್ದಿ ತೀರ್ವರ್ಪೆನೀಗಳ್ || ೧೪೨

ಎಂಬುದುಂ;

ಬಿಡು ಮರುಳೆ ಮರಣವಾರ್ತೆಯು |
ನೊಡವೆಯನೆಂತಾನುಮೊಂದುಪಾಯದಿನಿಸಿತಂ ||
ಪಡೆಯಲ್ಬರ್ಕುಂ ಮರಣಂ |
ಬಡೆಯಲ್ಬರ್ಕುಮೆ ನೆಗೞ್ದುಪಾಯಕ್ರಮದಿಂ || ೧೪೩

ಎಂಬುದುಮಾನಿಂತೆಂದೆಂ—

ಭಾವಿಸೆ ದರಿದ್ರನನಿಶಂ |
ಸೇವಕನತಿಮೂರ್ಖನಪ್ರವಾಸಿ ಮಹಾರೋ ||
ಗಾವಿಷ್ಟನೆಂಬ ಮನುಜಂ |
ಜೀವನ್ಮೃತನಲ್ತೆ ಬೇವ ನೀವಱಿಯುದುದೇ || ೧೪೪

ಎಂಬುದುಮಾತಪೋಧನನೆನಗೆ ಕರುಣಿಸಿ

ಅಕ್ಷಯನಿಧಿಯೆನಲೊಪ್ಪಿರೆ |
ಲಕ್ಷಸುವರ್ಣಪ್ರವಾಹಮಂ ಕಱೆವುದಿದಂ ||
ರಕ್ಷಿಸಿಕೊಳ್ಳೆಂದಿತ್ತ ಮು |
ಮುಕ್ಷುವರಂ ಚರ್ಮಭಸ್ತ್ರಿಕಾಖ್ಯಮನೊಂದಂ || ೧೪೫

ಕುಡೆನನ್ಯರ್ಗಂ ತಪದಿಂ |
ಪಡೆದೆಂ ನಾಂ ಪೂರ್ವಕಾಮದೇಶದೊಳೊಲವಿಂ ||
ಮೃಡನ ವರದಿಂದೆ ನಿನ್ನೀ |
ಬಡತನಮಂ ಕಂಡು ಕೊಟ್ಟೆಸಿಲ್ಲದೊಡೀಯೆಂ || ೧೪೬

ಎಂದು ಲಕ್ಷಸುವರ್ಣಮಂ ಕಱೆವ ಚರ್ಮಭಸ್ತ್ರಿಕೆಯಂ ಕೊಟ್ಟು ಮತ್ತಮಿಂತೆಂದಂ—

ಇದಱ ವಿಧಾನಂ ವೇಶ್ಯಾ |
ಸುದತಿಯರ್ಗೆ* ವಣಿಗ್ವರರ್ಗೆ ಕಱೆವುದು ಮಿಕ್ಕ ||
ರ್ಗಿದು ಕಾಣಿಯರ್ಥಮಂ ಕಱೆ |
ಯದೆಂದು ಮುನಿನಾಥನುಸಿರ್ದಂ* ಮತ್ತಿಂತೆಂಗಂ || ೧೪೭

ಮುನ್ನಾವನರ್ಥಪಾಲಂ ಮುಳಿ |
ದನ್ನೆಯದಿಂ ಕೊಂಡೊಡವರೊಳಾಧನಮಂ ಪಿಂ ||
ಪಿಂ ನಯದಿಂಟೀವುದು ಮಿಗೆ |
ತನ್ನರ್ಥಮನೀವುದಾಗಳಧನಗೊರ್ಲಪಿಂ || ೧೪೮

ಎಂದು ಪೇಳ್ದು
ಆತಾಪಸಂ ಒಚೀಕ್ಕಂ |
ಪಾತಾಳಸ್ವರ್ಗಭೋಗಮಂ ಭೋಗಿಸಲೆಂ ||
ದಾತಂ ಬಿಲದೊಳಗಿರ್ಪುದಂ |
ಭೂತಳಪತಿ ಕೇಳ್ ಪ್ರಸಾದದಿಂದಿನ್ನೊಂದಂ || ೧೪೯

ಅದೇನೆಂದರಸಂ ಕೇಳ್ವುದುಂ,
ವಸುಧೇಶ ಚರ್ಮರತ್ನದ |
ದೆಸೆಯಿಂದೀನರಪುರಾಂತದೊಳ್ ಪದೆಪಿಂ ಜೀ ||
ವಿಸಿದಪೆನದಱ ಕ್ಷೇಮಂ |
ನಿಸದಂ ನಿನ್ನಡಿಯುದೆಂದು ಪೇಳ್ ಪೋಗೆಂದೆಂ || ೧೫೦

ಎಂದೊಡಾತನುಮಂತೆ ಪೋಗಿ
ಜನಪತಿಗೆ ತತ್ಪ್ರಪಂಚಮಂ |
ನನಿತಂ ಧನಮಿತ್ರನೊಲ್ದು ಪೇಳಿಕ್ಕೆಳ್ದು ||
ತನದರ್ಕೆ ಕಾತುರ್ಕೆ ಕರುಣಿಸಿ |
ನಿನಗತಿಸಖಮಪ್ಪ ತೆಱದಿನಿರು ಪೋಗೆಂದಂ ||

ಅಂತರಸನಿಂ ಧನಮಿತ್ರಂ ಬೀಳ್ಕೊಂಡು ಬಂದು ಕಾರ್ಯದ ಹದನನೆನ್ನೊಳ್ ಪೇಳಲನಂತರಂ

ಭರದಿಂ ವಿಮರ್ದಕನನಾ |
ದರದಿಂದೊಲ್ದರ್ಥಪತಿಯನೋಲಗಿಸೆಂದಿ ||
ಲ್ಲಿರಿಸಿದೆನುತ್ಸವದಿಂ ನಿ |
ರ್ಭರಬಂಧುರಮಂತ್ರಭಿನ್ನಮಾಗದ ತೆಱದಿಂ || ೧೫೧

ಅಂತೆನಗೆ ಜಾಜೆಂ ಮಿತ್ರನಾದ ವಿಮರ್ದಕನರ್ಥಪತಿಯನೋಲಗಿಸಿದುರ್ ಧನಮಿತ್ರನೊಳ್ ಟಕ್ಕಿನ ಜಗಳವನಂದೆದಿಂಗೆಸಗೆಂದು ಪೇಳ್ದು ಬಱಿಯಂ

ಸಕಳನಿಶೀಥಿನಿಯೊಳ್ ಲು ।
ಬ್ಧಕನಿಕರದ ಮನೆಯ ಧನಮನಸಿತಂ ಮುಲಮು ॥
ಲ್ಲಕಶೇಷನಾಗಿ ನೂಂ ನಿ ।
ಚ್ಚಕನ್ನಗಳನಿಕ್ಕಿ ಕಳಲೆಂಡಚೆರ್ಚಿನರಸಾ ॥ ೧೫೩

ಅದೆಂತೆನೆ -

ಮನೆಯವರೆಲ್ಲರುಂ ಕೊಱಗಿ ನಿದ್ರೆಯ ಸೊರ್ಕಡೆಗೊಂಡರೆಂಬುದಂ ।
ಮನದನುರಾಗದಿಂದಱಿತು ಭಿತ್ತಿಗೆ ಸೂತ್ರಮನಿಕ್ಕಿ ನೋಡಿ ಭೂ ॥
ಜನನವವಸ್ತುವೀಯೆಡೆಯೊಳಿರ್ಪುದು ತಪ್ಪದೆನುತ್ತೆ ಪನ್ನಗಾ ।
ನನದೊಳೆ ಕನ್ನಮಂ ಸವೆದು ಲುಬ್ಧಕರರ್ಥಮನೆಯ್ದೆ ತೀರ್ಚಿದಂ ॥ ೧೫೪

ಅಂತು ಕಳ್ದ ಚತುರ್ಭಸ್ತ್ರಿಕಾಕವಿಪ್ರದೆಂಬ ನೆವದಿಂ ಬೇಳ್ಪಿರ್ಥಮನಾರ್ಜಿಸಿ ಬೀಸುಂಗೆಯ್ದು ಧನಮಿತ್ರನುಮಾನುಂ ಸುಖದಿನಿರೆ

ಎನ್ನೊಳ್ ಬೇಳ್ಪಿನಿತರ್ಥಮ ।
ನುನ್ನತಿಯಿಂ ಪಡೆದು ಧನಿಕರಾದರ್ಥಿಗಳಿಂ ॥
ಖಿನ್ನಮುಖರಾಗಿ ಬಂದರೆ ।
ಮನ್ನರೆನಲಿ ಪುರದೊಳೆಸಗಿದೆಂ ಲುಬ್ಧಕರಂ ॥ ೧೫೫

ಅಂತು ಪುರದ ಲುಬ್ಧಕರ ಮನೆಯುಂ ಕವರ್ದೊಂದು ದಿನಮಾಕಳ್ದ ಪಟ್ಟಣದ ವಿಭವಮಂ ನೋಡಲೆಂದು ಧನಮಿತ್ರಂಬೆರಸಂಗಡಿಗೇರಿಯೊಳ್ ಬರ್ಪಾಗಳ್

ಕಂಠಾವಿಮರ್ದಕಂ ಮಿಗೆ ।
ಮಿಂಡಿನೊಳರ್ಥಪತಿಯ ಪಕ್ಷದೊಳವನು ॥
ದ್ದಂಡತೆಯಿಂ ಧನಮಿತ್ರನ ।
ನಂಡಲೆಯುತ್ತಿರದೆ ಬೈದನೆಲ್ಲರ್ ಕೇಳಲ್ ॥ ೧೫೬

ಅದೆಂತೆನೆ-

ಅಕಟ ಕುಬೇರದತ್ತನ ಮಗಳ್ಗನಿತಾಟಿಸಿ ಕೆಟ್ಟು ಪೋಗದಿರ ।
ವಿಕಳಮನಸ್ಕನಾಗಿ ಧನಮಿತ್ರ ನೆಗಱೆ ಯ ನಿನ್ನ ಚರ್ಮಭ ॥
ಸ್ತ್ರಿಕೆಯತಿಗರ್ವಮಂ ನಿಲಿಸುವೆಂ ಮುಳಿದೊಂದಿರುಳಿರ್ಚೆನಾದೊಡಂ ।
ಜಿಕೆ ನಿನಗಾಗಲೆಂದುಸಿರ್ವೆನಲ್ತಿಗು ಸತ್ಯಮೆನಲ್ಕೆ ಮಾಡುವೆಂ ॥ ೧೫೭

ಎಂದಾವಿಮರ್ದಕಂ ಧನಮಿತ್ರನಂ ಜರೆದೊಡಾಧನಮಿತ್ರನದೆ ಕೋಪದೊಳನ್ಯಾಯಮೊಳನ್ನಂ ಬೈದಪನೆಂದಿಲ್ಲಿಗೆ ಪೇೞ್ದಾವಿಮರ್ದಕಂ ಮಗುಳ್ದಿಂತೆಂದಂ—

ಅನ್ಯಾಯಮಲ್ತೆ ಮತ್ಪತಿ ।
ಮಾನ್ಯಂ ಮತ್ಕಾಂತನೊಲ್ದು ಕೂಡುವ ಸತಿಯಂ ॥
ನಿಂ ನ್ಯಾಯಮಿದನ್ರೊೞ್ತ ।
ತ್ಕನ್ಯೆಯುಂ ಕೂರ್ತು ಮದುವೆಯಪ್ಪೆ ಗಡೀಗಳ್ ॥ ೧೫೪

ಎಂದು ವಿಮರ್ದಕಂ ಧಿಕ್ಕರಿಸಿದೊಡು ಕೇಳ್ದು ಕೇಳದಂತಾವಿರ್ಬರುಂ ಪೋಪಾಗಳಂತಂಗಡಿಗೇರಿಯೊಳ್ ಮುಂಚೆ

ನಯನಸುಖಾವಹಂ ದಲೆನಿಪಂಗಡಿಗೇರಿಯೊಳಲ್ಲಿಗಲ್ಲಿ ವಿ ।
ಸ್ಮಯಮನೊಡರ್ಚುವಗ್ಗಳದ ಗಾಯಕಪಾಠಕಸತ್ಕವೀಂದ್ರಸಂ ॥
ಚಯಮನೊಲ್ದು ನೋಡುತೊಲವಿಂ ಬರಲೊಪ್ಪುವ ಪಂಚವೀರಗೋ ।
ಷ್ಠಿಯೊಳನುರಾಗದಿಂ ಪದೆದು ನರ್ತಿಸ ತಿರ್ದಳದೊರ್ವಳುವಿಪಾ ॥ ೧೫೫

ಮನಸಿಜನ ಮಂತ್ರದೇವತೆ ।
ಜನಚೇತಸ್ಸತ್ವವಿತ್ತಹಾರಿಣಿ ವಿಕಸ ॥
ದ್ವನಜಮುಖಿ ಕಾಮಮಂಜರಿ ।
ಯನುಜೆ ಕಳಾವಂತೆ ರಾಗಮಂಜರಿಯೆಂಬಳ್ ॥ ೧೫೬

ವನಿತೆಯೊಳೊಪ್ಪುಗುಂ ಕಮಠಕುಂತಳಮುದ್ರಸಮಾಕ್ಷಿಯುಂಬರಾ ।
ನನಮಿಭಕುಂಭದಂತವಸನಂ ಮಣಿಸತ್ಕಚಮಿಂದುಮಧ್ಯಮ ॥
ಬ್ಜನಿಭನಿತಂಬಮುಪಭ್ರಮರಪಾದಮಲಕ್ತರಸಪ್ರಕಾಶಮೋ ।
ಹನರುಚಿಧಾತುನೃತ್ತತನುಕರ್ಕಶದಿಂದೆಸೆದಿರ್ಪ ಪಾಂಗಿನಿಂ ॥ ೧೫೭

ಅದಲ್ಲದೆಯುಂ,

ಶಿರಪಂದಂ ಪೊಸತಾಗೆ ಹಸ್ತವಲನಂ ಚೆಲ್ವಾಗೆ ಕಣ್ಬೆಳ್ಳಮು ।
ಚ್ಚಿರಿಯೆಂಬಂತಿರೆ ಭ್ರೂರ್ಗಬ್ಬಿಸೆ ಪದನ್ಯಾಸಂ ರಸಾವಾಸಮಾ ॥
ಗಿರೆ ನಾನಾಕರಣಂ ಕರಂ ಮೊೞೆಯೆ ಪೆಂಪಿಂದಂಗಹಾರಂ ಪೊದ ।
ಬ್ದಿರೆ ನೃತ್ಯಾಭಿನಯಕ್ಕೆದೇಂ ಮೊೞೆದಳೋ ತತ್ಕಾಂತೆ ರಂಗಾಗ್ರದೊಳ್ ॥

ಮನದನುರಾಗಮಂ ಮುಖವಿಳಾಸದೊಳಾಸ್ಯವಿಳಾಸಮಂ ವಿಲೋ |
ಚನಯುಗದೊಳ್ ಸಿತಾಕ್ಷಿ ಗಳವಿಭ್ರಮಮಂ ಪಡೆಪಿಂ ಶಿರೋಜಕಂ ||
ಪನದೊಳ್ ತಚ್ಛಿರೋವಿಧವನೊತ್ತುವ ಹಸ್ತದೊಳಗ್ರಹಸ್ತಭಾ |
ವನೆಯನಲಂಪಿನಿಂ ಕರಣದೊಳ್ ಕಮಲಾನನೆ ತೋಱಿಯಾಡಿದಳ್ || ೧೬೩

ಪದವಿನ್ಯಾಸವಿಳಾಸದಿಂ ತನುಲತಾವಿಕ್ಷೇಪದಿಂ ಲೋಚನಾ |
ಗ್ರದ ಸನ್ನರ್ತನದಿಂ ಕಪೋಳರುಚಿಯಿಂ ಸುಭ್ರೂಲ ಡಿಳ್ಳಾಯಿಯಿಂ ||
ಮೃದ ಹಸ್ತಾಯತದಿಂ ಲಸದ್ಭ್ರಮರಿಯಿಂ ಮೇಳಾಪದೊಳ್ಪಿಂ ತ್ರಿಭಂ |
ಗದ ಸೊಂಪಿಂ ಸಲೆ ರಾಗಮಂಜರಿ ಕರಂ ಮೇಳೈಸಿದಳ್ ಲಾಸ್ಯಮಂ || ೧೬೪

ಅಂತು ಭರತಮಾರ್ಗನಿರೂಪಣಕ್ರಮದಿಂ ಲಾಸ್ಯಮನೆಸಗುವಾಗಳ್

ನೆರವಿಯೊಳೆನ್ನನದಾರ್ಗಂ |
ಪರಿಕಿಸಲರಿದೆಂಬ ತೆಱದಿನಾಲಾಸ್ಯಮನ ||
ಚ್ಚರಿಯಿಂದೆನೆ ನೋೞ್ಪಾಗಳ್ |
ನಿರವಧಿಯಿಂದೆನ್ನ ಮೊಗಮನೀಕ್ಷಿಸುತಿರ್ದಳ್ || ೧೬೫

ಮನದೊಲವಿಂದೆನ್ನಂ ನೋ |
ಡಿ ನಸುನಗಲ್ಕಿರದದರ್ಕೆ ನಾಂ ಸೋಲ್ತಂ ||
ಗನೆಗೊಳಗಾದೆಂ ಕಾಂತಾ |
ಜನಚೇಷ್ಟೆಗಳೇನನೆಸಗವೆಲೆ ನೃಪತಿಲಕಾ || ೧೬೬

ಕೂಣಿತದೃಷ್ಟಿಯೊಳೆನ್ನಂ |
ಜಾಣೆಸೆನಂತಾಕೆ ನೋಡಲಾಗಳ್ ಸುಮನೋ ||
ಬಾಣಂ ತನ್ನೈದಂಬಂ |
ಮಾಣದೆ ಮುಳಿದೆನ್ನ ಮೇಲೆ ಕಡುಪಿಂ ಕಱೆದಂ || ೧೬೭

ಅಂತಾನನಳ್ಕುಳಗಾಗೆ,

ಮದನವಿಷಾಹಿ ಪುಷ್ಪಚಯದಂಷ್ಟ್ರಚಯಂಗಳನಾಗಳಟ್ಟೆ ಕ |
ಚ್ಚಿರ್ದೊಡುಸಿರುರ್ಚಿ ಮೆಯ್ನವಿರಡರ್ದ ಕರಂ ತನು ಕಾಸುದ್ದ ಕಂದಿ ಚಿ ||
ತ್ತದ ನೆಲೆದಪ್ಪಿ ಮಾತಿಸಿತುದೋಱದೆ ಸೈವೆಱಗಾಗಿ ಮುಂದ ಗಾ |
ಣದೆ ಮಱೆದಾನಿರಲ್ ಮನೆಗೆ ಮೆಲ್ಲನೆ ತಂದನುಜೀವಿಯೋವಿದಂ || ೧೬೮

ಅಂತು ಧನಮಿತ್ರನೆಂತಾನುಮೆನ್ನಂ ಮನೆಗೆ ಕೊಂಡು ಬಂದು

ಕುಳಿರ್ವ* ತುಷಾರದಿಂ ಮೃದುಮೃಣಾಳದಿನುತ್ಪಳತಾಳವೃಂತದಿಂ ।
ಮಳಯಜಪಂಕದಿಂ ತಳಿರ ಪಾಸಿಕೆಯಿಂ ಮದನಾಗ್ನಿದರ್ಪಮಂ ॥
ನಿಲಿಸಿ ಮಗುಳ್ದು ನೋಡಿ ಧನಮಿತ್ರನೆಲೇ ಅಪಹಾರವರ್ಮ ಸಂ ।
ಚಳಮನನಪ್ಪ ಕಾರಣಮನೋವದೆ ಪೇಳೆನಗೆಂದನಕ್ಕಱಿಂ ॥ ೧೬೯

ಎನಲೊಡಂ,

ಇಂಗಿತಮನಱಿದುಮಱಿಯದ ।
ಭಂಗಿಯನನುಕರಿಸಲೇಕೆ ಕೆಳೆಯನೆ ಸಾಕಿ ॥
ನ್ನಂಗಜತಾಪಮನಾರ್ಪಿಂ ।
ಪಿಂಗಿಸಿ ಬಾಳ್ವಂತುಪಾಯಮಿನ್ನೆಂತೆಂದೆಂ ॥ ೧೭೦

ಅಂತು ರಾಗಮಂಜರಿಯಿಂದೆನಗಾದವಸ್ಥೆಯಂ ಪೇಳಲ್ ಧನಮಿತ್ರನಿಂತೆಂದಂ:—

ಅವಳೊರ್ವಂಗಲ್ಲದೆ ಧೂ ।
ರ್ತವಿಟರ್ ಪಲಬರ್ಗೆ ತನ್ನ ಜವ್ವನಮಂ ಬೀ ॥
ಱುವಳಲ್ತು ಗಣಿಕೆಯರ ಧ ।
ರ್ಮವನೊಲ್ಲವಳಲ್ಲಿ ನಿಸ್ಪೃಹಂ ಕೇಳ್ದಱಿವೆಂ ॥ ೧೭೧

ಅಂತವಳ್ ವೇಶ್ಯಾಧರ್ಮಮಂ ಬಿಟ್ಟು ಕುಲಸ್ತ್ರೀಪ್ರತಿಜ್ಞೆಯಂ ಮಾಡಲ್ ಮಾಧವಸೇನೆಯುಂ ಕಾಮಮಂಜರಿಯುಂ ಚಂಪಾಪತಿಯೋಲಗಕ್ಕೆ ರಾಗಮಂಜರಿಯನೊಡಗೊಂಡು ಪೋಗಿ

ಇವಳೆಮ್ಮ ಗಣಿಕೆಯರ ಧ ।
ರ್ಮವನೊಲ್ಲದೆ ಸಾಧ್ವಿಯಾಗಿ ಜೀವಿಸಿದಪೆನೆಂ ॥
ದು ವಿಟರ್ಕಳಂ ಕರಂ ನೋ ।
ಡುವ ಬಗೆಯಂ ಮಾಣ್ದಳೆಮಗೆ ಜೀವನಮೆಂತೋ ॥ ೧೭೨

ಮದದಿಂ ಸ್ವಧರ್ಮಮಂ ಮಿ ।
ಱಿದರಂ ದಂಡಿಸುವುದುಚಿತಮುರ್ವೀಶಂಗೆಂ ॥
ಬುದನಱಿದು ದೇವ ನೀನೀ ।
ಸುದತಿಯನೆಮ್ಮಂತಿರಲ್ಕೆ ಪೇಳ್ ದಯೆಯಿಂದಂ ॥ ೧೭೩

ಎಂದು ಬಿನ್ನಪಂಗೆಯ್ಯಲರಸಂ ರಾಗಮಂಜರಿಯಂ ರಕ್ಷಿಂಕಿಸಿ ನಿನ್ನ ವೇಶ್ಯಾಧರ್ಮದೊಳಿರೆಂಬುದುಮವಳಿಂತೆಂದಳ್:—

ಲಲಿತಶರೀರವನೊಂದಂ ।
ಪಲಬರ್ಗಂ ಮಾಱುವಂದವೆಂತೆಂಬೊಲವಿಂ ॥
ಕುಲಪಾಲಿಕಾಪ್ರಕಾರದಿ ।
ನಿಳೇಶ ಜೀವಿಸುವೆನಲ್ಲದಿರ್ದೊಡೆ ತೀರ್ವೆಂ ॥ ೧೭೪

ಎಂದವಳ್ ಗಾಢಪ್ರತಿಜ್ಞೆಯಂ ಮಾಡಲರಸನೆಂತಾನುಂ ತಿಳಿಪಲಱಿಯದವಳ್ ತನ್ನಿಚ್ಛೆಯೊಳಿರ್ಕೆಂದವರಂ ಕಳಿಪಲ್ ಮಗುೞ್ದು ಮಾಧವಸೇನೆಯಿಂತೆಂದಳ್:—

ದೇವರ್ ಚಿತ್ತವಿಪ್ರದಿವ ।
ಳ್ಗಾವಂ ಪತಿಯಾಗಿ ಬರ್ಪನವನೊಲವಿಂದೆ ॥
ನ್ನಾವಾಸದಿಂ ಮಗುೞ್ದು ।
ನ್ನಾವೆತೆಯಂ ಪೊರ್ಕ್ಕುಡವನತೀವದೊಲ್ರಹಂ ॥ ೧೭೫

ಎಂದವರರಸನಿಂ ಕರುಣಂಬಡೆದು ಪೋದುದಂ ಕೇಳ್ದಱಿವೆನೆಂದು ಧನಮಿತ್ರಂ ಪೇೞ್ದು ಸಮಯದೊಳ್

ಜಳಜಂ ಮುಕುಳವನೆಯ್ದು ।
ಲ್ಕುಳಟಾಂಗನೆಯರ್ ಮನೋನುರಾಗಮನೆಯ್ದಲ್ ॥
ತಳವೆಳಗಾಗಲ್ ಕೋಕಂ ।
ನಲವಿಂದಪರಾಬ್ಧಿಗೆಯ್ದಿದಂ ದಿನನಾಥಂ ॥ ೧೭೬

ಅಂತು ಸೂರ್ಯಾಸ್ತಮಯಮಾಗಲೊಡಂ ಕಟ್ಟಲೆಯೊಳಾಂ ಕಾಮಮಂಜರಿಯ ಮನೆಗೆಯ್ದಿ

ವನಜಮುಖಿ ಕಾಮಮಂಜರಿ ।
ಧನಮಿತ್ರನ ಮನೆಯ ಚರ್ಮಭಸ್ತ್ರಿಕೆಯಂ ತಂ ॥
ದನುನಯದೊಳಿತ್ತಪೆಂ ನಿ ।
ನ್ನನ ಜೆಯನೆನಗೀವುದೆಂದೆನತ್ಯುತ್ಸವದಿಂ ॥ ೧೭೭

ಎಂಬುದುಂ;

ನವನಿಧಿ ದೊರೆಕಲ್ಕೆಡೆನೂಂ ।
ಕುವರರೊಳರೆ ನೆಗಟ್ದಿ ಚರ್ಮಭಸ್ತ್ರಿಕೆಯುಂ ಕೂ ॥
ಟ್ಟವಳಂ ಕುಲವಧುವೆನಲಿನು ।
ಭವಿಸುವುದೆಲ್ಲರ್ಗೆ ಸಮ್ಮತಂ ಪೋಗೆಂದಳ್ ॥ ೧೭೮

ಎಂದೊಡಾರಾತ್ರಿಯೊಳಾಂ ಚರ್ಮಭಸ್ತ್ರಿಕೆಯ ಪೂರ್ವವಿಧಾನಮಂ ಪೇಳ್ದು ಕುಡಲವಳಾರಾಗಮಂಜರಿಯುಂ ಕುಲಸ್ತ್ರೀರೂಪದಿಂ ಕೈವರ್ತಿಸಲ್ ಬೞಿಕ್ಕಾಂ ಧನಮಿತ್ರನಂ ಕರೆದಿಂತೆಂದೆಂ:—

ನಿನ್ನಿರುಳ್ ಚರ್ಮರತ್ನವ ।
ನೆನ್ನರದೆಂದಱಿಯೆನಾರೊ ಕಳ್ದರದಕಾರ್ ॥
ನಿನ್ನೇವೆನೆಂದು ಮೊರೆಯಿಡು ।
ನಿನ್ನಾಪಿರ್ದುಸಿರ್ವುದರ್ಥಪತಿಯು ಕೞಂಕಂ ॥ ೧೭೯

ಎನಲಾತನಾಮುಱಿದೆವಸಮರಸನೋಲಗಕ್ಕೆ ಪೋಗಿ

ಏಗೆಯ್ವೆನರಸ ಎನ್ನನು ।
ರಾಗಂ ಪೋದತ್ತು ಚರ್ಮರತ್ನದ ಸಿರಿಯುಂ ॥
ನೀಗಿದೆನೆನ್ನಸುವಂ ನಿನ ।
ಗೀಗೊಪ್ಪಿಸುವೆಂ ವಿಚಾರಿಪುದು ದಯೆಯಿಂದಂ ॥ ೧೮೦

ಎಂದೊಡರಸನಾತಂಗೆ ಕರುಣಿಸಿ ನಿನ್ನ ಚರ್ಮರತ್ನಂ ಪೋದ ಪೊಲಂಬಂ ಬಲ್ಲೊಡೆ ಪೇೞೆಂಬುದುಂ

ಪಲಕಾಲಮರ್ಥಪತಿಯುಂ ।
ನಲವಿಂದೋಲಗಿಸುವಂ ವಿಮರ್ದಕನೆಂಬಂ ॥
ಮುಳಿದಾತನೆಲ್ಲರಱಿಯಲ್ ।
ಪೞಿಯಿಲ್ಲದೆ ನಿನ್ನೆ ಬೈದನೆನ್ನನಿಳೇಶಾ ॥ ೧೮೧

ಅದಲ್ಲದೆಯುಂ,

ಎಲವೆಲವೊ ಚರ್ಮರತ್ನದ ।
ಬಲವಂ ತಗ್ಗಿಸುವೆನೊಂದಿರುಳ್ ನಿದ್ರೆಯು ಹಂ ॥
ಬಲನೊಲ್ಲದಿದೊರ್ಡೆನುತ ।
ಗ್ಗಲಿಸಿ ದುರುಕ್ತಿಯನುಸಿರ್ದನೆಲ್ಲರ್ ಕೇಳೆಲ್ ॥ ೧೮೨

ಎಂದು ಪೇೞಲರಸನಾನದಂ ವಿಚಾರಿಸಿ ಕೊಟ್ಟಪೆನೆಂದು ಧನಮಿತ್ರನಂ ಕ
ೞಿಪಿಯರ್ಥಪತಿಯುಂ ಕರಸಿ

ನಿನಗೆ ವಿಮರ್ದಕನೆಂಬೊ ।
ರ್ಬನುಂಟೆ ಪೇೞೆಂದೊಡರ್ಥಪತಿಯೆನ್ನಯ ನ ॥
ಚ್ಚಿನ ವಿಶ್ವಾಸಿಯವಂ ಮ ।
ತ್ತನುಪಮನುಂಟೆಂದೊಡಾತನಂ ಕರಸೆಂದಂ ॥ ೧೪೩

ಎಂದೊಡೆ ಮಹಾಪ್ರಸಾದಮೆಂದರ್ಥಪತಿ ವಿಮರ್ದಕನಂ ನೋಡಲೆಂದು

ಸೂಳೆಯರ ಮನೆಗಳೊಳ್ ಜೂ ।
ಜಾಳಿಗಳಾಲಯದೊಳಂಗಡಿಯೊಳರಸಿ ಬೞಿ ॥
ಕ್ಕಾಳಂ ಕಾಣದೆ ತದ್ಭೂ ।
ಪಾಳನ ಮುಂದಣ್ಗೆ ಬಂದು ಬೆಱಗಾಗಿರ್ದಂ ॥ ೧೪೪

ತಾನವನನೆಲ್ಲಿ ಕಂಡಪ ।
ನಾನೊಲವಿಂ ನಿಮ್ಮ ಕಾಲ್ಗಪನೞಿಪಿ ಬೞಿಕ್ಕಂ ॥
ನೀನೀಗಳ್ ಪೋಗೆಂದು ।
ಜ್ಜೈನಿಗೆ ಕಳಿಪಿದೆನವಂ ತೆರಳ್ದಂ ಬೇಗಂ ॥ ೧೪೫

ಅಂತಾವಿಮರ್ದಕನಂ ಧನಮಿತ್ರನೊಳ್ ತೋಟಿಯಾಡಿದಿರುಳ್ ನಿಮ್ಮಡಿ
ಯನಱಿಸಲ್ಕಳಿಪೆ ಅದುಕಾರಣಮರ್ಥಪತಿಯವನಂ ಕಾಣದೆ ಮಗುಳ್ದರಸ
ನೆಡೆಗೆ ಬಂದು ಕರಂಗಳಂ ಮುಗಿದು ನಿಲ್ವುದುಂ; ಅರಸನಿಂತೆಂದಂ:—

ಮರುಳ ವಿಮರ್ದಕನಿಂ ಚ ।
ರ್ಮರತ್ನಮಂ ಕಳಿಸಿಯವನನೋಡಿಸಿ ತಾನೆ ॥
ಲ್ಲರ ಮುಂದೆ ಸಭ್ಯನಾಗಿ ।
ರ್ಪಿರನಂ ನೋಡೆಂದು ಕೋಪಿಸಿದನುರ್ವೀಶಂ ॥ ೧೪೬

ಅಂತು ಕೋಪಿಸುವುದುಂ;

ಮಱೆದಿರ್ದರ ಮಸ್ತಕಮಂ ।
ಬೞಿಸಿಡಿಲಾರ್ದೆಱಗಿದಂತೆ ತನ್ನಯ ಭಯದಿಂ ॥
ಬೆಱಗಾದನರ್ಥಪತಿ ತಾ ।
ನಱಿಯದನರ್ಥಕ್ಕೆ ಸಂದೆಯಂ ಪುಟ್ಟಲೊಡಂ ॥ ೧೪೭

ಅಂತು ಬೆಱಗಾಗಲೊಡಮದುಂ ಸಂದೇಹಮಾಗಿಯರಸಂ ಕಳ್ಳನಂ ತರಿಸಿ ಕೊಡೆಂದೊಡರ್ಥಪತಿ-ನಾಲ್ಕೆರಡುದಿನದೊಳ್ ತರಿಸಿ ಕೊಟ್ಟಪೆನೆಂಬುದುಂ;

ಅನ್ನೆಗಮಿಾತನನುಱೆ ಬ ।
ಲ್ಪಿನ್ನಿಗಡನಿರೋಧದಲ್ಲಿ ಕುಳ್ಳಿರಿಸಿ ಬೞಿ ॥
ಕ್ಕನ್ನೋಲ್ಪಿಮಿವನ ಕಲ್ಲೆರ್ದೆ ।
ಯನ್ನಿಷ್ಠುರಶಸ್ತ್ರಹತಿಯಿನೆಂದನಿಳೇಶಂ ॥ ೧೮೮

ಎಂದು ಅರ್ಥಪತಿಯಂ ನಿಗಡನಿರೋಧಮಂ ಮಾಡಿಸಿದಂ. ಇತ್ತಲ್ ಮಾಧವಸೇನೆ ಕಾಮಮಂಜರಿಯುಂ ಚರ್ಮಭಸ್ತ್ರಿಕೆಯ ಫಲಮಂ ಪಡೆಯಲೆಂದು

ಅಪಲಾಪಿಸಿ ಕೊಂಡರ್ಥವ ।
ನುಪಚರಿಸಿ ವಿರೂಪಕಂಗೆ ಕೊಟ್ಟು ಬೞಿಕ್ಕೆ ॥
ರ್ದುಪನಿಧಿಯನೆಲ್ಲಮಂ ದೈ ।
ನ್ಯಪಾತ್ರದೊಳ್ ಕೊಟ್ಟರೆಲ್ಲರಱಿವಂತಾಗಳ್ ॥ ೧೮೯

ಆದನಾಂ ಕಂಡಿನ್ನೀಚರ್ಮಭಸ್ತ್ರಿಕೆಯಂ ಪರೀಕ್ಷಿಸುವರೆಂದಱಿದು ಧನಮಿತ್ರನಂ ಕರೆದು ಚರ್ಮಭಸ್ತ್ರಿಕೆಯ ವಿಧಾನಂ ಕಾಮಮಂಜರಿಯ ಮನೆಯೊಳಗಿರ್ದಪ್ಪುದೆಂದರಸಂಗೆ ಪೇೞೆಂಬುದುಮಾತಂ ಪೋಗಿ

ಕೇಳರಸ ಕಾಮಮಂಜರಿ ।
ಯಾಲಯದೊಳ್ ಚರ್ಮರತ್ನಮಿರ್ಪುದೊಲಗಱಿಂ ॥
ಸ್ಥೂಲವಿದಾನಂ ನಡೆದಪು ।
ದಾಲಿಸುವಂತೊರ್ಬ ದೂತನಂ ಕಳಪೆಂದಂ ॥ ೧೯೦

ಕಾಣಿಗೆ ಕಾಣಿಯನರ್ಚಿಪ ।
ಕೇಣಂ ಮಾಣ್ದೀಗಳುಳ್ಳ ತನ್ನರ್ಥಮನು ।
ಗ್ರಾಣಿಸದಿತ್ತಪಳೀಬಿ ।
ನ್ನಾಣಮುಮಾಚರ್ಮಭಸ್ತ್ರಿಕೆಯ ಬಲಮಲ್ತೇ ॥ ೧೯೧

ಅಂತೆಯಂತರ್ಧನಬಹಿರ್ಧನಮಂ ಮುಸಲೋಲೂಖಸಹಿತಂ ವ್ಯಯಂಗೆಯ್ದು ಚರ್ಮಭಸ್ತ್ರಿಕೆಯಿಂದುಕ್ಕುವ ಬಹುಧನಾಪೇಕ್ಷೆಯಿಂದೆಂದರಸಂಗೆ ಪೇೞ್ವುದುಮಾತನೊರ್ಬದೂತನಂ ಕಳಪೆಲನಂ ಪೋಗಿ ಬಂದು

ಅತಿವಿಸ್ಮಯದಾನಮನ ।
ಪ್ರತಿಯಾಗಲ್ ದೇವ ಕಾಮಮಂಜರಿ ಮೊಟ್ಟಿ ॥
ನ್ನತಿಯಂ ಕಾಣಿಯೊಳರ್ಥಂ ।
ಸ್ಥಿತಮಾಗಿರಲಱಿಯದಿನ್ನದೇನಂ ಪೇಳ್ವೆಂ ॥ ೧೯೨

ಎಂದಾದೂತಂ ಬಂದು ಪೇಳ್ದೊಡೆ ಅದು ಚರ್ಮಭಸ್ತ್ರಕಾವಿಧಾನಂ ತಪ್ಪದೆಂದು

ಭರದಿಂ ಮಾಧವಸೇನೆಯು ।
ನರವರಿಸದೆ ಕಾಮಮಂಜರಿಯನೀಕ್ಷಣದಿ ॥
ಬರ್ಗರುಮನೊಡಗೊಂಡು ಬರಲೆಂ ।
ದರಸಂ ಕಳಿಪಿದನದೊರ್ವ ಭೀಕರನುಃನಂ ॥ ೧೯೩

ಅಂತಾದೂತಂ ಬಂದು ತವಕದಿಂ ಕರೆವುದಂ ಕಂಡಾಮಾಧವಸೇನೆಗಿಂ ತೆಂದಂ:—

ಇದು ಚರ್ಮಭಸ್ತ್ರಕಾಸಂ ।
ಪದಮಂ ತಿಳಿಯಲ್ಕೆ ಬಂದ ಪರಿ ನೀಮತಿಗೂ ॥
ಥವ ಕಾರ್ಯಮಂ ಜಗತ್ಪ್ರಕ ।
ಟದಿನೆಸಗಿದಿರೆಂತು ಕಳೆವೆವೀದುರ್ಘಟಮಂ ॥ ೧೯೪

ಎಂದಾನರರೊಳ್ ಸಮಾಲೋಚನಂಗೆಯ್ಯಲವರ್ ದೀನವದನರಾಗಿರಲದಂ ಕಂಡಾಂ ಮತ್ತಮಿಂತೆಂದೆಂ:—

ಎನ್ನಸುಮಂ ನಿಮ್ಮಸುಗಳ ।
ನುನ್ನತಿಯಿಂ ಕಾಪ್ರೊಡಾನುಪಾಯಮನೊಂದಂ ॥
ಚೆನ್ನೆಸೆಯೆ ಪೇಳ್ವೆನೆನಲವ ।
ರೆನ್ನಂಘ್ರಿದ್ವಯದೊಳೆಱಗಿ ಬರ್ದು*ಕಿಪುದೆಂದರ್ ॥ ೧೯೫

ಎಂದೊಡಾನವರ್ಗಿಂತೆಂದೆಂ:—

ಆದಿವಿಡಿದರ್ಥಪತಿಗಪ ।
ವಾದಂ ಪೊರ್ದಿರ್ಪುದದಱಿನವನಿತ್ತಂ ಚೆ ॥
ಲ್ವಾದಜಿನರತ್ನಮಂ ಕೇಳ್ ।
ಮೇದಿನಿಪತಿಯೆಂದು ಪೇಳ್ವುದಿದು ಸತ್ಕಾರ್ಯಂ ॥ ೧೯೬

ಎಂದಾಂ ಪೇೞೆ ಮಾಧವಸೇನೆಯುಂತೆಗೆಯ್ವೆನೆಂದು

ನರೆಗೂದಲ್ಗಿಕ್ಕಿ ನುಣ್ಪಂ ಮುಡಿಯನಳವಡಲ್ಕಿಕ್ಕಿ ಬತ್ತಿರ್ದ ವ
ಕ್ತ್ರಂ । ಬುರುಹಂ ವಿಂಬಾಗಲಿರ್ಪ ತಿೞಿದು ತೊಡರ್ವ ಲಂಬಸ್ತ
ನದ್ವಂದ್ವಮುಂ ಮೇ ॥ ಲ್ವರೆ ಬಲ್ಪಿಂ ಸೋಂಕಿಲಿಂದಂ ಬಿಗಿದು ಮುಸುಕನಿ
ಟ್ಟಿರ್ದಿದಳ್ ವೃದ್ಧೆ ಚೇತೋ । ಭರದಿಂ ತದ್ಭೂಪನಾಸ್ಥಾನಮುನವಿರಳಹ
ಸ್ತಾಬ್ಜಸಂಕೋಚೆಯಾಗಳ್ ॥ ೧೯೭

ಅಂತು ಮಾಧವಸೇನೆಯಾಸ್ಥಾನಮುಂ ಪೊಕ್ಕಾಗಸಂಗೆ ಪೊಡೆಮಟ್ಟು ನಿ
ಲ್ವುದುಮವಳಂ ಕಂಡರಸನಿಂತೆಂದಂ:—

ಏನೆಲೆಗೆ ಚರ್ಮರತ್ನವಿ ।
ಧಾನಂ ನಿಜಗೇಹದಲ್ಲಿ ನಡೆದಪುವದನೀ ॥
ಸ್ಥಾನದೊಳಿತ್ತವನಾವನ ।
ದೇನೆಂಬುದನುಸಿರ್ವುದೀವುದೀಗಳ್ ಬೇಗಂ ॥ ೧೯೮

ಎಂಬುದುಂ; ಮಾಧವಸೇನೆಯಿಂತೆಂದಳ್:—

ಕ್ಷಿತಿಪತಿ ಬಂದಿಕಾಱನಧಮಂ ಕಿತವಂ ಮನೆಗಳ್ಳನ ನ್ಯಾದೋ ॥
ದ್ಧತವಿಟನಧ್ವಚೋರನತಿಯೌವನನಮತ್ತನನೀತನರ್ಥಗ ॥
ರ್ವಿತನೆನಿಸಿಪ್ಪ ದುರ್ವ್ಯಸನಿಯಿಲ್ಲದೆ ಪಣ್ಯವಧೂಜನಕ್ಕೆ ಜೇ ।
ವಿತಧನದೇಹವೆಂಬಿನಿತನೀವನೆ ಕಾಮುಕವೃತ್ತಿಯೊಳ್ಗೆಯೊಳ್ ॥ ೧೯೯

ಎನಲಿವರೊಳ್ ನಿನಗಿತ್ತವನಾವಂ ಪೇೞೆಂಬುದುಂ;

ಚಿತ್ತವಿಸಿತ್ತಲ್ ಧರಣೀ ।
ಶೋತ್ತಮ ಮತ್ಸುತೆಗೆ ಕಾಮುವಂಜರಿಗೊಲವಂ ॥
ಪೆತ್ತ ಜಿನರತ್ನಮುಂ ಕೂ ।
ರ್ತಿತ್ತನ್ನಲಿದರ್ಥಪತಿಯಿದಲ್ತೆ ವಿಧಾನಂ ॥ ೨೦೦

ಎಂದು ಮಾಧವಸೇನೆ ಪೇೞ್ವುದುಮಾಗಳ್ ಕಾರಾಗೃಹದೊಳಿರ್ದರ್ಥಪತಿ
ಯನರಸಂ ಕರಸಿ,

ಎಲೆ ಕಿತವ ಚರ್ಮರತ್ನವ ।
ನೊಲವಿಂದಂ ಕಾಮಮಂಜರಿಗೆ ಕೊಟ್ಟೆನ್ನೊಳ್ ॥

ಹೊಲಬಂ ಪೇೞದೆ ನೀಂ ಸಂ ।
ಕಲೆಯೊಳ್ ಬೀೞಲ್ಕೆ ಬಿಡುವೆನೆಲೆ ದುರ್ವೃತ್ತಾ ॥ ೨೦೧

ಎಂದರಸಂ ಕೋಪಿಸಿ ಸರ್ವಕವರ್ತಿಯುಂ ಮಾಡಿಮೆಂದು ಸಮೀಪಸ್ಥರ್ಗೆ ಪೇೞ್ವುದುಂ

ನವರತ್ನಮನವನುಳ್ಳ ।
ರ್ಥವನಾಭರಣಂಗಳಂ ಲಸದ್ವಾಹನಮುಂ ॥
ವಿವಿಧಾಂಬರಮುಂ ಪಶುದಾ ।
ಸಿವರ್ಗಮುಂ ಕವ*ರ್ದು ತಂದರರಮನೆಗಾಗಳ್ ॥ ೨೦೨

ಅದಲ್ಲದೆಯುಂ

ಒರಳೊನಕೆಮಡಕೆಯೊಳಗವ ।
ಧರಿಸದೆ ಸಲೆ ಸರ್ವವಸ್ತುವಂ ಕವ*ರ್ದವನಂ ॥
ನರಕಿಯನಂತಕನಿಲಯದ ।
ನೆರೆಮನೆಗಟ್ಟೆಂದನರ್ಥಪತಿಯನಿಳೇಶಂ ॥ ೨೦೩

ಅಂತು ಸರ್ವಸ್ವಾಪಹಾರಂಗೆಯ್ದವನನಂತಕಮಂದಿರಕ್ಕೆ ಕಳಿಪುವುದಂ ಧನಮಿತ್ರಂ ಕಂಡು

ತನಗುಪಕಾರಂಗೆಯ್ವಂ ।
ಗೆನಸುಂ ಲೇಸಂ ನೆಗೞ್ವುದು ಕರ್ತವ್ಯಂ ॥
ತನಗಪಕಾರಂಗೆಯ್ದಂ ।
ಗನವರತಂ ಲೇಸನೆಸಗುವುದು ಸನ್ಮಾರ್ಗಂ ॥ ೨೦೪

ಎಂಬುದಂ ತಿಳಿದು ಧನಮಿತ್ರನರಸನ ಕೂಡೆಯಿಂತೆಂದಂ:—

ಧಾರಿಣಿಯೊಳರಸುಗಳ್ ವ್ಯವ ।
ಹಾರಿಗಳಂ ತೀರ್ಚಲಾಗದೇಗೆಯ್ದೊಡಮುಂ ॥
ಬೀರಾಜನೀತಿಗಾದೆಯು ।
ಮೀಱುವವರುಮುಂಟೆ ಪೇೞ್ ಕೃಪಾಳುನೃಪಾಲಾ ॥ ೨೦೫

ಎಂದು ಧನಮಿತ್ರಂ ಪೇೞ್ದೊಡರ್ಥಪತಿಯನರಸಂ ಕಾಯ್ದಿಂತೆಂದಂ—

ನಲವಿಂ ಮಾಧವಸೇನೆಯು ।
ನಿಲಯದೊಳಿರ್ದ ಜಿನರತ್ನವಂ ಧನಮಿತ್ರಂ ॥
ಗೊಲವಿಂ ತರಿಸಿತ್ತಂ ನೃಪ ।
ತಿಲಕಂ ಲಕ್ಷ್ಮೀನಿವಾಸನಿಜಹೃತ್ಪದ್ಮಂ ॥ ೨೦೬

ಅಂತಾಚರ್ಮಭಸ್ತ್ರಿಕೆಯುಂ ಧನಮಿತ್ರಂಗೆ ತರಿಸಿ ಕುಡಲಾಧನಮಿತ್ರಂ ಮಾಧವಸೇನೆಯ ದೀನಭಾವಮಂ ಕಂಡು

ಮಱೆಯುದಕದ ಬರವಿಂಗಂ ।
ಕೊಳದುದಕಮನೆಯ್ದೆ ತುಱುಕಿದೆಗ್ಗನ ತೆಱನೀ ॥
ಗಳುವಿನಾಮಾಧವಸೇನೆಗೆ ।
ನೆಲೆಯಾಯ್ತೆಂದವನಿಪತಿಗೆ ಮತ್ತಿಂತೆಂದಂ ॥ ೨೦೭

ಇನಿತಜಿನರತ್ನವಂ ನ ।
ಚ್ಚಿ ನಿಜಾಲಯದರ್ಥಮೆಲ್ಲಮಂ ಬೀಯಂಗೆ ॥
ಯ್ದೆನಸುಂ ದರಿದ್ರೆಯಾದಳ್ ।
ಜನಪತಿಯಾಯರ್ಥಪತಿಯ ಧನದೊಳ್ ಕಿಱಿದಂ ॥ ೨೦೮

ಎಂದು ಕಿಱಿದರ್ಥಮಂ ಕುಡಿಸಿ ಕಳಿಪಿಸಿ ಧನಮಿತ್ರಂ ಕೃತಾರ್ಥತೆಯಿಂ ದರಸನಿಂ ತಾನುಂ ಕಳಿಪಿಸಿಕೊಂಡು ನಿಜಾಲಯಕ್ಕೆ ಪೋಗಿ ಕತಿಪಯದಿನಂಗಳ್ಗೆ

ಜನವಱಿಯಲರ್ಥಪತಿ ನಿ ।
ರ್ಧನನಾದುದನಱಿದು ಮೆಱೆವ ಕುಲಪಾಲಕಿಯುಂ ॥
ವಿನುತಿಯ ಕುಬೇರದತ್ತಂ ।
ಧನಮಿತ್ರಂಗಿತ್ತನೊಳ್ಮುಹೂರ್ತದೊಳಾಗಳ್ ॥ ೨೦೯

ಅಂತು ಚಿಂತಿಸಿದುವೆಲ್ಲಂ ಸಂತತವಾಗಲಾಂ ಬೞಿಯುಂ,

ಸಕಲೋಪಾಯಂಗಳಿಂ ತತ್ಪುರದ ಧನಿಕರುಳ್ಳರ್ಥಮಂ ಕಳ್ದು ಭೋಗಾ । ಧಿಕದಿಂ ತ್ಯಾಗಪ್ರದಾನೋನ್ನತಿಯಿನನುಪಮಾತ್ಮಪ್ರಿಯಾಸಂಗದಿಂ ಕಾ ॥ ತುಕಮಂ ತಾಳ್ದಿರ್ಪನಂ ಭೋಂಕನೆ ಮನದೊಲವಿಂದೊರ್ಮೆ ಕೇಳ್ ಭೂಪ ಮತ್ಪ್ರಾ । ಖ್ಯಕೆ ಭಂಗಂ ಪುದಿರ್ತಾರ್ಪಂ ವಿಧಿಲಿಖಿತಮನುಲ್ಲಂಘಿಸಲ್ಬಲ್ಲನಾವಂ ॥ ೨೧೦

ಎಂಬುದುಮದೇನೆಂದರಸಂ ಕೇಳ್,

ಮನದೊಳ್ ಕೂರ್ಪಾರ್ಸ್ಯದೊಳ್ ಮ್ಲಾನತೆ ಬಗೆಯೊಳ್ ರೋಷಂ ಲಸ
ದ್ವಾಕ್ಯದೊಳ್ ಭ । ರ್ತ್ಸನೆ ಪಂಚದ್ವೃಷ್ಟಿವಿಕ್ಷೇಪಣದೊಳನುನಯಂ
ಪ್ರಬಿರ್ನೊಪ್ ಜಬುರ್ ದೂತೀ ‖ ಜನದೊಳ್ ಚಿತ್ತಾನುತಾಪಪ್ರಿಯರತಿ
ಮುಖದೊಳ್ ಕೋಪನೊಪ್ಪಲ್ಕೆ ಪೆಂಪಾ । ದ ನವೀನಪ್ರಾರ್ಥಿಯಿಂದಂ ಪ್ರ
ಣಯಕಲಹಮಾಯ್ತೆನ್ನೊಳುಬ್ಭ್ರಕ್ಷಿಗಾಗಳ್ ‖ ೨೧೧

ಆ ಪ್ರಣಯಕಲಹದ ಪ್ರಗಿಲೊಳ್

ಶಿಶಿರದಿನಂಬುಜಕ್ಕೆ ದುಗುಡಂ ಘನಮೇಘದಿನಾಗಸಕ್ಕೆ ಕ।
ರ್ಕಶಸಿಯಿನದ್ರಿಗಳ್ಗೆ ಭಯಮುಘ್ರವಿಕ್ರೋಶದಿನುತ್ತಮರ್ಗೆ ದು ‖
ಯರ್ಶಮದಲೇಪದಿಂ ಬುಧಗೆ ದುರ್ಗತಿಯುಷ್ಣಪ್ರಾಲೆನ್ನೊಳಾಮದಾ ।
ಶಶಿಮುಖಿಯಿಂದಮೊಂದನಗುಣಂ ವಿಧಿಯಿಟ್ಟಯಿನುರ್ವರಾಧಿಪಾ ‖ ೨೧೨

ಅದೆಂತೆನೆ—

ಸಕಳಸುಗಂಧಸಾರದೊದವಿಂ ಪೊರೆಮತ್ತಮಗಂಧದಿಂದೆ ಕಾ ।
ತುಕವೆನಲೊಪ್ಪವೆತ್ತ ತಿಳಿಗಳ್ಗಳನೊಪ್ಪವ ಹೇಮಪಾತ್ರದೊಳ್ ‖
ಸುಕರವೆನಲ್ಕೆ ತುಂಬಿ ಸಣಿಮುಚ್ಚರಸುತ್ಸವದಿಂದೆ ಪೀದರ್ಗಳು ।
ತ್ಸುಕಮೆನೆ ರಾಗಮಂಜರಿಮದೊಂದು ದಿನಂ ಪೆಸರ್ವೆತ್ತ ಜೊನ್ನದೊಳ್ ‖

ಅಲ್ಲಿ ಕೆಲಂಬರ್

ಕಡುಪ್ರಬೀಗಳ್ಳನೊಂದು ತಿಳಿವಟ್ಟಲನಿಟ್ಟೆಡೆಯಲ್ಕೆ ಮೂಱು ಸೂೞ್ ।
ಮಿಡಿಮಿಡಿವರ್ಧವಂ ಕುಡಿದು ಚಪ್ಪುಳಿದಿಕ್ಕಿದ ಸಣ್ಣಮಿಸಾಂಗಳಂ ‖
ಮಿಡಿಕೆಗಳಂ ಕುಡುಂಕಿ ಮಗುಳ್ದೀಂಟಿಪೆ ಘಟ್ಟನೆ ತೇಗಿ ಬಾಚ್ಗೆಯೆ ।
ನ್ನೊಡೆಯನೆನುತ್ತದೇಂ ವೆಱಿವರೋ ಸಖಿಯರ್ಮಧುಪಾನಗೋಷ್ಠಿಯೊಳ್

ಪ್ರಬೀ ಘನವಾಗೆ ಕೊಕ್ಕರಿಸಿ ಗುಗ್ಗರಿಯುಂ ಕೊಳೆಮುಕ್ಕಿ ಮಿಕ್ಕುದಂ।
ಕೆಲದವರ್ಗಿತ್ತು ಮತ್ತೆ ತಿಳಿಗಳ್ಳೆಡೆಯಲ್ ಕುಡಿಮುಳ್ಳೆ ಪಿಟ್ಗಲಾ ‖
ಗಳೆ ಕುಡಿದೆದ್ದು ಪೆಂಘಣಿಸಿ ಬಿದ್ದು ನೆಬಿಲ್ ಸುಡಿಯಲ್ಕೆ ನಕ್ಕು ಕ ।
ಣ್ಗಳನರೆಮುಚ್ಚಿ ಮುಚ್ಚಿ ತೆಱೆಯುತ್ತೆ ಸೆವರ್ ಮಧುಪಾನಕೇಳಿವಿದರ್ ‖ ೨೧೪

ಅಂತೊಂದು ದಿನಸಮವರೆಲ್ಲರುಂ ಮಧುಪಾನಮಂ ಮಾಡಿಪಾರ್ಗಳ್
ಪ್ರಣಯಕಲಹದೊಳ್ ಮುಳಿದಿರ್ದನ್ನಂ ರಾಗಮಂಜರಿ ಕಂಡು

ಕೆಳದಿಯರ ಮಧ್ಯದೊಳ್ ಕೋ ।
ಮಳೆ ಮಧುಪಾನಪ್ರಸಂಗದಿಂದಿರ್ದೆನ್ನೊಳ್ ॥
ಮುಳಿಸಿಲ್ಲದೆ ಮಧುವಂ ಮು ।
ಕ್ಕುಳಿಸಿ ಮದೀಯಾಸ್ಯಕಮಳಮಂ ಚುಂಬಿಸಿದಳ್ ॥ ೨೧೭

ಅಂತು ಚುಂಬಿಸಿ ಮತ್ತಂ ಸ್ವಾದುರಸಮಾಗಿರ್ದಪುದೆಂದೆನ್ನಂ ತನ್ನಂತೆ ಮಾಡಲ್ವೇಳ್ಪುದುಂ;

ಸ್ತ್ರೀವಶಮಾದವರನ್ವಯು ।
ಜೀವನಮುಂ ಪಾಪಪುಣ್ಯಮುಂ ನೀತಿಗಳಂ ॥
ತೀವಿದಿಹಪರದ ಸುಖಮಂ ।
ಭಾವಿಸುವರೆ ಕಾಮತತ್ತ್ವಮುಚ್ಚರಿಯುತ್ತೇ ॥ ೨೧೮

ಅದಲ್ಲದೆಯುಂ,

ಚತುರಕಳಾಢ್ಯರಂ ಕುಶಲಜೀವನರಂ ಸುಕೃತಾತ್ಮರಂ ಕರಂ ।
ಯತಿಗಳನುತ್ತಮಾರ್ಯ್ಯಯುಪವಸ್ಥಿತರಂ ಸಕಲಾಗಮಜ್ಞರಂ ॥
ಗತಿಗೆಡಿಸಲ್ಕೆ ಮತ್ತೆ ಪಿಚತಾಪ್ರದೊ ಭಾವಿಸೆ ತಾಪ್ರ ದೇವ ಕೇಳ್ ।
ಸತಿಯರ ಸಂಗಮಲ್ಲದೆ ಮನೋಜನ ಜಾಣ್ಮೆಯನಾರೊ ಮಾಡುವರ್ ।

ಆದಕಾರಣಮಾನವಳಂ ಬಿಡಲರಿಯದೆ,

ಅಲರ್ಗಣ್ಣ* ಕೇಸರಶರಲ್ಕೆ ಪೊಂಗಿದಧರಂ ಬೆಳ್ಪಾಗೆ ರೋಮೋದ್ಗಮಂ ।
ತಲೆದೋರಿದಲ್ ಬೆಮರುಣ್ಮೆ ಲಜ್ಜೆ ತೊಲಗಲ್ ನಿತ್ರಾಣಮಾಗಲ್ ಮನಂ ॥
ಬಲಿಯಲ್ ಕಣ್ಮುಗಿಯುತ್ತೆ ಮೂರ್ಛೆ ಮಿಗೆ ತೋರಿದಲ್ ನಾಡೆ ಚೆಲ್ವಾದುದ ।
ಗ್ಗಳಮೆಂಬಂತಿರಲಿನ್ನದೇಂಪೊಗ*ಳ್ವುದೋ ಕಾದಂಬರೀಪಾನಮಂ ॥ ೨೧೯

ಅನಂತರಂ,

ಉನ್ಮಾದಂ ತಲೆದೋರಿದಲ್ ।
ಮನ್ಮನಮಂ ನಿಲಿಸಲರಿಯದಲ್ಲಿಂದಾಗಳ್ ॥
ತನ್ಮಾತ್ರದೊಳಾರಾತ್ರಿಯೊ ।
ಳುನ್ಮೀಳಿತದೃಷ್ಟಿಯಾಗಿ ಪುರದೊಳ್ ಪರಿದೆಂ ॥ ೨೨೦

ಅನ್ನೆಗಮೊನ್ನ ಪಿಂತನೆ

ಗುಣಿ ರಾಗಮಂಜರಿಗೆ ಸ ।
ದ್ಗಣಿಕಾರತ್ನಕ್ಕೆ ನಕ್ರಿಯಿಂ ಧೂರ್ತರ್ಶಿರಾ ॥
ಮಣಿ ನೀತಿವಂತೆ ಮುದುಗುಂ ।
ಟಣಿಯುಪ್ಪಳ್ ಮಾತೆಪ್ರೋಲ್ ಸೃಗಾಲಿಕೆಯೆಂಬಳ್ ॥ ೧೧೦

ಪರಹೃದಯುಪ್ರವೀಣತೆಯನೋಗಡೆಯ ಧರ್ಮನೊಧ್ವರ್ಬುದ್ಧಿಯು ।
ಚ್ಚರಿಯುನನನ್ವಯಾರ್ಥಘಟನಾವಿಧಿಯುಂ ಸತತಂ ಲಸತ್ಕಳಾ ॥
ಪರಿಣತಿಯುಂ ಸಮಸ್ತಜನವ್ಯೆಕಿಕಮುಂ ಏಧಿಯೊಂದುಗೂಡಿದಂ ।
ಧರಣಿಯೊಳಿಂಬಿನಂ ಮೆಱೆವಳಾವುದುಗುಂಟಣಿಯು.ರ್ವರಾಧಿಪಾ ॥ ೧೧೧

ಅಂತವಳೆನ್ನ ಪಿಂದನೆ ಪರಿತಪರ್ಗಳ್
ತಿಂತ್ರಿಣಿಯು ರಾತ್ರಿಯೊಳ್ ಕಾ ।
ಲಾಂತಕರ್ತಿರ್ಪರ್ ನಗರರಕ್ಷಕರಾಗಳ್ ॥
ಭ್ರಾಂತಿಂ ಪರಿದೆನ್ನಂ ಪಿಡಿ ।
ದೆಂತೋಡುವೆಯೆಂದು ಪಲವು ಪರಿಯಿಂ ಪ್ರೊಡೆದರ್ ॥ ೧೧೨

ಅಂತವರೆನ್ನಂ ಪಿಡಿದು ಪ್ರುಡೆಯುಲೊಡಂ
ಆವಂಗಾರದು ಕರ್ಮಂ ।
ಭಾವಿಸಲುನ್ಮತ್ತನಾದ ಪ್ರೊಟ್ಟಿದು ವಚನ ॥
ಕ್ಕಾವಗವುನೇಕವಿಧದಿಂ ।
ತೀವಿರ್ಪುದು ಸಹಜಮಲ್ತೆ ನೃಪಕುಲತಿಲಕಾ ॥ ೧೧೩

ಅದುಕಾರಣಂ
ಪಿಡಿವನನೆನ್ನನದಾವಂ ।
ಪೊಡೆದಿರ್ಕಡಿವ್ರೂಟ್ಟೆನೆನ್ನ ಖಡ್ಗದಿನಾತಂ ॥
ವ್ಯಡನಾದೊಡಾಗಲೆಂದು ।
ಗ್ಗಡಿಸಿದೆನಾನತಿಭಯಂ ಕರಂ ಪ್ರೊಣ್ಮುವಿನಂ ॥ ೧೧೪

ಅಂತಾಂ ಪೂರ್ವವಾಸನೆಯುಪ್ಪ ಕಠೋರವಚನಮಂ ನುಡಿಯೆ,
ಅನ್ನೆಗಮವರೆಲ್ಲರ್ ಪ್ರೊಡೆ ।
ದೆನ್ನಂ ಕೈವಿಡಿದು ಕಟ್ಟಿ ಮನದತಿಮುಳಿಸಿಂ ॥

ಬನ್ನಕ್ಕೆ ತಂದೊಡೆನ್ನ ಮ ।
ದನ್ನೆಟ್ಟನೆ ಪೋಗೆ ತಿಳಿವು ಪುಟ್ಟಿತ್ತಾಗಳ್ ॥ ೨೦೬

ಆಸಮಯದೊಳ್ ಸೃಗಾಲಿಕೆಯುಮಿತ್ತಂ ಬರಲದನಾಂ ಕಂಡು

ಎನಗಾಪ್ತಂ ಧನಮಿತ್ರನೆಂದಱಿವುದೀಲೋಕಂ ಮದೀಯಾಪ್ತಕಾ ।
ಮಿನಿಯೆಂಗುಂ ಧರೆ ರಾಗಮಂಜರಿ ಮನೀಯಿರ್ಬರ್ಗರ್ತಿಕ್ಲೇಶದಿಂ ॥
ದೆನಸುಂ ಬಂದಪುದಿಂತಿದಂ ತೊಲಗಿಸಲ್ವೇಳ್ಕೆಂದುಪಾಯಪ್ರಚಿಂ ।
ತನೆಯುಂ ಚಿಂತಿಸುತುಂ ಸೃಗಾಲಿಕೆಯನಾಂ ಸಕ್ರೋಧದಿಂ ನೋಡಿದೆಂ ॥

ಪೋಗೆಲೆ ಕುಂಟಣಿ ಕುಟಿಲೋ ।
ದ್ಯೋಗಂ ಮಿಗೆ ರಾಗಮಂಜರಿಯನಾನಿರ್ವರ್ ॥
ತೀಗಳ್ ಧನಮಿತ್ರಂಗೊಳ ।
ಗಾಗಿರ್ಪಂತೆಸಗುತಿರ್ಪೆ ನಾನಱಿಯದುದೇ ॥ ೨೦೮

ಎಂದು ಮತ್ತಂ

ಎನಗಾಪ್ತಮಿತ್ರನೆಂಬೊಂ ।
ದು ನೆವಂದೋಱುತ್ತೆ ರಾಗಮಂಜರಿಯುಂ ತಾ ॥
ನನುನಯದಿಂ ಬೆರಸಿರ್ಪಂ ।
ಧನಮಿತ್ರಂ ದುಷ್ಟಮಿತ್ರನೆಂಬುದು ಪುಸಿಯೇ ॥ ೨೦೯

ಅದುಕಾರಣಂ

ಎಲಗೆ ನಿಜಸುತೆಯ ಭೂಷಣ ।
ಕುಲವಂ ಧನಮಿತ್ರನಜಿನರತ್ನವನೀಕ ॥
ಟ್ತಲೆಯೊಳ್ ಕಳ್ದಂ ನಿಮ್ಮಯ ।
ಬಲವಂ ನಪೆ ನೋಳ್ಪೆ ನಿನ್ನಲೇ ಕುಟಿಲಾತ್ಮೇ ॥ ೨೧೦

ಎಂಬುದುಮವಳತಿನಿಪುಣೆಯಪ್ಪುದಱಿಂದೆನ್ನ ವಚನಭಾವಕೌಶಲವನಱಿದದಂ ನೆಲೆಮಾಡಲೆಂದು,

ನೀನಾರ್ಜಿಸಿದರ್ಥವೆ, ಕೇಳ್ ।
ಮಾನಿನಿಯರ ಧನವನುತ್ತಮರ್ಕಳ್ ವಿಟವಿ ॥
ದ್ಯಾನಿಲಯ ಮತ್ತನೂಜೆಗ ।
ನೂನವಿಭೂಷಣವನೀವುದಾಂ ಪೊಡೆಮಡುವೆಂ ॥ ೨೧೧

ಧನಮಿತ್ರನ ಜಿನರತ್ನವ ।
ನನುನಯದಿಂದೀಗ ಪೊಣ್ಗೆ ಮಾತ್ಪಾತ್ರಿಯುಮಂ ॥
ಡನಮಂ ದಯೆಗೆಯ್ದೆ ವೇಶ್ಯಾ ।
ವನಿತೆಯರಾವಲ್ಪಜೀವಿಗಳ್ ದಿಟಮಲ್ತೇ ॥ ೨೩೨

ಎಂದೊಡಾಂ ಕರುಣಿಸಿದಂತೆ

ನಿನ್ನೊಡವೆಯುಸಿರ್ದೊಡವೇ ।
ನೆನ್ನಂ ವಂಚಿಸಿದ ಧೂರ್ತಧನಮಿತ್ರನ ಗ ॥
ರ್ವಂ ನೆರೆವ ಚರ್ಮಭಸ್ತ್ರಿಕೆ ।
ಯಂ ನಟ್ಟನೆ ಕುಡುವೆನಲ್ಲ ಬಗೆ ನಿಶ್ಚಯದಿಂ ॥ ೨೩೩

ಎಂಬುದಮುವಳ್ ಪುರರಕ್ಷಕರ್ಗೆ ಕ್ರಮದಿಂ ಧನಮಿತ್ರನ ಚರ್ಮರತ್ನವಂ ಕುಡದೊಡವೇನೆನ್ನ ಮಾಗಳಾಭರಣಮಂ ಕುಡುವಂತೆ ಪೇಟೊಮೆನಲವರಿಂತೆಂದರ್:—

ಎಲವೆಲವೋ ನಾಳ್ ನಿನ್ನಯ ।
ತಲೆಯಂ ಕೊಯ್ದು ಜಿನದತ್ತನಂ ಕೊಂಡಪೆವೀ ॥
ಲಲನೆಯ ಭೂಷಣಮುಮಂ ಕೊ ।
ಟಲೆಗೊಳಿಸದೆ ಕುಡುವುದೀಗಳೊರ್ವೆಡೆ ತನಯಂ ॥ ೨೩೪

ಎಂದೊಡಾಂ ಬಟ್ಟೆಕ್ಕಾಭರಣಮಿರ್ದ ರಾವನೇಕಾಂತದೊಳ್ ಪೇಳ್ದನೆಂದವಳಂ ಸಾರಲ್ಗೆ ಕರೆದು

ನಿನ್ನ ಸಖಂ ಸಿಲ್ಕಿದಪಂ ।
ನಿನ್ನಿರುಳಂದವಟಿ ದೆಸೆಯಿನೆನಗಂ ನಿನಗಂ ॥
ಬನ್ನಂ ಬರ್ಪುದೆನಲ್ ಕೇ ।
ಳ್ದೆನ್ನಂ ನಿನ್ನೆಡೆಗೆ ಕಳಿಪಿದಂ ಧನಮಿತ್ರಂ ॥ ೨೩೫

ಎಂದು ಧನಮಿತ್ರಂಗೆ ಪೋಗಿ ಪೇಟೆಂದು ಮತ್ತಮಿಂತೆಂದೆಂ:—

ಇಂತಾಂ ಸಿಲ್ಕಿದೆನೆಂದತಿ ।
ಚಿಂತಿಸದಿನ್ನೆನ್ನನೊಲ್ದು ಬಿಡಿಸುವ ತೆಱನಂ ॥
ಚಿಂತಿಸುವುದು ಧನಮಿತ್ರಂ ।
ಮುಂತಣ ಕಾರ್ಯಕ್ಕೆ ಕಾರಣಂ ನೀನಲ್ತೇ ॥ ೨೩೬

ಎಂದಾಂ ಆಭರಣಮಿರ್ದ ಠಾವಂ ಪೇೞ್ವಿಂತೆ ಪೆಱತೊಂದು ಕಾರ್ಯಮಂ ಪೇೞಲದಂ ಕೇಳ್ದು ಕೆಯ್ಗಳಂ ಮುಗಿದು

ನಿನಗಂಗರಾಜನೊಲ್ದೀ |
ಜನನಿಸಿತುಂ ಹಿತನನೆಸಗುಗಧಿದೇವತೆಯೊ ॥
ಲ್ದನುಕೂಲಮಕ್ಕೆ ಸುತ್ತುಂ |
ಧನಮಿತ್ರನ ಪುರಿಗೆ ಪೋದಳಾಗಳ್ ಬೇಗಂ ॥ ೨೩೭

ಅಂತಾಸೃಗಾಲಿಕೆ ಪೋಪುದುಮಿತ್ತಲ್

ಚಿಂತೆಯು ಮಂತಣಂ ಮಗುಡದೋವರಿ ಜಾಡ್ಯದ ಬೀಡು ದುಃಖಗೇ |
ಹಂ ತನುಬಾಧೆಯಾಲಯಮಮಂಗಲದಿಕ್ಕೆಯುಮಾಗರ್ದಾಗರಂ ॥
ಭ್ರಾಂತಿನ ಜನ್ಮಭೂಮಿಯೆನಿಪಗ್ಗಳಬಂಧನಮಂದಿರಕ್ಕದೇ |
ನುಂ ತಡವಿಲ್ಲದೊಯ್ದನಗೆ ಸಂಕಲೆಯುಂ ಮುಳಿಸಿಂ ತೊಡರ್ಚಿದರ್ ॥ ೨೩೮

ಉಭಯಕಟಂಗಳಿಂದೊಸರ್ವ ಮೋೞ್ಕದದಿಂ ಕಡುಸೊಕ್ಕಿ ಮಿಕ್ಕು ಪಾ |
ಯ್ವಿಭವನನೇಕದಂಡಹತಿಯಿಂ ಸೃಣಿಸೋತದಿನಾಮರ್ಪಾಯದಿಂ ॥
ದಭಿಭವಮಂ ನಿಮಿರ್ಚಿ ದೃಢಶೃಂಖಲೆಯಿಂ ಸಲೆ ಯಂತ್ರಿಪಂದದಿಂ |
ರಭಸದೊಳೆನ್ನ ಕಾಲ್ಗವರ್ಗಳಾಗಳೆ ಸಂಕಲೆಯುಂ ತೊಡರ್ಚಿದರ್ ॥ ೨೩೯

ಅಂತು ತೊಡರ್ಚಲ್ಲಿಗೆ ಮಱುದಿನಂ ಸೃಗಾಲಿಕೆ ಬಂದು

ನೀನೆನ್ನೊಳ್ ಪೇೞ್ದ ಕಾರ್ಯಸ್ಥಿತಿಯನೊಸೆದು ತನ್ಮಿತ್ರನೊಳ್ ಪೇೞ್ದೆಡಾತಂ । ತಾನೆಲ್ಲಾ ಕಾರ್ಯಮಂ ಸ್ಮೃತಿಸಿಗಿದನವನಿಂತೆಲ್ಲಮಂ ಕೇಳ್ ಮನಃಪ್ರೀ ॥ ಮಾನಂದಂ ಪೆರ್ಚಲೀಬಂಧನಮುಮಱಿಯಲೆನೆ ತ್ತಂತವರ್ ತನ್ನ ಬುದ್ಧಿ । ಜ್ಞಾನಂ ಚೆಲ್ವಾಗಲೇಕಾಂತದೊಳೆನಗಿಸಿತಂ ಪೇೞಿಮಿದ್ಯುಕ್ತಿಯಾದಳ್ ॥ ೨೪೦

ಅದೆಂತೆನೆ:—

ಸರಭಸದಿಂ ಧನಮಿತ್ರನ |
ಪುರಿಗಾಂ ಪದೆದೈದೆ ನಿನ್ನ ನಿಜಮಿತ್ರಂ ಪೋ ॥
ದಿರುಳೀ ಪುರರಕ್ಷಕರಿಂ |
ಪರವಶನಾಗಿರ್ದು ಸಿಲ್ಕಿದಂ ವಿಧಿವಶದಿಂ ॥ ೧೪೧

ಎಂದು ಪೇೞುತೊಹಂ

ತಳವೆಳಗಾಗಿ ಮಾತಿನಿತು ತೋಱದೆ ಮೆಯ್ಯ್ಮರವಟ್ಟು ಬುದ್ಧಿಸಂ ।
ಚಲಿಸಿ ಮನಂ ಕಲಂಕಿ ಮತಿಗುಂದಿ ಕರಂ ಬಿಸುಸುಯ್ವ ಮಾನಸರ್ ॥
ಕಳವಳರಾರ್ ವಿಧಾತೃಬಲಮುಂ ನಿಜಬುದ್ಧಿಯೊಳೆಂದು ಮತ್ತಮಂ ।
ತಿಳಿದು ಮಗುೞ್ದು ಮುನ್ನುಖವನೀಕ್ಷಿಸಿದಂ ಧನಮಿತ್ರನಾಕ್ಷಣಂ ॥ ೨೪೪

ಅಂತಾತನೆನ್ನ ಮುಖಮಂ ನೋಡಲಾಂ ಮತ್ತಮಿಂತೆಂದೆಂ:—

ನೀನುಮಮ್ಮಳಸಬ್ಬೇಡ ನಿ ।
ಜಾನುಜರಂ ನಿನಗಮೆನಗಮೆಯ್ದುವ ಭಯಮಂ ॥
ತಾನದನಱಿಯಲ್ ತನ್ನನ ।
ನೂನದೆ ಪೇೞ್ದಿಟ್ಟದಂತೆ ಮಾೞ್ಪುದು ಕೇಳೆಯಾ ॥ ೨೪೫

ಅದೆಂತೆಂದಾತಂ ಬೆಸಗೊಳ್ವುದುಂ;

ಅಂಗನೃಪೇಶ್ವರನ ಸಭಾ ।
ರಂಗಕ್ಕತಿದೀನಭಾವದಿಂ ಪೋಗಿಯೆ ಸಾ ॥
ಷ್ಟಾಂಗನನುಸ್ಕಾರಂಗೆ ।
ಯ್ದಿಂಗಿತನಱಿದಿತ್ತ ಚಿತ್ತಮೆಂಬುದು ಕೇಳೆಯಾ ॥ ೨೪೬

ಕವಿತೆಯೊಳಕ್ಷದ್ಯೂತಾ ।
ದಿವಿನೋದನವಿದ್ಯೆಯೊಳ್ ಕಳಾಗಮಚಾತು ॥
ರ್ಯವಿಧಾನದೊಳ್ ಸಮಂತೊ ।
ಪ್ಪುವನಿರ್ಪಂ ರಾಗಮಂಜರಿಯ ಪತಿಯೆಂಬಂ ॥ ೨೪೭

ಆತಂಗಮೆನಗಮೊಲ್ದಿತ ।
ರೇತರಸೌಹಾರ್ದವಾಗಲಾನಾತನ ತ ॥
ತ್ಕಾಂತೆಗೆ ಮಿತ್ರವಧೂಸು ।
ಪ್ರೀತಿಯಿನುಪಚಾರಭಾವಮಂ ಮಿಗೆ ಮಾೞ್ಪೆಂ ॥ ೨೪೮

ಅಂತಾಂ ಮಿತ್ರಸ್ತ್ರೀಯೆಂಬ ಭಾವದಿಂ ಸ್ನೇಹಂಗೆಯ್ದನೇಕಸುಗಂಧ ವಸ್ತುಪ್ರದಾನಸನ್ಮಾನದಿಂ ಸ್ನೇಹಂಗೆಯ್ಯಲದನಾಮೂರ್ಖೆ ವಿಪರೀತಭಾವಂಗೆಯ್ದು

ಅಂತಾಮೂರ್ಖಂ ವಿದ್ಯಾ ।
ವಂತಂ ಮುಳಿವೆನ್ನ ಚರ್ಮಭಸ್ತ್ರಿಕೆಯಂ ಕ ॥
ಳ್ದಂ ತರಿಸಿ ಕೊ*ಟ್ಟು ಬರ್ದುಕಿಪು ।
ದೆಂತಾನುಂ ಪದೆಗು ದುರ್ಬಲಂಗೆ ನೃಪಾಲಾ ॥ ೨೪೯

ಮುನ್ನರ್ಥಪತಿಗೆ ಸಿಲ್ಕಿ ।
ದೆನ್ನ ಜಿನಾನರ್ಘ್ಯರತ್ನಮಂ ಕುಡಿಸಿದೆ ಕೇ ॥
ಳೆನ್ನೊಯ್ದ ಧೂರ್ತನಿಂ ಕುಡಿ ।
ಸುನ್ನತಿಯಿಂದಜಿನರತ್ನಮಂ ಧರಣೀಶಾ ॥ ೨೫೦

ಅದಲ್ಲದೆಯುಮವನೆನ್ನ ಚರ್ಮರತ್ನಮಂ ಕಳ್ದು ಪೋಗುತ್ತಂ ನಗರರಕ್ಷಕರ ಕೆಯ್ಯೊಳ್ ಸಿಲ್ಕಿದನೆಂದರಸಂಗೆ ಪೋಗಿ ಪೇಳಲೆಂದೆನ್ನಂ ನಿನ್ನೆಡೆಗೆ ಕಳುಹಿದನೆಂದಾಂ ಪೇಳಲ್, ಧನಮಿತ್ರನಾಗಳರಸನ ಸಾರಣ್ಗೆ ಪೋಗಿಯಾಂ ಪೇಳ್ದ ಕ್ರಮದಿಂದೆ ಪೇಳಲರಸಂ ಸರೋಷನಾಗಿ

ನೀಂ ಪೋಗು ಚರ್ಮಭಸ್ತ್ರಿಕೆ ।
ಯಂ ಪೆಂಪಿಂ ತರಿಸಿ ಕುಡುವೆನೆಂದು ಮಹೀಪಾ ॥
ಲಂ ಪದೆದು ಕಳಿಸಲಾತನ ।
ಲಂಪಿಂ ಬಂದಂ ನಿಜಾಲಯಕೆ ಧನಮಿತ್ರಂ ॥ ೨೫೧

ಅಂತು ಧನಮಿತ್ರಂ ಬಂದು ಸಂತಸದಿಂದೆನ್ನಂ ಕರೆದು, ನೀಂ ಪೋಗಿ ಮನ್ಮಿತ್ರಂಗೆ ತದ್ವೃತ್ತಾಂತಮಂ ಪೇಳೆಂದೆನ್ನಂ ಮಗುಳ್ದು ಕಳಿಪಿದನೆಂದು ಸೃಗಾಲಿಕೆ ಪೇಳಲಾನವರ್ಗೆ ಪರಿಣಾಮಿಸಿ,

ಇನ್ನೆನ್ನಂ ಬಿಡಿಸುವ ಕಾ ।
ರ್ಯಂ ನಿನ್ನಿಂದಲ್ಲದಾಗದೆಂದವಳೊಳ್ ಪ್ರ ॥
ಜ್ಞನ್ನಮೆನಿಸಿಪ ಮಾತುಗ ।
ಳನ್ನಯದಿಂ ಪೇಳ್ದೆನಱಿವ ತೆಱದಿಂದಾಗಳ್ ॥ ೨೫೨

ಅಂತು ಪೇಳ್ದಾಂ ಸೃಗಾಲಿಕೆಯುಮಂ ಕಳಿಪಿ

ಮುಳಿದೆನ್ನ ಕಾಲ ಬಲ್ಸಂ ।
ಕಲೆಯಂ ಮುಱಿದಿಕ್ಕಲಾರ್ಪದುಳೊಳ್ಪಡೆವೇಂ ನಿ ॥

ಶ್ಚಲಮೆನಿಪ ರಾಗಮಂಜರಿ ।
ಯೊಲವಂ ಬಿಡಲಾಱದಿದೆರ್ನಪ್ತೆ ನೃಪಾಲಾ ॥ ೨೫೩

ಅದಱಿಂ ಬಂಧನದುಃಖಮಂ ಕೆಲವು ದಿನಮನುಭವಿಸುತ್ತಿರ್ಪಿನಂ, ಕಿಱಿದುದಿನದಿಂ ಮೇಲೆ ಮಗುೞ್ದು ಸೃಗಾಲಿಕೆ ಬಂದು,

ಏಂ ಕೆಳೆಯಾ ಪಲದಿವಸಂ ।
ಸಂಕಲೆಯಾಯಾಸದುಃಖಮಂ ತಳೆದೆಯುದ ॥
ಕಾರ್ಗಂ ಕಂಡೆನೊಂದು ತೆಱನಂ ।
ನೀಂ ಕಲ್ಪಿಸಿದಂತೆ ಕೇಳೆನುತ್ತಿಂತೆಂದಳ್ ॥ ೨೫೪

ಅದೆಂತೆನೆ:—

ಭೂಲಲನೇಶನೆಂಬ ಪೆಸರ್ವೆ*ತ್ತಸೆವಂಗನೃಪಾಲಪುತ್ರಿಯಂ ।
ಬಾಲಿಕೆಗೊರ್ಬಮಂಗಲಿಕೆಯಂಬಿಕೆಯಂಬಿಕೆಯಾಸಮೀಪದೊಳ್ ॥
ಲೀಲೆಯೆನಿಪ್ಪ ಭಿಕ್ಷುಕಿಯು ಬೆಂಬೞಿಯೊಳ್ ಪಡೆದಾಂ ತದುರ್ವರಾ ।
ಪಾಲಕನಾಲಯಕ್ಕೆ ಪದೆದೆಯ್ದಿದೆನೊಂದು ದಿನಂ ಕುಮಾರಕಾ ॥ ೨೫೫

ಸುರಗಿರಿಯುಂ ಸರೋಜಭವನೆಂಬ ಮಹಾರಥಕಾರನೊಲ್ದು ಕಂ ।
ಡರಿಸಿ ವಿಚಿತ್ರಪುತ್ರಿಕೆಗಳಿಂ ಪರಿರಂಜಿಸಿ ಚಂಪೆಯುಳ್ಳಿ ತಂ ॥
ದಿರಿಸಿದನೆಂಬಿನಂ ಜನಮನೋಹರಮಾಗಿ ಪೊಗೞ್ತೆಗೊಪ್ಪುವು ।
ಪ್ಪರಿಗೆಗಳಿಂ ನೆಗೞ್ತೆವಡೆದಿರ್ದುದು ಸೌಂದರರಾಜಮಂದಿರಂ ॥ ೨೫೬

ಅಂತೆಸೆವ ರಾಜಮಂದಿರದಲ್ಲಿ

ನಗುವಲರ್*ಗಣ್ಣ ಕಾಂತಿ ಸುಲಿಪಲ್ಗಳ ಕಾಂತಿ ಕಪೋಲಕಾಂತಿ ಸೆ ।
ಳ್ಳುಗುರ್*ಗಳ ಕಾಂತಿ ಪಚ್ಚಳಸುಸಂಗಶಲಾಕೆಯ ಕಾಂತಿ ಬಳ್ಳಿಮಿಂ ॥
ಚುಗಳೆಳಮೆಂಡಿರುದುವೆಸಿ ಪೊಂದಭಿಶಂಕೆಯನುಂಟುಮಾೞ್ಪನಂ ।
ಮೃಗಶಿಶುನೇತ್ರೆಯರ್ ಮೆಱೆವರೋಲಗದೊಳ್ ಧರಣೀಶಪುತ್ರಿಯಾ ॥ ೨೫೭

ರತಿಯ ವಿಲಾಸಮಂ ಶಚಿಯ ಸಂಪದನಂ ಗಿರಿಜಾತೆಯೋಜೆಯಂ ।
ಕ್ಷಿತಿಸುತೆಯೊಳ್ಪುಮಂ ಸಿರಿಯ ಸೌಷ್ಠವನಂ ಮನವೊಲ್ದು ಭಾರತೀ ॥
ಪತಿ ನಲಿದೊಂದುಗೂಡಿ ಪಡೆದಂತೆವೊಲೊಪ್ಪುವಳಂ ವಸುಂಧರಾ ।
ಪತಿಯ ಕುಮಾರಿಯಂ ಪಡೆದು ಕಂಡೆನತೀವಮನೋನುರಾಗದಿಂ ॥ ೨೫೮

ಅಂತಾಕುಮಾರಿಯುಂ ಕಂಡು ಪ್ರತಿದಿನಸಂ ರಾಗಮಂಜರಿಯಿಂ ಬೇೞ್ಪು ಚಿತವಸ್ತುಗಳಂ ತಂದು ಕೊಟ್ಟವರಿರ್ಬರ್ಗನ್ಯೋನ್ಯಸ್ನೇಹಂ ನಿಮಿರ್ಚೆ ಯಾನಂಬಾಲಿಕೆಯಿಂ ಪ್ರಸಾದಂಬಡೆದು ನಿತ್ಯಸಮೀಪಸೇವೆಯುಂ ಮಾಡುತ್ತಿ ರ್ಪಿನವೊಂದುದಿನಂ

ಗಗನಶ್ರೀಗನುರಾಗಮಂ ಮೆಱೆಯುತುಂ ಸಂಪ್ರೀತಿಯಿಂ ಜೊನ್ನವ ।
ಕ್ಕಿಗೆ ಬೆಳ್ದಿಂಗಳ ಸಾರಮಂ ಕಱೆಯುತುಂ ಪಂಕೇಜಿನೀಪಜ್ಯ್ತಕಾಂ ।
ತಿಗಳಂ ದರ್ಶನಮಾತ್ರದಿಂ ಜಱೆಯುತುಂ ಕಾಮಾಂಧಸಂದೋಹದಂ ।
ತಿಗಳುತ್ತುಂಗರದಂಗಳಂ ಮುಱಿಯುತುಂ ಮೆಯ್ದೋಱಿದಂ ಚಂದ್ರಮಂ ॥

ಅಂತು ಚಂದ್ರೋದಯದೊಳ್

ಸುಕರಾಬ್ಧಿಯೊಳ್ ಸುಧಾಕರ ।
ತುಕದಿಂ ಪಾಂಡವನಿವಾಸದಂತಿರೆ ಪಾಂಚಾ ॥
ಲಿಕೆಯಂತೆಸೆವುಪ್ಪರಿಗೆಯೊ ।
ಳ್ಕಳಂಕಶಶಾಂಕಮುಖಿ ಕರಂ ಮೆಱೆದಿರ್ದಳ್ ॥ ೨೬೦

ನಿರುತಂ ಸೌಹಾರ್ದ ಸತ್ಕೋಮಳತನುಲತಿಕಾಚಿತ್ರ ಗಾಂಭೀರ್ಯನ
ಪ್ಯೋ । ತ್ತರೆ ಮಿತ್ರಾಶ್ಲೇಷೆ ರತ್ನಶ್ರವಣೆ ಸುರಭಿದೋರ್ಮೂಲಸಂಪನ್ನೆ
ಹಸ್ತಂ ॥ ಬುರುಹಶ್ರೀರಮ್ಯೆ ಮುಗ್ಧಾರುಣಮಣಿಕಿರಣಾಕೀರ್ಣಸೌಂದ
ರ್ಯಪೂರ್ವೆ । ಧರೆ ತಾರಾದೇವಿಯಂತುತ್ಪಲನಯನೆ ಕರಂ ಕಾಂತಿಯಿಂ
ದೊಪ್ಪುತಿರ್ದಳ್ ॥ ೨೬೧

ಅಂತು ಕಮನೀಯಕಾಂತಿಯುಂ ತಳೆದ ಕಾಂತೆಯಂತವನಱಿದು

ಅಡಿ ಮುಡಿ ಜಂಘೆ ನುಣ್ಗುರುಳ್ಗ*ಳೆಳ್ದೊಡೆ ಪೃಥುಸ್ತನನಿತಂಬಮಕ್ಷಿಗಳ್ ।
ನಡು ಮೊಲೆ ಮೆಲ್ಪು ಬಿಣ್ಪಿಸಿದು ಕೊಂಕು ಸುದೀಧಿತಿ ಕರ್ಪುರ ಗೌರವಂ ॥
ಕಡುನಿಡಿದಲ್ಪಮುನ್ನತಮೆನಿಪ್ಪವಱಿಂ ಸುಕುಮಾರವೃತ್ತಿಯುಂ ।
ಪಡೆದ ನೃಪಾಲನಂದನೆಯನೊಯ್ಯನೆ ಪೊರ್ದಿದನಾಂ ಕುಮಾರಕಾ ॥ ೨೬೨

ಅಂತು ಪೊರ್ದಿ,

ಕಾರುಳಂ ನುಣ್ಣಿಪ ವೇಣಿಯುಂ ಸಸಿನೆಗೆಯ್ವೇಕಾವಳೀರತ್ನಮಂ ।
ರತದಿಂ ಲೆಕ್ಕಿಪ ಪತ್ರವಲ್ಲಿಗಳ ಕೊಂಕಂ ತಿರ್ದುವಿಕ್ಕಿರ್ದನಾ ॥

ಪುರವಂ ಸ್ಮೈತ್ರಿಡುವೆತ್ತೆಯುಜ್ಜುಗದೊಳಾಂ ಮೊಯ್ಯೊಂಕಿ ತತ್ಕಾಮಿನೀ।
ಕರುಣಾಲೋಕನಸಿದ್ಧಿಯುಂ ಪಡೆದುಮಂತಿರ್ದೆಂ ಸಮಭ್ಯರ್ಣದೊಳ್ ॥

ಅಂತಿರ್ದು,

ಅಂಬಾಲಿಕೆ ನಿನ್ನಯ ಕಿವಿ ।
ಯಿಂ ಬಿಟ್ಟಿಪ್ಪುದೆಂದು ಜಗುಟ್ಟಿ* ಚೆನ್ನೆಯ್ದಿಲ ಪೂ ॥
ವಂ ಭರದೆ ತೆಗೆದು ಬೀಸಿದೆ ।
ನಂಬರದೊಳ್ ಪಾರಿವಾಳಮಂ ಬೆದಱಿಪವೋಲ್ ॥ ೨೬೩

ಆಸನಮದೊಳ್

ತನುಸಾಮ್ಯಂ ನಾಡೆ ಮೂರ್ಖಂ ಜನಕೆ ವಿರಹಿತಂ ಸುಸ್ವತಂತ್ರಂ ಮ
ಹಾಯುಃ । ವನಮತ್ತಂ ನೀತಿಮೂಢಂ ವಿಟಜನಸುಲಭಂ ನೂತ್ನಸೇವಾಭಿ
ರಾಮಂ ॥ ಧನಿಕಂ ಸ್ತ್ರೀಲಂಪಟಂ ಕಾಮುಕತತಿಪರಿವಾರಂ ಕುಮಾರಾ
ನ್ವಿತಂ ಸ । ಜ್ಜನದೂರಂ ತತ್ಪುರೀರಕ್ಷಕನಧಿಕಬಳಂ ರಂಜಿಪಂ ಕಾಂತ
ಕಾಖ್ಯಂ ॥ ೨೬೪

ಅಂತಾಕಾಂತಕನೆಂಬ ತಳವಾರನಾಯಕಂ ಅರಸನೋಲಗದಿಂ ಕಳಿಪಿಸಿಕೊಂಡಂಬಾಲಿಕೆ ಕುಳ್ಳಿರ್ದುಪ್ಪರಿಗೆಯ ಕೆಳಗೆನೆ ಪೋಗುತ್ತಿರೆ,

ನಲಿದೆನ್ನ ಕಯ್ಯ ಚೆನ್ನೆ ।
ಯ್ದಿಲ ಪೂವಂ ನೋಡಿ ಕಾಂತಕನ ಮಸ್ತಕದೊಳ್ ॥
ಘಟಿಲನೆ ಬಿಸುಡಲವಂ ತ ।
ನ್ನೊಲವಿಂದಂ ಮೇಲನೀಕ್ಷಿಸುತೆ ನಸು ನಕ್ಕಂ ॥ ೨೬೫

ಇದನೆಲ್ಲವನಂಬಾಲಿಕೆ ।
ಮುದಮೊಸೆಯಲ್ ಕಂಡು ಮಂದಹಾಸಂ ತುಟ್ಕಲ್ ॥
ಪದೆದೆನ್ನಂ ನೋಡಲ್ಕಾ ।
ನದನಾಮೂರ್ಖಂಗೆ ತೋಱಿಬೆಂ ಕಣ್ಣುಱುಪಿಂ ॥ ೨೬೬

ಅಂತಾಕಾಂತಕಂಗೆ ಕುಮಾರಿಯ ಸ್ವಭಾವಚೇಷ್ಟೆಗಳಂ ವಿಪರೀತಚೇಷ್ಟೆಗಳೆಂಬಂತು ತೋಱಿ

ಎನ್ನವೊಲಾರ್ ಕೃತಾರ್ಥರಿಳೆಯೊಳ್ ಮೇಱೆವಗ್ಗದ ರಾಜಪುತ್ರಿಯೊ ।
ಲ್ದೆನ್ನನಪೇಕ್ಷೆಯಿಂ ಪಿಡಿದ ನೆಯ್ದಿಲ ಪೂವಿನೊಳಟ್ಟಿ ತನ್ನಪಾಂ ॥

ಗನ್ನಿಮಿ*ರ್ಪಂತಿರೊಯ್ಯನೊಸೆದೀಕ್ಷಿಸಿ ಪೆಂಪ್ನಗೆಯುಂ ತುಱುಂಕಿದಳ್ ।
ತನ್ನಿದಿರೊಳ್ ದಿಟಕ್ಕನುತೆ ಮೆಯ್ಮಱೆದಂ ಕಡುಕೆಯ್ದು ಕಾಂತಕಂ ॥ ೧೬೭

ಅಂತಾತಂ ಮೆಯ್ಮಱೆದು ತನ್ನಾಸೆಯುಂ ಸಂಬಂಧವಾರ್ತೆಗೆ ಪಿಂತಿರಿಸಿ ಎಂತಾನುಂ ಮಂದಗತಿಯಿಂ ನಿಜಮಂದಿರಕ್ಕೆ ಪೋಗಲಾ ಮಱುದಿವಸಮವನ ಭವನಕ್ಕೆ ಪೋಗೆಲ್

ತನ್ನಸು ಬಂದವೋಲೋಲವಿಂ ।
ದೆನ್ನಂ ಸನ್ಮಾನದಾನಪೂಜಾಕ್ರಮದಿಂ ॥
ಮನ್ನಿಸಿ ಕಾಂತಕನೆನ್ನೊಳ್ ।
ಕನ್ನೆಯ ಸಂಬಂಧವಾರ್ತೆಗೆಳಸುತ್ತಿರ್ದಂ ॥ ೧೬೮

ಅಂತಿರ್ದ ಭಾವವನಱಿದು,

ಮಕರಾಂಕಂ ಬಂದೊಡಂ ಮೆಚ್ಚದ ನಿರುಪಮಸೌಭಾಗ್ಯಸಂಪನ್ನೆಯುಂ
ಬಾ । ಲಿಕೆ ನಿನ್ನಂ ಕಂಡು ಕಣ್ಗೊಲ್ತತಿಶಯಮದನಾಸ್ತ್ರಾಗ್ನಿ ಸಂತಾಪ
ದಿಂ ಚಂ॥ ದ್ರಿಕೆಯೊಳ್......ನೀರ್ವಸೆಯೊಳೊಡಲನಟ್ಟಾಡುವೋಲ್ ಮಾ
ಡಿದ್ದೈ ಕಾಂ। ತಕ ಕಾಂತಾಚಿತ್ತವಶ್ಯಂ ವಿವಿಧನವಕಳಾಮೂರ್ತಿ ನೀಂ ಸತ್ಯ
ಮಲ್ತೇ ॥ ೧೬೯

ಎಂಬುದುಂ,

ತಾನೆ ಮನೋಜರಾಜ್ಯಪತಿ ತಾನೆ ವಿಟಾಗ್ರಣಿ ತಾನೆ ಕೋವಿದಂ ।
ತಾನೆ ವಯೋವಿಳಾಸ.....................................ಕಂ ॥
ತಾನೆ ವಿಳಾಸಿನೀಜನದ ಕೂಟದ ಜಾಣ್ಮೆಗೆ ತಾನೆ ಮೋಹನಂ ।
ತಾನೆನಿಪ್ಪಂದಹಂಕೃತಿ ಕರಂ ನೆಲಸಿರ್ದುದು ಕಾಂತಕಾಖ್ಯನೊಳ್ ॥ ೧೭೦

ಅಂತಾತಂಗೆ ನಿಷ್ಕಾರಣದಿನೆಂತಾನುಂ ಕಾಮೋದ್ದೀಪನವನೊಡರ್ಚಿಯಾ ದಿನಸಮಾನವನಿಂದಮೆಂತಾನುಂ ಕಳಿಪಿಸಿಕೊಂಡು ರಾಗಮಂಜರಿಯ ಮನೆಗೆ ಬಂದು ಮಗುಳ್ದು ಮಱುದಿವಸಂ,

ಲಲಿತಾಂಬರಮೊಂದಂ ಪೂ ।
ಗಳ ಮಾಲೆಯುಮನೊಳ್ಪುವೆತ್ತ ತಾಂಬೂಲಕಮುಂ ॥
ನಲಿದೆನ್ನ ಮನೆಯಿನುಯ್ದಂ ।
ಕೆಲಬರ ಚೇಟಿಕೆಯರೊಡನೆ ಬರಲನುನಯದಿಂ ॥ ೧೭೧

ಅಂತವಂ ಕೊಂಡು ಪೋಗಿ

ಅಟ್ಟಿದಳೊಲ್ದು ತನ್ನ ಮನದುತ್ಸವದಿಂ ಧರಣೀಶಪುತ್ರಿ ತಾ।
ನುಟ್ಟ ಸುವಸ್ತ್ರಮಂ ಕುಸುಮಮಾಲಿಕೆಯಂ ಪೊಸವೀಳೆಯಂಗಳಂ ॥
ಕೊಟ್ಟು ಬರಲ್ಕೆ ತನ್ನ ಸೆವ ಚೇಟಿಯರಂ ನಿನಗೀಸಿ ಕೊಂಡು ನೀಂ।
ನೆಟ್ಟನೆ ಕೂರ್ಪುದಾಕೆಗೆ ಮನಃಪ್ರಿಯರಿಂ ಪೆಜರಾರೊ ಕಾಂತಕಾ ॥ ೧೨೨

ಅದಲ್ಲದೆಯುಂ,

ಜ್ಞಾನಿಗಳಿಂದೆ ಕೇಳ್ದಱಿವೆನಾಂ ನಿಜಲಕ್ಷಣಮಂ ತದೀಯಧಾ ।
ತ್ರೀನರಪಾಲಕತ್ವಮನಿಶಂ ನೃಪನಂದನೆಯಂಗಸಂಗದಿಂ ॥
ತಾನಿದಿರ್ವ*ರ್ಪುದೆಂದು ಪದೆಪಿಂದಿದು ಸತ್ಯಮಿಳೇಶ್ವರಂಗೆ ಸಂ ।
ತಾನಮದಿಲ್ಲದಿರ್ಪ ಕುಱುಪಿಂಗಿದು ಕಾರಣಮಲ್ತೆ ಕಾಂತಕಾ ॥ ೧೨೩

ಎಂಬುದುಮವನಿಂತೆಂದಂ:—

ಶಂಬರಸೂದನನಾರ್ದ್ಯ ।
ದಂಬುಗಳ್ಸಾಸಿರಂಬೆನಲ್ ಪೂಣಿಸಿಯಾ ॥
ಪಿರ್ಗಂ ಬಿಡದೆಚ್ಚಪನೆನ್ನಂ ।
ನೀಂ ಬಲ್ಲಂತೆಸಗು ಕಾರ್ಯಮಂ ಕಮಳಾಕ್ಷೀ ॥ ೧೨೪

ಎಂದು ಮತ್ತಮಿಂತೆಂದಂ:—

ಎಲೆ ಕೆಳದಿ ನೃಪಸುತೆಯು ತಂ ।
ಬುಲಮಂ ನಾಳೆನಗೆ ತಂದು ಕೊಟ್ಟೆನ್ನಸುವಂ ॥
ನೆಲೆಗೊಳಪುದೆಂದೊಡಾನಾ ।
ಗಲಿ ಎಂದಲ್ಲಿಂ ತಳರ್ದ್ದು ಮನೆಗೆಯ್ತಂದೆಂ ॥ ೧೨೫

ಅಂತಾದಿನಂ ಮನೆಗೆ ಬಂದು ಮಱುದೆವಸಂ,

ಮಿಸುಪೆನ್ನ ತಂಬುಲಮನೊ ।
ಳ್ಪೆಸೆಯಲ್ ತಂದಿತ್ತು ನಿನ್ನ ತಂಬುಲಮಂ ಬೇ ॥
ಳ್ಪ ಸುವಸ್ತ್ರಮಂ ಕುಮಾರಿಗೆ ।
ಪೊಸತೆನೆ ಕರುಣಿಸುವುದಲ್ತೆ ಕಾಂತಕ ನಯದಿಂ ॥ ೧೨೬

ಎಂದೊಡವಂ ಬೇಳ್ಪ ಸುವಸ್ತ್ರಮಂ ತಂಬುಲಮಂ ಕೊಟ್ಟೆನ್ನಂ ಕಳಿಪೆ,

ಅವನೊಲ್ದಿತ್ತನುಪಮಸಕ ।
ಲವಸ್ತುವಂ ಕೊಂಡು ಬಿಸುಟು ತಂಬುಲವಂ ಸಂ ॥
ಭವಿಸಿತ್ತು ಮಿತ್ರಕಾರ್ಯಂ ।
ನವೀನಮೆಂಬಂತೆನುತ್ತೆ ಮನೆಗೆಯ್ತಂದೆಂ ॥ ೧೭೭

ಅಂತು ಬಂದು ಮಱುದಿವಸಂ

ಮದನದವಾಗ್ನಿ ಯೌವನವನಾಂತದೊಳರ್ಬಿಸೆ ಚಂದ್ರಿಕಾಹಿಮಂ ।
ವದನಸರೋಜಮಂ ಮುಸುಕೆ ತದ್ವಿರಹೋಗ್ರಮಹಾಂಧಕಾರಮು ॥
ನ್ಮದಕುಚಕೋಕಮಂ ಕವಿಯೆ ಸೈರಿಸಲಾರ್ಪಳೆ ಸೌಕುಮಾರ್ಯಸಂ ।
ಪದದ ಸರೋವರಂಬೊಲೆಸೆವಂಗನೆ ಪೇೞ್ ಮನವೊಲ್ದ ಕಾಂತಕಾ ॥

ಎಂದು ಮತ್ತಂ

ನಳರಾಜಂ ದಮಯಂತಿಯಂ ಪಡೆದನಿಂ ದುಷ್ಯಂತಭೂಪಂ ಶಕುಂ । ೧೭೯
ತಳೆಯಂ ಭಾವಿಸಿ ಚಂದ್ರಚೂಡನೊಲವಿಂ ಕಾದಂಬರೀದೇವಿಯಂ ॥
ನಲವಿಂ ಪೊಂದು ನೆಗಳ್ದ ಮಾದ್ರಿಯನಲಂಪಿಂ ಕೂಡಿದಂತೊಲ್ದ ನಿ ।
ಶ್ಚಲದಿಂ ಕಾಂತಕ ಕೂಡು ನೀಂ ಮೆಱೆಯುತಿರ್ಪಂ ಬಾಲಿಕಾದೇವಿಯಂ ॥

ಎಂದೊಡನುವನೆನ್ನೊಳಿಂತೆಂದಂ:—

ಕಮಳಿನಿಯಂ ದಿನಪತಿ ತ ।
ನ್ನ ಮರೀಚಿಯಿನೊಲ್ದಲರ್ಚದಲ್ಲದೆ ಮುಕರಂ ॥
ದಮನಿೞಲುಂಟೆ ಮತ್ತ ।
ಭ್ರಮರಕ್ಕಿದು [ಸಹಜಮಲ್ತೆ] ಕಮಲದಳಾಕ್ಷೀ ॥ ೧೮೦

ಎಂದು ಮತ್ತಂ

ಕಾರಣಮಿಲ್ಲದೆ ಕಾರ್ಯವಿ ।
ಚಾರಂ ಸಿದ್ಧಿಸದು ಮನ್ಮನಃಪ್ರೀತಿಗೆ ನೀಂ ॥
ಕಾರಣಮಪ್ಪುದಱಿಂ ತ ।
ನ್ನಾರಿಯ ಕೂಟಮನೊಡರ್ಚುವುದು ಪಡೆದೆನ್ನೊಳ್ ॥ ೧೮೧

ಅದಲ್ಲದೆಯುಂ

ತೊಳಗುವ ಕನ್ಯಾಂತಃಪುರ ।
ದೊಳಗಿರ್ಪಳನೆಂತು ಭೇದಿಸಲ್ಬರ್ಕುಂ ಕೋ ॥

ಮಳೆಯುನುಱೆ ಪೇೞ್ ಸೃಗಾಳಿಕೆ ।
ತ್ರಿಳವಂತೆನಗೆಂದು ಕಾಂತಕಂ ಬೆಸಗೊಂಡಂ ॥ ೨೮೨

ಅಂತು ಬೆಸಗೊಳಲಾತಂಗಿಂತೆಂದಂ:—

ಅವನಂ ಬಲ್ಲೆಂ ಕಾಂತಕ ।
ನವೀನವೆನೆ ಚರ್ಮರತ್ನಮಂ ಕಳ್ದು ಕಳಾ ॥
ಧವನಂ ಸಮಸ್ತ ಚಾರ್ಯರ್ ।
ಪ್ರವೀಣನಂ ಲೋಕಜನದೊಳತಿಸಾಹಸಿಗಂ ॥ ೨೮೩

ಆಕಳ್ಳನ ಸಮೀಪಕ್ಕೆ ಪೋಗಿ,

ನಿನ್ನಂ ಬಿಡಿಸಿದಪೆಂ ನಂ ।
ಬೆನ್ನಂ ಸಂದೇಹಮಿಲ್ಲವೆಂದೊಲವಿಂದಂ ॥
ನನ್ನಿಯನೀಯೆ ಬಱಿಕ್ಕವ ।
ನಿನ್ನಿನ್ನಯ ಕಾರ್ಯಸಿದ್ಧಿಯಕ್ಕುಮಮೋಘಂ ॥ ೨೮೪

ಅದೆಂತೆನೆ: —

ಕಾರಾನಿಲಯುಕ್ಕರಮನೆ ।
ಸಾರೆಯುದಂ ಕನ್ನವಿಕ್ಕಿಸುವಮವನಿಂ ಮ ॥
ತ್ತಾರಱಿಯದವೋಲಿಕ್ಕುವ ।
ವೋರಣದಿಂಗವನ ಕಾಲ್ಗೆ ಬಲ್ಸಂಕಲೆಯುಂ ॥ ೨೮೫

ಫಣಿಮುಖಮಂ ಕೊಂಡೊಡವಂ ।
ಫಣಿರಾಜಸಮಸ್ತಲೋಕಪರ್ಯಂತಂ ಮೆ ॥
ಯ್ದಣಿಯದೆ ಕನ್ನವನಿಕ್ಕುವ ।
ನಣಕವಿದಲ್ತಱಿವೆನವನ ಬಲ್ಪಿನ ಹವಣಂ ॥ ೨೮೬

ಅಂತವನಂ ಕನ್ನವಿಕ್ಕಲ್ ಬಱಿಯುಂ

ಯುವತಿಯು ಸಾರಸ್ಗೆ ಸುರಂ ।
ಗವದೊಳಗಣಿನೆಯ್ದೆ ಪಲವು ದಿವಸಂ ಚಿತ್ತೋ ॥
ದ್ಭವಕೇಳೀಸೌಖ್ಯಂ ಸಂ ।
ಭವಿಸಿಕುಗುಂ ನಿನಗೆ ಕೇಳ ಕಾಂತಕ ಸತ್ಯಂ ॥ ೨೮೭

ಎಂದಾಂ ಪೇೞಲವಂ ಗೃಹದ್ವಾರದೊಳ್ ಬಂದಿರ್ಪನೆಂದು ಪೇೞ್ದು ಸ್ವಗಾಳಿಕೆ ಮತ್ತಮಿಂತೆಂದಳ್:—

ಕನ್ನವನಿಕ್ಕಿದ ಬಱೀಕಂ ।
ನಿನ್ನಂ ಕೊಲ್ವಂ ದುರಾತ್ಮಕಂ ಕಾಂತಕನೆಂ ॥
ದೆನ್ನೊಡನೆ ಪೇೞ್ದಳಾಕೆ ಲ ।
ಸನ್ನೀತಿಯೊಳಿರ್ಪುದೆಂದು ತನ್ನನುಯದಿಂ ॥ ೨೪೮

ಎಂದೊಡಾನಂತೆಗೆಯ್ವೆನೆಂದು ಕಾಂತಕನಂ ಬರಿಸೆಂಬುದುಮವಳ್ ಕರೆಯಲವಂ ಬಂದು

ಆಯಾಸಂಬಡಿಸಿದನ ।
ನ್ಯಾಯಂ ನಿನ್ನಂ ನೃಪಂ ಮಗುೞ್ದಾತಂಗ ॥
ತ್ಯಾಯತದಿಂ ಬಿನ್ನವಿಸಿಯು ।
ಪಾಯದೆ ನಾಂ ನಿನ್ನ ಬಿಡಿಸುವೆಂ ನಾಬೆನ್ನಂ ॥ ೨೪೯

ಎಂದು ಪ್ರತ್ಯಯಮಂ ಮಾಡಿಯನಂತರಂ ಸುರಂಗದ ವೃತ್ತಾಂತಮಂ ಪೇೞ್ದೊಡಾನದಕೊರ್ಡಂಬಡಲವನೆನ್ನ ಸಂಕಲೆಯಂ ಕಡಿಯಲ್

ಆನಿದೊರ್ಳಗಣಿನುರುಭುಜ ।
ಗಾನನದಿಂ ಕನ್ನವಿಕ್ಕಿ ಕನ್ಯಾಭವನ ॥
ಕ್ಕಾನಂದದಿಂ ಮದೀಯಾ ।
ಸ್ಥಾನಮನೆಯ್ದುವವೊಲೆಯ್ದಿದೆಂ ನಿರ್ಭಯದಿಂ ॥ ೨೫೦

ಸ್ಫಟಿಕದ ಕುಟ್ಟಿಮಂ ಶಶಿಶಿಲಾಮಯಭಿತ್ತಿ ನವೀನವಜ್ರಸಂ ।
ಘಟಿತನಿಕಾಮತೋರಣತತಿ ವಿದ್ರುಮವಂದನಮಾಲೆ ಚಂದ್ರಿಕಾ ॥
ಪಟಲಸದೃಗ್ವಿತಾನರುಚಿ ಮೌಕ್ತಿಕಪ್ರತ್ರಿಕೆ ಶಕ್ರಚಾಪಸಂ ।
ಕಟಶಬಲಪ್ರಕಾಶದೊದವಂ ತಳೆಯಲ್ ಮೆಱೆಗುಂ ನೃಪಾಲಯಂ ॥ ೨೫೧

ಅದಱೊಳ್

ಕುಂಜರದಂತದಿಂದೆಸೆವ ಮಂಚದೊಳೊಪ್ಪುವ ಹಂಸತೂಲತ ।
ಲ್ಪಂ ಜಿತಚಂದ್ರಿಕಾಪಟಲಮೊಂದೆನೆ ಚಿತ್ರವಿಧಾನದೇೞ್ಗೆಯಿಂ ॥
ರಂಜಿಸಿ ಶಂಖದಿಂ ತೊಡೆದ ಭಿತ್ತಿ ಸುಮೌಕ್ತಿಕದರ್ಪಣಂಬೊಲೊ ।
ಳ್ಪಂ ಜನವಕ್ತ್ರಮಂ ಬೆಳಗಲೇಂ ಮೆಱೆದಿರ್ದುದೊ ಸಜ್ಜೆಯಾಲಯಂ ॥

ಆಸಜ್ಜೆಯ ಮನೆಯೊಳ್ ಮಂಚದ ಮೇಲೆ,

ಎಡಗೆಯ್ಯಂ ತಲೆಗಿಂಬಿನೊಳ್ ಮಡಗಿ ವೃತ್ತಂಬೆತ್ತು ಕೆಂಪಪ್ಪ ನು ।
ಣ್ಮಡನುಂ ವಾಮಪದಪ್ರಗುಲ್ಫದೆಡೆಯೊಳ್ ಸ್ಯೆತಿಟ್ಟು ಹಸ್ತಾಬ್ಜಮಂ ॥
ಕಡುಚೆಲ್ವಪ್ಪ ನಿತಂಬದೊಳ್ ನಿಱಿಸಿ ಕಿಂಚಿತ್ಶ್ವಾಸದಿಂ ಕಂಠದೊಳ್ ।
ತೊಡವಲ್ಲಾಡೆ ಮೃದೂರುತಲ್ಪದೆಡೆಯೊಳ್ ನಿದ್ರಾಂಗಿ ಕಣ್ಗೊಪ್ಪಿದಳ್ ॥

ಮಿಸುಗುವ ಚೀನಪಟಂ ಲೇ ।
ಪಿಸಿದಂದದಿನೊಪ್ಪೆ ತನ್ನ ತನುಲತೆಯೊಳ್ ಕ ॥
ಣ್ಗೆಸೆದಳ್ ದುಗ್ಧಾಂಬುಧಿಫೇ ।
ನಸಹಸ್ರಂ ತುಱುಗಿದಿಂದಿರಾಮೂರ್ತಿಯ ಪೋಲ್ ॥ ೮೪

ಚಂದ್ರಿಕೆಯೊಳ್ವಾಸಿಕೆಯೊಳ್ ।
ಚಂದ್ರಕಳಾಕಾಂತೆ ಶಯನದಿಂದೆಸೆದಳೆನಲ್ ॥
ಚಂದ್ರಾನನೆ ಶಯ್ಯಾತಳ ।
ಸಾಂದ್ರದಿನೆಸೆದಿರ್ದಳಮಳನಿದ್ರಾಭರದಿಂ ॥ ೮೫

ಮತ್ತಮಲಕ್ತಕರಸದಿಂದಡಿಯೂಡಿದಂಘ್ರಿನಖದೀಪ್ತಿಲಾವಣ್ಯರಸಮೆಡೆ ವಿಡದೆ ಕಡೆಗೋಡಿವರಿವಂತಿರೆ ಕಿಂಚಿದ್ವಳಿತವಿಳಾಸದಿಂದೆಸೆವ ದಕ್ಷಿಣಜಾನುಪ್ರದೇಶಮುಂ, ಆಕಾಶಪರಿಕಲ್ಪಮೆಂಬ ಕವಿಸಮಯಪ್ರಸಿದ್ಧಿಯಂ ಪಡೆದೆನಿಂದು ಪಾತಾಳಪರಿಲಗ್ನಮೆಂಬಪವೆಗಾಸ್ಪದಮಪ್ಪೆನೆಂಬಂತೆಯನಲ್ಪತಲ್ಪದೊಳಲ್ದಿ ಮಧ್ಯಪ್ರದೇಶಮುಂ, ನಿತಂಬವಲ್ಮೀಕಮಂ ಪುಗಲೆಳಸಿದ ಫಣಾಧರಫಣಾಮಣಿಗಳೆಂಬಂತೆಸೆವ ಸೆಳ್ಳುಗುರ ಕಾಂತಿ ಬಳ್ಳಿವರಿಯೆ ನೀಡಿದ ದಕ್ಷಿಣಬಾಹುಲತೆಯುಂ, ಗಂಡಮಂಡಲಪೂರ್ಣಶಶಿಗೆ ಪರಿವೇಷಮಾದಂತಿರ್ದ ದಕ್ಷಿಣಕರ್ಣಪತ್ರಮುಂ, ವಾಮಕುಚಪೀಠದೊಳ್ ಚೀನಪಟಚಂದನಚರ್ಚೆಯಿಂ ರಂಜಿಸುವಪಸವ್ಯಕುಚಲಿಂಗಮುಂ, ಮುಖಪದ್ಮದೊಳ್ ಗಱಿವೊಯ್ವ ಪಱಮೆಯ ಮಱಿಗಳಂತರಮೆ ಅರಲ್ದ ಕಣ್ಮಲರ್ಗಳುಂ, ಅರುಣಸರಸಿರುಹಚುಂಬನಕ್ಕೆಳಸಿದ ತರಣಿಮಂಡಲದಂತೆ ಎಡಗಿವಿಯೊಳ್ ಕಡುಚೆಲ್ವಿಂದೆಸೆವ ರತ್ನದೋಲೆಯುಂ, ನಾಗಕನ್ಯಕಾನಿರ್ಮುಕ್ತನಿರ್ಮೋಕದಂತಿರ್ಪ ನಿರ್ಮಲವಸ್ತ್ರಾಭರಣಮುಂ. ಸುಧಾಬ್ಧಿತುಷಾರಮಂ ತಳೆದ ಸುಧಾ

ಸೂತಿಯುಂತಿರ್ಪ ಮುಖಮೃಗಾಂಕಮಂಡಲಮುಂ, ನವರತ್ನಮಯತ್ರಿಸರಹಾರಮನೋರಣದಿಂದಲ್ಲಾಡಿಸುವ ಮೆಲ್ಲುಸಿರ್ಗಳುಮಂತಿರಮಣೀಯಮಾದುವು. ಅಂತುಮಲ್ಲದೆಯುಂ,

ಸುರುಚಿರಮಾದ ದಂತವಸನಂ ನಸುಗೆತ್ತುವಿನಂ ಸಿತಾಕ್ಷಿ ನೀ ।
ಳ್ದರೆಮುಗಿದಿರ್ಪನಂ ಕದಪು ನುಣ್ಬೊಮರೋಳಿಮನಾಂಪಿನಂ ಕುಚಾಂ ॥
ತರದ ನಿಜೋತ್ತರೀಯವಸನಂ ತೊಲಗಿರ್ಪನಮಲ್ಪಮಧ್ಯಮು ।
ಬ್ಬಿರೆ ಮೃದುತಲ್ಪದೊಳ್ ಮಱೆದಳಂಗನೆ ಮಂಗಳಮಾದ ನಿದ್ರೆಯಿಂ ॥

ದುಗ್ಧಾಂಬುಧಿಯೊಳ್ ಜನಿಸುವ ।
ಮುಗ್ಧೇಂದುಕಳಾವಿಳಾಸದಂತನುನಯದಿಂ ॥
ದಿಗ್ಧವಳತತಲ್ಪದೊಳ್ ವಿ ।
ದಗ್ಧಾಂಗನೆ ಮೆಱೆದಳೆಸೆವ ನಿದ್ರಾಭರದಿಂ ॥ ೧೯೩

ಕೆಳದಿಯರೆಲ್ಲರ ತಂತ ।
ಮ್ಮಳವಡಿಕೆಯ ಠಾವಿನಲ್ಲಿ ಕಲ್ಪಲತಾಕೋ ॥
ಮಳೆವೊಲ್ ಮೃದುತರಶಯ್ಯಾ ।
ತಳದೊಳ್ ಮೆಱೆದಿರ್ಪರೆನ್ನ ಕಣ್ ಸೋಲ್ವಿನೆಗಂ ॥ ೧೯೪

ಅಂತಿರ್ದ ಕಾಂತೆಯುಂ ಕಂಡು

ಇಂದೆನ್ನಕ್ಷಿಗೆ ಪರ್ವಮಾಯ್ತು ಮದನಶ್ರೀರಾಜ್ಯಮುಂ ಕಂಡೆನಾ ।
ನಂದಂ ಮಿಕ್ಕುದು ಧೂಪವಾಸಿತಲಸತ್ಕನ್ಯಾಲಯಂಬೊಕ್ಕನೀ ॥
ಮಂದಶ್ವಾಸೆಯ ನಿದ್ರೆಯಂ ತೊಲಗಿಸಲ್ಕೇನೆಂಬಳೋ ಎನ್ನನೆಂ ।
ಬೊಂದುದ್ವೇಗದೊಳಿರ್ದನೊಂದು ನಿಮಿಷಂ ಸೌದಾಮಣಿಸ್ತಂಭಮಂ ॥

ಅಂತವಳಂ ಕಂಡು ಪರವಶನಾದಂತೆಯುಂ, ರತಿಸಮಾಧಿಯಂ ಪಡೆದಂತೆಯುಂ, ಸ್ವರ್ಗಲೋಕಂಬೊಕ್ಕಂತೆಯುಂ, ಕಾಮನಿಧಾನಮಂ ಕಂಡಂತೆಯುಂ, ಸುಖಸಾಗರದೊಳ್ ಮುಳುಂಗಿದಂತೆಯುಂ, ಕುಸುಮಶರದಿಂ ಬದ್ಧನಾದಂತೆಯುಂ, ಮನಮುಂ ಮಱುಗೊಟ್ಟಂತೆಯುಂ ಇದುರ್ ಎಂತಾನುಂ ತಿಳಿದು ಕೆಲದ ಭಿತ್ತಿಭಾಗಮಂ ನೋಲ್ಪನ್ನೆಗಂ

ತಳತಳಿಸಿ ಪೊಳೆವ ನಿರ್ಮಳ ।
ಫಳಕಂ ನೇಱಿದೊರ್ಡಂತದಂ ತೆಗೆದದ್ಧಱೊಳ್ ॥

ಬಳಪದಿನಾಗಳ್ ಬರೆದೆಂ ।
ಲಳನೆಯ ರೂಪಾತಿಶಯಮುಮನೆನ್ನಱಿವನಿತಂ ॥ ೩೦೦

ಅದೆಂತೆನೆ—

ತಳಿರಡಿಯಂ ನಯಂಬಡೆದ ಜಂಘೆಯನೊಳ್ಪಡೆದೂರುವಂ ಮೃದೂ ।
ಜ್ಜ್ವಳಕಟಿಯಂ ಸುರುಳ್ದ ಸುಜಾನಾಭಿಯನೊಳ್ನಡುವಂ ಕಳಾಪಮಂ ॥
ಕಳಶಕುಚಂಗಳಂ ಭುಜಲತಾದ್ವಯಮಂ ಶಶಿಬಿಂಬವಕ್ತ್ರಮಂ ॥
ಡಳಮನಲಂಪಿನಿಂ ಬರೆದೆನಂಗಜಚಿತ್ರಕನೋಜನಾದಪೋಲ್ ॥ ೩೦೧

ಅದು ಕುಸುಮಾಸ್ತ್ರಭಾಳಲಿಖಿತಂ ಶಶಿಯೇೞ್ಗೆಯ ಸೀಮೆ ಚೈತ್ರನ ।
ಭ್ಯುದಯದ ಮಂತ್ರವೃತ್ತಿ ಮಳಯಾನಿಳನೊಪ್ಪುವ ಜೀವಮೀಕ್ಷಿಸ ॥
ಲ್ಕದು ರತಿಯೋಲೆಭಾಗ್ಯಮದು ಮೋಹನ ಮೂರ್ತಿಯೆನಲ್ಕೆ ರಂಜಿಸಿ ।
ರ್ದುದು ಬರೆದಿರ್ದ ಚಿತ್ರಮೆನಗಂ ಬೆಱಗಪ್ಪಿನೆಗಂ ಧರಾಧಿಪಾ ॥ ೩೦೨

ಅದಲ್ಲದೆಯುಂ,

ಉರುತಗಮಂಚದೊಳ್ ಮಲಗಿಪಂಗನೆಯಾಕೃತಿಯಂ ವಿಳಾಸದಿಂ ।
ಬರೆದು ತದಂಘ್ರಿಪಲ್ಲವಸಮೀಪದೊಳಂಗಜಕೇಳಿಲಾಲಸೆಯಿಂ ॥
ಕರಕಮಳಂಗಳಂ ಮುಗಿದು ಕಾಲ್ಗೆಱಗಿರ್ಪ ಮದೀಯಭಾವಮಂ ।
ನಿರವಿಸಿಯಾರ್ಯೆಯೊಂದನೊಲವಿಂ ಬರೆದೆಂ ನೃಪರೂಪಚಂದ್ರಮಾ ॥ ೩೦೩

ಅದೆಂತೆನೆ—

॥ ಆರ್ಯೆ ॥

"ತ್ವಾಮಯಮಾಬದ್ಧಾಂಜಲಿ ದಾಸಜನಸ್ತ್ವಿಮಮರ್ಥಮರ್ಥಯತೇ ।
ಸ್ವಪಿಹಿ ಮಯಾ ಸಹ ಸುರತವ್ಯತಿಕರಖಿನ್ನೈವ ಮಾ ಮೈವಂ ॥"

[ಟೀಕೆ]

ನಿನ್ನಯ ದಾಸಂ ಕೈಮುಗ್ಗಿ ।
ದುನ್ನತಿಯಿಂ ಪ್ರಾರ್ಥಿಸುವನಿದಂ ಸತಿ ನೀಂ ಕೇಳ್ ॥
ನಿನ್ನೊಡನೆ ಸುರತಕಲಹದ ।
ಖಿನ್ನತೆಯಿಂಗೊಱಗಿ ಸುಖದೊಳೊಪ್ಪುವ ತೆಱನಂ ॥ ೩೦೪

ಎಂಬಿದಂ ಬರೆದನಂತರಂ

ಅಲ್ಲಿರ್ದ ಪೆಟ್ಟಿಯೊಳಗಣ ।
ಸಲ್ಲಲಿತಕ್ರಮುಕಪತ್ರಕರ್ಪೂರವುಮಂ ॥
ಬಲ್ಲನಿತಂ ಕೊಂಡು ಮುದಂ ।
ಪಲ್ಲವಿಸಲ್ ಸವಿದೆನಧಿಕರಾಗಂ ಮೊಱೆಯುಲ್ ॥ ೩೦೫

ಅಂತು ಸವಿದು,

ಪೊಳೆವ ಸುಧಾಭಿತ್ತಿಯೊಳ ।
ಗ್ಗಳವಾಗಲ್ ಪದ್ಮರಾಗವರ್ಣದ ಪೊಸತಂ ॥
ಬುಲದ ರಸವಂ ವಿಳಾಸದಿ ।
ನಳವಡಲುಗುೞ್ದೆಂ* ರಥಾಂಗರೂಪಪ್ಪಿನೆಗಂ ॥ ೩೦೬

ಬೞಿಕಲ್ಲಿಂ ಪೊಱಮಟ್ಟು ಪೂರ್ವಮಾರ್ಗದಿಂ ಕಾರಾಗೃಹಕ್ಕೆ ಬರಲೆನ್ನಂ ಕಾಂತಕಂ ಕಂಡು ಕನ್ನಕ್ಕೆನ್ನಂ ಬಲಿಗೆಯ್ಯಲೆಂದನುಮಾನಿಸೆ,

ತನ್ನೊಂದಲ್ಪಸುಖಕ್ಕೆ ಕೂರ್ತರ್ ಪರರಂ ನಿಷ್ಕಾರಣಂ ಕೊಲ್ವನಂ ।
ಮುನ್ನಂ ಕೊಂದೊಡೆ ದೋಷಮಿಲ್ಲೆನಿಪ ನಾನಾನೀತಿಯಂ ಬಲ್ಲೆನಿಂ ॥
ದೆನ್ನಂ ಕೈತವದಿಂ ಕೊಲಲ್ ಬಗೆದನೀಕ್ರೂರಾತ್ಮನೆಂದಾಕ್ಷಣಂ ।
ಛಿನ್ನಾಂಗಾವಯವಂಗಳಾಗೆ ಪೊಡೆದೆಂ ತತ್ಕಾಂತಕಾಭಿಖ್ಯನಂ ॥ ೩೦೭

ತನ್ನಸಿಯುಂ ಕೊಂಡಾರ್ಪಿಂ ।
ಕೆನ್ನಂ ತಱಿದುದನೆ ನೋಡಿ ಕಾರಾಗೃಹದೊಳ್ ॥
ಮುನ್ನಿನ ತಳವಾಱಂ ಕಡು ।
ಬನ್ನದೊಳಿರಲವನೊಳಾಗಳಾನಿಂತೆಂದೆಂ ॥ ೩೦೮

ಎನ್ನಿಂ ಕನ್ನವನಿಕ್ಕಿಸಿ ।
ಕನ್ನಿಕೆಯೊಡನಿರ್ಪೆನೆಂದು ತಾನಱಿದಂ ನೀಂ ॥
ಚೆನ್ನಾಗಱಿಪಿದೊಡರಸಂ ।
ಗೆನ್ನಿಂ ನಿನಗಕ್ಕುಮುೞಿವುಮವನಿಪನೊಲವುಂ ॥ ೩೦೯

ಎಂದು ಪೇೞ್ದಲ್ಲಿಂ ಸೃಗಾಳಿಕೆವೆರಸು ಪೊಱಮಡುವಾಗಳ್

ವಿಹಿತಾಸ್ಥಾನವೆನಿಪ್ಪ ವಿಷ್ಣುಪದವಂ ಬಿಟ್ಟೋವೋರ್ದಲ್ ಮಧ್ಯಗಂ ।
ಮಿಹಿರಂ ಕ್ಷೀಣವಯಸ್ಕನಾಗಿಯು ಮಿದ್ೀನಾನಾರ್ಯದಿಂ ವಾರುಣೀ ॥

ಸ್ಪೃಹೆಯುಂ ಮಾಡಿದನೆಂದು ನಾಣ್ಚಿ ತಲೆವಾಗುತ್ತಿರ್ದುದೋ ಪದ್ಮಿನೀ ।
ಮಹಿಳಾಸಂಕುಳಮೆಂಬಿನಂ ದಿನಕರಂ ಪೊಕ್ಕಂ ಪ್ರತೀಚ್ಯಬ್ಧಿಯಂ॥ ೩೧೦

ಅಂತು

ಇನನಸ್ತಾದ್ರಿಯನೆಯ್ದಿ ।
ರ್ದನನೆಂಬುದೇಕಚಕ್ರಿಯುದೆಯ್ದಿ ನಲಿದು ಜಗಲ್ಲೋ ॥
ಚನಬಿಂಬಂ ಪದೆಪಿಂದಂ-।
ಜನಸಂಗದಿನೊಳ್ಪುವೆತ್ತುದೆನ್ನದೆ ಲೋಕಂ ॥ ೩೧೧

ಅಂತು ಸೂರ್ಯಾಸ್ತಮಾನವಾಗಲೊಡಂ

ದೆಸೆಯಂ ಬಾಸಣಿಸಿರ್ಪ ಕತ್ತಲೆಯೊಳಾಂ ಬರ್ಪನ್ನೆಗಂ ನಾಗರೀ ।
ಕಸಮೂಹಂ ತೊಜಲುತ್ತೆ ಮುಂದೆ ಸುಖಿವೆನ್ನಂ ಕಂಡು ಪೊಯ್ವೊಯ್ದು
ಬಂ ॥ ಧಿಸಲೆಂದೆಯ್ತರೆ ಕಂಡಿದಿರ್ದೆದವರ್ಗಿರ್ಕೆಯ್ಗಳಂ ನೀಡಿ ಬಂ ।
ಧಿಸಿಮೆಂಬನ್ನೆಗಮಾಸ್ಯಗಾಳಿಕೆ ಸಮಂತೆಯ್ತಂದಳತ್ಯಾರ್ತದಿಂ ॥ ೩೧೨

ಅಂತು ಬಂದು

ಕಡುಜರದಿಂ ಕರಂ ನವೆದು ವಾಯುವಿಕಾರದೊಳೆಚ್ಚಿ ಕಂಡ ಕಂ ।
ಡೆಡೆಗೆ ನಿಜೇಚ್ಛೆಯಿಂ ಪರಿಯಲಿರ್ಕರವಂ ಮಿಗೆ ಕಟ್ಟಿ ಕೋಣೆಯೊಳ್ ॥
ಮಡಗಿಡಲಿಂದು ಮಾಣ್ದು ತೆಱದಿಂದಿರಲಾಂ ಬಿಡೆ ಮತ್ತೆ ವಾಯು ಬಂ ।
ದಡಸಿತು ನೋಡಲಾಂ ಒಡವೆ ಮತ್ತುತನಂ ಪಿಡಿದೀವುದೆಲ್ಲರುಂ ॥ ೩೧೩

ಎಂಬುದುಂ,

ಎಲೆ ವೃದ್ಧೆಯುಮಂ ಮರುಳ್ಗೆ ।
ಸಲೆ ನೀಂ ಮರುಳಲ್ತೆ ಯುವನನಾರ್ ಪಿಡಿವರ್ ನೀ ॥
ನೊಲಿದತ್ತ ಪೋಗೆನಲ್ ಕ ।
ಟ್ಟಚುಸಿದೆನಾಂ ವಾಯುದೇವರಿಂದಂತಾಗಳ್ ॥ ೩೧೪

ಅಂತಾದುರ್ಘಟಮಂ ಕಱದು ರಾಗಮಂಜರಿಯ ಮನೆಗೆ ಬಂದು

ಪಿರಿದಾಲಿಂಗಿಸಿದಂ ನಲಿ ।
ದು ರಾಗಮಂಜರಿಯನಾತಳೋದರಿಯೆನ್ನೊಳ್ ॥
ಪರಿರಂಭಸುಖದಿನಿರಲೊ ।
ರ್ಬರೊರ್ಬರಂ ಪೊರ್ದಿ ಕಳೆದೆನಂದಿನ ದಿನಮಂ ॥ ೩೧೫

ಅನ್ನೆಗಂ,

ರವಿ ಶಶಿಯಂತೆ ತಣ್ಗದಿರ್ಗಳಿಯುದ್ದಯಾದ್ರಿಯೊಳುಣ್ಮೆ ಹಸ್ತಪ ।
ಲ್ಲವದಿನೊಱಲ್ದು ಸಾಧುಜನಮರ್ಘ್ಯಮ-ನೆತ್ತೆ ಸರೋಜಷಂಡಮುಂ ॥
ದವಿರಳಪುಷ್ಪತಸ್ತಿತಿಯಿನೊಪ್ಪೆ ಜಗಜ್ಜನನೇತ್ರಪುತ್ರಿಕೋ ।
ತ್ಸವಫಲಮಾಗಲೇನುದಯಮಾದನೊ ಪಂಕಜಜೀವಿತೇಶ್ವರಂ ॥ ೩೧೬

ಅಂತು ಸೂರ್ಯೋದಯಮಾಗಲೊಡಂ ಧನಮಿತ್ರನ ಮನೆಗೆ ಪೋಗಲಾತನೆನ್ನಂ ಕಂಡು

ಇಂದಸು ತಾಂಬಿತೆನ್ನ ವಯಮಂಗಳೊಳಿಂದೆನಗೊಪ್ಪವೆತ್ತ ಕಣ್ ।
ಬಂದುವು ನೋಡಲಿಂದೆನಗನೇಕಮಹಾವ್ರತಸಿದ್ಧಿ ಸಾಧ್ಯಮಾ ॥
ಯ್ತೆಂದನುರಾಗದಿಂ ಪುಳಕಮುಣ್ಮಿವಿನಂ ಧನಮಿತ್ರನಾಕ್ಷಣಂ ।
ಬಂದವನರ್ದಪ್ಪಿ ಮನ್ನಿಸಿದನೆನ್ನನತೀವ ಮನಃಪ್ರಮೋದದಿಂ ॥ ೩೧೭

ಅಂತು ಮನ್ನಿಸಲಾಧನಮಿತ್ರನ ಮನೆಯೊಳ್ ಸುಖದಿನಿರ್ಪನಮೊಂದು ದಿನಂ,

ಲೀಲೆಯ ರಾಜ್ಯಮಂ ನಿಜಶರೀರಮನೊಲ್ವೊಡೆ ತನ್ನ ಪುತ್ರಿಯುಂ ।
ಬಾಲಿಕೆಯಂ ಮನೋಮುದದಿನೀವುದು ಕೂರ್ತೆನಗಲ್ಲದಂದು ಕಾ ॥
ಲಾಲಯದತ್ತಲೆಯ್ದಿಸುವೆನೆಂದತಿಗರ್ವಿತಚಂಡವರ್ಮನಂ ।
ದೋಲೆಯನಂಗಭೂಪತಿಗೆ ಭೀತಿ ಮಿಗಲ್ ಮುಳಿದಾತನಟ್ಟಿದಂ ॥ ೩೧೮

ಅಂತು ಚಂಡವರ್ಮಂ ಸಿಂಹವರ್ಮಂಗೆ ದೂತನಂ ಕಳಿಪಲದರ್ಕೆ ಸಿಂಹವರ್ಮಂ ಕನಲ್ದು

ಕುಡೆನೆನ್ನ ತನೂಜೆಯನಾ ।
ರ್ಪೊಡೆ ಯುದ್ಧಕ್ಕೆತ್ತಿ ಚಂಡವರ್ಮಂ ತಾಂ ಬಂ ॥
ದೊಡೆ ನೋೞ್ಪೆನೆಂದು ಚರನಂ ।
ಪೆಡದಲೆಯಂ ಪಿಡಿದು ನೂಂಕಿಸಿದನವನೀಶಂ ॥ ೩೧೯

ಅಂತು ದೂತನಂ ನೂಂಕಿ,

ತನಗನುಕೂಲಮಪ್ಪಖಿಳಭೂಪತಿಗಳ್ಗೆ ಸುಪೃತ್ಪ್ರಸಿದ್ಧನೊ ।
ಲ್ದನುನಯದಿಂದನೇಕಮಣಿಭೂಷಣಕಾಂಚನದಿವ್ಯವಸ್ತ್ರಮಾ ॥

ಹನವನಲಂಪಿನಿಂ ಕಳಿಪಿ ತತ್ಸಮಯಕ್ಕತಿಶೀಘ್ರಮಾರ್ಗದಿಂ ।
ಮನದೊಲವಿಂದೆ ಬರ್ಪುದೆನುತೋಲೆಯನಟ್ಟಿದನಂಗಭೂಭುಜಂ ॥ ೩೨೦

ಅಂತು ತನ್ನ ಮಿತ್ರಕ್ಷತ್ರಿಯಗೋತ್ರಕ್ಕೆ ಪತ್ರಮಂ ಕಳಿಪಲತ್ತಲ್ ತನ್ನಿಂದವನೂನಿತನಾದ ದೂತಂ ತನಗಾದ ಮಾನಹಾನಿಯುಮಂ ಚಂಡವರ್ಮಂಗೆ ಪೋಗಿ ಪೇೞೆ

ಗಿರಿಯುಮಂ ನುಂಗುವ ತೆರೆಯುಮಂ ತಿಱುವ ಧಾತ್ರೀಭಾಗಮುಮಂ ಪೋೞ್ವ ಸಾ॥
ಗರಮುಮಂ ತುೞ್ಕುವ ಚಾತುರಂಗಬಲದಿಂ ಸಾರಂಭಮುಮಂ ತಾಳ್ದಿ ನಿ ॥
ರ್ಭರದೋರ್ದರ್ಪದ ಚಂಡವರ್ಮನಬಲಾಸಂವಾಂಛೆಯಿಂದಂಗಭೂ ।
ವರನಂ ಮುತ್ತುವೆನೆಂದು ಬಂದನವಱಿಂ ಚಂಪಾಪುರಕ್ಕಾಕ್ಷಣಂ ॥ ೩೨೧

ಅಂತು ಬಂದು

ಪಱಿದುಬಿವಾಯ್ವೊಲ್ ಸಕಲಸೈನ್ಯಯುತಂ ಛಲಿ ಚಂಡವರ್ಮನಾ ।
ಗಳೆ ಮುಳಿದಂಗಭೂಪತಿಯು ಸತ್ವಮನೊರ್ಮೆಯೆ ಸೂಱೆಗೊಂಡು ಕಾ ॥
ಲ್ಗಳೊಳತಿಕೋಪದಿಂ ಪಿರಿಯ ಸಂಕಲೆಯುಮಂ ಮಿಗೆ ಸಾರ್ಚಿ ತನ್ನ ದೋ ।
ರ್ಬಲದವಲೇಪದಿಂ ಮದುವೆ ಮುಜ್ಜಗನಂ ತಳೆದಿರ್ದನಾಖಳಂ ॥ ೩೨೨

ಅಂತು ಚಂಡವರ್ಮನಂಗರಾಜನಂ ಭಂಗಿತನಂ ಮಾಡಿ ಮಱುದಿನಮುಂ ಬಾಲಕೆಯುಂ ಮದುವೆಯಾಗಲನುಗೆಯ್ಯೆ

ಅವನಂಬಾಲಿಕೆಯೊಳ್ ವಿವಾಹಸುಖಮಂ ತಾಳ್ದಿರ್ಪನೆಂಬೊಂದು ಕಾ ।
ರ್ಯವಿಶೇಷಕ್ಕತಿಕೋಪಮುಬ್ಬರಿಸಲಾಂ ಮುಂ ಕಂಡು ಕೂರ್ತಿರ್ದೆನಾ ॥
ಯುವತೀರತ್ನಮಿದೆನ್ನ ಭೂಷಣಮೆನುತ್ತಾಂ ನಿಶ್ಚಯಂಮಾಡಿಯೊ ।
ಪ್ಪವಿನಂ ಕಂಕಣದಾರಮುಂ ಕರದೊಳಾಂ ತಾಳ್ದಿಂ ಮನೋರಾಗದಿಂ ॥

ಅಂತು ಕಂಕಣದಾರಮಂ ಕಟ್ಟಿಕೊಂಡು ಧನಮಿತ್ರಂಗಿಂತೆಂದಂ:—

ಪಗೆಯುದ್ದ ಚಂಡವರ್ಮನ ।
ನೀಗಳ್ ತೀರ್ಚುವೆನವರ್ಕೆ ತಾವಂಜದೆ ಚೆ ॥
ಲ್ವಾಗಿರ್ಪುದೆಂದು ಪೇೞಿನು ।
ರಾಗದೆ ಪೌರರ್ಗೆ ರಾಗದಿಂ ಧನಮಿತ್ರಾ ॥ ೩೨೪

ಎಂದಲ್ಲಿ ಪೌರರ್ಗೆ ಪೇೞ್ದು,

ಅಂಗನೃಪಾಲನ ಸೀಮಾ ।
ರಂಗಕ್ಕೈತಂದುದಖಿಳಭೂಪರ ಸಂಗಂ ॥
ಮಂಗಳವಾರ್ತೆಯನುಸಿದ*ರ್ವ ।
ರಂ ಗುಣದಿಂ ಕೊಂಡು ಬಪ್ರುರ್ದನುನಯದಿಂಸಂ ॥ ೩೧೫

ಎಂದು ಧನಮಿತ್ರನನತ್ತಲ್ ಕಳಿಪಿದೆಂ. ಇತ್ತಲ್ ಚಂಡವರ್ಮನಂಬಾಲಿಕೆಯಂ ಮದುವೆಯಾಗಲ್ ಮದವಣಿಗನಾಗಿ ಪಸೆಯ ಮೇಲೆ ನಿಂದಿರ್ದಾಗಳ್;

ಮಂಗಳಗಾಯಕರ್ ಸಕಲವಾದ್ಯವಿಚಕ್ಷಣರುದ್ಧನರ್ತಕರ್ ।
ಮಂಗಳಪಾಠಕರ್ ಗಣಿಕಸಂತತಿ ಸಂಭ್ರಮದಿಂ ಪೊಗುತ್ತಿರಲ್ ॥
ಮಂಗಳಗೇಹಮಂ ಮುದದಿನಾನವರೊಳ್ ತಱಿಸಂದು ಬೇಗದಿಂ ।
ಮಂಗಳಪಾಠಕಾಕೃತಿಯಿನೊಲ್ಪೊಳ್ ಪೊಕ್ಕೆನಿಳಾಧಿನಾಯಕಾ ॥ ೩೧೬

ಅಂತಾಂ ಪೊಗುವಾಗಳ್ ಜವ ।
ನಾತುಟು ಕಿಱುಸುರಿಗೆಯೊಂದನಾಪಿರ್ದಂ ಬಲಗೆ ॥
ಯ್ಯಿಂ ತಳೆದು ಪೊಕ್ಕು ಮಂದಿಯ ।
ತಿಂತಿಣಿಯೊಳ್ ನೋಡುತಿರ್ದನಾತನ ಕಡೆಯಂ ॥ ೩೧೭

ಅನ್ನೆಗಮಾತಂ ತನ್ನಾಯುಷ್ಯಮನೊಪ್ಪುಗುಡುವಂತೆ ಪಾಣಿಗ್ರಹಣಾರ್ಥಂ ಕೈಯ್ಯಂ ನೀಡೆ,

ನೀಡಿದ ಕೈಯ್ಯನಾಂ ತುಡುಕಿ ಗಾಢಮೆನಲ್ ಪಿಡಿದೀರ್ಚ್ಚಿ ಬೀಳ್ವನಂ ।
ಜೋಡಿಸಿ ಶಸ್ತ್ರದಿಂ ತಿವಿಯಲಂತದು ನುಣ್ಣನೆ ಬೆನ್ನೊಳೊರ್ಚಿಱಿಂ ॥
ಮೂಡಲೊಡಲ್ದು ಬಿರ್ದ್ದಿಸುವನಾಗಳೆ ನೀಗಿದನೆಂದು ಬಂಧುಗಳ್ ।
ನೋಡುವ ಮಾಳ್ಕೆಯಿಂ ಕೆಡೆಪಿದೆಂ ಪಸಯಿಂ ಕಲಿಚಂಡವರ್ಮನಂ ॥

ಅಲ್ಲಿಂ ಬೞಿಯಂ,

ಅರಿನೃಪವಿನಾಪ್ತಬಲಮಂ ।
ಮಾರಿಪೊಲಾಂ ಬೀದಿವರಿದು ಭುಜಬಲದಿಂ ಸಂ ॥
ಹಾರಂಮಾಳ್ಪಾಗಳ್ ಗಂ ।
ಭೇರರವಂ ಪೊಣ್ಮಲೆಯ್ದಿದೆಂ ನಿಜಪದಮುಂ ॥ ೩೧೮

ಎಂದು ಅಪಹಾರವರ್ಮಂ ಪೇೞ್ದುದಂ ರಾಜವಾಹನಂ ಕೇಳ್ದು

ಶಿವಶಿವ! ಮರ್ತ್ಯಲೋಕದೊಳಪೂರ್ವಮಗೋಚರಮಲ್ತೆ ಭಾವಿಸ |
ಲ್ಕೀವನ ಪರಾಕ್ರಮಂ ಬಗೆಗಮಾನುಷಮೀತೆಱದಿಂ ತೊಱಲ್ದನಾ ||
ಪವನತಿಸಾಹಸಂಬೆರಸು ಪೇೞಿಮೆನುತ್ತಪಹಾರವರ್ಮನಂ |
ನವಪುಳಕಂಗಳುಣ್ಮೆ ಬಿಗಿಯಪ್ಪಿದನಾಗಳಭಂಗವಿಕ್ರಮಂ || ೩೩೦

|| ಗದ್ಯ ||

ಇದು ಸಕಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತ್ರೆಯೊಳ್

ಅಪಹಾರವರ್ಮ ಕಥಾವೃತ್ತಾಂತಂ

ಅಷ್ಟಮಾಶ್ವಾಸಂ

॥ ನವಮಾಶ್ವಾಸಂ ॥

— ಅರ್ಥಪಾಲನ ಕಥೆ —

ಶ್ರೀಕೇಳೀಮುಖಕಮಳಂ ।
ಭೂಕಾಂತಾಧೀಶನರ್ಥಪಾಲಕನಂ ಸಾ ॥
ವ್ಯಾಕಾರನನೀಕ್ಷಿಸಿದಂ ।
ಲೋಕಜನಸ್ತುತನಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನನರ್ಥಪಾಲನ ಮುಖಾವಲೋಕನಂಗೆಯ್ದು ನೀನೆಸಗಿದ ಕಾರ್ಯಮಂ ಪೇಳೆನಲಾತಂ ಕೆಯ್ಗಳಂ ಮುಗಿದು,

ಸಹಚರರೆಲ್ಲರುಂ ನಿಜಪದಾಂಬುರುಹದ್ವಯಮಂ ನಿರಂತರಂ ।
ಮಹಿಯೊಳಳಂಪಿನಿಂದಱಸಲೆನ್ದಸೆಗೆಯ್ದಿದೊಡಾನುಮಂತೆ ಸ ॥
ಸ್ಪೃಹೆಯಿನತಿಪ್ರಸಿದ್ಧಿವಡೆದಿರ್ಪ ಮನೋಹರಮಪ್ಪ ಕಾಶಿಯಂ ।
ಬಹಳಸುಖಾಧಿವಾಸಿಯನಶೇಷವಿನಾಶಿಯನೈದಿದೆಂ ನೃಪಾ ॥ ೨

ದುರಿತವಿನಾಶಿಯಂ ಸುಕೃತಸತ್ಫಲರಾಶಿಯನುಗ್ರಕರ್ಮದು ।
ರ್ಧರಗಳಪಾಶಿಯಂ ಸಕಳಮಂಗಳಸಾರ್ಥಕತೀರ್ಥವಾಸಿಯಂ ॥
ನರಕಹುತಾಶಿಯಂ ಕೃತಯುಗಾಂಬುಜನಿರ್ಮಳಬೀಜಕೋಶಿಯಂ ।
ನಿರುಪಮಕಾಶಿಯಂ ಭರದಿನೆಯ್ದಿದೆನೊಲ್ದು ಜಗತ್ಪ್ರಕಾಶಿಯಂ ॥ ೩

ಅದು ಸುಕೃತಪ್ರಸಿದ್ಧಿಯ ತವರ್ಮನೆ ಜ್ಞಾನಮಹಾಬ್ಧಿತೀರಮಂ ।
ಪದುಳದಿನೊಲ್ದು ತೋಱಿಸುವ ಮಾರ್ಗಮನೂನಸುಖಂ ವಿಳಾಸದಿಂ ॥
ದುದಯಿಪ ಭೂಮಿಯೀಶನವಿತರ್ಕದಿನಿರ್ಪ ತೆ ಮೋಕ್ಷಕಾಮಿನೀ ।
ಸದನಮೆನಲ್ಕೆ ವಾರಣಾಸಿ ರಂಜಿಪುದಲ್ತೆ ಧರಾಧಿನಾಯಕಾ ॥ ೪

ಸ್ಮರಹರನಿರ್ಕೆ ಶಂಕರನ ಮಂದಿರಮೀಶನ ಗೇಹಮದ್ರಿಜಾ ।
ವರನ ಗೃಹಂ ಗಿರೀಶನ ನಿಜಾಲಯಮುಗ್ರನ ಶಾಲೆ ಜಾಹ್ನವೀ ॥
ಧರನ ನಿಕೇತನಂ ಭವನ ವೇಶ್ಮ ಯಮಾರಿಯ ಧಾಮಮಿಂದುಶೇ ।
ಖರನ ನಿವೇಶನಂ ಗಳೆನಲೊಪ್ಪುವ ಕಾಶಿಯನೆಯ್ದಿದೆಂ ನೃಪಾ ॥ ೫

ಪುಟ್ಟಿಪ್ಪುದುಳ್ಗೊಳ್ಳೊಡಂ ಜಡೆ ಲಲಾಟವಿಲೋಚನಮಿಂದುಲೇಖೆ ಕ ।
ಪರ್ಟ್ಟೆ ಗಳಂ ಲಸದ್ದಶಭುಜಂ ಫಣಿಕುಂಡಲವೊಪ್ಪಿರಲ್ಕೆ ತಂ ॥
ಪುಟ್ಟೆ ಗಜಾಜಿನಂ ಗಿರಿಜೆ ತುಂಗವೃಷಂ ಸಹಿತಂ ನಿರಂತರಂ ।
ಪುಟ್ಟುವರೆಂಬೊಡೇನ್ಪೊಗಳ್ವೆನೊರ್ವ್ವನ ಕಾಶಿಯ ಪೆಂಪನುರ್ವಿಪಾ ॥ ೬

ಅಂತು ಕಮನೀಯಮಾದ ಕಾಶೀಕ್ಷೇತ್ರಮನೆಯ್ದಿ

ಈಕ್ಷಣಮಾತ್ರದಿ ದಳಿಪಪಾತಕಮಂ ತವಿಪಭ್ರಗಂಗೆಯುಂ ।
ಮೋಕ್ಷಫಲಪ್ರಸಿದ್ಧಿ ನೆಲಸಿರ್ಪ ಲಸದ್ಗುಣಸಂಗೆಯುಂ ವಿರೂ ॥
ಪಾಕ್ಷಶಿರಸ್ಸರೋಜನವಗಂಧಮಹಾಲಸಭೃಂಗೆಯುಂ ಜಗ ।
ದ್ರಕ್ಷಣಮೂರ್ತಿಯರ್ಪ್ಪಮರಗಂಗೆಯನಾಂ ಮಿಗೆ ಕಂಡೆನುರ್ವಿಪಾ ॥ ೭

ಮಲಿನಮನುಳ್ಳುಡಂ ತವಿಸಲೆಂದು ವಿಯನ್ನದಿಯೊಳ್ ಮುಳುಂಗೆ ಮುಂ ।
ದಲೆ ಜಡೆಗಟ್ಟಿ ಕಣ್ ವಿಷಮಮಾಗಿ ಕೊರಲ್ ಕಱಿಗಟ್ಟಿ ಸರ್ಪಸಂ ॥
ಕುಳಮೊಡಗೊಂಡು ವಾಮತನು ಪೆಣ್ಡೆಯಾಗಿ ಪಿಶಾಚಸಂಗಮು ।
ಗ್ಗಿಸಿರೆ ಪುಟ್ಟಿಪ್ಪಂದಿಗೆಡೆಯಲ್ಲದೆ ತೋರ್ಪರಿವಲ್ತೆ ವಿಸ್ಮಯಂ ॥ ೮

ತನ್ನಂ ಭೋಂಕನೆ ಕಂಡವಂ ಕನಸಿನೊಳ್ ಕಾಣಂ ಪುನರ್ಜನ್ಮಮಂ ।
ತನ್ನಂ ಪೊರ್ದಿದ ಜೀವಿಗಳ್ ನರಕಮಂ ಪೊರ್ದರ್ ಮನೋಭಕ್ತಿಯಿಂ ॥
ತನ್ನಾ ಧ್ಯಾನದೊಳಿರ್ಪವಂ ಪಡೆಪಿನಿಂದಿರ್ಪಂ ಮಹಾನಂದದೊಳ್ ।
ತನ್ನೊಳ್ ಸ್ನಾನಮನೊಲ್ದು ಮಾಳ್ಪ ಮನುಜಂ ಮಾಳ್ಪಂ ಜಗತ್ಸೃಷ್ಟಿಯಂ ॥

ಮತ್ತಮದು ನೀರಾಟಕ್ಕೆಳಸಿದ್ದೈರಾವತವಾರಣಶರೀರಗೌರವರ್ಣಂ ತೇಕೈಸಿದಂತೆಯುಂ, ಜಳಪಾನಕ್ಕೆಳಸಿದ ಅಳಕೇಶ್ವರಪ್ರಿಯನ ವೃಷಭೇಂದ್ರನ ಕಮನೀಯಕಾಂತಿಯುಂ ಕವರ್ದಂತೆಯುಂ, ಅವಗಾಹನಪ್ರೀತಿಯಿಂದವತರಿಸಿದಭವನ ಧವಳದೇಹದಿಂದವಿರಳವಾದಂತೆಯುಂ, ಸಲಿಲಕ್ರೀಡೆಗಲಸಯಾನದಿಂ ಬಂದ ದಿವಿಜನಾರಿಯರ ನಯನಕಾಂತಿಕಾಳಿಮದಿಯುಂ ಕೆಪ್ಪುಗೊಂಡಂತೆಯುಂ, ನೈರ್ಮಲ್ಯದಿಂ ನೂರ್ಮಡಿಸಿರ್ದ ಅಮರನದಿಯುಂ ಕಂಡು,

ಅದಱೊಳಗಣ ಕರ್ಣಿಕೆಯೊಳ್ ।
ಸದಮಳಮಪ್ಪಂತು ಮಿಂದು ದುರಿತಮನಾರ್ಪಿಂ ॥
ಬೊರೆದು ಕೃತಕೃತ್ಯನಾದೆಂ ।
ವಿದಿತಮೆನಿಪ್ಪಖಿಳಕರ್ಮವಂ ಪ್ರಕಟಿಸಿದೆಂ ॥ ೧೦

ತತ್ಸ್ನಾನೋಚಿತವಿಧಿಯುನ ।
ತ್ರಿಸ್ಥಲಮೆನಲ್ಕೆ ಮಾಡಿ ಬಳಿಕಾನಾಗಳ್ ॥
ಸ್ವಸ್ಥಮನನಾಗಿಯಲ್ಲಿ ।
ದರ್ ಸ್ಥಾಣುವಿನಂಘ್ರಿಪರಿಸರಕ್ಕೆಯ್ತಂದೆಂ ॥ ೧೧

ಶಶ್ವನ್ಮಂಗಲಮೂರ್ತಿ ಪಾತಕಗಿರಿಪ್ರೋದ್ಭಿನ್ನದಂಭೋಳಿ ಸ ।
ಪ್ತಾಶ್ವಶ್ವೇತರುಚಿಪ್ರಸಿದ್ಧನಯನಂ ನೈರ್ಮಲ್ಯಲಿಂಗಂ ಜಗ ॥
ದ್ವಿಶ್ವವ್ಯಾಪ್ತನಪಾರಸಾರಮಹಿಮಂ ಕಾರುಣ್ಯಕಲ್ಪದ್ರುಮಂ ।
ವಿಶ್ವೇಶಂ ಭವನಾಶನದ್ರಿತನಯಾಧೀಶಂ ಸಮಸ್ತಾಶ್ರಯಂ ॥ ೧೨

ಅಂತಪ್ಪ ಜಗನ್ಮನೋಹರಮೂರ್ತಿಯಾದ ವಿಶ್ವೇಶ್ವರನಂ ನಮಸ್ಕರಿಸಿ,

ಸಂಸಾರಭ್ರಮಣವ ನಿ ।
ಶ್ಶೇಷಿಸುವ ಬಗೆಯುಂ ಬಿಸುಟ್ಟು ವಿಶ್ವೇಶನಿಜಾ ॥
ವಾಸವನುಷ್ಫ್ರಮಣಂಗೆ ।
ಯ್ದಾಸುಖದಿಂದಿರ್ದೆನೆಂಬವೋಲ್ ಬಲವಂದೆಂ ॥ ೧೩

ಅಂತು ಬಲವರುತಿರ್ಪಾಗಳ್

ಪೊಸನನೆಯಿಂ ಮುಗುಳ್ಗಳನರಲ್ಗಳನುಜ್ಜ್ವಲಮಾಗಿ ಗುಜ್ಜುಗೊಂ ।
ಡಿಸೆವುದನೊಂದು ಚೆಲ್ವ ಕರವೀರದ ಕಂಪಿ(?)ನೊಳೊಲ್ದು ರಜ್ಜುವಂ ॥
ಪೊಸೆದು ಕೊರಲ್ಗೆ ಸೇಂದಿಕೊಳುತಿರ್ಪತಿಸಾಹಸಕರ್ಮಭೂತನ ।
ಪ್ಪಸಮಬಲಾಢ್ಯನೊರ್ಬನಿರಲಾನವನಂ ಮಿಗೆ ಕಂಡೆನುರ್ವಿಪಾ ॥ ೧೪

ತೋರಮೊಗಂ ಸಮುನ್ನತಗಳಂ ನಸುಗೆಂಪಡರ್ದ*ಕ್ಷಿ ನೀಳ್ದ ತೋಳ್ ।
ಪೇರುರಮುಟ್ಟ ಗಂಡುಡಿಗೆ ಕರ್ಕಶದೇಹಮತೀವಭೀಷಣಾ ॥
ಕಾರಮನಸ್ಕ್ರಿಯೆ ಸಲೆ ಸಾಹಸಕರ್ಮದೊಳಗ್ರನೊರ್ಬನು ।
ದ್ಗಾರಿತಬಾಷ್ಪವಾರಿಪರಿಲಗ್ನನವಂ ಮುಖಭಗ್ನನುರ್ವಿಪಾ ॥ ೧೫

ನಿರವಧಿಯೊಳಶ್ರುಜಲಮಂ ।
ಸುರಿಯಲೊಡಂ ನಯನವಾರಿ ತೀರ್ವ ಬಳಿಕ್ಕಂ ॥
ತಿರುಳಾದ ಮಾಂಸಮುಖದಂ ।
ತಿರೆ ಕೆಂಪಡರ್ದಕ್ಷಿಯುಗಳಮೊಪ್ಪಿದುದವನಾ ॥ ೧೬

ಅಂತಿರ್ದನಂ ಕಂಡು

ಅವನಿಂಗಿತಮಂ ಕಂಡಾ ।
ನಿವನಾತ್ಮಸುಹೃದ್ವಿಯೋಗದಿಂ ಪಸುವಂ ನೀ ॥
ಗುವ ಬಗೆಯೊಳಿರ್ದ ತೆಱನಂ ।
ಮ ವಿಚಾರಿಸಿ ಬೞಯೆ ೞಳವನನಾನಿಂತೆಂದೆಂ ॥ ೧೭

ಈಸಾಹಸಕರ್ಮಮನ ।
ತ್ಯಾಸುರಮೆನೆ ಮಾಡ್ಪೆಯೇಕೆ ನೀನೆತ್ತಣನೆಂ ॥
ದೋಸರಿಸದೆ ನಾಂ ಜಸಗೊಳ ।
ಲಾಸುಭಟಂ ಪೇೞಲಾಗಳಂದ್ಯತನಾದಂ ॥ ೧೮

ಪೆಸರ್ವೆ*ತ್ತ ಪೂರ್ವಕಾಮೋ ।
ಷುಶಯುವ ದೇಶದೊಳೊರ್ಬ ವೈಶ್ಯನ ಮಗನಾಂ ॥
ಪೊಸತೆನಿಪ ಚೌರ್ಯವೃತ್ತಿ ।
ವ್ಯಸನಂ ನೆಲೆಗೊಂಡುದೆನಗೆ ವಿಧಿವಶದಿಂದಂ ॥ ೧೯

ಆಯುಃಕರ್ಮಂ ವಿತ್ತಾ ।
ದಾಯುಂ ವಿದ್ಯಾದಿಲಾಭಮೆಂಬಿವು ಮೊದಲೊಳ್ ॥
ತಾಯ ಬಸಿಱಲ್ಲಿ ಪುಟ್ಟುವ ।
ಕಾಯುಕ್ಕಾಗಿರ್ದಪಱಯಲುಬಾದವರಳ್ವಿ: ॥ ೨೦

ಎನ್ನ ಪಿತೃಮಾತೃಸೋದರ ।
ರೆನ್ನಯ ನಡೆವಳಿಗೆ ಸೈರಿಸದೆ ಪೂಱಮಡಿಸಲ್ ॥
ಖಿನ್ನಮನನಾಗಿ ಬಂದಪೆ ।
ನೆನ್ನ ಪೆಸರ್ ಪೂರ್ಣಭದ್ರನೆಂಬುದು ಕೇಳಯಾ ॥ ೨೧

ಎಂದು ಮತ್ತಂ

ಈವಾರಣಾಸಿಪುರದ ಮ ।
ಹಾವೈಶ್ಯಾಧಿಪನ ಮನೆಗೆ ಕನ್ನಮನಿಕ್ಕಲ್ ॥
ಕೋವಿದಪುರರಕ್ಷಕರಱ ।
ದೋವದೆ ಬಲ್ವಿಡಿದರೆನ್ನನವಟಿಂದಿರುಳೊಳ್ ॥ ೨೨

ಅಂತವರೆನ್ನಂ ಪಿಡಿದು ಧರ್ಮಾಸನಕರ್ಮಶ್ರೇಷ್ಠರ್ಗೆ ತೋಱಲವರ್ ಧರ್ಮಸೂಕ್ಷ್ಮಪ್ರಯುಕ್ತ್ಯುತ್ತವ ನಿಂತೆಂದರ್:—

ಮದರದನಿಯು ಪಾದಾಗ್ರದಿ ।
ನೊಡೆಯಿಸುದಿವನುತ್ತಮಾಂಗಮಂ ನುರ್ಚಿಪ್ಪಂ ॥
ತಿದು ಧರ್ಮಮಿಾತನಂ ಜೀ ।
ಗದೆ ಕೊಂಡುಯ್ಯೆಂದರವರ್ಗಳವರೊಡನಾಗಳ್ ॥ ೧೩

ಎಂದು ಪೇೞ್ದೊಡವರೀಕಾಶೀವಲ್ಲಭನ ಮಂತ್ರಿಬಾಹತ್ತರನಪ್ಪ ಕಾಮಪಾಲಂಗೆ ತದ್ವೃತ್ತಾಂತಮಂ ಪೇೞ್ದೊಡಾತನೆನ್ನನಾನೆಗಿಕ್ಕಿಸಲೆಂದುಪ್ಪರಿಗೆಯೊಳಿರ್ದು ಮಾವತನನಾನೆಯುಮಂ ತರಲ್ವೇೞಲೊಡಂ

ಅದಟಿಂದದ್ರಿಜೆಯೂರ್ಣ್ಮನೊಳ್ ಭುಜಬಲಾವಷ್ಟಂಭದಿಂದಾಂತು ಕಾ ।
ಡಿದ ಸೋನ್ಮಾದಗಜಾಸುರಂ ಸಹಜದಿಂ ತಾನೆಂಬಿನಂ ಘೋರರಾ ॥
ದ್ರದಗುರ್ಬಿಂ ದಿಗಿಭಂಗಳಂ ಬೆದಱಿಸುತ್ತಾಟೋಪದಿಂ ಬಂದು ನಿಂ ।
ದುದು ಸಂಹಾರರುಮಂಬೊಲುದ್ಧತಗಜಂ ಮೃತ್ಯುಂಜಯಾಖ್ಯಾನದಿಂ ॥ ೧೪

ಸಿಡಿಲಂ ಬೃಂಹಿತದೊಳ್ ತಮಗ್ರಹಿಯುಂ ರೌದ್ರೇಕ್ಷಣದ್ವಂದ್ವದೊಳ್ ।
ಕುಡುಮಿಂಚಂ ಕುಡುದಾಡೆಯೊಳ್ ಮಿಸುಪ ಕರ್ಪಂ ದೇಹದೊಳ್ ವಾರಿಯಂ
ಕಡುಪೆಂಪಿಂ ಮದವಾರಿಯೊಳ್ ಕರಕಮಂ ಚಂಚತ್ತುಷಾರಂಗಳೊಳ್ ।
ಪಡೆದುದ್ವೃತ್ತರಿ ಕಾಳಮೇಘಘಟೆಯುತ್ತೊಪ್ಪಿರ್ದುದುತ್ಕೋಪದಿಂ ॥ ೧೫

ಅಂತಿರ್ಪುರ್ಗೊಂದಾನೆಯುಂ ನಿಷಾದಿ ತರಲವಱ ಮುಂದೆನ್ನಂ ನಿಲಿಸಿ ಕೊಲಿಸಲೆಂದು

ವ್ಯಾಳನನಾದುರ್ ಮಾವತಿಗನಂಕುಶಮಿಕ್ಕಿ ಬಿಡಲ್ಕೆ ಕಂಡು ಕೈ ।
ಕೋಳದೆ ಕೆಯ್ಗಳಂ ನೆಗಪಿ ತತ್ಪ್ರತಿಮಾನಮನಾರ್ಪಿನಿಂ ಗಜಂ ॥
ಘೀಳಿಡಲಾಂ ನಿಮಿರ್ದು ಪುಡೆಯಲ್ಕದು ನೊಂದು ಮದದ್ವಿಪಂ ಗಜಾ ।
ಮಿಾಳನದಿಂ ನಿರೀಕ್ಷಿಸದೆ ಪೋಗಲೊಡರ್ಚಿತತಿವಭೀತಿಯಿಂ ॥ ೧೬

ಅಂತಾಂ ಪುಡೆಯಲಾನೆ ನೊಂದು ಪಿಂದುಮುಂದಪ್ಪಿನಂ ಮಾವತಿಗಂ ಕೋಪಿಸಿ

ಸುಡು ಕುಂಜರಾಪಶದ ನಿ ।
ನ್ನೊಡಲು ನರಮಾತ್ರನಂ ಕೊಲಲ್ಕಾಱದೆ ಬೆಂ ॥

ಗೊಡಲಾಂ ಬಿಡುವೆನೆ ನಿನ್ನಂ ।
ಕಡಿದಿಕ್ಕುವೆನೆಂದು ಮಗುೞ್ದು ನೂಂಕಿದನಿಭಮಂ ॥ ೨೮

ಅಂತು ನೂಂಕಲ್

ಬರಿಕೆಯ್ಯಿಂ ನೆತ್ತಿ ಪೋೞ್ದಿಂತಿರೆ ಪೊಡೆಯಲತಿಕ್ರೂರದಂತಾಗ್ರದಿಂ ಮೊ।
ಯ್ಯೆರಡಾಗಲ್ ಸೀೞ್ದು ಸಂರಂಭದೊಳನಗಿದಿರಾಗೇೞ್ತರಲ್ ದಂತಿಯುಂ ಮ ॥
ತ್ಕರದಿಂದಾನಾರ್ಪಿನಿಂದಪ್ಪಳಿಸಲಖಿಳದಿಗ್ಭಿತ್ತಿಯೊಳ್ ಬೃಂಹಿತಂ ತೀ ।
ವಿರೆ ಘೀಳಿಟ್ಟಾನೆ ಮುಂಗೆಟ್ಟನುಪಮಭಯದಿಂ ನಿಲ್ಲದೋಡಿತ್ತು ಬೇಗಂ ॥

ಅಂತು ಪೋಪಾನೆಯುಂ ಕಂಡು

ಇದುವೆ ನಿಷಾದಿ ಕುಂಜರವೆಸರ್ಗಳ ಕೀಟಕನೆನ್ನ ಮುಂದೆ ನಿ।
ಲ್ಲದು ಮಗು*ೞ್ದೊಂದು ಮತ್ತಗಜಮುಳ್ಳೊಡೆ ನಿಲ್ಲದೆ ಕೊಂಡು ಬಾ ಬೞಿ॥
ಕ್ಕದಱನುಮಾನಮಂ ತಿಳಿವೆನೆಂದವನಂ ಜಡಿಯಲ್ಕೆ ಕಂಡು ಸಂ ।
ಮದದೊಳ್ ಕಾಮಪಾಲಸಚಿವಂ ಪದೆದೀಕ್ಷಿಸಿದಂ ಮದಾಸ್ಯಮಂ ॥ ೨೯

ಅಂತೆನ್ನಂ ಕಾಮಪಾಲಂ ನೋಡಿ ತನ್ನ ಸಾರಗ್ಗ ಕರೆದಿಂತೆಂದಂ: —

ಈಚಾರ್ಯವೃತ್ತಿಯುಂ ಬಿ ।
ಟ್ಟಾಚಾರದಿನೆನ್ನ ಪೊರೆಯೊಳಿರ್ದೊಡೆ ನಿನ್ನಂ ॥
ಭೂಚಕ್ರಂ ಪೊಗ*ೞ್ದಿಂತತಿ ।
ವೈಚಿತ್ರ್ಯದಿನೊಲ್ದು ಪೊರೆವೆನೆಂದನಲಂಪಿಂ ॥ ೩೦

ಎಂಬುದುಮಾಂ ಮಹಾಪ್ರಸಾದಮಂತೆಗೆಯ್ವೆನೆಂದೊಡೆನ್ನ ಕೆಯ್ಯ ಕೋಳಮಂ ಕಳೆಯಲ್ವೇೞ್ದುದುಂ;

ನಿನ್ನಾಜ್ಞೆಗೋಸುಗಂ ಕೋ ।
ಳಂ ನೆಲಸಿತ್ತೆನ್ನ ಕರಗೊಳಲ್ಲದೆ ಕೇಳಾ ॥
ನಿನ್ನೊರ್ವರ ಬಗೆವೆನೆ ನೋ ।
ಡನ್ನಳವನೆನುತ್ತೆ ನುಗಿರ್ದೆಂ ಪಱಿವರನಂ ॥ ೩೧

ಅಂತಾಕೋಳಮಂ ನುಗಿರ್ ಕೆಯ್ಗಳಂ ಮುಗಿಯಲೆನ್ನನಾತಂ ಮನ್ನಿಸಿ

ಅಂದು ಮೊದಲಾಗಿ ನೃಪಸಚಿ ।
ವಂ ದಯೆಯಿಂದಾಪ್ತಮಿತ್ರಭಾವದಿನೆನ್ನಂ॥

ಮುಂದಿಟ್ಟು ಕೊಂಡು ಸುಖಮೆಸೆ ।
ವಂದದೊಳೊಲವಿಂ ಸಮಂತು ರಕ್ಷಿಸುತಿರ್ದಂ ॥ ೩೨

ಅಂತಿರ್಩ುದುಮಾನೊಂದು ದಿನಂ ರಹಸ್ಯಸಮಯದೊಳ್ ಸಂತೋಷದಿನಿರ್ದಾಗಳ್ ಕಾಮಪಾಲಂಗಿಂತೆಂದೆಂ:—

ನಿಜಗುಣಮಪೂರ್ವಮೆನಸಂ ।
ಸುಜನತೆ ಪೊಸತಾವಗಂ ದಯಾಪರತೆ ಘನಂ ॥
ಋಜುಮಾರ್ಗ ನಲ್ಮೆಯಿಂ ನಿ ।
ನ್ನ ಜನ್ಮಮಂ ಪೇಱಿಮೇಱಿಪ್ಪುದೆನಗಧಿನಾಥಾ ॥ ೩೩

ಎಂದಾಂ ಬಿನ್ನಪಂಗೆಯ್ಯಲಾತನಿಂತೆಂದಂ:—

ಮಗಧಧರಾಧಿನಾಥನೆನಲೊಪ್ಪುವ ವ್ಯೋಮಯು ರಾಜಹಂಸನಾ ।
ವಗಮಱಿ ಕೂರ್ಪ ಮಂತ್ರಿಕುಲಶೇಖರನಪ್ಪ ಸುಮಿತ್ರಪುತ್ರನಾಂ ॥
ಮೃಗಶಿಶುಲೋಚನಾವ್ಯಸನದಿಂದಿರೆ ಮತ್ಪಿತೃಮಾತೃಬಂಧುಗಳ್ ।
ಮಿಗೆ ಜಡಿದೆನ್ನನೀವ್ಯಸನಮಂ ತೊಱೆಯೆಂದರತೀವಕೋಪದಿಂ ॥ ೩೪

ಅಂತವರೆನ್ನಂ ಜಡಿದೊಡಂ ಕಾಂತಾವ್ಯಸನಮನೆ ಪಿಡಿದಿರ್಩ುದುಂ,

ಸಚಿವರಕುಲಕ್ಕನೀತಿಗ ।
ಳುಚಿತಮೆ ಕೇಳ್ ಕಾಮಪಾಲ ನಿನ್ನಿಂ ಬಂಧು ॥
ಪ್ರಚಯಂ ಕಿಡುವುದಱಿಂ ನಿ ।
ನ್ನ ಚಿತ್ತಮೆಸೆದತ್ತ ಪೋಪುದಿಲ್ಲಿಂದೀಗಳ್ ॥ ೩೫

ಎಂದವರೆನ್ನಂ ಪುಷ್ಪಪುರದಿಂ ಪೊಱಮಡಿಸೆ,

ಕುಲಮಂ ನೋಡದಪಾಯಮಂ ಬಿಡದು ನಿಂದಾಭೀತಿಯುಂ ಪೊರ್ದದು ।
ಜ್ವಲಮಪ್ಪಪ್ರ ರ ವಾಕ್ಯಮಂ ಬಗೆಯದಾರೇನೆಂದೊಡಂ ಲಜ್ಜೆಯಿಂ ॥
ತಲೆಯಂ ಬಾಗದು ದೇಶವಿಭ್ರಮಣದಿಂ ಬೆಂಡಾಗದೊಳ್ಪತ್ತ ಮೆ ।
ಯ್ಯಲಮಂ ಪೀರ್ವುದು ಕಾಮಮೆಂದೊಡದನಿನ್ನೇವಣ್ಣಿಪಂ ಬಣ್ಣಿಪಂ॥ ೩೬

ಅಲ್ಲಿಂ ತಳರ್ದೊರ್ಬನೆ ಅವ*।
ರೆಲ್ಲರನುಱಿದಧಿಕದುಃಖಮಂ ತಳೆದೊಲವಿಂ ॥
ಸಲ್ಲಲಿತಮೆನಿಪ ಕಾಶಿಗೆ ।
ಮೆಲ್ಲನೆ ಬಂದಿಲ್ಲಿ ಪೊಕ್ಕು ಚರಿಯಿಸುತಿದೆರ್ಂ ॥ ೩೭

10

ಗಾಡಿಯೊಳಂಗನಾತತಿಯುತಂ ತದಿಳೇಶ್ವರಪುತ್ರಿ ತದ್ವನ ।
ಕ್ರೀಡೆಗೆ ಕೂರ್ತು ಕಾಂತಿಮತಿ ಬಂದಿರಲಾಂ ಮಿಗೆ ಕಂಡು ಕಾಮನ ॥
ಜ್ಞಾಡುನ ಬಲ್ಸರಲ್ಗೆ ಗುಱಿಯಾಗಿಯನಂಗದವಾಗ್ನಿತಾಪದೊಳ್ ।
ಕೂಡಿದೆನಾಕೆಯುಂ ಮದನಚೇಷ್ಟೆಯೊಳೀಕ್ಷಿಸಲೆನ್ನ ವಕ್ತ್ರಮಂ॥ ೩೮

ಅಂತವಳಂ ಕಂಡಾಂ ಕಾಮಾವಶಗತನಾಗಿ ಬೞಿಯಂ

ಬಂದಾನೊಂದುಮುಪಾಯದಿಂ ಯುವತಿಯಿರ್ಪಂತಃಪುರಕ್ಕೆಯ್ದಿ ಸಾ ।
ನಂದಂ ತತ್ಸತಿಯೊಳ್ ಮನೋಜವಿವಿಧಕ್ರೀಡಾನುರಾಗಾಬ್ಧಿಯೊಳ್ ॥
ಸಂದಿರ್ಪನ್ನೆಗಮಾಕೆಗೆನ್ನ ದೆಸೆಯಿಂ ಗರ್ಭಂ ನಿಲಲ್ ನಾಡೆ ಪೆಂ ।
ಪಿಂದಂ ನಿತ್ಯರಹಸ್ಯಸೌಖ್ಯದೊದವಂ ತಾಳ್ದಿರ್ದೆನಿರ್ಪನ್ನೆಗಂ ॥ ೩೯

ಮತ್ತೆ ಕೆಲವಾನುಂ ದಿವಸಕ್ಕೆ ಕಾಂತಿಮತಿಗೆ ಪೂರ್ಣಗರ್ಭವಾಗಿ ಕುಮಾರನಂ ಪಡೆದು

ಮಾತೃಪಿತೃಬಂಧುಗೋತ್ರಜ ।
ಭೀತಿಯೊಳಬ್ಜಾಕ್ಷಿ ಕಾಂತಿಮತಿ ಪೆತ್ತ ತನೂ ॥
ಜಾತನನಾಗಳ್ ಮೃತಸಂ ।
ಜಾತಂ ತಾನಾವನೆಂದು ಬಿಸುಡುವ ಬಗೆಯಿಂ ॥ ೪೦

ಒರ್ಬ ವೃದ್ಧೆಯ ಕೆಯ್ಯೊಳ್ ಕೂಸಂ ಕೊಟ್ಟೊದಂ ಶ್ಮಶಾನದೊಳ್ ಬಿಸುಟ್ಟು ಬಾಯೆಂದೊಡವಳಂತೆಗೆಯ್ವೆನೆಂದು ಕೊಂಡು ಪೋಗಿ ಬಿಸುಡೆ

ಸುರತರುವಿಂ ಪೊದಱ್ದಿ ತನಿವಣ್ಣುಡಿದುರ್ವಿಗೆ ಬಿೞ್ದುದೋ ಮಿಯು ।
ಚ್ಚರಿಯುರ ವೇಣಿಯಿಂ ಜಗುೞ್ದ ತೊಂಡಲ ದಂಡೆಯೊ ಭಾವಿಸಲ್ಕೆ ಭಾ ॥
ಸ್ಕರನ ಕರಾಬ್ಜದಿಂದಿಳೆಗೆ ಬಿೞ್ದರುಣಾಬ್ಜಮೊ ಪೇೞೆನಲ್ಕೆ ತ ।
ತ್ಪುರದೆಸೆವ ಶ್ಮಶಾನದೊಳದೇನೆಸೆದಿರ್ದನೊ ತತ್ಕುಮಾರಕಂ ॥ ೪೧

ಅಂತಿರ್ದ ಕುಮಾರಕನಂ ಬಿಸುಟ್ಟು ವೃದ್ಧೆಯೊರ್ಬಳ್ ರಾತ್ರಿಯೊಳ್ ಬರುತಿರ್ಪಾಗಳ್

ಪುರರಕ್ಷಕರೆಸ್ಟೆಸೆಯೊಳ್ ।
ಪರಿಪರಿದಾರೈದು ಕಂಡರಂ ಬಹುವಿಧದಿಂ ॥
ಪರಿಭವಿಸುತಿರ್ಪ ಸಮಯದೊ ।
ಳರವರಿಸದೆ ಬರ್ಪ ವೃದ್ಧೆ ಸಿಲ್ಕಿದಳಾಗಳ್ ॥ ೪೨

ಅಂತವಳ್ ಸಿಲ್ಕಲವಳಂ ಬಹುಪ್ರಕಾರದಿಂದಂ ದಂಡಿಸಿ ಈರಾತ್ರಿಯೊಳೆಲ್ಲಿಗೆ ಪೋದೆಯೆಂದು ಕೇಳ್ದೊಡವಳನೇಕವಿಧದಿಂ ವಂಚಿಸಿ ದಂಡನೆಗಾಱದೆ ಬೞಿಕಿಂತೆಂದಳ್:—

ನೃಪನಂದನೆ ತನಗುದಯಿಸಿ ।
ದ ಪುತ್ರನಂ ರುದ್ರಭೂಮಿಯೊಳ್ ಬಿಸುಟು ಬರಲ್ ॥
ಕೃಪೆಯಿಲ್ಲದೆನ್ನನಟ್ಟಿದ ।
ಳಪರಾಧಂ ಬಂದುದೆನಗೆ ವಿಧಿವಶದಿಂದಂ ॥ ೪೩

ಎಂದೊಡೆ ರಾಜಕನ್ಯೆಯಾವನಿಂದಂತರ್ವತ್ನಿಯಾದಳೆಂದವರ್ ಬೆಸಗೊಳೆ

ಎನ್ನೊಡನೆ ಬಂದೊಡೀಗಳ್ ।
ಕನ್ನೆಗೆ ಪುಷ್ಪವನನೊಲ್ದು ತೋಱಿದಪೆಂ ನೀ ॥
ಪೆನ್ನಂ ಬಿಡಿ ಪರಸೇವೆಯೊ ।
ಳನ್ನರುಮೇನಾಗರೆನ್ನ ಬಡಿವರಮೇನೋ ॥ ೪೪

ಎಂದವರನೊಡಗೊಂಡು ಬಂದು

ನವರತ್ನಖಚಿತಕೃತಕಾ ।
ದ್ರಿವಿಳಾಸಗೃಹಾಂತದಲ್ಲಿ ಪಟ್ಟಿರ್ದನ್ನಂ ॥
ತವಕದೊಳಾವೃದ್ಧಾಂಗನೆ ।
ಯವಿನೀತರೆನಿಪ್ಪವರ್ಗೆ ತೋಱಿದಳಾಗಳ್ ॥ ೪೫

ಅಂತು ತೋಱಲೊಡಂ

ಉಪವನವ ಲತೆಗಳಂ ಪಱಿ ।
ದು ಪವಡಿಸಿರ್ದನ್ನನೀೞ್ದು ಕಟ್ಟಿ ಬೞಿಕ್ಕೆ ॥
ಯುದ್ಧಪರೋಧಿಸಿ ಕನ್ಯಾಚಾ ।
ರ್ಯಪಾತಕಂ ದಂಡ್ಯನೆಂದವರ್ ಕಡುಮುಳಿಸಿಂ ॥ ೪೬

ಊರಿಂ ಪೊಱಗುಯ್ದಾಗಳ್ ।
ಕೂರಸಿಯಿಂದಿವನ ತಲೆಯನರಿಯೆಂದೊರ್ಬಂ ॥
ಕ್ರೂರಾತ್ಮನ ಕಯ್ಗೆ*ನ್ನಂ ।
ಬೇರದೊಳಿತ್ತವರ್ಗಳತ್ತ ಪೋದರ್ ಬೞಿಯಂ ॥ ೪೭

ಅಂತವರತ್ತ ಪೋದರ್. ಇತ್ತಲಾಮಾದಿಗನೆನ್ನಂ ಚೌವಟಕ್ಕೆ ತಂದು
ಪರಸು ಪರಸೆಲಿವ್ರಾ ಕಾಶೀ ।
ಪುರೇಶನಂ ನೀಡು ಗೋಣನೆಂಬಾಗಳ್ ನಿ ॥
ರ್ಭರಸತ್ವದಿನಾನುರ್ಬಲ್ ।
ಭರದಿಂ ಕಟ್ಟಿರ್ದ ಬಳ್ಳಿ ಪಱಿದುದು ಬೇಗಂ ॥ ೪೮

ಅಂತು ಪಱಿಯುಲೊಡಂ
ಆಮಾದಿಗನಸಿಯುಂ ಕೊಂ ।
ಡೇಮಾತವನಂ ದುರಾತ್ಮನಂ ಪೊಡೆದು ಮನಃ ॥
ಪ್ರೇಮದಿನಲ್ಲಿಂ ತಳ*ರ್ದಟ ।
ವೀಮಧ್ಯಮನೆಯ್ದಿದೆಂ ಪಥಭ್ರಮೆಯಿಂದಂ ॥ ೪೯

ಇನಶಶಿರಶ್ಮಿಸಂತತಿಗಗೋಚರಮಪ್ಪ ಮಹಾಂಧಕಾರಸಂ ।
ಜನಿತಲತಾಳಿಗುಲ್ಮತರುಸಂಕುಳದಿಂದೆ ಶರಾರುಘೋರಕಾ ॥
ನನಮೃಗರಾಜಿಯಿಂದತಿಭಯಂಕರಮಪ್ಪಟವೀನಿವಾಸಮಂ ।
ಮನವೊಸೆದೆಯ್ದಿದೆಂ ಪಥಪರಿಭ್ರಮೆಯಂ ಪಡೆದೊರ್ಬನಾಕ್ಷಣಂ ॥ ೫೦

ಅಂತೆಯ್ದಿವರ್ಪಾಗಳಲ್ಲಿ
ದಿವ್ಯವಧುಪ್ರೌರ್ವಗಳೊಲ್ದು ಲ ।
ಸದ್ಯೋವ್ಯೋಮದಿನವನಿಗೆಯ್ದಿಯುಂಜಲಿಕರದಿಂ ॥
ಶ್ರವ್ಯವಚನಂಗಳಿಂಪತಿ ।
ನವ್ಯಾಕೃತಿಯೆನ್ನ ಸಮ್ಮುಖಕ್ಕೊಪ್ಪಿದಳ್ ॥ ೫೧

ವಿಳಸನ್ಮುಕ್ತಾಗ್ರಹಾರಂ ಸುಲಲಿತನವಮಂದಾರಪುಷ್ಪಾವತಂಸಂ ।
ದಳಿತಶ್ವೇತಾಬ್ಜನೇತ್ರಂ ಘಟಕುಚಯುಗಳಂ ಚಿತ್ರಕಾಂಚೀನಿತಂಬ ॥
ಸ್ಥಳಮುದ್ಯದ್ಪಲ್ಲಕೀರಂಜಿತಕರಮೆನಸುಂ ತನ್ನೊಳೊಪ್ಪಲ್ಕೆ ಹಸ್ತಂ ।
ಜಳಿಯಿಂ ಬಂದೊರ್ಬ ದಿವ್ಯಾಂಗನೆ ಭರವಸದಿಂದೆನ್ನಿದಿರ್ಗಾಗಿ ನಿಂದಳ್ ॥

ಅವತಂಸೀಕೃತಪಾರಿಜಾತಸುಮನಸ್ಸೌರಭ್ಯಮಾಶಾಸಿಕಾ ।
ಯುವನೆಯ್ದಲ್ ಪರಿವಾದಿನೀಮೃದುರವಂ ಮಾಧುರ್ಯಮಂ ಸಾಲಿಡಲ್ ॥
ಧವಳಾಪಾಂಗಮರೀಚಿ ಸಂತತಸುಧಾಸಂವೃಷ್ಟಿಯುಂ ಬೀಱಲೊ ।
ಷ್ಪವ ದಿವ್ಯಾಂಗನೆ ಭೋಂಕನಲ್ ವನದೊಳಂದೆಯ್ತಂದಳಾನಂದದಿಂ ॥

ಅಂತೆನ್ನ ಸಂಮುಖಕ್ಕೆ ಬಂದವಳಂ ನೀನಾರ್ಗೆಯೆಂದು ಕೇಳಲೊಡಂ

ತಿಳಿ ಮಾಣಿಭದ್ರನಾತ್ಮಜೆ ।
ವಿಳಸಿತಗಂಧರ್ವಕುಲಸಮುದ್ಭವೆ ತಾರಾ ॥
ವಳಿಯೆಂಬಳಗಸ್ತ್ಯಾಶ್ರಮ ।
ದೊಳಗಿಂ ಪ್ರೇಜಮುಟ್ಟೆ ಬರುತುಮಿರ್ಪವಸರದೊಳ್ ॥ ೫೪

ಈವಾರಣಸಿಯ ಪಿತೃವನ ।
ದೋವರಿಯೊಳ್ ಶಿಶುವದೊಂದೞುತ್ತಿರೆ ಕಂಡಾ ॥
ನೋವಿ ಪದೆದೆತ್ತಿ ಕೊಂಡು ಮ ।
ಹಾವಿಭವದಿನೆಯ್ದಿದೆಂ ಕುಬೇರನ ಸಭೆಯಂ ॥ ೫೫

ಕನಕದ ಭಿತ್ತಿ ಪೊನ್ನ ಪೊಸಕಂಭಮುದಂಚಿತಹೇಮಭೂಮಿ ಕಾಂ ।
ಚನಮಯಗೋಪುರಂ ನವಸುವರ್ಣದ ವೇದಿಕೆ ಶಾತಕುಂಭಸಂ ॥
ಜನಿತಸಮುಲ್ಲಸತ್ಕಳಶಮೊಪ್ಪುವ ಓಲಗಸಾಲೆಯೊಳ್ ಕರಂ ।
ಧನಪತಿ ರಂಜಿಸಿರ್ದನಸುರೀಚಯಮಿಕ್ಕುವ ಚಾಮರಂಗಳಂ ॥ ೫೬

ಕಿನ್ನರಸಂಕುಳಂ ಜಯಜಯಧ್ವನಿಯಿಂ ಪರಿವೇಷ್ಟಿಸಿರ್ಪಿನಂ ।
ರನ್ನದ ಪಚ್ಚಮಚ್ಚರಿಯೆನಲ್ ಮಿಗೆ ದೇಹದೊಳೊಪ್ಪುತಿರ್ಪಿನಂ ॥
ಸೋನ್ನತಹೇಮವಿಷ್ಟರದೊಳಿರ್ದನಶೇಷದಿಶಾಧಿಪೋತ್ತಮಂ ।
ಪನ್ನಗಭೂಷಣಪ್ರಿಯಸಖಂ ಮನಮೊಲ್ದಳಕಾಪುರೀಶ್ವರಂ ॥ ೫೭

ಅಂತೆಸೆವ ಕುಬೇರನೋಲಗಕ್ಕಾಶಿಶುಸಹಿತಂ ಪೋಗಲಾತನೆನ್ನಂ ಕಂಡು

ಈಹಸುಳೆಯಲ್ಲಿ ನಿನ್ನಯ ।
ಮೋಹಂ ಬಗೆಗೆಂತು ತೋರ್ಪುದೆಂದೊಲವಿಂ ನರ ॥
ವಾಹನನೆನ್ನಂ ಕೇಳಲ್ ।
ದೇಹಜನೆಂಬಂತೆ ತೋರ್ಪುದೆಂದೆನಲಂಪಿಂ ॥ ೫೮

ಎಂದೊಡುಳ್ಳುದಂ ಪೇೞ್ದೆಯೆಂದಾತನಾಶಿಶುವಿನ ವೃತ್ತಾಂತಮಂ ಪೇೞಲ್ ತಗುಳ್ದನದೆಂತೆನೆ:—

ವಿನಯವಿಳಾಸಿ ಕೇಳೆನಗೆ ಶೌನಕಶೂದ್ರಕಕಾಮಪಾಲನೆಂ ।
ಬನುಪಮನಾಮಮಂ ತಳೆದ ಮೂಱು ಭವಂ ನಿನಗೊಪ್ಪಲೈವರಂ ॥

ಗನೆಯುರವರ್ಗೆ ನಿನ್ನೊಡನೆ ಮೂಱು ಭವಂಗಳೊಡರ್ಚೆ ಮೂಱು ಮೂ ॥
ಱನುನಯಮಪ್ಪ ನಾಮಮವಗಾ*ದಪ್ರದೆಂದುಸಿದರ್*ಂ ಧನೇಶ್ವರಂ ॥ ೫೯

ಅದೆಂತೆನೆ.—

ಕ್ರಮದಿಂದೆ ಬಂಧುಮತಿ ವೇ ।
ದಿಮತಿ ಕರಂ ಚೆಲ್ವನಪ್ಪ ಹಂಸಾವಳಿಯುಂ ॥
ತ್ತಮನಂದಿನಿ ಗೋಪಕುಮಾ ।
ರಿ ಮುಖ್ಯಮಾದಯ್ವರುಂ ಭವದ್ವಧುವಾದರ್ ॥ ೬೦

ಅಂತವರ್ಗೆ ನಿನ್ನ ಮೊದಲ ಜನ್ಮದ ಶೌನಕಾವಸ್ಥೆಯಲ್ಲಿ ಬಂಧುಮತಿ, ಎರಡನೆಯ ಶೂದ್ರಕಾವಸ್ಥೆಯಲ್ಲಿ ವಿನಯಮತಿ, ಮೂಱನೆಯ ಕಾಮಪಾಲಾವಸ್ಥೆಯಲ್ಲಿ ಕಾಂತಿಮತಿಯೆಂಬ ಮೂಱು ಜನ್ಮಂ ಬಂಧುಮತಿಯೊರ್ಬಳ್ಗಾದುವು. ಆಕ್ರಮದಿಂ ಮಿಕ್ಕ ನಾಲ್ವರ್ಗಂ ವೇದಿಮತಿ ಯಜ್ಞದಾಸಿ ಕಾಮದೇವಿ, ಹಂಸಾವಳಿ ಶೂರಸೇನಿ ಸುಲೋಚನೆ, ನಂದಿನಿ ರಂಗಪತಾಕೆ ಇಂದ್ರಸೇನೆ, ಗೋಪಕುಮಾರಿ ಆರ್ಯದಾಸಿ ತಾರಾವಳಿ, ಎಂದೀ ಕ್ರಮದಿಂ ಸ್ತ್ರೀಯರಾದರಪ್ಪುದಱಿಂ

ನೀಂ ಶೂದ್ರಕನಾಗಿರ್ದಂ ।
ದಾಶಿಶುವಂ ವಿನಯಮತಿ ಕರಂ ಪೊರೆದುದಱಿಂ ॥
ದೀಶಿಶುಜನ್ಮದೊಳತಿಮೋ ।
ಹಾಶೆಯೊಳಾಕಾಂತಿಮತಿಗೆ ಜನಿಸಿತ್ತೊಲವಿಂ ॥ ೬೧

ಅದುಕಾರಣದಿಂ ನಿನಗೆ ಪುತ್ರನ ಪುತ್ರನಪ್ಪುದಱಿಂ ನಿನ್ನ ಕಣ್ಗೊಲದೊಳಿರ್ದದೆಂದು ಕುಬೇರಂ ಪೇೞ್ದು ಮತ್ತಮಿಂತೆಂದಂ:—

ಇವನಂ ಕೊಂಡುಯ್ದಂಭೋ ।
ಧ್ಭವಲೋಚನೆಯಪ್ಪ ವಸುಮತೀದೇವಿಗೆ ಕೊ ॥
ಟ್ಟು ವಿಳಾಸಿನಿ ನೀಂ ಪೋಗು ।
ತ್ತವದಿಂದಂ ಕಾಮಪಾಲಸಿದ್ದೆಡೆಗೀಗಳ್ ॥ ೬೨

ಎಂದು ಕುಬೇರಂ ಪೇೞ್ದಾಕುಮಾರನಂ ವಸುಮತೀದೇವಿಗೆ ಕೊಟ್ಟು ನಿನ್ನ ಪದಪರಿಚರ್ಯಾರ್ಥಮಟ್ಟುತ್ತಂ ಬಂದೀಗಳ್ ಕಂಡೆನೆಂದು ತಾರಾವಳಿ ಪೇೞ್ದನಂತರಂ,

ವನಜದಳಾಕ್ಷಿ ತತ್ತರುಣಿ ಕಣ್ಮುಗಿದೊಯ್ಯನೆ ತನ್ನ ವಿದ್ಯೆಯಂ ।
ನೆನೆಯಲೊಡಂ ವಿಚಿತ್ರಮೆನಿಸಿರ್ದ ಮನೋಹರಚಿತ್ರಶಾಲೆ ಭೋಂ ॥
ಕನೆ ನೆಲಸಿತ್ತನೇಕಮಣಿರಂಜಿತಗೋಪುರವೇದಿ ಮಾರುತಾ ।
ಯನಕಮನೀಯಹೇಮಕಲಶಂಗಳನಾವಿಪಿನಪ್ರದೇಶದೊಳ್ ॥ ೬೩

ಮೃದುತಲ್ಪಂ ಮಂಚಂ ಕಂ ।
ಪೊದವಿದ ಪುಷ್ಪಾನುಲೇಪನಂ ತಾಂಬೂಲಂ ॥
ತ್ರಿದಶಾಶನಸಮಭಕ್ಷ್ಯಂ।
ಸುದತಿಯ ವಿದ್ಯೆಗಳಿನಾಗಳೊಪ್ಪಿದುವೆನಸುಂ ॥ ೬೪

ಅಂತೊಪ್ಪಿರ್ದ ಗಂಧರ್ವಗೃಹದಲ್ಲಿ

ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ನಾಣ್ಗೆ ಮಾಯ್ದು ಕೂ ।
ಡುವ ಬಗೆಯಿಂತುಟೆಂದುಸಿರ್ವ* ಬಲ್ಮೆಯನಾನಱಿಯೆಂ ನಿರಂತರಂ ॥
ಸಮಸುಖಮಾಗಲೆನ್ನೊಳೊಡಗೂಡಿರೆ ಚಿತ್ರದ ಕಲ್ಲ ಲೆಪ್ಪದಂ ।
ಗಮನೆಡೆಗೊಂಡುದೆನ್ನ ತನುವೇಪ್ರೋಗಣ್ಯಂ ಖಚರೀವಿನೋದಮಂ ॥ ೬೪

ಅಂತವಳ್ ಬಹುವಿಧವಿನೋದದಿಂದೆನ್ನೊಳ್ ಸಂಭೋಗಮನೊಡರ್ಚು ತುಂ ಕೆಲವು ದಿನಮಂ ಕಳೆಯುತ್ತಿರಲೊಂದು ಸಮಯದೊಳಾನವಳೊಳಿಂತೆಂದೆಂ:—

ಕ್ಷಿತಿಪತಿ ಚಂಡಸಿಂಹನೃಪನೆನ್ನನಕಾರಣದಿಂ ಕೊಲಲ್ಕೆ ದು ।
ರ್ಮತಿ ಬಗೆದಂ ಮಗುಳ್ದವನೊಳಾಂ ಮಿಗೆ ದುರ್ಘಟಮಪ್ಪ ಶಾಸ್ತಿಯಂ ॥
ಗತಿಗಿಡೆ ಮಾಡುವಿಚ್ಛೆಯೆನಗಾಮಪ್ರದಂಗನೆ ಪೇೞದರ್ಕೆ ಪ ।
ದ್ಧತಿಯನೆನಲ್ಕವಳ್ ಕದನಕೀರ್ತಿಯ ಬೆಳ್ಪನೆ ನಕ್ಕಳಾಕ್ಷಣಂ ॥ ೬೫

ಅಂತು ನಕ್ಕು

ವನಜಮುಖಿ ಕಾಂತಿಮತಿಯಂ ।
ನೆನೆದಪೆಯಕ್ಕೆಂದು ನಕ್ಕು ತಾರಾವಳಿ ಭೋಂ ॥
ಕನೆ ತನ್ನವಿದ್ಯೆಯಿಂದಂ ।
ನೆನೆದಳ್ ಸಲೆ ಚಂಡಸಿಂಹನಿದಾರ್ಲಯಮಂ ॥ ೬೬

ಅಂತು ಕಾಶೀಪತಿಯಪ್ಪ ಚಂಡಸಿಂಹನರಮನೆಯಂ ನೆನೆದು

ತಾರಾವಳಿ ನಿಮಿಷಕೆ ಕಾಂ ।
ತಾರದಿನಳವಟ್ಟ ತನ್ನ ವಿದ್ಯಾಬಲದಿಂ ॥
ವಾರಾಣಸಿಪುರದಧಿಪನ ।
ಗಾರಕ್ಕಾಂ ಸಹಿತಮಿರುಳವಳ್ ನಡೆತಂದಳ್ ॥ ೬೭

ಅಂತವಳರ್ಧರಾತ್ರಿಯೊಳ್ ಬಂದಾರುಮಱಿಯದಂತೆ ಚಂಡಸಿಂಹನಿರ್ದ ಸಜ್ಜೆವನೆಯೊಳೆನ್ನಂ ಪುಗಿಸಿ ತಾಂ ಪೊಱಗಿರ್ದುದುಂ

ತಲೆದೆಸೆಯೊಳಿರ್ದಡಾಯ್ದಮು ।
ನೊಲವಿಂದಾನುರ್ಚಿ ನಿದ್ರೆಯಿಂ ತನ್ನೃಪನಂ ॥
ತಿಳಿಪಲತಿಭೀತಿಯಿಂದಂ ।
ತಳವೆಳಗಾಗುತ್ತುಮೆೞ್ದು ಕುಳ್ಳಿರ್ದಾಗಳ್ ॥ ೬೮

ಅಂತು ಚಂಡಸಿಂಹನೆೞ್ದು ಕುಳ್ಳಿರಲೊಡಂ

ಸೆಳೆದಿರ್ದಸಿಸಹಿತಂ ಕೆ ।
ಯ್ಗಳನೆರಡಂ ಮುಗಿದು ಕಾಂತಿಮತಿಯಧಿಪಂ ನಿ ॥
ನ್ನಳಿಯಂ ಯಕ್ಷಿಣಿ ತಾರಾ ।
ವಳಿಯೊಡನಾಂ ಬಂದೆನರ್ಧರಾತ್ರಿಯೊಳೀಗಳ್ ॥ ೬೯

ಎಂಬುದುಂ ನೃಪಂ ವಿಸ್ಮಯಸ್ವಾಂತನಾಗಿಂತೆಂದಂ:—

ಎನ್ನರ್ಥಂ ಪ್ರಾಣಮೆನ್ನಾಳ್ವವನಿಯನಿತುಮಂ ಕೊಟ್ಟು ಮತ್ಪುತ್ರಿ
ಯುಂ ಕೊ । ಟ್ಟೆನ್ನಾಣ್ಮಾತೇಕೆ ಪೇೞೆಂದೆನಗೆ ಮಱುದಿನಂ ತತ್ತನೂಜಾ
ತೆಯುಂ ಕೊ ॥ ಟ್ಟೆನ್ನಂ ತಾರಾವಳಿಯಾ ಭೀತಿಯೊಳಧಿಕತರಸ್ನೇಹದಿಂ
ಕೂಡಿಕೊಂಡಿ । ರ್ದನ್ನೋಡಲ್ಕೀಂ ಜನ್ಮಸ್ಥಿತಿಗತಿಯಿದು ಕೇಳ್ ಪ್ರೀತಿ
ಯಿಂ ಪೂರ್ಣಭದ್ರಾ ॥ ೭೦

ಎಂದು ಕಾಮಪಾಲಂ ತನ್ನ ವೃತ್ತಾಂತಮನೆನ್ನೊಳ್ ಪೇೞ್ದನೆಂದು ಪೂರ್ಣಭದ್ರಂ ಸುಜ್ಞನೆ ಸುಯ್ಯಲ್ಕೆ ಸುಯ್ದುದರ್ಕೆ ಕಾರಣಮೇನೆಂದು ನಾಂ ಕೇಳಲಾತಂ ಮಗುೞ್ದಿಂತೆಂದಂ:—

ಭಾವಿಪೊಡೆ ಕಾಮಪಾಲನ ।
ಮಾನಂ ಗುಣಿ ಚಂಡಸಿಂಹನಱಿಯಲೊಡಂ ಸ ॥

ದ್ಭಾವದಿನಾತನ ಸುತನಖಿ ।
ಳಾವನಿಗರಸಾಗಿ ನಿಂದಪಂ ಕೆಲವು ದಿನಂ ॥ ೭೧

ಅಂತು ಚಂಡಸಿಂಹಂ ಕಾಲನಿಲಯಮನೆಯ್ದಲಾತನ ಹಿರಿಯ ಮಗನಪ್ಪ ಚಂಡಘೋಷಂ ಪಟ್ಟವಂ ತಳೆದು

ಕತಿಪಯದಿನಕ್ಕೆ ತದ್ಭೂ ।
ಪತಿ ರಾಜ್ಯಶ್ರೀಯ ಸೌಖ್ಯಮಿನಿತಿಲ್ಲದೆ ಕೇಳ್ ॥
ಗತಜೀವಿತನಾದಂ ಸು ।
ಸ್ಥಿತಿಯಂ ದುಸ್ಸ್ಥಿತಿಯನೆಣಿಸಲಱಿವವರೊಳರೇ ॥ ೭೨

ಅಂತು ಚಂಡಘೋಷನುಮೞಿಯಲೊಡಂ,

ಅವನಿಂ ಕಿಱಿಯಂಗೆ ಮನೋ ।
ಭವಮೂರ್ತಿಗೆ ಸಿಂಹಘೋಷನೆಂಬ ಕುಮಾರಂ ॥
ಗೆ ವಿಲಾಸದಿಂದೆ ತತ್ಪ ।
ಟ್ಟವನಿತ್ತಂ ಕಾಮಪಾಲನತ್ಯುತ್ಸವದಿಂ ॥ ೭೩

ಅಂತಾಕಾಮಪಾಲಂ ಸಿಂಹಘೋಷನೆಂಬ ಕುಮಾರಂಗೆ ಪಟ್ಟವಂ ಕಟ್ಟಲೊಡನಮಂ ಕೆಲವು ದಿನಕ್ಕೆ ಯೌವನಮತ್ತನಾಗಿ ಧೂರ್ತವರ್ಗಮಂ ಕೂಡಿಕೊಂಡು ಪೇೞ್ದ ಕೊಂಡೆಯಮಂ ಕೇಳಲ್ ಮನಂದರಲ್ ಪಿಶುನರ್ ಪೊದಿರ್ ಯಿಂತೆಂದರ್:—

ಸಾಹಸವಂತನಿಂದ್ರಿಯರತಂ ಬಹುಮೂರ್ಖನತೀವಕಾಮುಕಂ ।
ಬಾಹುಪರಾಕ್ರಮಂ ಕುಟಿಲದೈವಪರಂ ಧನಧಾನ್ಯಯುಕ್ತನು ॥
ಗ್ರಾಹವಧೀರನಾದಧಿಕಮಂತ್ರಿಯನೇತಱಿಂದೆ ದುಷ್ಟಕಾ ।
ಳಾಹಿಯ ಗೋಣನೊತ್ತಿ ಮುಱಿವಂತನನಂ ಮುಱಿದಿಕ್ಕುಗುರ್ವಿಪರ॥

ತನ್ನಂ ಲೆಕ್ಕಿಸದವನಂ ।
ತನ್ನ ಸಮಶ್ರೀಯನುಳ್ಳನಂ ಸಾಹಸಿಯಂ ॥
ತನ್ನಿಂದಧಿಕನನಾರ್ಪಿಂ ।
ಮುನ್ನಿಱಿವುದು ಧೂರ್ತಸಚಿವನಂ ಭೂಪಾಲರ್॥ ೭೪

ಎಂದು ಲೋಕನೀತಿಯಂ ಪೇೞ್ವಂತೆ ಕಾಮಪಾಲಂಗಂ ಸಿಂಹಘೋಷಂಗಂ ವಿರೋಧಮಂ ಬಳೆಯಿಸಲೆಂದು

ನಿಮ್ಮಯ ತಂದೆಯುಂ ನಡುವಿರುಳ್ ಕೊಲಿಸೆಂದಸಿಯುರ್ಚಿ ಸಜ್ಜೆಯಂ ।
ಕೆಮ್ಮನೆ ಪೊಕ್ಕನೊರ್ಬರ್ ಖಚರೀಸಹಿತಂ ಸಲೆ ಕಾಮಪಾಲನಂ ॥
ದೊಮ್ಮೆ ವಧೂಟಿ ಕಾಂತಿಮತಿಯುಂ ನೃಪನಿತ್ತು ಬರ್ದುರ್ಗಂಕೆ ಮತ್ತೆ ಕೊಂ ।
ದಂ ಮನದಕ್ಕಿಱಿಂ ನೃಪತಿಯುಂ ಕುಟಿಲಂ ಮಿಗೆ ದುಷ್ಟಚೇಷ್ಟೆಯಿಂ ॥ ೭೬

ಅದಲ್ಲದೆಯುಂ ನಿಮ್ಮಗ್ರಜನಪ್ಪ ಚಂಡಘೋಷನಂ ಕಪಟದಿಂ ತೀರ್ಚಿದ ನೆಂದು ಪಲಬರ್ ಕೊಂಡೆಯುವಂ ಪೇಟಿಲಾಕುಮಾರನಿಂತೆಂದಂ:—

ಏಗೆಯ್ವೆಂ ಬಲ್ವಗೆಯಂ ।
ನೀಗಲ್ಬಾರದು ಸಮರ್ಥೆ ತಾರಾವಳಿಯೆಂ ॥
ಬಾಗಣಿಕೆಯ ಭಯದಿಂದಂ ।
ಮೂಗರ್ ಮಿಗೆ ಕಂಡ ಕನಸಿನಂತಾಯ್ತೀಗಳ್ ॥ ೭೭

ಎಂದು ತಾರಾವಳಿಯು ಭೀತಿಯಿಂ ಕಾಮ ಪಾಲಂಗೆ ಪೊಲ್ಲಹವನುಸಗಲಱಿ ಯದಿರ್ಪುದುಮೊಂದುದಿನಂ ಕಾಂತಿಮತಿ ಸಿಂಹಘೋಷನ ಕಾಂತೆಯಪ್ಪ ಲ ಕ್ಷಣೆಯ ಸಮೀಪಕ್ಕೆ ಪೋಗಲಾಲಕ್ಷಣೆ ಕಾಂತಿಮತಿಯ ಮುಖಮಂ ನೋಡಿ,

ಏನೆಲೆಗೆ ಕಾಂತಿಮತಿ ನಿ ।
ನ್ನಾನನಕಮಳಂ ಮಸುಳ್ದುದೇಕಾರಣಮೆಂ ॥
ದಾನರಪನರಸಿ ಬೆಸಗೊಳ ।
ಲಾನಮ್ರಶಿರಸ್ಕೆ ಕಾಂತಿಮತಿಯಿಂತೆಂದಳ್ ॥ ೭೮

ನಿನಗೇನಂ ವಂಚಿಸೆಂ ಲಕ್ಷಣೆ ಪದೆದು ಮದೀಶಪ್ರಿಯಂ ಕಾಮಪಾಲಂ ಮನೆಯೊಳ್ ಕೂಳ್ಪುದುರ್ ತಾರಾವಳಿಯನೊಸೆದು ಮನ್ಮಾನದಿಂದಿತ್ತ ಬಾ ಕಾ ॥ ಮಿನಿಯೆಂಮುತ್ಸಾಹದಿಂದಂ ಮಱೆದು ಕರೆಯೆ ತತ್ಕಾಂತೆ ಮಾತ್ಸರ್ಯದಿಂ ಭೋಂ । ಕನೆ ಪೋದಳ್ ತದ್ವಧೂಚಿಂತೆಯೊಳಳವಱಿಯುತ್ತಿರ್ದಪಂ ಮಂತ್ರಿಮುಖ್ಯಂ ॥ ೭೯

ಅದುಕಾರಣಮಾತನ ದುಗುಡಮೆ ಎನ್ನ ದುಗುಡಮಾಗಿರ್ದಪೆನೆಂದು ಪೇ ೞಲೊಡಂ

ಈಸುದ್ದಿಯನಾಲಕ್ಷಣೆ ।
ದೇಶಾಧಿಪಸಿಂಹಘೋಷನೊಳ್ ಪೇೞಲೊಡಂ ॥

ಕ್ಲೇಶಂ ಪ್ರೇಯಸ್ಯೆಂದು ಧರಾ ।
ಧೀಶಂ ತನ್ನಾಪ್ತವರ್ಗಮಂ ಕರೆಯಿಸಿದಂ ॥ ೮೦

ಅಂತು ಧೂರ್ತವರ್ಗಮಂ ಕರೆಯಿಸಿಯೋಲಗಂಗೊಟ್ಟಿರ್ದು

ಎನಸುಂ ತಾರಾವಳೀಕಾಂತೆಯ ವಿರಹದೊಳಂಗಂ ಬೆಳರ್ತುದುಷ್ಣಾದಿಂ
ದಾ । ನನಬಿಂಬಂ ಬಾಡಿ ಚಿತ್ತವ್ಯಥೆ ಪಸರಿಸಿ ಚಿಂತಾಗ್ನಿ ಕೈಕೊಂಡು ಪು
ಷ್ಪಾ ॥ ಸ್ತ್ರನ ಬಾಣಂ ಮೆಯ್ಗಳೊಳ್ ಕೀಲಿಸಿದಪ್ರಾಲಭಕೋನ್ಮಾದದಿಂ
ಕಾಮಪಾಲಂ । ಮನದೊಳ್ ಪುಂಗೆಟ್ಟು ಮತ್ತಂ ಧೃತಿಗಿಡದಿರವಂ ಕಂ
ಡನಾಸಿಂಹಘೋಷಂ ॥ ೮೧

ಅಂತು ಕಂಡು

ನೆರೆದಿರ್ದೋಲಗದೊಳ್ ಕೂ ।
ರ್ತರನೀಕ್ಷಿಸಿ ಸಂಜ್ಞೆಮಾಡಿ ರಾಜಕುಮಾರಂ ॥
ಭರದಿಂದೆ ಕಾಮಪಾಲನ ।
ನರವರಿಸದೆ ಪಿಡಿದು ಕಟ್ಟಿಸಿದನಾಕ್ಷಣದೊಳ್ ॥ ೮೨

ಅಂತು ಕಟ್ಟಿಸಿ ಮಿಥ್ಯಾರೋಪಂಗಳನುಗ್ಗಡಿಸಿಯನಂತರಂ

ಸಾಹಸವಿದನಂ ಸ್ವಾಮಿ ।
ದ್ರೋಹನನತ್ಯಧಮನಂ ನೃಪಾಲನ ಕನ್ಯಾ ॥
ಮೋಹಿಯನುದ್ದಕ್ಷಿಗಳಂ ।
ಲೋಹದ ಮೊನೆಯಿಂದೆ ಕಳೆಯಿಮೆಂದನಿಳೇಶಂ ॥ ೮೩

ಅಂತು ಭೂಮಿಪಾಲಂ ಗ್ರಾಮಪಾಲರ ಕೆಯ್ಯೊಳ್ ಕಾಮಪಾಲನಂ ಕು
ಡಲವರ್ ಚೌವಟಕ್ಕೆ ಕೊಂಡು ಪೋಗಿ ಕುಳ್ಳಿರಿಸುವುದನಾಂ ಕಂಡು,

ದೊರೆವೆತ್ತನ್ನಾಪ್ತಮಿತ್ರಂಗಿಸಿತಳವಡಲುದ್ವೇಗಮಾಪತ್ತುಮೂಹಂ ।
ಬರೆ ಕಂಡಾಂ ಪ್ರಾಣದಿಂ ಜೀವಿಸುವುದುಚಿತಮಲ್ತೆಂದು ಮದ್ದೇಹಮಂ
ಗೋ ॥ ಣ್ಕುಮಿಗೊಂಡಾನೀಗಳಲ್ಲಾಡುವ ಪೊಸವಗೆಯಿಂ ರಜ್ಜುವಂ ಮಾ
ಳ್ಪೆನೆಂದ । ಬ್ಬರಿಯಾಗಲ್ ಪೂರ್ಣಭದ್ರಂ ನಯನಜಲದೊಳಲ್ಲಾಡುತುಂ
ಪೇಳ್ದನೆನ್ನೊಳ್ ॥ ೮೪

ಅಂತು ಪೂರ್ಣಭದ್ರಂ ಪೇಳ್ದ ವೃತ್ತಾಂತಮಂ ಕೇಳ್ದಾನಿಂತೆಂದೆಂ:—

ತಾರಾವಳಿ ಸಲೆ ವಸುಮತಿ ।
ನಾರಿಗೆ ಕೊಂಡುಯ್ದು ಕೊಟ್ಟಳೆಂಬ ಮಗಂ ವಿ ॥
ಸ್ತಾರಮೆನೆ ಕಾಂತಿಮತಿಯ ಕು ।
ಮಾರಕನಾಂ ನಿನ್ನ ದುಃಖಮಂ ಬಿಡು ಬೇಗಂ ॥ ೮೫

ಎಂಬುದುಮಾತಂ ಕಣ್ಬನಿಯಂ ಬಿಟ್ಟೆನ್ನಾಸ್ಯಕಮಳಮಂ ನೋಡಿ ಬಳಿಕಂ ಬಿಗಿಯಪ್ಪಿ ನಿತಾಂತಸುಖಾಂಬುಧಿಯೊಳ್ ಮುಳುಂಗಿ ದುಃಖವಾರ್ಧಿಯನುಳಿದು

ಕಾಂತಿಮತಿಗಾದ ಪುಣ್ಯವ ।
ನಂತಿಂತೆನಲೇಕೆ ಕಾಮಪಾಲನ ಕಣ್ಗಳ್ ॥
ಮುಂತಿರ್ದೊಡಮಿಲ್ಲದೊಡಮ ।
ನಂತಸುಖಂ ಪುತ್ರನಾದಪಂ ತನಗೀಗಳ್ ॥ ೮೬

ಎಂದು ಪೂರ್ಣಭದ್ರಂ ಸಂತಸದಂತಮನೆಯ್ದಲ್ ಮತ್ತಮಿಂತೆಂದಂ:—

ನೆರವಿಯನೆಲ್ಲಮಂ ಭರದೊಳೊರ್ವನೆ ಮತ್ಸರಖಡ್ಗಘಾತದಿಂ ।
ದೊರಸಿ ಬಿಸುಟ್ಟು ನಿಲ್ವಧಿಕಸಾಹಸಮೆನ್ನೊಳೆ ಕೂರ್ತು ಸಂದೊಡೇಂ ॥
ದೊರೆಕಿದ ತಂದೆಯುಂ ಬಳಿಕ ಕೊಂದಪರಾಖಳರೆಂಬ ಶಂಕೆಗೋ ।
ಸರಿಸುವೆನಲ್ಲದಂದಿನಿತು ಸೈರಿಸಲಾರ್ಪನೆ ಪೂರ್ಣಭದ್ರಕಾ ॥ ೮೭

ಎಂದು ಪೇಳ್ದು ಪಿತೃಪ್ರಾಣರಕ್ಷಣೋಪಾಯಮಂ ಚಿಂತಿಸುತಿರ್ಪನ್ನೆಗಂ ಆದೇವಾಲಯದ ಕೋಂಟೆಯ ಬಿಲದಿಂ

ಮೊರೆಯುತ್ತುಂ ಕಾಳಕೂಟಜ್ವಲನಮನುಗುಳುತ್ತುಂ ವಿಷಜ್ವಾಲೆಯಿಂ ಕಾ । ಯ್ದುರಿವುತ್ತುಂ ಮಾರ್ಗಮಂ ಬಾಯ್ದೆಱೆದೆರೆಗೆಳಸುತ್ತುಂ ನರಚ್ಛಾಯೆ ಮುಂದೇ ॥ ಱಿತ್ತರೆ ಕಣ್ಣಿಂದಾಲಿಸುತ್ತುಂ ಪಸಿವಿನೆಸಕದಿಂದೊಂದು ಗಂಭೀರಛಿದ್ರಾಂ । ತರದಿಂ ಕಾಳೋರಗಂ ಮೆಲ್ಲನೆ ಪೊಱಮಡಲಾಂ ಕಂಡೆನುರ್ವೀಶವರೇಣ್ಯಾ ॥ ೮೮

ಅಂತು ಪಾವು ಪೊಱಮಡುವುದಂ ಕಂಡು

ಕಪಿಲಾಕ್ಷಂ ನೀಳ್ದ ತೋಳ್ಗಳ್ ನಿಶಿತಕುಟಿಲದಂಷ್ಟ್ರಾಂಕುರಂ ವಕ್ರನಾಸಂ।
ತಪನೀಯಪ್ರಾಯಕಾಯಂ ಫಣಿಗಣವಿವಿಧಾಲಂಕೃತಂ ತಳ್ತುಗೊಂಡಿ ॥

ದರ್ ಪತತ್ರಂ ತನ್ನೊಳೊಪ್ಪಿರ್ಪ ಹಿಕುಲರಿಪುವಂ ಸಂತತಂ ಸದ್ವಿಹಂಗಾ ।
ಧಿಪನಂ ಮಚ್ಚಿತ್ತದೊಳ್ ಭಾವಿಸಿದೆನತುಳಪಂಚಾಕ್ಷರೀಜಾಪ್ಯದಿಂದಂ ॥

ಗರುಡಧ್ಯಾನಮನೊಲ್ದಂ ।
ತರಂಗದೊಳ್ ನಿಱಿಸಿ ಪಂಚಮುಖಮಂತ್ರಮನು ॥
ಚ್ಚರಿಸಿಯುಪಸವ್ಯಕರದೊಳ್ ।
ಭರವಸದಿಂ ಪಿಡಿದೆನಾಭುಜಂಗಾಧಿಪನಂ ॥ ೯೦

ಅಂತು ಪಾವಂ ಪಿಡಿದು

ಎಲೆ ಪೂರ್ಣಭದ್ರ ಫಣಿ ಕೆ ।
ಯ್ಗೊಳಗಾಯ್ತತಿಶೀಘ್ರದಿಂದಮೆಮ್ಮಯ ಕಾರ್ಯಂ ॥
ಫಲಮಾಯ್ತು ಚಿಂತೆಯಂ ಬಿಡು ।
ತ್ತಿಳಿಯಲ್ ದೇಸಿಗರ್ಗೆ ದೈವಮುಳ್ಳುದು ಪುಸಿಯೇ ॥ ೯೧

ಅದೆಂತೆನೆ:—

ಈಪಾವನುಯ್ದು ಮುತ್ತಿದ ।
ಚಾಪಟದೊಳ್ ಪಿತನ ಮೇಲೆ ಬಿಸುಡಲ್ ವಿಷಮಂ ॥
ತಾಪಮನಿದು ಮಾಳ್ಕುಂ ಮೃತ ।
ರೂಪಂ ತಾನಾದನೆಂದು ಜನಮುಱಿವಿನೆಗಂ ॥ ೯೨

ಬಳಿಕಾಂ ಪ್ರಾಣಪ್ರತಿಷ್ಠೆಯಂ ಮಾಡಿ

ನಾಗಮತಮಂತ್ರದಿಂದಾ ।
ನಾಗಳ್ ವಿಷಮಂ ನಿರಂತರಂ ಸ್ತೋಭಿಸಿ ನಾ ॥
ನಾಗಾರುಡಿಗರ್ಗಸದಳ ।
ಮಾಗಲ್ ಮಾಳ್ಪಂ ಸ್ವಕಾರ್ಯವಶದಿಂದೀಗಳ್ ॥ ೯೩

ಅಂತು ವಿಷಮಂ ಸ್ತೋಭಿಸಲ್ ಕಾಮಪಾಲಂ ಕಾಲಭವನಮನೆಯ್ದಿದನೆಂದು ನೆರವಿಯೆಲ್ಲಂ ಪರೆದು ಪೋಗಲ್ ಬಳಿಕ್ಕಾಕಾಂತಿಮತಿ

ಎನ್ನ ಪತಿಯುಳಿದನೀಗೆನ ।
ಗಿನ್ನಾರ್ ಶರಣಾತನಲ್ಲದನುಗಮನಕ್ಕಾ ॥
ಸನ್ನಂ ಸಮಕಟ್ಟುವುದುಱಿ ।
ಮನ್ನಣೆಯಿಂದೆನಗೆ ಸಿಂಹಘೋಷನರೇಂದ್ರಾ ॥ ೯೪

ಎಂದರಸಂಗೆ ಪೇೞ್ದನುಗನುನಕ್ಕನುವಾಗಿ ಸರ್ವಾಲಂಕಾರಂಗೆಯ್ದ್ಯಲ್ ಕಾಮಪಾಲನ ಶಬವಂ ಕೊಂಡು ಪೊಗಲ್ ಬೞಿಕ್ಕನಲ್ಲಿಗೆ ಬಂದಾತನ ಪ್ರಾಣಮಂ ಪಡೆವೆನೆಂದು ಪೂರ್ಣಭದ್ರಂಗೆ ಪೇೞ್ದು ಮತ್ತಮಿಂತೆಂದಂ:—

ಎನ್ನಮ್ಮನ್ಗೆ ಪೇೞೆಲವಿಂ ।
ಕೆಮ್ಮನೆ ನೀಂ ಬಿಸುಡಲಿತ್ತ ನಿಜಸುತನೇೞ್ತಂ ॥
ದಮ್ಮಾಣುಮ್ಮಳಿಕೆಯುನಧಿ ।
ಪಮ್ಮರಣದಿನುೞಿವನೆಂಬ ಶುಭವಾಚಕವಂ ॥ ೯೫

ಎಂದು ಪೂರ್ಣಭದ್ರನಂ ಕಾಂತಿಮತಿಯು ಸಮೀಪಕತ್ತಲ್ ಕಳಪಿ ಇತ್ತಲಾಂ ಕಾಮಪಾಲನಿರ್ದ ಚಾವಟಿಕ್ಕೆ ಬಂದು ನೋೞ್ಪನಂ

ವಿಲಸದ್ಯೋಗವಿಲಾಸನುಂ ನಿಜವಪ್ರಸ್ವಭಾಗ್ಯದಿಂ ಧಾತ್ರಿಯೊಳ್ ।
ಬೆಳಗುತ್ತಿರ್ಪವೃತಾಂಶುಬಿಂಬಕಳಿಗಳ್ ಚಂಚತ್ಸುಧಾಬಿಂದುಸಂ ॥
ಮಿಳಿತಂಗಳ್ ತವೆ ಕೊಂಬುಕೊಂಬಿನೆಡೆಯೊಳ್ ಸಿಲ್ಕಿರ್ದಪೋಲ್ ಪುಷ್ಪದಿಂ।
ಫಲದಿಂ ರಂಜಿಸುತಿರ್ದುದೊಂದು ಸತತಂ ಚೆಲ್ವಪ್ಪ ಚಿಂಚಾದ್ರುಮಂ ॥

ಅಂತಿರ್ದುದೊಂದು ಪುಣಿಸೆಯ ಮರನಂ ಪಲಂಬರೇಱಿ ಕಾಮಪಾಲನಂ ನೋಡುತ್ತಿರಲಾನುಮೊಂದೆಳಗೊಂಬಿನೊಳ್ ಕುಳ್ಳಿರ್ದಾಗಳ್

ಅರಸನುಮಂ ತತ್ಸುತನುಮ ।
ನರವರಿಸದೆ ತೀರ್ಚಿದಂ ಮುಗುೞ್ದಿರ್ದಂಗಂ ॥
ಗರಳಮುನಿಕ್ಕಿ ಕೊಲಲ್ ಚೆ ।
ಚ್ಚರದಿಂ ಬಗೆದಂ ಸಮಸ್ತಮಿತ್ರದ್ರೋಹಂ ॥ ೯೭

ಎಂದೊರ್ಬ ಮಾತಂಗಕಂ ಮೂಱು ಸೂೞ್ ಸಾಱಿ ಕಾಮಪಾಲನ ಕಣ್ಗಳಂ ಗತಜೀವಿತನಪ್ಪ ಮಾಚ್ಕೆಯಿಂ ಪೆಡವಲೆಯೊಳ್ ತೋಡುವೆನೆಂಬ ಸಮಯದೊಳ್

ಮುಸುಕಿನೊಳಗಿರ್ದ ಪಾವಂ ।
ಸಸಿನಂ ಮತ್ಸ್ರಿತನ ಮೇಲೆ ಬಿಸುಡಲೊಡಂ ಮುಂ ॥
ಪಸಿದಿರ್ದದಾಂಡಿತತಿ ಸರ ।
ಭಸದಿಂ ಪಿತನುಮನೊಳಿಲ್ಪ ಮಾತಂಗನಮಂ ॥ ೯೮

ಅಂತು ಕಾಳೋರಗಂ ಕರ್ಚಲ್ ಮಂತ್ರಿತನ ಪ್ರಾಣಪ್ರತಿಷ್ಠೆಯನಾರು ಮುಱಿಯದಂತು ಮಾಡಿ ವಿಷಮಂ ಸ್ತೋಭಿಸೆ,

ಮಾತಂಗಕಂ ಕೃತಾಂತನಿ |
ಕೇತನಮುಂ ಪ್ರೋಕ್ತನೆಂದೊಡೀವಿಷದಿಂ ಮು ||
ತ್ರೀತಂ ಬ*ರ್ದುಕುವನೆ ಎನು |
ತ್ತೋತ್ರೆಲ್ಲರ್ ಕಾಮಪಾಲನೊಡಲಂ ಬಿಸುಟರ್ || ೯೯

ಜನಪತಿ ಕೊಲಿಸದೆ ಕಳೆ ಲೋ |
ಜನಮೆರಡನೆನಲ್ಕೆ ಪಾಪಿ ಮಾಡಿದ ಪಾಪಂ ||
ಘನಮಾದುದಱಿಂ ದೈವಂ |
ಮುನಿದಸುವಂ ಕೊಂಡುದಱಿದನಧಿಕದ್ರೋಹಂ || ೧೦೦

ಎಂಪಲ್ಲಿರ್ದವರೆಲ್ಲರುಂ ಕಾಮಪಾಲನ ಕಳೇವರಮಂ ಬಿಸುಟ್ಟು ಪೋಗಲಾಂ ಪೇೞ್ದ ತೆಱದಿಂ ಮುನ್ನಮೆ ಪೂರ್ಣಭದ್ರಂ ಕಾಂತಿಮತಿಗೆ ಬುದ್ಧಿವೇಳ್ದೊಡಾಕಾಂತಿಮತಿ ಸಿಂಹಘೋಷನಿರ್ದೆಡೆ ಪೋಗಿ,

ಎನ್ನಧಿಪಂ ನಿನಗೊಡರಿಸಿ |
ದನ್ನಯದಿಂಗಱಿದನಾತನೊಡನಾಂ ಪೋಗಲ್ ||
ಮುನ್ನಮೆ ಸಿದ್ಧಂ ಸಹಗಮ |
ನನ್ನೆಟ್ಟನೆ ಧರ್ಮಮಲ್ತೆ ನನಗೆ ನೃಪಾಲಾ || ೧೦೧

ಪಾತಕನಾದೊಡಂ ಪಿಶುನನಾದೊಡಮೆಲ್ಲರೊಳುಗ್ರನಾದೊಡಂ |
ಘಾತುಕನಾದೊಡಂ ಪತಿಯೆ ತನ್ನಧಿದೈವಮೆನಿಪ್ಪ ಕಾಂತೆ ಸಂ ||
ಪ್ರೀತಿಯನಪ್ಪುಕೆಯ್ದು ಪತಿಯಾದವ್ರೊಲಪ್ಪುದು ಧರ್ಮಮಲ್ತೆ ಕೇಳ್ |
ಭೂತಳನಾಥ ಕೂರ್ತೆನಗನುಜ್ಞೆಯನಗ್ನಿಯೊಳೀವುದಱ್ತೆಯಿಂ || ೧೦೨

ಎಂದು ಬಿನ್ನಪಂಗೆಯ್ಯಲಾತಂ ಮನದೊಳ್ ಗುಡಿಗಟ್ಟಿ ಶತ್ರುನಿಶ್ಶೇಷಮಕ್ಕೆಂದಗ್ನಿಪ್ರವೇಶಕ್ಕನುಜ್ಞೆಯುಂ ಕುಡಲೊಡಂ

ಶವಶೃಂಗಾರಂಗೆಯ್ಯಲ್ |
ಭವನಕ್ಕಾಕಾಮಪಾಲಸಚಿವನ ನಿಜದೇ ||
ಹವನುಯ್ದೋವರಿಯೊಳ್ ಸಂ |
ತವಿಟ್ಟು ಮನ್ಮಾರ್ಗಮಂ ನಿರೀಕ್ಷಿಸುತಿರ್ದಳ್ || ೧೦೩

ಅಂತು ಪೂರ್ಣಭದ್ರನುಂ ಕಾಂತಿಮತಿಯುಮಿರ್ಪನ್ನಂ ಬರಮಂ ಪಾರುತ್ತಿರ ಲಾಂ ಪ್ರಚ್ಛನ್ನವೇಷದಿಂ ಬಂದು ಪೂರ್ಣಭದ್ರನಿಂ ಕಾಂತಿಮತಿಯು ಕುಱು ಪನಱಿದು,

ಕಣ್ತಿವಿ ನೋಡಿ ಮತ್ತಂ ।
ಗೋಣ್ಮೊಟ್ಟನೆ ಬಿಗಿಯೆ ಸೆರೆಗಳಿಂ ಮೋಹಕುಜಂ ॥
ಪಣ್ತೆಸೆಯಲೆಱಗಿದೆಂ ಸಲೆ ।
ಪೂಣ್ತನ್ನಯ ಪುಣ್ಯಸಿದ್ಧಿಯಾಯ್ತೆಂದಾಗಳ್ ॥ ೧೦೪

ಅಂತು ಕಾಂತಿಮತಿಗೆ ನಮಸ್ಕಾರಮಂ ಮಾಡಲೊಡಂ,

ಸ್ತನದಿಂ ಚುಮ್ಮೆಂದು ಪಾಲ್ಗಳ್ ಸುರಿಯೆ ಭುಜಯುಗಂ ಪೆರ್ಚೆ ವಕ್ತ್ರಂ
ಬುಜಂ ಪೆಂ । ಪಿನ ಸೊಂಪಂ ಬೀಱಲೆನ್ನಂ ಪರಸಿ ನೆಗಪಿಯೊಲ್ದಪ್ಪಿ ಮುಂ
ಡಾಡಿ ಮದ್ಭಾ ॥ ಗ್ಯನಿಧಾನಂ ಕೆಯ್ಗೆ ಸಾರ್ದತ್ತಿಳೆಯೊಳಧಿಕರಾರೆನ್ನವೋ
ಲೆಂದು ಕಣ್ಣಾಂ । ಬಿ ನಿತಾಂತಂ ನೋಡುತಿರ್ದಳ್ ಜನನಿ ನಲವಿನಿಂದೆನ್ನ
ನಾಗಳ್ ನರೇಂದ್ರಾ ॥ ೧೦೫

ಅಂತು ನೋಡಿ,

ಅಱಿದಿರ್ದುಂ ತಾರಾವಳಿ ।
ಪೆಱಳ್ಗೆ ವಸುಮತಿಗೆ ಕೊಟ್ಟಳೆನ್ನಯ ಮಗನಂ ॥
ನೆಱೆನೋಂಪಿಯುಮೆಸಗದವಳ್ ।
ತಱಿಸಲ್ವಳೆ ಪುತ್ರಸುಖದೊಳೆಂತೆಳಸಿದೊಡಂ ॥ ೧೦೬

ತೊದಳೆಸೆವ ನುಡಿಗಳಂ ಚೆ ।
ಲ್ವೊದವಿದ ದಟ್ಟಡಿಯನುಮರ್ದೊ ದೂಳಾಟದ ಸಂ ॥
ಪದವನುಱೆ ಕೇಳ್ವ ಕಾಣ್ಬಾ ।
ಭ್ಯುದಯಂ ದೊರೆಕೊಳ್ವ ಪುಣ್ಯಮೆನಗಾದಪುದೇ ॥ ೧೦೭

ಎಂದು ಮಗುೞ್ದು ಮಗುೞ್ದಪ್ಪಿ ಮಂಬಿಕೆಗಾನಂದಮನೆಸಗಿಯನಂತರಂ ಸರ್ಪದಷ್ಟನಾಗಿ ಶವರೂಪದಿಂದಿರ್ದ ಕಾಮಪಾಲನೆಡೆಗೆ ಬಂದು

ಗಾರುಡಪಂಚಾಕ್ಷರಿಯಿಂ ।
ನೀರಂ ಮಂತ್ರಿಸುತುಮಮೃತಪಂಚಾಕ್ಷರಿಯಿಂ ॥

ದಾರಣೆಯುಂ ಜಪಿಸುತ್ತುಂ ।
ಮಾರಾರಿಯ ನೀಲಕಂಠನಂ ಧ್ಯಾನಿಸಿದಂ ॥ ೧೦೮

ಸರಸಿಜನೇತ್ರನಿಂದ್ರನಜನಷ್ಟದಿಶಾಧಿಪರಾದಿಯಾದ ದೇ ।
ವರ ಗಡಣಕ್ಕೆ ಭೀತಿಯನೊಡರ್ಚುವ ದುರ್ದಮಕಾಳಕೂಟಮಂ ॥
ಕರಕಮಳಂಗಳಿಂ ಪೊಸೆದು ಸಾದಿನ ಮಾತ್ರೆಯೊಳೊಲ್ದು ಕಂಠದೊಳ್
ಧರಿಸಿದ ನೀಲಕಂಠನ ನಿಜಾಕೃತಿಯುಂ ನೆನೆದಂ ನೃಪಾಲಕಂ ॥ ೧೦೯

ಕಪಿಲಾಕ್ಷಂ ನೀಳ್ದ ತೋಳ್ಗಳ್ ಮಿಸುಪ ನಿಶಿತದಂಷ್ಟ್ರಾಂಕುರಂ ವಕ್ರ
ನಾಸಂ । ತಪನೀಯಪ್ರಾಯಕಾಯಂ ಫಣಿಕುಲವಿವಿಧಾಲಂಕೃತಂ ತಳ್ಕೆ
ಗೊಂಡಿ ॥ ರ್ದ ಪತತ್ರಂ ತನ್ನೊಳೊಪ್ಪಿರ್ಪ ಹಿಗ್ಗಣರಿಪುವಂ ಶೀಘ್ರದಿಂ ತದ್ವಿ
ಹಂಗಾ । ಧಿಪನಂ ಮಚ್ಚಿತ್ತದೊಳ್ ಭಾವಿಸಿದನನುಳಪಂಚಾಕ್ಷರೀಜಾಪ್ಯ
ದಿಂದಂ ॥ ೧೧೦

ಅಂತು ನೀಲಕಂಠಗರುಡರ ಧ್ಯಾನಮಂ ಮಾಡಿ ಯಮೃತಪಂಚಾಕ್ಷರಿಯಿಂ
ದುದಕಮಂ ಮಂತ್ರಿಸಿ ಮುಖದೊಳ್ ತಳಿದು

ಹಾಮೆಕ್ಕೆಯ ಹಣ್ಣೊಳತ್ತಿ ।
ಕ್ಷೀಮದೊಳರಿಸಿಟ್ಟ ಸುಂಟಿ ಹಿಪ್ಪಲಿ ಮೆಣಸಂ ॥
ಬೀಮಾಜನಾತ್ಮಜಲದಿಂ ।
ಪ್ರೇಮದಿನಾತಂಗೆ ನಲಿದು ನಸ್ಯಂಗೆಯ್ದಂ ॥ ೧೧೧

ಅಂತು ನಸ್ಯಂಗೆಯ್ಯಲೊಡಂ,

ತನುವಿನ ಕಾಳಿಮಂ ಪಱಿದು ಸುರ್ಕಿದ ಗೋಣ್ ಸರಿಸ್ಥಿತನಾಗಿ ತ ।
ಣ್ಪಿನ ಬೆಮರುಣ್ಮಿ ರೋಮನಿಕರಂ ತಲೆಯೆತ್ತಿ ಬೆರಲ್ ನಿಮಿರ್ದುವ್ ಲೋ॥
ಚನಮರೆನೀರಡರ್ದುಸಿರ್ಗಳೊಯ್ಯನೆ ತುಂಬಿ ವಿಷಂ ಕಱಿಲ್ದು ಭೋಂ।
ಕೆನೆ ಪಿತನೊಲ್ದು ಕಣ್ದೆಱೆದು ನೋಡಿದನೆನ್ನ ಮುಖೇಂದುಬಿಂಬಮಂ ॥

ಆದೆಂತೆನೆ:—

ಮುನ್ನಱಿವಂದದಿಂ ಮುಕುರದೊಳ್ ಪ್ರತಿಬಿಂಬಮನೀಕ್ಷಿಪಂದದಿಂ ।
ತನ್ನ ಶರೀರಮೀಗಳೆರಡಾದಪ್ರದೆಂಬಭಿಶಂಕೆಯಿಂ ಮಗು ॥
ಳ್ದೆನ್ನಯ ಜನ್ಮಕಾರಣನಿವಂ ಪೆಱನಲ್ತೆನಿಪಂದದಿಂ ಪೊದ ।
ಳ್ದೆನ್ನ ಮುಖಾಬ್ಜಮಂ ಪದೆಪಿನಿಂದೆವೆಯಿಕ್ಕದೆ ನೋಡಿದಂ ನೃಪಾ ॥ ೧೧೨

ಅಂತು ನೋಡಿ ಮೆಯ್ಮುಱಿದೆಚ್ಚಱ್ತು ಕುಳ್ಳಿರಲೊಡಂ,

ಲಲನೆ ವಸುಮತಿಗೆ ತಾರಾ ।
ವಳಿ ಕೊಟ್ಟುರಿಸಿಟ್ಟು ನಿಮ್ಮ ನಂದನನಾಂ ಕೇ ॥
ಳಲೆ ಪಿತ ಎಂದಾತನ ಪದ ।
ನಳಿನಕ್ಕಭಿವಾದನೋಕ್ತಿಯಿಂ ಪೊಡೆಮಟ್ಟಂ ॥ ೧೧೪

ಅಂತು ಪೊಡೆಮಡಲ್

ಗಾರುಡಮಂತ್ರೌಷಧಿಗಳ ।
ಕಾರಣದಿಂ ಬಂದುದಲ್ತು ಮಜ್ಜೀವಂ ವಿ ॥
ಸ್ತಾರಮೆನಲಾತ್ಮಜಾತಾ ।
ಕಾರಮನೀಕ್ಷಿಸುವುದರ್ಕೆ ಬಂದುದು ದಿಟದಿಂ ॥ ೧೧೫

ಇಂದೆನ್ನ ಜನ್ಮಫಲಮಾ ।
ಯ್ತೆಂದು ಪುನರ್ಜನ್ಮಮಾಯ್ತು ಮನ್ನೇತ್ರಕ್ಕಾ ॥
ನಂದಂ ದೊರಕಿತ್ತೆಂದೊಲ ।
ವಿಂದಂ ಮುಯ್ವಾಂತು ಪೆರ್ಚಿದಂ ಮಜ್ಜನಕಂ ॥ ೧೧೬

ಅಂತು ಸಂತೋಷಮಂ ತಳೆದಿರ್ದ ತಂದೆಗಾನಿಂತೆಂದೆಂ:—

ಮೇಲಪ್ಪ ಕಾರ್ಯಮಂ ಪದೆ ।
ದಾಲೋಚಿಸಿ ನಿಮ್ಮನಿನಿತು ಬಾಧಿಸಿದರಿಯಂ ॥
ಕಾಲನ ಮನೆಗಟ್ಟಿ ಧರಾ ।
ಪಾಲನೆಯಂ ಮಾಳ್ಪುಪಾಯಮೆಂತುಟೊ ಜನಕಾ ॥ ೧೧೭

ಎಂದೊಡಾಕಾಮಪಾಲನಿಂತೆಂದಂ:—

ನೃಪನೊಳ್ ಪ್ರತಿಪಕ್ಷಿಗಳಾ ।
ದ ಪರರನೊಳಪೊಯ್ದುಕೊಂಡು ನಮ್ಮರಮನೆಯೊಳ್ ॥
ಸಪರಿಗ್ರಹನಾಗಿರ್ದಂ ।
ಗಪಕಾರಮೆನೆಸಗುವಂ ದಿನಕ್ರಮದಿಂದಂ ॥ ೧೧೮

ಎಂದು ಸಕಲಪರಿವಾರಮನಂತರ್ಭೇದಂಗೆಯ್ವುಪಾಯದಿಂ ಕಾಂತಿಮತಿ ಕಾಮಪಾಲನೊಳ್ ತನ್ಮಂದಿರದೊಳ್ ಸಹಗಮನಂಗೆಯ್ದಳೆಂಬ ಸುದ್ದಿಯಂ ಪ್ರಸಿದ್ಧಂಮಾಡಿರಲಾನಿತ್ತಲ್,

ಅವನಿಪತಿ ಸಿಂಹನಿರ್ಘೋಷಂ ।
ಪವಡಿಸುವಾಲಯ ಮನಱಿದು ರಾತ್ರಿಯೊಳಾಂ ಕ ॥
ನ್ನವನಿಕ್ಕಿ ಪೋಗುತಿರ್ಪ ।
ಲ್ಲಿ ವಿಳಾಸದೆ ಕಂಡೆನೊಂದು ನೆಲಮಾಳಿಗೆಯುಂ ॥ ೧೧೯

ಅದಱೊಳ್

ಕಮಲಜನಾಪ್ತ ಕಾಲಧನಮೊಂದಿರಿಸಿಟ್ಟ ಲಸದ್ವಧೂನಿಧಾ ।
ನಮೊ ರವಿತಾಪದಿಂ ಸಿಡಿದು ಬಂದಡಗಿರ್ದರುಚಂದ್ರಿಕಾಪ್ರತಾ ॥
ನಮೊ ಭುಜಗೇಂದ್ರಕನ್ಯೆಯರನೀಕ್ಷಿಸಿ ಪೋಪಮರಾಂಗನಾಸಮೂ ।
ಹಮೊ ಎನಿಪೊಂದು ಶಂಕೆ ನೆಲಸಲ್ ಮೆಱೆದತ್ತಬಲಾಕದಂಬಕಂ ॥ ೧೨೦

ಅಂತು ನೆಲಮಾಳಗೆಯೊಳಿರ್ದ ಕನ್ನೆಯರೆನ್ನಂ ಕಂಡು

ಮಱಿವುಲ್ಲೆಗಳಾದೆ ಸಗುನ ।
ಬೆಱಗಾಳಿಗೆ ಬೆದಱುವಂತೆ ಕಾಂತೆಯರೆನ್ನಂ ॥
ನೆಱೆ ಕಂಡು ಲಜ್ಜೆಯಿಂ ಮೊ ।
ಯ್ಮಱೆದು ಕರಂ ಭೀತಿಯಿಂದೆ ತಳವೆಳಗಾದರ್ ॥ ೧೨೧

ಅಂತು ಬೆಚರ್ವ ಕನ್ನೆಯರ್ಗೆ ನಂಜದಿರೆಂಬ ವಾಕ್ಯಸನ್ನಾಹಮಂ ತೋಱಿಸಲಲ್ಲಿ,

ತೊಳಪಕ್ಷಿದ್ಯುತಿಯುಂ ರದಚ್ಛವಿಗಳಂ ಕರ್ಣೋತ್ಪಲಜ್ಯೋತ್ಸ್ನೆಯುಂ ।
ವಿಳಸನ್ಮೌಕ್ತಿಕಹಾರದೀಧಿತಿಗಳಂ ಚಂಚನ್ನಖಜ್ಯೋತಿಯುಂ ॥
ತಲೆಯೊಳ್ ಪೆತ್ತೆಸೆವಂತೆ ನುಣ್ಣಱೆಗಳಂ ತಾಳ್ದಂಗಶೈಥಿಲ್ಯದಿಂ ।
ಲಲನಾಸಂಕುಳಮಧ್ಯದೊಳ್ ಮೆಱೆವವೊರ್ಬಳ್ ವೃದ್ಧೆಯಿರ್ದಳ್ ನೃಪಾ ॥

ಅಂತಿರ್ದ ವೃದ್ಧೆ ಅಲ್ಲಿಪ್ಪ ರಾಜಕುಮಾರಿಯನೊರ್ಬಳಂ ತೋಱಿ

ಈಲಲನೆಗಿನಿಬರಂ ಪತೆ ।
ದೋಲಗಿಸಲ್ಕಿರಿಸಿಯುನ್ನಪಾವಾದಿಗಳಂ ॥
ಕಾಲಾವಧಿಗಿತ್ತಿಪಾ ।
ತಾಳಗೃಹಾಂತರದೊಳೆಮ್ಮನಿರಿಸಿದನರಸಂ ॥ ೧೨೩

ಕಾಂತಿಮತಿಗಾದ ಕಾರ್ಯದ ।
ಚಿಂತೆಯೊಳೀನೃಪಕುಮಾರಿಯುಂ ಧರಣೀಶಂ ॥

ಪಾತಾಳಗೃಹದೊಳಿರಿಸಿದ ।
ನೀತೆಱದಿಂದಂ ದಶಾಬ್ದಮಾದತ್ತೀಗಳ್ ॥ ೧೨೫

ಎಂದೊಡಾಂ ಕಾಂತಿಮತಿಯ ಕುಮಾರನೆಂದು ಸೂಚಿಸಲವಳ್ ಮತ್ತಮಿಂತೆಂದಳ್:—

ಪೂರ್ವದೊಳೊಲ್ದು ಕಾಂತಿಮತಿಗೊಸ್ವವ ಲಕ್ಷಣೆ ನನ್ನಿಯಿತ್ತಳಾ ।
ನೊರ್ವ ಕುಮಾರಿಯುಂ ಪಡೆದು ನೀಂ ಮಗನಂ ಪಡೆದಪ್ಪೆಯಾದೊಡೇ ॥
ನುರ್ವರೆ ಮೆಚ್ಚಲೀವೆನವಳಂ ನಿನಗಾದ ಕುಮಾರಕಂಗೆ ಮು ।
ತ್ತೊರ್ವರೊಳೊರ್ವರಿಂತುಸಿರ್ದುದಂ ಪದೆದಾನಱಿವೆಂ ಕುಮಾರಕಾ ॥

ಎಂದು ವೃದ್ಧೆ ಪೇೞ್ದುದಂ ಕೇಳ್ದಾಂ ಸಿಂಹಘೋಷನಿರ್ದೆಡೆಗೆ ಪೋಗಿ ಬಂದು ನಿನ್ನಭಿಮತಮುಂ ಮಾೞ್ಪೆನೆಂಬುದುಮಾವೃದ್ಧೆಯಿಂತೆಂದಳ್ :—

ಇತ್ತಲಿದೆ ಮಾಲೆಗಂಭವ ।
ನೆತ್ತಲ್ ತಳದಲ್ಲಿ ಬಾಗಿಲಿರ್ದಪುದದಱೊಳ್ ॥
ಬಿತ್ತರದಿಂ ನಡೆಯಲ್ ಭೂ ।
ಪೋತ್ತಮನಿರ್ದೆಡೆಯನೆಯ್ದಲಕ್ಕುಮಮೋಘಂ ॥ ೧೨೬

ಎಂದಾವೃದ್ಧೆ ಪೇೞ್ದೊಡಾಕ್ರಮದಿಂ ನೆಲಮಾಳಿಗೆಯ ಮಾಲೆಗಂಭಮನೆತ್ತಿ ದಾರಿಯಂ ಕಂಡು ತನ್ಮಾರ್ಗದೊಳ್ ಸಿಂಹಘೋಷನ ಸಜ್ಜೆಯ ಮನೆಯಂ ಪೊಕ್ಕು

ಬಿಲದೊಳಗಿರ್ದಹಿಯುಂ ಖಗ ।
ಕುಲಪತಿ ಪಿಡಿದೆೞೆವ ಮಾೞ್ಕೆಯಿಂದಂ ನಾಂ ಮೆ ॥
ಯ್ಗಲಿ ಸಿಂಹಘೋಷನಂ ಮುಂ ।
ದಲೆಯಂ ಪಿಡಿದೆೞೆದೆನಿರ್ದ ಸಜ್ಜೆಯ ಮನೆಯಿಂ ॥ ೧೨೭

ಅಂತವನಂ ಕೋಡಗಗ ।
ಟ್ಟಂ ತಡೆಯದೆ ಕಟ್ಟಿ ಬಂದ ಬಟ್ಟೆಯೊಳೀೞ್ತಂ ॥
ದಂ ತರುಣಿಯರಿರ್ದೆಡೆಗೆ ನಿ ।
ಶಾಂತಂ ಸಂಕಲ್ಪಸಿದ್ಧನಾಗಿ ನೃಪೇಂದ್ರಾ ॥ ೧೨೮

ಬೞಿಕಲ್ಲಿರ್ದ ಮಣಿಪುತ್ರಿಕೆ ಮೊದಲಾದ ಸ್ತ್ರೀಯರಂ ಸಿಂಹಘೋಷನಂ ಮನ್ಮಾತೃಪಿತೃಸಮೀಪಕ್ಕೆ ತಂದು.

ನಿಮಗೆ ವಿರೋಧಮಂ ಬಗೆದ ದೋಷಿಯನಗ್ಗಳಸಿಂಹಘೋಷಭೂ ।
ರಮಣನನೊಂದು ಚೆಲ್ವ ನೆಲನಾಳಗೆಯೊಳ್ ನೆಲಸಿರ್ದ ಕಾಮಿನೀ ॥
ಸಮುದಯಮಂ ನಿಜಾಂಘ್ರಿಯುಗಮಂ ಮಿಗೆ ಕಾಣಿಸಿ ಕೊಳ್ವೆನೆಂದು ತ।
ತ್ಕ್ರಮದೊಳೆ ಸಾರ್ಚಿದಂ ಪಿತೃಗಳಬ್ಬರ ಮೆಲ್ಲಡಿಗಳ್ಗೆ ಭೂಪನಂ ॥

ಅಂತು ಸಿಂಹಘೋಷನಂ ತರಬೊಡಂ ಕಾಂತಿಮತಿ ಕಂಡು ಕ್ಲೇಶಿತೆಯಾಗಿ ಬಿಡಲ್ವೇಳ್ಕೊಳ್ದೊಡಂ ಬಿಡದೆ ಅದೆ ಮಹೂರ್ತಮಾಗಿ ಮಣಿಪುತ್ರಿಕೆಯೊಳ್ ಮದುವೆನೆಱೆದನಂತರಂ ದುಷ್ಟನಿಗ್ರಹಂಗೆಯ್ದು ಕಾಮಪಾಲನಂ ರಾಜ್ಯಸ್ಥನಂ ಮಾಡಿ ದೇವರಂ ವಿಚಾರಿಸಲ್ ಪೊಱಮಡುವಾಗಳ್

ತನಗೆ ಬಲಮಾಗಿ ಬರ್ಕೆಂ ।
ದನ ನಯದಿಂ ಸಿಂಹವರ್ಮನೊಲವಿಂ ಪೇಳ್ದು ॥
ಟ್ಟೆ ನಿರಾಕುಳದಿಂದಿಲ್ಲಿಗೆ ।
ಮನವೊಸೆದೆಯ್ತಂದು ದೇವ ನಿಮ್ಮಂ ಕಂಡೆಂ ॥　　　　೧೩೦

ಎಂದರ್ಥಪಾಲಂ ತನ್ನ ವೃತ್ತಾಂತಮಂ ರಾಜವಾಹನಂಗೆ ಪೇಳ್ದು ಕೆಯ್ಗಳಂ ಮುಗಿದಿರೆ,

ಸುಲಲಿತನೀತಿಯುಂ ಲಸದುಪಾಯಮುಮನೊಪ್ಪುವ ಮಂತ್ರತಂತ್ರಸಂ ।
ಕುಳದಿವರಾತಿಯುಂ ಜಯಿಸ ಮಾಯತಮಂ ಪಡೆದರ್ಥಪಾಲನಂ ॥
ತಿಳಿಯೊಳದಾವಮಂ ತಿಳಿಯಲಾರ್ಪವನೆಂದನುರಾಗದಿಂ ಕಳಾ ।
ನಿಳಯನನಾರತಂ ಪೊಗಳ್ದು ಮೆಚ್ಚಿದನಾಗಳಭಂಗವಿಕ್ರಮಂ ॥　　　　೧೩೧

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಅರ್ಥಪಾಲಕಥಾವೃತ್ತಾಂತಂ
ನವಮಾಶ್ವಾಸಂ

॥ ದಶಮಾಶ್ವಾಸಂ ॥

—ಉಪಹಾರವರ್ಮನ ಕಥೆ—

ಶ್ರೀನಾರೀನಿಳಯಂ ವಿ ।
ದ್ಯಾನಿಧಿಯುಪಹಾರವರ್ಮನಂ ಕೇಳ್ದಂ ನೀ ॥
ನೇನಂ ಮಾಡಿದೆಯೆಂದ ।
ತ್ಯಾನಂದದಿನೊಲ್ದು ಭಂಗವಿಟ್ಟ್ರಲಭ್ಯತ್ವಂ ॥ ೧

ಎಂದೊಡುಪಹಾರವರ್ಮಂ ರಾಜವಾಹನಂಗೆ ಕೆಯ್ಗಳಂ ಮುಗಿದಿಂ ತೆಂದಂ:—

ಎಲ್ಲರ ಚೆಂದದಿಂದಱಿಸಲಾಂ ನಿಜಪಾದಪಯೋಜಯುಗ್ಮಮಂ ।
ಪಲ್ಲವ ಪಾರಿಯಾತ್ರ ಮಗಧಾಂಧ್ರ ತುರುಷ್ಕ ಕಳಿಂಗದೇಶಮಂ ॥
ಬೆಲ್ಲಡೆಯಂ ತೊಟಿಲ್ದು ಮಿಥಿಳಾವಿಷಯಾಂತರದೊಳ್ ಬರುತ್ತಿರ ।
ಲ್ಕಲ್ಲಿ ಜಗತ್ಪ್ರಸಿದ್ಧಿವಡೆದಿರ್ದುದು ಕೇಳ್ ಮಿಥಿಳಾಪುರಂ ನೃಪಾ ॥ ೨

ಅದು ಸತ್ಪಾತ್ರಹಸ್ತದಂತೆ ಪತಾಕಾಭಿರಾಮಮುಮಂ, ಶಿಷ್ಟಾಗ್ರಹಾರದಂತೆ ವಿಪ್ರಕಾರರಂಜಿತಮುಮಂ, ಮಥುರಾಪುರಿಯಂತೆ ವಸುದೇವಾಗಾರರಮ್ಯಮುಮಂ, ವ್ಯೋಮಮಂಡಲದಂತೆ ದ್ವಿಜರಾಜಸನ್ಮಾರ್ಗಮುಮಂ, ಸ್ವರ್ಗಲೋಕದಂತೆ ಸುಧಾಮಯಮಂದಿರಮುಮಂ, ಗ್ರಹಸಮೂಹದಂತೆ ಮಿತ್ರರಾಜಗೋತ್ರಜಬುಧಗುರುಕವಿಸೌರಿಸಮೃದ್ಧಿಯುಮಂ, ಸಾಮಭೂಮಿಯಂತೆ ಭದ್ರಗಜರಂಜಿತಮುಮೆನಿಸಿರ್ದುದು. ಅಂತುಮಲ್ಲದೆಯುಂ,

ವಸುಧಾದೇವಿಯ ನೀಳ್ದ ತೋಳ್ಗಳೆನಿಸಲ್ ಸೋಮಾರ್ಕಸದ್ವೀಥಿ ರಂ ।
ಜಿಸೆ ನಾನಾನವರತ್ನಹೇಮಕಲಶಂ ಸ್ವರ್ಣಾದ್ರಿಯಂ ಸೈತು ಸೋ ॥
ಲಿಸುವಂತೊಪ್ಪೆ ನಿಮಿರ್ಕೆಯುಪ್ಪರಿಗೆಗಳ್ ತಾರಾದ್ರಿಯಂ ಪೋಲ್ತು ಪೆಂ ।
ಪೆಸೆಯಲ್ ನಿತ್ಯವಿಳಾಸದಿಂ ಮಿಥಿಳೆಯೋಲ್ ಚೆಲ್ವಾಯ್ತು ಸಂಪತ್ತಿಯಿಂ ॥ ೩

ಅಂತೆಸೆವಮಿಥಿಳಾಪುರಮಂ ಪುಗುವಾಗಳದಱ ಬಹಿರ್ದ್ವಾರದ ಪಾಟ್ಕರದಲ್ಲಿ

ಸೆರೆಗಳ್ ತಳ್ತಂಗಮಲ್ಲಲ್ಲಿಗೆ ಸುರುಳ್ದಿರೆ ಲಂಬಸ್ತನಂ ಮೆಲ್ಪಿನಿಂ ಜೋ ।
ಲ್ದಿರೆ ಗಲ್ಲಂ ಪತ್ತಿ ಕಣ್ಗಳ್ ಕುಳಿತೆರ್ದೆಯುಗಲಂಬೆತ್ತು ತೋಳ್ಗಳ್ ತೊವಲ್

ನೀ ॥ ಳ್ದರೆ ಪಶ್ಚಾತ್ತಾಪಮಂ ತದ್ವದನಮುಱಿಪರಿದರ್ಳ್ ಕರಂ ವೃದ್ಧೆ ದುಃ
ಖಾ । ತುರೆ ಚಿಂತಾಭ್ರಾಂತಿಯಿಂದಾಪಟೆಯ ಮಠದ ಗೊಂಟಿಂಗೆ ಗೆಂಟಾಗಿ
ಯೊರ್ವರ್ಳ್ ॥ ೪

ಅಂತಿರ್ದ ತಾಪಸರೂಪೆಯಪ್ಪ ವೃದ್ಧೆಯುಂ ಕಂಡು ನಾಂ ಆಮಠದೊಳ್
ನಿಮಿಷಂ ಕುಳ್ಳಿರ್ಪುದುಮಾವೃದ್ಧೆ ಎನ್ನಂ ನೋಡಿ,

ಪಾಡಱಿದಾಂ ತನ್ನೊಳ್ ಮಾ ।
ತಾಡದ ಮುನ್ನಾಕೆಯೆನ್ನ ಮುಖಮಂಡಲಮಂ ॥
ನೋಡುತ್ತುಂ ಕಣ್ಬನಿಯೊಳ್ ।
ಮೂಡಿ ಮುೞುಂಗಿರ್ದಳೆನಗೆ ವಿಸ್ಮಯಮಾಗಲ್ ॥ ೫

ಅಂತು ವಿಸ್ಮಯಮೆನ್ನೊಳ್ ಪತ್ತಿ ಇದೇನೀದುಃಖಕ್ಕೆ ಕಾರಣಮೇ
ನೆಂದಾನಾಕೆಯುಂ ಬೆಸಗೊಳ್ವುದುಮವಳಿಂತೆಂದಳ್.—

ಪೃಥುಳಬಳವಾದಿಕೂರ್ಮಂ ।
ಪೃಥಿವೀಕಂಟಕನೃಪಾಲಕುಲಹಿಮಘರ್ಮಂ ॥
ಪ್ರಥಿತಪ್ರಹಾರವರ್ಮಂ ।
ಮಿಥಿಳಾಪುರದರಸನೆಂಬ ಮಹಿಮಾವರ್ಮಂ ॥ ೬

ಅಂತಾತಂಗಾಪ್ತಮಿತ್ರಂ ನೃಪಕುಲತಿಲಕಂ ರಾಜಹಂಸೋರ್ವಿಪಂ ತ ।
ತ್ಕಾಂತಾಸೀಮಂತಸಂಪ್ರೀತಿಗೆ ಕರೆಸೆ ಮದೀಯೋರ್ವಿಪಂ ಕೇಳ್ದು ಚೇತ ॥
ಸ್ಸಂತೋಷಂ ಮಿಕ್ಕು ತನ್ನಂಗನೆ ನಿಜಸುತರಿರ್ವರ್ ಬಲಂ ಕೂಡೆ ಪೋದಂ ।
ಮುಂತಪ್ಪಾಹಾನಿವೃದ್ಧಿಸ್ಥಿತಿಯನಱಿವರಾರ್ ಪೂರ್ವಸಂಸ್ಕಾರಕಲ್ಪಂ ॥ ೭

ಅಂತೀಮಿಥಿಳಾಪತಿಯಪ್ಪ ಪ್ರಹಾರವರ್ಮಂ ತನ್ನಾಪ್ತಮಿತ್ರ ಮಾಗಧೇ
ಶ್ವರನಪ್ಪ ರಾಜಹಂಸನರಸಿ ವಸುಮತೀದೇವಿಯ ಸೀಮಂತಕ್ಕೆ ಪ್ರಿಯಮಂ
ದೆಯುಂ ತನ್ನಿರ್ಬರ್ ಕುಮಾರರ್ ಸಹಿತಂ ಪುಷ್ಪಪುರಕ್ಕೆ ಪೋಗಲಲ್ಲಿ

ಮಾಳವನೃಪನೆಂಬ ಮಹೀ ।
ಪಾಳಂ ಮುಳಿದೆತ್ತಿ ಬಂದು ಮಾಗಧನೃಪನಂ ॥
ಸೋಲಿಸಲಂದು ಮದೀಯನೃ ।
ಪಾಳಂ ಮಾಳವನ ಕೆಯ್ಗೆ ಸಿಲ್ಕಿದನಾಗಳ್ ॥ ೮

ಅಂತು ಪ್ರಹಾರವರ್ಮಂ ಸಿಲ್ಕಿದೊಡೆ ಮಾಳವೇಶ್ವರನುಪಕಾರಕ್ಕೆ ಬಿಟ್ಟು ಕಳಿಪಲ್ ಬಯಿಶ್ಯಾತಂ ತನ್ನ ಕುಟುಂಬಂಬೆರಸು ನಿಜಜನಪದಕ್ಕೆ ಬರ್ಪಾಗಳ್

ದಾಯಾದ್ಯ ವಿಕಟವರ್ಮಂ ।
ದಾಯಂ ತನಗೆಂದು ಮಿಥಿಳೆಯೊಳ್ ಪಟ್ಟವನ ॥
ತ್ಯಾಯತದಿಂ ತಳೆದಿರ್ದಪ ।
ನೀಯಡೆಗಿನ್ನಾವ ಬುದ್ಧಿ ಪೇಟ್ ಮಿಥಿಳೇಶಾ ॥ ೯

ಅದಲ್ಲದೆಯುಂ, ನಿನ್ನ ಬರವಂ ಕೇಳ್ದುಳ್ಳ ಸೈನ್ಯಮಂ ಕೂಡಿಕೊಂಡು ನಿನ್ನಂ ಕೊಲಲ್ ಬರುತಿರ್ದಪನೆಂದೊರ್ಬ ದೂತನಿದಿರಾಗಿ ಬಂದು ಪೇಳ್ವುದುಂ ಪ್ರಹಾರವರ್ಮಂ ಬಿಟ್ಟರಣ್ಯಮಾರ್ಗದೊಳ್ ಪೋಪಾಗಳ್

ಶಬರಾಧಿಪರೆಲ್ಲರ್ ನೆರೆ ।
ದು ಬಂದು ಮುತ್ತುತಿಯ ಬಲವನಾಟಿಂ ಕನರ ॥
ಲ್ಕುಬಲೆಯುರತಿಭಯದಿಂ ಪಲ ।
ವು ಬಟ್ಟೆಯುಂ ಪತ್ತಿ ಪೋದರಿನ್ನೇವೇಳ್ವೆಂ ॥ ೧೦

ಎಂದು ಮತ್ತಮಿಂತೆಂದಳ್:—

ಅಂತು ಕಿರಾತಸಂತತಿ ಮದೀಯನೃಪಾಲಕನಾಪ್ತಸೈನ್ಯಮಂ ।
ತಿಂತಿಣಿಯಪ್ಪರಣ್ಯಪಥದೊಳ್ ಕವರಲ್ ಬಟಿಕೆನ್ನ ಚಿತ್ತವಿ ॥
ಭ್ರಾಂತಿಯಿನಂಜಿಯಾಂ ನೃಪಕನೀಮುಸಪುತ್ರನನೆತ್ತಿಕೊಂಡು ಪೋ ।
ದೆಂ ತರುಷಂಡಗುಲ್ಮಲತಿ ತೀವಿದಿಡುಂಕುಳಿಯೊಳೋಡಿಯಾಕ್ಷಣಂ ॥ ೧೧

ಅಂತೋಡಿಯಪಾತವಾಲಗಲ್ಮದೆಡೆಯೊಳ್ ಭೀತಿಯಿಂ ಕುಳ್ಳಿರಿಪಾಗಳ್

ಅತಿರೌದ್ರಂ ಕ್ರೂರದಂಷ್ಟ್ರಂ ಜ್ವಲಿತವಿಲಸದಂಗಾರನೇತ್ರಂ ಸಮುನ್ನ । ತಿರ್ತವಪ್ರಶ್ಮಶ್ರು ತೀಕ್ಷ್ಣಸ್ಫುಟನಖಮುಖಮುತ್ಕುಂಚಿತಾಂಗಂ ನಟಿತಪ್ರೀ ॥ ನ್ನತಕರ್ಣಂ ಘೋರವಕ್ತ್ರಂ ಘನನಿನದನದಿಂದಾದುರ್ಪಾಯ್ದುತ್ತು ಸಿಂಹ । ಪ್ರತಿನಂ ಕಾಂತಾರದೊಳ್ ಬೆಬ್ಬಲಿ ಮುಳಿವದ ಟಂಬೆನ್ನನಾಗಳ್ ಕುಮಾರಾ ॥ ೧೨

ಅಂತು ಪುಲಿ ಪಾಯಲೊಡಂ ಬೆದಱಿ ಕೆಯ್ಯ ಮಗನಂ ಬಿಸುಡಲಾಮಗಂ

ಪಿರಿಯ ಕಪಿಲಾಶವಂ ಮುಂ |
ದಿರಲದಟೊಡಲೊಳಗೆ ಭೀತಿಯಿಂ ಪೊಕ್ಕಂ ಭೂ ॥
ವರಸುತನಲ್ಲಿಗೆ ಪೆರ್ಬುಲಿ |
ಭರದಿಂ ಪಾಯ್ದತ್ತು ಕೋಪದಿಂ ಗರ್ಜಿಸುತುಂ ॥ ೧೩

ಅಂತು ಪುಲಿ ಪಾಯಲೊಡಂ,

ಕಾರಡವಿಯೊಳಟ್ಟಿದಾವಿನ |
ಪೇರೊಡಲೊಳ್ ಮುನ್ನಮುಱಿದು ಶಬರರ್ ಯಂತ್ರಾ ॥
ಕಾರದೆ ನಿಟ್ಟಿಂಬಂ ವಿ |
ಸ್ತಾರದಿನೊಲ್ದಿಟ್ಟರಾಗೆರ್ ತಿಳಿಯದ ತೆಱದಿಂ ॥ ೧೪

ಅಳವಡಲೇಱಿಸಿಟ್ಟ ಸರಳಾಂತ್ರದ ಬಲ್ಪಿನ ಬಿಲ್ ಸಿಡಿಲ್ದು ಪೆ |
ರ್ಬುಲಿಯ ಪೊದಟ್ಟಿ ಗೋಣೆಯಿಱಿಯುಲಿರ್ಬಗಿಯಪ್ಪಿನಮುರ್ಚಿ ಪಾಯ್ದರಲ್ ॥
ಪಟುವೇಣುನಾದದೊಲ್ ಮಡಿಯಿತಾಪುಲಿಯಾನದನೆಯ್ದೆ ಕಂಡು ಪೆ |
ಪ್ಪಳಸಿ ತೆರಳ್ದನೊಂದು ಕಡೆಗಾಗಳತೀವಭಯಾತಿರೇಕದಿಂ ॥ ೧೫

ಅಂತಾನಲ್ಲಿಂ ತೆರಳ್ದು ಪೋಪಾಗಳೊರ್ಬ ತಾಪಸಸುಕುಮಾರನಂ ಕಂಡು ತಚ್ಚಿತ್ರಮಂ ಕೇಳ್ದೊಂದೂರಂ ಸಾರ್ವೆನೆಂದು ಪೋಗುತಿರ್ಪಾಗಳ್

ಪಿರಿಯ ಕುಮಾರನನುಯ್ದಂ |
ಬುರುಹಾನನೆ ಮತ್ತನೋಜೆ ಪುಷ್ಕರಿಕೆ ಸುಖೇ ॥
ತರೆಯಾಗಿ ಬರ್ಪುದಂ ಕಂ |
ಡುರಿದತ್ತೆನ್ನೊಡಲೊಳಂದು ದುಃಖಜ್ವಲನಂ ॥ ೧೬

ಅಂತೊರ್ಬ ಪಟುಭಟಸಹಿತಂ ಬರುತಿರ್ದ ಪುಷ್ಕರಿಕೆಯುಮಾಂ ಕಾಣಲೊಡಂ

ಪಾತಕಿಯುಂ ನಿಕೃಷ್ಟೆಯುಮನಾಥೆಯುಮಾತ್ಮವಿಮೋಹಿಯುಂ ಮಹಾ |
ಘಾತುಕಿಯುಂ ಸ್ವಬಂಧುಜನದೂರಿತೆಯುಂ ಖಳೆಯುಂ ದುರಂತದುಃ ॥
ಖಾತುರೆಯುಂ ಕುಮಾರಕನನೀಗಳೆ ನೀಗಿದ ಪಾಪಕರ್ಮೆಯುಂ |
ಮಾತೆಯಿದೇಕೆ ಕಂಡೆಯೆನುತುರ್ವರೆಯೊಳ್ ಪೊರಳ್ದಿರ್ದಳಾಕ್ಷಣಂ ॥ ೧೭

ಅಂತವಳ್ ದುಃಖಿಸಲದನೆಂತಾನುಂ ಸಂತೈಸಿ ಬೞಿಕೆಲೆ ಸೀನೆತ್ತಿಕೊಂಡಿರ್ದ ಕುಮಾರಕನೇನಾದನೆಂದಾಂ ಕೇಳಲವಳಿಂತೆಂದಳ್:—

ಬರ್ಬಳ್ ಪೋಗುತ್ತಿರಲಾ ।
ನೊರ್ಬಂ ಕಿರಾತಂ ಭಯಂಕರಂ ಕಂಡೆನ್ನಂ ॥
ಜರ್ಬಿ ಕುಮಾರಕನಂ ನಿಜ ।
ದೋರ್ಬಲದಿಂ ಸೆಳೆದು ಕೊಂಡು ಗುಹೆಯೊಳ್ ಪೊಕ್ಕಂ ॥ ೧೮

ಅಂತವಂ ಪುಗಲೊಡಂ ಮತ್ತೊರ್ಬಂ ಬಂದೆನ್ನಂ ಪಿಡಿದು ತನ್ನಿರ್ಕೆಗೆ ಕೊಂಡು ಪೋಗಿ

ತನಗೆ ಸತಿಯಾಗವೇೞ್ಕುಂ ।
ದನುನಯಮೊಲ್ದೆನ್ನನಳೆಯಲಾನೊಲ್ಲದಿರಲ್ ॥
ಮುನಿದಾ ಕಿರಾತನೆನ್ನಂ ।
ವನದೊಳ್ ಕೊಲಲೆಂದು ಮನದೊಳನುಗೆಯ್ವಾಗಳ್ ॥ ೧೯

ಎನ್ನೊಡನಿರ್ಪಾತಂ ಪ್ರ ।
ಚ್ಛನ್ನತೆಯಿಂ ಬಂದು ತತ್ಕಿರಾತನ ಶಿರಮಂ ॥
ತನ್ನಸಿಯಿಂದರಿದು ಬೞಿ ।
ಕ್ಕೆನ್ನಂ ವಧುವಾಗಿ ಮಾಡಿಕೊಂಡನಲಂಪಿಂ ॥ ೨೦

ಬೞಿಯಿಂದೀತಂ ಪ್ರಹಾರವರ್ಮನಿಂ ಮನ್ನಿಸಿ ಕೊಳ್ವ ಭೃತ್ಯನೆಂದು ಪೇೞ್ದೊಡದರ್ಕಾಂ ಹರ್ಷಿತೆಯಾಗಲನಂತರಂ,

ನಮ್ಮೊಡೆಯನಿರ್ದ ಠಾವಿಂ ।
ಗುಮ್ಮಹದಿಂ ಪೋಪೆನೆಂದು ಮತ್ಪತಿಯೆನ್ನಂ ॥
ಸಮ್ಮಾನಿಸಿಯೊಡಗೊಂಡು ।
ಯ್ದುಮ್ಮದದಿಂ ಮಾತೆ ಕೇಳಿದೆನಗಾದ ಹದಂ ॥ ೨೧

ಎಂಬುದುಮಾನುಂ ನಿನ್ನಂತೆಯಾದೆನೆಂದೆನಗಾದವಸ್ಥೆಯನವಳ್ಗೆ ಪೇೞ್ದನಂತರಂ ಆವಿರ್ಬರುಂ ಪ್ರಹಾರವರ್ಮನುಂ ಪ್ರಿಯಂವದೆಯುಮಿರ್ದೆಡೆಗೆಯ್ದಿ,

ಧಾತ್ರೀಶನಂ ತದೀಯಕ ।
ಳತ್ರಮನಾಮಿರ್ಬರೆಯ್ದಿ ಕಡುಪೊಡ್ದಾಗಳ್ ॥

ಪುತ್ರವಿಯೋಗದ ಶಿಖಿಯಿಂ ।
ಶ್ರೋತ್ರಂಗಳನುರಿಪಿ ಕಳೆದೆವಚ್ಚರಿಯಾಗಲ್ ॥ ೨೨

ಅಂತವರಿರ್ವರ್ ಕುಮಾರರ್ ಪೋದರೆಂಬುದನಱಿದು ಕಡುದುಃಖದಿಂ ಪ್ರಹಾರವರ್ಮನಲ್ಲಿಂ ತಳರ್ದು ಸಹ್ಯದೇಶಮಾರ್ಗದೊಳ್ ಮಿಥಿಳಾಪುರಕ್ಕೆ ಪೋಗುತಿರ್ಪಾಗಳ್

ಸಂಹಾರವರ್ಮತನಯಂ ।
ಬಾಹಾಬಲದಿಂದೆ ಮಿಥಿಳೆಯೊಳ್ ಪಟ್ಟವನಾಂ ॥
ಶಾಹನಕೆ ಬಂದನುದ್ಧತ ।
ಸಾಹಸದಿಂದಂ ಪ್ರಹಾರವರ್ಮನೊಳಾಗಳ್ ॥ ೨೩

ಅಂತು ಬಂದು,

ಜವದಿಂ ಮುಳಿದಾಗಳ್ ವಿಕ ।
ಟವರ್ಮನಾರ್ಪಿಂ ಪ್ರಹಾರವರ್ಮನ ಸರ್ವ ॥
ಸ್ವವನಂದು ಪಿಡಿದು ತನ್ನು ।
ತ್ಸವದಿಂ ಮಿಥಿಳಾಪುರಕ್ಕೆ ಬಂದನಲಂಪಿಂ ॥ ೨೪

ಅಂತು ಕೊಂಡು ಬಂದು ಪ್ರಹಾರವರ್ಮನಂ ಪ್ರಿಯಂವದೆಯುಂ ವಿಕಟವರ್ಮಂ ಸೆಱೆಗೆಯ್ದನೆಂದು ಮತ್ತಮಿಂತೆಂದಳ್:—

ಇಂದುಮುಖಿ ಪೂರ್ಣಕುಚೆ ಮ ।
ನ್ನಂದನೆ ಪುಷ್ಕರಿಕೆ ಕಲ್ಪಸುಂದರಿಯುಂ ಪೆಂ ॥
ಪಿಂದಂದೋಲಗಿಸುತ್ತುಂ ।
ಬೆಂದೊಡಲಂ ಪೊರೆಯುತಿರ್ಪಳ್ ನೋಡೀಗಳ್ ॥ ೨೫

ಅಂತೀವಿಕಟವರ್ಮನರಸಿಯುಪ್ಪ ಕಲ್ಪಸುಂದರಿಯುನೆನ್ನ ಮಗಳ್ ಪುಷ್ಕರಿಕೆ ಸೇವೆಗೆಯ್ವ ಕಾರಣಮಿಾತಾಣದಿಂ ತೊಲಗಲಾಱದೆ,

ಈಪರಿಯುವಸ್ಥೆಗಾಂ ಪರಿ ।
ತಾಪಂಬಟ್ಟಖಿಳಸೌಖ್ಯಮಂ ತೊಱೆದೀಗಳ್ ॥
ತಾಪಸಿಯಾಗಿರ್ದಪೆನೆಂ ।
ದಾಪರಿಣತವಯಸೆ ಪೇೞ್ದು ಮತ್ತಿಂತೆಂದಳ್ ॥ ೨೬

ಆಕಪಿಲಾಶವದೊಳ್ ಪೊ†।
ಕ್ಕಾ ಕುವರರಂ ಸುಖದೊಳಿರ್ದನಾದೊಡೆ ನಿನ್ನಂ ॥
ತಾಕಾರಪೂಜ್ಯನಾಗಿ ನಿ।
ಜಾಕೃತಿಯುಂ ತಳೆವನೆಂದು ಶೋಕಿಸುತಿರ್ದಳ್ ॥ ೨೭

ಮತ್ತಂ,

ಅನುನಯದಿನಾ ಕುಮಾರಕ।
ನಿನಿತುದಿನಂ ಸುಖದೊಳಿರ್ದನಾದೊಡೆ ತನ್ನೀ ॥
ಜನನೀಜನಕರ್ಗತಿಬಂ।
ಧನಮೇಕಾದಪುದು ಪೆರ್ಚುವನೆ ದಾಯಾದ್ಯಂ ॥ ೨೮

ಎಂಬುದುಂ,..................

ತೊರೆಯೆ ಕುಚಂಗಳಂ ಸ್ತ್ರಕ್ಕಾಂಕುರಮುರ್ಬೆ ಮುದಶ್ರುಗಂಟಲಂ।
ಸೆರೆ ಬಿಗಿಯಲ್ ನಿಜಾಕೃತಿ ಕರಂ ನಯಮೇಱು ಮುಖಂ ಪ್ರಸನ್ನಮಂ ॥
ದಿರಮೆನಿಸಲ್ ಮನಂ ವಿನಯದಿಂ ಗುಡಿಗಟ್ಟೆ ಮಹಾಪ್ರಮೋದದು।
ಬ್ಬರದೊಳತೀವಸಂಭ್ರಮದೊಳನ್ನನಲಂಪಿನೊಳಾಕೆಯಪ್ಪಿದಳ್ ॥ ೨೯

ಅಂತು ಸಂತಸದಿಂದಪ್ಪಿಯೆನ್ನ ಮುಖಮಂ ನೋೞ್ಪುದುಮಾನಿಂತೆಂದೆಂ:—

॥ ಮಲ್ಲಿಕಾಮಾಲೆ ॥

ವಿಕಟವರ್ಮನ ಮುಂಡಮಂ ಪೊಱಸೆಂಡನಾಡಿ ಜಗಕ್ಕೆ ಕಾ।
ತುಕಮನಿತ್ತು ಬಱಿಕ್ಕ ಮತ್ಪಿತೃಮಾತೃಮಂ ಭುಜದಾರ್ಪಿನಿಂ ॥
ಸಕಳರಾಜ್ಯಸುಖಕ್ಕೆ ಭಾಜನಮಪ್ಪ ಪ್ರೋಲ್ ಮಿಗೆ ಮಾೞ್ಪೆನಂ।
ಬಿಕೆಯಿದಂ ಪ್ರಕಟಕ್ಕೆ ತಾರದೆ ನೀತಿಯಿಂದಱಿ ನಿಶ್ಚಯಂ ॥ ೩೦

ಎಂದು ಮತ್ತಂ,

---

† ಕಪಿಲಾಶವದೊಳ್ ಭಯದಿಂ।
ದೆ ಪೊಕ್ಕನೆಂಬಾಕುಮಾರನಾಂ ಬಱಕಲ್ಲಿಂ ॥
ದುಪಚರಿಸಿಯೆನ್ನನೊರ್ಬಂ।
ತಪಸ್ವಿ ಕೊಂಡುಯ್ದನದೆ ಕಥಾವೃತ್ತಾಂತಂ ॥ ಇದು ಮತ್ತೊಂದು ಪ್ರತಿಯ ಕಂದ ವೆಂದು ಓಲೆಯ ಪುಸ್ತಕದಲ್ಲಿ ಪಕ್ಕದಲ್ಲಿ ಬರೆದಿದೆ.

ಆಂ ಬಂದಿರ್ದನೊಲ್ದ ।
ನ್ನಂಬಿಕೆಯುಂ ಜನಕನುಂ ದಿಟಕ್ಕಱಿಯುದವ್ರೇ ॥
ಲಿಂಬಿನೊಳೆಸಗುಗೆ ಕಾರ್ಯ್ಯವು ।
ನಂಬುಜಮುಖಿ ವಿಕಟವರ್ಮನಱಿಯದ ತೆಱದಿಂ ॥ ೩೧

ಎಂದಾಂ ಪೇೞ್ವುದುಮಾಕೆ ಸಂತೋಷಂಬಟ್ಟು ಮುಹುಮುರ್ಹುರಾ
ಲೋಕನಂಗೆಯ್ದು,

ಕೂಡಿತೊಲವಿಂ ಪ್ರಿಯಂಬದೆ ।
ಮಾಡಿದ ನೋಂಪಿಯು ಫಲಂ ದಲೆಂದಂದೆನ್ನಂ ॥
ನೋಡಿ ನಿಜಹರ್ಷದಿಂ ಮಾ ।
ತಾಡಿಸುತುಂ ಮಠದೊಳೊಲ್ದು ಸುಖಮಿರ್ದರ್ಗಳ್ ॥ ೩೨

ದಿನಸ್ರೀ ರವಿರತ್ನಕುಂಭದಿನಲಂಪಿಂದೊಲ್ಮೆಯಿಂ ಪಶ್ಚಿಮಾ ।
ರ್ಣವಪಾನೀಯಮನೊಯ್ಯೆಸೆನ್ನುದಯಶೈಲಾವಾಸಕಂದಲ್ಲಿ ತುಂ ॥
ಬುವ ಪ್ರೀತ್ಯೊಂದು ಮಹೋಗ್ರಕಾಲಮುಕರಂ ತತ್ಕುಂಭಮುಂ ಕಟ್ಟಿ ಪ್ರೋ ।
ಯ್ತವಳಂ ಕೂಡಿಯೆನಲ್ಕೆ ಪಂಕಜಸಖಂ ಪ್ರಾಕ್ಕಂ ಪ್ರತೀಚ್ಯಬ್ಧಿಯುಂ ॥

ಅಂತು ಸೂರ್ಯ್ಯಾಸ್ತಮಾನವಾಗಲೊಡನೆನಗೊಂದು ಪಱಿವ ತಟ್ಟೆಯುಂ ಮ
ಠದ ಗೊಂಟಿನೊಳ್ ಪಾಸಿ ಕೊಟ್ಟೊಡಾಂ ವಿಶ್ರಮಿಸಿಯಾರಾತ್ರಿಯಂ ಕಳೆಯೆ,

ಉದಯಗಿರೀಂದ್ರಮೆಂಬ ಪೊಸಕಂಭದಿನಾರ್ದ ಗಭಸ್ತಿಕೇಸರಂ ।
ಬಿದಿರ್ದ ಕರಂಗಳಂ ನೆಗಪಿ ಮುನ್ನರುಣೋದಯವಿಸ್ಫುಲಿಂಗಮುಂ ॥
ಕೆದಱಿ ತಮಿಸ್ರದೈತ್ಯನೊಡಲಂ ಬಗಿದಾಕಮಳಾನುಮೋದದಿಂ ।
ದುದಯಿಸಿದಂ ದಿನಾಧಿಪನೃಕೇಸರಿಧಾತ್ರೃಹರಾತ್ಮಕಂ ಕರಂ ॥ ೩೪

ಅಂತುದಯವಾಗಲುದಯಕರ್ಮಮಂ ತೀರ್ಚಿ ಕುಳ್ಳಿರ್ದ ಸಮಯದೊಳ್

ಮುಡಿಯುಂ ಸೆಕ್ಕಿದ ಪುಷ್ಪಗಂಧಮಳಕಾನೀಕಕ್ಕೆ ಕಸ್ತೂರಿ ಸಾ ।
ಲಿಡುವಂತಿಕ್ಕಿದ ಮಿಕ್ಕ ಕಂಪು ಕುಚದೊಳ್ ಶ್ರೀಖಂಡಮುಂ ಚೆಲ್ವಿನಿಂ ॥
ತೊಡೆದಾಮೋದಮನಾರತಂ ನೆಲಸೆ ಭೃಂಗಶ್ರೇಣಿ ತನ್ನೊಳ್ ಸರಂ ।
ಗುಡುತೆಯ್ತರ್ಪಿನಮಂದು ಪುಷ್ಕರಿಕೆ ಬಂದಳ್ ಸಂತತೋತ್ಸಾಹದಿಂ ॥ ೩೫

ಅಂತು ಕಲ್ಪಸುಂದರಿಗೆ ಶೃಂಗಾರಂಗೆಯ್ದು ಬಂದ ಪುಷ್ಕರಿಕೆಗೆ ಮದಾಢ್ಯ
ತ್ರಿಯೆನ್ನಂ ತೋಱಿ

ಈತಂ ಮನ್ನೃಪತಿಯ ತನು |
ಜಾತಂ ಕಾನನದೊಳಾಂ ಬಿಸುಟ್ಟೆಡೆಯೊಳ್ ನಿ ||
ರ್ಭೀತಿಯಿನುಜ್ಜೀವಿಸಿ ದೇ |
ಶಾಂತರಮುಖನಾಗಿ ಬಂದನಿದು ದಲ್ ಪುಣ್ಯಂ || ೩೬

ಎಂದು ಪೆರ್ಚುವುದುಮಾ ಪುಷ್ಕರಿಕೆಯೆನ್ನಂ ನೋಡಿ

ಮಿಕ್ಕ ಪಸಿವಿಂ ಚಕೋರಿಗ |
ಳಲ್ಕಜದಿಂ ಪಸರಿಸಿರ್ದ ಬೆಳ್ದಿಂಗಳಂನು ||
ಡುಚ್ಕಸಲಾಱದುಗುಳ್ದಿಪ್ಪ |
ವಕ್ಕುವೆನಲ್ ಸುರಿದಳಬಲೆ ಬಿಸುಗಣ್ಬನಿಯಂ || ೩೭

ಅಂತು ಶೋಕಿಸಲವಳಂ ಸಂತೈಸಿಯನಂತರಮುಪಹಾರವರ್ಮಂ ಸುಖದೊಳಿರ್ದಪನೆಂಬ ಸಂತೋಷಮನವಳ್ಗೆ ಮಾಡಿ ಬಱಿಕಿಂತೆಂದೆಂ:—

ನಿನ್ನೊಡೆಯಂ ಸುರೂಪಿಯೆ ಗುಣಜ್ಞನೆ ಕಾಮಕಳಾವಿಳಾಸಸಂ |
ಪನ್ನನೆ ಅಂಗಸೌಷ್ಠವಿಯೆ ನೀತಿನಿವಾಸನೆ ವಿಕ್ರಮಪ್ರಭಾ ||
ಪ್ರೋನ್ನತಬಾಹುಸಾಹಸಿಯೆ ಸಜ್ಜನಸಂಗಿಯೆ ದೇವತಾರ್ಚನಾ |
ಸನ್ನನೆ ಪೇೞ ಪುಷ್ಕರಿಕೆ ಕೌತುಕಮಪ್ಪಿನೆಗಂ ವಿಳಾವಿಸಿನೀ || ೩೮

ಸುರತವಿನೋದದಿಂ ವಿಕಟವರ್ಮನೃಪಂಗೆ ವಿದಗ್ಧೆ ಕಲ್ಪಸುಂ |
ದರಿ ಮಿಗೆ ಕೂರ್ಪಳೇ ನಿನಗೆ ತನ್ನನುತಾಪಮನೇನನಾದೊಡಂ ||
ಪರಮರಹಸ್ಯದಿಂದುಸಿರ್ವಳೇ ನಿಜಮಂದಿರದೊಳ್ ಸ್ವತಂತ್ರಸಾಂ |
ದರದೊಳಗಿರ್ಪಳೇ ಪದೆದು ಪೇೞೆನಗಂಬುಜಲೋಲಲೋಚನೇ || ೩೯

ಎಂಬುದುಮವಳಿಂತೆಂದಳ್:—

ಧರೆಗೆ ಕುರೂಪಿ ದುರ್ಗುಣಿ ಮನೋಭವಕೇಳಿನಿಕೃಷ್ಟನಂಗದು |
ರ್ಧರನತಿದುರ್ವಿನೀತನನಿಶಂ ವನಸ್ಯೈರಿಭಸಾಮ್ಯವಿಕ್ರಮಂ ||
ನಿರುಪಮದುಷ್ಟಸಂಗಿ ಬಹುಮೂರ್ಖನಬೋಧಿತ ದುರ್ವಿವೇಕಿ ದು |
ಶ್ಚರಿತನದಾವನೀವಿಕಟವರ್ಮನವೋಲ್ ಸುಕುಮಾರಶೇಖರಾ || ೪೦

ವನಜಮುಖಿ ಕಲ್ಪಸುಂದರಿ |
ಯನುದಿನಮಾವಿಕಟವರ್ಮನಂ ಕಾಣಲೊಡಂ ||

ಕಿನಿಸುವಳೀಕೆಂದಱಿಯೆಂ ।
ತನಗವನೊಳ್ ಮೋಹಮೆಂಬುದಿಸಿತಂ ಕಾಣೆಂ ॥ ೪೧

ಎಂಬುದುಂ ಮತ್ಪಿತೃಮಾತೃಬಂಧನಮೋಕ್ಷಕ್ಕಿದೆ ಕಾರಣಮೆಂದವಳ್ಗಿಂತೆಂದೆಂ:—

ಎನ್ನಭಿಮತಮಿದು ನೀಂ ಪೋ ।
ಗಿನ್ನುಂ ಬೇೞ್ಪನಿತು ಕೋಪಮಂ ನೃಪನೊಳ್ ತ ॥
ತ್ತನ್ನೆಗೆ ಪ್ರಟ್ಟಿಸಿ ಮತ್ತಂ ।
ನಿನ್ನಱಿವಂ ತೋರ್ಪುದೆನಗೆ ಕಮಲದಳಾಕ್ಷೀ ॥ ೪೨

ಎಂಬುದುಮವಳಂತೆಗೆಯ್ವೆನೆಂದು ಬೀೞ್ಕೊಂಡು ರಾಜಭವನಕ್ಕೆ ಪೋಗಿ ಮಗುೞ್ದಿರಬೞ್ಕಱು ದಿನಕ್ಕೆ ಬಂದು ನೀಂ ಪೇೞ್ದಂತೆ ಕಲ್ಪಸುಂದರಿಯೊಳಿಂತೆಂದೆನೆಂದಳ್:—

ಕಳ್ಳಿಗೆ ಕಲ್ಪವಲ್ಲಿ ರಸಕುಷ್ಟಿಗೆ ಚಂದನಪಣ್ಪು ರೋಗಿಗಿಂ ।
ಪುಳ್ಳೆ ಸುಭೋಜನಂ ಕಪಿಗೆ ನಿಸ್ತುಲಮೌಕ್ತಿಕಹಾರಮುಷ್ಟ್ರಕಾ ॥
ಳ್ಪಳ್ಳಿಗೆ ಪಂಡಿತೋಕ್ತಿ ಮಿಗೆ ಮೂರ್ಖ ಕುರೂಪಿನೃಪಂಗೆ ಕಾಮಿನೀ ।
ಸಲ್ಲಲಿತಪ್ರಸಂಗಮೊಸೆದಿರ್ಪುದು ಚಿತ್ರಮಿದಲ್ತೆ ಧಾತ್ರಿಯೊಳ್ ॥ ೪೩

ನಿಸದಮಿಳಾತಳಕ್ಕೆ ಕರಕೌಶಲಮಂ ಮಿಗೆ ತೋಱಲೆಂದು ಭಾ ।
ವಿಸಿ ಮೃದುಹಸ್ತದಿಂ ತರುಣಿಯಾಕೃತಿಯಂ ಸಮುದಾಯಶೋಭೆಯಂ ॥
ಪೊಸತೆನಿಪಂದದಿಂ ಬರೆದು ಜೀವಮನೋವದೆ ತೀವಿ ಪದ್ಮಜಂ ।
ಬಿಸುಟನದೇಕೆ ಮತ್ತೆ ಪಟಿಗಾಲದ ಕೋಟ್ಕೆಸಱೊಳ್ ಜಡಾತ್ರಯಂ ॥ ೪೪

ಎಂಬುದುಮಾಕಲ್ಪಸುಂದರಿಯೆನ್ನ ಮನಮನಱಿದು ತನ್ನನುತಾಪಮಂ ಪೇೞಲೆಂದಿಂತೆಂದಳ್:—

ವಾರಿಜಮುಖಿಯೆನ್ನಯ ಸಂ ।
ಸಾರಂ ಮರ್ಕಟನ ಕೆಯ್ಯ ಪೂಮಾಲೆಯ ವಿ ॥
ಸ್ತಾರಮೆನಲ್ಕಾಯ್ತನುತಂ ।
ಭೋರೆನೆ ಬಿಸುಸುಯ್ವು ತನ್ನ ಪತಿಯಂ ಬಯ್ದಳ್ ॥ ೪೫

ಅಂತು ಪತಿಯುಂ ಬಯ್ವುದುಮಾನಿಂತೆಂದೆಂ:—

ಕಮಳಾಯತಮುಖಿ ನಿಂ ಪ್ರೇರೆ ।
ದ ಮಲ್ಲಿಕಾಲತೆಯ ಪೂಗಳಂ ನಿನ್ನಧಿಪಂ ॥
ದಮಯಂತಿಗೆ ಮುಡಿಸಿದನೆ ।
ನ್ನ ಮುಂದೆ ಕೆಯ್ಯುತ್ತಿಟ್ಟ ಮೋಹದಿಂದುಪವನದೊಳ್ ॥ ೪೮

ಎಂಬುದುಮಾಕಲ್ಪಸುಂದರಿ ಕಡುಮುಳಿದು,

ಈವಿದ್ರೋಪಿಯ ಸಂಗಮ ।
ನಾನ ದಿನಂ ಬಿಟ್ಟು ಸುಖದೊಳಾನಿರ್ಪೆನೇ ॥
ಭಾನಕಿ ಪೇೞೆಂದಾಕೆ ಮ ।
ಹಾವಸ್ಥೆಯನೆಯ್ದುವಂತಿರೆಸಗಿದೆನಾಗಳ್ ॥ ೪೯

ಎಂದು ಪುಷ್ಕರಿಕೆ ಬಂದು ಪೇೞಲಾಂ ಮತ್ಕಾರ್ಯಸಿದ್ಧಿಯಾಯ್ತೆಂದು ಬಱಸಂ,

ಅವಳುನ್ಮಾದಿನಿಯುಪ್ಪವ್ರೋಲ್ ನೃಪ ಮದೀಯಾಕಾರನುಂ ಪುಷ್ಪಸಂ ।
ಭವಮುಂ(?) ದರ್ಶನಮಾತ್ರಮೋಹನತೆಯುಂ ಸೀಮಂತಿನೀಚಿತ್ತವ ॥
ಶ್ಯವನೊಂದುಜ್ಜ್ವಲನವ್ಯದಿವ್ಯಪಟದೊಳ್ ಸರ್ವಾಂಗಸೌಂದರ್ಯದೊ ।
ಪ್ಪವನಾಂ ಚಿತ್ರಮೆನಲ್ಕೆ ಕೂರ್ತು ಬರೆದೆಂ ಷಡ್ವರ್ಣಸಂಪೂರ್ಣದಿಂ ॥

ಅದೆಂತೆನೆ:—

ನಗೆಮೊಗಮುಂ ಸಮುನ್ನತಭುಜಂಗಳನಬ್ಜಕರಂಗಳಂ ನೆಗ ।
ೞ್ದಗಲ್ದುರಮುಂ* ಮೃಗಾಧಿಪಕೃಶೋದರಮುಂ ದೃಢಪೀವರೋರುಜಂ ॥
ಘೆಗಳನತೀವಕೋಮಳಪದದ್ವಯಮುಂ ಸಮುದಾಯಶೋಭೆಯುಂ ।
ಸೊಗಸೆಸೆವಂತಿರೊಲ್ದು ಬರೆದೆಂ ಕಡುಕೂರ್ತು ಮದೀಯಮೂರ್ತಿಯುಂ ॥

ಅಂತು ಬರೆದ ಚಿತ್ರಪಟಮಂ ಪುಷ್ಕರಿಕೆಯ ಕೆಯ್ಯೊಳ್ ಕಲ್ಪಸುಂದರಿಗೆ ಕಳಿಪಲವಳಾಪಟಮಂ ತೋಱಿ ಮಱುದಿನಂ ಮಗುೞ್ದು ಬಂದೆನ್ನೊಳಿಂತೆಂದಳ್:—

ಅಹಿಮಬಿಂಬರಶ್ಮಿಮುಖಿಯೊರ್ಬಳ್ ಕೂರ್ತು ವಿನೋದದಿಂ ಲತಾ ।
ಗೇಹದೊಳಿರ್ದೊಡೊಂದಿತು ರಹಸ್ಯದ ಪೊತ್ತಿನುತೆಯ್ದಲಂತವಳ್ ॥
ಮೋಹದೊಳಂತಿರಲ್ಕೆ ಕರೆಯಲ್ ಪದೆದಾಂ ಬಱಿಕಿತ್ತೆನೊಲ್ದು ಸಂ ।
ಮೋಹನಪಾತ್ರಮಂ ಸ್ಮರತನುತ್ರಮನಾಕೆಗೆ ನಿನ್ನ ಚಿತ್ರಮಂ ॥ ೫೦

ಅಂತು ಕುಡಲೊಡಂ,

ಗಳಿಲನೆ ಕಾಂತೆ ಚಿತ್ರಪಟದೊಪ್ಪಮನೀಕ್ಷಿಸಿಯಾಗಳೊವೊರ್ದಲಿ ।
ಪುಳಕಿತೆಯಾಗಿ ಕಂಪಿಸಿ ಬೆಮರ್ತಧರಂ ನಸು ಗೆತ್ತು ಲಜ್ಜೆ ಕೈ ॥
ಗಳೆದು ಕಳಾಪಮೊಯ್ಯನೆ ಸಡಿಲ್ದು ಕರಂ ಮರವಟ್ಟು ಚಿತ್ತದೊಳ್ ।
ತಳವೆಳಗಾಗಿ ಮುಯ್ಕ್ರಱಿವಳೆಂತುಟೆನಲ್ ನಿಜಚಿತ್ರವಿಭ್ರಮಂ ॥ ೫೧

ಅಂತು ನೋಡಿ,

ಇದು ಶೃಂಗಾರರಸ ಸೀಮೆಯೋ ಇದು ಮನೋಜಾತಂಗೆ ಮೇಲಾಗಿಯೊ।
ಡ್ತಿದ ಮಾಱುಂಕವೊ ಮೇಣಿವಂಗನೆಯರೊಳ್ ಕಾಮಾಗ್ನಿಯುಂ ವರ್ಧಿಸ ॥
ಲ್ಕುದಯಂಗೆಯ್ದ ವಸಂತಮೂರ್ತಿಯೊ ದಿಟಂ ಪೇೞೆಂಬಿನಂ ಕೂರ್ತು ನೋ।
ಡಿದಳಬ್ಜಾನನೆ ನಿನ್ನ ಚಿತ್ರಪಟಮಂ ನಟ್ಟಾಲಿ ಬೀೞ್ವನ್ನೆಗಂ ॥ ೫೨

ಅಂತೆಮೆಯಿಕ್ಕದೆ ನೋಡುತ್ತಿ*ಂದೆಂದಳ್:—

ತೊಳಗುವ ತೋರಕಣ್ಮಲರ್ಗಳುನ್ನತಪೂರ್ಣವಿಶಾಲವಕ್ಷಮು ।
ಜ್ಜ್ವಳತರದೀರ್ಘಬಾಹು ಹರಿಮಧ್ಯಮನೂನಲಸತ್ಕಟೀತಟಂ ॥
ತಿಳಿಪುದಿದಲ್ತೆ ಸತ್ಪುರುಷಲಕ್ಷಣಮೆಂಬ ಕವಿಪ್ರಸಿದ್ಧಿ ಕೇ ।
ಳ್ಕೆಲಿಯೆನಿಸಿತ್ತೆನುತ್ತೆ ಬಲೆ ಚುಂಬಿಸಿದಳ್ ನಿಜಮೂರ್ತಿಚಿತ್ರಮಂ ॥ ೫೩

ಅಂತು ಚುಂಬಿಸಿ,

ಮದನಂ ತನ್ನಧಿದೈವದಾಕೃತಿಯನೊಲ್ದಾರಾಧಿಸಲ್ಕೆಂದು ಚಿ ।
ತ್ರದ ರೂಪಂ ಬರೆವಂತೆ ಮತ್ತೆ ರತಿ ತತ್ಸೌಂದರ್ಯಮಂ ಕಂಡು ಮೋ ॥
ಹಮಗುರ್ಬಿಂದಸುಪೊಯ್ದಳಾಬೊಡಗಮಿಂದಾಂ ರೂಪುಗೆಟ್ಟಿಪ್ಪೆನೆಂ ।
ದಿದನ ವೀರ್ತಳದೊಳ್ ಪ್ರತಿಷ್ಠಿಸಿದನೆಂದಾಕಾಂತೆ ಮುಂಡಾಡಿದಳ್ ॥ ೫೪

ಅಂತು ಮುಂಡಾಡಿಯೆನ್ನ ಮುಖಮಂ ನೋಡಿಯಿಂತೆಂದಳ್:—

ಈ ಕಾಂತಮೂರ್ತಿ ಮಾನವ ।
ಲೋಕದೊಳಿಲ್ಲೆಂತು ನಿನಗೆ ಸಾರ್ದತ್ತು ಬಲಾ ॥
ನೀಕತೆನುವಾಕ್ಯಚಿತ್ತವ ।
ಶೀಕರಣಮೆನಿಪ್ಪ ಚಿತ್ರಮೆಲೆ ಪುಷ್ಕರಿಕೇ ॥ ೫೫

ಎಂಬುದುಮಾನಿಂತೆಂದೆಂ:—

ದೇವಿಯರಿಂತಪೇಕ್ಷಿಸುವಿರಾಗೊಡೆ ಚಿತ್ರದ ರೂಪಿನಾತನಂ ।
ಭಾವಕನಂ ಕಳಾನಿಳಯನಂ ಪಡೆದಿಲ್ಲಿಗೆ ತಂದು ತೋರ್ಪೆನೆಂ ॥
ದಾವಧುವಿಂಗೆ ಪೇೞಲದು ಪೋಗದಪೂರ್ವಮದಲ್ಲದಿರ್ದೊಡಿಂ ।
ತೀವಪು ತೋರ್ಪುದಾದೊಡತಿಭಾಗ್ಯಮೆನುತ್ತವಳೆನ್ನನಪ್ಪಿದಳ್ ॥ ೫೬

ದ್ವಿಪನಿಭಯಾನೆ ಪುಷ್ಕರಿಕೆ ತತ್ಸುಭಗಂ ಸ್ಮರಮೂರ್ತಿ ಸೂರ್ಯನಿಂ ।
ದಪರಗಿರೀಂದ್ರಮಸ್ತಕಮನೆಯ್ದಲೊಡಂ ಕಡುಮಬ್ಬಿನೊಳ್ ತಳಿ ॥
ತರ್ಪನಮಧ್ಯದೊಳ್ ಮೆಱೆವ ಪುಷ್ಪಲತಾಭವನಕ್ಕೆ ಬಂದು ಸ ।
ತ್ಕೃಪೆಯನಲುಪಿನಿಂದೆನಗೆ ತೋರ್ಪುದು ಬೇಟ್ಪನಿವಂ ತಳೋದರೀ ॥ ೫೭

ಎಂದೆನ್ನಂ ಕಳಿಪಿವಳೆಂದು ಪುಷ್ಕರಿಕೆ ಪೇೞಲಾಂ ಮನದೊಳ್ ಗುಡಿಗಟ್ಟಿ ಕಲ್ಪಸುಂದರಿ ಪೇೞ್ದ ಸಂಕೇತಸ್ಥಾನಕ್ಕೆ ಪೋಪೆನೆಂಬಾಗಳ್,

ಕಮಳಮುಖಿಯುಂಗಸಂಗ ।
ಕ್ರಮಮಂ ಕಣ್ಣಾಱೆ ನೋಡಲಾಱದ ತೆಱದಿಂ ॥
ಕಮಳಸಹಾಯಂ ಪಡೆದ ।
ಸ್ತಮಾನಗಿರಿಗೆಯ್ದಿದಂ ನೃಪಾಲತನೂಜಾ ॥ ೫೮

ಅಂತಸ್ತಮಾನಮಾಗಲೊಡಂ,

ಪಸಿದ ಚಕೋರಿಗಳ್ ದ್ವಿಜಶರೀರಿಗಳೆಂದೆಱೆಯಲ್ಕೆ ಸಂಜೆ ಭಾ ।
ವಿಸಿ ಪೊಸಜೊನ್ನಮಂ ನಿಶೆಯ ಕರ್ಪಿನಿತಿಲ್ಲದ ಮಾಱ್ಕೆಯಿಂದೆ ಶೋ ॥
ಧಿಸಲದು ಶುದ್ಧಮಾಗೆ ಬೞಿಯಂ ಸಲೆ ಸಿಕ್ಕಿದ ಧಾರೆವಟ್ಟಲೊಳ್ ।
ಸಸಿನಿರಿಸಿಟ್ಟವೋಲ್ ಮೃದುಕಳಂಕದಿನೊಪ್ಪಿದುದಿಂದುಮಂಡಲಂ ॥ ೫೯

ಅಂತು ಚಂದ್ರೋದಯಮಾಗಲೊಡಂ,

ನೆಲೆನೋಡಲ್ ಸುರಗಂಗೆ ಕೋಟಿಮುಖದಿಂದೇೞ್ತಂದಳಲ್ಲಲ್ತು ನಿ ।
ರ್ಮಳದುಗ್ಧಾಂಬುಧಿ ಮೇರೆದಪ್ಪಿ ಕವಿದತ್ತಲ್ಲಲ್ತು ಗೌರೀಶನು ॥
ಜ್ಜ್ವಲಸತ್ಪಂಚಕಮೂರ್ತಿ ಧಾರಿಣಿಯನಿಂದಪ್ಪಿರ್ದುದಲ್ಲಲ್ತು ಕೇ ।
ಳೆಳೆಯೊಳ್ ಕೌತುಕಮಪ್ಪಿನಂ ಪಸರಿಸಿತ್ತಾನಂದಚಂದ್ರೋದಯಂ ॥ ೬೦

ಅಂತು ಬೆಳ್ದಿಂಗಳ್ ಪರ್ಬಲೊಡಂ ಚಂದ್ರಾಸ್ತಮಾನಮಪ್ಪನ್ನೆಗಮಿರ್ದನಂತರಂ ಪೋಪೆನೆಂದಿರ್ಪಾಗಳ್,

ಪರನಾರೀಸಂಗದೋಷಂ ವಿಷಮತರಮಹಾಬಾಂಧವದ್ರೋಹಮೆಂಬು ।
ದ್ಧುರಮಪ್ಪೀದುರ್ಯಶಂ ಪೊರ್ದುಗುಮೆನಗದಱಿಂದಲ್ಲದಿನ್ನೊಂದು ಕಾರ್ಯಂ ॥
ಸ್ಥಿರಮಪ್ಪಂತಾಗದೆಂದಾಂ ಪಲವುಪಮೆಗಳಿಂ ಚಿಂತಿಸುತ್ತಿರ್ಪೆನಂ ನಿ ।
ರ್ಭರನಿದ್ರಾಲಸ್ಯಮಾರಾತ್ರಿಯೊಳನುನಯದಿಂ ಮೋಹಿಸಿತ್ತಾಗಳೆನ್ನಂ ॥

ಅಂತು ನಿದ್ರೆ ಬರಲೊಡಂ,

ಸಿತದೂರ್ವಾಂಕುರರಂಜಿತಾಗ್ರಮಕುಟಂ ನೀಳ್ದೇಕದಂತಂ ಕರಾ ।
ಗ್ರತಲೋದ್ಧೂತನಹೀಂದ್ರಬದ್ಧಪೃಥುಲೋದ್ವೃತ್ತಕುಕ್ಷಿ ಸಿಂದೂರಶೋ ॥
ಭಿತಕುಂಭಂ ವಿಲಸದ್ಭುಜಂ ಮದಗಜೋದ್ಗಂಡಸ್ಥಳಾಶ್ಲಿಷ್ಟಷ್ಪರಘುಂ ।
ಕೃತಭೃಂಗಾವಳಿ ಪೆಂಪ್ರವೆತ್ತಿಭಮುಖಂ ಮೆಯ್ದೋಱಿದಂ ಸ್ವಪ್ನದೊಳ್ ॥

ಅಂತು ಸ್ವಪ್ನದೊಳ್ ತೋಱಿ ವಿನಾಯಕನಿಂತೆಂದಂ:—

ಲಲಿತತರಂಗಸಂಚಯದಿನಾಣ್ಮಿವ ಬುದ್ಬುದಕೋಟಿಯಿಂ ಸಮು ।
ಜ್ಜ್ವಲಶಫರೌಘದಿಂ ಕಮಳಕೈರವಸಂತತಿಯಿಂ ನಿರಂತರಂ ॥
ಸಲೆ ಮೆಱೆದಿರ್ಪ ದೇವನದಿಯುಂ ಮಿಗೆ ಪ್ರೇಕ್ಷ್ಯ ಕಲಂಕಲಾನವಳ್ ।
ಮುಳಿದು ಮನುಷ್ಯನಾಗೆನುತೆ ಶಾಪಮನಂದೆನಗಿತ್ತಳುಗ್ರದಿಂ॥ ೬೩

ಅಂತು ಗಗನಗಂಗೆ ಶಾಪಮಂ ಕುಡಲಾಂ ಮಗುಳ್ದು,

ವಾರಣಸಂಕುಲಕ್ಷ್ಯಚಿತಮಪ್ಪುದನಾನೆಸಗಲ್ಕೆ ಗಂಗೆ ನಿ ।
ಷ್ಕಾರಣಮಿತ್ತೆ ಶಾಪಮನದೇಕೆನಗೆಂದು ಮಗುಳ್ದುವಳ್ಗೆ ನೀಂ ॥
ಧಾರಿಣಿಯೊಳ್ ಮನುಷ್ಯಸತಿಯಾಗಿ ಪರರ್ ನೆರೆನಂತು ಪುಟ್ಟಿ ವಿ ।
ಸ್ತಾರದೊಳಿರ್ಪೆಯೆಂದು ಮುಳಿದಾಂ ಮಿಗೆ ಶಾಪಮನಿತ್ತೆನಾಕ್ಷಣಂ॥ ೬೪

ಅಂತು ಶಾಪಮಂ ಕುಡಲಾಗಂಗೆಯುಂಜಿ ಇಂತೆಂದಳ್:—

ಕನ್ನೆಯವಸ್ಥೆಯೊಳ್ ಪುರುಷನೊರ್ಬನೊಳೊಲ್ದು ವಿವಾಹಮಾಗಿ ಮ ।
ತ್ತೆನ್ನಯ ಶಾಪದಿಂ ಮನುಜನಾಗಿ ಧರಾತಳದಲ್ಲಿ ನೀಂ ಬರಲ್ ॥
ನಿನ್ನಯ ಸಂಗದಿಂ ಸುಖದೊಳಿರ್ಪನಿತೊಂದು ವರಪ್ರಸಾದಮಂ ।
ಪನ್ನಗಭೂಷಣಾತ್ಮಭವ ನೀಂ ದಯೆಗೆಯ್ಯೆನುತಾಕೆ ಬೇಡಿದಳ್ ॥ ೬೫

ಅಂತು ಬೇಡಲೊಡನಂತಾಗಲೆಂದೆಂ. ಅದಱಿಂ

ಸುರಗಂಗಾಕೃತಿ ಕಲ್ಪಸುಂದರಿ ನಿಜಂ ಮನ್ಮಾತ್ರಿರ್ ನೀನಾಗಿಯು ।
ರ್ವರೆಯೊಳ್ ಸಂಭವಿಸಿರ್ದ ಕಾರಣದ್ದೊಳೀಸ್ತ್ರೀಸಂಗದೋಷಂ ಸಿರಂ ॥

ತರದಿಂ ಪೊರ್ದದು ನಿನ್ನನೊಲ್ದು ಪಿತೃಮಾತೃಪ್ರಾಣರಕ್ಷಾರ್ಥಮೊ ।
ನ್ನರುಮಂ ಬಾಧಿಸೆ ಪಾಪಮಿಲ್ಲ ನಿನಗೆಂದಂ ವಾರಣೇಂದ್ರಾನನಂ ॥ ೬೬

ಆವ್ಯತಿಕರದೊಳಾಂ ಕಣ್ದೆಱೆಯೆ,

ತಾರಾಂಗನಾಸ್ವತಂತ್ರೋ ।
ದಾರಮುಹತ್ತೇಜಮೆಯ್ದೆ ಪೆರ್ಚಿತ್ತೆನ್ನಾ ॥
ಕಾರದಿನೆಂಬನುಶಯದಿಂ ।
ಭೋರೆನೆ ಕರಗಿದಪ್ರೊಲಿಂದು ಕರಗಿದನಾಗಳ್ ॥ ೬೭

ಅಂತು ಚಂದ್ರಾಸ್ತಮಾನವಾಗಲೊಡಂ,

ಲೋಕಜನಶಫರನೇತ್ರಾ ।
ನೀಕಮನೊರ್ಮೊದಲೆ ಬಂಧಿಸಲ್ ಕಾಲಂ ನಿ ॥
ರ್ವ್ಯಾಕುಲದಿಂ ಮಿಗೆ ಬೀಸಿ ।
ಟ್ಟಾಕರ್ಷಿನ ಬಲೆವ್ರೊಲೆಯ್ದೆ ಪೆರ್ಚಿತ್ತು ತಮಂ ॥ ೬೮

ಅಂತು ಪೆರ್ಚಿದ ಕತ್ತಲೆಯೊಳಾಂ ಸಂಕೇತಸ್ಥಾನಕ್ಕೆ ಬರ್ಪಾಗಳ್,

ಪುರದಗೞೊತ್ತಿನೊಳಾಪು ।
ಷ್ಕರಿಕೆಯ ಮನೆಯಿದಿರ್ದಲ್ಲಿ ಪೆಱದಿರೊಂದಂ ॥
ಭರದಿಂ ತೆಗೆದಂಭೋಧಿಗೆ ।
ಸರಿಯೆನಿಸಿರ್ದಗೞಿನೊಲ್ದು ನೋಡಿದೆನಾಗಳ್ ॥ ೬೯

ಅಂತಿರ್ದಗೞಿಂ ನೋಡಿ

ಪಿರಿಯಗೞೊಳ್ ಬಿದಿರಂ ಪ ।
ಟ್ಟಿರಿಸಿಯದಂ ದಾಂಟಿ ಮತ್ತದಂ ಕೋಂಟೆಗೆ ನಿಂ ॥
ದಿರಿಸಿಯೊಳಬಿದ್ದು ನಡೆದೆಂ ।
ಭರದಿಂ ಪುಷ್ಕರಿಕೆ ಪೇೞ್ದ ಪೊಲಬಿೞಗಾಗಳ್ ॥ ೭೦

ಅಂತು ನಡೆವಾಗಳ್ ಮುಂದೆ,

ರಸಮಂ ಸೂಲಿಡುತಿರ್ಪ ದಾಡಿಮಫಲಂ ಪೆರ್ಚಿರ್ಪ ಚೆಂದೆಂಗು ನು ।
ಣ್ಪಸುರೇಱಿರ್ದೆಳಗಾಂಗು ಮೋಣ್ಡೞಿಯ ಬಿಣ್ಪಿಂ ಜೋಲ್ವ ಪೊಂಬಾಳೆ ಪೆಂ
ಪೆಸೆವಿನ್ಮಾವು ಪೊದಱ್ದ ಮುಟ್ಟೆಗೆಯ ಗೊಂಚಲ್ ನೀಳ್ದ ಜಂಬೂಫಲ ।
ಪ್ರಸರಂ ತೀವಿರೆ ಪೊಪ್ಪವೆತ್ತ ಪವನಂ ಚೆಲ್ವಾಯ್ತು ಳಾಧೀಶ್ವರಾ ॥ ೭೧

ಅಂತಿರ್ದುಪವನಮಂ ಕಂಡು ಪುಷ್ಕರಿಕೆ ಬೆಟ್ಟದ ಮಾರ್ಗದೊಳ್
ಅಸುಕೆಯ ಕೆಂದಳಿರ್ದುಱುಗಲಂ ಬಗಿದಾವ್ರಸವಾಹವೀಥಿಯಂ ।
ನುಸುಳ್ದತಿವೇಗದಿಂ ಕೃತಕಶೈಲಮನೊಯ್ಯನಡರ್ದು ಪೊಕ್ಕು ಸ।
ತ್ಕುಸುಮಲತಾಳಿಯೊಳ್ ತೊಡರ್ದು ಮಂದಸಮೀರನ ಮಾಳ್ಕೆಯಿಂ ಲತಾ ॥
ವಸಥಮನೆಯ್ದೆ ನಾಲ್ದೆಸೆಯುನೀಕ್ಷಿಸಿದೆಂ ಭುವನಾಧಿನಾಯಕಾ ॥ ೭೦

ಅದು ರಂಭಾಸಂಭೂತಮಾಗಿಯುಂ ಸುರಾಧಿಪನಿವಾಸಮಲ್ತು; ಪುನ್ನಾಗಪರಿಪೂರ್ಣಮಾಗಿಯುಂ ವಿಷಧರನಿಳಯಮಲ್ತು; ಕೋಮಳಲತಾವೇಷ್ಟಿತಮಾಗಿಯುಂ ವೇಶ್ಯಾವಾಟಮಲ್ತು; ಸಕಲಸುಮನೋರಂಜಿತಮಾಗಿಯುಂ ಅಮರ್ತ್ಯಭವನಮಲ್ತು; ಮಧುಪ್ರಸವಮಾಗಿಯುಂ ಪುರವಿರೋಧಿಯಲ್ತೆನಿಸಿರ್ದ ಉಪವನದೊಳ್ ಕದಂಬಕುಸುಮರಾಗದಿಂ ಪಸರಿಸಿಟ್ಟ ನೆಳೆಗಟ್ಟನಿಂ ಪಸಿಯುಡಕೆಯ ಪೊಸಕಂಭದಿಂ, ರಸದಾಳಿಯ ಪಸಿಯ ಗಂಧವಟ್ಟಿಗೆಯಿಂ, ಕುಳಿರ್ವ ಕುಳಿರ್ವೇರ ಕೇರ್ಗಟ್ಟನಿಂ, ಅಸುಕೆಯ ಕಿಸುದಳಿರ ಪೊದಕೆಯಿಂ, ಪಜ್ಜಳಿಸುವ ಪನ್ನೀರ ಚಳೆಯದಿಂ, ಸಿಱಿಗೊಂಡ ಗಱಿವೂವಿನ ಬಾಳ್ವೇಲಿಯಿಂ, ಲೀಲೆವಡೆದ ಲತಾಗೃಹಂ ಲತಾಂತಶರಜನ್ಮಭವನದಂತಿರ್ದುದು. ಅಂತುಮಲ್ಲದೆಯುಂ,

ಸುರಯಿಯು ಸೇವಂತಿಯು ಪಾ ।
ದರಿಗಳ ಮಲ್ಲಿಗೆಯು ಸಂಪಗೆಯು ಜಾಜಿಯು ತಾ ॥
ವರೆಯು ಸುರಹೊನ್ನೆಯುಲರ್ಗಳ ।
ಪರಿಮಳದಲರೆಸೆಯುತಿರ್ಪವಾವುಪವನದೊಳ್ ॥ ೭೧

ಅಂತೆಸೆವ ಉಪವನದ ನಡುವಣ ಲತಾಭವನಮಂ ನೋಡುವನಲ್ಲಿ,

ಇರ್ದೆಸೆಯಲ್ಲಿ ಮಾಣಿಕದ ದೀವಿಗೆ ಕೆಂದಳಿರ್ದೊಂಗಲಲ್ಲಿ ಪಾ ।
ಸಿರ್ದಮಳ್ವಾಸು ಪೆಂಪೆಸೆವ ನುಣ್ಪಿನ ತಣ್ಗಳಸಂಗಳಲ್ಲಿ ತೀ ॥
ವಿರ್ದ ಸುಗಂಧಶೈತ್ಯಜಲಮಿರ್ದಲೆಗಿಂಬೆಳತಾಳವೃಂತಮೊ ।
ಪ್ಪಿರ್ದ ಲತಾಗೃಹಂ ನಯನಕೌತುಕಮಂ ಪಡೆದತ್ತಿಳಾಧಿಪಾ ॥ ೭೨

ಅಂತು ಕೌತುಕಮಾದ ಲತಾಭವನಮಂ ಪೊಕ್ಕು ಕುಳ್ಳಿರ್ಪನ್ನೆಗಂ;
ನೂಪುರಮಂ ಕಳಚಿ ನವಕಿಂಕಿಣಿರಂಜಿತಕಾಂಚಿಯಂ ಬಿಸು ।
ಟ್ಟೋಪನ ನಿದ್ರೆಯುಬ್ಬರವನಾಲಿಸಿಯೊರ್ಬಳೆ ಮಱೆನೊಳ್ ಬರಲ್ ॥

ಚಾಪಲನೇತ್ರೆ ಕಾಂತಿ ಕಡುಮಿಂಚಿನವೋಲ್ ಪೂಳೆಯಲ್ ಸುಗಂಧಶೋ ।
ಭಾಪವನಂ ಮುಸುಂಕಲವಱಿಂದಱಿದೆಂ ಸತಿ ಬರ್ಪಳೆಂಬುದಂ॥ ೨೪

ಅಂತಾನಾಕಲ್ಪಸುಂದರಿಯು ಬರವನಱಿದು ಲತಾಭವನದ ಮಾಧವೀಗುಲ್ಮ ದೊಳ್ ಮೆಯ್ಗರೆದಿರ್ಪುದುಮವಳ್ ಬಂದು ತತ್ಭವನದಲ್ಲೆನ್ನಂ ಕಾಣದೆ,

ಎಲೆ ಕುಸುಮಾಸ್ತ್ರ ನಿರ್ದಯ ನಿರಂತರಮುಗ್ರಯನೆನ್ನನಿಂತು ಕೋ।
ಟಲೆಗೊಳಪಂತಿರಾಂ ನಿನಗೆ ಮಾಡಿದ ಪೊಲ್ಲಮೆಯುಂಟೆ ಧಾರಿಣೀ ॥
ತಿಲಕನನೊಲ್ದು ಚಿತ್ರಪಟದೋಪನನಿಲ್ಲಿಗೆ ತಂದು ತೋಱದಿಂ ।
ತಲಿಲಿಪೆಯೇಕೆ ಯೆನ್ನನೆನುತಂಗನೆ ಮುಂಗಿಡುತಿರ್ದಳಾಕ್ಷಣಂ ॥ ೨೫

ಅಂತು ಮುಂಗಿಡುತಿರ್ದಳಂ ಕಂಡು ಗುಲ್ಮದಿಂ ಪೊಱಮಟ್ಟು

ನಿನ್ನಕ್ಷಿದ್ವಿತಯಂ ಸ್ಮರಾಸ್ತ್ರತತಿಯುಂ ನಿನ್ನಾನನಂ ಚಂದ್ರನಂ ।
ನಿನ್ನುಚ್ಚಸ್ತನಮೊಯ್ದು ಮನ್ಮಥನ ಕೇಳೀಕಂತುಕದ್ವಂದ್ವಮುಂ ।
ನನ್ನಂಗಂ ರತಿಯಾರ್ಪನೀಪ್ಪುಳಿಗೊಳಲ್ ನೀಂ ಲೇಸನೇಗೆಯ್ದು ಕೇಳ್ ।
ನಿನ್ನಿಂ ವೈರಿಗಳುಂಟೆ ಕೇಳ್ ಮನಸಿಜಂಗೆಂದೊಲ್ದು ಬಂದಪ್ಪಿದೆಂ ॥ ೨೬

ಅಂತಪ್ಪಿ ಸತಿಯುಂ ನೋಱ್ಪನಾ,

ಸರಸಿಜನೇತ್ರೆ ಗುಜ್ಜುಳಿಪ ತುಂಬಿಗುರುಳ್ ಕಮನೀಯಪಲ್ಲವಾ ।
ಧರೆಗೆ ಪಿಕಸ್ವನಂ ನವಸುಧಾಕಳಶಸ್ತನಿಗಾಕ ಪೂಳಬಂ ॥
ಧುರಮಣಿವರ್ಣಂ ಪುಳಿನಪೂರ್ಣನಿತಂಬೆಗೆ ರಾಜಹಂಸಮುಂ ।
ಧರಗತಿ ಸಂತತಂ ಮೆಱೆವುದೆಂಬುದು ನೋಡಲಿದಾವ ವಿಸ್ಮಯಂ ॥ ೨೭

ಅಂತೆಸೆವ ಕಾಂತೆಯನಾಲಿಂಗನಂಗೆಯ್ದನಂತರಂ

ಘಟಕುಚೆ ಪ್ರಷ್ಟ್ರಿಕೆಯ ನುಡಿ ।
ದಿಟಮಾಯ್ತೆಂದೆನಗೆನುತ್ತವಳ್ ನನ್ನನುರ ॥
ಸ್ತಟದೊಳಮರ್ದಪ್ಪಿ ರತಿಲಂ ।
ಘಟದಿಂದಿರಲಾಗಳಱದೆನಾನಿಂಗಿತನುಂ ॥ ೨೮

ಅಂತಿಂಗಿತಮನಱಿದು,

ರಾಜಶುಕಂ ಕೆಂದಳಿಗರ್ಳ ।
ನೋಜೆಯಿನೊಳ್ಪೆಸೆಯೆ ಕರ್ದುಕುವಂದದಿನಾಗಳ್ ॥

ಕೂಜಿತರವದಿಂ ಕರ್ದುಕಿದ್ಧೆ ।
ನಾಜಂಗಮಕಲ್ಪಲತೆಯು ಬಿಂಬಾಧರಮಂ ॥ ೭೯

ಅಂತಧರಗ್ರಹಣಂಗೆಯ್ದು,

ನಿಯಮಸ್ಥಾನಮನಂಟಿ ಸತ್ವದೊದವಂ ಮುಂ ನೋಡಿ ಕಾಲಪ್ರಬೋ।
ಧೆಯನಾರಯ್ದು ನಿರಂತರಪ್ರಕೃತಿಯಂ ಭಾವೇಂಗಿತಜ್ಞಾನನಿ ॥
ರ್ಣಯದಿಂ ಭಾವಿಸಿಯಾತ್ಮಶುಕ್ಲಭರಮಂ ಹೃನ್ಮಾರುತವ್ಯಾಪ್ತಿಯೊ ।
ಳ್ಗಯಿನಾಂತಂಗನೆಯಿಚ್ಛೆಯಂ ಸಲಿಸಿದಂ ಸಂಭೋಗದೊಳ್ ಯೋಗದೊಳ್

ಸಹಜಪ್ರೀತಿ ಮನೋಹರಾಧರಮಣಿಪ್ರೋಚ್ಚುಂಬನಂ ಕುಂತಳ ।
ಗ್ರಹಣಂ ಕೋಮಳದೀನಚಾಟುವಚನಂ ಜಿಹ್ವಾಂಕುರಾಚ್ಛೋಟನಂ॥
ವಿಹಗಾನೀಕಲಸನ್ಮಹಾಗಳರವಂ ಲಜ್ಜಾಭಿಭಂಗಂ ಮುಹು ।
ರ್ಮುಹುರಾಲಿಂಗನಮಂತದೇಂ ಮೆಱೆದುದೋ ಸಂಭೋಗಕೋಲಾಹಳಂ॥

ಆಸಂಭೋಗದೊಳ್

ನೆಲಸಿದ ಲಜ್ಜೆಯೋಸರಿಸಿ ಘರ್ಮಜಲಂ ಪೊಱಪೊಣ್ಮೆ ಬುದ್ಧಿ ಸಂ ।
ಚಲಿಸಿ ಪೊದಱ್ದು ಲಲ್ಲೆ ಮಿಗಿಲಾಗಿಯುಸಿರ್ ನಿಮಿರ್ವೆತ್ತು ಲೋಚನೋ ॥
ತ್ಪಲಮರೆಮುಚ್ಚಿಯುಪ್ಪಗೆ ಸಡಿಲ್ದು ಮನಂ ಬೆಱಗಾಗಿ ಪುಷ್ಪಕೋ ।
ಮಲೆ ಮರವಟ್ಟಿರಲ್ ಸಮರತಿಸ್ಥಿತಿಯುಪ್ಪವೊಲಾಂ ನೆಗಳ್ಚಿದೆಂ ॥ ೮೦

ಅಂತು ಸಮರತಿಯಾಗೆ

ವಿಲಸದ್ರಕ್ತವಿಲೋಚನಂ ಶ್ರಮಜಲವ್ಯಾಕೀರ್ಣಗಾತ್ರಂ ಮತಿ ।
ಸ್ಖಲನಂ ಶೀರ್ಣಚಳಾಳಕಂ ಶಿಥಿಲವೇಣೀಬಂಧಮುತ್ತುಂಗನಿ ॥
ರ್ಮಳಬಿಂಬಾಧರಮಾಸ್ಯಸಂಭವಮುದಂ ಚಿತ್ತಪ್ರಸನ್ನಂ ಮನ ।
ಕ್ಕೊಲವಂ ಪೆತ್ತುದು ಕಾಂತೆಯಾಕೃತಿ ಕರಂ ರತ್ಯಂತದೊಳ್ ಸಂತತಂ॥ ೮೧

ಅಂತಾದ ರತ್ಯಂತಸಮಯದೊಳ್ ನಲ್ಲಳಂ ಲಲ್ಲೆನುಡಿಯಿಂದೆನಸುಂ ಪರಿತೋಷಂಬಡಿಸಿ ನಿಮಗಾದೊಡೆ ಸಂಕಲ್ಪಸಿದ್ಧಿಯಾಯ್ತಾಂ ಬೇವಿಯರಿಂ ಬೀಳ್ಕೊಂಡಪೆನೆಂಬುದುಂ,

ಅಲರ್ದ ಮುಖಾಬ್ಜಮೆಯ್ದೆ ಕುಡುಬಾಡಿ ಸಿತಾಕ್ಷಿಯುಗಂ ಬೆಱಂಗುವೆ ।
ತ್ತಲಘುನಿತಂಬದೊಳ್ ಮುಡಿ ಸಡಿಲ್ದು ತನುಪ್ರಭೆ ಕಂದಿ ಬುದ್ಧಿ ಸಂ ॥

ಚಲಿಸಿ ಮುಖಂ ತೊಳಂಗಿಯನುರಾಗರಸಂ ತವೆ ಬತ್ತಿಯಾಕ್ಷಣಂ ।
ಲಲನೆ ವಿಷಾದದಿಂ ದುಗುಡಮುಂ ತಳೆದಳ್ ಮರವಟ್ಟರಂದದಿಂ ॥ ೮೪

ಅಂತವಳ್ಗಾದ ದುಗುಡಮನಾಂ ಕಂಡು

ಇನಿತುದ್ವೇಗಕ್ಕದೇಂ ಸಮ್ಮದಮುಬಲೆಯೆನಲ್ಕಾನುಕ್ಕೈವಲ್ಯಗೊಳ್ವಂ ।
ದಿನಗಳೀಗಳ್ ಸಾರ್ದುವೇಂ ಮತ್ತಧನಪತಿಯ ದುಸ್ಸಂಗದುರ್ವೇದನಾಯಾ ॥
ತನುವೊಳ್ ಬೇಟ್ಸುಂದವಾಯ್ತೀತೆಱನನಱಿಸು ಮುಂಗೆಟ್ಟಳಂ ಬಾಲೆಯುಂ
ದುಃ । ಖಿನಿಮುಂ ನೀಂ ಕಾವುದೆಂದಂಗನೆ ಮಿಗೆ ಸುರಿದಳ್ ಭೋರೆನಲ್ ಕ
ಣ್ಣ ನೀರಂ ॥ ೮೫

ಬಱಿಕ್ಕಾನವಳ ಕಣ್ಣ ನೀರಂ ತೊಡೆದಿಂತೆಂದೆಂ:—

ನಿಜಪತಿಗೆನ್ನ ಚಿತ್ರಪಟದೊಪ್ಪಮನೊಯ್ಯನೆ ತೋಱಲಂತವಂ ।
ತ್ರಿಜಗದೊಳತ್ಯಪೂರ್ವಮೆನಿಸಿರ್ಪ ವಿಚಿತ್ರದ ರೂಪಿದೆಂತು ವಾ ॥
ರಿಜಮುಖಿ ನಿನ್ನ ಕೆಯ್ಸೇರೆಗೆ ಸಾರ್ದುದು ಪೇೞನೆ ಪೇೞ್ ಧರಿತ್ರಿಗ ।
ದ್ವಿಜೆಗೆಣೆ ಧರ್ಮರಕ್ಷಿತೆಯೆನಿಪ್ಪವಳಿಂದೆನಗೆಂದು ಕಾಮಿನೀ ॥ ೮೬

ಅಂತು ಚಿತ್ರಪಟಮುಂ ತೋಱಿ ಇದನೆನ್ನ ಕುಲಗುರುವಪ್ಪ ಧರ್ಮರಕ್ಷಿತೆಯೆಂಬ ಭಿಕ್ಷುಕಿ ಕೊಟ್ಟು ಮತ್ತಮಿಂತೆಂದಳೆಂದು ಪೇೞ್ದು,

ಈರೂಪಂ ಪಿಡಿದೊಂದು ಹೋಮಮನಲಂಪಿಂ ಗಂಧಕಸ್ತೂರಿಕ ।
ಪೂರ್ರಾಜ್ಯಾಂಬರಮಾಂಸಸಂತತಿಗಳಿಂ ಮಾಡಲ್ಕೆ ತಚ್ಚಿತ್ರದಾ ॥
ಕಾರಂ ಕೊರ್ತೆನಗಪ್ಪುದಾಂ ಪದೆಪಿನಿಂದಪ್ಪಲ್ಕೆ ನಿನ್ನಂ ತದಾ ।
ಕಾರಂ ಕೇಳ್ ನಿನಗಪ್ಪುದಾಂ ಸಹಜದಿಂದಿರ್ಪೆಂ ಧರಾವಲ್ಲಭಾ ॥ ೮೭

ಇದು ನಿನ್ನಾಪ್ತಪ್ರಧಾನರ್ಗಖಿಳಪರಿಜನಕ್ಕಾತ್ಮಚಿತ್ತಕ್ಕೆ ಪೆಂಪಿಂ ।
ಮುದಮಪ್ಪಂತಾದೊಡಾಂ ಹೋಮಮನೆಸಗಿದಪೆಂ ದೇವ ನೀವೆಲ್ಲರುಂ ಕೇ ॥
ಳ್ದು ದಯಾಚಿತ್ತಪ್ರಸಾದಾಗೊಡಿಮೆನಲರಸಂ ತಾನೊಡಂಬಟ್ಟೆನಿಂ ಮಾ ।
ಡ್ಪುದು ಮುಂತೀಹೋಮಮುಂ ಕಾಮಿನಿಯುಪವನದೊಳ್ ವಸ್ತುಸಾಮ
ಗ್ರ್ಯದಿಂದಂ ॥ ೮೮

ಎಂಬುದುಂ,

ಹೋಮಮಸಮಾಪ್ತಿಯೊಳೆನಗೆ ಮ ।
ಹಾಮಂತ್ರದಿನಾದ ಮೂರ್ತಿಯುಂ ಸೀನಗೀಯಲ್ ॥

ಭೂಮೀಶ ನಿನ್ನ ಕರೆವೆಂ ।
ಹೋಮಸಮಭ್ಯರ್ಣಘಂಟಿಕಾಧ್ವನಿಯಿಂದಂ ॥ ೪೯

ಆಘಂಟೆಯ ಧ್ವನಿಯಾಗಲೊಡಂ ನೀಂ ಹೋಮಕುಂಡಕ್ಕೆ ಬಂದೊಡಾಂ ನಿನ್ನನಪ್ಪಲೆನಗಾದ ಚಿತ್ರದ ರೂಪು ನಿನಗಾಗಿಯಾಂ ಮುನ್ನಿನಂತಿರ್ಪೆನೆಂದು ಭಿಕ್ಷುಕಿ ಪೇೞ್ದಳೆಂದು ಪೇೞ್, ಮೇಲಪ್ಪ ಕಾರ್ಯಮನಾನೆಸಗುವೆನೆಂದು ಮತ್ತಂ,

ಕೋಮಳೆ ನೀನೆಸಗಿದ ತ ।
ದ್ಧೋಮದ ಧೂಮೋತ್ಕರಂ ಕರಂ ತಲೆದೋಱಲ್ ॥
ಪ್ರೇಮದೊಳಾನಲ್ಲಿಗೆ ಬಂ ।
ದುಂ ಮಾಡುವ ತೆಱನನಱಿಪುವೆಂ ನಿನಗಾಗಳ್ ॥ ೫೦

ಎಂದಿದೆಲ್ಲಮಂ ಕಲ್ಪಸುಂದರಿಗೆ ಕಲಿಸಿಯನಂತರಂ,

ಆಂ ಬಂದು ಪೋದ ಪಜ್ಜೆಯ ।
ನಾಂಬುಜಮುಖಿ ಪೆಱನದೊರ್ಬನಱಿಯದ ತೆಱದಿಂ ॥
ಬೆಂಬೞಿಯಿಂ ಪುಷ್ಕರಿಕೆಯಿಂ ।
ನಿಂಬಿಂ ತೊಡೆಯಿಸುವುದೆನುತುಮಾಂ ಪೊಱಮಟ್ಟೆಂ ॥ ೫೧

ಅಂತು ಪೇೞ್ದಾನಾವನದಿಂ ಪೊಱಮಟ್ಟೆತ್ತಲ್ ಬಂದೆಂ. ಅವಳತ್ತಲ್ ತನ್ನ ಪತಿಯ ಸಮೀಪಕ್ಕೆ ಪೋಗಿ ಯಾಂ ಪೇೞ್ದಂದದಿಂ ವಿಕಟವರ್ಮಂಗೆ ಪೇೞ್ದೊಡವನದರ್ಕೊಡಂಬಟ್ಟಿರೆ

ದೇವಿಯದೊಂದಪೂರ್ವತರಮೂರ್ತಿಯನೊಪ್ಪಿರೆ ಮಾಡುವಳ್ ಗಡಂ ।
ಭೂವರನಪ್ಪ ತದ್ವಿಕಟವರ್ಮನೃಪಂಗಿದಱೊಳ್ ವಿತರ್ಕಮಿ ॥
ನ್ನಾವುದೆನುತ್ತ ಶೇಷಜನಮಚ್ಚರಿವಟ್ಟಿರೆ ಕಲ್ಪಸುಂದರೀ ।
ಭಾವಕಿ ಹೋಮಮಂ ಬನದೊಳೊರ್ಬಳೆ ಕೇಳ್ ಸಮಕಟ್ಟಿದಳ್ ನೃಪಾ ॥

ರೂಪಪರಾವರ್ತನವಿವಿ ।
ಧೋಪಾಯಮನೆಸಗುವಳ್ ಗಡಂ ನರನಾಥಂ ॥
ಗೋಪಳ್ ಮಣಿಮಂತ್ರೌಷಧಿ ।
ಗೇ ಪೊಸತಾಧಿಕ್ಯಮೆಂದು ಗುಂಪೊಸೆವಿನೆಗಂ ॥ ೫೨

ಅಂತಖಿಳಜನಮತ್ಯಾಶ್ಚರ್ಯಂಬಡುತಿರಲಗುರುಚಂದನಕುಂಕುಮಕರ್ಪೂರಕಸ್ತೂರಿಕಾದಿಸುಗಂಧವಸ್ತುವಂ ಸಿತಸರ್ಷಪತಿಲವ್ರೀಹಿಯವಾದಿಹೋಮಧಾನ್ಯಮುಂ ಘೃತದುಗ್ಧಪಶುವಸಾದಿರಸದ್ರವ್ಯಮುಂ ಚೀನಿಮಹಾಚೀನಿದೇವಾಂಗದುಕೂಲಾದಿಪಟಕವರ್ಗಮುಂ ಖದಿರದೇವದಾರುನಿಂಬಲವಂಗಾದಿಸುಗಂಧಶುಷ್ಕಚಯಮುಮಂ ಹೋಮಸಾಧನಂಗಳಾಗಿ ಮಾಡಿ,

ವನಜಮುಖಿ ವಿಕಟವರ್ಮನ |
ತನುಸಾಧನಮಂ ಚಿತಾಗ್ನಿಯೊಳ್ ಬೇಳ್ವಂತಾ ||
ವನಮಧ್ಯದಗ್ನಿಕುಂಡದೊ |
ಳನುನಯದಿಂ ಬೇಳ್ದಳೊಲ್ದು ತತ್ಸಾಧನಮಂ || ೯೪

ಸಕಲಸುಗಂಧವಸ್ತುಗಳನಂಗನೆ ತದ್ವನಮಧ್ಯದೊಳ್ ಹವಿ |
ಪ್ರಕರಮನಿಕ್ಕೆ ಹೋಮಶಿಖಿಯೊಳ್ ಮಿಗೆ ಬೇಳ್ದೊಡೆ ಧೂಮದೇಳ್ಗೆ ದಿ ||
ಙ್ನಿಕರದೊಳುರ್ಬಿ ಪರ್ಬಿ ಬರೆ ನಿಶ್ಚಯದಿಂದನಿಶಂ ಸುಗಂಧಕೌ |
ತುಕಮೆನಿಸಿತ್ತದಲ್ಲದೊಡೆ ಗಂಧಗುಣಂ ಧರೆಗೆಂತು ಸಾರ್ದುದೋ || ೯೫

ಆಹೋಮಧೂಮಸ್ತೋಮಂ ವ್ಯೋಮಮಂಡಲಮಂ ದಿಶಾಮಂಡಲಮಂ ಮಂಡಳಿಸಲದನಾಂ ಕಂಡು

ಭರದಿಂ ಬಂದೆನ್ನ ಮೇಗಾಲ್ಗಳನಮಳಡಿಯಿಂ ಮೆಟ್ಟಿ ದೂಂಟಿಕ್ಕಿ ಹ
ಸ್ತಾಂ | ಬುರುಹಾಗ್ರಶ್ಲೇಷದಿಂ ಬಾಗಿಸಿ ನಯನದ ಡಾಳಂ ಮದೀಯಾಸ್ಯ
ದೊಳ್ ಪ || ರ್ಬಿರೆ ಮಧ್ಯಂ ಬಳ್ಕೆ ಕಕ್ಷಂ ಪೊಗರನುಗುಳೆ ರಾಗಂ ತು
ಳುಂಕಲ್ಕೆ ತಾಮ್ರಾ | ಧರಮಂ ತತ್ಕಾಂತೆ ಪೆಂಪಿಂ ಮಗುಳ್ದು* ಮಗುಳ್ದ*
ವಳ್ ಚುಂಬನಂಗೆಯ್ದಳಾಗಳ್ || ೯೬

ಅಂತು ಚುಂಬನಂಗೆಯ್ದನಂತರಮಿಂತೆಂದಳ್:—

ನೀನೆನ್ನೊಳ್ ಪೇಳ್ದ ಕ್ರಮ |
ಮೇನುಂ ತಪ್ಪದವೊಲೆಸಗಿದೆಂ ಹೋಮಮನಿ ||
ನ್ನೀನೆಸಪ್ರುತ್ತರಕಾರ್ಯವಿ |
ಧಾನಮನೊಲ್ದಂತೆ ಮಾಳ್ಪುದೆಲೆ ಸುಕುಮಾರಾ || ೯೭

ಎಂದವಳ್ ಮಗುಳ್ದಾಲಿಂಗನಂಗೆಯ್ಯೆ,

ಕಾಲಾತಿಕ್ರಮಮಾಗದೆ ।
ಕಾಲನ ನಿಲಯಕ್ಕೆ ವಿಕಟವರ್ಮನನೀಗಳ್ ॥
ಬಾಲೆ ಕಳುಪಿದಪೆನೆಸೆವ ತ ।
ಮಾಳದೊಳಿರ್ದೀಕ್ಷಿಸೆಂದೆನಾನಂಗನೆಯಂ ॥ ೯೮

ಅಂತವಳನೊಂದು ತಮಾಲಗುಲ್ಮದೊಳಿರಿಸಿಯಾಂ ಹೋಮಕುಂಡದ ಸಮೀಪಕ್ಕೆ ಬರೆ,

ವಿವಿಧಜ್ವಾಳಾಕಳಾಪಂ ತುಡುಕೆ ಗಗನಮಂ ಧೂಮಸಂತಾನಕಂ ದಿ ।
ಗ್ವಿವರಕ್ಕೆಯ್ತರ್ಪಿನಂ ಪನ್ನಗನಿಲಯಮನಂಗಾರದುಗ್ರೋಷ್ಣಮುಂ ತೀ॥
ವ್ರವಿನಂ ಪಾಯ್ತರ್ಪಿನಂ ಬಲ್ಗಿಡಿಗಳ ಗಡಣಂ ರಂಜಿಸುತ್ತಿರ್ಪ ಹೋಮಾ।
ಗ್ನಿ ವಿಶೇಷಂ ಮನ್ಮನಕ್ಕಚ್ಚರಿಯನೆಸಗಿದತ್ತಾಗಳುರ್ವೀವರೇಣ್ಯಾ ॥ ೯೯

ಅಂತಳುರ್ವರ್ ಹೋಮಕುಂಡದ ಸಮೀಪದೊಳ್ ಕುಳ್ಳಿರ್ದುರ್

ಆವಿಕಟವರ್ಮನೃಪತಿಯು ।
ಜೀವನಮುಲ್ಲಾಡುವಂತೆ ಘಂಟೆಯನಾಗಳ್ ॥
ಭಾವಿಸಿಯುಲ್ಲಾಡಿದೆನಾ ।
ಶಾವಳಯಮನದಱ ಘೋರರವಮೊಯ್ದುವಿನಂ॥ ೧೦೦

ಅದು ಮಿಗೆ [ಘೋಣ್ಕೃತುಂ] ವಿಕಟವರ್ಮನ ಸಂಸ್ಕೃತಿಭಾಗ್ಯಮೊಯ್ದು
ತೀರ್ದುದನಱಿಪೊಂದು ದುರ್ಧ್ವನಿಕೃತಾಂತಲುಲಾಯಗಳಪ್ರಬದ್ಧಸಂ ॥
ಪದನವಘಂಟಿಕಾಧ್ವನಿ ಯುಗಾಂತಮಹೇಶ್ವರನಗ್ರಹಸ್ತದು ।
ರ್ಬಿದ ಡಮರುಪ್ರತಿಧ್ವನಿಯೆನಲ್ ಮಿಗೆ ಪೊಣ್ಮಿತು ಘಂಟಿಕಾರವಂ॥ ೧೦೧

ಆಘಂಟಿಕಾಧ್ವನಿಯಂ ವಿಕಟವರ್ಮಂ ಕೇಳ್ದು

ಮಾರಿಯ ಮಂದಿರಕ್ಕೆ ಕುಱಿ ಸಿಂಹಗೃಹಕ್ಕೆ ಮತಂಗಜಂ ಯಮ ।
ದ್ವಾರಕೆ ಪಾತಕಂ ವಿಷಯಸಂತತಿಯಾಪೆಗೆ ಯೋಗಿ ಬರ್ಪವೋಲ್ ॥
ಭೋರೆನೆ ಬರ್ಬನೇ ಮನದ ಸಂಭ್ರದಿಂ ನತೈತಂಪನೊಲ್ದು ಘಂ ।
ಟಾರವದತ್ತಲಾವಿಕಟವರ್ಮನೃಪಂ ಸುಭಗತ್ವದಾಸೆಯಿಂ ॥ ೧೦೨

ಅಂತು ಬಂದು ಹೋಮಸಮೀಪದೊಳಿರ್ದೆನ್ನಂ ಕಂಡು

ನಿಬಿಡಮತಿ ನೃಪವರಂ ಬಂ ।
ದು ಬನದೊಳಾಂ ಬೇಳ್ದ ಹೋಮಮಂ ಕಂಡೀಗರ್॥

ಅಬಲೇ ಪೇೞ್ದಿಂತಾಯ್ತುಂ ।
ದು ಬೆಕ್ಕಸಂಬಟ್ಟು ನೋಡಿದಂ ಮದ್ರೂಪಂ ॥ ೧೦೩

ಅಂತೆನ್ನಂ ನೋೞ್ಪ ವಿಕಟವರ್ಮನನಾನಿಂತೆಂದೆಂ:—

ಮುನ್ನಮತೀವಕಷ್ಟಮೆನಿಪಾಕೃತಿಯಾಗಿಯುಮೊಲ್ದನೇಕಧೂ ।
ರ್ತೋನ್ನತಿಯುಂ ನೆಗೞ್ಚಿಪೆ ನೃಪಾಲಕ ಕೇಳ್ ನಿನಗಿಂದು ದೈವದಿಂ ॥
ಚೆನ್ನತರಂ ಬರಲ್ ದ್ವಿಗುಣಮಾಗದೆ ಮಾಣ್ಪುದೆ ನಿನ್ನ ಧೂರ್ತರ್ ಪೇೞ್ ।
ಮುನ್ನಿನ ಚೆಂದಮಲ್ಲದೊಡೆ ತದ್ವಿಧಮಂ ನಿನಗೀವೆನೀಕ್ಷಣಂ ॥ ೧೦೪

ಎಂದು ಮತ್ತಂ,

ನಿನಗಾದೊಡೀಗ ದೇವಾಂ ।
ಗನೆಯರನನುಭವಿಪ ಚೆಲ್ವ ರೂಪಾದಪ್ರದೆ ॥
ನ್ನನುದಾಸೀನಂ ಮಾಡದೆ ।
ಮನಮೊಸೆದಿರ್ಪೊಡೆ ಮದೀಯಮೂರ್ತಿಯನೀವೆಂ ॥ ೧೦೫

ನೀನಿಂತು ಪೇೞ್ವುದಂ ಮ ।
ತ್ತಾನೆಂತುಂ ಮೀಱಿದಪ್ಪೆನಾದೊಡೆ ಬೞಿಕಂ ॥
ತಾನಿಹಲೋಕಸುಖಾತಿಶ ।
ಯಾನುನಯಕ್ಕೆಯ್ದೆ ಬಾಹ್ಯನಾಗೆನೆ ಸತತಂ ॥ ೧೦೬

ಎಂದವಂ ಪೇೞಲ್ ಬೞಿಕಾನಿಂತೆಂದೆಂ:—

ಮುನ್ನೆನೆದ ಕಾರ್ಯಮುಳ್ಳೊಡ ।
ಮೆನ್ನೊಳ್ ಪೇೞ್ದರಿಸು ರೂಪಸಲ್ಲಟಮಾಗಲ್ ॥
ನಿನ್ನ ಮತಿ ಚಲಿಸಿ ನಿಜಕಾ ।
ರ್ಯೋನ್ನತಿ ಕಿಡುಗುಂ ಬೞಿಕ್ಕೆ ಕೇಳ್ ಭೂಪಾಲಾ ॥ ೧೦೭

ಎಂಬುದುಮಾವಂ ತನ್ನೊಳ್ ಮುನ್ನಂ ನಿಶ್ಚಯಮಾಗಿರ್ದ ಕಾರ್ಯಮ
ನೆನ್ನೊಳಿಂತೆಂದಂ:—

ಉಱುಮಂ ಪ್ರಹಾರವರ್ಮಂ ।
ಕಿಱಿಯಯ್ಯಂ ತದ್ಧರೇಶನಿನ್ನಾತನನೆ ॥
ೞ್ಚಿಱಿದಂತೆ ಜೀರ್ಣಮಾಯ್ತುಂ ।
ಬೞಿಕೆಯು ನೆವದಿಂದೆ ಕೊಲ್ವುದಾಬಂಗನದೊಳ್ ॥ ೧೦೮

ಶತಪಲಿಸುನಂತಪಲಿಗಳ್ ।
ಪ್ರತಿಪಕ್ಷಿಗಳಾಗಿ ತಮ್ಮೊಳಿರ್ದ ಪರಾಶರೂ ॥
ದ್ರತಮುರನೊರ್ಬರನೊರ್ಬರೂ ।
ಳತಿಮಥನಮನೆಸಗಿ ಕೊಳ್ವುದವರೊಡಮೊಗಳಂ ॥ ೧೦೯

ಪದೆಪಿಂದೆ ಧನಜನಂ ಪೆ ।
ರ್ಚಿದ ಪೌಂಡ್ರಕದೇಶಮೆಲ್ಲಮಂ ಕಿಡಿಸೆಂದಾ ॥
ಮೊದಲೊಳ್ ಪೇಳ್ದೆನದಿನ್ನಾ ।
ಗಡೆಂದು ಪೇಳ್ವೆಂ ಮಗುಳ್ದು ಸಚಿವರೊಳೋಲವಿಂ ॥ ೧೧೦

ಮಣಿಯೊಂದನಿಲ್ಲಿಗೊರ್ಬಂ ।
ವಣಿಗ್ವರಂ ತಂದನದಱ ಮೂಲ್ಯಮನಿಂತೀ ॥
ಕ್ಷಣದೊಳ್ ಲಾಘವಮಪ್ಪಂ ।
ತಣಿಯುರಮಾಡುತ್ತೆ ಕೊಳ್ವುದೆಂದಾಂ ಪೇಳ್ದೆಂ ॥ ೧೧೧

ಎಂದೀರಹಸ್ಯಕಾರ್ಯಮನೆಲ್ಲಮನೆನಗೆ ಪೇಳಿಲನಂತರಂ

ನಿನಗಿಂದಿತ್ತೆನಿದಲ್ತೆ ಸಂಸ್ಕೃತಿಯ ಸೌಖ್ಯಂ ಜೀವನಂ ನಿನ್ನ ಪೂ ।
ರ್ವನಿಬದ್ಧಸ್ಥಿತಿ ಪುಣ್ಯಪಾಪಫಲಮಿನ್ನೆಂತಿರ್ದುದೆಂತಿರ್ಕೆ ಪೋ ॥
ಗೆನುತುಂ ತಳ್ಳಿಸಿಕೊಂಡು ಹೋಮಶಿಖಿಯೊಳ್ ತದ್ಧೂಪನಂ ನೂಂಕಿ ಚಂ ।
ದನಕರ್ಪೂರಮನಾಂ ಬಿಸುಟ್ಟೆನದಱೊಳ್ ಕಾಣೀಬಿದಂತಿರ್ಪವೋಲ್ ॥ ೧೧೨

ಅಂತಾನವನಂ ಹೋಮಶಿಖಿಯೊಳ್ ನೂಂಕಲವಂ ಭಸ್ಮಾವಶೇಷನಾಗಲೊಡಂ,

ಅತಿಸಾಹಸನಿಜಕಾರ್ಯೋ ।
ನ್ನತಿಯಿಂ ತದ್ವಿಕಟಸರ್ಪಭೂಪನ ಮರಣ ॥
ಸ್ಥಿತಿಯುಂ ಕಂಡಂಜಿ ಮನೋ ।
ಗತಚಿಂತೆಯೊಳಿರ್ದ್ದ ನಡುಗಿದಳ್ ಸತಿಯಾಗಳ್ ॥ ೧೧೩

ಅಂತು ಭಯಾತುರೆಯಾಗುತ್ತುಂ ಬಂದು

ಆದಿಯೊಳಂಗಜಂ ಜನಕನಾಗಿ ಕವಿಂ ನಿನಗಿತ್ತನೆನ್ನನಿಂ ।
ದಾದರದಿಂದೆ ಹೋಮಶಿಖಿಸಾಕ್ಷಿಯೊಳೊಪ್ಪಿರಲೆನ್ನನಾಂ ನಿಜಾ ॥

ಹ್ಲಾದದಿನಿತ್ತೆನೆಂದಬಲೆ ತನ್ನನುರಾಗದೊಳೆನ್ನನಪ್ಪಿ ಸಂ ।
ಮೋದದೊಳೋಷ್ಠವಂ ಪಿಡಿದು ಚುಂಬಿಸಿದಳ್ ತಣಿವಪ್ಪ ಮಾಳ್ಕೆಯಿಂ॥

ಅಂತಪ್ಪಿದಳಂ

ಮಗುಳ್ದಾಲಿಂಗನಚುಂಬನಕ್ರಿಯೆಗಳಂ ಸಂತೋಷಸಂಭೂತಸೂ ।
ಕ್ತಿಗಳಂ ಪ್ರೇಮರಸಾತಿರೇಕಗತಿಯಿಂದಾನಾಗಳುತ್ಸಾಹದಿಂ ॥
ಮೃಗಶಾಬಾಕ್ಷಿಯ ಭೀತಿಯುಂ ಬಿಡಿಸಿ ಪೆಂಪಿಂದವಳ್ಗೂಡಿ ರಾ ।
ಜಗೃಹಕ್ಕೆಯ್ದಿದೆನೆಲ್ಲರೀಕ್ಷಿಸುತಿರಲ್ ಮುದ್ದೇಹಕೆಯ್ದುರ್ವರ್ಪೋಲ್ ॥ ೧೧೫

ಪಳಿಕಿನ ಬದ್ಧಭೂಮಿಕೆಯಿನುಜ್ಜ್ವಲಶಂಖನಿಘೃಷ್ಟಭಿತ್ತಿವಂ ।
ಗಳವುಯನವ್ಯಚಿತ್ರತತಿಯಿಂ ಮಣಿತೋರಣನಿಬದ್ಧಪುತ್ರಿಕಾ ॥
ಕುಳದಿನನೂನನಿರ್ಗಳವಿತಾನಸಮುನ್ನತಶೋಣರತ್ನಸ ।
ತ್ಕಳಶದಿನೊಪ್ಪುತಿರ್ಪ ನೃಪಗೇಹಮನಾಂ ಪುಗುತಂದೆನುರ್ವಿಪಾ ॥ ೧೧೬

ಸತಿ ಬಂದೆಸಗಿದ ಹೋಮೋ ।
ತ್ಥಿತಧೂಮಸ್ತೋಮಮೆಯ್ದೆ ಪರ್ಬಲ್ಕೆ ತಿರೋ ॥
ಹಿತನಾದನೆಂಬ ತೆಱದಿಂ ।
ದೆ ತರಣಿ ಸುಪರಾಂಬುರಾಶಿಯಾಂ ಮುಱಿಗೊಂಡಂ ॥ ೧೧೭

ಅಂತು ಸೂರ್ಯಾಸ್ತಮಾನನಾಗಲೊಡಂ ಸಜ್ಜೆಯ ಮನೆಯೊಳ್ ಕಲ್ಪ ಸುಂದರಿಸಹಿತಮಾನಿರ್ದು,

ಅಂತಃಪುರವರ್ಗಳ ಪೆಸ ।
ರಂ ತರತರದಿಂದೆ ಕಲ್ಪಸುಂದರಿಯಿಂ ಕೇ ॥
ಳ್ದಂತವರೆಲ್ಲರನುಚಿತಾ ।
ರಂ ತವೆ ಮೊಱೆಯಕ್ಕೆ ಕರೆದು ಮಿಗೆ ಮನ್ನಿಸಿದೆಂ ॥ ೧೧೮

ಅಂತವರಂ ಮನ್ನಿಸಿಯಾರಾತ್ರಿಯಂ ಕಳೆಯೆ,

ಉದಯಾದ್ರಿಸಿಂಹಪೀಠಾ ।
ಭ್ಯುದಯಮನೊಸೆದೆಯ್ದೆ ಪಂಕಜಪ್ರಿಯನುರ್ವೀ ॥
ಮುದಮನೊಡರ್ಚಿದನಂತ ।
ಲ್ತೆ ದಲುತ್ತಮರಪ್ಪ ಪುರುಷರಾದವರುದಯಂ ॥ ೧೧೯

ಅಂತು ಸೂರ್ಯೋದಯಮಾಗಲಾನ ದಯುವ್ಯಾಪಾರಮಂ ತೀರ್ಚಿ ನವರತ್ನರಂಜಿತಮಣಿಮಯವೇದಿಕಾಸುಧಾಮಯಭಿತ್ತಿಭಾಗದಿಂ, ಸ್ಫಟಿಕಪಾಷಾಣಘಟ್ಟಿತಕುಟ್ಟಿಮತಳದಿಂ, ಕದಂಬಮಣಿಕಮನೀಯಲಂಬಿತಭೂಷಣದಿಂ, ದೀಪಿತಸೋಪಾನದಿಂ ಮೆಱೆವಾಸ್ಥಾನಮಂಟಪಕ್ಕೆ ಕಲ್ಪಸುಂದರಿಸಹಿತಂ ಬರಲೆನಗಿದಿರೇೞ್ವ ಪ್ರಧಾನಪಸಾಯಿತಸಾಮಂತಸಂಧಿವಿಗ್ರಹಿಮಂಡಲಿಕಮನ್ನೆಯರಾಜಪುತ್ರರಾವುತರಂ ತಂತಮ್ಮ ಸ್ಥಾನದೊಳ್ ಕುಳ್ಳಿರವೇೞ್ದುತುಂ ಕಲ್ಪಸುಂದರಿಯುಮಾನುಂ ಸಿಂಹಾಸನಮನಲಂಕರಿಸಿಯಾಂ ಕುಳ್ಳಿರ್ದು ಪ್ರಧಾನರ ಮುಖಮಂ ನೋಡಿ,

ಮುನ್ನೆಡೆಗೊಂಡ ದುರ್ಗುಣಚಯಮಂ ವಿಕಟಾಂಗಮದೆಯ್ದೆ ಪೋಗಿ ಸಂ।
ಪನ್ನವೆ ನಲ್ಕೆ ಸದ್ಗುಣಗಣಂ ಸುಭಗಾಕೃತಿ[ಯೆಂಬಿವೆ]ನ್ನೊಳೀ ॥
ಗನ್ನೆಲಸಿತ್ತಪರ್ಕೆ ಸುಗುಣಂಗಳನಲ್ ನಿಜಕಾರ್ಯಮಂ ಮಗು ।
ೞ್ದನ್ನೆಸಗಲ್ಕೆ ಪೇೞ್ವುದೊಸೆದೆಂದೆನಿದಂ ನಲವಿಂ ಪ್ರಧಾನರೊಳ್ ॥ ೧೨೦

ಅದೆಂತೆನೆ:— ಮುನ್ನಮಾಳೋಚಿಸಿದ ರಹಸ್ಯಕಾರ್ಯಮಂ ನೀಮಿಂತು ಗೆಯ್ವುದೊಂದು

ಮುನ್ನಂ ವಿಚಾರಿಸಿದ ಪೊಸ ।
ರನ್ನಮನತಿಹೀನಮೂಲ್ಯಮಂ ಕಾಣಲ್ಕೀ ॥
ಕಿನ್ನಾವಣಿಕ್ಪ್ರತಿಯು ಚಿ ।
ತ್ತನ್ನೆಲಿವನಿತರ್ಥಮಿತ್ತು ಕೊಳ್ವುದು ಮಣಿಯಂ ॥ ೧೨೧

ಇರ್ಬರ್ ಶೂದ್ರರ್ ಕಾಂಚನ ।
ಗರ್ಬದಿನೊರ್ಬೊರ್ಬರೊಳ್ ವಿವಾದಿಸಿದವರ್ಗಿಂ* ॥
ದಿರ್ಬಾಗಮನೆಸಗಿದರಾ ।
ಕೊರ್ಬರ್ಗಂ ತರ್ಗಿಸುವೆನನರ್ಗಳಂ* ಕರೆಯೆಂದೆಂ ॥ ೧೨೨

ಮುಳಿಸಿಂ ಪೌಂಡ್ರಕದೇಶವ ।
ನೞಿಯಲ್ ಬೇಡಿಂಗ ಬಹಳದುರ್ಭಿಕ್ಷದ ಕೋ ॥
ಟಲೆಯಿಂದಲ್ಲಿಯ ಜನಮಿ ।
ತ್ತಲೆ ಬರ್ಕುಂ ತನಗೆ ತಾನೆ ಸಮ್ಮದದಿನಂ ॥ ೧೨೩

ನೆಲಸಿರ್ಕುಂ ಪಿರಿದು ದುರ್ಯಶಂ ನರಕಮುಮಕ್ಕುಂ ಪೆರ್ಚಿದಾಯುಷ್ಯಮಾ ।
ಯ್ತುಬೞಗುಂ ಬಂಧುಜನಂ ಸಮಸ್ತಪರಿವಾರಂ ಪೇಸುಗುಂ ಮೃತ್ಯುಮೆ ದು ॥
ರ್ಬಲಮಕ್ಕುಂ ಕಿಡಿಯುಯ್ವನಂ ಕೊಲಿಸಲಿನ್ನಂತಾತನಂ ಬಿಟ್ಟು ತ ।
ನ್ನೊಲವಿಂ ರಾಜ್ಯಮನಾಳ್ವುದುಂ ಲೇಸಗಿಮೆಂದಾಂ ಪೇೞ್ದೆನಂದೆಲ್ಲರೊಳ್ ॥

ಎಂದಿವು ಮೊದಲಾದ ಪೂರ್ವರಹಸ್ಯಕಾರ್ಯಮಂ ಪ್ರಕಟಿಸುವುದುಂ, ಸಭಾಸದರೆಲ್ಲರ್ ವಿಸ್ಮಯಸ್ವಾಂತರಾಗಿ

ಭುವನದೊಳೀಕ್ಷಿಸಲ್ಕೆ ಪತಿಭಕ್ತಿಯೊಳಾವಳೊ ಕಲ್ಪಸುಂದರೀ ।
ಯುವತಿಯುಪ್ರೋಲ್ ಮನೋಭವಸಮಾನನಿಜಾಕೃತಿಯಂ ಧರಾಧಿಪಂ ॥
ಗವಜದಿದೊಲ್ದು ಮಾಡಿದಳೆನುತ್ತೆ ಸಭಾಸದರುತ್ತಿಯಿಂ ಮುದೀ ।
ಯುವಿವಿಧಮೂರ್ತಿಯಂ ಪಡೆಪಿನಿಂ ಪರಿಭಾವಿಸಿದರ್ ಧರಾಧಿಪಾ ॥ ೧೨೫

ಅಂತವರೆನ್ನ ಮೂರ್ತಿಯನೆವೆಯಿಕ್ಕದೆ ನೋಡಿ ಸಂತೋಷಂಬಟ್ಟು ರಹಸ್ಯಕಾರ್ಯಮನಾಂ ಪೇೞ್ದಂದದಿನೆಸಗಲನಂತರಂ,

ಅತಿಸನ್ಮತದಿಂ ಮಾ ೨ ।
ಪಿತೃಗಳ ಬಂಧನಮನಾಕ್ಷಣಂ ಕಳೆದು ಸುಖ ॥
ಸ್ಥಿತಿಯುಮಗ*ರ್ಪ್ಪಂತಂಪೃ ।
ಥ್ವಿತಯಂಗಳ್ ಬಗಿದೆಂ ಕರಂ ಮಾನಸದೊಳ್ ॥ ೧೨೬

ಬೞಿಕ್ಕೊಲವಿಂದೆಲ್ಲರಂ ಕಳಿಪಿ ಮಂತಃಪುರಕ್ಕೆ ಬಂದು ಪಿತೃಮಾತೃಗಳಂ ಕರೆಯಿಸಿ,

ನಿಜನಾಮಗೋತ್ರಮಂ ಪೇ ।
ೞ್ದು ಜಲಕ್ಕನೆ ಮಾತೃಪಿತೃಗಳೊಪ್ಪುವ ಪದಮಾ ॥
ರಿಜಯುಗಳಕೆಱಗಿ ನಿಮ್ಮಾ ।
ತ್ಮಜನಾನುಪಹಾರವರ್ಮನೆಂದವ*ರ್ಗಱಿಪಿದೆ*ಂ ॥ ೧೨೭

ಅಂತು ಪೇೞಲೊಡಂ

ತನುಪುಳಕಂಗಳುಣ್ಮೆ ಮನದುತ್ಸವಮುಬ್ಬೆ ನಿರಂತರಂ ತಮಾ ।
ನನವನಲಂಪಿನಿಂದಡರೆ ನೋಡಿ ಬೞಿಕ್ಕಮ*ದೃಪ್ತಿ ಪೂರ್ವಕ ॥
ಲ್ಪನಕೃತ ಪುಣ್ಯವೃಕ್ಷಮೆನಸುಂ ಫಲಮಾಯ್ತು ಮಗೆಂದೆನುತ್ತೆ ಮ ।
ಜ್ಜನಕನುಮಂತೆ ಮಜ್ಜನನಿಯುಂ ಪೊರೆಯೋಱಿದರು ನರಾಧಿಪಾ ॥ ೧೨೮

ಅಂತು ಸಂತೋಷದಾತನನೆಯ್ದಿದರ್ಗೆ ಪುನಃಪುನಃಪ್ರಣತನಾಗಿಯುನಂತರಂ

ಸವಿನಯದೊಳಂದು ಸಾಮ್ರಾ ।
ಜ್ಯವನೆನ್ನಯ ಜನಕನಂಘ್ರಿಗೊಪ್ಪಿಸಿ ತತ್ಪಾ ॥
ದವನೋಲಗಿಸುತ್ತುಂ ನಾಂ ।
ದಿವಸಂಗಳ್ ಕೆಲವುಮಂ ಸುಖಂ ಮಿಗೆ ಕಳೆದೆಂ ॥ ೧೨೯

ಅಂತಿರ್ದನಂತರಂ ದೇವರನಱಸುವ ಬ ಬಂದಿರ್ಪುದುಂ

ಘನಚಂಪಾಪುರವಲ್ಲಭನಂ ಸುಜನಮಿತ್ರಂ ಭಾವಿಸಲ್ ಸಿಂಹವ ।
ರ್ಮನೃಪೇಂದ್ರಂ ಮಿಗೆ ಶತ್ರುಪೀಡೆ ತನಗಾಗಲ್ ನಾಡೆಯುಂ ಮಿತ್ರರಾ ॥
ದ ನರೇಂದ್ರರ್ ಬಲಮಾಗಿ ಬರ್ಪುದೆನುತುಂ ಸಂಪ್ರೀತಿಯಿಂ ಪತ್ರಲೇ ।
ಖನಮಂ ತಾಂ ಕಳಿಪಲ್ ಮನೋಮುದದಿನಾವೆೞ್ತಂದೆವುರ್ವೀಶ್ವರಾ ॥ ೧೩೦

ಪರಹಿತಮನೆಸಗಲೆಂದಾ ।
ದರದಿಂದೆೞ್ತಂದ ಪುಣ್ಯಫಲದಿಂದಾಂ ದೇ ॥
ವರ ಪದಯುಗಮಂ ಕಂಡೆಂ ।
ಪಿರಿದುಂ ಸಂಕಲ್ಪಸಿದ್ಧಿಯಾಯ್ತೆನಗೀಗಳ್ ॥ ೧೩೧

ಎಂದು ಉಪಹಾರವರ್ಮಂ ತಾಂ ಮಾಡಿದ ವೃತ್ತಾಂತಮಂ ಪೇೞ್ದೊಡ ದರ್ಕೆ ರಾಜವಾಹನಂ ಸಂತೋಷಂಬಟ್ಟು

ನೆಗೞ್ದು*ಪಹಾರವರ್ಮನವೊಲಾರ್ಗಮಸಾಧ್ಯಮೆನಿಪ್ಪ ಸಾಹಸಂ ।
ಮಿಗುವ ದುರಂತಕರ್ಮದೊಳಮಂ ಸಲೆ ಮಾಳ್ಪವನಾವನೆಂದು ಬ ॥
ಲ್ಕೆಗೆ ಮಿಗೆ ಮೆಚ್ಚಿ ಮಸ್ತಕಮನೊಯ್ಯನೆ ತೂಗಿ ಮನಃಪ್ರಸಾದದಿಂ ।
ಪೊಗೞ್ದ*ನ ರಾಗಸಾಗರತರಂಗದೊಳಿರ್ದನಭಂಗವಿಕ್ರಮಂ ॥ ೧೩೧

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಉಪಹಾರವರ್ಮಕಥಾವೃತ್ತಾಂತಂ

ದಶಮಾಶ್ವಾಸಂ

—ಪ್ರಮತಿಯ ಕಥೆ—

ಶ್ರೀಮನ್ಮಂಗಲವೈಭವ ।
ಧಾಮಂ ಪ್ರಮತಿಯನಲಂಪಿನಿಂ ಕೇಳ್ದಂ ನೀಂ ॥
ಪ್ರೇಮದೊಳೆಸಗಿತ್ತೀನೆಂ ।
ದಾಮಹಿಮಂ ಕೂರ್ತಭಂಗವಿಟ್ಠಲಭೃತ್ಯಂ ॥ ೧

ಅಂತು ಕೇಳ್ವುದುಂ ಪ್ರಮತಿ ಕೆಯ್ಗಳಂ ಮುಗಿದು,

ನಿಮ್ಮಡಿಯುಂ ವಿಚಾರಿಸಲನೇಕಥರಾತಳಮಂ ತೊಳಲ್ದು ಮ ।
ತ್ತೊಮ್ಮೆಯದೊಂದು ಘೋರತರಕಾನನದೊಳ್ ಬರುತಿರ್ಪ ತಾಣದೊಳ್ ॥
ಕೆಮ್ಮುಗಿಲಾಯ್ತು ಪಶ್ಚಿಮನಭಸ್ಥಳಿ ನೀಡನಿಕಾಯಮತ್ತಲಾ ।
ದಮ್ಮನಮಿತ್ತು ವೇಗ್ದೆಸೆಯೊಳಿಳ್ಳಿರಿದಾಡುವ ಪಕ್ಷಿಸಂಕುಳಂ ॥ ೨

ಅಂತು ಸಂಧ್ಯಾಲಕ್ಷಣಂ ತಲೆದೋಱಲಂಧಕಾರದ ಭೀತಿಯಿಂದಾಂ ತ್ವರಿತಗತಿಯಿಂ ಪೋಗೆ ಮುಂದೆ,

ನಿಮಿದೊರ್ಗ್ಗೆಂಬೆತ್ತು ಬೀೞಲ್ಗರೆದ ಜಡೆಗಳಂ ನೀಳ್ದು ಚೆಲ್ವಾದ ಶಾಖಾ।
ಸಮುದಾಯಂ ಪತ್ತು ತೋಳ್ಗಳ್ ಮಿಸುಗುವ ಕನಿವಣ್ಗೆಂಪು ಭಾಳಾಕ್ಷಿಯಾಗ
ಲ್॥ಕ್ರಮದಿಂದಂ ತಾಂಡವಾಡಂಬರಮನೆಸಗುವೀಶಂಬೊಲೊಪ್ಪಿರ್ದುದಾನಂ।
ದಮುಮಂ ವಿಸ್ತಾರಿಯಭ್ರಂಕಷವಟತರು ಪತ್ರಪ್ರವಾಳಪ್ರಸಿದ್ಧಂ ॥ ೩

ಅಂತಿರ್ದುದೊಂದು ವಟಕುಜಮಂ ಕಂಡೆಯ್ದುವ ಸಮಯದೊಳ್

ಲೋಕಮನೆಲ್ಲಮಂ ಸಲೆ ತೊಳಲ್ದು ಬೞಲ್ದು ವರೂಥಮಂ ಹಯಾ ।
ನೀಕಮನೊಯ್ದು ಪೆಂಪಿನಪರಾದ್ರಿನಿಕುಂಜದೊಳಿಟ್ಟು ವತ್ತೆ ನಿ ॥
ವ್ರ್ಯಾಕುಳದಿಂ ತದದ್ರಿತಟದೊಳ್ ಸುಖನಿದ್ರೆಯೊಳಿರ್ಪನೆಂಬವೋಲ್ ।
ಕೋಕನದಪ್ರಿಯಂ ಪದೆಪಿನಿಂ ಪರಿದೆಯ್ದಿದನಸ್ತಶೈಲಮಂ ॥ ೪

ಅಂತು ಗಭಸ್ತಿಮಾಲಿಯಸ್ತಾಚಲಮನೆಯ್ದುವುದುಂ;

ಅಲ್ಲಿರ್ದ ಪಲ್ವಲೋದಕ ।
ದಲ್ಲಿಯೆ ತತ್ಕಾಲಕರ್ಮಮಂ ತೀರ್ಚಿ ಲಸ ॥

ತ್ಪಲ್ಲವದ ಪಾಸಿಕೆಯನಾಂ ।
ಮೆಲ್ಲಿತ್ತಪ್ಪಂತು ಪಾಸಿದೆಂ ಮರದಡಿಯೊಳ್ ॥ ೫

ಅಂತು ಸಂಧ್ಯಾವಂದನಂಗೆಯ್ದು ಪಲ್ಲವಮಂ ಪಾಸಿರ್ದನಂ

ಧರೆಯೊಳ್ ಸತ್ವರಜೋಗುಣ ।
ಮೆರಡುಂ ಪುಸಿಯಾಗೆ ಘನತಮೋಗುಣಮೆಯ್ದೆ ॥
ವರಿಸಿತ್ತು ವಿರ್ಯಯನೆನಲ ।
ಚ್ಚರಿಯಿಂ ತೀವಿದುರ್ದಂಧಕಾರಂ ಕಾರಂ ॥ ೬

ಅಂತುಬಿರ್ದ ಮಬಿರ್ನೊಳ್

ತರುವಿನ ಸುತ್ತಲ್ ವೆಲಸಿದ ।
ಶರಾರುಕುಲಮೆನಗೆ ಶರಣೆನುತ್ತಾಗಳ್ ನಿ ॥
ಬ್ಬರಮೆನಿಸುವ ಸುಖನಿದ್ರಾ ।
ಪರವಶನಾಗಿರ್ದನಿರ್ದನಂ ತತ್ಕ್ಷಣದೊಳ್ ॥ ೭

ಉಪಮಿಸಲರಿದಂತಿಂತೆಂ ।
ದು ಪೇಟಿಲಳವಲ್ತು ವಚನಿಸಲ್ ವಶಮಲ್ತೆಂ ॥
ಬಪರಿಮಿತಸ್ಪರ್ಶೇಂದ್ರಿಯ ।
ದ ಪರಮಸುಖಮಾಯ್ತು ಮಚ್ಛರೀರಕ್ಕಾಗಳ್ ॥ ೮

ಆಪರಮಸುಖದೊಡನೆ ನಿದ್ರಿದಿಳಿದೆಡವ ಜಸೆಯಂ ನೋಳ್ಪೆನ್ನೆಗಂ

ರಜತಗಿರೀಂದ್ರಮಂ ಕಡೆದು ಕಂಡರಿಸಿಟ್ಟಪ್ರೊಲೊಲ್ದು ಭಾವಿಸಲ್ ।
ತ್ರಿಜಗದೊಳತ್ಯಪೂರ್ವಮೆನಿಸಿರ್ಪ ಮನೋಹರಸೌಧಶಾಲೆಯೊಳ್ ॥
ರಜನಿಕರಪ್ರಭಾಪಟಲದಂತೆ ಸುಷುಪ್ತಿಯೊಳೊಪ್ಪುತಿರ್ಪ ವಾ ।
ರಿಜಮುಖಿಯರ್ ಕೆಲರ್ ನಯನಕೌತುಕಮಂ ಪಡೆದರ್ ನೃಪಾಧಿಪಾ ॥ ೯

ಆತನುಮದದ್ವಿಪಂ ಬಿನದದಿಂ ಜಲಕೇಳಿಯೊಳಟ್ಟಿ ಪದ್ಮಿನೀ ।
ಲತೆಯೊ ನಿರಾಶ್ರಯಂ ಗಗನಮೊಂದಿಳೆಯೊಳ್ ನೆಲಸಿರ್ದ ಚಂದ್ರಿಕಾ ॥
ತತಿಯೊ ಹರಂಗೆ ಬೆರ್ಚಿ ಮದನಂ ಬಿಸುಟೋಡಿದ ಪುಷ್ಪಬಾಣಸಂ ।
ಹತಿಯೊ ಎನಲ್ಕೆ ಕೂರ್ತು ಸುಖನಿದ್ರೆಯೊಳಿರ್ದುದು ಕಾಮಿನೀಜನಂ॥ ೧೦

ಸ್ತನಯುಗಭಾರದಿಂ ಕಚದ ಬಲ್ಪೊಱೆಯಿಂ ಪೃಥುವಾಟಿ ಬಿಣ್ಪಿನಿಂ ।
ವನಿತೆಯರಾವಗಂ ಪದೆಪಿನಿಂ ನಡೆಗೆಟ್ಟೊಗಿರ್ದರೆಂಬಿನಂ ॥

ವನಜನಿಭಾಸ್ಯೆಯರ್ ಕುಟಿಲಕುಂತಳೆಯರ್ ತನುಮಧ್ಯೆಯರ್ ಮನೋ ।
ಜನೊಳದಿರೊಡ್ಡಿ ಕಾದಿ ಪಡಲಿಟ್ಟವೊಲಿರ್ದರನೂನನಿದ್ರೆಯಿಂ ॥ ೧೧

ಇಂದು ಮನೋಜರಾಜನ ಧನುರ್ಲತೆಗುನ್ಮದಭೃಂಗಮಾವಿರ್ದಯುಂ ।
ಸೌಂದರಿಯರ್ ಸಮಂತು ಪಡೆದಪ್ಪೆನಿಪ್ಪವೊಲೊಪ್ಪುತಿರ್ಪವು ॥
ಬಿರ್ಂದೆಳನೀಲ ವರ್ಣದೆವೆಯಿಂ ಸಿತಾಗ್ರಕೆಮುಚ್ಚಿ ನಿದ್ರೆಯೊಳ್ ।
ಸಂದಬಲಾಜನಂ ನೆನೆಸಿದಪ್ಪದನಂಗನ ಶಸ್ತ್ರಶಾಲೆಯುಂ ॥ ೧೨

ಒದೆದೊಡೆ ಕಾತುರ್ ಸೋಂಕಿದೊಡೆ ಮಾಣದುಗುಳ್ದೊಡೆ ತೋಳ ನೀಡಿ
ಯು । ಪ್ಪಿದೊಡೆ ಮರಂ ಕೊನರ್ವುದಮಗೆಟ್ಟು ಮರಂಜೂಲಿದೇಕೆ ಭಾವಿಸ
ಲ್ ॥ ಸುದತಿಯರಿರ್ದರಾನಱಿವೆನಾತರುಸಂತತಿ ಸೋಲ್ತು ತಮ್ಮ ದೇ ॥
ಹವ ಸೊಬಗಂ ತದಂಗನೆಯರ್ಗಿತ್ತುದಿದಲ್ತೆ ಮಹಾತ್ಮರೊಳ್ಗುಣಂ ॥ ೧೩

ಅಂತು ಕುಸುಮಾಸ್ತ್ರಮುಂ ಕೆದಱಿದಂತೆಯುಂ, ಕಮನೀಯಕನಕಪುತ್ರಿಕೆಗಳಂತೆಯುಂ, ಮಾಱದೊಱಗಿದ ಮಱಿವ್ರಲ್ಲಿಗಳಂತೆಯುಂ, ದಳಿತಸ್ಥಳಪದ್ಮದಂತೆಯುಂ, ನವಮಾಣಿಕ್ಯಶಲಾಕೆಯಂತೆಯುಂ, ಸೋಮಕಳಾಸಮೂಹದಂತೆಯುಂ, ಕಣ್ಗೆಯ್ವ ಕೇಕಿಗಳಂತೆಯುಂ, ಮೆಯ್ಮಱೆದ ಮರಾಳಮಂಡಲದಂತೆಯುಂ, ಕುಡಿಯಿಡುವ ಕಲ್ಪಲತೆಗಳಂತೆಯುಂ, ಪುಂಡರೀಕಷಂಡದಂತೆಯುಂ, ಕಾಮರಾಜಕೋಶದಂತೆಯುಂ, ಜಗನ್ಮೋಹನಮಂತ್ರದಂತೆಯುಂ, ಸೌಭಾಗ್ಯಶರಧಿಯಂತೆಯುಂ, ಸುರಕುಜದ ಸುಮನೋಮಂಜರಿಯಂತೆಯುಂ, ಮಱೆದೊಱಗಿ ನಿದ್ರೆಯೊಳಿರ್ಪ ಕೆಲಬರ್ ಸತಿಯರಂ ಕಂಡು ಚೋದ್ಯಂಬಟ್ಟು ಬಂದ ದೆಸೆಯುಂ ನೋಲ್ಪನ್ನೆಗಂ,

ಶ್ರುತಿರಹಿತಂ ದ್ವಿಜಿಹ್ವನಪದಸ್ಥನನಾರತವಕ್ರಗಂ ವಿಷಾ ।
ನ್ವಿತನುರುಛಿದ್ರವಾಸಿ ಕುಟಿಲಂ ಫಣಿವಲ್ಲಭನೆಂದು ತತ್ಫಣಾ ॥
ಸ್ಥಿತಿಯನದಂ ಬಿಸುಟ್ಟು ಮೃದುಶಯ್ಯೆಗೆ ಬಂದಳೊ ಕಾರ್ತು ಭೂಮಿದೇ
ವತೆಯೆನಿಪಂದದಿಂ ಪವಡಿಸಿರ್ದಳಗೊರ್ಬ ಕುಮಾರಿಯುರ್ವಿಪಾ ॥ ೧೪

ತರುಣಿಯತಿಮೃದುಳಚೇನಾಂ ।
ಬರವುಂ ಮುಸುಕಿಟ್ಟು ನಿದ್ರೆಯೊಳ್ ಮೆಱೆದಿರ್ದಳ್ ॥
ತೆರೆಮುಗಿಲ ಮಱೆಯ ಮಿಂಚಿನ ।
ತಿರುಳುಸಿರಂ ಪತೆದು ನೆಲೆಗೆ ಸಿಂದವೊಲಾಗಳ್ ॥ ೧೫

ಸತಿಯು ತಲೆಗಿಂಬಿನೆಡೆಗೆಯ್ ।
ನುತಪೀಠಿಕೆಯಾಗೆ ಪೆಱೆನೊಸಲ್ಮೆಱೆವ ಮೊಗಂ ॥
ಸತ್ರತಂ ಮೌಕ್ತಿಕಲಿಂಗಾ ।
ಕೃತ್ರಿಯಂತೆಸೆದಿರ್ದದಾಃರೋಜೇಕ್ಷಣೆಯಾ ॥ ೧೬

ವನಿತೆಯು। ಬಲಗೆಯ್ ಸೆಳ್ಳುಗು ।
ಗೊರ್ಸೆ*ವೆಳಗಿಂ ಗುರುನಿತಂಬದೊಳ್ ನೀಡಿ ಕರಂ ॥
ನೆನೆಯಿಸಿದತ್ತದ್ರಿಗುಹಾ ।
ನನದಿಂ ಪೊಱಮಡುವ ನಿರ್ಝರಾಂಬುಪ್ಲವಮಂ ॥ ೧೭

ಕೋಕನದ ವದನೆ ಸಲೆ ಸಱು ।
ಸ್ಯೈಕನೆಯೊರ್ವರ್ಗ್ಗುಲಾಗಿರಲ್ ಕುಚಮೆರಡುಂ ॥
ಏಕೀಕೃತವಾಗಲ್ಕವ ।
ಳೀಕಸ್ತನಿಯೆಂಬ ಮಾತ್ಕಯಿಂ ಕಣ್ಗೆಸೆದಳ್ ॥ ೧೮

ಅಂತು ನಿದ್ರೆಯೊಳಿರ್ದಳಂ ಕಂಡು ದೇವಸ್ತ್ರೀಯೆಂದು ನಿಶ್ಚಯಂ ಮಾಡಿ ಮತ್ತಂ

ಪೆಱೆನೊಸಲೊಳ್ ಕಪೋಳತಟದೊಳ್ ನಳಿತೋಳ ಮೊದಲ್ಗಳೊತ್ತಿ
ನೊಳ್ । ಕಿಱುಬೆಮರುಣ್ಮುತಿರ್ದಪುದು ಮೇಲುದಿನಿಕ್ಕಿದ ಚೀನವಸ್ತ್ರ
ದೊ ॥ ಳ್ಸೆಱಗೆನಸುಂ ತೆರಳ್ಚದಪುದಂಗವಣಂ ನಸುಗೆತ್ತಿದಪ್ಪುದೇ ।
ತೆಱದೊಳವಳ್ ಮನುಷ್ಯಸತಿಯೆಂದೊಸೆದೀಕ್ಷಿಸಿದಂ ಕುಮಾರಿಯಂ ॥೧೯

ನವತಾಂಬೂಲರಸಾಧರಂ ಮೃದುಪರಿದ್ರಾರಾಗದೇಹಂ ದುಕೂ ।
ಲವಿಶೇಷಂ ಶ್ರಮತೋಯಬಿಂದುನಿವಹಂ ಸುಯ್ಗಂಪು ನೋಡಲ್ ಮನೋ ॥
ಭವಕೇಳೀನಿಜಲಕ್ಷಣಂ ವಿಮಳನಿದ್ರಾಮುದ್ರಿತಾಕ್ಷಿದ್ವಯಂ ।
ದಿವಿಜಸ್ತ್ರೀಯರೊಳುಂಟೆ ತತ್ಸುಭಗರೂಪಾಯತ್ತಸಲ್ಲಕ್ಷಣಂ ॥ ೨೦

ಪೊರೆದ ದುಕೂಲವೊಂದಿನಿಸು ಮಾಸಿದೆ ಫಾಳದೊಳಿಟ್ಟ ಚಂದನಂ ।
ತೆರಳದೆ ವೇಣಿಯೊಳ್ ತೊಡರ್ದ* ಮಲ್ಲಿಗೆ ಬಾಡಿದೆ ನೋಡೆ ನಿದ್ರೆಯು ॥
ಬ್ಬರದೊಳಮರ್ತ್ಯಕಾಂತೆಯಿವಳಲ್ತು ಮನುಷ್ಯಕುಮಾರಿಯೆಂದು ಬಿ ।
ತ್ತರದಿನೊಱಲ್ದು ಕಣ್ದಣಿಯೆ ನೋಡಿದನಾನವಳಂ ನೃಪಾಲಕಾ ॥ ೨೧

ಅನಿಮಿಷದೃಷ್ಟಿಯಾಗಿಯುಮಮರ್ತ್ಯವಿಳಾಸಿನಿಯಲ್ತು ಸುಪ್ತಿಸಂ ।
ಜನಿತಶರೀರಿಯಾಗಿಯುಮುದಗ್ರತಪಸ್ವಿನಿಯಲ್ತು ಭಾವಿಸಲ್ ॥
ಜನನುತಿ ರಂಜಿಪಬ್ಜಮುಖಿಯಾಗಿಯುಮೀಕೆ ಕಳಂಕೆಯಲ್ತಿನು ।
ತ್ತನವಧಿದೃಷ್ಟಿಯಿಂದವಳನೀಕ್ಷಿಸಿದೆಂ ಮಲಗಿರ್ದ ತಾಣದೊಳ್ ॥ ೨೨

ಆನಿರ್ದ ಭೂಜಮೆತ್ತಣ ।
ದೀನೃಪಮಂದಿರಮಿದೆತ್ತಣಿಂ ಬಂದತ್ತೆಂ ॥
ದಾನೊಂದರೆನಿಮಿಷಂ ತ ।
ದ್ಧ್ಯಾನದೊಳಿರ್ದೆಂ ನೃಪಾಲಕುಲಮಣಿದೀಪಾ ॥ ೨೩

ಅಂತು ವಿಸ್ಮಯಂಬಟ್ಟನಂತರಂ,

ಏನಾದೊಡಕ್ಕೆನುತ್ತೊ ।
ಲ್ದಾನೊಯ್ಯನೆ ಪೋಗಿ ತದ್ವಧೂಟಿಯ ಶಯನ ॥
ಸ್ಥಾನದೊಳಾಕೆಯ ತೋಳ್ಗನಿ ।
ಸಾನುಂ ಸೋಂಕುವವೊಲೞ್ತಿಯಿಂದಂ ಸಾರ್ದೆಂ ॥ ೨೪

ಅಂತು ಸಾರ್ದಿರ್ಪನ್ನೆಗಂ,

ತೀಡುವ ಗಾಳಿಯಿಂ ಕುಸುಮಶಯ್ಯೆಗೆ ಮೆಲ್ಲಉಸುಯ್ಗೆ ಮೇಲೆ ಬಂ ।
ದಾಡುವ ತುಂಬಿಯಿಂಚರದಿನೆನ್ನಯ ಮುಯ್ವಿನ ಸೋಂಕಿನಿಂ ಬೆಮ ॥
ಮೂಡುವ ತಣ್ಪಿನಿಂ ಪುದಿದ ನಿದ್ರೆ ಕರಂ ತಿಳಿದಾಗಳೊಲ್ದವಳ್ ।
ನೋಡಿದಳೆನ್ನ ಸುಂದರತೆಯಂ ಬೆಱಗಾಗಿ ಧರಾಧಿನಾಯಕಾ ॥ ೨೫

ನೆಲವಿಂ ಮೆಯ್ಮಱಿದೆೞ್ದು ಕೆಯ್ಯ ಚಿಟ್ಟುಕಂ ಮೊಲ್ಪಿಂ ಕಳೆಲ್ದೊಯ್ಯ
ನಾ । ಗುಱಿ ತೋಱಲ್ ಚಿಟುಕಿಕ್ಕಿ ಕಣ್ಗಡರ್ದ* ನೀರಂ ಚಿಮ್ಮಿ ಜೋಲ್ದಿ
ರ್ದ ಕುಂ ॥ ತಳಮುಂ ತಿರ್ದಿ ಮುಗುೞ್ದು ಮತ್ತನುವನೊಲ್ದಾಪಾದಮೂ
ರ್ಧಾಂತಮಾ । ಗಲಲಂಪಿಂ ಸತಿ ನೋಡಿ ಮತ್ತೆ ಸುಖದಿಂ ಕಣ್ಮುಚ್ಚಿದಳ್
ಶಯ್ಯೆಯೊಳ್ ॥ ೨೬

ಅಂತವಳ್ ಮುಗುೞ್ದ ಕಣ್ಗೆಯ್ದುದನಾಂ ಪುಸಿನಿದ್ರೆಯೊಳಿರ್ದಿದೇನೆಂದಾ
ಶ್ಚರ್ಯಂಬಡುವನ್ನೆಗಂ,

ತರುಣಿಯ ಮೆಯ್ಸೋಂಕಿಂ ಬಂ ।
ಧುರಶಯ್ಯಾಸೌಖ್ಯದಿಂ ಪಥಶ್ರಮದಿಂದಂ ॥

ಪರಿಣಾಮನಿದ್ರೆ ಬಂದಾ ।
ಮರಿಸಿತ್ತೆನಗೇನನೆಂಬೆನತಿಕೌತುಕಮಂ ॥ ೨೭

ಆಂ ನಿದ್ರೆಯೊಳ್ ಕಿಱಿದು ಬೇಗಮಿರ್ಪುದುಂ,
ಮೊಳಗಲ್ಗಳೌಂಕೆ ಜಂಝಾ ।
ನಿಳನಾರ್ಪಿಂ ಬೀಸೆ ಶೀತಮಾವರಿಸಿ ಪಸು ॥
ರ್ದಳಿರೊಟ್ಟಿಲೊತ್ತೆ ಬೇಗಂ ।
ತಿಳಿಯಿತ್ತೆಂದೆನಗೆ ನಿದ್ರೆ ದುಃಖಂದೋಱಲ್ ॥ ೨೮

ಅಂತೆನಗೆ ನಿದ್ರೆ ತಿಳಿಯಲೊಡಂ,
ಆನೃಪಮಂದಿರಮಾಚಂ ।
ದ್ರಾನನೆಯಿರ್ಪಾಸುಮಂಚಮಿಲ್ಲದೆ ಮುನ್ನೊ ॥
ಲ್ದಾನಿರ್ದ ಮರದ ಕಠಿನ ।
ಸ್ಥಾನಂ ಮಗುೞ್ದೆ*ನಗೆ ಕಾಣಲಾಯ್ತಾಕ್ಷಣದೊಳ್ ॥ ೨೯

ಅಂತು ಮುನ್ನಿರ್ದ ಮರನಂ ಕಂಡು ರಾಜಭವನಮಂ ತತ್ಕುಮಾರಿಯುಮಂ ಕಾಣದೆ

ಇದು ಕನಸೆಂಬೊಡಂ ಕನಸಿದಲ್ತು ದಿಟಂ ದಿಟಮೆಂಬೊಡಂ ಮಗು ।
ೞ್ದಿದು ದೊರೆಕೊಳ್ಳದಿರ್ಪ ದೆಸೆಯಿಂ ದಿಟಮಲ್ತು ಮದೀಯಚಿತ್ತಮಾ ॥
ಸುದತಿಗೆ ಮಾಱುವೋಯ್ತುದಱ ಕಾರಣಮಂ ತಿಳಿವನ್ನೆಗಂ ಮನಾಂ ।
ತದೊಳೊಱಗಿರ್ಪೆನೆಂದು ಮುಸುಕಂ ಪದೆದೆನ್ನ ಮುಖಕ್ಕೆ ಸಾರ್ಚಿದೆಂ ॥

ದೊರೆವೆತ್ತ ಪೂರ್ವದಿಗ್ವ್ಯಾ ।
ಧರಗುಹೆಯುಂ ಕಿರಣನಖರಮಂ ಮಸೆದಿನಕೇ ॥
ಸರಿ ಪೊಱಮಟ್ಟಿಳೆಯ ತಮಃ ।
ಕರಿಯಂ ಘುಟುಕೆಂದು ನುಂಗಿದತ್ತಾಕ್ಷಣದೊಳ್ ॥ ೩೧

ಅಂತು ಸೂರ್ಯೋದಯಮಾಗಲಾಂ ನಿದ್ರೆಯಿಂದೆೞ್ದು ಸಂಧ್ಯಾವಂದನಂಗೆಯ್ದು ತತ್ಕುಜದ ತಣ್ಪಿನೊಳ್ ಕುಳ್ಳಿರ್ದಾರಾತ್ರಿಯ ವೃತ್ತಾಂತಮನೆನ್ನೊಳಾಂ ವಿಚಾರಿಸುತಿರ್ಪನ್ನೆಗೆ

ಬಿಡುಜಡೆ ಕರ್ಣಕುಂಡಲಮುಡಿದ ಘಟಸ್ತನಮಿಟ್ಟ ಭಸ್ಮಮು ।
ಳ್ಳುಡೆಗಳವಟ್ಟ ವಲ್ಕನಸನಂ ಪೊಸಮುತ್ತೆಸೆವಕ್ಷಮಾಲೆಯೊ ॥

ಪೀ೯ಡಿನಡು ತನ್ನೊಳೊಪ್ಪುತಿರಲೊರ್ಬ೯ ತಪಸ್ವಿನಿ ಬಂದು ಕೂರ್ಮೆ೯ ನೂ।
ರ್ಮಡಿಸಿರೆ ಮಾತೃಮೋಹಮೆಸೆಯಲ್ ಪದೆದಪ್ಪಿದಳೆನ್ನನುರ್ವಿಪಾ ॥ ೩೧

ಅಂತೆನ್ನನಾತಪಸ್ವಿನಿಯಪ್ಪಿ,

ಎಲೆ ಮಗನೆ ವನದೊಳೊರ್ಬ೯ನೆ ।
ತೊಳಲುತ್ತಿಪೇ೯ಕೆಯೆಂದೊಡಾಂ ನೀನಾರೆಂ ॥
ದೊಲವಿಂ ಕೇಳಲ್ ತಾರಾ ।
ವಳಯಮೊನೆಂದಾಕೆ ನಗುತೆ ಮತ್ತಿಂತೆಂದಳ್ ॥ ೩೩

ದೊರೆವೆತ್ತೊರ್ವ೯ ತಪೋಧನಂ ವನದೊಳೆನ್ನಂ ಕಂಡೆಲೇ ಶಾಂತೆಯಿ ।
ಪರಿ ವೇಷಂ ನಿನಗಕ್ಕನುತ್ತೆ ಮುಳಿದಾತಂ ಕೇಳದಾತಂ ನಿರಂ ॥
ತರದಿಂ ಶಾಪಮನಿತ್ತನೀಯಲನಿಶಂ ಚಂಚಜ್ಜಟಾವಲ್ಕಲಾಂ ।
ಬರಭಸ್ಮಂ ನೆಲಸಿತ್ತು ಮತ್ತನುವಿನೊಳ್ ಕೇಳ್ ಪೆಂವಿನಿಂ ಪುತ್ರಕಾ ॥ ೩೪

ಅಂತಾತಪೋಧನಂ ನಿಷ್ಕಾರಣಂ ಶಾಪಮನೆನಗೆ ಕುಡಲ್,

ಈಶಾಪಮೋಕ್ಷಕಾರಣ ।
ಮೀಶಾನಪದಾಬ್ಜಸೇವೆಗೆಯ್ದಘಕುಲಮಂ ॥
ನಾಶಮನೆಯ್ದಿಸೆ ಪುಣ್ಯದ ।
ರಾಶಿಗೆ ಶ್ರಾವಸ್ತಿನಗರಿಗಾಂ ಪೋಪಾಗಳ್ ॥ ೩೫

ಇರುಳೊರ್ಬ೯ನೆ ನೀನಾಲದ ।
ಮರದಡಿಯೊಳ್ ನಿದ್ರೆಗೆಯ್ದಿರಲ್ ಕಂಡಾಂ ಮೋ ॥
ಹರಸಂ ಮಿಕ್ಕೆನ್ನಯ ಕರ।
ಸರಸಿಜದೊಳಗಾಂತು ಪೋಗುತಿರ್ಪಾ೯ಪದದೊಳ್ ॥ ೩೬

ಜನವಿಖ್ಯಾತಿಯನಾಂತು ರಂಜಿಸುವಿನಂ ಶ್ರಾವಸ್ತಿಯೊಳ್ ಧರ್ಮ೯ವ ।
ರ್ಧ೯ನರಾಜಾತ್ಮಜೆ ಪೆಂಪಿನುಪ್ಪರಿಗೆಯೊಳ್ ಕಾಂತಾಲಸನ್ಮಧ್ಯದ ॥
ಲ್ಲಿ ನಿತಾಂತಂ ನವಮಾಲಿಕಾಖ್ಯೆ ಮೃದುಶಯ್ಯಾಮಂಚದೊಳ್ ನಿದ್ರೆಗೆ ।
ಯ್ವ ನಿವಾಸಂ ಮೆಱೆದಿರ್ಪ೯ದಂ ಪದೆಪಿನಿಂ ಕಂಡೆಂ ಮನಃಪ್ರೀತಿಯಿಂ ॥ ೩೭

ಅಂತು ಶ್ರಾವಸ್ತಿಯ ಧರ್ಮ೯ವರ್ಧ೯ನನ ಕುವರಿ ನವಮಾಲಿಕೆ ಉಪ್ಪರಿಗೆಯೊಳಿರ್ದುದಂ ಕಂಡು,

ಜರೆಯುದವನಂ ಭವಾನೀ ।
ವರನ ಗಣಸ್ತ್ರೀಯರಿರ್ದ ಠಾವಿಂಗುಯ್ಯಲ್ ॥
ಪಿರಿಯರದೇನೆಂಬರೆನು ।
ತ್ತುರುವುದದಿಂ ನಿನ್ನನಲ್ಲಿ ಮಡಗಿದೆನೊಲವಿಂ ॥ ೩೮

ಅಂತು ನಿನ್ನನಿರಿಸಿಯಾಂ ಶ್ರಾವಸ್ತಿಯ ಪೊಱವೊೞಲ ತ್ರ್ಯಂಬಕನ ದೇವಾಲಯಕ್ಕೆ ಪೋಗಿ,

ಅಂಬಿಕೆಯಾಣ್ಮನಂ ಸುರನರೋರಗಕಿನ್ನರವೃಂದವಂದ್ಯಪಾ ।
ದಾಂಬುಜನಂ ಪುರತ್ರಯಮನೀಕ್ಷಣದಿಂ ತವೆ ಸುಟ್ಟ ವಿಕ್ರಮಾ ॥
ಡಂಬರನಂ ಮನೋಜಮದಕುಂಜರಭಂಜಿತಪಂಚವಕ್ತ್ರನಂ ।
ತ್ರ್ಯಂಬಕನಂ ನಮಸ್ಕರಿಸಿದೆಂ ಮನದುತ್ಸವದಿಂ ಕುಮಾರಕಾ ॥ ೩೯

ಸ್ನಿಗ್ಧಪಿಶಂಗಭಂಗುರಜಟಾಭರಮಂಬರಗಂಗೆ ಭಾವಿಸಲ್ ।
ಮುಗ್ಧಹಿಮಾಂಶುಲೇಖೆ ನಿಟಿಲಾಕ್ಷಿಯುಮಗ್ರಫಣೀಂದ್ರಕಂಕಣಂ ॥
ದಗ್ಧನಿಧಿಪ್ರಕಾಶತನು ರಂಜಿಸುವಂಗೆ ಮುನೀಂದ್ರಶಾಪಮಂ ।
ದಗ್ಧಮನೆಯ್ದಿಸಕ್ಕೆಱಗಿದೆಂ ನಿಜಸಂಸ್ತವದಿಂ ಕುಮಾರಕಾ ॥ ೪೦

ಅಂತು ತ್ರ್ಯಂಬಕದೇವರನುಪಾಸ್ತಿಗೆಯ್ದು ಶಾಪಮೋಕ್ಷಮಂ ಪಡೆದು

ತ್ರ್ಯಂಬಕನಂ ಬೀೞ್ಕೊಂಡ ।
ಲ್ಲಿಂ ಬರ್ಪಾಗಳ್ ಮಗುೞ್ದು ನಿನ್ನಮನಾಂ ಕೊಂ ॥
ಡಿಂಬಿನ ವಟಕುಜದಡಿಯೊಳ್ ।
ಮುಂ ಬನದೊಳಗಿರ್ದ ತೆಱದಿನಿರಿಸಿದೆನಾಗಳ್ ॥ ೪೧

ಎಂದು ಮತ್ತಮಿಂತೆಂದಳ್:—

ವಸುಮತಿ ನಿನ್ನೊಡನೇನುಮ ।
ನುಸಿರ್ದ*ಪಳಿಲ್ಲಕ್ಕುಮೊಯ್ದು ಪುತ್ರನನಾನಿ ॥
ತ್ತೆಸಕದ ಕಾರ್ಯಮನೆಂದೊ ।
ಲ್ದು ಸರೋರುಹವದನೆ ಕೇಳ್ದಳೆನ್ನನಿಳೇಶಾ ॥ ೪೨

ಅಂತು ಕೇಳ್ದನಂತರಮೆನ್ನಂ ತೞಪಿಱಿದು ಪರಸಿ-ಎನಗೆ ಶಾಪಮೋಕ್ಷಮಾದುದು; ಆಂ ನಿನ್ನ ಸ್ನೇಹಪಿತೃವಪ್ಪ ಕಾಮಪಾಲನ ಪಾದಸೇವೆಗೆ ಪೋದಪೆನೆಂದು ತಾರಾವಳಿ ಪೋಗಲೊಡಂ;

ಅವನಿಪ ತಾರಾವಳಿ ಪೇ ।
ೞ್ದ ವಿಶೇಷಂ ಕರ್ಣಕೌತುಕಂಬಡೆದಿರಲಾಂ ॥
ನವಮಾಲಿಕೆಯೆಂಬಳನೊ ।
ಲ್ದು ವಿಚಾರಿಪೆನೆಂದು ಮನದೊಳುದ್ಯೋಗಿಸಿದೆಂ ॥ ೪೩

ದೇವತೆಯೆನ್ನುದ್ಯೋಗ ।
ಕ್ಕಾವಗಮನುಕೂಲಮಕ್ಕೆನುತ್ತುರುಮುದದಿಂ ॥
ಶ್ರಾವಸ್ತಿಯೆಂಬ ಪಟ್ಟಣ ।
ದಾವರ್ತಂಬಿಡಿದು ನಡೆದೆನತ್ಯುತ್ಸವದಿಂ ॥ ೪೪

ಅಂತು ನಡೆಯಲ್ ಮುಂದೆ

ಮಿಸುನಿಯ ಕೋಂಟೆಯ ತೆನೆಗಳ್ ।
ನಸು ಪೊಳೆಯಲ್ಕೆನ್ನ ಕಣ್ಗೆ ದೂರದೊಳಾಂ ಕಂ ॥
ಡೊಸೆದೆಂ ಮನದುತ್ಸವದಿಂ ।
ಪೆಸರಿಂ ಶ್ರಾವಸ್ತಿ ತಾನಿದಪ್ಪುದೆನುತ್ತುಂ ॥ ೪೫

ಅದಂ ಕಂಡು,

ಚರಣಕ್ಕೆ ಗಱಿಗಳಾಗೆದಂ ।
ತಿರೆ ನವಮಾಲಿಕೆಯನೆಯ್ದಿ ನೋೞ್ಪೆನೆನುತ್ತುಂ ॥
ತ್ವರಿತಗತಿಯಿಂದೆ ನಡೆಯಲ್ ।
ಪುರವೊಪ್ಪಿತ್ತೆನ್ನಿದಿರ್ಗದೆಂತೆನೆ ಪೇೞ್ವೆಂ ॥ ೪೬

ಮನೆಮನೆಗಳ್ಗೆ ರಂಜಿಸುವ ಪೊಂಗಳಸಂ ಮಿಗೆ ಕೇರಿಕೇರಿಯೊಳ್ ।
ಜನನುತಶಸ್ತ್ರಶಾಸ್ತ್ರಪರಿಚಿಂತನೆಯುನ್ನತರಾಜವೇಶ್ಮದೊ ॥
ಳ್ಪನ ನವರತ್ನದುಪ್ಪರಿಗೆಗಳ್ ನಿಜಲೀಲೆಯೊಳೊಪ್ಪುತಿರ್ಪ ಪ ।
ದ್ಮಿನಿಯರ ಸಂಕುಳಂ ಮೆಱೆವಿನಂ ಪೆಸರ್ವೆತ್ತುದು ನೋಡೆ ತತ್ಪುರಂ ॥ ೪೭

ಅಂತೆಸೆವ ಪುರದ ಕೇರಿಯೊಳಗೆ ನಾಂ ಬರ್ಪಾಗಳ್

ಪಡುವಣ ಮೂಡಣ ಕೇರಿಗ ।
ಳೊಡೆಯರ್ ಕೆಲರೊಡ ಮಿಕ್ಕ ಕೋೞುಗಳಿರಡಂ ॥
ಸಡಗರದಿಂ ಕಾದಿಸುತ್ತಿ ।
ಪೆರ್ಡೆಯುಂ ಕಂಡಲ್ಲಿ ನಿಂದು ನೋಡುತ್ತಿರ್ದೆಂ ॥ ೪೮

ತಲೆಯೊಳ್ ವಿದ್ರುಮಮಂ ನಿಜಾಕ್ಷಿಯುಗದೊಳ್ ಮಾಣಿಕ್ಯಮಂ ಪಕ್ಷಸಂ ।
ಕುಳದೊಳ್ ಪಚ್ಚೆಯನಿಂದ್ರನೀಲಮನಲಂಪಿಂ ಗರ್ಭದೊಳ್ ಮೌಕ್ತಿಕಾ ॥
ವಳಿಯುಂ ವಜ್ರಮನುಗ್ರಚಂಚುಪುಟದೊಳ್ ಪಾದಂಗಳೊಳ್ ಮಿಕ್ಕ ನಿ ।
ರ್ಮಳರತ್ನಂಗಳನಾವಗಂ ನೆನೆಯಿಸಲ್ಪಾರ್ದಿರ್ದುವಾ ಕೋೞಿಗಳ್ ॥ ೪೯

ಚಲಿಸದ ದೃಷ್ಟಿ ಸುಬ್ಬಡರ್ದು* ನೀಡಿದ ಗೋಣ್ ಶಿಖಿಯುಂ ತುಡುಂಕಲ ।
ವ್ವಳಿಸುವ ಚಂಚುಘಾತಿಯಿಱಿದಾರ್ದೊಡೆ ಮಾರಿ ಮಿಡುಂಕುತಿರ್ಪ ತೊ ॥
ಟ್ಟಿಳಿಕೆ ಚಲಂ ಕವಲ್ತು ಪೆಱಮೆಟ್ಟಗ ಬಲ್ಪು ವಿರಾಜಿಸಲ್ಕೆ ಮೆ ।
ಯ್ಗಲಿತನದಿಂ ತೊಡರ್ಚಿದುವು ಕಾಳಗಮಂ ಕಡುಕೆಯ್ದು ಕೋೞಿಗಳ್ ॥ ೫೦

ಅಂತು ಕಾದಾಡುತಿರ್ಪ ಕೋೞಿಗಳಂ ಕಂಡಾಪಡುವಣ ಕೋೞಿಯೊಡೆಯನಪ್ಪ ಮಿತ್ರವರನೆಂಬ ವೃದ್ಧವಿಟನೊಳಿಂತೆಂದೆಂ:—

ನೀಡಿದ ಗೋಣ್ ಸಿತಬೇಹಂ ।
ಪೇಡಿಮನಂ ಭಾವಿಸಲ್ ಮೃದುಪ್ರಾಣಂಗಳ್ ॥
ನೋಡೆ ಬಳಾಕಾಜಾತಿಗೆ ।
ಕೂಡಿರ್ಕುಂ ಕುಕ್ಕುಟಾಧಮಂ ತಾನಕ್ಕುಂ ॥ ೫೧

ಕುಸಿದ ಕೊರಲಸಿತದೇಹಂ ।
ಮಸಕಂಗುಂದದ ಮನಂ ಮಹಾಪ್ರಾಣಂ ರಂ ॥
ಜಿಸಿವುದದು ನಾರಿಕೇಳಜ ।
ನಸಮಾನಬಲಾಢ್ಯಕುಕ್ಕುಟಂ ತಾನಕ್ಕುಂ ॥ ೫೨

ಇಂತು ಬಳಾಕಾಜಾತಿ ನಾಳಿಕೇರಜಾತಿಯೆಂದು ಕೋೞಿ ಇರ್ತೆಱಂ. ಅಲ್ಲಿ,

ನಿನ್ನ ಚರಣಾಯುಧಂ ಸ ।
ತ್ತ್ವೋನ್ನತನದು ನಾಳಿಕೇರಜಂ ಪ್ರತಿಯದು ಸಂ ॥
ಭಿನ್ನಬಳಾಕಾಜಾತಿಯ ।
ದಿನ್ನೀಗಳೆ ಸೋಲ್ವುದೀಕ್ಷಿಸೆಲೆ ಮಿತ್ರಾ ॥ ೫೩

ಎಂದು ನೋೞ್ಪಿನ್ನೆಗಂ,

ಚರಣಾಗ್ರದಿಂ ಬಳಾಕಾ ।
ಚರಣಾಯುಧನಂ ಕಡಂಗಿಯೊದೆದುರದಿಂ ಬ ॥

ಳ್ಳರುಳ್ಳುಣ್ಕೆ ಕೆಡಪಿ ಗೆಲ್ದು ।
ತ್ತುರುಸತ್ತ್ವಂಗೆ ನಾಳಿಕೇರಜಂ ತತ್ಕ್ಷಣದೊಳ್ ॥ ೫೪

ಅಧಿಕತರಸತ್ತ್ವದಿಂ ಸಹ ।
ಜದೈರ್ಯದಿಂ ನಾಳಿಕೇರಜಂ ಪ ತ್ರಿಚರಣಾ ॥
ಯುಧನಂ ಗೆಲೆ ಮಿತ್ರವರಂ ।
ನಿಧಿಯುಂ ಪಡೆದಂತೆ ಹರ್ಷದೊಳ್ ನೆಲಸಿರ್ದಂ ॥ ೫೫

ಅಂತು ಮಿತ್ರವರಂ ತನ್ನ ಕೋಟಿ ಗೆಲ್ದುದಂ ಕಂಡೆನ್ನನಾದಿನಂ ಮೊದಲಾತ್ಮಮಿತ್ರನೆಂದು ಬಗೆದು ತನ್ನ ಮನೆಗೊಡಗೊಂಡು ಪೋಗಿ ಎನ್ನಂ ಮನ್ನಿಸಲಲ್ಲಿಯಾದಿನಮುಂ ಕಳೆದು ಮಱುದಿವಸಂ

ಶ್ರಾವಸ್ತಿಯ ಪೊಱಪೊಱಲಧಿ ।
ದೈವತ್ರ್ಯಂಬಕನ ಜಾತ್ರೆಗೆಲ್ಲರ್ ನಿಜಸ ॥
ದ್ಭಾವದೊಳೊಲವಿಂ ಪೋಗೆ ಮ ।
ಹಾವಿಭವದೊಳವರ ಬೆನ್ನೊಳಾನುಂ ಪೋದೆಂ ॥ ೫೬

ಅಂತು ಪೋಗಿ,

ಅರ್ಧಶರೀರಮುಂ ಗಿರಿಜೆಗಿತ್ತನನಾತುರ್ ನಿಜೋತ್ತಮಾಂಗಮುಂ ।
ಸ್ವರ್ಧುನಿಗಿತ್ತನಂ ಸಕಲಮಂಗಳಕಾರಣಮೋಕ್ಷಲಕ್ಷ್ಮಿಯುಂ ॥
ತರ್ಧನನಂ ಶಶಾಂಕಕಳೆಯುಂ ತಳೆದಿರ್ದನಸೂಲ್ದುನ್ಯಾಸಂ ।
ವರ್ಧನನಂ ಕರಂ ಸ್ತುತಿಸಿ ಭಕ್ತಿಯೊಳಾಂ ಪ್ರಣಮಂಟ್ಟೆನುಮಿರ್ಪಾ ॥ ೫೭

ಅಂತಾಂ ಸ್ತ್ರೀಕಾಮನಾಮುದಕಂ ಸ್ತ್ರೀಮಯನಾಗಿರ್ದ ತ್ರ್ಯಂಬಕನ ಪಾದಕ್ಕೆ ನಮಸ್ಕಾರಂಗೆಯ್ದೊಂದು ಬಿಲ್ವಕುಜದ ತಣ್ಣೆಳಲೊಳ್ ಕುಳ್ಳಿರ್ದುದುಮಲ್ಲಿಗೆ

ರಣಿತಂ ನೂಪುರದಿಂಚರಂ ಸ್ಮರಧನುಜ್ಯಾರಾವಮುಂ ಗೆಲ್ವಿನಂ ।
ಮಣಿಹಾರಂ ವಿಟನೇತ್ರವಾಗುರಮೆನಲ್ ಸಾದಿರ್ಪಿನಂ ಚೆಲ್ಲಗಣ್ ॥
ಗಣಿಕಾವಲ್ಲಭಸಂಕುಲಕ್ಕೆ ಮಥಿಸಲ್ ಸಾಕೆಂಬಿನಂ ನೀರಜೇ ।
ಕ್ಷಣೆಯೊರ್ವಳ್ ಸಲೆ ಬಂದಳಾರತಿಪ್ರಿಯಂದಾಕಾರಮುಂ ತಾಳ್ದುವೋಲ್ ॥ ೫೮

ಆರಮಣಿ ಸಕಳಮಂಗಳ ।
ಕಾರಣಮುಂ ಪರಮಪುರುಷಲಕ್ಷಣಶಂದಾಢ ॥

ಕಾರಮನದೊಂದು ಚಿತ್ರಮ |
ನಾರಾಧಿಪ ದೈವದಂದದಿಂ ತಳೆದಿರ್ದಳ್ || ೫೯

ಅಂತೊಂದು ಚಿತ್ರಪಟಮಂ ತಳೆದು
ಅವಳೆನ್ನ ಮೊಗಮನಾಚಿ |
ತ್ರವನೊಲವಿಂ ಮಗುಳ್ದು* ಮಗುಳ್ದು* ನೋಡುತ್ತಿರಲಾಂ ||
ಯುವತೀಭಾವಮನರಿದೇ |
ಕೆ ವಿಳಾಸಿನಿ ನಿಲ್ವೆ ಕುಳ್ಳಿರೆಂದೆನಿಳೇಶಾ || ೬೦

ಅಂತು ಕುಳ್ಳಿರಲ್ವೇಳ್ದು ಅವಳ ಕೆಯ್ಯ ಚಿತ್ರಪಟಮಂ ನೋಳ್ಪನಮಲ್ಲಿ
ಉನ್ನತವಕ್ಷಮಂ ಘನಭುಜದ್ವಯಮುಂ ವಿಳಸಲ್ಲಲಾಟಸಂ |
ಪನ್ನಮನೀಷದುನ್ಮಿಷಿತಕಲಾಧರಸನ್ನಿಭಮಂ ಮುಖಾಬ್ಜಮಂ ||
ತನ್ನೊಡನಚ್ಚುಱಿಂದೊಱಗಿಪಂಪಮನೊಪ್ಪಿರೆ ಚಿತ್ರರೂಪದಿಂ |
ದೆನ್ನಯ ರೂಪನೊಲ್ದು ನಸಮಾಲಿಕೆ ಚಿತ್ರಿಸಲಿರ್ದುದಿರ್ಪಶಾ || ೬೧

ಅಂತೆನ್ನ ಚಿತ್ರಮಂ ಕಂಡವಱ ಕೆಲದೊಳ್
ಪದಕಮಲಂಗಳಂ ಗುರುನಿತಂಬಮನಲ್ಪಸುಮಧ್ಯಮಂ ಕದ |
ಕ್ಕದಿಪ ಕುಚಂಗಳಂ ಮಿಸುಪ ಪಣ್ಬುಟಿಯಂ ವಿಳಸತ್ಕಪೋಳಮಂ ||
ಸದಮಳನೇತ್ರಮಂ ಪದೆಪಿನಿಂ ಸುಖನಿದ್ರೆಯೊಳಿರ್ದ ಭಾವಮಂ |
ಸುದತಿಯ ರೂಪನಾಂ ಮಗುಳ್ದು* ಚಿತ್ರಿಸಿದೆಂ ಕೆಲದೊಳ್ ವಿಲಾಸದಿಂ || ೬೨

ಅಂತಾಂ ಬರೆದ ಚಿತ್ರಪಟಮನವಳ ಕೆಯ್ಯೊಳ್ ಕುಡಲವಳತ್ತಲ್ ಪೋದಳ್. ಇತ್ತಲಾಂ ಕಾರ್ಯಸಿದ್ಧಿಯಾಯ್ತೆಂದು ಮಿತ್ರವರನೆಡೆಗೆ ಬಂದಿಂತೆಂದೆಂ:—

ಎಡರಡಸಿರ್ದೊಡಂ ಪಗೆಗಳೊತ್ತರಿಸಿರ್ದೊಡಮೊಯ್ದು ಮುಂಮುಗೆ |
ಟ್ಟೊಡಮುಳಿಪಿಂ ಮಹಾವ್ಯಸನದೊಳ್ ತೊಡರ್ದಿರ್ದೊಡಮನ್ಯದೇಶಮಾ||
ದೊಡಮಿಱಿಕೆಯ್ಯದೊಂದೆ ತನುವೆಂಬವೊಲಾಪ್ತಸಹಾಯನಂ ಕರಂ |
ಬಿಡದೊಡನಿರ್ಪವಂ ಸುಜನಮಿತ್ರನಸಂ ಕೃತಕೃತ್ಯನುರ್ವಿಯೊಳ್ || ೬೩

ಎಂಬುದುಮಾಮಿತ್ರವರಂ ತುಷ್ಟನಾಗಿ ನಿನಗಾಂ ಮಾಡಲ್ವೇಳ್ಪ ಕಾರ್ಯಮಂ ಪೇಳೆಂಬುದುಂ;

ಆಂ ಪೇಳ್ದ ಕಾರ್ಯಮಂ ನೀಂ |
ಭೂಪಾಲಕನೆಡೆಗೆ ಪೋಗಿ ಭೂಸುರರೂಪಿಂ ||

ದಂ ಪೇೞ್ವುದೆಂದೊಡಾತನ ।
ದೇಂ ಪೇೞೆನಲಾಂ ಬೞಿಕ್ಕಮಿಂತೆಂದುಸಿರ್ದಂ* ॥ ೬೪

ಎನ್ನ ತನೂಜೆಯಂ ಸಕಲಶಾಸ್ತ್ರವಿಚಕ್ಷಣನಪ್ಪನೊರ್ಬನೊಳ್ ।
ಮುನ್ನವೆ ವಾಕ್ಪ್ರದಾನಮನೆಲೇ ನಿನಗಿತ್ತಪೆನೆಂದು ಮಾಡಲಾ ॥
ತನ್ನಿಜದೇಶದಿಂದಮಿನಿತುಂ ದಿನಮಾದುದು ಬಾರನೀಗಳಾ ।
ಕನ್ನೆ ಕರಂ ಪ್ರಬುದ್ಧೆಯೆನಿಸಿರ್ದಪಳೇವೆನಿಳಾಧಿನಾಯಕಾ ॥ ೬೫

ಆಂ ಬಡವನೆನ್ನ ಮನೆಯೊಳ್ ।
ತುಂಬಿದ ಜವ್ವನೆಯನಿರಿಸಲಣ್ಮೆಂ ಜಾಮಾ ॥
ತಂ ಬರ್ಪನ್ನೆಗಮಾಕೆಯ ।
ನಿಂಬಿನೊಳಿಟ್ಟೆನ್ನ ವಂಶಮಂ ಪೊರೆಯರಸಾ ॥ ೬೬

ಎಂದು ಧರ್ಮವರ್ಧನಂಗೆ ಪೋಗಿ ಪೇೞೆಂಬುದುಮಾತನಂತೆಗೆಯ್ವೆನೆಂದು ಧರ್ಮವರ್ಧನನೆಡೆಗೆ ಪೋಗಿ ಸಮಯಂಬಡೆದು,

ಎನ್ನ ತನೂಜೆಯನೊಪ್ಪುವ ।
ಕನ್ನೆಯನೊರ್ಬುತ್ತಮದ್ವಿಜಂಗಿತ್ತಪೆನೆಂ ॥
ದೆನ್ನಲೊಡಮಾತನೂರಿಂ ।
ದಿನ್ನುಂ ಬಾರಂ ಮಗಳ್ಗೆ ನೆಱೆದುದು ಹರೆಯಂ ॥ ೬೭

ಏತೆಱದೊಳವಳನೆನ್ನ ನಿ ।
ಕೇತನದೊಳ್ ನಿಱಿಸಲಱಿದು ಯೌವನೆಯಂ ಜಾ ॥
ಮಾತ್ರ ತಲೆದೋರ್ಪಿನಂ ಮ ।
ಜ್ಞಾತೆಯನರಮನೆಯೊಳಿರಿಸಿ ರಕ್ಷಿಪ್ಪುದರಸಾ ॥ ೬೮

ಪ್ರಜೆಯಭಿಮಾನಮಂ ನಿರುಪಮಾಶ್ರಮಮಂ.........ಲಸ ।
ದ್ದ್ವಿಜಕುಲಮಂ ಸಕರ್ಮಪರರಂ ಬಡಪಟ್ಟರನಾರ್ಪಿನಿಂದೆ ಭೂ ॥
ಭುಜರೊಲವಿಂದೆ ರಕ್ಷಿಪುದು ಧರ್ಮಮುಮಂ ತೊಱೆದಿರ್ದೊಡನ್ನೆಗಂ ।
ಕುಜಮಱೆಯೊಳ್ಪುದಿದ್ದು ಜನಿಸಿರ್ಪವೊಲಿರ್ದಪರಲ್ತೆ ಧಾತ್ರಿಯೊಳ್ ॥ ೬೯

ಎಂದು ಮಿತ್ರವರಂ ಧರ್ಮವರ್ಧನಂಗೆ ಬಿನ್ನಪಂಗೆಯ್ಯಲಾತಂ ನಿನ್ನ ಮಗಳನೊಡಗೊಂಡುಬಾಯೆಂದು ಕಳಿಪಲ್ ಬೞಿಯಂ

ಪೆಣ್ಣುಡೆಯುಟ್ಟು ಬೈತಲೆಯನೊಳ್ಪನಲೊತ್ತಿ ಶಿರೋಜಬಂಧಮಂ ।
ನುಣ್ಣಿಸಿ ಮೆಯ್ಯೊಳೊಪ್ಪುವ ಹರಿದ್ರವನಪ್ಪಿ ನಿಮಿರ್ದ ಕಣ್ಗಳೊಳ್ ।
ಸಣ್ಣವೆ ನಲ್ಕೆ ಕಾಡಿಗೆಯ ರೇಖೆಯನಾಂತು ಬರಲ್ಕೆ ಕಂಡವರ್ ।
ಕಣ್ಣೆರಡೆಯ್ದೆವೀಕ್ಷಿಸಲೆನಲ್ ತಳೆದಂ ಸತಿರೂಪನುರ್ವಿಪಾ ॥ ೨೦

ಅಂತಾಂ ಸ್ತ್ರೀರೂಪಮಂ ತಳೆದು ಮಿತ್ರವರನಪ್ಪವನ ಪಿಂದನೆ ಧರ್ಮವರ್ಧನನಿರ್ದೆಡೆಗೆ ಪೋಗಿ ನಿಲಲರಸನೊಳ್ ಮಿತ್ರವರನಿಂತೆಂದಂ:—

ಎನ್ನಳಿಯಂ ಬರಲೊಡಮೀ ।
ಕನ್ನಿಕೆಯಂ ಧರ್ಮವರ್ಧನಕ್ಷಿತಿಪತಿ ನೀಂ ॥
ಮನ್ನಿಸಿ ವಿವಾಹಮಂ ಧ ।
ರ್ಮನ್ನಿನಗಪ್ಪಂತು ಮಾಳ್ಪುದಿದನರ್ಥಿಸುವೆಂ ॥ ೨೧

ಎಂದೊಡೆ ಧರ್ಮವರ್ಧನನಂತೆಗೆಯ್ವೆನೆಂದು

ನವಮಾಲಿಕೆ ಮೆಚ್ಚುವವೋ ।
ಲಿವಳೊರ್ವಳ್ ಕೆಳದಿಯಾದಳೆಂದೆನ್ನಂ ಭೂ ॥
ಭುವನಪತಿ ನಚ್ಚಿಯಿಂ ಕ ।
ನ್ನೆವಾಡಕಾಕ್ಷಣದೊಳಟ್ಟಿದಂ ನೃಪತಿಲಕಾ ॥ ೨೨

ಅಂತೆನ್ನನರಸಂ ಕನ್ಯಾಂತಃಪುರಕ್ಕೆ ಕಳಿಪಲಾಂ ಮಿತ್ರವರನ ಕಾಲ್ಗೆಱಗಿ ಏಕಾಂತದೊಳಿಂತೆಂದೆಂ:—

ತ್ರ್ಯಂಬಕನಿದಿರೊಳ್ ಪರಿತ ।
ಪಿರ್ಂಬಿನ ಕೊಳೆದೊಳಗೆ ತಿಂಗಳಂ ಮೇಲೆ ಮಗು ॥
ಳ್ದಂಬರವೆರಡಂ ಕೊಂಡೊಲ ।
ವಿಂ ಬಂದಿರ್ಪುದು ರಹಸ್ಯಮಿದು ಮಿತ್ರವರಾ ॥ ೨೩

ಎಂದು ಪೇಟ್ದಾತನನತ್ತಲ್ ಕಳಿಪಿಯಾಂ ನವಮಾಲಿಕೆಯಿರ್ದೆಡೆಗೆ ಪೋಗಲವಳೆನ್ನಂ ಕಂಡು

ಭಾವಕಿಯೆನ್ನನೆಱವೊರ್ದಲೆ ಕಾಣಲೊಡಂ ಬೆಮರುಣ್ಮೆ ವಿಸ್ಮಯಂ ।
ತೀವಿ ಮುಖಂ ವಿಳಾಸರಸಮಂ ತಳೆದಂಗರುಹಂ ಕೊನರ್ತುದೇ ॥
ಹಾವಯುವಂ ಕರಂ ಸ್ಫುರಿಸಿ ನಾಣ್ ತಲೆದೋಱೆ ಕಳಾಪಬಂಧಶೋ ।
ಭಾವಳಯಂ ಸಡಿಲ್ದು ಮುರವಟ್ಟುವೊಲಿರ್ದಳಿಳಾಧಿನಾಯಕಾ ॥ ೨೪

ಅಂತಿರ್ದಳಂ ಕಂಡನಂತರಂ

ಅಲಸದ ನೋಟದಿಂ ಸಡಿಲದಪ್ಪುಗೆಯಿಂ ಗಱಿಗಟ್ಟಿದೊಲ್ಮೆಯಿಂ ।
ಚಲಿಸದ ಚಿತ್ತದಿಂದೆ ತಣಿವಿಲ್ಲದ ಚುಂಬನದಿಂ ನಿರಂತರಂ ॥
ತೊಲಗದ ಕೂಟದಿಂ ಪದೆಪಿನಿಂ ಪೊಸತಾಗೆ ಮನೋನುರಾಗದಿಂ ।
ಕೆಲವುದಿನಂಗಳಂ ಕಳೆದನಾನವಳೊಳ್ ನೃಪರೂಪಮನ್ಮಥಾ ॥ ೭೫

ಅಂತಾನವಮಾಲಿಕೆಯೊಳಷ್ಟಸುಖಕಾಮಭೋಗಂಗಳನನುಭವಿಸುತ್ತಿರಲೊಂದು ದಿನಮಾನವಮಾಲಿಕೆ

ಆನಳಿನಾಸ್ಯೆ ಯೌವನರಸಾಂಬುಧಿರಾಜಮರಾಳಯಾನೆ ಪಾ ।
ಠೀನಸಮಾನನೇತ್ರೆ ವಿಮಳೋತ್ಪಳಕೇಸರವರ್ಣೆ ಸೈಕತ ॥
ಸ್ಥಾನನಿತಂಬೆ ಕೋಕಕುಚಮಂಡಲೆಯಾಂ ಸಹಿತಂ ವಯಸ್ಯಸಂ ।
ತಾನಸಮನ್ವಿತಂ ಸಲಿಲಕೇಳಿಗೆ ಬಂದಳದೊರ್ಮೆ ಲೀಲೆಯಿಂ ॥ ೭೬

ಅವಳೊಡನೆ

ಜಲರುಹವಕ್ತ್ರೆಯರ್ ಶಫರಲೋಚನೆಯರ್ ನವಕೂರ್ಮಪಾದೆಯರ್ ।
ಪುಳಿನನಿತಂಬೆಯರ್ ಮಿಸುಪ ಶೈವಳಬಾಹುಳತಾವಿಳಾಸೆಯರ್ ॥
ಸುಲಲಿತಕಂಬುಕಂಧರೆಯರೊಪ್ಪುವವಿದ್ರುಮಸನ್ನಿಭೋಷ್ಠೆಯರ್ ।
ಲಲನೆಯರೊಪ್ಪಿದರ್ ನಲಿದು ಜಂಗಮಜಾಹ್ನವಿಯರ್ ನಿರಂತರಂ ॥ ೭೭

ಸುತ್ತಿದ ವೇಣಿಯೊತ್ತಿದ ಕುರುಳ್ ನವಕಂಚುಕಮುಟ್ಟ ಚಲ್ಲಣಂ ।
ಕತ್ತರಿಬೊಟ್ಟು ಪಚ್ಚದೊಳೊಡಂಬಡೆ ರೌಪ್ಯಸುವರ್ಣಶೃಂಗಮುಂ ॥
ಜೊತ್ತಿನೊಳೊತ್ತಿ ಜೀಕೊಳವೆಯುಂ ಪಿಡಿದೆಯ್ದಿದರಂಬುಕೇಳಿಗಂ ।
ದುತ್ತಮಕಾಂತೆಯರ್ ವಿನಯವಂತೆಯರಂಗಜತಾಪಶಾಂತೆಯರ್ ॥ ೭೮

ಸೊಕ್ಕಿದ ಹಂಸೆಗಳ್ ನಡೆಗೆ ಕೋಕಯುಗಂ ಕುಚಕಾತುಕಕ್ಕೆ ನೀ ।
ರ್ವಕ್ಕಿಗಳಂಚರಕ್ಕೆ ಶಫರಪ್ರಕರಂ ನಯನಕ್ಕೆ ಭಕ್ತಿಯಿಂ ॥
ಮಿಕ್ಕಿದಿರ್ವ*ಟ್ಟಿನಂ ಲಲಿತಯಾನೆಯರುಚ್ಚಕುಚಪ್ರಸಿದ್ಧೆಯರ್ ।
ತಕ್ಕಳಿನಾದೆಯರ್ ವಿಮಳಲೋಚನೆಯರ್ ಜಲಕೇಳಿಗೆಯ್ದಿದರ್ ॥ ೭೯

ಅಂತು ತ್ರ್ಯಂಬಕದೇವರ ಮುಂದಣ ಸರೋವರಕ್ಕೆ ಬಂದು,

ಸುೞಿ ಸುೞಿನಾಭಿಯಿಂ ವಳಿ ವಳಿತ್ರಯದಿಂ ಕಮಳಂ ಮುಖಾಬ್ಜದಿಂ ।
ಪೊಳೆವೆಳಮೀಂಗಳಕ್ಷಿಗಳಂ......ದ್ವಯದಿಂ ಬೆ ಶೈವಳಂ ।
ಲಲಿತಭುಜಂಗಳಿಂದೊಗೆದರೋಮಬಿಸವಂಬುವಿನೊಳ್ ವಿಳಾಸಿನೀ ।
ಕುಲಮನುರಾಗದಿಂ ಸಲಿಲಕೇಳಿಯನಂದೆಸಗಿತ್ತು ಲೀಲೆಯಿಂ ॥ ೮೦

ಮುಗುಭೃಂಗಕ್ಕೆಣೆಯಪ್ಪ ನುಣ್ಗುರುಳ ಕರ್ಪಿಂ ಚಾರುಚಂಚತ್ಕಟಾ ।
ಕ್ಷದ ಬೆಳ್ಪಿಂ ನವಪಲ್ಲವಾಧರದ ಕೆಂಪಿಂ ನಾರಿಯರ್ ವಾರಿಯೊಳ್ ॥
ಮೃದುಕಸ್ತೂರಿಯನುದ್ಘಚಂದನಮನೊಳ್ಪಿಂ ಕುಂಕುಮಶ್ರೇಣಿಯಂ ।
ಕದಡಿಟ್ಟಂತಿರೆ ಮಾಡಿಯಾಕೊಳನೊಳೊಲ್ದೋಲಾಡಿದರ್ ಲೀಲೆಯಿಂ ॥ ೮೧

ವಿಕಸದರುಣಾಬ್ಜದೊಳ್ ಚಂ ।
ದ್ರಕಳಾಕೃತಿ ತೋರ್ಪುದಿದು ವಿಚಿತ್ರಮೆನಲ್ ಯಾ ॥
ವಕರಸದಿನೆಸೆವ ಕೆಯ್ಯೊಳ್ ।
ಸುಕರಮೆನಲ್ ಶೃಂಗವಿತತಿಯೇನೊಪ್ಪಿದುದೋ ॥ ೮೨

ಅಂಗಜನೃಪಂಗೆ ಬಾಣನಿ ।
ಷಂಗಮನೊಲ್ದೀವ ರತಿಯವೊಲ್ ಪದೆಪಿಂದು ॥
ತುಂಗಸ್ತನಿಯರ್ ಜಲಯಂ ।
ತ್ರಂಗಳನುರುಕರದೊಳಾಂತು ಕಣ್ಗೆಸೆದಿರ್ದರ್ ॥ ೮೩

ಕಡುಪಿಂ ಬಂದೊರ್ಬಳಾರ್ಪಿಂ ಕುಳಿರ್ವ* ಜಲಮನಾರ್ದಂಡೆಯಿಂ ಪೊಯ್ಯೆ
ಲಿನ್ನಾ । ಮೆಡೆಗೆಂತೊ ಪೋಪೆಯೊಡ್ಡೆನಗೆ ಮುಗುಳ್ದು* ನೀಂ ಬೆನ್ನ
ನೆಂದಾಗಳೆಯ್ತಂ । ದೆಡಗಾಲಂ ನೀಡಿ ಮುಂದಿಟ್ಟಡರ್ದ* ಘಟಕುಚಂ ತೋಳ್ಗ
ಪರ್ಬಲ್ಕೆ ಶೃಂಗಂ । ಬಿಡಮಂಗೈ ಕಣ್ಣೆಗೆಯ್ದಲ್ ನಿಮಿರ್ದ* ಕೆಳದಿಯಂ
ಪೊಯ್ದು ಪಿಂತಾದಳೊರ್ಬಳ್ ॥ ೮೪

ಭವನ ಲಲಾಟಲೋಚನದ ವಹ್ನಿಗೆ ಭಾಜನಮಾದ ಕಾಮುದಾ ।
ಹವನುೞಿ ನಂದಿಸಲ್ ಮುಗುಳ್ದು* ಪುಟ್ಟಿಸಲಾರ್ತಪರಾದೊಡೇಂ ಸದಾ ॥
ಶಿವನ ಪರಾಕ್ರಮಕ್ಕೆ ಪೞಿ ಬಂದಪುದೆಂದುೞಿದಂತರಂಗಸಂ ।
ಭವನವನೆಂದು ನೀರ್ದಳವರೊರ್ಬರದೊರ್ಬರೊಳಾದವಿಗ್ರಹರ್ ॥ ೮೫

ತರುಣಿಯರಂಬುಕೇಳಿಗೆ ಲಸಜ್ಜಳಮಂ ಪುಗುವಾಗಳೊರ್ಬರೊ ।
ರ್ಬರ ನೆಱಲೊಂದನೇಕವಿಧದಿಂ ತೆಱೆಯೊಟ್ಟಿಲೊಳೆಯ್ದೆ ತೋಱಲ ॥

ಚ್ಚರಿಯೆನಲೊಪ್ಪುತಿರ್ದುವಹಿಲೋಕದಿನೇಟ್ಟಿಯ ನಾಗಕನ್ಯಕಾ ।
ಪರಿಕರವೊಳ್ಪನಿಂ ಸಲಿಲಕೇಳಿಗೆ ಭೋರೆನೆ ಬರ್ಪ ವೊಾಟ್ಕೆಯಿಂ ॥ ೮೬

ಕೆಳದಿಯರೊರ್ಬರೊರ್ಬರ ಮುಖಾಂಬುಜದೊಳ್ ಪೊಸ ಪೊನ್ನ ಚೆನ್ನ ಜೇ । ಕೊಳವಿಯನೊತ್ತಲಾಸಲಿಲಧಾರೆಯ ಬೆಂಬಳಿಯೊಳ್ ಸಿತಾಕ್ಷಿ ಕೋ ॥ ಮಳರುಚಿ ನೀಳ್ದರಲ್ಕೆ ಜಲಯಂತ್ರದ ನೀರ್ ತವೆ ತೀದೊಡಂ ದೃಗಂ । ಚಳರುಚಿ ನೀರ್ಗಳೆಂದು ಜಲಯಂತ್ರಮನೊತ್ತಿ ಬಟಿಲ್ವರಾಕೆಯರ್ ॥

ಅಂತು ಜಲದೇವತೆಯರೆ ವಿಳಾಸಿನಿಯರಾದಂತೆಯುಂ, ಎಳವಿಾಂಗಳ್ ಕೆಳದಿಯರಾದಂತೆಯುಂ, ತೆರೆಮುಬುಗಲೆ ತರುಣಿಯರಾವಂತೆಯುಂ, ಮರಾಳ ಮಂಡಳಿಯೆ ಮಾನಿನಿಯರಾದಂತೆಯುಂ, ಜಲರುಹಪಜ್ತಿಯೆ ಲಲನೆಯರಾದಂತೆಯುಂ, ಕುಮುದಕುಲಮೆ ರಮಣಿಯರಾದಂತೆಯುಂ, ಬಿಸಜಲತೆಯೆ ಶಶಿಮುಖಿಯರಾದಂತೆಯುಂ, ಲಾವಣ್ಯರಸಮೆ ಭಾವಕಿಯರಾದಂತೆಯುಂ ಜಲಕೇಳಿಯನೆಸಗುವ ಲಲನೆಯರ ನಡುವೆ

ನೂತನತಾರಕಾತತಿಯುತಂ ಶಶಿಲೇಖೆ ಸುಧಾಬ್ಧಿಯೊಳ್ ಪುನ ।
ರ್ಜಾತವನಾಂತಪೊಲ್ ವಿಶದಮಪ್ಪ ಜಲಪ್ಲವದೊಳ್ ವಿಳಾಸಿನೀ ॥
ವ್ರಾತಯುತಂ ವಿದಗ್ಧೆ ನವಮಾಲಿಕೆ ವಾರಿವಿನೋದದಿಂ ಮನೋ ।
ಜಾತನ ಬೊಂಬೆಯಂತೆಸೆದಳೇಪೊಗಟ್ವೆಂ ಸುಕುಮಾರಲೀಲೆಯಂ ॥ ೮೮

ಅಂತು ನವಮಾಲಿಕೆ ಸಂಭ್ರಮದಿಂ ಜಲಕ್ರೀಡೆಯನಾಡುವ ಸಮಯದೊಳ್

ನಾರೀವೇಷಮನುಜ್ಜಾಂ ।
ನೀರೊಳಗೆ ಮುಳುಂಗಿ ಬೇಗದಿಂ ಪೃಥುಮತ್ಸ್ಯಾ ॥
ಕಾರದಿನುಚ್ಚಳಿಸಿ ಕರಂ ।
ದೂರದೊಳಿರ್ದೆತ್ತಿ ನಂತುಟಂತರ್ಜಲದೊಳ್ ॥ ೮೯

ಮುಂ ನಾಂ ಪೇಟ್ದಂದದಬೊಳೆಂಾಲ ।
ವಿಂ ನದಿಯೊಳದೊಂದು ಕುಟುಮದೆಡೆಯೊಳ್ ಮಿತ್ರವರಂ ॥
ತನ್ನಟ್ಟಿಟಿನಿರ್ದಂ ಬರ ।
ವಂ ನೋಡುತ್ತಿರಡು ಸೀರೆಯಂ ಪಿಡಿದೆನ್ನಾ ॥ ೯೦

ಅಂತಿರ್ದ ಮಿತ್ರವರನಂ ಕಂಡಾತನ ಕೆಯ್ಯೊಳಿರ್ದ ಸೀರೆಯನೀಸಿಕೊಂಡು

ನಿಱುವಿಡಿದು ದುಗುಲಮಂ ಮುಂ ।
ಜೆಱಗೆಸೆವಂತುಟ್ಟು ಮೇಲನುದಕಪ್ಲವದಿಂ ॥
ಪೊಱಮಟ್ಟು ಮಿತ್ರವರನೊಳ್ ।
ಮೊಱೆದಿರ್ಪಂತೊಂದು ಮಾತನಾಸಿಂತೆಂದಂ ॥ ೯೧

ಅದೆಂತೆನೆ—

ಎನ್ನನೊಡಗೊಂಡು ಪೋಗಿ ಮ ।
ಹೋನ್ನತಿಯಿಂ ನೃಪನ ಮುಂದೆ ನಿಂದಿರಿಸಿ ಮಗು ॥
ಳ್ದೆನ್ನಳಿಯನಿಂದು ಬಂದಂ ।
ಕನ್ನಿಕೆಯಂ ಕರೆಸಿ ಕುಡುವುದೆಲೆ ಭೂಪಾಲಾ ॥ ೯೨

ಅಂತೆಂಬುದುಂ ಬೞಿಯಂ,

ಕನ್ನೆಯನಾತಂ ಕಾಣದೆ ।
ಮುನ್ನಮೆ ಪೋಯ್ತೆಂಗುಮೆಂದೊಡೆನ್ನಸುಮಂ ಕೇಳ್ ॥
ನಿನ್ನಲ್ಲಿ ತೊಱೆವೆನೆಂದೊಲ ।
ವಿನ್ನೆಟ್ಟನೆ ವಹ್ನಿಕುಂಡಮಂ ಸವೆ ಬೇಗಂ ॥ ೯೩

ಎಂದು ಪೇೞಲಾತನಂತೆ ಗೆಯ್ವೆನೆಂದೆನ್ನಂ ಧರ್ಮವರ್ಧನನೆಡೆಗೆ ಕೊಂಡು ಪೋಗಿ

ಎನ್ನಳಿಯನಿಂದು ಬಂದಂ ।
ಮುನ್ನಂ ನಿನ್ನೊಡನೆ ಪೇೞ್ದ ತೆಱದಿಂ ವಿದ್ಯಾ ॥
ಸನ್ನುತನಾಚಾರಪರಂ ।
ಮನ್ನಿಸಿ ಕುಡುವೆಡೆಗೆ ತಕ್ಕನೆಂದುಱೆ ಪೇೞ್ದಂ ॥ ೯೪

ಅಂತು ಪೇೞ್ದು ಮತ್ತಂ

ಸಕಳಾಮ್ನಾಯಮನೊಪ್ಪವೆತ್ತುಪನಿಷದ್ವ್ಯಾಖ್ಯಾರ್ಥಮಂ ಕಾವ್ಯನಾ ।
ಟಕಮಂ ಲೌಕಿಕವಿದ್ಯೆಯಂ ಗಣಿತಮಂ ಷಟ್ತರ್ಕಮಂ ಗೀತವಾ ॥
ದ್ಯಕಳಾಕೌಶಲಮಂ ಗೃಹಸ್ಥಿತಿಯನಾಯುರ್ದಾಯಮಂ ಶಿಲ್ಪಕೌ ।
ತುಕಮಂ ಭೂಪತಿ ನೀಂ ಪರೀಕ್ಷಿಸಿವನೊಳ್ ತೋರ್ಪಂ ಮಹಾಚಿತ್ರಮಂ ॥

ವಾರಣಶಿಕ್ಷೆಯುಂ ತುರಗಶಿಕ್ಷೆಯನೊಪ್ಪುವ ಚಾಪವಿದ್ಯೆಯುಂ ।
ಚಾರಣಚೂರಣಾದಿ ತರವಾರಿಯ ವಿದ್ಯೆಯುಮಾಗಮಂಗಳಂ ॥
ಮಾರಮತಂಗಳಂ ಸ್ಮೃತಿಪುರಾಣಕಥಾಕವಿತಾಪ್ರಸಂಗವಿ ।
ಸ್ತಾರಮನೀತನಲ್ಲದಿಳೆಯೊಳ್ ಮಿಗೆ ಬಲ್ಲವರಾರ್ ನೃಪಾಲಕಾ ॥ ೯೬

ಮತ್ತಂ

ಕನಕಪರೀಕ್ಷೆಯುಂ ಸಕಳರತ್ನಪರೀಕ್ಷೆಯನುತ್ತಮಾಂಗನಾ ।
ಜನದ ಪರೀಕ್ಷೆಯುಂ ನವಸುಗಂಧಪರೀಕ್ಷೆಯನುದ್ಘವಸ್ತ್ರಸಂ ॥
ಜನಿತಪರೀಕ್ಷೆಯುಂ ಭರತಶಾಸ್ತ್ರಪರೀಕ್ಷೆಯನೀತನಲ್ಲದಾ ।
ವನುಮಱಿಯಂ ಮದೀಯತನುಜಾತೆಗೆ ತಕ್ಕನಿಳಾಧಿನಾಯಕಾ ॥ ೯೭

ಎಲ್ಲಾ ಭಾಷೆಯನೀತಂ ।
ಬಲ್ಲಂ ದೇಶಾಂತರಂಗಳೊಳ್ ವಿಖ್ಯಾತಂ ॥
ಸಲ್ಲಲಿತವಂಶಜಂ ಭೂ ।
ವಲ್ಲಭ ಕೇಳೆನ್ನ ಕನ್ನೆಗೀತಂ ಕಾಂತಂ ॥ ೯೮

ಎಂದು ಮಿತ್ರವರಂ ಧರ್ಮವರ್ಧನಂಗೆನ್ನಂ ತೋಱಿ ಶೋಭಾವತಿಯುಂ ಕರಸೆಂಬುದುಮಾತನೊರ್ವ ಕಂಚುಕಿಯುಂ ಕನ್ಯಾಂತಃಪುರಕ್ಕೆ ಕಳಿಪಲಾತಂ ಶೋಭಾವತಿಯುಂ ಕಾಣದೆ ಮಗುೞ್ದು ಬಂದು

ಅವಧಾನ ಧರ್ಮವರ್ಧನ ।
ನವಮಾಲಿಕೆ ತನ್ನ ಕೆಳದಿಯುಂ ಕಾಣದೆ ದುಃ ॥
ಖವನೆಡೆಗೊಂಡಿರ್ದಪಳೆಂ ।
ತು ವಿಚಾರಮೆನುತ್ತೆ ಸ್ವಾಮಿದಲ್ಲಂ ಪೇೞ್ದಂ ॥ ೯೯

ಅಂತು ಪೇೞಲೊಡಂ

ಭೂವಳಯಾಧಿಪಂ ಬೆಱಗುವೆತ್ತು ಮುದಂ ಪೆಱಪಿಂಗಿ ಪಂದೆಯುಂ ।
ಪಾವ*ಡರ್ದಂತೆ ತೊಟ್ಟನೆ ಕಟಿಲ್ದಲೆ ಭೂಸುರ ನಿನ್ನ ಕನ್ನೆ ಶೋ ॥
ಭಾವತಿಯೆತ್ತಪೋದಳೆಱಿಯೆಂ ಪರಿಭಾವಿಸಲಿಂತಿದರ್ಕೆ ಪೇ ।
ೞಾವುದು ಬಟ್ಟೆ ಧನುರ್ಮಱಿಯಿತ್ತೆನುತುಬ್ಬೆಗದೊಳ್ ಮುೞುಂಗಿದಂ ॥

ಅಂತು ಚಿಂತಿಸುತಿರ್ದ ಭೂಪನೊಳ್ ಮಿತ್ರವರನಿಂತೆಂದಂ:—

ಎಲೆ ಭೂಪಾಲಕ ನಿನ್ನ ಮಂದಿರದೊಳಾಂ ನಿಕ್ಷೇಪಮಾಗಿಟ್ಟ ಮ ।
ತ್ಕುಲಚೂಡಾಮಣಿಯಪ್ಪ ಮತ್ತನುಜೆಯಂ ನೀನಿಂತು ಪೋಗಾಡಿ ದು ॥
ರ್ಬಲನಪ್ಪೆನ್ನನುಪಾಯದಿಂ ಕಳಿಪಲಾಂ ಪೋದಪ್ಪೆನೇ ನಿನ್ನ ಕಾ ।
ಲ್ಗೊಲವಿಂ ಜೀವಮನೆಯ್ದೆ ನೀಗುವೆನಿದಂ ಕೇಳಂತು ನೀವೆಲ್ಲರುಂ ॥ ೧೦೧

ಎಂದು ಮತ್ತಂ

ಸಕಲೋಪಾಯದಿನಾಕ ।
ನ್ನಿಕೆಯಂ ತಂದಿತ್ತೊಡುೞುವೆನಲ್ಲದೊಡತಿಕಾ ॥
ತುಕವಾಗಿ ಜೀವಮಂ ಬಿ ।
ಟ್ಟು ಕೆಲರ್ ನಿಂದಿಸಲಧರ್ಮಮಂ ನಿನಗೀವೆಂ ॥ ೧೦೨

ಎಂದನಂತರಂ

ರಾಜದ್ವಾರದೊಳಗ್ನಿಕುಂಡಮನಲಂಪಿಂ ಮಾಡಿ ತಂದಿಕ್ಕಿ ನಾ ।
ನಾಜೀರ್ಣದ್ರುಮಶುಷ್ಕಮಂ ಬೞಿಯಿನಲ್ಲಿ ಪ್ರಾಣಮಂ ನೀಗಲೆಂ ॥
ದಾಜಾಣಂ ಶಿಖಿಯಂ ಸಮಂತು ಬಲವಂದಿರ್ಪಾಗಳೆಯ್ದಿರ್ಪಂ ।
ರಾಜೀವಾಕ್ಷಿಯನೆನ್ನ ನಂದನೆಯನಾನೊಲ್ದೀವೆನೆಂದಂ ನೃಪಾ ॥ ೧೦೩

ಎಂದಾಗಳ್

ಚಿತ್ತಜಸನ್ನಿಭಂ ದ್ವಿಜವರಂ ಶ್ರುತಿನೀತಿಕಳಾಪ್ರವೀಣನ ।
ತ್ಯುತ್ತಮನೀವರಂಗೆ ನವಮಾಲಿಕೆಯಂ ಕುಡಲಿಷ್ಟರೆಲ್ಲರುಂ ॥
ಸುತ್ತಣ ರಾಯರುಂ *ಪೊಗೞ್ವರೆಂದೊಲವಿಂ ಧರಣೀಶನೊಲ್ಮೆಯಿಂ ।
ದಿತ್ತನಲಂಪಿನಿಂದೆನಗೆ ತನ್ನ ತನೂಜೆಯನುರ್ವರಾಧಿಪಾ ॥ ೧೦೪

ಭೂಮಿಪ ಧನುರ್ವರ್ಧನನೃಪಾಲಕನೊಪ್ಪಿರೆ ಕಾಮಧೇನುವಂ ।
ಕಾಮಿಸಿದಂತೆ ಬೇೞ್ಪಿನಿತು ಮಂಗಳಸಾಧನದಿಂ ಸಭಾಗ್ರದೊಳ್ ॥
ಪ್ರೇಮದೊಳಾಕ್ಷಣಂ ಕರೆಸಿ ತನ್ನ ತನೂಜೆಯನೆನ್ನೊಳಿತ್ತು ಸು ।
ಕ್ಷೇಮಮನಾಗಿಸೆಂದೊಸೆದು ಸೇಸೆಯನಿಕ್ಕಿದನಾಮುಹೂರ್ತದೊಳ್ ॥ ೧೦೫

ತನಗೆ ಸುತರಿಲ್ಲದುದಱಿಂ ।
ದೆನಗೈಶ್ವರ್ಯಪ್ರಸಿದ್ಧಿಯಂ ಮಾಡಿದನಾ ॥

ಜನಪಂ ಬೞಿಯಿಂದಾಂ ತ ।
ದ್ವನಿತೆಯೊಳೊಡಗೂಡಿ ಸುಖದೊಳಿರ್ಪನ್ನೆವರಂ ॥ ೧೦೬

ಅಂಗಾಧಿರಾಜನೊಲವಿಂ ।
ಸಂಗರಸಾಹಾಯ್ಯಮಾಗಲೆನ್ನಂ ಕರೆಸಲ್ ॥
ಪಿಂಗದೆ ಬಂದು ನಿಜಾಂಘ್ರಿಯು ।
ಗಂಗಳ್ಗೆಱಗಿರ್ಪೆ ಸೈಪು ದೊರೆದತ್ತೀಗಳ್ ॥ ೧೦೭

ಎಂದು ರಾಜವಾಹನಂಗೆ ಪ್ರಮತಿ ತನ್ನ ವೃತ್ತಾಂತಮಂ ಪೇೞೆ,

ಪರರಱಿವಿಲ್ಲದಂತು ತನಗುತ್ಕಟಪಾತಕಮೆಯ್ದದಂತು ಸ ।
ರ್ವರ ಬಗೆಗೊಪ್ಪುವಂತು ಪುರುಷಾರ್ಥಫಲಂ ತನಗೆಯ್ದುವಂತು ದು ॥
ಸ್ತರತರಕಾರ್ಯಮಂ ಪ್ರಮತಿಯುಂತಿರೆ ಮಾಳ್ಪವನಾವನೆಂದು ಬಂ ।
ಧುರವಚನಂಗಳಿಂ ಪೊಗೞ್ದು* ಮೆಚ್ಚಿದನಾಗಳಭಂಗವಿಕ್ರಮಂ ॥ ೧೦೮

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪ್ರಮತಿಕಥಾವೃತ್ತಾಂತಂ

ಏಕಾದಶಾಶ್ವಾಸಂ

॥ ದ್ವಾದಶಾಶ್ವಾಸಂ ॥

—ಮಿತ್ರಗುಪ್ತನ ಕಥೆ—

ಶ್ರೀನಂದನಸನ್ನಿಭನಭಿ ।
ಮಾನಧನಂ ಮಿತ್ರಗುಪ್ತನಂ ನೋಡಿ ಮನ ॥
ಕ್ಕಾನಂದಮನೆಸಗೆಂದಂ ।
ಭೂನಾರೀಪತಿಯುಭಂಗವಿಟ್ಟಲಭೃತ್ಯಂ ॥ ೧

ಎಂಬುದುಂ ಮಿತ್ರಗುಪ್ತಂ ಕೆಯ್ಗಳಂ ಮುಗಿದು,

ಜನಪತಿ ಬಿನ್ನಪಂ ಸಖರೊಳೆಲ್ಲರ ಮಾತ್ಕೆಯೊಳಾಂ ತ್ವದೀಯಪಾ ।
ವನಪದಪದ್ಮಮಂ ಪದೆಪಿನಿಂದಱಸಲ್ ಪೊಱಮಟ್ಟು ಸಂತತಂ ॥
ಜನಪದಮೆಲ್ಲಮಂ ತಿರಿಗಿ ಧರ್ಮನಿವಾಸದ ಸಿಂಹದೇಶಮಂ ।
ಮನಮೊಸೆದೆಯ್ದಿ ಸಿಂಹಪುರಮಂ ಮಿಗೆ ಪೊಕ್ಕೆನತೀವರಾಗದಿಂ ॥ ೨

ಅಂತು ಸಿಂಹಪುರಮಂ ಪೊಕ್ಕಿರ್ಪನ್ನೆಗಂ

ಮನಸಿಜಚಿತ್ತಮೋಹಿನಿಗೆ ಸತ್ಪಥಗಾಮಿನಿಗುಗ್ರಪಾಶಲೋ ।
ಪಿನಿಗೆ ಪುರಾರಿಕಾಮಿನಿಗೆ ಭೀಕರಶೂಲಿನಿಗಗ್ನಿಭಾಳಲೋ ॥
ಚನಿಗೆ ಮೃಗೇಂದ್ರವಾಹಿನಿಗೆ ವರ್ಣಿತವರ್ಣನಿಗೊಲ್ದು ವಿಂಧ್ಯವಾ ।
ಸಿನಿಗೆ ಜಗಜ್ಜನಂ ಪರಕೆಯುಂ ಸಲಿಸಲ್ ನೆರೆದಿರ್ದುದುರ್ವಿಪಾ ॥ ೩

ಅಂತಾವಿಂಧ್ಯವಾಸಿನಿಗೆ ಜಾತ್ರೆ ನೆರೆದಿರಲಾಂ ಪೋಗಲಲ್ಲಿ

ಏಕಾಂತಸ್ಥಳದೊಳ್ ಚಿಂ ।
ತಾಕುಳಮಂ ನೀಂಗಲೆಂದು ಕುಳ್ಳಿರ್ದು ನೃಪಂ ॥
ಜೀಂಕೇಳಿಯೊಳಿರ್ದಂ ನಿ ।
ರ್ವ್ಯಾಕುಳದಿಂದೊರ್ಬ ಸೌಮ್ಯನುರ್ವೀನಾಥಾ ॥ ೪

ತುದಿವೆರಲಿಂದೆ ಮುಟ್ಟಿಯೆಡಗೆಯ್ಯೊಳಮರ್ಚಿ ಸುಡಾಳದಿಂಪು ನು ।
ಣ್ಪೊದವಿರೆ ಕೇಳ್ದು ಕೋವಿದರ ಕರ್ಣರಸಾಯನಮೆಂಬ ಮಾತ್ಕೆಯಿಂ ।
ತೊದಳಿನಿತಿಲ್ಲದೊಳ್ಪೆಸೆವ ವಾಣಿಯ ಜಾಣ್ನುಡಿ ಕೇಳಲಾಯ್ತನಲ್ ।
ಸದಮಳವೀಣೆಯುಂ ಪದೆದು ಬಾಜಿಸುತಿರ್ದನನೇಕರೀತಿಯಿಂ ॥ ೫

ಅಂತಿರ್ದ ವೀಣಾಧರನಂ ಕಂಡು,

ನೆರವಿಯನುಱಿದೊರ್ಬನೆ ಬಂ ।
ದು ರಹಸ್ಯದೊಳೞ್ದಿಯೇಕೆ ನಿನ್ನಯ ಪೆಸರೇಂ ॥
ಪರಿವಾದಿನಿಯುಂ ಸತತಂ ।
ಪರಮಪ್ರಿಯತಮೆಯನಪ್ಪಪಂತಪ್ಪಿರಲೇಂ ॥ ೬

ಎಂದಾಂ ಬೆಸಗೊಳಲಾತನಿಂತೆಂದಂ:—

ತನ್ನಯ ಮನಕ್ಕೆ ಬಾರದ ।
ರೆನ್ನರ್ ನೆರೆದಿರ್ದೊಡೇನದಂತಿರ್ಕೆ ನಿಜ ॥
ಕ್ಕೆನ್ನ ಪೆಸರಂ ವಿಚಾರಿಸೆ ।
ಸನ್ನುತಮತಿ ಕೋಶದಾಸನೆಂಬುದು ಕೆಳೆಯಾ ॥ ೭

ಎಂದು ತನ್ನ ಪೆಸರಂ ಪೇೞ್ದೆನ್ನಂ ಮಿತ್ರನಪ್ಪಂತು ಭಾವಿಸಿ ಕೋಶದಾಸಂ ವೀಣೆಯನಪ್ಪಿದ ಕಾರಣಮುಂ ಪೇೞಲೆಂದಿಂತೆಂದಂ.—

ಪೆಸರ್ವೆತ್ತೀ* ಶುಭಸಿಂಹಪತ್ತನದಧೀಶಂ ತುಂಗಧನ್ವಂ ತದೀ ।
ಯಸತಿ ಪ್ರಸ್ತುತಿವೆತ್ತ ಮೇದಿನಿಯುವರ್ ಬಂದಿಲ್ಲಿಗೀದುರ್ಗೆಯಂ ॥
ಪಸೆದಿರ್ದರ್ಚಿಸಿ ರತ್ನಸಂತತಿಗಳಂ ಮತ್ತಂತವರ್ ಬೇಡಿದರ್ ।
ವಸುಧಾವಂದಿತಪುತ್ರನಪ್ಪ ವರಮಂ ಚಂಚತ್ತಪೋನಿಷ್ಠೆಯಿಂ ॥ ೮

ಅಂತವರ್ ತಪೋನಿರ್ಬಂಧದಿಂದಿರಲೊಡಂ ವಿಂಧ್ಯವಾಸಿನಿ ಪ್ರಸನ್ನೆಯಾಗಿ

ಮನಸಿಜಮತ್ತಹಸ್ತಿನಿಯೆನಿಪ್ಪ ಕುಮಾರಿಯನೊರ್ಬಳಂ ಜಗ ।
ಜ್ಜನಹಿತಕಾರಿಯಪ್ಪ ಸುತನೊರ್ಬನನಂತವಗೊಲ್ದು* ವಿಂಧ್ಯವಾ ॥
ಸನಿ ಪಡೆದಿತ್ತೆನೆಂದು ವರಮಂ ದಯೆಗೆಯ್ಯಲೊಡಂ ನೃಪಾಲನುಂ ।
ವನಿತೆಯುಮಿರ್ಬರುಂ ಸುಖಸುಧಾಂಬುಧಿಯೊಳ್ ಮುೞುಂಗಿರ್ದರರ್ತಿಯಿಂ ॥

ಅಂತು ಸಂಕಲ್ಪಸಿದ್ಧರಾದ ದಂಪತಿಗಳ್ಗೆ ವಿಂಧ್ಯವಾಸಿನಿ ಮಗುೞ್ದಂತೆಂದಳ್

ನಿಮಗಾನಿತ್ತ ತನೂಜೆ ಬಂದೆನೆಗೆ ತತ್ಪೂರ್ವಾಹ್ಣದೊಳ್ ಕೂರ್ತು ಸಂ ।
ಭ್ರಮದಿಂ ಕಂತುಕಕೇಳಿಯಂ ಸಲಿಸುತಿರ್ಕಾಕಾಂತೆಯೊಳ್ ಕೂರ್ತವಂ ॥
ರಮಣಂ ತಾನೆನಿಸಿರ್ಕೆ ತದ್ರಮಣನಂ ನಿಮ್ಮಾತ್ಮಜಂ ಸೇವೆಗೆ ।
ಯ್ಗೆ ಮಗಳ್ಗಾಪ್ಪುವ ಕಂತುಕಾವತಿಯೆನಿಪ್ಪಾನಾಮಮಕ್ಕಾವಗಂ ॥ ೧೦

ಎಂದು ಮತ್ತಮಿಂತೆಂದಳ್:—

ನಿನ್ನ ಮಗಳುತ್ಸವಂ ಮಿಗ ।
ಲೆನ್ನಿದಿರೊಳ್ ಮಾಳ್ಪ ಕಂತುಕಕ್ರೀಡಾಸಂ ॥
ಪನ್ನದ ದೆಸೆಯಿಂ ತಪ್ಪ ।
ವರ್ನ್ನೋಡೆ ಸುಕಂತುಕಾಖ್ಯವಂ ತಳೆದಿರ್ಕುಂ ॥ ೧೧

ಎಂದು ಭವಿಷ್ಯದ್ವರ್ತಮಾನನಂ ಪೇೞಲಾತುಂಗಧನ್ವಂ ಮಹಾಪ್ರಸಾದಮೆಂದು ವಿಂಧ್ಯವಾಸಿನಿಯುಂ ಬೀೞ್ಕೊಂಡು ಮೇದಿನೀಸಹಿತಂ ನಿಜನಿವಾಸಕ್ಕೆ ಬಂದಿರಲ್ ಕೆಲವು ದಿನಕ್ಕೆ

ಧರೆ ಪೊಗೞೆ ತುಂಗಧನ್ವಂ ।
ಗರವಿಂದಾಮೋದೆ ಮೇದಿನೀದೇವಿಗೆ ಸು ॥
ಸ್ಥಿರದಿಂದೆ ಜನಿಸಿದರ್ ಭಾ ।
ಸ್ಕರದೀಧಿತಿಸನ್ನಿಭರ್ ಕುಮಾರಿಕುಮಾರರ್ ॥ ೧೨

ಅಂತು ಜನಿಸಲೊಡಂ,

ತನಯುಂಗೆ ಭೀಮಧನ್ವಂ ।
ತನೂಜೆಗತಿಮುದದೆ ಕಂತುಕಾವತಿಯೆಂದೊ ॥
ಳ್ಪಿನ ಪೆಸರ್*ಗಳನೊಸೆದಿಟ್ಟಂ ।
ಜನನಾಥಂ ತುಂಗಧನ್ವನುತ್ಸವದಿಂದಂ ॥ ೧೩

ಅಂತವರ್ಗೆ ಪೆಸರಿಡಲ್ ವರ್ಷಕ್ರಮದಿಂದವರ್ ಪರಿವರ್ಧಿಸೆ

ಪೆಸರ್ವೆ*ತ್ತ ಕಂತುಕಾವತಿ ।
ಗೆ ಸಖತ್ವಮನಾಂತು ಜೀವದಂತಿರ್ಪಳ್ ಭಾ ॥
ವಿಸೆ ಚಂದ್ರಸೇನೆಯೆಂಬಳ್ ।
ಕುಸುಮಾಯುಧನರಲ ಸರಲನೀೞ್ಕುಳಿಗೊಳ್ವಳ್ ॥ ೧೪

ಪದನಖಕಾಂತಿ ತಾರಗೆಗಳಂ ಗೆಲೆ ನಿರ್ಮಳದಂತದೀಪ್ತಿ ಕಾ ।
ಮುದಿಗೊಱೆಗಟ್ಟೆ ಲೋಚನಯುಗಾಂಚಲರಶ್ಮಿ ಚಕೋರಿಗಳ್ಗೆ ಸಂ ॥
ಪದಮನಮರ್ಚೆ ಮೆಲ್ನುಡಿ ಕರಂ ಸುಧಾಂಪನೊಡರ್ಚೆ ಕಾಮುಕ ।
ರ್ಗದವೞಿಲಂ ಮುಖೇಂದು ಕುಡೆ ಬಣ್ಣಿಸದಿರ್ಪರೆ ಚಂದ್ರಸೇನೆಯಂ ॥ ೧೫

ಆಚಂದ್ರಸೇನೆಗೆನಗೆ ಮು ।
ಹೂಚೇತಃಪ್ರೀತಿ ಪೆರ್ಚಲಂಗಜನಿರ್ಬ ॥
ಗ್ರಾಚಾರ್ಯನಾಗಿ ಮಂಗಳ ।
ವಾಚಕದಿಂದೊಂದುಗೂಡಿದಂ ಮುದಮೊಸೆಯಲ್ ॥ ೧೬

ಅಂತಾಚಂದ್ರಸೇನೆಗಮೆನಗಮನ್ಯೋನ್ಯಸ್ನೇಹಂ ಸಂದಿರೆ,

ಈಗಳ್ ಕಾಮುಕಭೀಮಧನ್ವನವಳಂ ತನ್ನೊಲ್ಮೆಯಿಂ ನಿತ್ಯಸಂ ।
ಭೋಗಸ್ತ್ರೀಯುನೆ ಮಾಡಿಕೊಂಡಿರಲವಂ ಮತ್ಸ್ವಾಮಿಪುತ್ರಂ ಕನ ॥
ಲ್ಲೇಗೆಯ್ವಂ ಕೊಲಲಾಗದೆಂದು ಮನದೊಳ್ ಕಟ್ಟೇವಮೊಯ್ದಲ್ಕೆ ಮೀ।
ಣಾಗಾಂಧರ್ವದ ಸೌಖ್ಯದಿಂ ಮಱೆವೆನೆಂದಿರ್ದಪ್ಪೆನೀತಾಣದೊಳ್ ॥ ೧೭

ಮುದದೆಡೆಗೆ ದುಃಖದೆಡೆಗಂ ।
ಸುದತಿಯರ ವಿಯೋಗದೆಡೆಗೆ ಕೂಡಿರ್ದೆಡೆಗಂ ॥
ಕದಡಿರ್ದ ಚಿತ್ತದೆಡೆಗಂ ।
ಪದೆಪಿಂದಂ ಬಂಧುವಲ್ತೆ ಸಂಗೀತರಸಂ ॥ ೧೮

ಎಂದು ಕೋಶದಾಸು ತನ್ನ ವೃತ್ತಾಂತಮಂ ಪೇಳ್ದ ಸಮಯದೊಳ್

ನೂಪುರದಿಂಚರಂ ನವಕಳಾಪಮನೂನ.............. ।
...............ರತ್ನವಳಯಧ್ವನಿ ಚಿತ್ತಜಚಾಪಟಂಕೃತಂ॥
ವ್ಯಾಪಿಸಿದತ್ತು ನಾಲ್ದೆಸೆಯುನೆಂಬಿನಮೊಂದೆಸೆಯಲ್ಕದೊರ್ವ ಶೋ ।
ಭಾಪರಿಪೂರ್ಣೆ ಬಂದಳತಿಸಂಭ್ರಮದಿಂ ಪದೆದಲ್ಲಿಗಾಕ್ಷಣಂ ॥ ೧೯

ಅಂತವಳ್ ಬರಲೊಡಂ,

ಶಂಕಿಸದೆ ಕೋಶದಾಸಂ ।
ಭೋಂಕೆನಲೆಟ್ದವಳನಪ್ಪಿಯಂತಿಕದೊಳ್ ಪೆಂ ॥
ಪಿಂ ಕುಳ್ಳಿರಿಸಿ ಬೞಿಕ್ಕಾ ।
ತಂ ಕಡುಪಿಂದಂ ಪೇಳ್ದನೆನಗೆ ತತ್ಕೌತುಕಮಂ ॥ ೨೦

ಅದೆಂತೆನೆ:—

ನಿನ್ನೊಳ್ ಮುದದಿಂದಾಂ ಪೇ ।
ಳ್ದನ್ನ ಪ್ರಾಣಾಧಿನಾಥೆಯಿಂತೆ ಕಳಾಸಂ ॥

ಪನ್ನಗುಣೆ ಚಂದ್ರಸೇನೆ ಮ ।
ಹೋನ್ನತಸೌಭಾಗ್ಯವಂತೆ ಭಾವಿಸು ಕೆಳೆಯಾ ॥ ೨೧

ಎಂದಾಚಂದ್ರಸೇನೆಯುನೆನಗೆ ತೋಱಿ ಮಗುೞ್ದಾಕೆಯೊಳಾತನಿಂತೆಂ
ದಂ:—

ಪೀನನಿತಂಬೆಯರ್ ಗುರುಪಯೋಧರೆಯರ್ ನಳತೋಳ ಬಾಲೆಯರ್ ।
ಮೀನನಿಭಾಕ್ಷಿಯರ್ ಕುಟಿಲಕುಂತಳೆಯರ್ ನವಕಂಬುಕಂಠೆಯರ್ ॥
ಮಾನಿನಿಯರ್ ಕೆಲರ್ ಮದನಲಕ್ಷ್ಮಿಯರಂತಿರೆ ವಿಂಧ್ಯವಾಸಿನೀ।
ಸ್ಥಾನಮನೆಯ್ದಿದರ್ ಪದೆದು ನೋೞ್ಪರ ಕಣ್ಗಳ ಪರ್ವಮೆಂಬಿನಂ॥ ೨೨

ಅಂತು ನೆರೆದು ಬಂದ ತರುಣಿಯರ ನಡುವೆ

ನಗೆಗಣ್ಣ ಮಿಂಚಿನ ಗೊಂಚಲಂ ಮಿಗುವಿನಂ ಕರ್ಪಿಂ ಲಸದ್ವೇಣಿ ಕಾ ।
ರ್ಮುಗಿಲಂಗೆಲ್ವಿನಮಿಂದ್ರಚಾಪರುಚಿಯಂ ಭೂಷಾಮಣಿಜ್ಯೋತ್ಸ್ನೆಗಳ್ ॥
ನಗುವಂತಿರ್ಪ ನವಮಾತ್ತಯೌವನರಸಂ ತೀರ್ಕೈಪಿನಂ ಧೂರ್ತರಂ ।
ಚೆಗಳಂತಂಜುವಿನಂ ಪಯೋಧರೆಯುದೊರ್ಬಳ್ ಕಣ್ಗೆ ವಂದಳ್ ನೃಪಾ ॥

ಅಂತಿರ್ದ ವಿಳಾಸಿನಿಯುಂ ಕಂಡಿವಳಾರೆಂದಾಂ ಚಂದ್ರಸೇನೆಯುಂ ಕೇಳಲವ
ಳಿಂತೆಂದಳ್:—

ಇವಳಲ್ತೆ ಕಂತುಕಾವತಿ ।
ಭುವನೇಶ್ವರಿಯೆನಿಪ ವಿಂಧ್ಯವಾಸಿನಿಗೆ ಮಹೋ ॥
ತ್ಸವದಿಂ ಕಂತುಕಕೇಳಿಯ ।
ನವಿರಳದಿಂದೆಸಗಲೆಂದು ಬಂದಳ್ ನಲವಿಂ ॥ ೨೪

ಎಂದು ಮತ್ತಂ,

ನಿಮ್ಮಯ ಕಣ್ಗಳ ಪರ್ವಮ ।
ನೆಮ್ಮರಸಿಯ ಸೆಂಡಿನಾಟದೊಳ್ ಪಡೆದೊಡೆ ನೀ ।
ವ್ರಮ್ಮಹದಿಂ ನೋಳ್ಕೆಯೆನು ।
ತ್ತಿವ್ವಿರ್ಬರನಾಕೆಯೆಡೆಗೆ ಸಖಿ ಕೊಂಡುಯ್ದಳ್ ॥ ೨೫

ಅಂತೆಮ್ಮಿರ್ಬರಂ ಚಂದ್ರಸೇನೆ ರಂಗಭೂಮಿಗೊಡಗೊಂಡು ಪೋಗಲ
ಆಗಳ್ ಕಂತುಕಾವತಿ

ಅಳಕಂ ಜೋಲ್ವಿರೆ ಹಾರಮೊರ್ಗುಡಿಸೆ ಚಂಚತ್ಕರ್ಣಪತ್ರಂ ಕರಂ ।
ಪೊಳೆಯಲ್ ವೇಣಿ ಕೆಲಕ್ಕೆ ಜಾಱೆ ವಿಳಸತ್ಸಂವ್ಯಾನಬಂಧಂ ಕುಚ ॥
ಸ್ಥಳದಿಂದೊಯ್ಯನೆ ಪಿಂಗೆ ತೋಳ್ಗಳ ಮೊದಲ್ ಚೆಲ್ವಾಗಿರಲ್ ಕೋಮಳಾಂ ।
ಬ್ಜಹಸ್ತಂಗಳನೊಲ್ದು ಕಾಂತೆ ಪ್ರೊಷೆಮುಟ್ಟಿಳ್ ದೇವಿಗಾನಂದದಿಂ ॥ ೨೬

ಅಂತು ಕಂತುಕಾವತಿ ವಿಂಧ್ಯವಾಸಿನಿಗೆ ನಮಸ್ಕರಿಸಿಯನಂತರಂ,

ಮಣಿಮಯಕಾಂಚಿಯುಂ ಬಿಗಿದು ಕಂಚುಕಮಂ ಕುಚಮಂಡಲಕ್ಕೆ ಕೇ ।
ವಣಿಸಿಯೆಚಲ್ವ ಮುಂಜೆಱಗನೊಯ್ಯನೆ ಸೆಕ್ಕಿ ನವೀನರತ್ನಕಂ ॥
ಕಣಮೆಸೆವಂಗಪಂ ದನಿಗುಡಲ್ಕೆ ಭವಾನಿಯ ಮುಂದೆ ಯಾವಕಾ ।
ರುಣಕರದೊಳ್ ಕುಮಾರಿ ತಳೆದಳ್ ಪೊಸಸೆಂಡನನಂಗಪಿಂಡಮಂ ॥ ೨೭

ಮದನನ ಶೃಂಗಾರಮನೊ ।
ರ್ಮೊದಲಂಗನೆ ಮುದ್ದೆಮಾಡಿ ತೋರ್ಪವೊಲೊಪ್ಪಿ ॥
ರ್ದುದು ಚೆಲ್ವ ಸೆಂಡು ವಿಟರ ।
ಳ್ಳೆರ್ದೆಯೊಯ್ಯನೆ ಕಂತ ಕಾವತಿಯ ಬಲಗೆಯ್ಯೊಳ್ ॥ ೨೮

ಅಂತಿರ್ದ ಸೆಂಡಂ ಕೊಂಡು

ಮೊದಲೊಳ್ ಮೆಲ್ಲನೆ ಸೆಂಡನಿಟ್ಟು ನೆಗೆಯಲ್ ಮೆಲ್ಪಿಂದವಳ್ ಪೊಯ್ದು ಪೊ
ಣ್ಮಿದ ಸೆಂಡಂ ನಖದೀಪ್ತಿ ರಂಜಿಸುವಿನಂ ಮೇಗೆಯ್ಯೊಳಾಂತಾಗಳಂ ॥
ತದನಾರ್ಪಿಂ ಮಗುಳ್ದುರ್ವಿಯೊಳ್ ಪೊಡೆದು ಗೋಮೂತ್ರಂಬೊಲೊರ್ಮೆ
ಯ್ಗೆ ತಾ । ಳದ ಸೂಟಿಂ ತ್ರಿಳದಾಡಿದಳ್ ಸುದತಿ ಪೆಂಪಿಂ ಕಂತುಕಕ್ರೀಡೆಯಂ ॥

॥ ಮಲ್ಲಿಕಾಮಾಲೆ ॥

ವಾರಿಜಾನನೆ ಸೆಂಡನಿರ್ಕೆಲದೊಳ್ ನಿಮಿರ್ದು ಕರಾಗ್ರದಿಂ ।
ಜಾಱೆ ಮೆಟ್ಟುತೆ ಪೊಯ್ಯಲಂಗದರತ್ನಕಂಕಣನೂತ್ನಮಂ ॥
ಜೇರಕಧ್ವನಿ ಪಂಚಬಾಣಶರಾಸನಧ್ವನಿಯಂತೆ ವಿ ।
ಸ್ತಾರದಿಂ ಪೊಱಪೊಣ್ಮಲಾಡಿದಳಂತು ಕಂತುಕಕೇಳಿಯಂ ॥ ೩೦

ಭ್ರಮರಿಗುಡುತ್ತೆ ಕಂತುಕಮನಂಗನೆ ಪೊಯ್ಯಲಲಾತಚಕ್ರಗಂ ।
ತಮ್ಮುರ್ದಿರೆ ಸೆಂಡು ವೃತ್ತತೆಯೊಳಂಗನೆ ಮಧ್ಯದೊಳೊಪ್ಪುತಿರ್ದಳು ॥
ತ್ತಮಪರಿವೇಷಮಧ್ಯದ ಶಶಾಂಕಕಳಾಕೃತಿಯಂತೆ ಚಿತ್ತವಿ ।
ಭ್ರಮಮನೊಡರ್ಚುತಿಲ್ಲರೊಳದೇವೊಗೆಟ್ಟಿಂ ಕಮನೀಯಕೇಳಿಯುಂ ॥

ಅಂತು ಭ್ರಮರಿಗುಡುವಾಗಳ್

ಸೊಗಸೆಸೆಯೆ ಕೋಶದಾಸನ ।
ಪೆಗಲೊಳ್ ಮುಂಗೆಯ್ಯನಿಱಿಸಿ ನಿಂದಿರ್ದನ್ನಂ ॥
ಮೃಗನೇತ್ರೆ ಕಂಡು ಚಿತ್ತಂ ।
ಬುಗುವಂತಿರೆ ಮಗುಳ್ದು* ಮಗುಳ್ದು* ನೋಡಿದಳಾಗಳ್ ॥ ೩೨

ಅಂತು ನೋಡಿ ಮತ್ತಂ,

ಬಡನಡುವಿಂಗೆ ಲಂಘಿಸಿ ಕುಚಕ್ಕಡರ್ದಿ*ಂದುಟಿಯುಂ ತುಡುಂಕಿ ಮೊ ।
ಗ್ಗುಡಿಗಿರಬೆಯ್ದೆ ಮುಂದಲೆಗೆ ಪಾಯ್ದು ವಿಟಾಗ್ರಣಿಯಂತೆ ಕಂತುಕಂ ॥
ತೊಡರ್ದ*ಪ್ಪುದೆಂದು ಕಾಂತೆ ಮೃದುಹಸ್ತದಿನೋವದೆ ಪೊಯ್ಯೆ ಮತ್ತೆ ಮೆ ।
ಲ್ಲಡಿಗಳನಂಟಿ ಪೆರ್ಚುಪುದದಲ್ತೆ ಗುಣಾಧಿಕನೀತಿ ಧಾತ್ರಿಯೊಳ್ ॥ ೩೩

ವಿಲಸತ್ಕಂತುಕಮಂ ಪ್ರಟಂನೆಗೆವಪ್ಪೋಲ್ ಮಾರ್ಪೊ್ರಯ್ದು ಸೆಂಡೆಯ್ತರಲ್
ನೆಲದಿಂದಂ ಪೊಱಕೆಯ್ಯೊಳಾಂತು ಮಗುಳ್ದಾಪ್ತಿಂ ಮಾಣದೋರಂತೆ ತಾ ॥
ಳ್ವಲಯಂ ರಂಜಿಸೆ ಚಿತ್ರಬಂಧಗತಿಯೊಳ್ ಸೂಕ್ಷ್ಮೆಕ್ಟ್ರೆನೊಳ್ ಪೊಯ್ದುಕೋ ।
ಮಳ್ ಪ್ರಷ್ಪಾಸ್ತ್ರವನೀಟ್ಟ್ವಿ ಮೂಡಿಗೆಗಳಂ ಪುಷ್ಪಾಸ್ತ್ರಮಂ ಪೊಯ್ವಳೇ

ನಡೆಸೆಂಡಂ ಪೊಡೆಸೆಂಡನಾರ್ಪಿನೊದೆಸೆಂಡಂ ಪಾರ್ವಸೆಂಡಂ ಕರಂ ।
ಪಡಿಸೆಂಡಂ ಸುಱಿಸೆಂಡನಿರ್ದೆಸೆಗಳೊಳ್ ಪೊಯ್ಸೆಂಡನೂರ್ಧ್ವಕ್ಕೆ ಪೊ ॥
ಯ್ದಿಡುಸೆಂಡಂ ಪೊಱಕೆಯ್ಯೊಳಪ್ಪಳಿಪ ಸೆಂಡಂ ಚಿತ್ರಬಂಧಂಗಳೊಳ್ ।
ತೊಡರ್ದೊ*ಪ್ಪಂಬಡೆದಾಡಿದಳ್ ವಿಟಜನಂ ಕೊಂಡಾಡಿ ಬೆಂಡಪ್ಪಿನಂ ॥ ೩೪

ಅಂತು ಕಂತುಕಕ್ರೀಡೆಯುಂ ಮಾಡಿ ಕಾಮನಂ ಕಾಡಿ ವಿಂಧ್ಯವಾಸಿನಿಯಂ ಬೀಳ್ಕೊಂಡು ವಿಳಾಸಿನೀಜನಂಬೆರಸು ನಿಜನಿವಾಸಕ್ಕೆ ಪೋಗುತ್ತೆ

ಅಂತಾಕೆ ಮನೆಗೆ ಪೋಗು ।
ತ್ತುಂ ತಿರಿಗಿ ಮದೀಯಮುಖವಕ್ತ್ರಮಂ ನೋಡಿದಳೋ ॥
ರಂತೆಸೆವ ತನ್ನ ಜೀವಂ ।
ಪಿಂತಿರ್ದತ್ತೆಂಬ ತೆಱನನನುಕರಿಸುತ್ತುಂ ॥ ೩೫

ಏಣವಿಶಾಲನೇತ್ರೆ ಪದೆದೆನ್ನ ಮನೋಹರವಕ್ತ್ರಪದ್ಮಮಂ ।
ಕೋಣಿತದೃಷ್ಟಿಯಿಂದಡರ್ದು* ನೋಡಲೊಡಂ ಕಡುಕೆಯ್ದು ಮನ್ಮಥಂ ॥

ಬಾಣಸಮೂಹಮಂ ಮುಳಿಸಿನಿಂ ಪದೆದಾರ್ದುಮಂದೆನ್ನ ಮೇಲವಂ ।
ಮಾಣದೆ ಸೂಸಲಾಂ ಮನದ ಧೈರ್ಯದ ಬಲ್ಪಿನೊಳಿರ್ದೆನುರ್ವಿಪಾ ॥ ೩೬

ಅಂತೆನ್ನಂ ನೋಡುತ್ತವಳತ್ತಲ್ ಪೋದಳ್. ಇತ್ತಲಾನುಂ ಕೋಶದಾಸನುಂ ಪೂರ್ವಸ್ಥಾನಕ್ಕೆ ಬಂದಿರ್ಪುದುಮಲ್ಲಿಗೆ ಚಂದ್ರಸೇನೆ ಬಂದು

ಪಾಪಾತ್ಮ ಭೀಮಧನ್ವಂ ।
ಕೋಪಿಸುವಂ ಪಿಂದೆ ತಡೆದಿರಲ್ಕೆನ್ನಂ ಕಾಂ ॥
ತಾ ಪತಿಯೊಡನಾಂ ಬೇಗಂ ।
ಪೋಪೆಂ ಕೇಳ್ ಕೋಶದಾಸ ಬೆಸಸೇಗೆಯ್ವಂ ॥ ೩೭

ಎಂದು ಚಂದ್ರಸೇನೆ ಕೋಶದಾಸಂಗೆ ಪೇಳ್ದು ಪೋಪೆನೆಂಬಾಗಳಾನವಳ್ಗಿಂತೆಂದೆಂ:—

ಆನೊಂದೌಷಧಿಯೀಯಲ್ ।
ವಾನರಿಯಾಗಿರ್ಪೆಯವನ ಕಣ್ಗಳ್ಗೆ ಚಂ ॥
ದ್ರಾನನೆಯದಱಿಂ ಬಿಡುಗುಂ ।
ಮಾನಿನಿ ನಿನ್ನಾಸೆ ಭೀಮಧನ್ವಂಗಾಗಳ್ ॥ ೩೮

ಎಂಬುದುಮವಳಿಂತೆಂದಳ್:—

ಇನಿತೊಂದಾಯಾಸಮೇತರ್ಕೆನಗೆ ಕಪಿಮುಖಂ ತಾನದೇತರ್ಕೆ ಕಾಂತಾ ।
ಜನರತ್ನಂ ತುಂಗಧನ್ವಾತ್ಮಜೆ ನಿನಗೆನಸುಂ ಕಾಂತೆಯಾಗಲ್ಕೆ ನಿನ್ನಾ ॥
ಳನಿಸಿರ್ಕುಂ ಭೀಮಧನ್ವಂ ಜನನಫಲಮವಂಗಾಂ ಬೞಿಕ್ಕಾತನಿಂ ಭೋಂ ।
ಕನೆ ಪಿಂಗಿರ್ಪಂತುಟಕ್ಕುಂ ಸತಿಯೆನಿಸುವೆನೀಕೋಶದಾಸಂಗೆ ಸತ್ಯಂ ॥ ೩೯

ಎಂದವಳ್ ಪೇೞೆ ಕಂತುಕಾವತಿ ಕಾಂತೆಯಪ್ಪ ಕಾರಣಮೇಂತೆಂದಾಂ ಕೇಳ್ವುದುಮವಳಿಂತೆಂದಳ್:—

ಸೆಂಡಾಡುತ್ತಮೆ ಕಂತುಕಾವತಿ ಕಳಾಸಂಪನ್ನೆ ನಿನ್ನಾಸ್ಯಮಂ ।
ಕಂಡುನ್ಮಾದಮನೆಯ್ದಿ ಮೆಯ್ಮಱೆದು ತನ್ನೊಳ್ತಾನೆ ಮತ್ತಮ್ಮನಂ ॥
ಗಂಡಪ್ಪರ್ಕೆಲರೆಂದು ವಂಚಿಸಿಯನಂಗೋದ್ರೇಕದಿಂ ಪೋಗಲಾಂ ।
ಕಂಡೆಂ ಕಾಂತೆಯ ಭಾವಮಂ ನಿನಗವಳ್ ಸ್ತ್ರೀಯಪ್ಪಳೆಂಬಂದಮಂ ॥ ೪೦

ಭವಮೂರ್ತಿ ವಿಂಧ್ಯವಾಸಿನಿ ।
ಭವಿಷ್ಯದರ್ಥಮನಲಂಪಿನಿಂ ಪೇೞ್ದಳ್ ಕೇಳ್ ॥

ಯುವತಿಗೆ ವಲ್ಲಭನಾಗಿ ।
ಪರ್ವಂಗೆ ಮಿಗೆ ಭೀಮಧನ್ವನಾಳೆಂಬೊಲವಿಂ ॥ ೪೧

ಅದಱಿಂ ನಿನಗೆ ಕಂತುಕಾವತಿ ಕಾಂತೆಯುಂ ಭೀಮಧನ್ವಂ ಭೃತ್ಯನುಮಪ್ಪುದು ತಪ್ಪದೆಂದು ಚಂದ್ರಸೇನೆ ಪೇೞ್ದು ಮತ್ತಂ,

ಎನ್ನಯ ಮಾತ್ರ ತನ್ನ ನೃಪತನೂಜೆಗೆ ಧಾತ್ರಿಕೆಯಪ್ಪಳಾನಿದಂ ।
ತನ್ನೊಡನಿಂದು ಪೇೞಲವಳೊಪ್ಪುವ ಮೇದಿನಿಗೊಲ್ದು ಪೇೞ್ದೊಡ ॥
ತ್ತ್ಯುನ್ನತತುಂಗಧನ್ವನೃಪನೊಳ್ ಸಲೆ ಮೇದಿನಿ ಪೇೞಲಾಕ್ಷಣಂ ।
ನಿನ್ನಯ ಕಾರ್ಯಮಪ್ಪುದಿದು ದೇವತೆಯಾಜ್ಞೆ ಕುಮಾರಶೇಖರಾ ॥ ೪೨

ಎಂದು ಪೇೞ್ದು ಚಂದ್ರಸೇನೆ ಪೋಗಲೊಡಂ,

ಎನ್ನಯ ಹೃದಯದ ತಾಪಂ ।
ತನ್ನಂ ಬಂದೆಯ್ದಲುಷ್ಣಮಿಮರ್ಡಿಸುಗುಮೆಂ ॥
ಬುನ್ನತಚಿಂತೆಯಿನೆಯ್ದಿದ ।
ನನ್ನಿಗಮಪರಾಬ್ಧಿಗಬ್ಜಿನೀಪ್ರಾಣೇಶಂ ॥ ೪೩

ಅಂತು ಸೂರ್ಯಾಸ್ತಮಯಮಾಗಲೊಡಂ,

ಬಂದಿರುಳನೇಕಯುಗದಂ ।
ತೊಂದಿರಲೆಂತಾನುಮೆನ್ನ ಪುಣ್ಯೋದಯಮೆಂ ॥
ಬಂದದಿನುದಯಾಚಲದೊಳ್ ।
ಬಂದಿರ್ದಂ ಕೂರ್ತು ಪದ್ಮಿನೀನಿಜಕಾಂತಂ ॥ ೪೪

ಅಂತುದಯಮಾಗಲ್ ಸಂಧ್ಯಾವಂದನಂಗೆಯ್ದು ವಿಂಧ್ಯವಾಸಿನಿಗೆ ನಮಸ್ಕಾರಂಗೆಯ್ಯಲೆಂದಾಂ ಪೋಪಾಗಳ್,

ಪೊಡವಿಪತಿ ಕೂರ್ತು ಕೆಲಬರ ।
ಗಡಣದಿನಾಭೀಮಧನ್ವನೊಲವಿಂದಾನಿ ॥
ರ್ದೆಡೆಗೆಯ್ತಂದೆನ್ನಂ ತ ।
ನ್ನೊಡನೆ ಬರಲ್ವೇೞ್ದು ಪಿರಿದು ಮನ್ನಿಸಿ ಕರೆದಂ ॥ ೪೫

ಅಂತು ಕರೆಯಲ್ಕಾನದರ್ಕೊಡಂಬಡಲೊಡಂ ಭೀಮಧನ್ವನೆನ್ನಂ ಮನೆಗೊಡಗೊಂಡು ಪೋಗಿ ಮಜ್ಜನಭೋಜನಾದಿಕ್ರಿಯೆಗಳಂ ಮಾಡಿಸಿ ಪಗಲಂ ಕಳೆಯಲೊಡಂ

ಗಗನಸ್ಥಲದೊಳ್ ತಿರುಗುವ ।
ಖಗನಪರಾದ್ರೀಂದ್ರಕೋಟರಕ್ಕತಿಮುದದಿಂ ॥
ದೊಗೆಯುಲ್ ಪಡೆಪಿಂದಾಗಳ್ ।
ಜಗಜ್ಜನಂ ನಿದ್ರೆಗೆಳಸಿಯೊಱಗಿತ್ತಾಗಳ್ ॥ ೪೬

ಅಂತಸ್ತಮಾನನಾಗಲೊಡಂ ಪ್ರಾಪ್ತಕಾಲದೊಳ್ ಸಜ್ಜೀವನೆಯೊಳಾನೊಱಗಿರ್ಪಾಗಳ್

ನಡುವಿರುಳೆಟ್ಟಂದು ಕೆಲರ್ ।
ಪಿಡಿದೆನ್ನಂ ಪೊಡೆದು ಕಟ್ಟಿ ಕುಳ್ಳಿರಿಸಲ್ಕೆ ವಿ ॥
ಗಡ ಭೀಮಧನ್ವನಲ್ಲಿಗೆ ।
ಸಡಗರದಿಂ ಬಂದು ನಸು ನಗುತ್ತಿಂತೆಂದಂ ॥ ೪೭

ನಿಮ್ಮೇಕಾಂತವಿಚಾರದ ।
ಸಮ್ಮಂಧಮನೆಮ್ಮ ದೂತಿ ವಾತಾಯನದಿಂ ॥
ಸುಮ್ಮನೆ ಬಂದಿರ್ದಱಿದಿ ।
ನ್ನೆಮ್ಮೊಳ್ ಪೇೞ್ದಳ್ ವಿಚಾರಮದು ದಿಟಮಲ್ತೇ ॥ ೪೮

ನೀನರಸಾಗಳ್ ನಿನಗಾಂ ।
ಮಾನಸನಾಗಿರ್ದು ಪೇೞ್ದವಂ ಗೆಯ್ವೆಂ ಸ ॥
ನ್ಮಾನನಿಧಿ ಕಂತುಕಾವತಿ ।
ಮಾನಿನಿ ನಿನಗಾದಪಳ್ ಗಡಂ ದಿಟಮಲ್ತೇ ॥ ೪೯

ಎಂದೆನ್ನಂ ಭೀಮಧನ್ವಂ ಜಡಿದು

ನಿರ್ಬಂಧಿಸಿ ಸಂಕಲೆಯುಂ ।
ಸರ್ಬಾಂಗದೊಳಿಕ್ಕಿ ಕಡಲ ನಡುನೀರೊಳ್ ತ ॥
ನ್ನುರ್ಬಿಱಿಯೆ ಬಿಸುಟು ಬಾಯೆಂ ।
ದೊರ್ಬನ ಕೆಯ್ಗಿತ್ತನೆನ್ನನಾನೃಪತನಯಂ ॥ ೫೦

ಅಂತು ಕುಡಲವನೆನ್ನಂ ಕೊಂಡು ಪೋಗಿ

ಲಲಿತಪ್ರೋದ್ಯತ್ತರಂಗೋಚ್ಚಳಿತಕಮಠಪಾಠೀನನೀರೇಭಕೋಳಾ ।
ಹಳಚಂಚಚ್ಛೀಕರೋದ್ಯತ್ಕುಸುಮಿತನವವೇಳಾವನಪ್ರಾಂತದಿಂ ಕ ॥

ಟ್ಟಲೆಯೊಂದುಂ ಪಿಂಗದೆಂಬಂತೆಸೆವ ಕಡಲ ತನ್ಮಧ್ಯದೊಳ್ ನಿರ್ದಯಂ ಸಂ ।
ಕಲೆಯಿಕ್ಕಿರ್ದನ್ನನನ್ಯಾಯದಿನುಱೆ ಬಿಸುಟಂ ನೀರ್ಗಳ್ಬಾರ್ಗವಾಗಲ್ ॥

ಅಂತವನೆನ್ನಂ ಸಮುದ್ರಮಧ್ಯದೊಳ್ ಬಿಸುಟು ಪೋಗಲ್

ವಡಬಾಜ್ವಾಲೆಯೊಳುಣ್ಬೊಡಂ ವಿಷಧರಂ ಬಾಯ್ವಿಟ್ಟು ಮೇಲ್ವಾಯ್ದೊಡಂ
ಕಡಲೊಳ್ ಬಿೞ್ದೊಡಮದ್ರಿಶೃಂಗದಿನಿಳಾಭಾಗಕ್ಕೆ ಪಾಯ್ದುರ್ವೊಡಂ॥
ಸಿಡಿಲಾರ್ಪಿಂ ಮಿಗೆ ಪಾಯ್ದೊಡಂ ನಿಜಲಲಾಟಪ್ರಾಪ್ತಸಿದ್ಧಾಕ್ಷರಂ ।
ತೊಡೆವನ್ನಂ ಭಯಮೇಕೆ ದೇಹಿಗೆ ಬೞಿಕ್ಕಾರ್ ಬಾಧಿಪರ್ ಬಾಧೆಯಂ॥ ೫೩

ಎಂದೆನ್ನೊಳ್ ಪರಿಭಾವಿಸುತಿರ್ಪನ್ನೆಗಂ,

ಕಟ್ಟಿದ ಚಾರಿಗಳ್ ಗಗನಮಂ ಮಿಗೆ ಚುಂಬಿಪ ಕೂಪಕಂಭಮೊ ।
ಟ್ಟಿಟ್ಟ ಸುವರ್ಣರತ್ನತತಿ ಗಾಳಿಯು ಕೋೞಿಗನುಕೂಲಮಪ್ಪಿನಂ ॥
ಬಿಟ್ಟ ಪಟಂ ಪ್ರಮಾದಫಲಕಸ್ಥಿತನಾದ ವಣಿಗ್ವರಂ ಕರಂ ।
ದಿಟ್ಟಿಗೆ ಚೆಲ್ವನಾಗಿ ಕಡಲೊಳ್ ಬರುತಿರ್ದುದು ಯಾನಪಾತ್ರಕಂ ॥ ೫೪

ಅಂತೊಂದು ಬಹಿತ್ರಂ ಬರಲದಱೊಳಿರ್ದ ವಣಿಕ್ಪತಿ

ಮುಡುಪಿಂದೀಸಾಡುತ್ತುಂ ।
ಕಡಲೊಳಗಿರ್ದನ್ನನಾವಣಿಕ್ಪತಿಯೊಲವಿಂ ॥
ಕಡುಪಿಂ ಕಂಡತಿದಯೆಯಿಂ ।
ನಿಡುನೇಣಂ ನೀಡಿ ತೆಗೆದುಕೊಂಡನಿಳೇಶಾ ॥ ೫೫

ಅಂತೆನ್ನಂ ತೆಗೆದು ಮದ್ವೃತ್ತಾಂತಮನಾವಣಿಕ್ಪತಿ ಕೇಳುತ್ತುಮಿರ್ಪಾಗಳ್

ತಂಬಟಮಂ ಸೂಚೈಸು ।
ತ್ತಂಬುಧಿಯೊಳ್ ಕಳ್ಳಪಡಗಿನವರ್ಗಳ್ ರತ್ನಂ ॥
ತುಂಬಿರ್ದ ತದ್ಬಹಿತ್ರಮು ।
ನಂಬುಗಳಿಂದೆಚ್ಚು ಮುಂದುಗಿಡಿಸಿದರಾಗಳ್ ॥ ೫೬

ಅಂತೊಂದು ಕಳ್ಳ ಪಡಗು ಬಂದು ಮುಂದುಗಿಡಿಸಲದಂ ಕಂಡು ತದ್ಬಹಿತ್ರದ ವಣಿಕ್ಪತಿಯೊಳಾನಿಂತೆಂದೆಂ:—

ಮುಳಿವಾಂತ ಪಡಗಿನವರ್ಗ*ಳ ।
ಬಲಮಂ ತತ್ಕ್ಷಣದೊಳಾಂತು ಕಿಡಿಸಿದಪೆಂ ಮ ॥
ಚ್ಛಲದಿಂದೆನಗಿಕ್ಕಿದ ಸಂ ।
ಕಲೆಯಂ ಬಿಡಿಮೆಂದೊಡಾತನಾಗಳೆ ಬಿಟ್ಟಂ ॥ ೫೭

ಅಂತೆನ್ನಂ ಬಿಡಲೊಡಂ,

ಕಡುಕೆಯ್ದಾನಾರ್ಪಿನಿಂ ಬಿಲ್ವಿಡಿದು ನಿಶಿತಬಾಣೋತ್ಕರಾಸಾರದಿಂ ಮಾ ।
ರ್ಪಡಗಂ ಪೂಣ್ದೆಯ್ದೆ ಬೇಗಂ ತುಡುಕಿ ಪಿಡಿದು ಕಳ್ಳರ್ಕಳಂ ನೀಳ್ದ ನೇಣಿಂ ॥
ಪಿಡಗೆಯ್ಯಂ ಕಟ್ಟಿಯಲ್ಲಿರ್ದವರೊಡೆಯನೆನಿಪ್ಪಾತನಂ ನೋಡಲಿನ್ನೇಂ ।
ಪಡಿಮಾತಂ ಪೇಳ್ವೆನೆನ್ನಾ ನಿಜರಿಪುವೆನಿಪಾಭೀಮಧನ್ವಾಂಕನಾದಂ ॥ ೫೮

ಅಂತಾಂ ಪಿಡಿದ ಪಡಗಿನೊಡೆಯಂ ಭೀಮಧನ್ವನಾಗಿರೆ

ಮಾಡಿತ್ತಂ ಪರಲೋಕದೊ ।
ಳಾಡುತ್ತನುಭವಿಪರೆಂಬರದು ಪುಸಿಯಿಹದೊಳ್ ॥
ನೋಡಲನುಭವಿಪ್ಪುದದು ದಿಟ ।
ಮಾಡೆಂಬರಮೋಘದರ್ಕೆ ರಾಜಕುಮಾರಾ ॥ ೫೯

ಎಂದಾತನಂ ಮುಟ್ಟಿ ಮೂದಲಿಸಿಯನಂತರಂ,

ಮುನ್ನೆನಗಿಕ್ಕಿದ ಸಂಕಲೆ ।
ಯನ್ನೀಳ್ದ ಶರೀರದಲ್ಲಿ ತುಡಿಸಿ ಕುಮಾರಂ ॥
ಗಿನ್ನೇಗೆಯ್ವೆನೆನುತ್ತುಂ ।
ಬಿನ್ನವಿಸಲ್ ಭೀಮಧನ್ವನೆರ್ದೆ*ಗೆಟ್ಟಿರ್ದಂ ॥ ೬೦

ಅಂತು ಕಳ್ಳರಂ ಗೆಲ್ದು ಆತನಂ ಸಂಕಲೆಯೊಳಿಕ್ಕಿದುದರ್ಕೆ ಮೆಚ್ಚಿ ವಣಿಗ್ವರನೆನ್ನಂ ಮನ್ನಿಸಿ ಬಳಿಯಂ,

ಸ್ವಾದೂದಕದಶನಂ ಚೆ ।
ಲ್ವಾದಾತಾಂಬೂಲಮೆಯ್ದೆ ಸವಿಯಲ್ ತತ್ಸಂ ॥
ಪಾದನೆಗೆ ವಣಿಗ್ವರನ ।
ತ್ಯಾದರದಿಂ ಪಟಮನೆತ್ತಿ ತಡಿಗೇಱಿಸಿದಂ ॥ ೬೧

ಅಂತು ತಡಿಗೆ ಬರ್ಪನನಾಗಂ ತಡಿಗಿೞಿದೊಂದು ಕಡೆಯುಂ ನೋೞ್ಪನ್ನೆಗಂ,

ಭಾರತದಂತೆ ಭೀಮನಕುಲಾರ್ಜುನವಿಕ್ರಮದಿಂ ನೆಗಳ್ದಿ ದೈ ।
ತ್ಯಾರಿಯ ವಕ್ಷದಂತೆ ಭೃಗುಸಂಪದದಿಂ ಹರನಂತೆ ಸದ್ಗುಹಾ ॥
ಕಾರವಿಳಾಸದಿಂ ರಘುಜನಂತೆ ವಿಚಿತ್ರಧರಿತ್ರಸಂಭವ್ರೋ ।
ದಾರದಿನಿರ್ದುದೊಂದು ಕುಧರಂ ಗಗನಸ್ಥಳಮಂ ತುಡುಂಕುತುಂ ॥ ೬೨

ಅದಂ ಕಂಡಲ್ಲಿಗೆಯ್ದಲದಱ ನಿತಂಬದಲ್ಲಿ

ಕುಮುದಾಬ್ಜಸ್ಥಿತಿ ರಾಜಹಂಸಗತಿಯಿಂ ಚೆಲ್ವಪ್ಪಿನಂ ತಣ್ಣನ ।
ಪ್ಪಮೃತಂ ಸಾರ್ದನಿಮೇಷಸಂತತಿಗೆ ಪೆರ್ಚಂ ಮಾಳ್ಪನಂ ಕೂಲವಿ ॥
ದ್ರುಮಮೊಳ್ಪಿಂದನುರಾಗಮಂ ಪಥಿಕರೊಳ್ ಕೂರ್ತೀವಿನಂ ಚಿತ್ತವಿ ।
ಭ್ರಮಮಂ ಪುಟ್ಟಿಸುತಿರ್ದದದ್ರಿತಟದೊಳ್ ತಾನಾಗಳಂ ಪೂಗೊಳಂ ॥

ಅಂತಿರ್ದ ಪೂಗೊಳನಂ ಕಂಡಲ್ಲಿ ನೀರ್ಗುಡಿಯಲೆಂದು ಪೋಪಲ್ಲಿ

ಕಿಡಿಯಂ ಸೂಸುವ ಕಣ್ ಕರಾಳವದನಂ ಕೂರ್ದಾಡೆ ಕೆಮ್ಮಾಸೆ ನಿ ।
ಟ್ಟೊಡಲಾರ್ವಾನಳದೇಹದೀಪ್ತಿಯಡರ್ದದೂರ್ರುದ್ವಯಂ ನೀಳ್ದ ಕೆಂ ॥
ಜೆಡೆ ಕಾಳಾಯಸದಂಡಹಸ್ತಮೆನಸುಂ ಚೆಲ್ವಾಗಲೊರ್ಬಂ ಕರಂ ।
ದಡಿಗಂ ರಕ್ಕಸನೆನ್ನಿದಿರ್ಗೆ ಮುಳಿಸಿಂದೇೞ್ತಂದನಾಶ್ಚೈಲದಿಂ ॥ ೬೪

ಅಂತು ಬಂದೊರ್ಬ ಬ್ರಹ್ಮರಾಕ್ಷಸನೆನ್ನ ಪ್ರಶ್ನೆಗುತ್ತರಮಂ ಕೊಟ್ಟು ನೀರ್ಗುಡಿಯೆಂದಿಂತೆಂದಂ:—

(ಪ್ರಶ್ನೆಗಳ್)

ಕ್ರೂರಮದಾವುದು ಗೃಹಪಿ ।
ಸ್ತಾರಂ ತಾನಾವುದೆಸೆವ ಕಾಮದ ನೆಲೆಯೇಂ ॥
ಬಾರಿಯ ದುಃಖದ ಸಾಧನ ।
ಮಾರಯ್ಯಲದಾವುದೆನಗೆ ಪೇೞನುನಯದಿಂ ॥ ೬೫

ಎಂದೊಡಾನಿಂತೆಂದೆಂ:—

ಸ್ತ್ರೀಹೃದಯಂ ಕ್ರೂರಂ ನಿಜ ।
ಗೇಹಸುಖಂ ಸತಿಯರೊಳ್ಪು ಕಾಮಂ ಚಿತ್ತಂ ॥
ಸ್ನೇಹದ ಸಂಕಲ್ಪಂ ಮತಿ ।
ಯೂಹೆ ಮಹತ್ಕಾರ್ಯಸಾಧನಂ ತಾನಲ್ತೇ ॥ ೬೬

ಎಂದು ಮತ್ತಂ,

ಧೂಮಿನಿ ನೆಗೞ್ತೆ ರಂಜಿಪ ।
ಗೋಮಿನಿ ಪೆಂಪಿಂ ನಿತಂಬವತಿ ನಿಂಬವತೀ ॥
ನಾಮಮಂ ಮೆಱೆವಬಲೆಯರೊಳ್ ।
ಧೀಮರ್ಾ ತ್ವತ್ಪ್ರಶ್ನೆಯರ್ಥಮೆಸೆದಪ್ಪುವಸುರಾ ॥ ೬೭

ಅದೆಂತೆಂದು ರಾಕ್ಷಸಂ ಕೇಳಲಾನಿಂತೆಂದೆಂ:—

ಮೇದಿನಿಯೊಳ್ ಪ್ರಸಿದ್ಧಿವಡೆದಿರ್ಪ ತ್ರಿಗರ್ತದ ದೇಶದೊಳ್ ನಿಜಾ ।
ಹ್ಲಾದದಿನಾವಗಂ ಧನಿಕಧನ್ಯಕಧಾನ್ಯಕರೆಂಬ ಮೂವರುಂ ॥
ಸೋದರರಾದ ವೈಶ್ಯಪತಿಗಳ್ ಮೆಱೆಯುತ್ತಿರೆ ತದ್ಧರಿತ್ರಿಗಂ ।
ದಾದುದು ಘೋರವಪ್ಪ ಬಱನೊರ್ಬರನೊರ್ಬರಡುತುರ್ ತಿಂಬವೋಲ್ ॥

ಕ್ಷಾಮಮುಮಡುತುರ್ ಧಾನ್ಯತೃಣಪತ್ರಜಲಂ ತವಿಲಾಗಲೆಲ್ಲರುಂ ।
ಗೋಮಹಿಷೀಪ್ರತಾನದಡಗಂ ತವೆ ತಿಂದು ನಿರಂತರಂ ಮನು ॥
ಷ್ಯಾಮಿಷಮಂ ತಿನಲೊಡಗಲನ್ಯಜನಂ ನೆಱೆ ತೀರ್ದರ್ ಪೆಂಡಿರಂ ।
ಪ್ರೇಮದ ಪುತ್ರರಂ ಸೊಸೆಯರಂ ಕ್ರಮದಿಂ ತಿನುತಿರ್ದರಾವಗಂ ॥ ೬೯

ಅಂತು ಬಱನಱೆಯುಟ್ಟಲೊರ್ಬರನೊರ್ಬರ್ ತಿನುತ್ತಿರೆ,

ಧನಿಕಂ ಧನ್ಯಂ ಧಾನ್ಯಕ ।
ನನುಪೂರ್ವಕ್ರಮದಿನೊರ್ಬರೊರ್ಬರ ವನಿತಾ ॥
ಜನಮಂ ತಿನಲನುಗೆಯ್ದರ್ ।
ಮನಮೊಳಸಲ್ ಜಠರವಹ್ನಿಯೇಂ ಕೇವಲಮೋ ॥ ೭೦

ಅಂತು ಧನಿಕಧನ್ಯಕರ್ ತಮ್ಮಿರ್ಬರ ಕಾಂತೆಯರನೆಲ್ಲರ್ ಕೂಡಿ ತಿಂದನಂತರಂ ಧಾನ್ಯಕನ ಕಾಂತೆಯಪ್ಪ ಧೂಮಿನಿಯುಂ ನಾಳೆ ತಿನಲೆಂದುದ್ಯೋಗಿಸುವುದಂ ಧಾನ್ಯಕನಱಿದು,

ಇವರ್ಗಳ ಸಂಗಮಂ ತೊಱೆದು ಕಾನನದೊಳ್ ನವಕಂದಮೂಲಪ ।
ಲ್ಲವಚಯಭೈಕ್ಷದಿಂ ಬಱನನೊಯ್ಯನೆ ನೀಗುವೆನೆಂದು ಧಾನ್ಯಕಂ ॥
ಯುವತಿಯನಾಪಿನಿಂ ಪೆಗಲನೇಱಿಸಿ ಕೊಂಡಿರುಳೆಟ್ದಿರಣ್ಯಮಾ* ।
ರ್ಗವನೊಲವಿಂದೆ ಪತ್ತಿ ಬರುತಿರ್ದನವಂ ಮಿಗೆ ರಾಕ್ಷಸೇಶ್ವರಾ ॥ ೭೧

ಅಂತರಣ್ಯಮಾರ್ಗಕ್ಕೆ ಪೋಪಾಗಳ್
ಕರಚರಣರಹಿತನೊರ್ವಂ ।
ಪೊರಳುತ್ತಿರಲೂರ ಪೊಱಗೆ ಪೋಟನನೆನ್ನಂ॥
ಕರುಣಿಸಿ ಪೊರೆದಪರಾರೆಂ ।
ದು ರೋದನಂಗೆಯ್ಯುತುಂ ಕರಂ ಸುಯ್ಯುತ್ತುಂ॥ ೭೦

ಅಂತಿರ್ದ ಪೋಟನಂ ಧಾನ್ಯಕಂ ಕಂಡು,

ಕರುಣಿಸಿಯವನಂ ಧಾನ್ಯಕ ।
ನುರುಮುದದಿಂದೊಂದು ಪೆಗಲನೇಱಿಸಿ ಕೊಂಡಾ ॥
ದರದಿಂ ಮೆಲ್ಲನೆ ನಡೆಗೊಂ ।
ಡರಣ್ಯಮಂ ಪೊಕ್ಕದೊಂದು ತಾಣದೊಳಿರ್ದಂ ॥ ೭೭

ಚೂತಕುಜಾತಮಿಪ್ಪೆಯರನೇಱಿಲು ಬಿಕ್ಕೆ ಬೆಳಲ್ ತಳಿರ್ತ ನಾ ।
ನಾತರು ತೀವಿದೊಂದು ತರುಮಧ್ಯದೊಳೊಪ್ಪುವಗಾಧಕೂಪದಿಂ ॥
ನೂತನಶೋಭೆಯಂ ತಳೆದ ತಾಣಮದೊಪ್ಪಿರಲಿರ್ದನಲ್ಲಿ ಸಾ ।
ಖ್ಯಾತಿಶಯಂ ಕರಂ ನೆಲಸೆ ಧೂಮಿನಿಸಂಯುತನೊಲ್ದು ಧಾನ್ಯಕಂ ॥ ೭೮

ಅಂತಿರ್ದು

ಫಲಕಂದಮೂಲನಾನಾ ।
ಪಲಂಗಳಾನಾರ್ಪಿನಿಂದೆ ತಂದು ನಿತಾಂತಂ॥
ಲಲನೆಯುನಾಪೋಟನನ ।
ಗ್ಗಳದಿಂ ಪೊರೆಯುತ್ತೆ ಧಾನ್ಯಕಂ ಸುಖಮಿರ್ದಂ ॥ ೭೫

ಅಂತಿರ್ದೊಂದು ದಿವಸಂ

ಪಲವು ದಿನಕ್ಕೆ ತಕ್ಕಶನಮಂ ಕಡುಪಿಂ ಗಳಿಸಲ್ಕೆ ವೇೞ್ಕುಮೆಂ ।
ದಲಸದೆ ಧಾನ್ಯಕಂ ಪಿರಿದು ದೂರದರಣ್ಯಕೆ ಪೋಗಲಿತ್ತಲ ॥
ಗ್ಗಲಿಸಿದನಂಗತಾಪದೊಗಮಿಂ ನಿಲಲಾಱದೆ ಪೋಟನೊಳ್ ಮನಂ ।
ಚಲಿಸದ ಕೂಟಮಂ ಬಯಸಿದಳ್ ಮಿಗೆ ಧೂಮಿನಿ ಸೀಮೆಗೆಟ್ಟವಳ್ ॥ ೭೬

ಏಕಾಕಿನಿ ಪತಿವಿರಹಿಣಿ ।
ಯೇಕಾಂತಸ್ಥಾನಮೊರ್ವ ಪುರುಷಸಮೀಪಂ ॥

ಪ್ರಾಕೃತಸತಿ ತಾನಾಗಿರ ।
ಲಾಕೆಯು ನಿಜಬುದ್ಧಿ ಚಲಿಸದಿರ್ಪುದೆ ಸತತಂ ॥ ೭೭

ಅದುಕಾರಣಂ

ಮೋಟನೊಡಂಬಡದಿರೆಯುಂ ।
ಬೇಟದ ಕೋಟಲೆಯೊಳವನ ಮೇಲ್ವಾಯ್ದು ಕರಂ ॥
ಕೂಟವುನೊಡರ್ಚಿದಳ್ ಸ್ತ್ರೀ ।
ನಾಟಕವುಂ ನಂಬುವವನೆ ಗಾವಿಲನಲ್ತೇ ॥ ೭೮

ಅಂತಾಧೂಮಿನಿ ಕಾಮೋದ್ರೇಕದಿಂ ಮೋಟನೊಳ್ ಕೂಟಮನೆಸಗುತ್ತಿರೆ ಮಱುದೆವಸಂ,

ವನತೃಣಧಾನ್ಯಮುಂ ಸುರಸಪಕ್ವಫಲಂಗಳನಿಂಪ್ರವೆತ್ತ ಮಾಂ ।
ಸವನತಿಸೀಪೆಯುಪ್ಪು ಮಧುವಂ ಪಲವುಂ ದಿವಸಕ್ಕೆ ತಕ್ಕವ ॥
ಸ್ತುವನನುರಾಗದಿಂ ಗಳಿಸಿಕೊಂಡು ನಿಜಾಂಗನೆಯಿರ್ದ ತಾಣಮಂ ।
ತವಕದಿನೆಯ್ದಿದಂ ಪದೆದು ಧಾನ್ಯಕನುಗ್ರನಿದಾಘಕಾಲದೊಳ್ ॥ ೭೯

ಅಂತು ಧಾನ್ಯಕಂ ಬಂದು ಪೊತ್ತ ಪೊಱೆಯುಂ ಪೊಱಗಿರಿಸಿ,

ಮಾರ್ಗಶ್ರಮದಿಂ ಬೆಮರ್ಗಳ್ ।
ಭೋರ್ಗರೆದವಯವದೊಳೆಯ್ದೆ ಸುರಿಯುತ್ತಿರೆ ಸ ॥
ನ್ಮಾರ್ಗನಿಧಿ ವೈಶ್ಯಪುತ್ರಂ ।
ನೀರ್ಗುಡಿಯಲ್ ಬೇಡಿದಂ ನಿಜಪ್ರಿಯಸತಿಯುಂ ॥ ೮೦

ಅಂತು ನೀರ್ಗುಡಿಯಲ್ ಬೇಡಲೊಡಂ

ನರಳುತ್ತುಂ ಸುಯ್ಯುತ್ತುಂ ।
ಶರೀರ ವಶವಲ್ತೆನುತ್ತೆ ಧೂಮಿನಿ ಪತಿಗ ॥
ಚ್ಚರಿಯೆನೆ ಸೇದೆಯು ನೇಣಂ ।
ಕರಗವುನೊಲ್ದಿತ್ತು ಸೇದಿ ನೀರ್ಗುಡಿಯೆಂದಳ್ ॥ ೮೧

ಎಂದೊಡಾತಂ ನೀರನೆಯ್ದುತಿರ್ಪಾಗಳ್,

ಸಲೆ ಸಂಧ್ಯಾಂಗನೆ ಪಶ್ಚಿಮ ।
ಜಲನಿಧಿಯೊಳ್ ಜಲಜಮಿತ್ರನಂ ನೂಂಕುವವೋಲ್ ॥

ಮುಳಿಸಿಂ ಧೂಮಿನಿ ಕೂಪ ।
ಸ್ಥಲದೊಳ್ ಧಾನ್ಯಕನನಳುರ್ದು ನೂಂಕಿದಳಾಗಳ್ ॥ ೪೨

ತೊಲಗಣ ಮೃತ್ಯುದೇವತೆಯುವೊಲ್ ಸತಿ ಪಿಂತನೆ ಬಂದು ಗಂಡನಂ ।
ತಲೆಕೆಳಗಾಗಿ ಗುಣ್ಪೆಸೆವ ಬಾವಿಯೊಳೋವದೆ ನೂಂಕಿ ಪೋಟನೊಳ್ ॥
ಚಲಿಸದ ಸಂಗಮಂ ತಳೆದು ತದ್ವನದೊಳ್ ಸಲೆ ನಾಲ್ಕೆರಲ್ಪಿನಂ ।
ನೆಲಸಿ ಬೞಿಕ್ಕವಳ್ ಪದೆದು ಪೋಟನನಾಂತು ತಳರ್ದಳಲ್ಲಿಯಿಂ ॥ ೪೩

ತಾಟಕೆಯಂತೆ ವರ್ತಿಸುವ ಧೂಮಿನಿ ಬಾವಿಗೆ ನೂಂಕಿಯಾಳ್ದನಂ ।
ಪೋಟನನೆತ್ತಿಕೊಂಡು ಮನವೊಲ್ದು ಪತಿವ್ರತೆಯೆಂಬುದೊಂದು ಬ ॥
ಲ್ನಾಟಕಮಂ ಕರಂ ನಟಿಸಿ ನಾಲ್ದೆಸೆಯೊಳ್ ತೊೞಲುತ್ತುದೊಂದು ಭ ।
ದ್ರಾಟವಿಯೆಂಬ ಪತ್ತನಮನೆಯ್ದಿದಳಾಕೆ ಮನೋನುರಾಗದಿಂ ॥ ೪೪

ಅಂತು ಭದ್ರಾಟವಿಯೆಂಬ ಪತ್ತನಕ್ಕೆ ಬಂದು ಅಲ್ಲಿ ನೀತಿವಿಳಾಸನೆಂಬರಸಿನಿಂ ಮನ್ನಿಸಿಕೊಳುತ್ತಿರೆ,

ಮಡದಿಯ ಭರ್ತೃಭಕ್ತಿ ಪೊಸತಲ್ತೆ ಕರಂ ಪತಿ ಪೋಟನಾದೊಡಂ ।
ಬಿಡದನುರಾಗದಿಂ ಪೆಗಲನೇಱಿಸಿಕೊಂಡು ತೊೞಲ್ದು ನಿಂದೆಯೊಳ್ ॥
ತೊಡರದೆ ಸರ್ವರುಂ ತನಗೆ ಕೆಯ್ಮುಗಿದಿರ್ಪತಿಭಾಗ್ಯದೊಳ್ಪಮಂ ।
ಪಡೆದವಳಾವಳೀಕೆಯವೊಲೆಂದೊಸೆದಿರ್ಪುದು ಪೌರನಾರಿಯರ್ ॥ ೪೫

ಅಂತವಳ್ ಭದ್ರಾಟವಿಯೊಳಿರಲಿತ್ತಲ್

ಕೆಲವರ್ ಪಥಿಕರ್ ಬರುತ ।
ಗ್ಗಲಿಸಿದ ತೃಷೆಯಿಂ ಬಿಗುರ್ತು ತತ್ಕಾನನದೊಳ್ ॥
ಜಲಮನರಸುತ್ತೆ ಬಂದಾ ।
ಗಳೆ ಕಂಡರ್ ವೈಶ್ಯನಿರ್ದ ಕೂಪಸ್ಥಲಮಂ ॥ ೪೬

ಅಂತಾಪಥಿಕರಾಬಾವಿಯುಂ ನೋೞ್ಪಿನಂ,

ಸ್ತ್ರೀಗೆ ಕಡುಕೂರ್ತ ಮನುಜರ ।
ಧೋಗತಿಯೊಳ್ ಬೀೞ್ವರೆಂಬುದಂ ಸಲೆ ತೋರ್ಪಂ ॥
ತಾಗಳ್ ಧಾನ್ಯಕನಿರ್ದಂ ।
ನಾಗಾಲಯದಂತಿರೆಸೆವ ಕೂಪಾಂತರದೊಳ್ ॥ ೪೭

ಅಂತಿರ್ದನಂ ಕಂಡು

ತೋಳ ಕಡುಪಿಂದದೊರ್ಬ ದ ।
ಯಾಳು ಮಹಾಕೂಪದಿಂದೆ ಧಾನ್ಯಕನಂ ನೇ ॥
ರ್ಗ್ಗಲಿಂ ತೆಗೆಯಲ್ ಬಂದಂ ।
ಗಾಳದ ನೇಣ ತೊಡರ್ದ* ಮಿಾನವೊಲ್ ತಡಿಗಾಗಳ್ ॥ ೮೮

ಅಂತು ತೆಗೆಯೆ ಧಾನ್ಯಕಂ ಪುನರ್ಜಾತನಾಗಿ,

ಕೃಪೆಯಿಂದಂ ಪ್ರಾಣಮನೊ ।
ಲ್ದುಪಕರಿಸಿದವಂಗೆ ಮಾಳ್ಪನಾವಂ ಕೇಳ್ ಪ್ರ ॥
ತ್ಯುಪಕಾರಮನೆಂದು ನಿಷಾ ।
ಧಿಪನವನಂ ಪಲವು ತೆಱದೊಳೊಲವಿಂ ಪೊಗಳ್ದಂ* ॥ ೮೯

ಅಂತು ಪೊಗಳ್ದು ಸಂತೋಷಮನೆಯ್ದಿಯನಂತರಂ,

ಅವಿರಳದೇಶಾಂತರಮಾ ।
ರ್ಗವಿನೋದದಿನೆಯ್ದಿ ಧಾನ್ಯಕಂ ಬರೆವರೆ ಸಂ ॥
ಭವಿಸಿದ ಮುದದಿಂ ಭದ್ರಾ ।
ಟವಿಗೇಳ್ತಂದಂ ಯದೃಚ್ಛೆಯಿಂ ಕೇಳಸುರಾ ॥ ೯೦

ಅಂತು ಭದ್ರಾಟವಿಗೆ ಬಂದು

ಕೇರಿಯ ಚೆಲ್ವನಂಗಡಿಯ ಸೊಂಪನಿಳಾಧಿಪಗೇಹರಮ್ಯಮಂ ।
ವಾರವಿಳಾಸಿನೀಗೃಹವಿಳಾಸಮನೊಪ್ಪುವ ಸೂಳೆಗೇರಿಯಾ ॥
ಕಾರಮನಾನೆಸಾಲೆಗಳ ಸಂಭ್ರಮಮಂ ಪುರಮಧ್ಯದೇವತಾ ।
ಗಾರವಿಶೇಷಮಂ ಪಡೆದು ಧಾನ್ಯಕನೀಕ್ಷಿಸುತಿರ್ದನಾವಗಂ ॥ ೯೧

ಅಂತೆಲ್ಲೆಡೆಯೊಳ್ ತೊಱಲುತ್ತಿರ್ದ ಧಾನ್ಯಕನಂ ಕೈತವಪತಿವ್ರತೆಯಪ್ಪ ಧೂಮಿನಿ ಕಂಡು

ನೀತಿವಿಳಾಸನೃಪಾಲಂ ।
ಗೋತಱಿಪುವೆನಿವನನೀಕ್ಷಣಂ ಕೊಲಿಸುವೆನೆಂ ॥
ದಾತುರದೊಳೆಯ್ದಿದಳ್ ದು ।
ರ್ನೀತಿಯೊಳರಮನೆಗೆ ಧೂರ್ತೆ ಧೂಮಿನಿಯಾಗಳ್ ॥ ೯೨

ಅಂತರಮನೆಗೆ ಪೋಗಿ ಬಾಗಿಲೊಳಿರ್ದು ಪತಿವ್ರತೆ ಬಂದಿರ್ದಳೆಂದು ನೀತಿವಿಳಾಸಂಗಱಿಪೆಂದು ದೌವಾರಿಕರ್ಗೆ ಪೇೞಲವರ್ ಪೋಗಿ

ನೃಪತಿ ಪತಿವ್ರತೆ ಬಂದಿ ।
ರ್ದಪಳರಮನೆಯೆಸೆವ ಬಾಗಿಲೊಳ್ ಸಮಯಂಬಾ ‖
ರ್ದುಪಚರಿಸಿ ಕರೆಯಲೋ ಕಾ ।
ಣ್ಬ ಪೊೞ್ತಿದಲ್ಲೆಂದು ಕಳಿಪಲೋ ಬೆಸಸೊಲವಿಂ ‖ ೯೩

ಎಂಬುದುಮರಸಂ ಪರಮಪತಿಭಕ್ತೆಯಂ ಕರೆಯೆಂದು ಕರೆಯಿಸಲವಳ್ ಬಂದರಮನೆಯುಂ ಪೊಕ್ಕರಸನಂ ಕಂಡಿಂತೆಂದಳ್:—

ನೀತಿವಿಳಾಸ ಕೇಳ್ ಪೆಗಲೊಳಾಂತ ಮದೀಶನ ಹಸ್ತಪಾದಮಂ ।
ಘಾತಕನಾರ್ಪಿನಿಂ ಕಡಿದ ಪಾತಕನಿಲ್ಲಿಗೆ ಬಂದನಾತನಂ ‖
ಭೂತಪಿಶಾಚಸಂತತಿಗೆ ದಿಗ್ಬಲಿಗೊಟ್ಟು ಕರಂ ಪತಿವ್ರತಾ ।
ಪ್ರೀತಿಯನೀವುದೆಂದು ನೃಪನೊಳ್ ಮಿಗೆ ಧೂಮಿನಿ ಪೇೞ್ದಳಾಕ್ಷಣಂ ‖ ೯೪

ಅಂತು ಪೇೞ್ದು ಮತ್ತಂ

ಅತಿದುಷ್ಟಶಾಸ್ತಿ ಶಿಷ್ಟ ।
ಪ್ರತಿಪಾಲನೆಯಿಲ್ಲದರಸಿನರಸುತನಂ ಹಾ ‖
ಸ್ಯತೆವಡೆದು ಹಗರಣಿಗರರ ।
ಸುತನಂ ತನಗಕ್ಕುಮಲ್ತೆ ಕಜ್ಜದ ಕಡೆಯೊಳ್ ‖ ೯೫

ಮಳೆ ಕೊಳ್ಳದು ಕಾಲದೊಳೆಳೆ ।
ಫಲವಾಗದು ಧಾನ್ಯವಸ್ತುವಾಹನನಿಚಯಂ ‖
ನೆಲಸವು ಪತಿವ್ರತಾವಾ ।
ಕ್ಯಲಂಘನಂಗೆಯ್ವಲರಸ ಕೇಳದು ಸತ್ಯಂ ‖ ೯೬

ಎಂದು ದೃಢಮಪ್ಪಂತು ಪೇೞ್ದವನಂ ಕೊಲ್ಲಿಸಿದೊಡಲ್ಲದೆ ಇಲ್ಲಿಂ ಪೋಗೆನೆಂದಿರ್ಪುದುಂ,

ಪುರಮಿದು ಚೋದ್ಯಮೆನಲ್ಕಾ ।
ದುರಾತ್ಮನಂ ಕೇರಿಕೇರಿಯೊಳ್ ಮೆಱಸಿ ದಿಶಾಂ ‖
ತರದೊಳ್ ಕಡಿದು ಬಿಸುಟ್ಟತಿ ।
ನಿರವಯಲೆಯ್ದಿಸುವುದೆಂದು ಬೆಸಸಿದನರಸಂ ‖ ೯೭

ಅಂತು ಪೇಸಲೊಡಂ ತಳವಱರ ಪತಿವ್ರತೆಯ ಗಂಡನೆ ಕೆಯ್ಕಾಲ್ಗಳಂ ಕಡಿದ ದುರಾತ್ಮಂ ಸಿಲ್ಕಿದನೆಂದಾತನಂ ಪಿಡಿದು

ಪೆಡಗೆಯ್ಯಂ ಪಿಡಿದೀಟಿಂದ್ದು ಕಟ್ಟಿ ತಲೆಯೊಳ್ ಪೂವಮಾಲೆಯಂ ಸುತ್ತಿ ಬೊ।
ಬ್ಬಿಡುತುಂ ಭಂಡಿಯ ಮೇಲೆ ಕುಳ್ಳಿರಿಸಿ ನಾನಾವಾದ್ಯದಿಂ ಪೆರ್ಚನಿಂ ॥
ಗಡಿಯೊಳ್ ಕೇರಿಯೊಳಾತನಂ ಮೆಱಸಿ ಖಂಡಂಗೊಯ್ವೆನೆಂಬಾಗಳಾಂ ।
ಕಡಿದಂಗಂಗಳ ಮೋಟನಂ ಕರೆಸಿಮೆಂದಂ ಧಾನ್ಯಕಂ ಧೈರ್ಯದಿಂ ॥ ೯೮

ಎಂಬುದುಮಾತಳವಱರಿವನಂ ದಿಗ್ಬಲಿಗುಡುವುದಂ ನೋಡಲ್ವೇಳ್ಕೆಂದು ಮೋಟನಂ ಧಾನ್ಯಕನೆಡೆಗೆ ಕೊಂಡು ಬರ್ಪುದುಂ

ಕಾಣಲೊಡನಶ್ರುವಿಂ ಮುಂ ।
ಗಾಣದೆ ಗಡಗಡನೆ ನಡುಗಿ ಮೋಟಂ ತನ್ನಾ ॥
ಪ್ರಾಣಂ ಬಂದಂತಾಗಳ್ ।
ಮಾಣದೆ ಧಾನ್ಯಕನ ಮೆಱೆವ ಕಾಲ್ಗೆಱಗಿರ್ದಂ ॥ ೯೯

ಅಂತು ಕಾಲ್ಗೆಱಗಿ,

ಅರೆವೆಣನಾಗಿರೆ ಪ್ರಜ್ಞೆಯೊಳ್ ।
ಮಱುಗುತ್ತಿರ್ದೆನ್ನನೆತ್ತಿ ಕೊಂಡಾವನದೊಳ್ ॥
ಬಱನೊಳ್ ಸಾಕಿದ ನಿನ್ನಂ ।
ಮಱೆದೊಡೆ ನರಕಕ್ಕೆ ಭಾಜನಂ ತಾನಲ್ತೇ ॥ ೧೦೦

ಎಂಬ ಮೋಟನ ಮಾತಿಂಗೆ ತಳವಱರ ವಿಸ್ಮಯಂಬಟ್ಟು ಧಾನ್ಯಕನಂ ಮೋಟನಂ ನೀತಿವಿಳಾಸನೆಡೆಗೆ ತಂದು ತತ್ಕಾತುಕಮಂ ಪೇೞೆ, ನೀತಿವಿಳಾಸಂ ಮೋಟನೊಳಂತೆಂದಂ:—

ಏಲೆ ಮಹಿಮ ಪಾತಕನ ಕಾ ।
ಲ್ಗಳ ಮೇಲೆಱಗಿರ್ದಿಯೇಕೆ ನಿನ್ನಯ ಕೈಕಾ ॥
ಲ್ಗಳನೋವದೆ ಕಡಿದುಂ ಮಗು ।
ೞ್ದಿಳೆಯೊಳ್ ಸಾಧುವಿನ ತೆಱದಿನಿರ್ದಪನಲ್ತೇ ॥ ೧೦೧

ಎಂಬುದುಂ ಮೋಟನಿಂತೆಂದಂ: —

ಎನ್ನ ಪಿತೃಮಾತೃಗುರುವೀ ।
ತನ್ನಟ್ಟನೆ ಪುತ್ರನಪ್ಪೆನೀತಂಗಾಂ ಕೇ ॥

ಳೆನ್ನ ಕಠಜಠರಣವೂಂ ಮಿಗೆ ।
ಮುನ್ನೆ ಸಗಿದ ಕರ್ಮದಿಂದೆ ಪೋದುವಿಳೇಶಾ ॥ ೧೦೨

ಎಂದರಸಂಗೆ ಪೂರ್ವವೃತ್ತಾಂತಮೇನುಮುಱಿಯದಂತು ಪೇಳ್ದು ಮತ್ತ ಮಿಂತೆಂದಂ:—

ಪಗೆಯ್ಯಂ ದುರ್ಬಲಂ ಧೂಮಿನಿ ಮನದಳುಪಿಂ ಮೇಲೆ ಬೀೞಿಕ್ಕೆ ಪೇಡಂ।
ದಾಗಂ ನೂಂಕಲ್ಕೆ ಕೆಯ್ಯಿಲ್ಲಳವಿಗೞಿದು ಪೋಗಲ್ಕೆ ಕಾಲಿಲ್ಲ ತನ್ನೊಳ್ ॥
ಕೂಗಿಟ್ಟಂ ಪೇೞ್ದೊಡಂ ತನ್ನಯ ಬರವನಿತಂ ಕಾಣೆನಂತಿರ್ದೊರ್ಹೆನ್ನೊಳ್
ಬೇಗಂ ನಾಣ್ಗೆಟ್ಟು ತನ್ನಂಗನೆ ನಗೆಗೆಡೆಯುಂ ಮಾಡಿದಳ್ ಪೇೞ್ವೆನೇನಂ ॥

ಎಂಬುದುಂ ನೀತಿವಿಳಾಸಂ ವಿಸ್ಮಯಂಬಟ್ಟು, ಅವಿಚಾರದಿಂದೆನಗೆ ದೋಷಂ ಬರುತ್ತಿರ್ದುದೆಂದು ಕೇಳ್ದೊಳಿರ್ದ ಧೂಮಿನಿಯುಂ ನೋಡಿ,

ಎಲೆ ಪಾತಕಿ ನಿಜಕಾಂತನ ।
ನುೞಿದೀಮೋಟಂಗೆ ಕೂರ್ತು ಪತಿಹಿತೆಯೆಂಬೀ ॥
ಬಲೆಯುಂ ಬೀಸಿ ಧರಾವಂ ।
ಡಲಮುಂ ವಂಚಿಸಿದೆ ನೋಡಲಾಗದು ನಿನ್ನಂ ॥ ೧೦೪

ಎಂದು ಧಾನ್ಯಕಂಗೆ ಮಾಡುವ ಶಾಸ್ತ್ರಿಯುಂ ಧೂಮಿನಿಗೆ ಮಾಡಿಯನಂತರಂ

ಗುಣನಿಧಿ ಧಾನ್ಯಕಂಗೆ ಸುಮುಹೂರ್ತದೊಳೊಲ್ದು ವಿಲಾಸಿನೀಕುಲಾ ।
ಗ್ರಣಿಯೆನಿಸಿರ್ಪ ವೈಶ್ಯಕುಲಕನ್ನಿಕೆಯುಂ ತರಿಸಿತ್ತು ನಲ್ಮೆಯಿಂ ॥
ವಣಿಗಧಿನಾಥನೆಂಬ ಪೆಸರಿಟ್ಟೊಲವಿಂ ಪೊರೆದಂ ನೆಗೞ್ದ ಧಾ ।
ರಿಣಿಪತಿ ಕೇಳ್ ನಿಶಾಚರ ದುರಾತ್ಮಿಕೆ ಧೂಮಿನಿ ಮಾಡಿದರ್ಥಮಂ ॥ ೧೦೫

ಅದಱಿಂ ಸ್ತ್ರೀಹೃದಯಂ ಕ್ರೂರಮೆಂದು ಬ್ರಹ್ಮರಾಕ್ಷಸಂಗೆ ಪೇೞ್ದು ಗೋಮಿನೀವೃತ್ತಾಂತಮುಮಂ ಪೇೞಲ್ ತಗುಳ್ದನದಂತೆನೆ:—

ಪ್ರಕಟಪ್ರಸ್ತುತಿವೆತ್ತ ಕಾಂಚಿಪುರದೊಳ್ ವಿಖ್ಯಾತಿಯಿಂದಿರ್ಪ ಶ ।
ಕ್ತಿಕುಮಾರಾಖ್ಯನದೊರ್ಬ ತಾಂ ಮದುವೆಯಾಗಲ್ವೇೞ್ಕುಮೊಲ್ದನ್ನ ಚಿ ॥
ತ್ತಕೆ ಬರ್ಪಂತು ಸಲಕ್ಷಣಂ ಮೆಱೆವ ಜಾಯಾಸದ್ಗುಣಂ ತೋರ್ಪ ಕ ।
ನ್ನಿಕೆಯುಂ ಕಾಣೆನೆನುತ್ತಮಂ ಮನದೊಳಂದುದ್ವೇಗಮುಂ ತಾಳ್ದಿದಂ ॥ ೧೦೬

ಅಂತು ಚಿಂತೆಯುಂ ತಾಳ್ದು ಮತ್ತಂ

ಅಂತು ಬೆಸಸಲೊಡಂ ತಳವಱರ ಪತಿವ್ರತೆಯ ಗಂಡನ ಕೆಯ್ಕಾಲ್ಗಳಂ ಕಡಿದ ದುರಾತ್ಮಂ ಸಿಲ್ಕಿದನೆಂದಾತನಂ ಪಿಡಿದು

ಪೆಡಗೆಯ್ಯಂ ಪಿಡಿದೀೞ್ದು ಕಟ್ಟಿ ತಲೆಯೊಳ್ ಪೂವಮಾಲೆಯುಂ ಸುತ್ತಿ ಬೊ।
ಬ್ಬಿಡುತುಂ ಭಂಡಿಯ ಮೇಲೆ ಕುಳ್ಳಿರಿಸಿ ನಾನಾವಾದ್ಯದಿಂ ಪೆರ್ಚಿನಿಂ ॥
ಗಡಿಯೊಳ್ ಕೇರಿಯೊಳಾತನಂ ಮೆಱಸಿ ಖಂಡಂಗೊಯ್ವೆನೆಂಬಾಗಳಾಂ ।
ಕಡಿದಂಗಂಗಳ ಮೋಟನಂ ಕರಸಿಮುಂದಂ ಧಾನ್ಯಕಂ ಧೈರ್ಯದಿಂ ॥ ೯೮

ಎಂಬುದುಮಾತಳವಱರಿವನಂ ದಿಗ್ಬಲಿಗುಡುವುದಂ ನೋಡಲ್ವೇೞ್ಕೆಂದು ಮೋಟನಂ ಧಾನ್ಯಕನೆಡೆಗೆ ಕೊಂಡು ಬರ್ಪುದುಂ

ಕಾಣಲೊಡನಶ್ರುವಿಂ ಮುಂ ।
ಗಾಣದೆ ಗಡಗಡನೆ ನಡುಗಿ ಮೋಟಂ ತನ್ನಾ ॥
ಪ್ರಾಣಂ ಬಂದಂತಾಗಳ್ ।
ಮಾಣದೆ ಧಾನ್ಯಕನ ಮೆಱೆವ ಕಾಲ್ಗೆಱಗಿರ್ದಂ ॥ ೯೯

ಅಂತು ಕಾಲ್ಗೆಱಗಿ,

ಅರೆವೆಣನಾಗಿರೆ ಪುಣ್ಣೊಳ್ ।
ಮಱುಗುತ್ತಿರ್ದೆನ್ನನೆತ್ತಿ ಕೊಂಡಾವನದೊಳ್ ॥
ಬಱನೊಳ್ ಸಾಕಿದ ನಿನ್ನಂ ।
ಮಱೆದೊಡೆ ನರಕಕ್ಕೆ ಭಾಜನಂ ತಾನಲ್ತೇ ॥ ೧೦೦

ಎಂಬ ಮೋಟನ ಮಾತಿಂಗೆ ತಳವಱರ್ ವಿಸ್ಮಯಂಬಟ್ಟು ಧಾನ್ಯಕನಂ ಮೋಟನಂ ನೀತಿವಿಳಾಸನೆಡೆಗೆ ತಂದು ತತ್ಕೌತುಕಮಂ ಪೇೞೆ, ನೀತಿವಿಳಾಸಂ ಮೋಟನೊಳಿಂತೆಂದಂ:—

ಎಲೆ ಮಹಿಮ ಪಾತಕನ ಕಾ ।
ಲ್ಗಳ ಮೇಲೆಱಗಿರ್ದೆಯೇಕೆ ನಿನ್ನಯ ಕೈಕಾ ॥
ಲ್ಗಳನೋವದೆ ಕಡಿದುಂ ಮಗು ।
*ೞ್ದಳಿಯೊಳ್ ಸಾಧುವಿನ ತೆಱದಿನಿರ್ದಪನಲ್ತೇ ॥ ೧೦೧

ಎಂಬುದುಂ ಮೋಟನಿಂತೆಂದಂ:—

ಎನ್ನ ಪಿತೃಮಾತೃಗುರುವೀ ।
ತನ್ನಟ್ಟನೆ ಪುತ್ರನಪ್ಪೆನೀತಂಗಾಂ ಕೇ ॥

ಳೆನ್ನ ಕರಚರಣಮಾಂ ಮಿಗೆ ।
ಮುನ್ನೆ ಸಗಿದ ಕರ್ಮದಿಂದೆ ಪೋದುವಿಳೇಶಾ ॥ ೧೦೩

ಎಂದರಸಂಗೆ ಪೂರ್ವವೃತ್ತಾಂತಮೋನುಮುಱಿಯದಂತು ಪೇೞ್ದು ಮತ್ತ ಮಿಂತೆಂದಂ:—

ಪಿಗೆಯ್ವಿಂ ದುರ್ಬಲಂ ಧೂಮಿನಿ ವನದಳುಪಿಂ ಮೇಲೆ ಬೀೞಲ್ಕೆ ಪೇೞ್ದಂ।
ದಾಗಂ ನೂಂಕಲ್ಕೆ ಕೆಯ್ಯಿಲ್ಲಳವಿಗಱಿದು ಪೋಗಲ್ಕೆ ಕಾಲಿಲ್ಲ ತನ್ನೊಳ್ ॥
ಕೂಗಿಟ್ಟಂ ಪೇೞ್ದೊಡಂ ತನ್ನಯ ಬರವಿನಿತಂ ಕಾಣೆನಂತಿರ್ದೊಡೆನ್ನೊಳ್
ಬೇಗಂ ನಾಣ್ಗೆಟ್ಟು ತನ್ನಂಗನೆ ನಗೆಗೆಡೆಯಂ ಮಾಡಿದಳ್ ಪೇೞ್ವೆನೇನಂ ॥

ಎಂಬುದುಂ ನೀತಿವಿಳಾಸಂ ವಿಸ್ಮಯಂಬಟ್ಟು, ಅವಿಚಾರದಿಂದೆನಗೆ ದೋಷಂ ಬರುತ್ತಿರ್ದುದೆಂದು ಕೇಳುತ್ತಿರ್ದ ಧೂಮಿನಿಯಂ ನೋಡಿ,

ಎಲೆ ಪಾತಕಿ ನಿಜಕಾಂತನ ।
ನುಱಿದೀಮೋಟಂಗೆ ಕೂರ್ತು ಪತಿಹಿತೆಯೆಂಬೀ ॥
ಬಲೆಯಂ ಬೀಸಿ ಧರಾವಂ ।
ಡಲಮಂ ವಂಚಿಸಿದೆ ನೋಡಲಾಗದು ನಿನ್ನಂ ॥ ೧೦೪

ಎಂದು ಧಾನ್ಯಕಂಗೆ ಮಾಡುವ ಶಾಸ್ತಿಯಂ ಧೂಮಿನಿಗೆ ಮಾಡಿಯನಂತರಂ

ಗುಣನಿಧಿ ಧಾನ್ಯಕಂಗೆ ಸುಮುಹೂರ್ತದೊಳೊಲ್ದು ವಿಲಾಸಿನೀಕುಲಾ ।
ಗ್ರಣಿಯೆನಿಸಿರ್ಪ ವೈಶ್ಯಕುಲಕನ್ನಿಕೆಯಂ ತರಿಸಿತ್ತು ನಲ್ಮೆಯಿಂ ॥
ವಣಿಗಧಿನಾಥನೆಂಬ ಪೆಸರಿಟ್ಟೊಲವಿಂ ಪೊರೆದಂ ನೆಗೞ್ದ ಧಾ ।
ರಿಣಿಪತಿ ಕೇಳ್ ನಿಶಾಚರ ದುರಾತ್ಮಿಕೆ ಧೂಮಿನಿ ಮಾಡಿದರ್ಥಮಂ ॥ ೧೦೫

ಅದಱಿಂ ಸ್ತ್ರೀಹೃದಯಂ ಕ್ರೂರಮೆಂದು ಬ್ರಹ್ಮರಾಕ್ಷಸಂಗೆ ಪೇೞ್ದು, ಗೋಮಿನೀವೃತ್ತಾಂತಮುಂ ಪೇೞಲ್ ತಗುಳ್ದನದಂತೆನೆ:—

ಪ್ರಕಟಪ್ರಸ್ತುತಿವೆತ್ತ ಕಾಂಚಿಪುರದೊಳ್ ವಿಖ್ಯಾತಿಯಿಂದಿರ್ಪ ಶ ।
ಕ್ತಿಕುಮಾರಾಖ್ಯನದೊರ್ಬ ತಾಂ ಮದುವೆಯಾಗಲ್ವೇೞ್ಕುಮೊಲ್ದೆನ್ನ ಚಿ ॥
ತ್ತಕೆ ಬರ್ಪಂತು ಸಲಕ್ಷಣಂ ಮೆಱೆವ ಜಾಯಾಸದ್ಗುಣಂ ತೋರ್ಪ ಕ ।
ನ್ನಿಕೆಯಂ ಕಾಣೆನೆನುತ್ತ ಮಂ ಮನದೊಳಂದುದ್ವೇಗಮಂ ತಾಳ್ದಿದಂ ॥ ೧೦೬

ಅಂತು ಚಿಂತೆಯಂ ತಾಳ್ದು ಮತ್ತಂ

ಪತಿಹಿತಕಾರ್ಯೆಯುಂ ವಿನಯಭಾಷಿಣಿಯುಂ ಕಮನೀಯಲಕ್ಷಣಾ।
ನ್ವಿತೆಯುನತೀವಶೀಲವತಿಯುಂ ಗೃಹಕಾರ್ಯನಿಮಗ್ನಚಿತ್ತೆಯುಂ॥
ಸತತವಿಕಾಸವಕ್ತ್ರೆಯುನಪಾರಗುಣಾಧಿಕೆಯುಂ ಕಳತ್ರಮೊ।
ದತಿಶಯದಿಂದೆ ಪಾಲಿಸುವುದಲ್ಲದ ಪೆಂಡಿರನಿಕ್ಕು ಕಿಚ್ಚಿನೊಳ್॥ ೧೦೭

ಅಂತೆಂದು

ಇಳೆಯೊಳ್ ಪುಟ್ಟಿದ ಕನ್ಯಾ।
ಕುಳಮಂ ತವೆ ನೋೞ್ಪೆನೆಂದು ಶಕ್ತಿಕುಮಾರಂ॥
ಘೞಲನೆ ಸೆಱಗಿನೊಳಂದೊ।
ರ್ಬಳ ನೆಲ್ಲಂ ಕಟ್ಟಿಕೊಂಡವಂ ಪೊಱಮಟ್ಟಂ॥ ೧೦೮

ಕಾಂತಾಲಕ್ಷಣಮಂ ನಾ।
ನಾತೆಱದಿಂ ನೋಡಲಱಿವೆನೆಂದೆಲ್ಲರುಮಂ॥
ಕೈತವದಿಂ ನೋಡುತ್ತುಂ।
ಜ್ಯೋತಿಷ್ಕನುಮೆನಿಪ ನಾಮಮಂ ತಳೆದಿರ್ದಂ॥ ೧೦೯

ಅಂತು ಶಕ್ತಿಕುಮಾರಂ ಕಾಂತಾರ್ಥಿಕನಾಗಿ ಕಂಡ ಕಂಡ ಕನ್ನಿಕೆಯ ಲಕ್ಷಣಮಂ ನೋಡಿ ನೋಡಿ,

ಎಲ್ಲೆಲ್ಲಿ ಪುಗುವನವನೊ।
ಲ್ದಲ್ಲಲ್ಲಿಯ ಕನ್ಯಕಾಗೃಹಂಗಳೊಳೆನಗೊ॥
ಲ್ದೊಳ್ಪುಣಿಸನಿಕ್ಕಿಮೊರ್ಬಳ।
ನೆಲ್ಲಂ ಕೊಂಡೆಂದು ಕೇಳ್ವನತಿಮುದದಿಂದಂ॥ ೧೧೦

ಅಂತಾತಂ ಕೇಳಲೊಡಂ,

ಇನ್ನೊರ್ಬಳ ನೆಲ್ಲಂ ನಿನ।
ಗನ್ನಂ ಸೆಱೆವಂತು ಕುಡುವೆನೆಂದವರೆಲ್ಲರ್॥
ತನ್ನಂ ಕಳಪಲ್ ನಡೆಗೊ।
ಳ್ವಂ ನಯದಿಂ ಮಗುೞ್ದು ಮತ್ತಮೊಂದೆಡೆಗಾಗಳ್॥ ೧೧೧

ಅಂತೆಲ್ಲಿಯುಂ ತನ್ನ ಮನಕ್ಕನುಗುಣಮಪ್ಪ ಕನ್ನಿಕೆ ದೊರಕದಿರ್ಪುದುಂ,

ನಿರವಧಿಬೇಶಮಂ ಸಕಳಪತ್ತನಮಂ ಸತತಂ ತೊೞಲ್ದು ಬಂ।
ಧುರಕುಲಕನ್ಯಕಾವಿತತಿಯುಂ ತನಗಪ್ಪವೊಲೆಲ್ಲಿ ನೋಡೆಯುಂ॥

ದೊರಕದಿರಲ್ಕೆ ಚಿಂತೆ ತಲೆದೋಱೆ ಮಗುೞ್ದತಿಧೈರ್ಯವೃತ್ತಿಯಿಂ ।
ಭರವಶದಿಂದವಂ ಶಿಬಿಕದೇಶದ ರತ್ನಪುರಕ್ಕೆ ಸಾರಿದಂ ॥ ೧೧೨

ಅಂತು ರತ್ನಪುರಕ್ಕೆ ಬಂದು,

ಮನೆಮನೆದಪ್ಪದೆ ಸತತಂ ।
ವನಿತಾಲಕ್ಷಣಮನೊಲ್ದು ನೋಡುತ್ತುಂ ಬ ॥
ರ್ಪನವೊಂದು ಭವನದೊಳ್ ಗೋ ।
ಮಿನಿಯೆಂಬ ಕುಮಾರಿಯುಂ ಕುಮಾರಂ ಕಂಡಂ ॥ ೧೧೩

ಅಂತವಳಂ ಕಂಡು ಲಕ್ಷಣಮಂ ನೋೞ್ಪನಂ,

ಪೊಂಗಿದ ಪಾದಮುಂ ಸಮಪದಾಂಗುಲಿಯುಂ ಮೃದುಗೂಢಗುಲ್ಫಮುಂ ।
ಮಂಗಳವೃತ್ತಜಂಘೆಗಳುಮೊಪ್ಪುವ ಕೋಮಳಪೂರ್ಣಜಾನುಯು ॥
ಗ್ಮಂಗಳುಮೊಲ್ಮೆವೆತ್ತುರುನಿತಂಬಮುಮಲ್ಪಸುಮಧ್ಯಮುಂ ಸಮು ।
ತ್ತುಂಗಕುಚಂಗಳುಂ ವಿಕಸಿತಾನನಮುಂ ಮೆಱೆದಿರ್ಪವಾಕೆಯೊಳ್ ॥ ೧೧೪

ಎವೆ ವಜ್ರಾಂಕುಶಚಕ್ರಚಾಪಚಮರೋದ್ಯಚ್ಚಿಹ್ನಮಂಗಯ್ಯೊಳ ।
ರ್ಪವಳಂ ನೀರಜಮೂರ್ಧ್ವರೇಖೆ ಪದೆಪಿಂದಂಗಾಲೊಳೊಪ್ಪಿರ್ಪಳಂ ॥
ಕಿವಿಯಂ ಚುಂಬಿಪ ಕಣ್ಗಳೊಳ್ ಧವಳನೀಲಾರುಣ್ಯಚಂಚತ್ತ್ರಿಭಾ ॥
ಗವನಾಂತಿರ್ದವಳಂ ವಿಳಾಸಪರನೊಲ್ದಾನಂದದಿಂ ನೋಡಿದಂ ॥ ೧೧೫

ಮುಡಿಯಿನೆಱಿಲ್ವ ನೀಳಕಚಮುದ್ಘಲಲಾಟಮರೋಮಜಂಘೆ ಮೆ ।
ಲ್ನಡಿ ಮದಗಂಧಮಾಂಸಳಮನೋಹರವಕ್ಷಮುದಭ್ರಗಂಡಮಿ ॥
ಟ್ಟೆಡೆಯೆನಿಸಿರ್ಪಡರ್ದ ಜಘನಂ ಪರಿಪೂರ್ಣಪಯೋಧರಂ ಕರಂ ।
ಕುಡಿನಿಮಿ*ರ್ದಕ್ಷಿಗಳ್ ಮೆಱೆವ ಕನ್ನೆಯನೀಕ್ಷಿಸಿದಂ ಕಳಾವಿದಂ ॥ ೧೧೬

ಸಲೆ ಚೆನ್ನೆಯ್ದಿಲ ಕಾವನಿರ್ಮಡಿಸಿದಂತೊಪ್ಪಿರ್ಪ ಕರ್ಣಂ ನಿಮಿ ।
ರ್ದಳನೀಲಚ್ಛವಿಯಂತೆ ರಂಜಿಪ ಲಸದ್ಭ್ರೂಲೇಖೆಗಳ್ ಕುಂದಕು ॥
ಟ್ಮಲಮಂ ಸೇರಿಸಿದಂತೆ ತೋರ್ಪ ರದನೋದ್ಯತ್ಪಙ್ಕ್ತಿ ನೂತ್ನಪ್ರವಾ ।
ಳಲತಾಸಾರದೊಳಿೞ್ದಂತೆಸೆದುದಾಬಿಂಬಾಧರಂ ಕನ್ನೆಯಾ ॥ ೧೧೭

ಅಂತಿರ್ದ ಗೋಮಿನಿಯುನಾಪಾದಮಸ್ತಕಸಂಪೂರ್ಣಲಕ್ಷಣಮಂ ಶಕ್ತಿಕುಮಾರಂ ನೋಡಿ ಸಂತೋಷಂಬಡುತ್ತಿಂತೆಂದಂ:—

ಈನೆಲೆಯೊಳ್ಬರ್ಗಳನಂ ಕೊಂ ।
ಡೇನಂ ಮತ್ತಿಸದೆನಗೆ ಪರ್ಯಾಪ್ತಮೆನಲ್ ।
ಸಾನಂದದಿನುಣಲಿಕ್ಕಲ್ ।
ಮಾನಿನಿ ನೀನಾರ್ಪೆಯೆಂದು ಕೇಳ್ದನಲಂಪಿಂ ॥ ೧೧೮

ಎಂದು ಕೇಳ್ದೊಡವಳಂತೆಗೆಯ್ವೆನೆಂದು ನೆಲ್ಲನೀಸಿಕೊಂಡು,

ಕಟ್ಟೊಣಗಿಲಾಗದೊಣಗಿಸಿ ।
ಕುಟ್ಟಲ್ ನುಚ್ಚಾಗದಂತೆ ನುಣ್ಪೆಸೆವಿನೆಗಂ ॥
ನೆಟ್ಟಕ್ಕಿಮಾಡಿಯುಮಿರ್ವ್ಯಂ ।
ಕೊಟ್ಟಳ್ ಸತಿ ಕರೆದು ತನ್ನ ದಾದಿಯ ಕೆಯ್ಯೊಳ್ ॥ ೧೧೯

ಅಂತಾದಾದಿಯ ಕೆಯ್ಯೊಳುಮಿರ್ವ್ಯಂ ಕೊಟ್ಟು,

ಇದನಕ್ಕಸಾಲೆಗಳ್ಗಿ ।
ತ್ತದಱಿಂದಂ ಬಂದ ಕಾಸಿನಿಂ ಮಡಕೆಗಳಂ ॥
ಪಡೆದಿಂಧನೋಪದಂಶಮು ।
ನ್ನೊದವಿಸಿ ಕೊಂಡೀಗ ಬರ್ಪುದೊಲವಿಂ ಧಾತ್ರೀ ॥ ೧೨೦

ಎಂಬುದುಮವಳಾಪರಿಯೊಳುಮಿರ್ವ್ಯಂ ಕೊಟ್ಟು ಮಡಕೆಯಿಂಧನಮಾದು-
ರಂಗಳಂ ತರ್ಪುದುಂ; ಬಱಿಯುಂ

ಹಡನಱಿದೆಸಱಿಟ್ಟೊಯ್ಯನೆ ।
ಮೃದುಮಕ್ಕಿಯುನೆಸಗಿ ಪದೆದೆಸಜ್ ಕಾದುಲ್ ನಿ ॥
ಲ್ಲದೆಯುಕ್ಕಿಯೆರಡನೊಲೆಯೊಳ್ ।
ಬಿದಿರ್ದೆಸಱೊಳ್ ಪೊಯ್ದುಳಕ್ಕಿಯುಂ ಸತಿಯಾಗಳ್ ॥ ೧೨೧

ಅಂತಕ್ಕಿಯುಂ ಪೊಯ್ದು ತೊಳಸಿ

ಕುದಿ ಬರಲೊಯ್ಯನೆ ಮೇಲು ।
ರ್ಬಿದ ನೊರೆಯುಂ ತೆಗೆದು ಬಿಸುಟು ಮೇಲೆಸಱಂ ಸಾ ॥
ಲ್ದುದನೆಱಿದು ಮಗುಳ್ದುಗುಳ್ದ್ಗಳ ।
ಪದನಂ ತೆಗೆದೊತ್ತಿನೋಡಿ ಬಾಗಿಸಲಾಗಳ್ ॥ ೧೨೨

ಅಂತು ಓಗರಮುಂ ಬಾಗಿ,

ತಿಳಿಗಂಜಿಯುನೊಪ್ಪುವ ತಂ ।
ಗಳಸದೊಳಿಡಿದಿರಿಸಿ ದೊರಕಿದುಪದಂಶಮುನಾ ॥
ಗಳಿ ಪಾಕಂಗೆಯ್ದೊಲೆಯೊಳ್ ।
ತಿಳಿನೀರಂ ತಳೆದು ಮುಸಿಯುನಾಗಳ್ ತೆಗೆದಳ್ ॥ ೧೦೩

ಅಂತಾಮುಸಿಯುಂ ತೆಗೆದು ತನ್ನ ದಾಸಿಯುಂ ಕರೆದು
ಏರಣಿಗಗೀ ಮುಸಿಯುಂ ।
ಭೋರೆನೆ ಕೊಟ್ಟುವರ್ಗಳಿತ್ತು ಕಾಸಿಂಗೀಗಳ ।
ಗೋರಸಮುಂ ದೊರಕಿಸಿ ಕೊಂ ।
ಡೋರಂತಿರೆ ಬರ್ಪುದೆಂದು ಕಳಿಪಿದಳವಳಂ ॥ ೧೦೪

ಎಂದು ಕಳಿಪಲುಪಳಾಕ್ರಮದಿಂ ಸ್ನೇಹದ್ರವ್ಯಮುಂ ಕೊಂಡು ಬ
ಡಂ, ಶಕ್ತಿಕುಮಾರನಂ ಕರೆದು
ತಿಂಗಳ ಬೆಳಗಿನ ದಾರೆಯು ।
ಸಂಗಡಮೆನೆ ಮೆಱೆಯುತಿರ್ಪ ಗಂಜಿಯನಾಗಳ್ ॥
ತೆಂಗಿನ ತಿಳಿವಟ್ಟಲೊಳಾ ।
ತಂಗೆಱೆದಳ್ ತೊಳಸಿ ತೊಳಸಿ ಸವಿಯುಪ್ಪಿನೆಗಂ ॥ ೧೦೫

ಅಂತೆಱೆಯಲಾಗಂಜಿಯುಂ ಕುಡಿಯಲೊಡಂ
ನೆರೆಯುಮೃತರಸಕ್ಕಿನಿದೆಂ ।
ದೊರೆಗಟ್ಟುವ ಗಂಜಿ ಪೊಕ್ಕು ತತ್ತನುರಸಮುಂ ॥
ಪ್ಪೊಱಮಡಿಸಿದಂತೆ ಬೆಮರ್ಗಳ್ ।
ಪೊಱಪೊಣ್ಮಿದುವವನ ರೋಮಕೂಪದೊಳಾಗಳ್ ॥ ೧೦೬

ಅಂತವನ ದೇಹಂ ಬೆಮರಲ್
ಅರೆದಿರಿಸಿದ ನೆಲ್ಲಿಯು ಸ ।
ಟ್ಟುರುಳಿದೊಳತಿಸಯುಮುದಾಗಲೆಣ್ಣೆಯು ಪನಿಯುಂ ॥
ಬೆರಸಿಟ್ಟು ಕೊಟ್ಟಳಾತಂ ।
ಗಿರದೀಗಳೆ ಮಿಂದು ಬರ್ಪುದೆಂದವಳಾಗಳ್ ॥ ೧೦೭

ಅಂತಾತನಂ ಮಿಯಲ್ ಕಳಪಿ, ಮನೆಯೊಳಡೆಮಾಡಿಯಿಡಿಸಿ ಮಗುಟ್ಟಿ
ತಂ ಬರಲೊಡಂ,

ಎಳೆಯುಳ್ ಪಿತ್ತಿಲ ಬಾಳೆಗ ।
ಳೆಲೆಯೊಳ್ ಮೂಱನೆಯ ಬಾಗವಂ ಬಿಟ್ಟಗ್ರಂ ॥
ತಳರೆಸೆಯುತಿರ್ಪ ಕದಳೀ ।
ದಳಮಂ ಮೆಲ್ಪೆಸೆಯೆ ಚಿವುಟಿ ತಂದಳ್ ಬೇಗಂ ॥ ೧೨೮

ಅನಂತರಂ

ನೆಲದೊಳ್ ಕುಡಿತೆಯ ನೀರಂ ।
ತಳದೊಯ್ಯನೆ ತೊಡೆದು ಪಿಂಪಿನಿಂ ಚತುರಶ್ರ ॥
ಸ್ಥಳಮನೊಸೆದಿಟ್ಟು ರಂಭಾ ।
ದಳಮಂ ನೀರ್ಗೊಟ್ಟಳೊಂದು ಪೊಸತಂಬುಗೆಯಿಂ ॥ ೧೨೯

ಅಂತು ನೀರ್ಗುಡಲಾತಂ ಕರಚರಣಪ್ರಕ್ಷಾಳನಂಗೆಯ್ದು ಕುಳ್ಳಿರ್ದುಂ,

ಸವಣಱಿದಿಕ್ಕಿಯೋಗರಮನುಪ್ಪಿನ ಕಾಯ್ಗಳನಿಕ್ಕಿದೊಂದು ಕಾ ।
ಕವನೊಸೆದಿಕ್ಕಿಯುಲ್ಪಘೃತಮಂ ತಲೆದೋಱಿ ಮಗುಳ್ದು ತುತ್ತುಗಳ್ ॥
ಸವಿವಡೆವಂತು ಪೊಂಬೆಸಱ ಸೂಪವನೊಪ್ಪುವ ಮಾದುರಂಗಳಂ ।
ಯುವತಿ ತೆರಳ್ಚಿ ಬಡ್ಡಿಸಿದಳಾಸುಖಿಯೊಳ್ ಪರಿತೃಪ್ತಿಯುಪ್ಪಿನಂ ॥ ೧೩೦

ಅಂತಾತಂ ಭೋಜನದಿಂ ತುಷ್ಟನಾಗೆ

ಸುರುಚಿರಮಪ್ಪ ತೆಂಗಿನೆಳನೀರ್ಗಳಸಂದಳದಂತೆ ಕಾಂತೆ ತ ।
ಣ್ಗರಗಮನೆತ್ತಿ ಶೈತ್ಯಜಲಮಂ ಪದೆಪಿಂದೆಱೆಯಲ್ಕೆ ಶೀಕರೋ ॥
ತ್ಕರಮೆರ್ದೆ*ಯೊಳ್ ನಿಮಿರ್ದ್ದಸೆನ ವಿಲಾಸೆಗಳೊಳ್ ತುಱುಗಲ್ ಪೊದಱ್ದ ಕ ।
ಣ್ಣರಮಾಗಿವಂತಿರೀಂಟಿ ಕಡೆಯೊಳ್ ತಲೆದೂಗಿ ಮಗುಳ್ದು ತೇಗಿದಂ ॥ ೧೩೧

ಅಂತು ತೇಗಿ ಗೊಟ್ಟಂಗೊಂಡು ಕೈದೊಳೆದು ಗೃಹೀತತಾಂಬೂಲನಾಗಿ ಸಂತೋಷಂಬಟ್ಟವಳಂ ವಿವಾಹವಾಗಿ ಸುಖದಿನಿರ್ದಂ.

ಅದಱಿಂ ಗೃಹಸುಖಂ ಸತಿಯಾರೊಳ್ಪೆಂದು ರಾಕ್ಷಸಂಗೆ ಪೇೞಲ್ ಸಂತೋಷಂಬಟ್ಟು ನಿಂಬವತಿಯ ಕ್ರಮಮೆಂತೆಂದು ಕೇಳಲಾತಂ ಪೇೞಲ್ ತಗುಳ್ದನದೆಂತೆನೆ:—

ಪದೆಪಿಂ ಸೌರಾಷ್ಟ್ರದೊಳ್ ರಂಜಿಪ್ಪುದು ವಳಭಿ ವಾಣೀವಿಲಾಸಕ್ಕೆ ಶೋಭಾ।
ಸದನಂ ತಾನೆಂಬಿನಂ ತತ್ಪುರದೊಳೆ ಗೃಹಗುಪ್ತಂ ವಣಿಙ್ಮುಖ್ಯನಿರ್ದಂ ॥

ಮುದದಿಂ ಕಲ್ಯಾಣದಿಂದಂ ತವೆಯದ ನವರತ್ನಂಗಳಿಂ ರಾಜರಾಜಾ ।
ಭ್ಯುದಯಂ ತನ್ನೇಕದೇಶಕ್ಕೆಣೆವಡೆಯದೆನಿಪ್ಪಂದದಿಂ ಸಂದಗುರ್ಬಿಂ ॥

ಅಂತಿರ್ಪ ಗೃಹಗುಪ್ತಂಗೆ

ಸತತಂ ರೋಹಣಶೈಲದೊಳ್ ಮಣಿ ಸುಧಾಂಭೋರಾಶಿಯೊಳ್ ಚಂದ್ರಲೇ।
ಖೆ ತಪಶ್ಶಕ್ತಿಯೊಳುದ್ಘಶಾಂತಿ ಕವಿತಾವಿಸ್ತಾರದೊಳ್ ಪ್ರೌಢಿ ಪು ॥
ಷ್ಪತಪದ್ಮಸ್ಥಳದೊಳ್ ಲಸತ್ಕನಳಿ ಪೆಂಪಿಂ ಪುಟ್ಟುವಂತಾವಣಿ ।
ಕ್ಪತಿಯೊಳ್ ಪುಟ್ಟಿದಳಾಲ್ದ ರತ್ನವತಿಯೆಂಬಳ್ ಶಂಬರಾರಿಪ್ರಿಯಳ್ ॥

ವಿಲಸನ್ಮಾಣಿಕ್ಯಮಂ ಚೆಲ್ವಧರದ ರುಚಿಯಿಂ ನವ್ಯನೈರ್ಮಲ್ಯಮುಕ್ತಾ।
ವಳಿಯಂ ದಂತಪ್ರಭಾಸಂಪದದಿನುರುಮರುನ್ನೀಲಮಂ ಸಂತತಂ ಕುಂ ॥
ತಳಚಂಚತ್ಕಾಂತಿಯಿಂ ವಿದ್ರುಮಮನಮಳಹಸ್ತಾಬ್ಜದಿಂ ಗೆಲ್ದು ತತ್ಕೋ।
ಮಲೆ ಮತ್ತಂ ರತ್ನಪಾಂಚಾಲಿಕೆಯೆನಲೆಸೆವಳ್ ತನ್ನ ದೃಗ್ದೀಪ್ತಿಯಿಂದಂ॥

ಅಂತೆಸೆದಿರ್ಪ ರತ್ನವತಿಯುಂ ಗೃಹಗುಪ್ತನೊಡಲ್ದು ತತ್ಕಳಾ ।
ವಂತನೆನಲ್ಕೆ ಸಾಲ್ವ ಬಲಭದ್ರನೆನಿಪ್ಪ ವಣಿಗ್ವರಂಗೆ ಕೊ ॥
ಟ್ಟಂ ತಪನೀಯರತ್ನವಿವಿಧಾಂಬರಸಂತತಿಯಿಂ ಸುಹೃಜ್ಜನಂ ।
ಸಂತತವರ್ತಿಗಳ್ ತಣಿವಿನಂ ವಿಭವಸ್ಥಿತಿ ಚೆಲ್ವನಪ್ಪಿನಂ ॥ ೧೩೫

ಅಂತು ರತ್ನವತಿಯುಂ ಮಧುರಾಪುರಿಯ ಬಲಭದ್ರಂಗೆ ಗೃಹಗುಪ್ತಂ ಕುಡಲೊಡಂ,

ರಜನಿಕರಾಸ್ಯೆ ರತ್ನವತಿ ಪೂರ್ವದೊಳಾರ್ಜಿಸಿದುಗ್ರಕರ್ಮದಿಂ ।
ನಿಜಪತಿ ಸಂತತಂ ಮದುವೆಯಾದ ದಿನಂ ಮೊದಲಾಗಿ ತನ್ನ ವಾ ॥
ರಿಜಮುಖಮಂ ನಿರೀಕ್ಷಿಸದೆ ತನ್ನೊಡಗೂಡಿರಲ್ ದುರಾತ್ಮನಂ ।
ಗಜನ ಸುಮಾಸ್ತ್ರಸಂತತಿಗೆ ತತ್ಸತಿಯುಂ ಗುಱಿಮಾಡಿ ಕಾಡಿದಂ॥ ೧೩೬

ಅಂತಿರ್ದ ರತ್ನವತಿಯುಂ ಕಂಡು

ಈವನಿತೆ ರತ್ನವತಿಯು ।
ಲ್ತಾವಗಮಿನ್ನೀಕೆ ನಿಂಬವತಿಯೆಂದು ಪುರ ।
ಸ್ತ್ರೀವೃಂದಂ ಪೆಸರಿಡೆ ತ ।
ದ್ಭಾವಕಿ ಕಡುನಾಣ್ಚಿ ಚಿಂತೆಯುಂ ತಳೆದಿರ್ದಳ್ ॥ ೧೩೭

ಅಂತು ಚಿಂತಿಸುತ್ತಿರ್ಪಾಗಳ್

ತನಗನುರಕ್ತೆಯೆನಿಪ್ಪ ಮು ।
ನ್ನನುಕೂಲೆಯೆನಿಪ್ಪ ಮೊದಲಿನ ಭಿಕ್ಷುಕಿಯೊರ್ವಳ್ ।
ಮನೆಗೆ ಬರಲ್ಕಾಕೆಗೆ ಭೋಂ ।
ಕೆನೆ ದುಗುಡಮನಾಂತ ರತ್ನವತಿಯಿಂತೆಂದಳ್ ॥ ೧೩೮

ಎನ್ನಿನಿಯನೆನ್ನನೆಂದುಂ ।
ಮನ್ನಿಸನೇನೆಂದು ನುಡಿಸನೇಂ ಕಾರಣಮೋ ॥
ಮುನ್ನೆಸಗಿದ ದುಷ್ಕರ್ಮವೊ ।
ತನ್ನಯ ದೌರ್ಭಾಗ್ಯಲಕ್ಷಣಮೊ ಪೇಳೆಲವಿಂ ॥ ೧೩೯

ಅದಂ ಕಂಡಲ್ಲಿಯ ವಿಳಾಸಿನಿಯರ್ ರತ್ನವತಿಯೆಂಬುದಂ ಮೊಣ್ದು ನಿಂಬವತಿಯೆಂಬ ಪೆಸರಂ ಕೊಟ್ಟರೆಂದು ಭಿಕ್ಷುಕಿಗೆ ಪೇಳಲವಳಿಂತೆಂದಳ್:—

ವನಜಮುಖಿ ರತ್ನವತಿ ನಿ ।
ನ್ನಿನಿಯಂ ನಿಧಿಪತಿ ವಣಿಗ್ವರೇಣ್ಯನ ಸುತೆ ತ ॥
ತ್ಕನಕಲತಾಖ್ಯೆಗೆ ಕೂಪಂ ।
ನಿನಗಮವಳ್ಗಂ ಸ್ವರೂಪಮೊಂದೆನಿಸಿರ್ಕುಂ ॥ ೧೪೦

ಎಂಬುದುಮಾ ಭಿಕ್ಷುಕಿಗೆ ರತ್ನವತಿಯಿಂತೆಂದಳ್:—

ಆದೊಡೆ ನಿಧಿಪತಿಯ ಪ್ರಾ ।
ಸಾದದ ಮೇಲಿರ್ಪ ಕನಕಲತೆಯ ಪ್ರೋಲಾ ಸ ॥
ವ್ಯೋಮದದೆ ಸೆಂಡಾಡುವ ಪ್ರೊ ।
ಟ್ಠದರದಿಂದಲ್ಲಿಗಧಿಪನಂ ಬರಿಸೆಲವಿಂ ॥ ೧೪೧

ಅಂತು ಬರಿಸಲೊಡಂ,

ಸೆಂಡಂ ಭೋಂಕನೆ ಕಾಂತನ ।
ಮಂಡೆಯೊಳಾಂ ಮೆಲ್ಲನಿಡಲೊಡಂ ನೀನಾಗಳ್ ॥
ಕಂಡಾಸತಿಯೊಲವಂ ನೀಂ ।
ಕೊಂಡುಯ್ಯಲ್ಲಿಂದೆ ಕನಕಲತೆಯುಂ ಬೇಗಂ ॥ ೧೪೨

ಎಂದು ನೀಂ ಪೇಳ್ದೊಡಾತನೆನ್ನಂ ಕನಕಲತೆಯೆಂಬ ಭಾವನೆಯಿಂದಿಲ್ಲಿಂದಂ

ಕೊಂಡುಯ್ವೆಲ್ಲಾಂ ಕೂಡೆ ಸುಖದಿನಿರ್ಪೆನೆಂಬುದಂ ಭಿಕ್ಷುಕಿಯಂತೆಗೆಯ್ವೆನೆಂದು,

ಬಲಭದ್ರನೆಡೆಗೆ ಭಿಕ್ಷುಕಿ ।
ನಲವಿಂದಂ ಪೋಗಿ ಕೇಳ್ ಮನೋಹರೆ ತತ್ಸ್ತ್ರೀ ॥
ಮಲೆ ಸೆಂಡನಾಡುವಳ್ ಕನ ।
ಕಲತಾವಧು ನೋಳ್ಪೊಡೀತೆನುತ್ತುಂ ಪೇಳ್ದಳ್ ॥ ೧೪೩

ಅಂತು ಪೇಳಲಾತನಾಗಳ್ ನಿಧಿಪತಿಯ ರಮಣಿಯ ಪ್ರಾಸಾದದ ಕೆಳಗೆ ಬಂದಿರ್ಪುದುಂ,

ತ್ರಿಜಗನ್ಮೋಹನಮಿಶ್ರಿತಾಂಜನಕರಂಡಂ ವಶ್ಯಕಾಂಡಂ ರಥುಷ ।
ಧ್ವಜಕಾಂಡಂ ವಿಟಚಿತ್ತಖಂಡನಮನುರಾಗಾಪೂರ್ಣಭಾಂಡಂ ಗುಣ ॥
ವ್ರಜಷಂಡಂ ಖರದಂಡತುಂಡಮುಕುಳೋದ್ದಂಡಂ ದಿಟಕ್ಕೆಂಬಿನಂ ।
ನಿಜದಿಂ ರಂಜಿಪ ಸೆಂಡನಿಟ್ಟಳದಿರೊಳ್ ತತ್ಕಾಂತೆ ತನ್ಮೋಪನಾ ॥ ೧೪೪

ಅಂತು ನಿಂಬವತಿ ಕನಕಲತಾವ್ಯಾಜದಿಂ ಕಂತುಕಮಂ ಕಾಂತನ ಮೇಲಿಡಲೊಡಮಾತಂ ಪರಮಾನಂದದಿಂ ಪ್ರಾಸಾದದ ಮೇಲಂ ನೋಳ್ಪಿನಂ,

ಪ್ರಾಸಾದಶಿಖರಗಗನಾ ।
ವಾಸದೊಳಮಳಾಂಗಿನಿಂಬವತಿರುಚಿರಾಂಶು ॥
ನ್ಯಾಸಂ ಬಲಭದ್ರನ ಕ ।
ಣ್ಣಾಸುರಮೆನಿಪಂತು ತೋಱಿಸಿತ್ತನುನಯದಿಂ ॥ ೧೪೫

ಅಂತಿರ್ದ ಸತಿಯನಾತಂ ನೋಡಲ್ ಭಿಕ್ಷುಕಿಯಿಂತೆಂದಳ್:—

ಮನಸಿಜನನ್ಯಮೂರ್ತಿ ಬಲಭದ್ರ ವಣಿಗ್ವರ ಕೇಳ್ ನಿರಂತರಂ ।
ಕನಕಲತಾಖ್ಯೆ ನಿನ್ನೊಡನಿರಲ್ ಬಯಸಿರ್ದಪಳಲ್ಲಿರಲ್ಕೆ ತ ॥
ಜ್ಜನಕನ ಬಾಧೆಗಂಜುವಳಿರುಳ್ ಕವಿದಾಕ್ಷಣಮನ್ಯದೇಶದ ।
ತ್ತನುನಯದಿಂದೆ ಪೋಪುದವಳಂ ಧನಮಂ ವಿ... ಕೊಂಡು ಬೇಗದಿಂ ॥

ಎಂದು ಮತ್ತಂ

ಇಂದಿರುಳಾಂ ಕನಕಲತಾ ।
ಸುಂದರಿಯಾಂ ಬೇಳ್ಪ ರತ್ನಮಂ ಬಹುಧನಮಂ ॥

ತಂದಿತ್ತಪೆನಾಂ ನೀನಿ ।
ಲ್ಲಿಂದಂ ಪೋಗನ್ಯದೇಶದತ್ತಲ್ ನಲವಿಂ ॥ ೧೪೭

ಎಂದೊಡಾತನಂತೆಗೆಯ್ವೆನೆಂಬುದುಮೊಂದುದಿನಂ,

ದೆಸೆಯುಂ ಬಾಸಣಿಸಿರ್ಪ ಕಟ್ಟಲೆಯೊಳಂದೀಷ್ಯಾ೯ಳುಮೋಹಂ ಮಿಗು ।
ರ್ಮಿಸೆ ತದ್ಭಿಕ್ಷುಕಿ ಕೂರ್ತು ನಿಂಬವತಿಯುಂ ಬೇಟ್ಟರ್ಥವುಂ ರತ್ನಮುಂ ।
ಪೊಸತಪ್ಪಂಬರಮುಂ ನೆಗಟ್ಟೆ ಬಲಭದ್ರಂಗಾಕೆ ತಂದಿತ್ತು ಪೋ ।
ಗು ಸುಖಂ ರಂಜಿಸುವಂತಿವಂ ತಳೆದು ನೀಂ ದೂರಕ್ಕೆನುತ್ತಾತನೊಳ್ ॥

ಅಂತೆನಲಮಂ ನಿಂಬವತಿಯುಂ ಕನಕವತಿಯುಮೊಂದೆ ಚಂದಮಪ್ಪುದ ಱಿಂದವಳಂ ಕೊಂಡು ನಿಶಾಮಾರ್ಗದಿಂದೆ ಮಳಭಿಯಂ ಪೊಱಮಟ್ಟು ಪೋಗುತುಂ ದಾರಿಯೊಳ್,

ಪ್ರಿಯೆಗೆ ನುಡಿ ನೆರವು ಪರಿಚ ।
ಯ್ರ್ಯಯುನೊಲವಿಂ ಮಾಟ್ಪಳೆಂದು ಬಲಭದ್ರಂ ದಾ ॥
ಸಿಯುನೊರ್ಬಳಂ ನಿತಾಂತ ।
ಕ್ರಯಮಾಗಲ್ಕೊಂಡು ಪೊಱಸಿದಂ ಬಲ್ಪೋಜೆಯಂ ॥ ೧೪೮

ಅಂತವಳ ಮುಂಡೆಯೊಳ್ ಪೊಱೆಯನಿಟ್ಟು,

ದಿವಸಕ್ರಮದಿಂ ಪೊಕ್ಕಂ ।
ಯುವತಿಯುತಂ ಶೂರಸೇನದೇಶದೊಳಂದೊ ॥
ಪ್ಪುವ ಮಧುಮತಿಪತ್ತನಮಂ ।
ನವರತ್ನಾಧಿಪವಣಿಗ್ವರಂ ಬಲಭದ್ರಂ ॥ ೧೪೯

ಅಂತಾಮಧುಮತೀಪತ್ತನಮಂ ಪೊಕ್ಕು

ದಿನದಿನದೊಳ್ ಬಲಭದ್ರಂ ।
ಧನಕನಕಸಮೃದ್ಧಿಯಿಂ ಕರಂ ಪೆರ್ಚಿ ದಿಶಾ ॥
ನನದೊಳ್ ಕೀರ್ತಿಯನಾಂತಂ ।
ತನಗಾರ್ಜಿತಪುಣ್ಯಮುಳ್ಳೊಡೆಲ್ಲಿರ್ದೊಡಮೇಂ ॥ ೧೫೦

ಅಂತಿರ್ಪುದುಂ,

ಇತ್ತಲ್ ಗೃಹಗುಪ್ತಂ ನಿಜ ।
ಚಿತ್ತದೊಳತಿಚಿಂತಿಸುತ್ತುಮೆನ್ನಳಿಯಂ ತಾ ॥

ನೆತ್ತಲ್ ಪೋದಪನೊಡಗೊಂ ।
ಡುತ್ತಮಗಜಗಮನೆ ರತ್ನವತಿಯನಲಂಪಿಂ ॥ ೧೫೨

ಎಂದು ಚಿಂತಿಸುತ್ತಿರ್ಪುದುಮತ್ತಲ್ ಮಧುಮತಿಪತ್ತನದೊಳ್
ಅಡಿಗಳನೊತ್ತುತ್ತುಂ ತೊಂ ।
ಕಡಿಸುವ ನಿಜದಾಸಿಯಂದಮಂ ಕಂಡಾಗಳ್ ॥
ತುಡುಗುಣಿ ತೊಟ್ಟೆಯೆನುತ್ತುಂ ।
ಪೊಡೆದಳ್ ಕಡುಮುಳಿದು ನಿಂಬವತಿಯಂತವಳಂ ॥ ೧೫೩

ಅಂತು ಆತೊಟ್ಟಿಂ ಜಡಿದು ಪೊಡೆಯಲವಳ್

ಕಂಡವರೆಲ್ಲರೊಳ್ ಕಪಟದಿಂ ಬಲಭದ್ರನದೊರ್ಬ ಸೆಟ್ಟಿಯಾ ।
ಪೆಂಡತಿಯಂ ಸಮಸ್ತಧನಮಂ ನವರತ್ನಮನೀಟ್ಟು ತಂದು ಭೂ ॥
ಮಂಡಲದೊಳ್ ಕರಂ ಶುಚಿಯೆನಿಪ್ಪವೊಲಿರ್ದಪನೆಂದು ಕೋಪದು ।
ದ್ದಂಡತೆಯಿಂದೆ ಪೇಟ್ದುಳತಿಚೋದ್ಯಮೆನಲ್ ನಿಜದಾಸಿ ಸಾಸದಿಂ ॥ ೧೫೪

ಅಂತು ಪೇಟ್ವುದುಮಲ್ಲಿಯ ಸಮಯಸಂಕೇತದವರೊಂದುಗೂಡಿ ಬಲಭದ್ರನಂ ಕರೆಯಿಸಿ

ಪರಸತಿಯಂ ಪರಾತ್ತಧನಮಂ ಮಿಗೆ ವಂಚಿಸಿ ತಂದ ದೋಷಿ ಮ ।
ತ್ಪುರದೊಳಿರಲ್ಕೆ ನಿಂದೆಯೆಮಗಪ್ಪುದೆನುತ್ತೆ ವಣಿಗ್ವರರ್ಕಳುಂ ॥
ಪರಿಭವಮಪ್ಪಿನಂ ಪೊಡೆಮಡಿಸೀ ಪೊಲಿಲಿಂ ಪರಸತ್ತಿಯಂ ಪರರ್ ।
ದೊರಕಿಸಿದರ್ಥಮಂ ಸುಖದೊಳಲ್ಲಿರಿಸೆಂದವರೆಲ್ಲರಾತನಂ ॥ ೧೫೫

ಅಂತೆಂಬುದುಮಾಬಲಭದ್ರಂ ಚಿಂತಾಕ್ರಾಂತನಾಗಿ ಮನೆಗೆ ಬಂದು ನಿಜಸತಿಯೊಳ್ ಪೇಟಲಾಕೆಯಿಂತೆಂದಳ್:—

ಪರಸತಿಯಲ್ತು ಮತ್ಸತಿ ಪರಾರ್ಥಮದಲ್ತು ಮದೀಯವಿತ್ತಮೆಂ ।
ದರಸಿನ ಮುಂದೆ ನಿಂದು ಕಡುಬಾಸೆಯನೊಲ್ಲದೊಡೋಲೆಯಂ ಮನು ॥
ಷ್ಯರನತಿವೇಗದಿಂ ವಳಭಿಗಟ್ಟಿ ವಿಚಾರಿಪುದೆನ್ನ ಕಾಂತೆಯಿ ।
ರ್ದರವನ ....† ೧೫೬

ಎಂದೊಡಾತಂ ಮಗುಬ್ದಿರಸನಿರ್ದೆಡೆಗೆ ಪೋಗಿ ಬಿನ್ನವಿಸಿ ಸಕಲರಂ

---

† ದಲ್ಕದೀಯೆಡೆಗೆ ಬಂದನು ಪಡೆದಿಂದುವಲ್ಲಭಾ, ಎಂದು ಒಂದು ಪ್ರತಿಯಲ್ಲಿದೆ.

ಕರೆಯಿಸಿ ತನ್ನ ಕಾಂತೆ ಪೇೞ್ದ ಕ್ರಮಮಂ ಪೇೞಲವರಿದು ನ್ಯಾಯಮೆಂದು-
ವಳಭಿಗೋಲೆಯುಮಂ ಕಳಪಿದಱೊಳ್,

ಇಲ್ಲಿ ಬಲಭದ್ರನೆಂಬವ |
ನಲ್ಲಿಂದಂ ಕನಕಲತೆಯೆನಿಪ್ಪಂಗನೆಯುಂ ||
ಬಲ್ಲಿದತನದಿಂ ತಂದೆ |
ವೆಲ್ಲರೊಳವಳನ್ನ ಕಾಂತೆಯುಂ ದೆನುತಿರ್ಪರ್ಗಂ || ೧೫೭

ಎಂದಿರ್ಪ ಲೇಖಾರ್ಥಮಂ ಗೃಹಗುಪ್ತಂ ಕಂಡು

ಇಂದು ತನೂಜೆಯುಂ ಪಡೆದೆನೆನ್ನಳಿಯಂ ನಲವಿಂದೆ ಕೂರ್ತು ಮ |
ನ್ನಂದನೆಯೊಳ್ ಸುಖಂಬಡೆಯುತಿರ್ಪ ಪನಿಲ್ಲಿಗೆ ನಾಣ್ಚಿ ಪತ್ತೆ ಬೇ ||
ಱೊಂದು ವಿಳಾಸದಿಂ ಮಧುಮತೀಪುರಮೆಂಬುದಱೊಳ್ ಪ್ರಸಿದ್ಧಿಯಿಂ |
ದೆಂದು ಮನೊ ನುರಾಗದೊದವಿಂ ಗೃಹಗುಪ್ತನವರ್ಗೆ ಮೆಚ್ಚಿದಂ || ೧೫೮

ಅಂತು ಗೃಹಗುಪ್ತನೋಲೆಯುಂ ತಾದವರ್ಗೆ ಬೇಟ್ಟಿದಂ ಕೊಟ್ಟನಂ-
ತರಂ

ಬಹಳಾಲಂಕಾರಮಂ ಮಾಡಿಸಿ ನಿಜಸುತೆಯುಂ ನೋಡಲೆಂದಿಷ್ಟವರ್ಗಂ|
ಸುಹೃದಾಪ್ತರ್ ಬಂಧುಗಳ್ ಸೇವಕತತಿ ಬುಧಸಂತಾನಕಂ ತನ್ನ ಕಾಂತಾ||
ಸಹಿತಂ ಸಂರಂಭದಿಂದಂ ಮಧುಮತಿನಗರಕ್ಕೆಯ್ದಿದಂ ನಲ್ಮೆಯಿಂದಂ |
ಗೃಹಗುಪ್ತಂ ಲೇಖ್ಯಮುಂ ತಂದವರೊಡನೊಲವಿಂ ಸಂತತಂ ಶೀಘ್ರಯಾನಂ||

ಅಂತು ಮಧುಮತೀಪತ್ತನಕ್ಕೆ ಬಂದು ಬಲಭದ್ರನ ಮನೆಯುಂ ಪುಗು-
ವುದುಂ,

ಜನಕಂ ಮಾತೃಸಹೋದರರ್ ಪರಮಬಂಧುಶ್ರೇಣಿಗಳ್ ಭೋಂಕನೆಲ್ |
ಮನೆಗೆಟ್ಟಂದೊಡೆ ಪೆರ್ಚಿ ನಿಂಬವತಿಯುತ್ಸಾಹದಿಂ ತಂದೆಗೊ ||
ಲ್ದನಮುಂ ವಂದಿಸಲಂದು ಕಂಡು ಬಲಭದ್ರಂ ವಿಸ್ಮಯಂಬಟ್ಟದೇ |
ನೆನುತುಂ ನೋಡಿದನಲ್ತೆ ರತ್ನವತಿಯುಂ ಮತ್ಕಾಂತೆಯೆಂದಾವಗಂ || ೧೬೦

ಬೞಿಕ್ಕಾ ಬಲಭದ್ರಂ ತನ್ನ ಕಾಂತೆಯಪ್ಪ ರತ್ನವತಿಯೆ ಕನಕಲತಾಭ್ರಾಂ-
ತಿಯುಂ ಮಾಡಿದಳ್. ಇಂದೆನ್ನ ಮಾನಮುೞಿಯಿತ್ತೆಂದು ಸಂತೋಷಂಬಟ್ಟು,

ಸೆಲೆದಪ್ಪಿದೆಡೆಗೆ ಮತಿ ಸಂ |
ಚಲಿಸಿರ್ದೆಡೆಗನ್ಯದೇಶಮಾದೆಡೆಗೆ ಖಳರ್ ||

ಮುಳ್ಳಿದೆಡೆಗೆ ಬುದ್ಧಿವೇಟಿಲ್ ।
ಕುಲವಧುವೇ ಕಾರಣಂ ಪರೀಕ್ಷೆಯಿದಲ್ತೇ ॥ ೧೬೧

ಎಂದು ಬಳಿಕಂ ಬಲಭದ್ರಂ ಗೃಹಗುಪ್ತಂಗೆ ನಮಸ್ಕರಿಸಿ ಕ್ಷೇಮಕುಶಲವಂ ಕೇಳ್ದನಂತರಂ,

† .....ಮಧುಮತಿಪತ್ತನ ।
ದವರೆಲ್ಲರ್ ಬಂದುಬಂದು ಸಮ್ಮುದದಿಱಿಬೊ ॥
ಪ್ಪುವ ಗೃಹಗುಪ್ತನನಪ್ಪಲ್ ।
ಸವಿಲಾಸದಿನಂದು ನೋಡಿದಂ ಬಲಭದ್ರಂ ॥ ೧೬೨

ಅಂತು ನೋಳ್ಪ ಬಲಭದ್ರನಂ ತನ್ನಳಿಯನೆಂದಲ್ಲರ್ಗೆ ಪೇಳಲವರ್ ಬಳಿಕಾತನಂ ಸಂಪ್ರೀತಿಯಿಂದೊಡಗೂಡಿರ್ದರ್.

ಅದಱಿಂ ಕಾಮಸಂಕಲ್ಪಮೆಂದಾರಾಕ್ಷಸಂಗೆ ನಿಂಬವತೀವೃತ್ತಾಂತವುಮಂ ಪೇಟ್ದೊಡವರ್ಕಾತಂ ಮೆಚ್ಚಿ – ನಿತಂಬವತಿ ಏಗೆಯ್ದಳೆಂದು ಕೇಳಲಾಂ ಪೇಟಲ್ ತಗುಳ್ದನದೆಂತೆನೆ.—

ಬುದವಿದ ಪೆಂಪಿನಿಂ ವಸುಮತೀಮುಖದರ್ಪಣಮಾದವಂತಿದೇ ।
ಶದೊಳೆಸೆದಿರ್ಪುದುಜ್ಜಯಿನಿಯೆಂಬ ಪುರಂ ಸಲೆ ತತ್ಪುರಾಧಿಪಂ ॥
ಮದವದರಾತಿಮತ್ತಗಜಮರ್ದನಸಿಂಹನನಂತಕೀರ್ತಿಯಿಂ ।
ಬುದಿತಯಶೋಧಿಕಂ ಭುವನಸಾಧಕನರ್ಥಿದರಿದ್ರಬಾಧಕಂ ॥ ೧೬೩

ಅಂತಿರ್ಪನಂತಕೀರ್ತಿಗೆ
ಅತಿರೂಪವಂತೆ ಕುಸುಮಾ ।
ಯಿತತನು ಪೆಂಪಿಂ ನಿತಂಬವತಿಯೆಂಬಳ್ ಭೂ ॥
ಪತಿಯಪ್ಪನಂತಕೀರ್ತಿಗೆ ।
ಸತಿಯಾದಳ್ ನಿಚ್ಚ ನಲ್ಮೆಯೆಸೆದಿರ್ಪನೆಗಂ ॥ ೧೬೪

ಲತೆಯಿಂ ಕಲ್ಪಕುಜಂ ಮದಾಳಿಯಿನರಲ್ದೋಂಟಂ ಮರಾಳೀಲಸ ।
ದ್ಗತಿಯಿಂ ಪುಷ್ಪಸರೋವರಂ ಪ್ರತಿಭೆಯಿಂ ವಾಕ್ಯಂ ಶಮಾಸಂಗದಿಂ ॥
ಯತಿ ದಾನೋನ್ನತಿಯಿಂ ಧನಂ ಮೆಱೆವವೋಲ್ ಪ್ರಾಣೇಶ್ವರೀಸ್ನೇಹದಿಂ ।
ಸತತಂ ರಂಜಿಸುವಂ ನಿತಂಬವತಿಯಿಂ ತದ್ಗಭುಜಂ ಭೂಮಿಯೊಳ್ ॥

† ನಲವಿಂ. ಎಂದು ಬಂದು ಪ್ರತಿಯ ಪಾಠ.

ಅಂತಾನಿತಂಬವತಿ

ಕುವಲಯನೇತ್ರೆ ಸುವರ್ಣದರ್ಪ್ ವೇಣಿ ಸಕೋಮಳ ದೇಹದೀಪ್ತಿಸಂ ।
ಭವೆ ವಿಲಸತ್ಪಯೋಧರಿಯನಿಪ್ಪುದಱಿಂ ರವಿರಶ್ಮಿಗಳ್ಗೆ ಬೀ ॥
ಸುವ ಬಿಱುಗಾಳಿಗಳ್ಕೆಯೊಳಗಿದೊರ್ಡವೇಂ ಸೊಗಸು ಪ್ರಸಿದ್ಧಿ ದಿ ।
ಗ್ವಿವರದೊಳೊಪ್ಪುಗುಂ ಸ್ಫಟಿಕಭಾಂಡದ ದೀಪ್ತಿಕೆವೋಲ್ ನಿರಂತರಂ ॥

ಅಂತು ನಿತಂಬವತಿ ಮಾನ್ಯತೆಯ ಮಹಿಮೆಯಿಂ ಪ್ರಸಿದ್ಧಿವಡೆದಿರೆ,

ಬೆಸನಮನಾರತಂ ತರುವನಾಂತುಮೊ ಕೈತವಮೆಯ್ದೆ ರೂಪ್ಪವೆ ।
ತ್ತೆಸೆವುದೊ ಧೂರ್ತವಿದ್ಯೆ ಮಿಗೆ ಮೆಯ್ವಡೆದಿರ್ದುದೊ ವಂಚನಾಗುಣಂ ॥
ಪುಸಿ ಕುಟಿಲಪ್ರಸಿದ್ಧಿ ನಿಜಮೂರ್ತಿಯೊಳಡುದೊ ಪೇೞೆನಲ್ಕೆ ರಂ ।
ಜಿಸಿವನದೊರ್ಬನಂ ಕಲಹಕಂಟಕನೆಂಬನನೇಕಬುದ್ಧಿಯಿಂ ॥ ೧೬೭

ಅಂತಿರ್ದ್ದ ಕಲಹಕಂಟಕನೆಂಬ ಧೂರ್ತಂ ನಿತಂಬವತಿಯ ಪ್ರಸಿದ್ಧಿಯಂ ಕೇಳ್ದುಜ್ಜಯಿನಿಗೆ ಬಂದು

ಕಾಲಜ್ಞಂ ಜ್ಯೋತಿಷ್ಕಂ ।
ಸ್ತ್ರೀಲಕ್ಷಣದೊಳ್ಪನಱಿವನತಿಮಂತ್ರಜ್ಞಂ ॥
ಭೂಲೋಕದೊಳಾನಲ್ಲದೆ ।
ಮೇಲಾರೆನಗೆಂದು ಪೊೞಲೊಳಾಡುತ್ತಿರ್ಪಂ ॥ ೧೬೮

ಪಗಲೆಲ್ಲಂ ಪೊೞಲೊಳ್ ತಿರು ।
ಗಿ ಗಿರೀಶವಿಹಾರದೆಡೆಯೊಳಿರುಳೆಲ್ಲಂ ಕ ॥
ಣ್ಮುಗಿದು ತನಸಿಯವೊಲಿರ್ಪಂ ।
ಮಿಗೆ ಧೂರ್ತನೆನಿಪ್ಪ ಕಲಹಕಂಟಕನೊಲವಿಂ ॥ ೧೬೯

ಅಂತು ಕೆಲವು ದಿನಮಲ್ಲಿರ್ದುಕೊಂಡೊಂದು ದಿನಂ ನಿತಂಬವತಿಯ ಪರಿಚಯರ್ಯನುಳ್ಳೊರ್ಬ ಭಿಕ್ಷುಕಿಯಂ ಕಂಡು

ಭಿಕ್ಷುಕಿ ಕೇಳ್ ನಿನ್ನರಸಿಯ ।
ಚಕ್ಷುಃಕರಪಾದದೆಡೆಗಳಂ ನೋಡಿ ಲಸ ॥
ಲ್ಲಕ್ಷಣಮಂ ಪೇೞ್ವೆಂ ನೀಂ ।
ಸುಕ್ಷೇಮದೊಳಯ್ದುವುದೆನ್ನ ನರಪುನೆಗೀಗಳ್ ॥ ೧೭೦

ಎಂದು ಕಲಹಕಂಟಕಂ ಪೇೞ್ದೊಡನಱಿಂತೆ ಗನ್ನೆಯೊಂದು ಭಿಕ್ಷುಕಿಯುವ ನನಾರುಮಱಿಯದಂತೊಡಗೊಂಡು ಪೋಗಿಯರಮನೆಯ ಬಾಗಿಲೊಳಿರಿಸಿ ತತ್ಪ್ರಪಂಚಮನರಸಿಗೆ ಪೇೞೆ ನಿತಂಬವತಿಯಿಂತೆಂದಳ್:—

ಪರಪುರುಷಮುಖನಿರೀಕ್ಷಣ ।
ನರಕಕ್ಕಂ ಪಾತ್ರಮಲ್ತೆ ನಲ್ ಕೇಳ್ ಸತಿಯು ॥
ಬರ್ಬರ ನಡುವೆ ತೆಱೆಯುನಿಟ್ಟು ।
ದರದಿಂ ಪೊಱಗಣ್ಗೆ ನೀಡು ಚರಣಮನರಸೀ ॥ ೧೩

ಎಂದು ಭಿಕ್ಷುಕಿ ಪೇೞ್ದೊಡಾತನನೊಡಗೊಂಡು ಬಾಯೆಂಬುದುಂ, ಆವ ಳೊಡಗೊಂಡು ಬಂದು, ನಿತಂಬವತಿಯು ಕಲಹಕಂಟಕನ ನಡುವೆ ತೆಱೆಯನಿ ಟ್ಟನ್ನುದೇವಿ ಪಾದಮಂ ಲಕ್ಷಣಮಂ ನೋಡಲ್ ಪೊಱಗೆ ನೀಡೆಂಬುದುಂ

ಸೋಲದೊಳಾತ್ಮವಲ್ಲಭನಲಂಪು ಮಿಗಲ್ ಪರಿಚುಂಬಿಸಲ್ಕೆ ತಾಂ ।
ಬೂಲರಸದ್ರವಂ ವಿಮಳತದ್ದಶನದ್ಯುತಿ ಪತ್ತಿದಂತೆ ಸ ॥
ಲ್ಲೀಲೆಯೊಳಾಂತಲಕ್ತಕರಸಂ ನಖದೀಪ್ತಿ ಕರಂ ಕವಲ್ತಿರಲ್ ।
ಬಾಲಕಿ ನೀಡಿಗಳ್ ಪಡೆದು ನೂಪುರರಂಜಿತಪಾದಪದ್ಮಮಂ ॥ ೧೩೨

ಅಂತು ನಿತಂಬವತಿ ಪೊಱಗಣ್ಗೆ ಪಾದಮಂ ನೀಡಲದಂ ಕಲಹಕಂಟಕಂ ಪಿಡಿದು,

ಜಗತೀಕಾಂತನ ಸತಿಯುಂ ।
ಖಗೆ ಲಕ್ಷಣಮಂ ನಿದಾನಿಸಲ್ಕಱಿಯೆಂ ಕೇಳ್ ॥
ಮೃಗನಯನೆ ನಿನ್ನ ಪದಮಂ ।
ಬಗೆ ಮಿಗಲಾಂ ನೋಂಕಿ ಲಕ್ಷಣಂಬಡೆದಿರ್ದೆಂ ॥ ೧೩೩

ಎಂದನಂತರಂ,

ಚರಣಾಂಗುಷ್ಠಮನೀೞ್ದು ನೂಪುರಮನಾರ್ಪಿಂದುರ್ಚಿ ಕೈನೀಡಿ ಬಂ
ಧುರಮಪ್ಪೊಳ್ದೊಡೆಯೊಳ್ ನಖಾಗ್ರಪತಿಯಿಂ ನೀೞ್ಪಿಂದದಿಂ ರೇಖೆಯೊ
ಪೆರಡಂ ಮಾಡಿ ಕೞಲ್ದ ನೂಪುರಮನೊಂದಂ ಕೊಂಡು ತದ್ವ್ಯಾಜಮಂ
ಬಿರದಿಂದಂ ತಳೆದಂ ಮಹಾತ್ವರಿತದಿಂದಾಧೂರ್ತನಿಂದ್ರದ್ವಿಷಾ ॥ ೧೩೪

ಅಂತವನೊಳ್ದೊಡೆಯಂ ಕೀೞು ನೂಪುರಮಂ ಕೊಂಡು ಪೋಗಲೊಡಂ,

ಏಗೆಯ್ವೆನಿದೇಕಾರಣ ।
ಮೀಗಳ್ ಧೂರ್ತಂಗೆ ಚರಣಮಂ ತೋಱಿದೆನು ॥

ದ್ವೇಗವುನೀತಿಜದಿಂದಂ ।
ನೀಗುವೆನಾನೆಂದು ಕಾಂತೆ ತಳವೆಳಗಾದಳ್ ॥ ೧೭೫

ಅಂತು ನಿತಂಬವತಿ ದುಗುಡದಿಂ ಮುಸುಕಿಟ್ಟೊಱಗಿರಲಿತ್ತಲ್,

ಸುರಗಿರಿಯೊಳ್ ದಿನನಾಯಕ ।
ಕಿರಣಂ ಮೊಱೆವಂತೆ ತಪ್ತಹೇಮಪಾತ್ರಯುಗಂ ॥
ಧುರರತ್ನದಿನೊಪ್ಪುವ ನೂ ।
ಪುರಮುಂ ಪೌರರ್ಗೆ ತೋಱದಂ ತಮ್ಮನೃಪರ್ಗಂ ॥ ೧೭೬

ಅಲ್ಲಲ್ಲಿ ತೋಱಸುತ್ತುಂ ।
ಮೆಲ್ಲನೆ ಕೊಂಡುಯ್ದನಂತಕೀರ್ತಿಗೆ ತೋಱಲ್ ॥
ವಲ್ಲಭೆಯ ನೂಪುರಂ ತಾ ।
ನಿಲ್ಲಿಗೆ ಬಂದಂದಮಾವುದೆಂದನಿಳೇಶಂ ॥ ೧೭೭

ಎಂದನಂತಕೀರ್ತಿಯೆಂಬುದುಂ ಕಲಹಕಂಟಕನಿಂತೆಂದಂ:—

ನಿನ್ನಿರುಳಾಂ ಶ್ಮಶಾನದೆಡೆಯಲ್ಲಿ ಸಮಾಧಿಯೊಳಿರ್ದ ವೇಳೆಯೊಳ್ ।
ಕನ್ನೆಯ ರೂಪಿನಿಂ ಪೆಣನನೀಟ್ದು ತಿನಲ್ಬರುತಿರ್ದ ದೈತ್ಯೆಯುಂ ॥
ಬನ್ನಮನೆಯ್ದಿಸಲ್ಪಿಡಿದು ಸೂಲದೊಳಾನಿಱಿಯಲ್ಕೆ ನೊಂದವಳ್ ।
ತನ್ನನಡುತ್ತು ಪೋಗುತಿರೆ ಬಿಟ್ಟುದು ನೂಪುರಮಾಕೆಯಂಘ್ರಿಯಿಂ॥೧೭೮

ಎಂಬುದುಮನಂತಕೀರ್ತಿ ವಿಚಾರಂಗೆಯ್ದು,

ಪರಿಕಿಸಿ ನಿತಂಬವತಿ ತ ।
ನ್ನೆರಡುಂ ನೇಪುರಮನೊಲ್ದು ಕಳಪುವುದೆಂದಾ ॥
ಬರದಿಂ ಕಂಚುಕಿಯುಂ ನೃಪ ।
ವರನಟ್ಟಲ್ ಪೋಗಿ ಬಂದನವನನಾಕ್ಷಣದಿಂ ॥ ೧೭೯

ಅಂತಾಕಂಚುಕಿ ಬಂದು

ದೇವಿಯುರಿದೊಂದು ನೇಪುರ ।
ಮಾಮೆಡೆಯೊಳ್ ಬಿಟ್ಟುದೆಂದು ತಿಳಿಯೆಂ ನೀನೊ॥
ಲ್ದೀವೊಂದು ನೇಪುರಮುನವ ।
ನೀವಲ್ಲಭನೆಡೆಗೆ ಕೊಂಡು ಪೋಗೆಂದಿತ್ತಳ್ ॥ ೧೮೦

ಅದಲ್ಲದೆಯುಂ,

ತೊಡೆಯೊಳ್ ಶೃಣ್ಣೊಂದಾದ ।
ತ್ತಡಿಯುನಿಡಲ್ಬಾರದೆಂದು ನರಳುತ್ತುಂ ತೂಂ ॥
ಕಡಿಕೆಯುನೊಳಕೊಂಡಿರ್ದಳ್ ।
ಮಡದಿ ಕರಂ ಮುಗುಡದಿಂ ಧರಿತ್ರೀನಾಥಾ ॥ ೧೮೧

ಎಂದು ಪೇೞಲೊಡಂ,

ಪೆಱತೇಂ ವಿಚಾರಮಂಗನೆ ।
ನೆಱೆ ರಕ್ಕಸಿಯಪ್ಪಾದಳಲ್ಲದಿರ್ದೊಡೆ ರತ್ನಂ ॥
ತುಱುಗಿದ ಪೊಸಕಾಲ್ದೊಡವೇ ।
ತೆಱದಿಂದೀತಂಗೆ ಬಂದುದಾಪಿತೃವನದೊಳ್ ॥ ೧೮೨

ಎಂದನಂತಕೀರ್ತಿ ಮತ್ತಂ,

ಇಲ್ಲಿರ್ದೊಡೆ ತತ್ಸತಿ ಸ ।
ವ್ರ್ಮಲ್ಲರನಿಂದಿರುಳ್ ತಿಂದು ನುಂಗುವಳದಱಿಂ ॥
ಮೆಲ್ಲನೆ ತತ್ಪಿತೃವನದೊಳ್ ಬ ।
ಲ್ಲಂದದಿನಿರ್ಪುದೆಂದು ನೂಂಕುವೆನವಳಂ ॥ ೧೮೩

ಎಂದನಂತಕೀರ್ತಿ ನಿತಂಬವತಿಯುಂ ನಡುವಿರುಳೊಳೆಯ್ದಿ ಶ್ಮಶಾನದೊಳ್ ನೂಂಕಿ ಪೋಗೆ,

ಮದಮುಱಿಯಲ್ ನಿತಂಬವತಿ ತನ್ನ ಮನೋವ್ಯಥೆಯಿಂ ಶ್ಮಶಾನಮ।
ಧ್ಯದೊಳೆಸೆದಿರ್ದ ತತ್ಕಲಹಕಂಟಕನಂ ತವೆ ಕಂಡು ನೀನೆ ಮಾ ॥
ಡಿದ ಕುಹಕಂ ಫಲಂಬಡೆದುದಿನ್ನೆನಗಾರ್ ಗತಿ ನೀನೆ ರಕ್ಷಿಸೋ ।
ವಿದೆ ತನುವೆಂದು ಬಿಬ್ಬಿಳಡಿಯೊಳ್ ಕರುಣಂ ಕಡೆಗಣ್ಮುತಿರ್ಪನಂ ॥ ೧೮೪

ಅಂತವಳ್ ದೈನ್ಯಭಾವದಿಂ ಪೇೞಲೊಡಂ

ತಾನೆಸಗಿದ ಕಾರ್ಯಂ ಸ ।
ನ್ಮಾನದಿನೆಯ್ತಂದುದಿರ್ದ ಠಾವಿಂಗೆಂದಾ ॥
ಮಾನಿನಿಯುಂ ಕೊಂಡೊಯ್ದಂ ।
ತಾನೊಲವಿಂ ಕಲಹಕಂಟಕಂ ಸುರವೈರೀ ॥ ೧೮೫

ಅದಱಿಂ ಮತಿಯೂಹೆಗೆ ಸಾಧ್ಯಮೆಪ್ಪುದಿಲ್ಲೆಂದು ಬ್ರಹ್ಮರಾಕ್ಷಸಂಗಾಂ ಪೇೞಲಾತನತಿತುಷ್ಟನಾಗಿ ಎನ್ನಂ ಮನ್ನಿಸಿದಪೆನೆಂಬ ಸಮಯದೊಳ್,

ಆಲಿವರಲ್ಗಳುಂ ಮಾಣಿಕೆಯ ಬಲ್ವಸಿಯುಂ ಮುಗಿಲಿಂದೊಸರ್ವವೊಲ್ ।
ಡಾಳದ ಕಣ್ಣ ಸೀರ್ವನಿಗಳುಂ ಪ್ರ[illegible]ಮುತ್ತುಗಳುಂ ನಭೋಂತರದೊಳ್ ॥
ಸೂಲಿಡಲುವಿರ್ಗಯೊಳ್ ಪದೆದು ಕಂಡಿದು ಚೋದ್ಯಮೆನುತ್ತೆ ಭೋಂಕನಲ್ ।
ಮೇಲನೊಱಲ್ದು ನೋಡಿ ಮಿಗೆ ಕಂಡನದೊರ್ಬ ಮಹೋಗ್ರದೈತ್ಯನಂ ॥

ಕಡ[illegible]ಸೆಯುತ್ತೆ ಪೂರ್ಣಶಶಿಮಂಡಲಮಂ ಮುಳಿಸಿಂ ವಿಧುಂತುದಂ ।
ಪಿಡಿದೆ[illegible]ಂತೆ ಚಂದ್ರಮುಖಿಯೊರ್ಬಳನಂದು ಮಹೋಗ್ರರಾಕ್ಷಸಂ ॥
ಜಡಿಯುತೆ ತಾರಕಾಪಥದೊಳಾರ್ಪಿನೊಳಂಜದೆ ಕೊಂಡು ಪೋಪನಂ ।
ತವೆಯದೆ [illegible]ಡು ವಿಸ್ಮಯದೊಳೀಕ್ಷಿಸುತಿರ್ದನಿಳಾಧಿನಾಯಕಾ ॥ ೧೮೭

[illegible]ತು ನೋಡಿ,

[illegible]ಡು[illegible] ಮುಚ್ಚರಿರದಿರವಂ ಪವನಾಧ್ವದೊಳಾರ್ದ ರಾಕ್ಷಸಂ ।
ಮಡದಿಯನೊರ್ಬಳಂ ಕಡುಪಿನಿಂದೆಳೆದುಯ್ದುದನೆಯ್ದೆ ಕಂಡು ಬೆಂ ॥
ಬಿಡಿಯದೆ ನೋಡುತಿರ್ಪ ತಿಱನಾಯ್ತು ನಗಂಬರಯಾನವಿದ್ಯೆಯಂ ।
ಕುಡನೆ ವಿಧಾತ್ರನೆಂದುಸಿರ್ದ*ನೆನ್ನೊಡಸಿರ್ದ ನಿಶಾಚರೇಂದ್ರನೊಳ್ ॥೧೮೮

ಅಂತೆನ್ನೊಡಸಿರ್ದ ಬ್ರಹ್ಮರಾಕ್ಷಸಂಗೆ ಪೇೞ್ದಾಕಾಶದೊಳ್ ಪೋಪ ರಾಕ್ಷಸನಂ ತೋಱಲವನಂ ಬ್ರಹ್ಮರಾಕ್ಷಸಂ ಕಂಡು

ಬಿಡುಬಿಡು ದೈತ್ಯ ಕೋಮಳೆಯನೆಲ್ಲಿಗೆ ಪೋದಪೆಯೆಂದು ದಾಡೆಯಂ ।
ಜಡಿದು ಪದಾಗ್ರದಿಂ ನೆಲಮನುಯ್ದು ಪುಟಂನೆಗೆದಂಬರಕ್ಕೆ ಬೆಂ ॥
ಬಿಡದೆ ತುಡುಂಕಿ ತದ್ದನುಜನಂ ಗಗನಸ್ಥಳದಲ್ಲಿ ಮಿಱಿಯೊಂ ।
ದಡಿಯಿಡಲೀಸದಾಂತು ಕಡುಪಿಂ ಪೊಣರ್ದಂ* ಕಲಿ ಬೊಮ್ಮರಕ್ಕಸಂ ॥೧೮೯

ಅದೆಂತೆನೆ:—

ದಾಡೆಗೆ ದಾಡೆ ಗರ್ಜನೆಗೆ ಗರ್ಜನೆ ಘಾತಿಗೆ ಘಾತಿ ತೋಳ ಬ ।
ಲ್ಗಾಡಿಗೆ ಗಾಡಿ ವಂಚನೆಗೆ ವಂಚನೆಯುಗ್ರತೆಗುಗ್ರಮಸ್ತ್ರಸಂ ॥
ಪೀಡೆಗೆ ಪೀಡನಂ ನಿಜಕರಾಳಮುಖಕ್ಕೆ ಕರಾಳವಕ್ತ್ರಮು ।
ಲ್ಗಾಡದೆ ನಿಂದು ತಳ್ತುಱಿದರೊರ್ಬರನೊರ್ಬರುದಗ್ರದಾನವರ್ ॥ ೧೯೦

ಅಂತವರಿರ್ಬರಾಕಾಶದೊಳತ್ಯಾಸುರವಾಗಿ ಕಾದುವ ಸಮಯದೊಳ್

ಸೂಸುವ ಕುಂತಳಂ ನಸು ಬೞಲ್ದ ಕುಚಂ ಪಱಿಪಟ್ಟ* ಹಾರಮು ।
ಚ್ಛ್ವಾಸವದೊಳ್ ತೊಡರ್ದ ನಡುಸುಯ್ ಕುಚದಿಂ ತೆರಳ್ದುತ್ತರೀಯಕಂ ॥

ಗಾಸಿಗೆ ಕಂದಿದಂಗಮೆನಸುಂ ಭಯಮುಮಂ ತಳೆದಿರ್ದ ಚಿತ್ತಮು ।
ತ್ಯಾಸುರಮಪ್ಪಿನಂ ಗಗನದಿಂ ಸತಿ ಭೋಂಕನೆ ಬಿೞ್ದಳುರ್ವಿಯೊಳ್ ॥ ೧೯೧

ಅಂತೊರ್ಬಳ್ ಕಾಂತೆ ಗಗನದಿಂದವನಿಗೆ ಬಿೞ್ದುದಂ ಭೋಂಕನೆ ಕಂಡಾಂ ಪೊರ್ದಿ ನೋೞ್ಪನಂ

ಅದನೇವೇೞ್ವುದೊ ಕಂತುಕಾವತಿಯವಳ್ ತಾನಾದಳಾಂ ನೋೞ್ಪುದಂ ।
ಕದಪಂ ಕೆಯ್ಯೊಳವುಚಿರ್ ಪೂರ್ಣಕುಂಭಯುಗ್ಮಕ್ಕೊಪ್ಪೆ ಸಂವ್ಯಾನಮಂ ॥
ಪದುಳಂ ಮಾಡಿ ನಭೋಂತರದಿಂದಿಳೆಗೆ ಬಿೞ್ದಳ್ ಕ್ಲೇಶದಿಂ ನಾಣ್ಚಿ ಬಾ ।
ಡಿದ ವಕ್ತ್ರಾಂಬುಜದಿಂ ಮದೀಯಮುಖಮಂ ಸಾಪೇಕ್ಷದಿಂ ನೋಡಿದಳ್ ॥

ಅಂತವಳೆನ್ನಂ ನೋೞ್ಪ ಸಮಯದೊಳ್

ಗಗನಸ್ಥಳದೊಳ್ ದಾನವ ।
ರಗಣಿತಶಸ್ತ್ರಾಸ್ತ್ರಹತಿಗಳಿಂ ತಳ್ತಿಱಿದು ॥
ವಿರ್ಗೆ ಕಡಿಗಳಾಗಿ ಬಿೞ್ದರ್ ।
ಮಿಗೆ ರೌದ್ರಶರೀರಿಗಳ್ ಗತಪ್ರಾಣರ್ಕಳ್ ॥ ೧೯೨

ಅಂತಿರ್ಬರ್ ದೈತ್ಯರ್ ಗತಪ್ರಾಣರಾಗಿ ಬಿೞ್ದುದಂ ಕಂಡನಂತರಂ ಕಂತುಕಾವತಿಯನಾಶ್ವಾಸಿಸಿ ತತ್ಕಾಂತೆಸಹಿತಲ್ಲಿಂ ತೆರಳ್ದು ಪೂರ್ವಬಹಿತ್ರಮನೇಱಲೊಡಂ,

ಸ್ಫುಟದಿಂ ಭಾವಿಸಿ ಸಿಂಹದೇಶದ ದಿಶಾಭಾಗಕ್ಕೆ ಪೋಪಂದದೊಳ್ ।
ಪಟಮಂ ಬಿಟ್ಟೊಡೆ ತದ್ಬಹಿತ್ರಮನಿಲೋದ್ಯನ್ಮಾರ್ಗದೊಳ್ ಬೇಗದಿಂ ॥
ತಟಮಂ ಸಾರ್ದಿರೆ ಕಂತುಕಾವತಿಯನಾಗಳ್ ಭೀಮಧನ್ವಾಂಕನಂ ।
ದಿಟಮಾಂ ಕೊಂಡಿೞಿದೆಂ ನೆಲಕ್ಕೆ ಪದೆಪಿಂದಾಯಿರ್ವರಂ ಭೂಮಿಪಾ ॥ ೧೯೩

ಅಂತಾಂ ತಡಿಗಿೞಿಯಲೊಡಂ,

ಸುತೆಯುಂ ರಾಕ್ಷಸನುಯ್ದನಾತ್ಮತನಯಂ ವಾರಾಸಿಯೊಳ್ ಪೋದನೆ ।
ನ್ನ ತನೂಜೀವನಮೇವುದೆಂಬ ಬಹುಚಿಂತಾವಹ್ನಿಯಿಂ ಜೀವಮಂ ॥
ಕ್ಷಿತಿನಾಥಂ ಮಿಗೆ ತುಂಗಧನ್ವನೊಲವಿಂ ಬಿಟ್ಟಿಂದಮೊಂದೆಂಬ ವಾ ।
ರ್ತೆ ತರಂಗೊಂಡಿರೆ ಕೇಳ್ದನಲ್ತೆ ತಡಿಂಗೊಳ್ ಭೂಪಾಲಚೂಡಾಮಣೀ ॥

ಅಂತಾನಾವಾರ್ತೆಯುಮಂ ಕೇಳುತ್ತುಂ ಸಿಂಹಪುರಕ್ಕೆ ಬಂದು

ಅನುಪಮಾಗಿರ್ದ ನೃಪಾಲಪದಮಂ ವಿವಿಧಲೋಕಂ ನೂತ್ನಸಾಮ್ರಾಜ್ಯಮಂ ।
ಗನೆಯುರ ತಚ್ಚತುರಂಗಸೇನೆ ಜನತಾವಿಸ್ತಾರಸಂಪತ್ತಿಯುಂ ॥
ದೆನಗಾಗಲಿ ಸಲೆ ಭೀಮಧನ್ವನದಱಿಂ ಮದ್ಭೃತ್ಯನಾದಂ ಮನ ।
ಕ್ಕನುರಾಗಂ ಮಿಗೆ ಕಂತುಕಾವತಿಯೊಳಾಂ ಕೂಡಿರ್ದೆನುರ್ವೀಶ್ವರಾ ॥

ಅಂತು ಭೀಮಧನ್ವನೆನಗೆ ಭೃತ್ಯನಾಗಿ ಕಂತುಕಾವತಿ ಸತಿಯೆನಗಾಗಿರೆ ಕೋಶದಾಸಂಗೆ ಚಂದ್ರಸೇನೆಯುಂ ಕೊಟ್ಟನಂತರಂ ನಿಮ್ಮಡಿಯನಱಸಲೆಂದಿರ್ಪಾಗಳ್

ನಿಮ್ಮಡಿಗಳ್ಗೆ ಮಿತ್ರನೆನಲೊಪ್ಪುವ ಸದ್ಗುಣಿಯಾಂಗರಾಜನೆ ।
ನ್ನಮ್ಮಿತ್ರದದಿಂ ಸಹಾಯಗುಣಮಂ ಮೆಱೆಯಲ್ಕಱಸಲ್ಕೆ ಸೇನೆಯುಂ ॥
ಗಮ್ಮನೆ ಕೂಡಿಕೊಂಡು ಮನದುತ್ಸವದಿಂ ನಡೆತಂದು ದೇವ ಕಂ ।
ಡೆಮ್ಮ ಮೃದುಪಾದಪದ್ಮಯುಗಮಂ ನಿಜಮೂರ್ತಿಯನೆನ್ನ ಪುಣ್ಯದಿಂ ॥೧೯೭

ಎಂದು ಮಿತ್ರಗುಪ್ತಂ ತನ್ನ ವೃತ್ತಾಂತಮಂ ರಾಜವಾಹನಂಗೆ ಪೇಳ್ದುದುಂ,

ಕೂಡಿದ ವಿಂಧ್ಯವಾಸಿನಿಯ ಜಾತ್ರೆಗೆ ಪೋಗಿ ವಿಪಂಚಿನಾದಮಂ ।
ಗಾಡಿ ಮಿಗಲ್ಕೆ ಕೇಳ್ದು ನಯನೇಂದ್ರಿಯಮುಬ್ಬರಿಸಿರಲ್ಕೆ ಕಂತುಕ ॥
ಕ್ರೀಡೆಯನೊಲ್ದು ನೋಡಿ ಸುಖದಿಂ ಪರರಾಜ್ಯಮನಿಂತು ಸಾಧ್ಯಮಂ ।
ಮಾಡಿದ ಮಿತ್ರಗುಪ್ತ ನಿನಗಾರ ಸರಿಯೆಂದನಭಂಗವಿಕ್ರಮಂ ॥ ೧೯೮

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ

ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ

ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಿತ್ರಗುಪ್ತಕಥಾವೃತ್ತಾಂತಂ

ದ್ವಾದಶಾಶ್ವಾಸಂ

॥ ತ್ರಯೋದಶಾಶ್ವಾಸಂ ॥

—ಮಂತ್ರಗುಪ್ತನ ನಿರೋಷ್ಠ್ಯದ ಕಥೆ—

ಶ್ರೀರಂಜಿತವಕ್ಷಂ ಧಾ ।
ತ್ರೀರಮಣಂ ಮಂತ್ರಗುಪ್ತನಂ ನೋಡಿ ತದಾ ॥
ಕಾರಸ್ಥಿತಿಯಂ ಕೇಳ್ದಂ ।
ಧೀರಂ ಕಡುಗೂರ್ತಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನಂ ಮಂತ್ರಗುಪ್ತನ ಮುಖಮಂ ನೋಡಿ ನೀನೆಸಗಿದ ಕಾರ್ಯಮಂ ಪೇೞೆಂಬುದುಂ,

ತನ್ನಧರಂ ಮನೋರಮೆಯ ದಂತಪರಿಕ್ಷತದಿಂ ಪಿಸುಳ್ದ ರ ।
ಕ್ತಂ ನೆಲೆಗೆಟ್ಟಿರಲ್ಕೆ ತುಟಿ ಮುಟ್ಟಿದೆ ಕೂರ್ತು ಕಥಾಪ್ರಪಂಚಮಂ ॥
ಬಿನ್ನವಿಸಲ್ಕೆವೇೞ್ಪುದೆನುತುಂ ಸುಭಗಂ ಸುಖಿ ಮಂತ್ರಗುಪ್ತನ ।
ತ್ಯುನ್ನತಬುದ್ಧಿಯಿಂ ಸಹಜಕಾರ್ಯಮನಂದುಸಿರ್ದಂ ನಿರೋಷ್ಠ್ಯದಿಂ ॥ ೨

ಅದೆಂತೆನೆ:—

ಧರಣೀನಾಯಕ ಕೇಳ್ ನಿಜಾಂಘ್ರಿಸರಸೀಜಾತಂಗಳಂ ಕಾಣಲಾ ।
ದರದಿಂ ಸಾಗರಚೇಲಧಾರಿಣಿಯನೆಲ್ಲಾ ಚೆಂದದಿಂ ಸಂತತಂ ॥
ತಿರುಗಿ ಶ್ರೀಗೆ ನಿರಂತರಂ ನೆಲೆಯೆನಲ್ ಸಾರ್ದಿರ್ದ ಸಲ್ಲಕ್ಷಣಂ ।
ಸ್ಥಿರದಿಂದಿರ್ದ ಕಳಿಂಗದೇಶದೆಡೆಯಂ ಸಾರ್ದೆಂ ಸದಾನಂದದಿಂ ॥ ೩

ಅಂತು ಕಳಿಂಗದೇಶಮನೆಯ್ದಿ

ಧರಣಿಯ ಕಂಠದೆಕ್ಕಸರದಂದದಿನಗ್ಗಳದಿಂ ನೆಗೞ್ತೆಯಿಂ ।
ದಿರೆಯ ನಿಜಾನನಕ್ಕಡರ್ದ ರತ್ನದ ಕನ್ನಡಿಯಂದದಿಂ ನಿರಂ ॥
ತರನಯಕಾಂತಿಯಂ ತಳೆದ ಸಜ್ಜನಸಂತತಿಯಿಂದೆ ಕೀರ್ತಿಯಂ ।
ಧರಿಸಿದ ತತ್ಕಳಿಂಗನಗರಾವತಿಯಂ ಸಲೆ ಕಂಡೆನುರ್ವಿಪಾ ॥ ೪

ಅಂತಾಕಳಿಂಗನಗರಿಯಂ ಕಂಡಾಕ್ಷಣದಿಂ

ಸಂತತರಥಾಂಗತತಿಗತಿ ।
ಚಿಂತಾಹತಿ ನೆಲಸೆ ಧರೆಗೆ ಸಿವ್ರಾಲಸ್ಯಂ ॥

ತಿಂತ್ರಿಣಿಯಿನಾಗೆ ಸರಸಿಜ ।
ಕಾಂತಂ ತಾನಸ್ತಗಿರಿಗೆ ನಟ್ಟನೆ ಸಾರ್ದಂ ॥ ೫

ಅಂತಸ್ತಗಿರಿಯನೆಯ್ದಲ್ಕಾಕಳಿಂಗನಗರಿಯಂತಿಕಶಾಖೆಗಳಲ್ಲಿ ಕಣ್ಗೆಯ್ಯಲೆಂದಿರ್ದ ಕಿನ್ನರಜಾಯಾಕಾಂತರ

ಇನಿತಾಯಾಸಂಗೆಯ್ವಲ್ ।
ತನಗೇತಱ ಸಿದ್ಧಿ ತಾನದೆಲ್ಲಿಯು ಸಿದ್ಧಂ ॥
ಸನಯಂ ತಾನಲ್ತೆ ಸಿಸಿದ ।
ದನಿ ಕರ್ಣಕ್ಕೆಯ್ದಲಱ ಸರಿಸಕೆ ನಡೆದಂ ॥ ೬

ಆವನಿಯು ಪಿಂದನೆ ನಡೆಯೆ,

ಪರಯದ ಜಾಯಾಕಾಂತರ್ ।
ತಱದಿಂ ಕಿನ್ನರಶರೀರಿಗಳ್ ಸಡಗರದಿಂ ॥
ದಿರದೆಯ್ದಿದರಾಕ್ಷಣದಿಂ ।
ಪರಧರಣಿಗೆ ಕಂಡೆನಾನದಂ ಧರಣೀಶಾ ॥ ೭

ಅಂತಾಕಿನ್ನರಜಾಯಾಕಾಂತರ್ ಚಿತ್ರಾಗ್ನಿಸ್ಥಾನಕ್ಕೆಯ್ದಲೊಡಂ,

ಜಿತ ಚಂಚತ್ಕಂಥೆ ರಕ್ಷಾಂಕಿತನಿಖಿಳಶರೀರಂ ಸಸಿದ್ಧಾರ್ಥಹಸ್ತಂ ।
ಕಿಡಿಗಣ್ ಕಾಯಾರ್ಧಚಿತ್ತಂ ನರನಿಕರಲಸಜ್ಜಾಂಗಲಸ್ನಾಲಿ ಲಕ್ಕಂ ॥
ಗಡಿಗೆಟ್ಟೆಬ್ಬಿರ್ದಂಧನಂ ತನ್ನಿದಿರ್ಗತಿಶಯದಿಂದಿರ್ದ ಕಿಚ್ಚೆಯ್ದೆ ಚೆನ್ನಿಂ ।
ಗೆಡೆಯಾಗಿರ್ದನಂದಗ್ಗಳದ ಯತಿಗಣಶ್ರೇಷ್ಠನಾಗಳ್ ಯಥೇಷ್ಟಂ ॥ ೮

ಪಿತೃವನಟವಿಯೊಂ ಘನಸಾ ।
ಖ್ಯಾತತಿಯೊಂದಲಗರ್ಳೇೞ್ತಿಯಿಂದೆಸೆದಿರ್ದ ॥
ತಾತ್ತನ ಕೆಲದಲ್ಲಿ ದಳ ।
ವ್ರಾತಂ ತಱಿದರ್ದ ಶಾಖೆ ದೆಸೆಗಡರ್ದನಿಶಂ ॥ ೯

ಅಂತಾಪರಧರಣಿಯ ಶಾಖೆಯಲ್ಲಿರ್ದ ಯತಿಶ್ರೇಷ್ಠಂ ಕಿನ್ನರಜಾಯಾಕಾಂತರಂ ನಿರೀಕ್ಷಿಸಿಂತೆಂದಂ:—

ಸರಸಿಜನೇತ್ರೆಯುಂ ಘನಚಳಾಳಕಿಯುಂ ಕಳಕಂಠನಾದೆಯುಂ ।
ತರಳಕಟಾಕ್ಷೆಯುಂ ಕನಕಕಾಂತಿಶರೀರೆಯುನಿಲ್ಲಿಗೆಯ್ದಿಸಾ ॥

ದರದೆ ಕಳಿಂಗಕನ್ಯಕೆಯುನೆಂದೆನೆ ಸಾಹಸದಲ್ಲಿ ಸಂದ ಕಿ ।
ನ್ನರನಿರದೆಯ್ದಿ ತತ್ಸತಿಯುನಾಯತಿಯಾಜ್ಞೆಗೆ ತಂದನಾಕ್ಷಣಂ ॥ ೧೦

ಕನಕಘಟಸ್ತನಂ ರಜನಿರಂಜಿತದೀರ್ಘಲಸತ್ಕಳಾಳಕಾ ।
ನನ ಗಜಯಾನಸತ್ರಿಯುನಂಗಶರಾಗ್ರಕಟಾಕ್ಷಕಾಂತಿ ಚಂ ॥
ದನಘನಸಾರಗಂಧ ನಿಜದೇಹಲತಾಸ್ಥಿತಿ ಜಾತರಕ್ಷೆಗಳ್ ।
ವುನಿದೆರ್ಗಿರ್ಚ ನೀಂಯುದೆಲೆ ರಾಜಗನ್ನೀಶ ಶಶಾಂಕಲೇಖೆಯಾ ॥ ೧೧

ಅಂತಿರ್ದ ಕಳಿಂಗಕನ್ನೆಯೆನಿಸಿರ್ದ ಶಶಾಂಕಲೇಖೆಯುನಾಕಷ್ಟಯತಿಗಾ ಕಿನ್ನರಂ ತಂದೀಯೆ,

ಯತಿಯತಿಶೀಘ್ರದಿನಾಗಳ್ ।
ಸತಿಯುಡಗಿಂದಗ್ನಿಯಾನನಕ್ಕಾನಂದ ॥
ಸ್ಥಿತಿಯುನೆಸಗಲ್ಕೆ ತಾಂ ತ ।
ತ್ಸತಿಯಂ ನೆನೆವಸಿಯುನಂಗಲತೆಗಾಗಿಸಿದಂ ॥ ೧೨

ಅಂತಾಯತಿ ಶಶಾಂಕಲೇಖೆಯಂ ಹತಂಗೆಯ್ಯಲಾನದಂ ಕಾಣಲಾಜದೆ

ಎಲೆಲೆಲೆ ಕಷ್ಟ ನೀಂ ಯತಿಯೆ ಅಂತಕನಲ್ಲದೆ ಖಡ್ಗಧಾರೆಯಂ ।
ಲಲನೆಯ ಕಂಧರಕ್ಕೆ ಜಡಿದಾನಿಸದಿರ್ ತೆಗೆಯೆಂದಗಲ್ಚಿ ತ ॥
ತ್ಸಳಯತಿನಾಥನಂ ನಿಜಕರಾಸಿಯಿನಿರ್ಕಡಿಗೆಯ್ದನಾತನಾಂ ।
ತೆಳೆ ಜಡೆ ಕಂಥೆಯಂ ಸಸಿನೆ ಶಾಖೆಯ ಸಂಧಿಗೆ ಸ್ಯೆತೆ ಸಾರ್ಚಿದೆಂ ॥ ೧೩

ಅದಲ್ಲದಾಯತಿಯ ಕಡಿಖಂಡಂಗಳಂ ಚಿತಾಗ್ನಿಗೀಡಾಡಲದಂ ಶಶಾಂಕಲೇಖೆ ನಿರೀಕ್ಷಿಸಿ

ಎನ್ನ ಶರೀರಂ ಸತತಂ ।
ನಿನ್ನಿಂ ವಿಶಸನದ ದೆಸೆಯಿನಗಲಿತ್ತದಱಿಂ ॥
ನಿನ್ನೆಡೆಗೆ ತೆರಳ್ವುಲ್ಲದೊ ।
ಡೆನ್ನೆಡೆಗೆಯ್ತಂದೊಡೆನಗೆ ಸಲೆ ನೀಂ ಕಳೆಯಂ ॥ ೧೪

ಅದಲ್ಲದೆಯುಂ,

ಶರಣಕ್ಕೆ ನೀನೆ ಕರ್ತಂ ।
ನಿರಾಶೆಯಿನ್ನಿತರಕಾಂತರೆನಗದಱಿಂದಾ ॥

ದರದಿಂ ಕಳಿಂಗನಗರಿಗೆ ।
ತೆರಳಲ್ಕಿನಿತರ್ಥಸಿದ್ಧಿಯೆಂದಳ್ ನಗುದಿಂ ॥ ೧೫

ಎಂದೆನ್ನಂ ಶಶಾಂಕಲೇಖೆ ತನ್ನ ನಗರಿಗೆ ತೆರಳ್ವುದೆಂದಾಗ್ರಹಿಸಲನಂತರಂ ಕಿನ್ನರನಿಂತೆಂದಂ:—

ಜಾಯಾಕಾಂತರ ನಿಚ್ಚಂ ।
ಕಾಯಾಸಂ ನಿನ್ನ ದೆಸೆಯಿಸೀಗಳ್ ಕಱಿದ ॥
ತ್ರೀಯೆಡೆಗಾನೇಗೆಯ್ಯಲ್ ।
ಶ್ರೇಯಸ್ಕರಕಾರ್ಯದೀಕ್ಷೆಯಂ ಪಯೊಗೆಯ್ವಾ ॥ ೧೬

ಎನಲಾತಂಗಿಂತೆಂದೆಂ:—

ಎನ್ನಂ ಶಶಾಂಕಲೇಖಾ ।
ಕನ್ನಿಕೆಯಂ ತತ್ಕಳಿಂಗನಗರಿಗೆ ತ್ರೀವ್ರಂ ॥
ಕಿನ್ನರ ನಡಸೆನಲಾತಂ ।
ತನ್ನಾಜ್ಞೆಯಿನಾಗಳಟ್ಟನಲ್ಲಿ ನಿತಾಂತಂ ॥ ೧೭

ಅಂತೆನ್ನಂ ಕಳಿಂಗಕನ್ನೆಯಂ ಕಿನ್ನರಂ ಕಳಿಂಗನಗರಿಯೊಳಿರಿಸಿ ತಾಂ ತನ್ನ ದೇಶಕ್ಕೆ ತೆರಳ್ವಂ ಇತ್ತಲ್ ಕಳಿಂಗಕನ್ಯೆ ತನ್ನ ಕನ್ಯಾಸ್ಥಾನದಲ್ಲಿ

ತನ್ನ ಸಖಿ ಚಂದ್ರಲೇಖೆಯು ।
ನೆನ್ನಯು ಕೆಲದಲ್ಲಿ ನಿಱಿಸಿ ತದನಂತರದಿಂ ॥
ಕನ್ನೆ ನಿಜಜನನಿಜನಕ ।
ರ್ಗನ್ನೆಟ್ಟನೆ ತಿಳುಹಲೆಯ್ದಿದಳ್ ತತ್ಕಥೆಯಂ ॥ ೧೮

ಅಂತಾಕೆ ರಾಜಾಲಯಕ್ಕೆಯ್ದಿ ತನಗಾಯಾತಿಯಿಂದಾದ ಸಂಕಟಸ್ಥಿತಿಯು ನಱುಹಿಯನಂತರಂ

ತೆರಳಿದ ನೇಹದಿಂ ಧರಣಿನಾಥನ ನಂದನೆ ನಿಚ್ಚನಿಚ್ಚಲಾ ।
ದರಿಸಿಯನೇಕತಂತ್ರಿಗಳನಗ್ಗದ ಗೀತರಸಾತಿರೇಕದಿಂ ॥
ಸ್ಫುರತರರಂಗದಿಂ ಸಕಲಗಂಧವಿನೋದಿಯರ್ಗಳಂ ಕಳಾ ।
ಧರೆ ನಲಿವೆನ್ನ ನೀಕ್ಷಿಪವಿನೋದಿಸಿಸಿಟ್ಟಳಿಳಾಧಿನಾಯಕಾ ॥ ೧೯

ಅಂತಾನಲ್ಲಿರಲಾಕೆ ನಾಲ್ಕೆರಡ್ದಿನಂ ಕಳೆಯೆ ಚಂದ್ರಲೇಖೆಯಾದಿಯಾದ ಸಖೀಜನರ್ ಸಹಿತಂ,

ನೆರೆದ ಸಖೀಜನಂ ಸಹಿತ ಸತ್ವರಕೆಯ್ದಿ ಶಶಾಂಕಲೇಖೆಯು ।
ಚ್ಚರಿಯೆನಲಾಗಳಲ್ಲಿ ಜಲಕೇಳಿಯನಂದೆಸಗಲ್ಕೆ ಸೀಳ್ದು ತ ॥
ತ್ಸರಸಿಯನೆಯ್ದಲಂತ್ರದರಸಂ ಜಯಸಿಂಹನಗಲ್ದಿ ಶಾಣದಿಂ ।
ತರಳೆಯನಾಕ್ಷಣಂ ನಡೆಸಿದಂ ನಿಜದೇಶಕೆ ತನ್ನ ಕಾಂಕ್ಷೆಯಿಂ ॥ ೨೦

ಅಂತಂತ್ರದೇಶದರಸಂ ಜಯಸಿಂಹಂ ಶಶಾಂಕಲೇಖೆ ಜಲಕ್ರೀಡೆಯಾಡಲದಂ ಕಂಡಾಕೆಯುಂ ಚಂದ್ರಲೇಖೆಯಾದಿಯಾದ ಸಕಲಸ್ತ್ರೀಯರಂ ಸ್ನೇಹದಿಂ ತನ್ನದೇಶಕ್ಕೆ ನಡೆಯಿಸಲಂತವನಾಂ ಕೇಳ್ದನ್ನಲ್ಲಿಯಾಸಿಂತೆಂದೆಂ:—

ಎಲ್ಲಿಯು ಕಿನ್ನರಂ ಯತಿಯುದೆಲ್ಲಿವನೆಲ್ಲಿಯು ದೇಶಧಾತ್ರಿ ತಾ ।
ನೆಲ್ಲಿದಳಾಕಳಿಂಗನರನಾಥನ ನಂದನೆಯಾಕೆಯಿಂದೆನಾ ॥
ನಿಲ್ಲಿರಲಂತ್ರರಾಜಜಯಸಿಂಹನರೇಶನಗಲ್ದಿಯಾಕೆಯುಂ ।
ನಿಲ್ಲದೆ ತಾಳ್ದಿ ತನ್ನ ಧರೆಗೆಯ್ದಿದನೆಂದಚಿಲ್ದಿಂ ನಿರಂತರಂ ॥ ೨೧

ಎಂದಾಚಿಂತೆಯಿಂ ಕಳಿಂಗನಗರಿಯಲ್ಲಿರೆ
ನಾನಾದೇಶಂಗಳನ ।
ತ್ಯಾನಂದದಿನೆಯ್ದಿ ತಿರುಗಿದಾಯಾಸಂ ತ ॥
ನ್ನಾನನದೊಳಯ್ಯಲಾಗಿರೆ ।
ದೀನಂ ನಸೆತಂದನಲ್ಲಿಗಾರೆಂವಯಿಯೊಂ ॥ ೨೨

ಅಂತಿರ್ದ ದೇಶಾಂತರಿಯಾನಿರ್ದಲ್ಲಿಗೆಯ್ತರಲಾತನಂ ಕಂಡಿಂತೆಂದೆಂ:—

ನೀನೆತ್ತಣನೆಂದಾಂ ತ ।
ದ್ದೀನನನತ್ಯಾರ್ತದಿಂದೆ ಕೇಳಲ್ ನೀಂ ಕೇ ॥
ಳಾನಂತ್ರದೇಶದಿಂ ತತ್ ।
ಸ್ಥಾನಕ್ಕೆಯ್ತಂದೆನೆಂದನಾತಂ ನಯದಿಂ ॥ ೨೩

ಆದೊಡಂತ್ರದೇಶದಲ್ಲಿಯ ಹದನೇನೆಂದಾಂ ಕೇಳಲಾತನಿಂತೆಂದಂ:—

ಜಯಸಿಂಹಕ್ಷಿತಿನಾಥನೀಯದೆಯೆನಂದೇಟ್ತಂದ ಚಂದ್ರಾಸ್ಯೆ ನಿ ।
ಶ್ಚಯದಿಂ ಚನ್ನ ಕಳಿಂಗಕನ್ನೆ ನಿಜದಿಂ ಕಷ್ಟಗ್ರಹಾವಿಷ್ಟೆಯಾ ॥
ಗಿಯುದಾರಂ ನೆನೆದೀಕ್ಷಿಸಲ್ ಕರೆಯೆ ಕೇಳಲ್ ನಾದ ತಜ್ಞಾತಚಿಂ ।
ತೆಯಿನಿರ್ದಂ ತದಿಳೇಶನೀಹದನನಾಂ ಕೇಳ್ದಿಂ ಕರಂ ಸಂತತಂ ॥ ೨೪

॥ ಪೃಥ್ವೀ ॥

ಗ್ರಹಂ ನೆಲಸಿ ಕಾಂತೆ ಕಣ್ದೆಱೆಯುಳ್ಳಾಗಳನ್ನಕ್ಕ ಕಾ ।
ಯ್ದಹಂ ಸತತರಾತ್ರಿಯೊಂದಱೆಯುದೆಯ್ದೆ ಚಿಂತಾಕುಲಂ ॥
ರಹಸ್ಯದೆಡೆಗೆಯ್ದಿ ತನ್ನಯ ಸಖೀಜನಂ ಕಾಯ್ದಿರ ।
ಲ್ಕಿಹಂ ತನಗೆ ಹೇಳ್ದಳೀಸಿಖೀವೃತ್ತವಂ ಕಾರ್ಕ್ಯಯಿಂ ॥ ೨೫

ಅಂತಾಕೆಯಿರಲ್ ಜಯಸಿಂಹಂ
ಈಕನ್ನಿಕೆಯಂಗದಿನಾ ।
ರೀಕಷ್ಟಗ್ರಹದ ಚೇಷ್ಟೆಯಂ ಸಲೆ ಯಂತ್ರಾ ॥
ನೀಕದಿಸೀಗಳ್ ಕಳೆಯಲ್ ।
ಸಾಕಸಿಸಿರ್ದರ್ಥತತಿಯನೀಯೆನೆ ಸತತಂ ॥ ೨೬

ಎಂದತಿಚಿಂತೆಯಂ ಧರಿಸಿ
ಎಲ್ಲಾ ದೇಶದ ಪಿರಿಪುರ ।
ನಲ್ಲಲ್ಲಿಗೆ ಚರರನಟ್ಟಿ ಕರಸಿದನಾತಂ ॥
ನಲ್ಲಳ್ಗಾದ ಗರಂ ತಾಂ ।
ಪಿಲ್ಲದುದರ್ಕೆಯ್ದೆ ಚಿಂತೆಪ್ರಾಂತನಿಳೇಶಂ ॥ ೨೭

ಇದಾನಱಿದ ಹದನೆಂದಾದೇಶಾಂತರಿಯೆನಗಱುಹಲೆನ್ನ ಚಿತ್ತದೊಳಾನಿಂತೆಂದೆಂ:—

ಕದಡಿಲ್ಲದೆನ್ನ ಕಾರ್ಯ ।
ಕ್ಕಿದಲ್ತೆ ಹದನಾಶಶಾಂಕಲೇಖೆಯನೀಯಂ ॥
ದದಿನಿಲ್ಲಿಗೆಯ್ದಿಸಲ್ಕಿಂ ।
ದದಟಿಂದಾಂ ನೆನೆದೆನಧಿಕಧಿಷಣಸ್ಥಿತಿಯಂ ॥ ೨೮

ಅದೆಂತೆನೆ:

ಪಿಂದೆ ಶಶಾಂಕಶೇಖರಧರಾತಳದಂತಿಕದಲ್ಲಿ ಶಾಖೆಯಿಂ ।
ಚೆಂದದಿನಿರ್ದ ಶಾಖೆಯೆಡೆಯಲ್ಲಿರಿಸಿಟ್ಟ ಜಟಾಳಕಂಥೆಯಂ ॥
ತಂದತಿರಾಗದಿಂ ತಳೆದೆನಾಯತಿಯಂತಿರಲಂತ್ರದೇಶಕಾ ।
ನಂದದಿನೆಯ್ದಿ ರಾಜನಗರಕ್ಕಿದಾಂ ಸಲೆ ಸಾರ್ದೆನಾಕ್ಷಣಂ ॥ ೨೯

ಅಂತಾನಂತ್ರನಗರಕ್ಕೆಯ್ದಲವಱಂತಿಕದಲ್ಲಿ

ಕಳಹಂಸಯಾನದಿಂ ಶೀ ।
ತಳಜಳದಿಂ ಸರಸಿಜಾತಸಂತತಿಯಿಂದಂ ॥
ತಿಳಿದಿರ್ದ ತೀರಸಹಕಾ ।
ರಳತಾಳಿಯಿನಲ್ಲಿ ರಂಜಿಸಿತ್ತಧಿಕಸರಂ ॥ ೩೦

ಧೀರನರೇಂದ್ರನೀತಿನಯದಂತನಿಶಂ ಖರದಂಡರಂಜಿತಂ ।
ತಾರಗೆದಾಣದಂತೆ ಯತಿಸಂತತಿಯಿಂತಿರೆ ಹಂಸಸಂಗತಂ ॥
ನಾರಿಯುರಗ್ರಹಸ್ತಚಯದಂತೆ ನಿರಂತರಕಂಕಣಸ್ಥಿತಂ ।
ಸಾರಸದೇಳ್ಗೆಯಿಂ ಸರಸಿ ಕಣ್ಗೆಸೆದಿರ್ದುದಿಳಾಧಿನಾಯಕಾ ॥ ೩೧

ಅಂತಿರೆ,

ಜಯಸಿಂಹನ ನಗರಿಗೆ ಸಾ ।
ರೆಯಾದ ಖರದಂಡಷಂಡದಂತಿಕದಲ್ಲಿ ॥
ರ್ಕೆಯನೆಸಗಿ ಯತಿಯ ಚೆಂದದೆ ।
ನಿಯತಿಯಿನಿರ್ದಂತ್ರರಾಜನುಂ ನಲಿದೆ ಜಗಲ್ ॥ ೩೨

ಆಗಳ್ ಕೆಲರಂ ಶಿಷ್ಯರ ।
ನಾಗಿಸಿಯಾರಾಧ್ಯನಾದೆನಧಿಕಧ್ಯಾನ ॥
ಕ್ಕಾಗರನಾದಂತೆ ನಿಜಕ್ಕಾ ।
ಗಗನಕ್ಕಡರ್ದ ದೃಷ್ಟಿಯಿಂದೆಸೆದಿರ್ದೆಂ ॥ ೩೩

ಅರಿದೆನೆ ಧರಾತಳಕ್ಕ ।
ಕ್ಷರಜ್ಞನಾಯಂತ್ರತಂತ್ರಸಾಧನನೆಂದೆ ॥
ಲ್ಲರ ಸನ್ನಿಧಿಯಲ್ಲಿ ನಿರಂ ।
ತರದಿಂದೆಬ್ಬಿಸಿ ಕೇಳ್ದನಾಜಯಸಿಂಹಂ ॥ ೩೪

ಅಂತಾನಾಸರಸಿಯ ತಡಿಯಲ್ಲಿರ್ಕೆಯನೆಸಗಿಯನಿಲಧಾರಣೆಯಿನಿರ್ದೆನ ನಂ ಜಯಸಿಂಹನಾಗಳ್ ಕೇಳ್ದು,

ತತೆಯದೆಯಂತ್ರದೇಶದರಸಂ ಸಲೆಯೊಸ್ಸೆಡೆಗೆಯ್ದು ತೀವ್ರದಿಂ ।
ದಡಿಗೆಬಗಿದೆಲ್ಲೇ ಯತಿಯ ಕೇಳ್ ದಯೆಯಿಂದೆ ಶಶಾಂಕಲೇಖೆಯುಂ ॥
ಹಿಡಿವ ಗರಕ್ಕೆ ಶಾಸ್ತ್ರಗಳನಂಜದೆ ನೀನೆಸಗಂತದಂ ಕರಂ ।
ಜಡಿಯದೊಡೆನ್ನ ದೇಹಗತಿ ನಿಲ್ಲದಿದೇನೆಲೆಯೆಂದನಾಕ್ಷಣಂ ॥ ೩೫

ಅಂತೆನಲಾಗಳಾನತಿಧ್ಯಾನದಿಂ ಕಣ್ದೆಱೆಯುದಿದೊರ್ಡೆ
ಕೆಲದಲ್ಲಿ ನಿಂದ ಶಿಷ್ಯರ್ ।
ಕೆಲರೆಲೆ ಯತಿನಾಥ ಜಾನದಿಂದೆ ನಿಶಾಂತಂ ॥
ನೆಲಸಿರದೆ ದಯೆಯಿನೀಕ್ಷಿಸಿ ।
ಸಲಹಂತ್ರಧರೇಶನಂ ಧರಾಧರಧೈರ್ಯಾ ॥ ೩೬
ಕಂಗಳನರೆದೆಱೆದೀಕ್ಷಿಸಿ ।
ಯಂಗಜಹರರಕ್ಷೆ ನಿನಗೆ ಸಲಸಲಿ ಘನದೇ ॥
ಶಂಗಳ್ ನಿನಗಾಗಲಿ ನಿಜ ।
ಸಂಗತಜಯಸಿದ್ಧಿಯಕ್ಕೆ ಕೇಳ್ ಜಯಸಿಂಹಾ ॥ ೩೭
ಎಂದಾತನಂ ಹರಸಿಯನಂತರಂ ಶಶಾಂಕಲೇಖೆಗಾದ ಗ್ರಹಸಂಹಾರಸ್ಥಿತಿಯನಿಂತೆಂದಂ:—
ಧರೆಯಧಿನಾಥ ಕೇಳ್ ನಿನಗೆ ರಕ್ಷೆಯನಂತಿಕದಲ್ಲಿ ಕಟ್ಟಿ ತ ।
ಳ್ತರೆ ನಿಜಕರ್ಣದಲ್ಲಿ ಕಿಱಿದಕ್ಕರದಾಯತಿಯಂ ತೆರಳ್ಚಲೀ ॥
ಸರಸಿಯ ನೀಳ್ದಗಾಧಜಲದಲ್ಲಿರಲನ್ಯಶರೀರಿಯಾಗಿ ನೀಂ ।
ತರಳೆಯನಂಟಲೊಕೆಯ ಗರಂ ಸಲೆ ನಿಲ್ಲದಿವಳ್ತೆ ಸಾಧನಂ ॥ ೩೮
ಎಂದಾತನನಾಸರಸಿಯ ಜಲಾಂತದಲ್ಲಿರಲಾಜ್ಞೆಗೆಯ್ಯಲಾತನದನಂಗೀಕರಿಸಿ, ಆಟೊಡೆ ರಕ್ಷೆಯ ಸಿದ್ಧಾಕ್ಷರಂಗಳಂ ನೀನೆನಗೆ ದಯಗೆಯ್ವೆನಲಾನಿಂತೆಂದಂ:—
ಕಡೆಗಣಿಸಿ ನಾಲ್ಕರಬ್ದಿನ ।
ದೆಸೆಯಂ ಸೈರಿಸಿಯನಂತರಂ ನೀನಾನಿ ॥
ರ್ದಡೆಗೆಯ್ದರೆ ತವ ರಕ್ಷೆಯ ।
ನಡಿಯಿಡದಿತ್ತಲ್ಲದಿಲ್ಲಿ ಚಾನಂಗೆಯ್ವೆಂ ॥ ೩೯
ಎಂಬೊಡಂತೆಗೆಯ್ವೆನೆಂದಾತಂ ನಿಜಾಲಯಕ್ಕೆಯ್ದಿದಂ. ಇತ್ತಲಾಂ
ಸಿಕ್ಕಿದ ನರಸಂತತಿಯಂ ।
ಚಕ್ಕನೆ ತದ್ಧರೆಯನೀಗಳಾಳಲ್ಕಾನೇ ॥
ತಕ್ಕನೆನಿಸಲ್ಕೆ ಸಂದೆಗ ।
ದಕ್ಕಜದೆಡೆಯಿಲ್ಲ ನಿಶ್ಚಯಂ ತಾನಲ್ತೇ ॥ ೪೦

ಎಂಬನಂತರಂ,

ಸರಸಿಯ ನೀಳ್ದಗಾಧಜಲದಲ್ಲಿ ನಿಜೇಚ್ಛೆಯಿನಗ್ರಶಾಲೆಯುಂ ।
ಸರಸದಿನಾಗಳಾನೆಸಗಿಯಿಟ್ಟಗೆಯಿಂ ನೆರೆ ಕಟ್ಟಿ ಚಿಕ್ಕ ಛಿ ॥
ದ್ರರಚನೆಯುಂ ತೆರಳ್ಚಿಯುಗಲು ನೆಱೆದಿರ್ಪಱೆಗಲ್ಲಸಲ್ಲಿ ತಾ ।
ದಿರಿಸಿಯನಂತರಂ ಸರಸಿಯಿಂ ತಳ್ದೆಸೆಂ ತಡಿಗಂಜದಟ್ಟಯಿಂ ॥ ೪೧

ಅಂತಾನೀರಲ್ಲಿ ಶಾಲೆಯನೆಸಗಿ ತಡಿಗೆಯ್ದಿ ನಾಲ್ಕೆರಡ್ದಿನಂ ಕೞಿಯೆ

॥ ಉಪೇಂದ್ರವಜ್ರ ॥

ಕಳಿಂಗಕನ್ಯಾಗ್ರಹದೇಹದಾಹ ।
ಕ್ಷಿಳಾಧಿನಾಥಂ ಸರಸೀತಟಕ್ಕಂ ॥
ಸಲೀಲೆಯಿಂದೆಯ್ತರಲಾತನಂತ ।
ರ್ಜಳಾಶಯಕ್ಕಾನಿಱಿಸಲ್ ನೆಗೞ್ದಂ ॥ ೪೨

ಅಂತಾತಂಗೆ,

ರಕ್ಷೆಗಳಂ ಕಟ್ಟಿ ಲಸ ।
ದ್ದೀಕ್ಷೆಯನಾನೆಸಗಿ ಸರಸಿಯಲ್ಲಿ ನಿತಾಂತಂ ॥
ರಕ್ಷೆಯನಿರ್ಕೆಲದಿಂದಾ ।
ನಕ್ಷಯನಿಧಿಗೆಯ್ದಿ ತಂತ್ರಿಸಿದೆನತಿನಯದಿಂ ॥ ೪೩

ಅಂತಾನಾತಂಗೆ ರಕ್ಷೆಯುಂ ಕಟ್ಟಿ

ಎಲೆ ಜಯಸಿಂಹನೆ ಸರಸಿಯ ।
ಕೆಲನಂ ನಾಲ್ದೆಸೆಯನನ್ಯರಿಲ್ಲದ ತೆಱದಿಂ॥
ತಿಳಿಪಾಗಳ್ ಜೇಗಟೆಯುಂ ।
ಸಲೆ ಕಾಟಿಸಲಾಗಳಾ ಜಲಕ್ಕತಿಶಯದಿಂ ॥ ೪೪

ತಳತಂತ್ರಸಂತತಿಯನಾ ।
ಜಳಜಾಕರದೆಲ್ಲ ದೆಸೆಗಳಲ್ಲಿರಿಸಿ ಜಲ ॥
ಕ್ರೀಡಾಗಳ್ ಜಾನದೊಳಿರೆ।
ಲಳನೆಯ ಗರದೇಟ್ಗೆ ನಿಲ್ವುದಿದು ಸಿದ್ಧಾಂತಂ ॥ ೪೫

ನಿನಗಲ್ಲದೆ ದೀಕ್ಷೆಯನ ।
ನ್ಯನರರ್ಗಾನೀಯೆನವಱಿನನ್ಯಶರೀರಂ ॥

ಘನಗೂಗಿ ಕಡೆಗೆ ನಿನ್ನಂ ।
ಗನೆಯ ಗರಂ ನಿಲ್ವುದೀಗಳೀಕ್ಷಿಸಿಯುತ್ತೇ ॥ ೪೬

ಈತೆಱನಂ ನಾಳೆಸಗಿಂ ।
ದೀಕಡಿಯಿಂದಿಚ್ಛೆಯೊದ ಕಾಣಕ್ಕಾನಿಂ ॥
ದೇತಿರುಗಿ ತೆರಳ ನಾನಾ ।
ಖ್ಯಾತಿಯುನಱಸಲ್ಕೆ ಹದನಿವಂ ಕೇಳ್ ನಯದಿಂ ॥ ೪೭

ಎಂದಾಗಳಾನಾತನಿದಿರಿಂ ತೆರಳ್ದಂತೆಗೆಯ್ದಾರಾತ್ರಿಯಲ್ಲಿಗೆ ತಿರುಗಿಯಾಸರಸಿಯುಡಿಯಲ್ಲಿಯಾನೆಸಗಿದ ಶಾಲೆಗೆ

ಆನಾರಱಿಯದ ತೆಱದಿಂ ।
ಸಾನಂದದಿನೆಯ್ದಿ ರಾತ್ರಿಯಲ್ಲಿ ನಯಂಗಂ ॥
ಡಾನಳನಾಕರಜಲದೆಡೆ।
ಗಾನೆಸಗಿದ ಶಾಲೆಯಲ್ಲಿ ನೆಲಸಿದೆನರಸಾ ॥ ೪೮

ಅಂತಾನಲ್ಲಿಯುಡಂಗಿರೆ,

ಜಲಜಾಕರದೆಡೆಸೆಯಂ ।
ತಳತಂತ್ರದಿನೆಯ್ದಿ ರಕ್ಷೆಗೆಯ್ದರಸಂ ತ ॥
ಜ್ಜಳದಂತಕ್ಕತಿಶಯದಿಂ ।
ಗಳಲನೆ ಜೇಗಟೆಯ ದನಿಯನೆಸಗಲ್ಕಾಗಳ್ ॥ ೪೯

ಅಂತಲ್ಲಿರ್ಪ ಜೇಗಟೆಯ ದನಿಯನೆಸಗಲಾನಿರ್ದ ಶಾಲೆಯ ಛಿದ್ರದಿಂದಾ ದನಿಯಂ ಕೇಳ್ದು,

ಜಯಸಿಂಹಕ್ಷಿತಿನಾಥನಿರ್ದ ಜಲದತ್ತಲ್ ಶೀಘ್ರದಿಂದಾಗಳಾ ।
ಲಯದಿಂದಾಂ ನಿಜಕಾರ್ಯಸಿದ್ಧಿತರದಿಂದೀಸಾಡಿ ಕಂಡಾಗ ನಿ ॥
ರ್ದಯದಿಂದಾತನನೆನ್ನ ಶಾಲೆಗೆಱತಂದಲ್ಲಿರ್ದ ಕಲ್ಲಿಂ ಕರಂ ।
ರಯದಿಂದಿಕ್ಕಿದೆನಿಕ್ಕೆಯುಕ್ತಿ ಸವದೆಂ ತದ್ರಾಜನಂ ತೀವ್ರದಿಂ ॥ ೫೦

ದಾನಗಜಂ ಲಸತ್ಸರಸಿಗಾರ್ತಿಯಿಂವಲ್ಲಿಯ ನೀರಜಂಗಳಂ।
ತಾನೆ ಕರಾಗ್ರದಿಂ ಕವಡಿ ಕಿಟ್ಟಿಡಿಯಿಕ್ಕಿದೊಡಂದದಿಂ ನೆಗ ॥
ೞ್ದನರನಾಥನೇೞ್ಕೆಯೆನಿಸಿರ್ದ ಶಿರಸ್ಸರಸೀಜದಿಂಡೆಯಂ ।
ಜಾನಿಸದಾಗಳಾಂ ಜಲದ ಜಕ್ಕಿಯುಗೇ*ಱಿಸಿದೆಂ ನಿರಂತರಂ ॥ ೫೧

ಇಡಿದಿಡಿದಱೆಗಲ್ಲಿಂದಾ ।
ಜಡನಂ ಗಟ್ಟಿಸಿದೆನಾಗಳಟ್ಟಿಗೆಯಿಂದಾ ॥
ಯೊಡೆಯುಂ ಕಟ್ಟಿದೆನಾತನ ।
ಕಡೆ ತೀರಿತನಱಿದೆನಾಕ್ಷಣಂ ನರನಾಥಾ ॥ ೫೧

ಅಂತದನಱಿದನಂತರಂ

ಜಡೆಯುಂ ಕಂಥೆಯುನಾ ಸರಸ್ಸಲಿಲದಲ್ಲೀಡಾಡಿ ಕೇಶಾಳಿಯಂ ।
ಕಡೆಗಂಟಿಕ್ಕಿ ಧರೇಶನಂತ ನಿಜಯಾಲಂಕಾರರತ್ನಾದಿಯುಂ ॥
ಗಡಣಂ ರಂಜಿಸೆ ತಾಳ್ದಿ ಸಾಂದ್ರಯದ ಚಿಹ್ನಂ ಚೇಷ್ಟೆಯೊಂದಿಲ್ಲದಾಂ ।
ತಡಿಗೆಯ್ತಂದೆನನೇಕರೀಕ್ಷಿಸಿ ಲಸಚ್ಚಿತ್ರಂ ಜಗಕ್ಕೆಂದೆನಲ್ ॥ ೫೨
ಇದೆ ಚಿತ್ರಂ ಜಯಸಿಂಹನೀಸರಸಿಯಲ್ಲಿದೀರ್ಘಗಳಂ ಕೇಳಲಿ ।
ಕ್ಕಿದಲಂಕಾರಚಯಂ ಲಸತ್ತ್ರಿದಶಸಂಘಂ ದೇಹದಿಂದಂ ಕಟಿ ॥
ಲ್ಚದೆ ತಾನನ್ಯಶರೀರಿಯಾದನಿದೆ ಯಂತ್ರಂ ತಂತ್ರಸಂಸಿದ್ಧಿಯೆಂ ।
ದವನೆಲ್ಲರ್ ಸಲೆ ಕೀರ್ತಿಸಲ್ಕೆ ನಡೆದೆಂ ರಾಜಾಲಯಕ್ಕಾಕ್ಷಣಂ ॥ ೫೩
ಅಂತಾಂ ನಡೆಯೆ

ಎನಗಿದಿರಲ್ಲಿ ರಂಜಿಸಿತಳಂಕೆಯ ದೇಹಳಿಯಿಂ ನೆಗಟ್ದಿ ಕಾಂ ।
ಚನಕಲಶಂಗಳಿಂ ಸಕಲರತ್ನನಿಘಟ್ಟಿತಚಂದ್ರಶಾಲೆಯಿಂ ॥
ಘನತರನಿಸ್ತುಳಸ್ಥಗಿತಜಾಳಕದಿಂ ಶಶಿಕಾಂತಖಂಡಸಂ ।
ಜನಿತಧರಾಚಿರ್ಯಿಂ ನಿಖಿಳಚಿತ್ರದಿನಾನರನಾಥಸಾಲಯಂ ॥ ೫೫

ಅಂತಾರಾಜಶಾಲೆಯನೀಕ್ಷಿಸಿ ನಡೆಯಲಿದಿರಲ್ಲಿ,

ನಯನಾನಂದಕರಂ ನಿರಂತರಲಸದ್ರತ್ನಾರ್ಚಿ ಕಾಂತಂ ಕಥಾ ।
ಶ್ರಯಚಿತ್ರಂ ಜಯಘಂಟಿಕಾಂಚಿತದಿಶಂ ಸಿಂಹಾಸನಾಧಿಷ್ಠಿತಂ ॥
ಜಯಸಿಂಹಕ್ಷಿತಿನಾಥನಾದರಿಸಿದ್ದ್ಯದೇಶೇತ್ಸೆಯಾಸ್ಥಾನಶಾ ।
ಲೆಯನಾನೀಕ್ಷಿಸಿಯಾಕ್ಷಣಂ ನೆಲಸಿಗೆಂ ಸಂದೇಹಿಗಳ್ ಕಣ್ಗೆಡಲ್ ॥ ೫೬
ಅದಲ್ಲದೆ ಆಸ್ಥಾನಗೇಹಂ ಚಿತ್ರಾಂಕಿತದಿಂದಾಕಾಶದೇಶೆಯುಂ, ಚಂದ್ರ ಶಾಲಾರಂಜಿತದಿಂ ಚಂದ್ರಿಕಾರಾತ್ರಿಯುಂ, ಸಿಂಹಾಸನಾಸ್ಥಾನದಿಂದರಣ್ಯರಾಜಿ ಯುಂ, ಜಾಳಕಸಂತಾನದಿಂದಲರ್ಗಳ ಬತ್ತೆಯುಂ, ಘನಸಾರಖಂಡಿತದಿಂ ಕಾ

ಗರ್ಲದಗ್ಗಳಿಕೆಯುಂ, ರತ್ನರಜಸ್ಸಲ್ಲೀಥದಿಂ ಕನಕಾದ್ರಿಯುಂ, ಕಾಷ್ಠಾದಿಜಾತಕನ್ಯಾಕಾರದಿಂ ದಿಶಾರಾಶಿಪಙ್ಕ್ತಿಯುಂ ಗೆಲ್ದ್ಕೆ ಸಾರ್ದಿರ್ದಾರ್ಸ್ಥಾನದೆಡೆಗೆ

ನರನಾಥಂಗೆ ಕಳಿಂಗಕನ್ನಿಕೆಯ ದೇಹಗ್ರಸ್ತಕಷ್ಟಗ್ರಹ ।
ಕ್ಷುರದೀಗಳ್ ಘನಶಾಸ್ತ್ರಿಯಂ ನೆಗೞಲೆಂದಾಯುಕ್ತ್ಯದೇಹಂ ಗಡಾ ॥
ದರದಿಂದಾನವಸೀಕ್ಷಿಸಲ್ ಮುಱಿದೆನೆಂದೆಯ್ತಂದವಳಾಚಂದ್ರಲೇ ।
ಖೆ ರಣತ್ಕಂಕಣಕಿಂಕಿಣೀಪಹಸನದಿಂದಾಸ್ಥಾನಕಂದಱಯಿಂ ॥ ೫೭

ಅಂತಾಶಶಾಂಕಲೇಖೆಯು ಕೆಳದಿ ಚಂದ್ರಲೇಖೆಯಾಸ್ಥಾನದಲ್ಲಿರ್ದರ್ನ್ನನೀಕ್ಷಿಸಿ

ಈಯರಸಂ ಕಳಿಂಗಸತಿಯಂ ದಯೆಯಿಂ ಹರನಿಕ್ಕೆದಾಣದಿಂ ।
ದಾಯುತಿನಾಥನಂ ಪತಿಸಿ ತಂದತಿಸಾಹಸಿಯಂತಿರಿರ್ದನೆಂ ॥
ದಾಯತನೇತ್ರೆಯೀಕ್ಷಿಸಿದ ರೀತಿ ತದಾಸ್ಯದ ಚೇಷ್ಟೆಯಿಂ ಧರಾ ।
ಶ್ರೀಯಧಿನಾಥ ಕೇಳೞಿಯಲಾಯ್ತೆನಗಂದಿದಿರಲ್ಲಿ ನಿಶ್ಚಯಂ ॥ ೫೮

ಅಂತಾಕೆಯಾಸ್ಯಚೇಷ್ಟೆಯುನಱಿದಾಗಳಿಂತೆಂದಂ:—

ಕಂಡೆಗ ಚಂದ್ರಲೇಖೆ ಜಯಸಿಂಹನನಂತಕನಿಕ್ಕೆಗಟ್ಟಿಯಾಂ ।
ಗಂಡಿಗನಾಗಿ ತನ್ನಿಳಯಕೆಯ್ದಿದೆನೀಹನನಂ ಸಶೀಘ್ರದಿಂ ॥
ಖಂಡಶಶಾಂಕಸನ್ನುತಲಲಾಟೆಗೆ ಚೆನ್ನೆ ಕಳಿಂಗಕನ್ನೆಗಾ ।
ದಂಡಿಗಳೀಗಳಿಂತಱಿಯದಂತಱುಹೆಂದೆನಿಳಾಧಿನಾಯಕಾ ॥ ೫೯

ಎನಲಾಚಂದ್ರಲೇಖೆ,

ಸಲಿಸದೆಯಿಾಯಾಕಾರಂ ।
ನೆಲೆಯಾದೊಡೆ ತತ್ಕಳಿಂಗಕನ್ನಿಕೆಯ ಗರಂ ॥
ನೆಲೆಯುತ್ತದಲ್ಲದಿದ್ದೊಡೆ ।
ನೆಲೆಯಾಕೆಗೆ ಕಡೆಗೆ ಗರದ ಚೇಷ್ಟೆ ನಿತಾಂತಂ ॥ ೬೦

ಎಂದೊಡಾಕೆಗಿಂತೆಂದಂ:—

ಸಂದೇಹಂ ನಿನಗೇಕೆ ಶಂಕರಧರಾಸ್ಥಾನಾಂತದಿಂ ಕನ್ನೆಯಂ ।
ತಂದಾತಂ ಜಯಸಿಂಹನಂ ಹತಿಸಿ ತದ್ರಾಜ್ಯಕ್ಕೆ ಕೇಳೀಗಳ್ ॥
ಯ್ತಂದಾತಂ ನಿಜರೀತಿಯೆಂದಱಿದಲಿಂ ನಿನ್ನಾಕೆಯೊಂದಾಕೆಯಂ ।
ಚಂದಂ ರಂಜಿಸಲಟ್ಟಿದಂ ಕೆಳದಿಯಿಂ ಧಾರ್ತಾಣಕಾನಂದದಿಂ ॥ ೬೧

ಅಂತಾಕೆಯನತ್ತಲ್ ಕಳುಹಿ ಇತ್ತಲಾಸ್ಥಾನವಲ್ಲಿದರ್ಲ್ಲರಂ ಸತ್ಕರಿಸಿ ಕಳಿಂಗಕನ್ನೆಯುಂ ಗ್ರಪಕಾರಣಂ ತದಾಕಾರಸ್ಥಿತಿಯೆನಗಾಯ್ತೆಂದಱುಹಿ ಬನಂತರಂ ಶಶಾಂಕಲೇಖೆಯಿರ್ದೆಡೆಗೆಯ್ದಿ

ಎನ್ನಂ ಕಂಡಾಗಳಾಕನ್ನೆ ಕೆಯ್ಯತಿಶಯದಿಂ ಕಾಂತಿಯಂ ತಾಳ್ದಿಯೆನ್ನಂ ।
ತನ್ನಿಕ್ಕೆರ್ಗಯ್ವಿಂ ಕರಂ ತಳ್ಕಿಸಿಯಧರಲಸತ್ಪ್ರಾರದಿಂ ಹೆಚ್ಚಿ ನಿಚ್ಚಂ ॥
ತನ್ನಂಗಶ್ರೇಷ್ಠಸಂಗಸ್ಥಿತಿಯಿನಧಿಕರಾಗಾಧಿಕಂ ಸಂಧಿರಲ್ ಕಂ ।
ಡೆನ್ನಂ ತನ್ನಿಂದೆ ಕಾರ್ಯಂ ನೆಲೆಯೆನಿಸಿರಲಾನಂದದಿಂದಿರ್ದೆನಾಗಳ್ ॥ ೭೨

ಅಂತೆನ್ನ ಸ್ನೇಹದಿಂ ಕಳಿಂಗಕನ್ನೆಗಾದ ಗರಂ ಕಱದಾಕಾರ್ಯದೇಶ್ಶೆಯುಂ ಕಳಿಂಗರಾಜಂಗಱುಹಲ್ ಚರರಂ ಕಳುಹಿಯನಂತರಂ ನಿನ್ನಂ ಪ್ರಿಯುನಱಸಲೆಂದಿರಲನ್ನೆಗಂ

ಜಗದಧಿನಾಥ ಕೇಳ್ ನಿಜಸಹಾಯನೆನಲ್ ನೆಱೆದಂಗರಾಜನೇ ।
ಳ್ತೆಗೆ ನಿಜದಿಂ ಸಹಾಯುವೆನಗೆಂದೆನಗಾಜ್ಞೆಯನಟ್ಟಲೀಗಳಿ ॥
ಲ್ಲಿಗೆ ನಲಿದೆಯ್ದಿ ನಿನ್ನ ಚರಣಂಗಳನೀಕ್ಷಿಸಿ ಧನ್ಯನಾದೆನಿಂ ॥
ದಗಣಿತಕಾರ್ಯಸಿದ್ಧಿ ನೆಲೆಯಾಯ್ತೆನಗೆಂಪಱಿದೆಂ ನಿರಂತರಂ ॥ ೭೩

ಎಂದು ರಾಜವಾಹನಂಗೆ ಮಂತ್ರಗುಪ್ತಂ ತನ್ನವೃತ್ತಾಂತಮಂ ಪೇೞ್ದುದುಂ;

ಧರಣಿಗೆ ನಿನ್ನ ಮಂತ್ರಮೆ ಫಲಂ ನಿಜಸತ್ವಮತೀವವಿಸ್ಮಯಂ ।
ಪಿರಿಯ ತಪಂ ಕರಂ ಪೊಸತು ಬುದ್ಧಿ ವಿಚಿತ್ರಮೆನುತ್ತನೇಕಸಾ ॥
ದರವಚನಂಗಳಿಂ ಪದೆದು ಮನ್ನಿಸಿ ಸನ್ನುತಮಂತ್ರಗುಪ್ತನಂ ।
ನಿರವಧಿತುಷ್ಟಿಯಿಂ ನಲಿದು ಮೆಚ್ಚಿದನಾಗಳಭಂಗವಿಕ್ರಮಂ ॥ ೭೪

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಂತ್ರಗುಪ್ತ ನಿರೋಷ್ಠ್ಯಕಥಾವೃತ್ತಾಂತಂ

ತ್ರಯೋದಶಾಶ್ವಾಸಂ

|| ಚತುರ್ದಶಾಶ್ವಾಸಂ ||

—ವಿಶ್ರುತನ ಕಥೆ—

ಶ್ರೀನಂದನಮೂರ್ತಿ ಕಳಾ |
ಸ್ಥಾನಂ ವಿಶ್ರುತನ ಮುಖಮನೀಕ್ಷಿಸಿ ಕೇಳ್ದಂ ||
ನೀನೆಸಗಿತ್ತೇನೆಂದಭಿ |
ಮಾನಧನಂ ಕೂರ್ತಭಂಗವಿಟ್ಟಭೃತ್ಯಂ || ೧

ಅಂತು ಕೇಳ್ದ ರಾಜವಾಹನಂಗೆ ವಿಶ್ರುತಂ ಕೆಯ್ಮುಗಿದು,

ಸೋದರರೆಲ್ಲರಂದದಿನಿಳಾತಳದೆಲ್ಲೆಡೆಯೊಳ್ ತ್ವದೀಯಸ |
ತ್ಪಾದಪಯೋಜಮಂ ತ್ವರಿತದಿಂದರಸುತ್ತಿರಲೆನ್ನ ಪೂರ್ವಪು ||
ಣ್ಯೋದಯದಿಂದನೇಕಸುಕೃತಂ ನೆಲೆಗೊಂಡಪುಳಿನ್ದದೊಂದು ಚೆ |
ಲ್ವಾದೆಡೆಯಂ ಮನೋಮುದದಿನೆಯ್ದಿದೆನಾಂ ಭುವನಾಧಿನಾಯಕಾ || ೨

ಅದಾವುದೆನೆ:— †

ಹರಿಪದಸಂಗಮಂ ವಿವಿಧಮೋಕ್ಷಮಹೋತ್ಸವನೃತ್ಯರಂಗಮಂ |
ಪರಮುದಯಾಂಗಮಂ ಸುಖಸುಧಾಬ್ಧಿತರಂಗಮನುಗ್ರಪಾಪಸಿಂ ||
ಧುರಮದಭಂಗಮಂ ಭುವನಮಂಗಳಗೇಹಸ್ವರೂಪಮಂ |
ಸ್ಥಿರಗಿರಿಶೃಂಗಮಂ ಭರದಿನೆಯ್ದಿದೆನೊಪ್ಪುವ ಪಾಂಡುರಂಗಮಂ || ೩

ಅವರ ಮಹತ್ವಮಂ ಪೊಗಳಲೆನ್ನಳವಲ್ತು ಸಮಸ್ತದೇವತಾ |
ಸದನಮನಂತತೀರ್ಥನಿಲಯಂ ಸಕಲೋತ್ತಮಭೂಮಿ ವಿಷ್ಣುವಾ ||
ಸ್ಪದ ಮನೆ ಲೋಕಲೋಚನಮನೋಹರಮಾಗಮಶಾಸ್ತ್ರಕೋಟಿ ಪು |
ಟ್ಟಿದ ನೆಲೆ ಪಾಂಡುರಂಗೆ ಮದನಂಗೆಡೆಯಾಟದ ತಾಣಮೆಂಬಿನಂ || ೪

ಅದಲ್ಲದೆಯುಂ,

ಅದಱೊಳ್ ಗೋಪಾಲಕೇಳೀವ್ಯಸನಮನುಱದಾನಂದದಿಂ ಕೃಷ್ಣರಾ
ಯಂ | ಪದುಳಂ ನಿಂದಿರ್ದು ಬೇಳ್ಪಗೆ ಭಿಮತಫಲಮಂ ಕೊಟ್ಟು ಸನ್ಮಾ
ತ್ರಿಸಾಕಾ || ರದ ಚೆಲ್ವಿಂದಂ ನಿರಾಕಾರಿಗಳ್ ಬಗೆಯುನೀಡಾಡಿ ಸಂದೇಹಮಂ

---

† ಇಲ್ಲಿಂದ ಮುಂದೆ ಬರುವ ಪಂಡರಪುರದ ವರ್ಣನೆಯು ಸಂಸ್ಕೃತದಶಕುಮಾರ ಚರಿತ್ರೆಯಲ್ಲಿಲ್ಲ.

ಪ್ಪೊ । ರ್ದದೆ ತೋರ್ಪಂ ದಿವ್ಯರೂಪಂ ಮನುಜತತಿಗೆ ಕೇಳ್ ವಿಟ್ಠಲಾಖ್ಯಾ
ನದಿಂದಂ ॥ ೫

ಮತ್ತಮಲ್ಲಿ,

ತಾಪಿ ಪಯೋಷ್ಣಿ ನರ್ಮದೆ ಸುಗೌತಮಿ ಜಾಹ್ನವಿ ಕೃಷ್ಣವೇಣಿ ಗೋ ।
ದಾವರಿ ತುಂಗಭದ್ರೆ ಸುರಗಂಗೆ ಕವೇರತನೂಜೆಯೆಂಬ ನಾ ॥
ನಾವಿಧಮಪ್ಪನೇಕನದಿಗಳ್ಗಧಿಕಂ ಪರಿಸನ್ನಿಧಾನಮು ।
ರ್ವೀವಳಯಪ್ರಸಿದ್ಧಮೆನೆ ಭೀಮರಥೀನದಿಯೆಂಬುದೊಪ್ಪುಗುಂ ॥ ೬

ಹರಿ ಗೋಪಾಲರೊಳಾಡಿಬೋಂದಿಪೆ[1] ಪೆಗಲ್ಗೊ[1]ಬ್ಬುಂಡ ತ್ರಾಣಂ ಮನೋ ।
ಹರಕೇಳೀಸ್ಥಳಿ ಗೋವ್ರಜಂ ನವೀನ ಚಿಪ್ನಂ ತನ್ನದೀತೀರದೊಳ್ ॥
ತರದಿಂ ರಂಜಿಪ್ರವೆಲ್ಲರೀಕ್ಷಿಸಲೆನಲ್ ಸತ್ಪಾಂಡುರಂಗಕ್ಕೆ ಭೀ ।
ಮರಥೀದೇವಿ ಸುದರ್ಶನಂ ಗಡಮೆನಲ್ ಚೆಲ್ವಾಗಿ ಕಣ್ಗೊಪ್ಪುಗುಂ ॥ ೭

ಮತ್ತಮಲ್ಲಿ,

ಪಲವು ಯುಗಂ ಸಮುದ್ರನದಿಕಾನನದೇವಗೃಹಾದ್ರಿಯೆಂಬ ಸು ।
ಸ್ಥಳದೊಳತೀವಘೋರತಪದಿಂ ಯತಿಗಳ್ ಮಿಗೆ ಕಾಣದಿರ್ಪ ವಿ ॥
ಟ್ಠಲನನನಂತರೀಕ್ಷಿಸಿ ನಿಜೇಚ್ಛೆಗೆ ಬೆಂಬಳಿಯಾಗಿ ತಂದ ನಿ ।
ಶ್ಚಳಮತಿ ಪುಂಡರೀಕಮುನಿ ತೀರದೊಳಿರ್ದ ನಿಳಾಧಿನಾಯಕಾ ॥ ೮

ಅಂತಿರ್ದ ದಿವ್ಯಕ್ಷೇತ್ರಮಂ ಕಂಡು

ಎಲ್ಲಾ ತೀರ್ಥಂಗಳಿಂದಗ್ಗಳಮೆನಿಸುವ ತತ್ತೀರ್ಥಮಂ ಮಿಂದು ಮತ್ತಾ ।
ನಲ್ಲಿಂ ಮೆಯ್ಯಿಕ್ಕುತುಂ ವಿಟ್ಠಲ ಜಯಜಯ ಎಂಬುತ್ತ ಸುಧ್ಯಾನದಿಂ ಚಿ ॥
ತ್ತೋಲ್ಲಾಸಂಮಿಕ್ಕು ಬರ್ಪನ್ನಗಮೆನಗಿದಿರೊಳ್ ತೋಱುವಿದತ್ತುಚ್ಚಶಾಖಾ ।
ಸಲ್ಲೀಲಂ ರಂಜಿಪುಂದುನ್ನತತರಪಿಚುಮಂದಾಳಿವಾಳಂ ಕುಜಾಳಂ ॥

ಬೇವಿನ ಕಟ್ಟೆ ಪುಣ್ಯವಧು ತನ್ನೊಲವಿಂ ಬರುತಿರ್ಪ ಬಟ್ಟೆ ನಾ ।
ನಾವಿಧಪಾಪದುಷ್ಟಮೃಗಮಂ ಕೆಡೆಯೆಚ್ಚುವ ಮಿಟ್ಟೆ ನವ್ಯಪು ॥
ಣ್ಯಾವಳಿರತ್ನಮಂ ಬಯಸಿ ಕಟ್ಟಿದ ಮೊಟ್ಟೆ ಕುಶಾಸ್ತ್ರಮಾರ್ಗಮಂ ।
ಭಾವಿಸೆ ಗೆಲ್ದ ಬಟ್ಟೆಯೆನೆ ರಂಜಿಪುದಲ್ತೆ ಧರಾಧಿನಾಯಕಾ ॥ ೯

1. ಪಸಲ್ಗೊ. ಎಂಬುದು ಪ್ರತಿಗಳ ಪಾಠ.

ಸನಕಾದಿಗಳಖಿಳಾಗಮ ।
ವಿಸಿಷ್ಟಯುಕ್ತಿಪ್ರರ್ ತಾಣವೊಂದಾನಾಗಳ್ ॥
ಮನವೊಲ್ದದರ್ಕೆ ಪೊಡೆವ ।
ಟ್ಟನುನಯದಿಂ ಮತ್ತೆ ಮುಂದೆ ನಡೆಗೊಳ್ವಾಗಳ್ ॥ ೧೦

ನಲಿನಘವಾದಿದೇವನಿಕರಕ್ಕಮಗೋಚರಮಾದಭಂಗಮಿ ।
ಟ್ಟಲನ ಮನೋಹರಾಕೃತಿಸನಾತನ ಪಾದಪಯೋಜಯುಗ್ಮಮಂ ॥
ಚಲಿಸದ ದೃಷ್ಟಿಯಿಂ ಪಡೆದು ನೋಡುತೆ ಕೈಯ್ಮುಗಿದಿರ್ಪ ಪಕ್ಷಿಸಂ ।
ಕುಲಪತಿಯಪ್ಪ ಭೀಕರಗರುತ್ಮನನಾಂ ಮಿಗೆ ಕಂಡೆನುರ್ವಿಪಾ ॥ ೧೧

ಅಂತಾಗರುಡಂಗೆ ನಮಸ್ಕರಿಸಿ ಮತ್ತಂ ಪೋಗೆ ಮುಂದೆ

ಮದಗಂಧಕ್ಕೆ ಮದಾಳಿಗಳ್ ಮುಸುಱದೋಲ್ ಸರ್ವಾಂಗದೊಳ್ ನೀಲರ।
ತ್ನಗಲುಕಾರಮನಾಂತ......ಪರಮಹಸ್ತಂ ಶೂರ್ಪಕರ್ಣದ್ವಯಂ ॥
ರದನೈಕಂ ನವರಕ್ತಚಂದನವಿಲಿಪ್ತಾಂಗಂ ಗಜಾಸ್ಯಂ ವರ ।
ಪ್ರದನಿರ್ದಂ ಪೊಡೆಮಟ್ಟೆನೆನ್ನ ಬಗೆಯುಕ್ಕೆದಾಗಳುರ್ವೀಶ್ವರಾ ॥ ೧೨

ಅಂತಾಂ ವಿನಾಯಕಂಗೆ ಪೊಡೆಮಟ್ಟೆಳ್ದಿಂ ತಳರ್ದು ಮುಂದೆ
ಜ್ವಲನಾಕ್ಷಂ ಕ್ರೂರದಂಷ್ಟ್ರಾಪ್ರಹಸಿತವದನಂ ಕುಂಡಲಂ ರುಂಡಮಾಲಾ।
ಗಲನುಗ್ರಾಹೀಂದ್ರಹಾರಂ ಡಮರುಗವಿಲಸತ್ಶೂಲಕಾಪಾಲಖಡ್ಗಾ ॥
ವೀಹಸ್ತಂ ಕ್ಷುದ್ರಘಂಟಾಂಚಿತಜಘನತಟಂ ರಂಜಿಸಲ್ ಕ್ಷೇತ್ರಪಾಲಂ ।
ನೆಲಸಿರ್ದಂ ಬಾಗಿಲೊಳ್ ಕಂಡೆಱಗಿದೆನೆನಸುಂ ಭಕ್ತಿಯಿಂದಂ ನೃಪಾಲಾ ॥

ಅಂತಾಂ ಕ್ಷೇತ್ರಪಾಲಂಗೆಱಗಿ ಮುಂದಂ ನೋೞ್ಪನಂ

ಅಭಿನವರತ್ನತೋರಣಮನೇಕಲಸತ್ಕಲಶಂ ಗರುತ್ಮವ ।
ಲ್ಲಭನ ಪತಾಕೆ ವೈಷ್ಣವಜಯಧ್ವನಿ ನಿರ್ಮಳಭಿತ್ತಿಕಾಸುಧಾ ॥
ಪ್ರಭೆ ನವಧೂಪಧೂಮಲತೆ ಮಂಗಳವಾದಕಗೇಯನರ್ತಕೀ ।
ರಭಸಮನಾರತಂ ಮೊಱೆವ ವಿಟ್ಠಲರಾಯಗೃಹಂ ವಿರಾಜಿಕುಂ ॥ ೧೪

ಅಂತಾದೇವತಾಯತನಮುಂ ಕಂಡಾಂ ಪ್ರದಕ್ಷಿಣಂಗೆಯ್ಯುತ್ತಲ್ಲಿ

ದೇವನಿತಂಬಿನೀಸಮುದಯಂ ಬೆಸಕೆಯ್ವ ಸಮಸ್ತಭಾಗ್ಯಜ ।
ನ್ಮಾವನಿಯಾದ ತನ್ನ ನಯನಾಂಚಲದಿಂ ಭುವನಕ್ಕೆ ಸಂತತಂ ॥

ಜೀವನವುಂ ಪ್ರತಿಷ್ಠಿಸುವ ವಿಟ್ಠಲರಾಯನ ರಾಣಿ ರುಕ್ಮಿಣೀ ।
ದೇವಿಯರಂಘ್ರಿಗಂ ನಲಿದು ದೂರದೊಳೆಱಗಿರ್ದನುರ್ವಿಪಾ ॥ ೧೫

ಅಂತಾದೇವಿಯರಂ ನಮಸ್ಕರಿಸಿಯನಂತರಂ

ಹಿಮಕರವಕ್ತ್ರೆಯರ್ ತ್ರಿದಶಕಾಮಿನಿಯರ್ ನವತಾರಕಾಸಮು ।
ದ್ಗಮಮೆನಲಿರ್ಪ ತಮ್ಮ ನಯನಪ್ರಭೆಯಿಂ ಸಮಕಟ್ಟಿ ರುಕ್ಮಿಣೀ ॥
ರಮಣನ ಕೋಮಳಾಂಘ್ರಿಯುಗಳಕ್ಕೆ ನಿವೇದಿಸುವಂದದಿಂ ಸವಿ ।
ಭ್ರಮಮನೊಡರ್ಚಿ ಪ್ರೇಕ್ಷ್ಯ ಪ್ರೋರ್ವಮಾಲೆಯನಿತ್ತು ವರಲ್ಲಿ ಬಾಲೆಯರ್ ॥ ೧೬

ಅಂತವಱೊಳ್ ಪವಣಿಲ್ಲದ ಪೂಗಳಂ ಪರಮಪುರುಷಂಗೆ ಪಡೆದನಂತರಂ

ಪುಲಕಂಗಳ್ ಮೆಯ್ಯೊಳಕ್ಷಿದ್ವಯದೊಳಸುರ್ಜಿನ್ಮೂರ್ತಿ ಜಿಹ್ವಾಗ್ರ
ದೊಳ್ ನಿರ್ಮಲನಾಮಂ ಭಾಳದೊಳ್ ಸಂಪುಟಕರಮೆನಸುಂ ಚಿತ್ತದೊಳ್
ಭಕ್ತಿಭಾವಂ ॥ ನೆಲಸಲ್ ಮದ್ಭಾಗ್ಯಸಂವೃದ್ಧಿಗೆ ಮಿಗೆ ನಲಿಯುತ್ತುಂ ಮ
ನಃಪ್ರೀತಿಯಿಂ ವಿ । ಟ್ಠಲನಂ ಕಂಡಾರ್ತರ್ದಂ ಮೆಲ್ಲಡಿಗೆಱಗಿ ಕೃತಾರ್ಥಾತ್ಮ
ನಾದಂ ನೃಪಾಲಾ ॥ ೧೭

ಅಂತೆಱಗಿ,

ಅಡಿಗೆಱಗಿಬೊರ್ಡೆ ರೂಪಿನ ।
ಪಡಗರಮಂ ಕಾಣಲರಿದೆನುತ್ತಾನಾಗಳ್ ॥
ಕಡುಪಿಂ ವಿಟ್ಠಲಮೂರ್ತಿಯ ।
ನೆಡನೆಱೆಯದೆ ನೋಡುತಿರ್ದನನಿಮಿಷಗತಿಯಿಂ ॥ ೧೮

ವರಮುಕುಟಂ ಮುಗುಳ್ನಗೆ ತುಳುಂಕುವ ಮುದ್ದುಮೊಗಂ ಜಗನ್ಮನೋ ।
ಹರಕರಕುಂಡಲಂ ಪೆಗಲ ಕಲ್ಲಿ ಲಸತ್ಪದಕಂ ನಿತಂಬದೊಳ್ ॥
ಸ್ಥಿರಮೆನಲಿಟ್ಟ ಹಸ್ತಯುಗಳಂ ಪೊಸಗೋವಳಗೋಲ್ ನಿಲೀನಸ ।
ಚ್ಚರಣಸರೋರುಹಂ ಮೆಱೆವ ಚೆನ್ನಿಗ ವಿಟ್ಠಲರಾಯನೊಪ್ಪಿದಂ ॥ ೧೯

ನವಮೇಘಚ್ಛವಿ ಮೆಯ್ಗೆ ಮಂದಹಸಿತಂ ವಕ್ತ್ರಕ್ಕೆ ಶಂಖಂ ನವೀ ।
ನವೆನಲ್ ವಾಮಕರಕ್ಕೆ ಸತ್ಕಟಿಗೆ ಸತ್ಪಾಣಿದ್ವಯಂ ಪಾದಪ ।
ಲ್ಲವಯುಗ್ಮಕ್ಕೆ ನೆಗಟ್ಟೆಯಿಟ್ಟಿಗೆ ಲಸತ್ಸೌಂದರ್ಯಭಾಗ್ಯಂ ಸಮ ।
ಸ್ತವಿಶೇಷಂ ಸಮುದಾಯಶೋಭೆಯೆಸೆಯಲ್ಕಂದೊಪ್ಪಿದಂ ವಿಟ್ಠಲಂ ॥ ೨೦

ಅಂತಿರ್ದ ವಿಟ್ಠಲದೇವನಂ ಕಂಡು

॥ ಪದ್ಧತಿ ॥

ಜಯ ಜಯ ಜಯ ಜಗನ್ಮೋಹನಮೂರ್ತಿ ।
ಜಯ ದೇವ ಸುರಾಸುರಚಕ್ರವರ್ತಿ ॥
ಜಯ ಭಾಗವತಸ್ಥಿರಭಾಗ್ಯರೂಪ ।
ಜಯ ನಾಗನಿವಾಸಚಿತಪ್ರತಾಪ ॥
ಜಯ ನಿತ್ಯನಿರ್ಮಳಮುಖಪ್ರಸಾದ ।
ಜಯ ಸತ್ಯಲೋಕಲಂಘಿತಸುಪಾದ ॥
ಜಯ ಸರ್ವಲೋಕಪರಿಪೂರ್ಣದೇಹ ।
ಜಯ ಗರ್ವಿತಾಸುರಮುಖಾಬ್ಜದಾಹ ॥
ಜಯ ಜನ್ಮದುರ್ಘಟಮಹಾಬ್ಧಿತೀರ ।
ಜಯ ಮನ್ಮಥಾದಿವಿಜಯೋಪಕಾರ ॥
ಜಯ ಪೂತನಾಪ್ರಬಲಜೀವಸೋತ ।
ಜಯ ದೂತದುಶ್ಯಕಟನಷ್ಟಭೂತ ॥
ಜಯ ವೃಕ್ಷರೂಪಯಮಳಾರ್ಜುನಾರಿ ।
ಜಯ ರಾಕ್ಷಸಪ್ರಕರಜನ್ಮವೈರಿ ॥
ಜಯ ನಂದಗೋಪಕುಲಕಲ್ಪವೃಕ್ಷ ।
ಜಯ ಚಂದ್ರಸೂರ್ಯರಂಜಿತನಿಜಾಕ್ಷ ॥
ಜಯ ಧೇನುವೃಂದನಿತ್ಯಪ್ರಸಾದ ।
ಜಯ ಗಾನನಿರ್ಗಳಿತವೇಣುನಾದ ॥
ಜಯ ಘೋರಕಾಳಿಯಭುಜಂಗಕಾಲ ।
ಜಯ ವೀರಕೇಶಿದುರ್ಹೃದಯಶೂಲ ॥
ಜಯ ಕಷ್ಟಕುಕ್ಕುಟಕೃತಾಂತಪೀಡ ।
ಜಯ ದುಷ್ಟರಜಕದಾನವವಿಭಾಡ ॥
ಜಯ ಪಂಡರೀಪುರವರಪ್ರಮೋದ ।
ಜಯ ಪುಂಡರೀಕಮುನಿಪಪ್ರಸಾದ ॥
ಜಯ ಪಾಂಡವಪ್ರಕರಜೀವರೂಪ ।
ಜಯ ಪಾಂಡವಪ್ರಚುರರತ್ನದೀಪ ॥

ಜಯ ಭುಕ್ತಿಮುಕ್ತಿ ಫಲಸಿದ್ಧಿಕಾಯ |
ಜಯ ಭಕ್ತವತ್ಸಲ ಸುರೇಂದ್ರವಂದ್ಯ ||
ಜಯ ರುಕ್ಮಿಣೀ ಮುಖಸರೋಜಭೃಂಗ |
ಜಯ ರುಕ್ಮಿಣೀ ವಿಪುಳಹೃದಯಾಂಗ ||
ಜಯ ಪನ್ನಗೇಂದ್ರಕಮನೀಯತಲ್ಪ |
ಜಯ ಚೆನ್ನ ವಿಟ್ಠಲ ಸುರದ್ರುಕಲ್ಪ ||

—ವಿಟ್ಠಲಾಷ್ಟಕಂ—

ಶ್ರೀರಂಗೆ ನಿರಂತರಂ ಬಯಸಿ ದುರ್ನರರಂ ಸಲೆ ಸೇವೆಗೆಯ್ದು ಬೆ |
ಳ್ಳಾಗಿ ದುರಾಶೆಯಿಂದಿಹಪ್ರಕೃತಿನಿಂದಿತನಾಗಿ ತೀವ್ರದೈ ||
ನ್ಯಾಗಮಮಂ ಕಟಿಲ್ವೆ ಪದಪಯೋರುಹಭಕ್ತಿಭಾಗ್ಯಸಂ |
ಯೋಗದೊಳಿರ್ಪ ಚಿತ್ತಮನಲಂಪಿನೊಳೀವುದಭಂಗವಿಟ್ಠಲಾ ||
ಸಿರಿ ಬೆಳೆ ರಕಲ್ಪೆ ಯ್ಮುಡಿದು ಗರ್ವಿಸಿ ಮತ್ತೆ ಪರದ್ರ ನ ಗ |
ಳ್ಳರ ಮನೆಗಳ್ಗೆ ಮಾರಿದೆಡೆಯೊಡೆ ನಿವಾರಿಸಿಕೊಂಡು ಸು ಬ್ದ ಕಾ
ತರಿಸುವ ದುರ್ವಿವೇಕಗುಣಮಂ ಮಿಗೆ ಮಾಣಿಸಿ ನಿನ್ನ ಭಕ್ತಿ ೯ |
ಪರಿಣತಮಪ್ಪ ಸಿದ್ಧಿಯನಲಂಪಿನೊಳೀವುದಭಂಗವಿಟ್ಠಲಾ |
ನಿಜಗುಣನಾಮಮಂ ಭುವನಮೋಹನಮಂಗಳಮೂರ್ತಿ ಯ ೦ ನು
ಭಜಿಸುವೆನೆಂಬ ಪೋಟು ಧನಪುತ್ರಕಳತ್ರನಿವಾಸ ಮಿ ೯ಯೊ ||
ಬಜ್ಜರವೆಯ್ದೆ ನುಂಗಿ ನೆರೆ ದುರ್ಗತಿಗಿತ್ತ್ರ ದಂ ಖಗೇಶ್ವರ |
ಧ್ವಜ ನಿಂಗಿಕ್ಕೆ ನಿನ್ನಧಿಕಭಕ್ತಿಯನೀವುದಭಂಗವಿಟ್ಠಲಾ ||
ಪೃಥಿವಿಯೊಳೂರ್ಮೆ ದೈವವಶದಿಂ ಮಿಗೆ ಮಾನುಷಜನ್ಮಮಪ್ಪುದು |
ಹಿಡೆ ನಿಜದೈವಮಂ ಭಜಿಸಲೊಲ್ಲದೆ ದುರ್ನರರಂ ಪೊಗಟ್ಬು ಬೆ ||
ಪಾಲನನಾರತಂ ಪೊರೆವನೆಂಬ ದುರಾಸೆಯನೊಕ್ಕು ನಿನ್ನ ಮೆ |
ಲ್ಗೆಳನಾವಗಂ ಭಜಿಪ ಬುದ್ಧಿಯನೀವುದಭಂಗವಿಟ್ಠಲಾ ||
ಪೆಜರ ಗುಣಾಗುಣಂಗಳನನೇಕವಿಧಂ ಪಡೆಯಲ್ ಸಿಮಿಗ್ರ ದ
ರಿಯೆನೆ ಜಿಹ್ವೆಯಾತ್ಮಗುಣಮಂ ಪೊಗಟಲ್ ಮಿಗಿಲಪ್ಪುದಂ ಜೊ |
ರ ನಿಜನಾಮಮಂ ಭಜಿಸಲೊಲ್ಲದದರ್ಕೆ ಸುಬುದ್ಧಿವೇಟ್ಟು ನಿ |
ನ್ನುರುತರನಾಮಮಂ ಭಜಿಪ ಚಿತ್ತಮನೀವುದಭಂಗವಿಟ್ಠಲಾ || ೨ ೪

ಹಿತಮಹಿತಂಗಳೆಂಬೆರಡಱೊ ...ದಯಂ ।
ಶ್ರುತಿಮತಶಾಸ್ತ್ರಮಂ ಸಮಯಭ ... ಮಾಡಿ ದು ॥
ಗ...ತ್ರಿಗಳವಸ್ತ ಮನ್ಮತಿಗೆ ಸತ್ಪಥ ... ಯಿಂದಿರಾ ।
ಪತಿ ಭ...ದಿ ಸುಭಕ್ತಿಯನಂಪಿನೊಳ ... ಲಾ ॥ 6 ೫

ಮಾನವಭೋಗಭೂಮಿಯೊಳನಂತ ... ರುದೇಹಮಂ ।
ನೀನೊಲವಿಂದೆ ಪುಟ್ಟಿಸಿ ಮಗುಟ್ಟಿದಱಲ್ಲಿ ... ಳಂ ॥
ದಾನವವೈರಿ ಭಾವಿಪುದು ನೀತಿಯ ಮತ್ತನ ... ಸಂ ।
ತಾನಮನಿತ್ತು ನಿನ್ನ ದಯೆಯಿಂ ಪರಿರಕ್ಷಿಸಪ ... 7 ೬

ಎನಿತು ದಿನಂ ಬರ್ದುಂಕುವನಿತುಂ ದಿನಮೊ ... ಗಳಿಂ ।
ತನೆಯನತೀವಪೂಜ್ಯಮೆನೆ ಮಾಡಿ ಬಱಿಕ್ಕಮಸ ... ॥
ನವರತಮೋಹದಿಂ ಚಲಿಸದಂತು ನಿಜಾಂಘ್ರಿನಿವಾ...
ಟ್ಟನೆ ನೆಲಸಿರ್ಪ ಬಲ್ಪಗೆಯನೀವುದು ಬೇಡ್ಪೆನಭಂಗ ॥ 8 ೭

ಎಂದು ಮನೋರಥಸಿದ್ಧಿಯುಂ ಪಡೆಯಲೆಂದಾನಭಿ...ದನಂತರಂ
ಹೃದಯಸರೋಜದೊಳ್ ನಲಿದು ವಿಟ್ಠಲರಾಯನ ಮ...ತ್ರಯಂ
ಪದುಳದೊಳಿಟ್ಟು ನಾಮಬಲದಿಂದನೆಕೋಟಿಯನೆಯ್ದೆ ಗೆ...॥
ರ್ಜಿದ ಸುಖರಾಜ್ಯಮಂ ಪಡೆದು ವೈಷ್ಣವಬಂಧುಸಮೂಹ... ।
ಸದಮಳಬೋಧೆಯುಂ ತಿಳಿದು ಸತ್ಪಥಮಂ ಮಿಗೆ ಕಂಡೆನುರ್ವಿ... ೮

ಬಱಿಯುಂ,

ಜ...ಯ ನಿಜಾಂಘ್ರಿಯನಱಸ ।
ಲ್ಕಾಯೆಡೆಯಿಂದಂ ತೆರಳ್ದು ಪೋಪಾಗಳ್ ಕಂ ॥
ಜಾಯತಸುಪುಣ್ಯವೃಕ್ಷನಿ ।
ಕಾಯಮಂ ತೀವಿರ್ದರಣ್ಯಮಂ ಮಿಗೆ ಕಂಡೆಂ ॥ ೯

ಫಲಮೊಸೆದಿರ್ದ ಮಾಸುರದನಮುಳ್ಳಿರೊಪ್ಪುವ ಶಾಖೆ ಪುಷ್ಪಸಂ
ಕುಲಮುಲದಿರ್ದ ಸಂಪಗೆ ಮುಗುಳ್ಗಳನಾಂತದಿಪರ್ಮುತ್ತಿ ನನ್ನಶೀ ।
ತಲಘನಲಾಂಗಮುಳ್ಳಲರ್ದ ಪಾದರಿ ಕಂಪಿನ ನುಣ್ಪಮೆತ್ತ ಕೋ ।
ಮಲಸುರಪರ್ಣಿಕಾವಿತತಿ ರಂಜಿಪರಣ್ಯಮನೆಯ್ದಿದೆಂ ನೃಪಾ ॥ ೧

ಅಂತೆಯದ್ದಲ್ಲಿ

ಜಿತಸಂವರ್ಧಿತತಾಪಮಂ ಘನಪ್ರತೀಲೋಪವಮಂ ತೀರ್ಥಸಂ ।
ತತಿಸಂಕ್ಷೇಪವನುವಿನಂಕುಲಲಸತ್ಪೀಪವಮಂ ಭೀಕರಾ ॥
ಕೃತಿಘೋರಾಂಬುಚಯಲೇಪವಶೋನದ್ವೀಪವಮಂ ಪಕ್ಷಿಸಂ ।
ತತಿಸಲ್ಲಾಪವನೊಕ್ಕ ಕಂಡೆನೆಂ ಸಮಗ್ರಪವಮಂ ಕೂಪವಮಂ ॥ ೧೧

ಅದಲ್ಲದೆಯುಂ

ತ್ರಿದಶಾಂಗನೆರ್ ಪನ್ನ ।
ಸುದತಿಯುರಂ ನಡಲಿಜ ಪಾತಾಳಸಿಮಾ ॥
ಪದ ಬಟ್ಟೆಯುಮೆಯಿ ।
ದುರ್ದು ಕ್ಕಾ ಸಲಿಲವತಾನಿಜರೂಪಂ ॥ ೧೨

ಆಕೂಪತಡಿಯೊಳ್ ಸಾ ।
ವ್ಯಾಕಾರಸೂರ್ಯಸನ್ನಿಭಂ ಕುಳ್ಳಿರ್ದಂ ॥
ಕೋಕನದಂಡಚದೊಳ್ ।
ತೂಕಡಿಸ ದಾಸನಂತಿರೊರ್ಬ ಕುಮಾರಂ ॥ ೧೩

ಆತಕೇವೊಳ್ ದೀರ್ಘವಮ ।
ಪಾತಕನಿಷ್ಟಂಕಚಿತ್ತನಧಿಕಬಲಂ ಸಂ ॥
ಪ್ರೀತಿನಿದರ್ಂ ನೀತಿಕ ।
ಳಾತಸನ್ಮೂರ್ತಿವಡೆದವೋಲ್ ಮತ್ತೊರ್ಬಂ ॥ ೧೪

ತಮರಿರ್ಬರಂ ಕಂಡಾಸಾಬಾವಿಯ ತಡಿಗೆ ಪೋಗಿ

ಮುನದಿನ್ನಿಂಬುವಂತೆ ತಡಿಯೊಳ್ ಮಿಗೆ ನಿಂದು ಕುನುಂಗಿ ಕೂಪಮಾ ।
ರಿಂ ಮಿಗೆ ನೋಡಿ ನೀವೊರ್ಗೆವುಪಾಯುಮನಾಂ ಮಿಗೆ ಕಂಡದೊಂದು ಬ ॥
ಳ್ಳಿ ಕಡೆಯಲ್ಲಿ ಪಿರ್ಬಿದಿರ ನಾಳಿಯನಾರ್ಪಿನೆ ಕಟ್ಟಿ ಮೆಲ್ಲನ ।
ಲ್ಲಿ ಲಲಿತಾಂಬುಮಂ ಪಡೆದು ಸೇಂದಿದಮಾಗಳಳಾಧಿನಾಯಕಾ ॥ ೧೫

ಅಂತು ಸೇಂದಿ

ಚರಚರಣಾದ್ಯವಯವಮಂ ।
ರಶದಿಂ ಕರ್ಚಿ ಮಿಕ್ಕ ಶೀತಾಂಬುವನಾ ॥

ವರದಿಂದೀಂಟಿ ಬಟಿಕ್ಕಾಂ ।
ಪರಿಹರಿಸಿದೆನಧ್ವಖೇದಮುಂ ನೃಪತಿಲಕಾ ೧೬

ಅಂತು ಬಟಿಲ್ಕೆಯುಂ ಪಿಂಗಿಸಿಯಾಚಾರನ ಬದೊಳದಾ ತನ ವೊಗವುಂ ನೋಡಿ ನೀನೆತ್ತಣವನೆಂದಾಂ ಕೇಳ್ವಾತನಿಂದಂ:—

ಕೇಳೆಲೆ ಜೀವದಯಾಪರ ।
ಭೂಲೋಕವಿಳಾಸಮುಖಿಳವಿದ್ಯಾವಾಸಂ ॥
ಶ್ರೀಲಲನಾಜನ್ಮಗೃಹಂ ।
ಲೀಲೆಯೊಳ್ ವಿದರ್ಭದೇಶಮಾತಿರಮಣೀಯಂ ॥ ೧೭

ದೇಶಂ ಸೌಖ್ಯಪ್ರದೇಶಂ ಸಕಲಸುಕೃತಕೋಶಪವಿತ್ರೈಕಪಂಚ ।
ಕೋಶಂ ನಿತ್ಯಪ್ರಕಾಶಂ ದುರಿತನಿಕರಪಾಶಂ ವಿಶಾಲಪ್ರಭಾ ॥
ಕಾಶಂ ಶ್ರೋತ್ರಪ್ರದೇಶಂ ಮದನಕದನದೇಶಂ ಜಗತ್ಕೃತ್ಯಾಸ ।
ದ್ವಾಸಂ ತಾನೆಂಬ ಪೆಂಪಂ ತಳೆದು ಮೆಱೆವುದಾನೇವೊಗಳ್ವನಿತಾಂತಂ ॥
ಅಂತಾವಿದರ್ಭದೊಳ್ ಜನ ।
ಸಂತತಿಗಾನಂದಮುಂ ನಿರಂತರಮೀಯಲ್ ॥
ಕಾಂತುವಿನ ನಗರಿಯಂತೆ ನಿ ।
ತಾಂತಂ ರಂಜಿಪುದು ನೋಡೆ ಧಾರಾನಗರಂ ॥ ೧೮

ನರರೆಲ್ಲರ್ ಚದುರರ್ ವಿಳಾಸಿನಿಯರೆಲ್ಲರ್ ಪ್ರೌಢೆಯರ್ ವಾಕ್ಯದ
ಚ್ಚರಿಯೆಲ್ಲಂ ಸ್ಮರಶಾಸ್ತ್ರದೋಜೆ ದಿನವೆಲ್ಲಂ ಕಾಮುಪರ್ವಂ ಸ್ತ್ರೀ ॥
ವರವೆಲ್ಲಾ ಜಲಕೇಳಿಯಿಕ್ಕೆ ವನವೆಲ್ಲಂ ಕಂತುಗೇಹಂ ಫಲೋ ।
ತ್ಕರವೆಲ್ಲಂ ರಸವತ್ಫಲಂ ನಿಜವೆನಲ್ ತತ್ಪತ್ತನಂ ರಂಜಿಕುಂ ॥ ೧೯

ಪುರವುವನಿದೇವಿಯಾನನ ।
ಪುರವುಖಿಳಜಗನ್ನಿವಾಸದಿದಿಗೋರ್ವ್ವಪ್ವ ಗೋ ॥
ಪುರವೆಸೆವ ವಿಟರ ಮೆಯ್ಯಾಂ ।
ಪು ರತೀಶನ ಪೆಂಪು ಸುಜನರಂಪ್ರು ನಿತಾಂತಂ ॥ ೨೦

ಆಪುರದರಸು ಸಕಳಕ ।
ಳಾಪತಿ ಪೆಸರ್ವೆತ್ತ ಭೋಜನೃಪಂ ನಿಖಿಳಾ ॥

ಶಾಪರಿಪೂರಿತಕೀರ್ತಿಧ ।
ರಾಪಾಲಂ ಪುಣ್ಯವರ್ಮನೆಂಬ ನರೇಂದ್ರಂ॥ ೨೧

ಆಪುಣ್ಯವರ್ಮಂಗೆ

ನೀತಿಗಳೋಜೆಯುಂ ಸಕಳಧರ್ಮರಹಸ್ಯಮನೊಪ್ಪುವಾಗಮ ।
ಖ್ಯಾತಿಯನುದ್ಧಶಾಸ್ತ್ರದಱಿವಂ ಪರಮಾರ್ಥನಿಧಾನಮಂ ಪರ ॥
ಪ್ರೀತಿಯನೊಂದುಗೂಡಿ ಪಡೆದಂ ಕಮಳೋದ್ಭವನೆಂಬ ಮಾಳ್ಕೆಯಿಂ ।
ಭೂತಳವಲ್ಲಭಂಗೆ ವಸುರಕ್ಷಿತನೆಂಬನಮಾತ್ಯಶೇಖರಂ ॥ ೨೨

ಬೞಿಕ್ಕಾಪುಣ್ಯವರ್ಮಂ ಕೆಲವುಕಾಲದಿಂ ಮೇಲೆ ಕಾಲಮಂದಿರಮನೆಯ್ದೆ

ಜನವಿನುತಪುಣ್ಯವರ್ಮನ ।
ತನಯಂ ಪೆಸರ್ವೆತ್ತನಂತವರ್ಮಂ ನವಯೌ ॥
ವನಮದದಿಂ ವ್ಯಸನೋನ್ಮ ।
ತ್ತನಾಗಿ ದುರ್ವೃತ್ತಸಂಗದಿಂದಿರ್ಪನೆಗಂ ॥ ೨೩

ಅದಂ ಕಂಡು ವಸುರಕ್ಷಿತಂ ಬುದ್ಧಿವೇೞಲೆಂದನಂತವರ್ಮಂಗಿಂತೆಂದಂ:—

ಅಷ್ಟಮದಂಗಳಂ ತೊಱೆದು ಸಾತ್ವಿಕಭಾವದೊಳಿರ್ದು ಧರ್ಮದೊಳ್ ।
ಚೇಷ್ಟಿಸಿ ಶಾಸ್ತ್ರದೊಳ್ ತಿಳಿದು ಸಜ್ಜನಗೋಷ್ಠಿಯೊಳಿರ್ದು ಸಂತತಂ ॥
ಶಿಷ್ಟರನೊಲ್ಮೆಯಿಂ ಪೊರೆದು ದುಷ್ಟರನೋವದೆ ತೀರ್ಚಿ ಸರ್ವಸಂ ।
ತುಷ್ಟಿಮನಿಳ್ಕೆ ಜೀವಿಪುದು ನೀತಿಯಿದಲ್ತೆ ಧರಾಧಿನಾಯಕಾ ॥ ೨೪

ನವವಿಧದೇವತಾರ್ಚನೆಗಳಂ ದ್ವಿಜಪಾಲನೆಯಿಂ ಸಮಸ್ತಜೀ ।
ವವನೊಸೆದಾತ್ಮವೆಂಬ ಬಗೆಯಿಂ ಮನವೊಲ್ದು ಗುರೂಪದೇಶಮಾ ॥
ರ್ಗವನೊಳಕೊಂಡು ಸಚ್ಚರಿತದಿಂ ವ್ಯಸನಕ್ಕೊಳಗಾಗದೋಜೆಯಿಂ ।
ತವೆಯದ ಪಾಪಪುಣ್ಯದಱಿವಿಂದಿರದಾತನ ಬಾಳ್ಕೆ ನಿಷ್ಫಲಂ ॥ ೨೫

ಕನಸಿನ ರಾಜ್ಯದಂತೆ ಮುಗಿಲೊಡ್ಡಿನ ರೂಪುಗಳಂತೆ ವಾರ್ಧಿಯೊ ।
ಗ್ಗಿನ ತೆರೆಯಂತೆ ಗಾಳಗಿದಿರೊಡ್ಡಿದ ಕೆಂಜೊಡರಂತೆ ಪುಲ್ಲ ಕಿ ॥
ಚ್ಚಿನ ಸಿರಿಯಂತೆ ಜೋಡೆಯರ ಮೆಚ್ಚಿನ ಮೋಹನದಂತೆ .... ।
† ......ರಂದವೆಂದಱಿದು ಪೋಪುದು ಸತ್ಪಥದೊಳ್ ಕಳಾವಿದಂ ॥ ೨೬

† ಜೀವವಜೆರಂ ಎಂದು ಪಾಠ.

ಮದಮುಖಿಗಳ್ಗೆ ದುರ್ವ್ಯಸನಿಗಳ್ಗೆ ನಿರಂತರಪಾಪಕರ್ಮಿಗ ।
ಳ್ಗೊದಗಿವ ನಾಸ್ತಿಕರ್ಗೆ ಪ್ರಸಿಕರ್ಗೆ ಕರಂ ಪಿಶುನಪ್ರಿಯರ್ಗೆ ಧ ॥
ರ್ಮದ ರುಚಿಯಿಲ್ಲದರ್ಗಖಿಳನೀತಿಗಳಂ ಮಿಗೆ ಪೇೞಲೇಕೆ ಬ ।
ರ್ಪುದೆ ಹೃದಯಕ್ಕೆ ಪುಣ್ಯಗತಿ ಸಜ್ಜನಸಂಗಮದಿಲ್ಲದಿರ್ಪರೊಳ್ ॥ ೨೩

* * * * †

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ
ಅಭಿನವ ದಶಕುಮಾರಚರಿತೆಯೊಳ್
ವಿಶ್ರುತಕಥಾವೃತ್ತಾಂತಂ
ಚತುರ್ದಶಾಶ್ವಾಸಂ

ಅ ಭಿ ನ ವ ದ ಶ ಕು ಮಾ ರ ಚ ರಿ ತೆ

ಸಂ ಪೂ ರ್ಣಂ.

† ನಮಗೆ ದೊರೆತ ಪ್ರತಿಗಳಲ್ಲೆಲ್ಲಾ ಇಲ್ಲಿಂದ ಮುಂದೆ ಗ್ರಂಥಪಾತ.